~~1311~~ ~~1070~~ ~~1057~~ Rare.

ಪುಸ್ತಕದ ಹೆಸರು: ವ್ಯವಹಾರ ಲೆಕ್ಕಪದ್ಧತಿ ಮತ್ತು ಹುಂಡಿ ಲಾ. 1038

ಲೇಖಕ: ಬಿ. ನರಸಿಂಹರಾಯ

ಗ್ರಂಥಾಲಯ

ನೋಂದಣಿ ಕ್ರಮಾಂಕ: 054035.

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ.

1922

ಪರಾಮರ್ಶೆಗೆ ಮಾತ್ರ

‘ಸಿರಿಗನ್ನಡ’ ಗ್ರಂಥಾಲಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ,

ವಿದ್ಯಾರಣ್ಯ ೫೮೩ ೨೭೬.

‘ಸಿರಿಗನ್ನಡ’ ಗ್ರಂಥಾಲಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಲಾಗೆಜಿಟ್ ಗ್ರಂಥಮಾಲಾ ಸೀರಿಸ್ ನಂಬರು 4

ಸಿವಿಲ್, ಕ್ರಿಮಿನಲ್, ರೆವಿನ್ಯೂ

ವ್ಯವಹಾರ ಲೇಖ್ಯಬೋಧಿನಿ

ಮತ್ತು ಹಿಂದೂ ಲಾ.

ಮೈಸೂರು, ಮದ್ರಾಸು, ಬೊಂಬೈ, ಕಲ್ಕತ್ತ, ಅಲಹಾಬಾದ್
ಹೈಕೋರ್ಟಿನ ಜಡ್ಜಿಗಳ ತೀರ್ಮಾನಗಳ ಸಹಿತವಾದುದು.

ಬೆಂಗಳೂರು ಸೂರ್ಯೋದಯ ಪ್ರಕಾಶಿಕ, ಕರ್ನಾಟಕಕೇಸರಿ
ವೃತ್ತಾಂತಬೋಧಿನಿ, ಡೈಲಿನ್ಯೂಸ್, ಲಾ ಗೆಜಿಟ್ ಮುಂತಾ
ದ ಪತ್ರಿಕಾ ಎಡಿಟರಾಗಿಯೂ ಇಂಡಿಯನ್ ಪೀನಲ್‌ಕೋಡು
ಕ್ರಿಮಿನಲ್ ಪ್ರೊಸಿಜರ್‌ಕೋಡುಗಳ ಟಿಪ್ಪಣಿಕಾರ ಪ್ರಚಾರ
ಕರಾಗಿಯೂ ಇರುವ

ಮೆ|| ಬಿ. ನರಸಿಂಗರಾಯರವರಿಂದ ರಚಿಸಲ್ಪಟ್ಟು

054035

ಬೆಂಗಳೂರು ಸಿಟಿ ಚಿಕ್ಕಪೇಟೆ ಬುಕ್‌ಡಿಪೋ

ಟಿ. ಎನ್. ಕೃಷ್ಣಯ್ಯಶೆಟ್ಟಿಯವರ ಸ್ವಕೀಯ
ಶ್ರೀ ವೆಂಕಟೇಶ ಮುದ್ರಾಲಯದಲ್ಲಿ
ಮುದ್ರಿಸಿ ಪ್ರಕಟಿಸಲ್ಪಟ್ಟಿತು.
ಬೆಂಗಳೂರು

ಕ್ರಯ [illegible]-[illegible]-೦] [PRICE [illegible]

1922.

340
NAR

Sri Venkatesa Press, B-City,
CopyRight Registered.

ಪ್ರಥಮಮುದ್ರಣ ಪೀಠಿಕಾ.

ಈಗಿನ ಪ್ರಪಂಚದಲ್ಲಿ ಲೋಕವ್ಯವಹಾರಜ್ಞಾನವಿಲ್ಲದವರು ಅನಾಗರೀಕರಾದ ಕಾಡುಜನರಂತೆ ಪರಿಣಮಿಸಿ ತಾವು ಪ್ರತಿನಿತ್ಯವು ನಡೆಸುವ ವ್ಯವಹಾರಗಳಲ್ಲಿ ತಾರತಮ್ಯಗಳನ್ನರಿಯದೆ ನಡೆಯುವದರಿಂದ ಅಪಾರವಾದ ನಷ್ಟ ಕಷ್ಟಗಳಿಗೀಡಾಗುತಲಿರುವರು. ಈ ಲೋಕವ್ಯವಹಾರಜ್ಞಾನಕ್ಕೆ (ಲಾ) ಎಂದು ಹೇಳಬೇಕಾಗಿದೆ. (ಲಾ) ಧರ್ಮಶಾಸ್ತ್ರವು ವಿಧಿಬದ್ಧವಾದ ಬಿ. ಎ. ಬಿ. ಎಲ್., ಎಂ. ಎ ಎಂ. ಎಲ್., ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿ ಶಾಸನಗಳನ್ನು ಪಡೆದು ಇದ್ದಾಗ್ಯೂ ಈಗಿನ ಕೋರ್ಟು (ನ್ಯಾಯಸ್ಥಾನಗಳಲ್ಲಿ) ತೀರ್ಮಾನವಾದ ವಿಷಯಗಳೇ ಪ್ರಮಾಣಗಳಾಗಿ ಇರುವುದರಿಂದ ಸಕಲರೂ ಈ ಪ್ರಮಾಣಗಳನ್ನು ತಿಳಿದುಕೊಂಡಿರುವದು ಅತ್ಯವಶ್ಯಕವಾಗಿರುವದು. ಇವುಗಳಲ್ಲಿ ಮುಖ್ಯವಾಗಿ ನಮ್ಮ ದೇಶೀಯರು ಈ ಭರತಖಂಡಕ್ಕೆ ಸೇರಿದ ಮದ್ರಾಸ್, ಬೊಂಬೈ, ಕಲ್ಕತ್ತಾ, ಮೈಸೂರ್ ಕೋರ್ಟುಗಳಲ್ಲಿ ತೀರ್ಮಾನಿಸಿದ ತೀರ್ಮಾನಗಳೇ ಪರಮ ಪ್ರಮಾಣಗಳಾಗಿರುವವು. ಅವುಗಳಲ್ಲಿ ಸಿವಿಲ್. ಕ್ರಿಮಿನಲ್, ರೆವಿನ್ಯೂ ಬಾಬುಗಳೆಂದು ಮೂರು ಭಾಗಗಳಿರುವವು. ಈ ಭಾಗಗಳಲ್ಲಿ ನಿಯಾಮಕವಾಗಿರುವ ನೂರಾರುವಿಷಯಗಳನ್ನು ಈ ಪುಸ್ತಕದ ಮೂಲಕ ನಮ್ಮ ವಾಚಕಮಹಾಶಯರಿಗೆ ಸೂಚಿಸಿರುವೆವು.

ಇದುವರೆಗೆ ಕನ್ನಡದಲ್ಲಿ ಕೆಲವು ಪುಸ್ತಕಗಳಿದ್ದಾಗ್ಯೂ ಅವುಗಳಲ್ಲಿ ಇಲ್ಲದ ಹೊಸ ವಿಷಯಗಳನ್ನು ಒದಗಿಸಿಕೊಡಬೇಕೆಂಬ ಅಭಿಪ್ರಾಯದಿಂದಲೇ ಈ ಹೊಸಪುಸ್ತಕವನ್ನು ಬರೆಯಲ್ಪಟ್ಟಿತು. ಈ ಪುಸ್ತಕದಲ್ಲಿ ಪಂಡಿತರಾದ ಅನುಭವಸ್ಥರಾಗಿ ಹೆಸರುಪಡೆದ ಅನೇಕ ಬಿ. ಎ. ಬಿ. ಎಲ್., ಪರೀಕ್ಷೆಗಳಲ್ಲಿ ತೇರ್ಗಡೆಯಾದ ಅಡ್ವೋಕೇಟರುಗಳಿಂದ ಅನೇಕವಿಷಯಗಳನ್ನು ಸಂಗ್ರಹಮಾಡಿ ಬರೆದ ಕೋರ್ಟು (ನ್ಯಾಯಸ್ಥಾನಗಳಲ್ಲಿ) ದಾಖಲ್ಮಾಡಿರುವ ಲೇಖನಗಳನ್ನು ಅತಿಪ್ರಯಾಸದಿಂದ ಸಂಪಾದಿಸಿ ಅಚ್ಚುಗೊಳಿಸಿರುವೆವಲ್ಲದೆ (ಸಿವಿಲ್, ಕ್ರಿಮಿನಲ್, ರೆವಿನ್ಯೂ) ಬಾಬುಗಳ ಲೇಖನಗಳನ್ನು ರೆವಿನ್ಯೂ ಬಾಬಿನಲ್ಲಿ ಸಮರ್ಥರಾದ ಜಡ್ಜಿಗಳು ಕೊಟ್ಟತೀರ್ಮಾನಗಳನ್ನು ದಾಖಲೆಗಳಿಗಾಗಿ ಪ್ರಕಟಿಸಿರುವೆವು.

ಇಂತಹ ಲೇಖನಗಳು ಈ ಪುಸ್ತಕದಲ್ಲಿ ಅನೇಕವಾಗಿ ಅಚ್ಚುಹಾಕಲ್ಪಟ್ಟಿರುವದು. ಒಬ್ಬೊಬ್ಬ ಅಡ್ವೋಕೇಟರು ಒಂದೊಂದು ದಾವಾ ಅರ್ಜಿಯನ್ನು

ಆಲೋಚಿಸಿ ಬರೆಯುವದಕ್ಕಾಗಿ ಒಬ್ಬೊಬ್ಬ ಕಕ್ಷಿಗಾರರು ನೂರಾರು ರೂಪಾಯಿಗಳನ್ನು ಖರ್ಚುಮಾಡಿ ಇರುವರು. ಈ ಲೇಖನಗಳ ಸ್ವಾರಸ್ಯದ ಲಾಭವು ನಮ್ಮ ಪುಸ್ತಕವನ್ನು ಕೊಂಡುಕೊಳ್ಳುವವರು ಪಡೆಯಲೆಂದು ಇದರಮೌಲ್ಯವು ಆಂಗ್ಲೇಯ ಭಾಷೆಯಲ್ಲಿ ೧೬ ರೂಪಾಯಿಗಳಿದ್ದಾಗ್ಯೂ ನಾವು ದ್ರವ್ಯಾರ್ಜನೆಯೇ ಪ್ರಧಾನವೆಂದು ಭಾವಿಸದೆ (೨—೦—೦.) ರೂಪಾಯಿ ಮಾತ್ರ ಬೆಲೆಯನ್ನು ಇಟ್ಟಿರುವೆವು. ಇದರ ಶೈಲಿಯು ಪ್ರಯೋಜನವು ನೋಡಿದರೆ ಜಾಗ್ರತೆಯಲ್ಲಿಯೇ ದ್ವಿತೀಯಮುದ್ರಣಕ್ಕೆ ಉಪಕ್ರಮವಾಗುವದೆಂದು ಊಹಿಸುವೆವು.

ತಾ॥ ಕಲಂ. ಈ ಪುಸ್ತಕದ ಮುದ್ರಣವನ್ನು ಪ್ರಾರಂಭಿಸುವಕಾಲದಲ್ಲಿ ಕೆಲವು ಮಿತ್ರರು ಇತರ ಪುಸ್ತಕಗಳಲ್ಲಿಲ್ಲದ ಹೊಸವಿಷಯಗಳ ಶೈಲಿಯನ್ನು ಶ್ರೀಮನ್ಮಹಾರಾಜರುಗಳಿಗೂ, ದಿವಾನರವರಿಗೂ, ಕೌನ್ಸೆಲರುಗಳಿಗೂ, ಇತರ ಅಧಿಕಾರಿಗಳಿಗೂ ಬರೆಯುವ ಲೇಖನಗಳನ್ನು ವಿವರಿಸಬೇಕೆಂದು ಕೋರಿದ್ದರಿಂದ ವಾಚಕರ ಉಪಯೋಗಕ್ಕಾಗಿ ಅವುಗಳನ್ನು ಈಪುಸ್ತಕದಲ್ಲಿ ಮುದ್ರಿಸಿರುವೆವು.

ಬಿ. ನರಸಿಂಗರಾವ್,

ಎಡಿಟರ್, ಲಾ ಗೆಜಿಟ್.

ದ್ವಿತೀಯಮುದ್ರಣ ಪೀಠಿಕಾ.

ಈ ಪುಸ್ತಕದ ದ್ವಿತೀಯಮುದ್ರಣಕ್ಕೆ ಕಾರಣವೇನಂದರೆ— ಪ್ರಥಮ ಮುದ್ರಣದಲ್ಲಿ ಪ್ರಚುರವಾಗಿದ್ದ ವಿಷಯಗಳಿಂದ ಜನಗಳಿಗೆ ಬಹಳ ಪ್ರಯೋಜನವಾಗಿ ಮುದ್ರಿಸಿದ್ದರಿಂದ ಪ್ರತಿಗಳು ಇಷ್ಟು ಕ್ಷಿಪ್ರದಲ್ಲಿಯೇ ಮುಗಿದುದ್ದರಿಂದ ೨ ನೆಯ ಮುದ್ರಣಕ್ಕೆ ಕಾರಣವಾಯಿತು. ಈಗಿನ ದ್ವಿತೀಯಮುದ್ರಣದಲ್ಲಿ ಹಿಂದೂ ಲಾ ಸಂಬಂಧವಾದ ಆಸ್ತಿ ಹಕ್ಕು ಬಾಧ್ಯತೆ, ದಾಯಭಾಗಗಳು, ಪುತ್ರಸ್ವೀಕಾರ, ಮೈನರುಗಳ ಸಂರಕ್ಷಣೆ, ವಾರಸು ಹಕ್ಕುಗಳು, ಕ್ರಯ, ದಾನ, ದೃಶ್ಯತೆ ಮುಂತಾದ ಅನೇಕವಿಷಯಗಳನ್ನೊಡಗೊಂಡಿದೆ. ಇದರಲ್ಲಿನ ಹೈಕೋರ್ಟು ತೀರ್ಮಾನಗಳು, ಅನೇಕ ವ್ಯವಹಾರಗಳನ್ನು ವ್ಯವಸ್ಥೆಮಾಡಿರುವದು, ಇಂಥಹ ನ್ಯಾಯಗಳು ತಿಳಿಯದೆ ಅನೇಕ ಕಕ್ಷಿಗಾರರು ಕೋರ್ಟಿಗೆ ಸಾವಿರಾರು ರೂಪಾಯಿಗಳು ದಂಡವಾಗಿ ತೆತ್ತು ನಷ್ಟಪಡುತ್ತಿರುವರು. ಜನಗಳು ಈ ಪುಸ್ತಕದಲ್ಲಿರುವ ವಿಷಯಗಳನ್ನು ಚನ್ನಾಗಿ ಪರಿಶೀಲಿಸಿ ತಮ್ಮತಮ್ಮಲ್ಲಿಯೇ ಫೈಸಲ್ಮಾಡಿಕೊಳ್ಳುವದು ಲಾಭಕರವಾದದ್ದು. ವ್ಯಾಜ್ಯಗಾರರಿಬ್ಬರು ೫ ಜನ ಪಂಚಾಯಿತರನ್ನು ನೇಮಿಸಿ ಈ ಪುಸ್ತಕದಲ್ಲಿ ಹೇಳಿರುವ ಮೇರಿಗೆ ಪಂಚಾಯಿತರಿಗೆ ಕಟ್ಟಡಕಗಳನ್ನು ಬರೆದುಕೊಟ್ಟು ತಮ್ಮ ಕಲಹಗಳನ್ನು ವ್ಯವಸ್ಥೆಮಾಡಿಕೊಳ್ಳುವದು ಉತ್ತಮ. ವಾಚಕರು ಈ ವಿಷಯಗಳಿಗೆ ಗಮನಕೊಡುವದಲ್ಲದೆ ಗ್ರಂಥದಲ್ಲಿ ಅಜಾಗರೂಕತೆಯಿಂದ ಕೆಲವುಕಡೆಗಳಲ್ಲಿ ಸರಿಯಾಗಿ ತಪ್ಪುಗಳನ್ನು ತಿದ್ದದೆ ಬಿಟ್ಟಿರುವುದ್ದರಿಂದ ಅಂತಹ ಅಲ್ಪದೋಷಗಳನ್ನು ಸಹ ಸರಿಪಡಿಸಿಕೊಳ್ಳಬೇಕೆಂದು ಕೋರುವ.

ಗ್ರಂಥಕರ್ತ,

ಬಿ. ನರಸಿಂಗರಾವ್,

ಎಡಿಟರ್ ಲಾಗೆಜೆಟ್.

ಸ್ವವಿಷಯು.

ನಮ್ಮ ಲಾ ಗೆಜಿಟ (ಮಾಸಪತ್ರಿಕೆಯು) ಪ್ರತಿಮಾಸದಲ್ಲಿಯೂ ಹೊರಡುತ್ತಿದ್ದುದು ವಾಚಕರಿಗೆ ಗೊತ್ತೇ ಇರಬಹುದು. ಈಗ್ಯೆ ಸ್ವಲ್ಪಕಾಲದ ಕೆಳಗೆ ನಡೆದ ಘೋರಯುದ್ಧದದೆಸೆಯಿಂದ ನಿಂತುಹೋಗಲು ಕಾರಣವಾಯಿತು. ಅದನ್ನು ವಾರ್ಷಿಕ ಪುಸ್ತಕರೂಪವಾಗಿ ಅಚ್ಚುಗೊಳಿಸಿರುವೆವು.

ವಾಚಕರುಮೊದಲಿನಂತೆಯೇ ಪ್ರೋತ್ಸಾಹಿಸುವರೆಂದು ನಂಬಿರುವೆವು,

ಬಿ. ನರಸಿಂಗರಾವ್,
ಎಡಿಟರ್ ಲಾಗೆಜೆಟ್.

ಸಂಕೇತಗಳು

ಈ ಪುಸ್ತಕದಲ್ಲಿ ಪ್ರಕಟಿಸಿರುವ ಕೋರ್ಟು ತೀರ್ಮಾನಗಳಿಗೆ ಆಯಾಯ ವಿಷಯಗಳ ಕೊನೆಯಲ್ಲಿ ಆಯಾಯ ಕೋರ್ಟುಗಳ ಹೆಸರುಗಳನ್ನು ಸಂಪೂರ್ಣವಾಗಿ ಬರೆದರೆ ಪುಸ್ತಕವು ಬಹಳ ಲಂಬಿಸುವದೆಂದು ತಿಳಿದು ಬೊಂಬೈಹೈಕೋರ್ಟು ಎಂಬುವದಕ್ಕೆ ಬದಲಾಗಿ ಬೊಂ. ಹೈ. ಮದರಾಸ್ ಹೈಕೋರ್ಟು ಎಂಬುವದಕ್ಕೆ ಬದಲಾಗಿ ಮ. ಹೈ. ಎಂದು ಸಂಕೇತಾಕ್ಷರಗಳನ್ನು ಮುದ್ರಿಸಿರುವೆವು ಮೈಸೂರುಚೀಫ್‌ಕೋರ್ಟಿನವರು ಮತ್ತು ಎಲ್ಲಾ ಹಿಂದೂಸ್ಥಾನದ ಕೋರ್ಟುಗಳಲ್ಲಿಯೂ ಈತೀರ್ಮಾನಗಳನ್ನೇಪ್ರಮಾಣವಾಗಿ ಇಟ್ಟುಕೊಂಡಿರುವರು.

ಸಂಕೇತಗಳ ವಿವರ.

ಇ. ಲಾ. ರಿ.—ಇಂಡಿಯನ್ ಲಾ ರಿಪೋರ್ಟ್ಸ್.
ಮ.—ಮದರಾಸು ಸೀರೀಸ್.
ಕ.—ಕಲಕತ್ತಾ ಸೀರೀಸ್.
ಬೊಂ.—ಬೊಂಬಯಿ ಸೀರೀಸ್.
ಅ.—ಅಲಹಾಬಾದು ಸೀರೀಸ್.
ಮ. ಹೈ.—ಮದರಾಸು ಹೈಕೋರ್ಟು ರಿಪೋರ್ಟುಗಳು.
ಕ. ಹೈ.—ಕಲ್ಕತ್ತಾ ಹೈಕೋರ್ಟು ರಿಪೋರ್ಟುಗಳು.
(ಬಂಗಾಳಾ ಲಾ ರಿಪೋರ್ಟುಗಳು.)
ಬೊಂ. ಹೈ.—ಬೊಂಬಯಿ ಹೈಕೋರ್ಟು ರಿಪೋರ್ಟುಗಳು.
ಅ. ಹೈ.—ಅಲಹಾಬಾದು ಹೈಕೋರ್ಟು ರಿಪೋರ್ಟುಗಳು.
ಮೂ. ಇ. ಅ.—ಮೂರ್ಸ್ ಇಂಡಿಯನ್ ಅಪ್ಪೀಲುಗಳು.
ಸ.—ಸದರ್ಲಂಡುಗಳವರ ವೀಕ್ಲೀ ರಿಪೋರ್ಟುಗಳು.
ಮ. ತೀ.—ಮದರಾಸು ತೀರ್ಪುಗಳು.
ಆರ್. ವೆ.—ಹಿಂದೂ ಲಾ.
ಆರ್.—ವೆಂಕಟಸುಬ್ಬರಾಯರ ಹಿಂದೂ ಲಾ.
ಮ. ಸ. ತೀ.—ಮದರಾಸು ಸದರು ಕೋರ್ಟು ತೀರ್ಪುಗಳು.
ಬಂ. ಸ. ತೀ.—ಬಂಗಾಳಾ ಸದರು ಕೋರ್ಟು ತೀರ್ಪುಗಳು.
ಬೊಂ. ಸಿ. ರಿ.—ಬೊಂಬಯಿ ಸೆಲೆಕ್ಟು ರಿಪೋರ್ಟುಗಳು.
ಬಾರೊ.—ಬಾರೊಡೇಲು ದೊರೆಯುವರ ರಿಪೋರ್ಟುಗಳು,
ಮಾರ್ಲಿ.—ಮಾರ್ಲೀ ದೊರೆಯುವರ ಡೈಜೆಸ್ಟು.
ವೆ. ಬು.—ವೆಸ್ಟ್ ಅಂಡ್ ಬೂಲ್ಲರ್ ದೊರಗಳವರ ಹಿಂದೂಲಾ.
ಡಬ್ಲಿಯು. ಮೆಕ್-ಮೆಕ್ನಾಟನ್ ದೊರೆಯುವರ ಹಿಂದೂಲಾ.
ಎಫ್. ಮೆಕ್—ಎಫ್ ಮೆಕ್ನಾಟನ್ ದೊರೆಯುವರ ಹಿಂದೂಲಾ.
ಸ್ಟ್ರೇಂ.—ಸ್ಟ್ರೇಂಜ್ ದೊರೆಯುವರ ಹಿಂದೂಲಾ.
ಇ.ಲಾ.ರಿ ೪ಕ.೫೧೪=ಇಂಡಿಯನ್ ಲಾ ರಿಪೋರ್ಟ್ಸ್ ಕಲಕತ್ತಾ ಸೀರೀಸ್.
೪ ವಾಲ್ಯೂಂನೊಳಗೆ ೫೧೪ ಪೇಜು.
೧೪ ಮೂ. ಇ. ಲಾ. ಅ. ೫೬—ಮೂರ್ಸ್ ಇಂಡಿಯನ್ ಅಪ್ಪೀಗಳು ೧೪ ವಾ
ಲ್ಯೂಂನೊಳಗೆ ೫೬ ಪೇಜು.
ವ್ಯ. ನಿ—ವ್ಯವಹಾರನಿರ್ಣಯ.

ಲಾ ಗೆಜಿಟ್ ಗ್ರಂಥಮಾಲಾ ಸೀರೀಸ್ ನಂ 4.

ವಿಷಯಾನುಕ್ರಮಣಿಕೆ

ಹಿಂದೂ ಲಾ

ವಿಷಯಾನುಕ್ರಮಣಿಕೆ ಸಂಪೂರ್ಣವು.

ಬ್ರಂ॥ಶ್ರೀ॥ದೊ॥ ನಾರಾಯಣಶಾಸ್ತ್ರಿಗಳಿಂದ ಬರೆಯಲ್ಪಟ್ಟ ಜೈಮಿನಿಭಾನುಪ್ರಭೆ
ಎಂಬ ಟೀಕಾ ತಾತ್ಪರ್ಯಸಹಿತವಾದ

ಕರ್ನಾಟಕ ಜೈಮಿನಿ ಭಾರತವು.

ಶುದ್ಧಪ್ರತಿ, ಉತ್ತಮಕಾಗದ, ಇದು ಪದ್ಯ, ಪ್ರತಿಪದಾರ್ಥ, ತಾತ್ಪರ್ಯ ಅನ್ವಯಾರ್ಥ, ಸಂಧಿ, ಸಮಾಸ, ಅಲಂಕಾರ, ಛಂದೋವಿವರಣವೇ ಮೊದಲಾದವುಗಳಿಂದೊಡಗೂಡಿ ಸ್ಕೂಲಿನಲ್ಲಿ ಓದುವ ವಿದ್ಯಾರ್ಥಿಗಳು ಮೊದಲು ಮಾಡಿ ಪ್ರೌಢವಿದ್ವಾಂಸರವರೆಗಿನ ಎಲ್ಲಾ ಸ್ತ್ರೀಪುರುಷರೂ ಓದಲು ಅನುಕೂಲವಾಗಿದೆ. ಕರ್ನಾಟಕಭಾಷೆಯ ಕವಿಸಾರ್ವಭೌಮನಾದ ಲಕ್ಷ್ಮೀಶಕವಿಯ ಜೈಮಿನಿಭಾರತವು ಪದಲಾಲಿತ್ಯ, ಅರ್ಥಗಾಂಭೀರ್ಯ, ಮಾಧುರ್ಯ, ಶೈಲಿ ಸರಸತೆ, ಅರ್ಥಚಮತ್ಕೃತಿ, ಭಾವವೈಚಿತ್ರ್ಯ, ಅಲಂಕಾರ, ವೈಖರಿ, ಶ್ರಾವ್ಯತೆ ಮುಂತಾದವುಗಳಿಂದೊಡಗೂಡಿ ಸರಸಸಮ್ಮಿಳಿತವಾಗಿರುವುದೆಂಬುದು ಕನ್ನಡನಾಡಿಗೇ ಗೊತ್ತಾಗಿರುವುದರಿಂದ ವಿಶೇಷ ಬರೆಯುವುದು ಅನಾವಶ್ಯಕ 34 ಸಂಧಿಗಳನ್ನೊಡಗೊಂಡ 930 ಪುಟಗಳುಳ್ಳ ದೊಡ್ಡಸೈಜು. ಫುಲ್‌ಕ್ಯಾಲಿಕೋ ಬೈಂಡ್. ಬೆಲೆ 1 ಕ್ಕೆ ರೂ. 5-0-0 ಟ. ಖ. 1-0-0

ಬ್ರಂ॥ ಶ್ರೀ॥ ಬಿ. ವಿ. ಸುಬ್ರಹ್ಮಣ್ಯಶರ್ಮವಿರಚಿತವಾದ "ಸುಧಾರಸಧಾರಾ
ಎಂಬ ಕನ್ನಡ ಟೀಕಾ ತಾತ್ಪರ್ಯ ಗಣಿತೋದಾಹರಣೆಗಳಿಂದೊಡಗೂಡಿದ

ಬೃಹಜ್ಜಾತಕಾಖ್ಯ ಹೋರಾಶಾಸ್ತ್ರಮ್.

ಮಾನವನು, ತನ್ನ, ಅದೃಷ್ಟಚಕ್ರದ, ಫಲಾಫಲಗಳನ್ನು, ಅರಿತು, ಮುಂದೊದಗಬಹುದಾದ, ಫಲಸ್ವರೂಪವನ್ನು, ಇತರರಸಹಾಯವಿಲ್ಲದೆಯೆ ತಿಳಿದುಕೊಂಡು, ದುಷ್ಫಲಗಳು, ದೂರವಾಗಿ ಸುಫಲಗಳು, ಕಗರತವಾಗುವಂತೆ ಮಾಡುವಂತಹ, ಪರಿಹಾರೋಪಾಯಗಳನ್ನು ಸೂಚಿಸಬೇಕಾದರೆ ನಮ್ಮಿಂದ ಈಗತಾನೆ ಸಂಸ್ಕೃತ ಹಿಂದಿ ಮರಾಠಿ ಭಾಷೆಗಳಿಂದ ತರ್ಜುಮೆಮಾಡಿ ಪ್ರಕಾಶಗೊಂಡ "ಸುಧಾಗಸಧಾರಾ" ಎಂಬ ಕನ್ನಡಟೀಕಾ ತಾತ್ಪರ್ಯ ಉದಾಹರಣೆಗಳಿಂದ ಕೂಡಿದ ಬೃಹಜ್ಜಾತಕವೆಂಬ ಹೋರಾಶಾಸ್ತ್ರವೊಂದಲ್ಲದೆ ಮತ್ತ್ಯಾವದೂ ಸಮರ್ಥವಾಗಿಲ್ಲವು, 1344 ಪುಟ 2 ಭಾಗಗಳ ಪುಸ್ತಕ, ಒಂದೇಬೈಂಡ್, ಈಗ್ರಂಥವು ಆಬಾಲವೃದ್ಧರಾದಿಯಾಗಿ ಅಕ್ಷರವನ್ನರಿತ, ಹೆಂಗಸರೂ ಸಹಾ, ಪರರಸಹಾಯಾಪೇಕ್ಷೆ ಇಲ್ಲದೆ ಓದಿತಿಳಿಯಲು ಅನುಕೂಲವಾಗಿರುವುದು. ಇದರ ಬೆಲೆ ರೂ. 5 0-0. ವಿ. ಪಿ. ಛಾರ್ಜು 0-12-0 ಆಣೆ.

ಇವುಗಳಲ್ಲದೆ ಇನ್ನೂ ಅನೇಕ ವಿಧ ಕನ್ನಡ, ತೆನುಗು, ಸಂಸ್ಕೃತ ವೇದಾಂತ, ಜ್ಯೋತಿಷ, ಯಕ್ಷಗಾನ, ಶತಕ, ಕಥೆ, ಕೀರ್ತನೆ, ವೈದ್ಯ, ಮೊದಲಾದ ವಿವಿಧ ಪುಸ್ತಕಗಳು ದೊರೆಯುತ್ತವೆ

ವಿಳಾಸ:— ಟಿ. ಎಸ್. ಕೃಷ್ಣಯ್ಯಶೆಟ್ಟಿ. ಬುಕ್‌ಡಿಪೊ
ಚಿಕ್ಕಪೇಟೆ ಬೆಂಗಳೂರು ಸಿಟಿ.

ಶಿವಲ್, ಕ್ರಿಮಿನಲ್, ರೆವಿನ್ಯೂ

ವ್ಯವಹಾರ ಲೇಖ್ಯಬೋಧಿನಿ.

೧ ನೇ ಭಾಗ.

ಯೋಗಕ್ಷೇಮ ಸಮಾಚಾರದ ಲೇಖನಗಳು

ಕಾಗದಗಳನ್ನು ಬರೆಯುವ ವಿಧಾನ.

---

೧. ಪರಸ್ಪರ ಒಬ್ಬರನ್ನೊಬ್ಬರು ಮುಖತಃ ಭೇಟಿ ಆದಾಗ ಒಬ್ಬರ ಯೋಗಕ್ಷೇಮವನ್ನು ಒಬ್ಬರು ವಿಚಾರಿಸತಕ್ಕದ್ದು ಒಂದು ಮುಖ್ಯವಾದ ಕರ್ತವ್ಯವಾಗಿರುವುದು. ತಮ್ಮ ಆಪ್ತರು, ನೆಂಟರು, ಇಷ್ಟರು, ಮಿತ್ರರುಗಳನ್ನು ಮುಖತಃ ನೋಡುವದಕ್ಕಾಗದೆ ಇರುವ ಸಮಯದಲ್ಲಿ ಏನಾದರೂ ಒಂದು ವಿಷಯವನ್ನು ತಿಳಿಸಬೇಕಾದರೂ ಅವರಿಂದ ಅದಕ್ಕೆ ಪ್ರತ್ಯುತ್ತರವಾಗಿ ಜವಾಬು ತರಿಸಿಕೊಳ್ಳಬೇಕಾದರೂ ಪೂರ್ವದಲ್ಲಿ ಬೇಹುಗಾರರನ್ನು ಕಳುಹಿಸಿಕೊಡುವ ಪದ್ಧತಿ ಇತ್ತು. ಈಗ ಅನೇಕವರ್ಷಗಳಿಂದೀಚೆಗೆ ತಾಳೆಓಲೆ ಮುಂತಾದ ಪತ್ರಗಳಮೇಲೆ ಬರೆದು ಕಳುಹಿಸುವದು ರೂಢಿಯಾಗಿತ್ತು. ಬರಬರುತ್ತ ನಾಗರೀಕವು ಹೆಚ್ಚಾಗುತ್ತಾ ಬಂದಹಾಗೆಲ್ಲಾ ಕಾಗದ ಮಸಿ ಕಡ್ಡಿಗಳ ಸೌಲಭ್ಯಗಳು ಸಹ ಹೆಚ್ಚಾಯಿತು. ಪೂರ್ವದಲ್ಲಿ ಕಾಗದಗಳು ಬರೆಯಬೇಕಾದರೆ ಮಸಿಕುಡಿಕೆ ಲಾಳದ ಕಡ್ಡಿಗಳು ಪಕ್ಷಿಗಳ ಗರಿಗಳನ್ನು ಉಪಯೋಗಿಸುತ್ತಿದ್ದರು. ಈಗಲಾದರೋ ನೆನಶಿಕೊಂಡ ಕಾಲದಲ್ಲಿ ಕಾಗದಗಳನ್ನು ಬರೆಯುವದಕ್ಕೆ ಜೇಬಿನಲ್ಲಿ (ಪೌಂಟನ್‌ಪೆನ್) ಎಂಬ ಮಸಿ ತುಂಬಿರುವ ಲೇಖನಿಗಳು ಕತ್ತರಿಸಿದ ಲೆಟರ್‌ಪೇಪರ್, ಕಾಗದಗಳು, ಕವರು, ಸಿದ್ಧವಾಗಿರುವವು. ಮತ್ತೊಂದಂಶವೇನಂದರೆ— ಪೂರ್ವದಲ್ಲಿ ಒಂದೂರಿಂದ ಒಂದೂರಿಗೆ ರಸ್ತೆಗಳು ಅಂಚೆ ವಿರಳವಾಗಿದ್ದುದರಿಂದ ಕಾಗದಗಳನ್ನು ಬರೆಯುವದು ಕಡಮೆಯಾಗಿತ್ತು. ಈಗ ಅರುಕಾಸು ಖರ್ಚು ಮಾಡಿದರೆ ಸಾವಿರಾರು ಮೈಲಿಗಳಿಂದ ವರ್ತಮಾನಗಳನ್ನು ತರಿಸಿಕೊಳ್ಳಬಹುದು ಕಾಗದ ಬರೆಯುವವರಲ್ಲಿ ವಿಶೇಷ ನಿಷ್ಪ್ರಯೋಜನವಾದ ಮಾತುಗಳನ್ನು, ಬರೆದದ್ದನ್ನ ಪುನಃ ಪುನಃ ಬರೆಯುವಂಥಾರೂಢಿಯು ಇರಕೂಡದು. ಬರವಣಿಗೆಯು ಸಾಧ್ಯವಾದಮಟ್ಟಿಗೆ ಸಂಕ್ಷೇಪವಾಗಿಯೂ ಬಿಗಿತರವಾಗಿ

ಯೂ, ಮರ್ಯಾದೆಯಾಗಿಯೂ ಇರಬೇಕಾದುದು ಅವಶ್ಯಕ. ಮತ್ತು ಕಾಗದ ಯಾರ ವಿಳಾಸಕ್ಕೆ ಬರೆಯುತ್ತೇವೊ ಅವರಿಂದ ಪ್ರತ್ಯುತ್ತರ ಬರಬೇಕಾದರೆ ಅನೇಕದಿವಸಗಳಾಗಬಹುದು. ಆದುದರಿಂದ ತಮ್ಮ ಮನಸ್ಸಿನಲ್ಲಿ ಇರತಕ್ಕ ಉದ್ದೇಶದ ಅರ್ಥವು ಓದಿಕೊಳ್ಳುವವರಿಗೆ ಸ್ವಲ್ಪವೂ ಅನುಮಾನವಿಲ್ಲದ ತಿಳಿಯುವಂತೆ ಸ್ಪಷ್ಟವಾಗಿ ಬರೆಯಬೇಕು.

೨. ಮತ್ತೊಂದಂಶವೇನಂದರೆ;— ಕಾಗದಗಳನ್ನು ಬರೆಯುವದಕ್ಕೆ ಉತ್ತಮವಾದ ಕಾಗದ ಮಸಿ ಲೇಖನಿಯನ್ನು ಸಿದ್ಧಪಡಿಸಿಕೊಂಡಿರಬೇಕು. ಕೆಟ್ಟ ಕಾಗದ ಕೆಟ್ಟ ಮಸಿ ಸೊಟ್ಟುಸೊಟ್ಟಾಗಿ ಮಡಿಸುವದು ಇಂಥಾಪದ್ಧತಿಗ ಳೆಲ್ಲವು ಅನಾಗರಿಕತೆಯನ್ನೂ ಅಶ್ರದ್ಧೆಯನ್ನೂ ತೋರ್ಪಡಿಸುವದು. ಪೂರ್ವ ದಲ್ಲಿ ಉತ್ತಮವಾದ ಕಾಗದ ಮಸಿ ಲೇಖನಿ ದೊರೆಯುವದು ಕಷ್ಟವಾಗಿತ್ತು. ಈಗಲಾದರೋ ಇಂಗ್ಲೆಂಡ್, ಜರ್ಮನಿ, ಆಸ್ಟ್ರಿಯಾ, ಬೆಲ್ಜಿಯಂ ಮುಂತಾ ದ ಕಡೆಗಳಲ್ಲಿ ತಯಾರಾದ ಕಾಗದಗಳು ಧಾರಾಳವಾಗಿ ಸಿಕ್ಕುತ್ತಿವೆ. ನಮ್ಮ ಲ್ಲಿಯೂ ಈಗೀಗ ಸ್ವದೇಶಿ ಕಾಗದಗಳು ವಗೈರ ಸಾಮಾನುಗಳು ತಯಾರಾ ಗುತ್ತಿವೆ. ಬೆಲ್ಜಿಯಂನಲ್ಲಿ ತಯಾರಾದ ಲೆಟರ್ ಪೇಪರುಗಳು ಕವರುಗಳು ಶ್ರೇಷ್ಠವಾದವುಗಳು. ಕಾಗದಗಳಲ್ಲಿ ಬರೆಯುವ ಸಂಗತಿಗಳು ಸ್ವಲ್ಪವ್ಯತ್ಯಾ ವಿದ್ದರೂ ನುಣುಪಾದ ಬಿಳೀಕಾಗದದಲ್ಲಿ ಅಂದವಾದ ಅಕ್ಷರಗಳಿಂದ ಸ್ಪಷ ವಾಗಿ ಬರೆದರೆ ಬರವಣಿಗೆಯಲ್ಲಿ ಸ್ವಲ್ಪ ತಪ್ಪಿದ್ದರೂ ಕಾಣುವದಿಲ್ಲವು. ಇಂಗ್ಲೀಷಿನಲ್ಲಿ ದೊಡ್ಡ ಮನುಷ್ಯರಿಗೆ ಬರೆಯುವ ಕಾಗದಗಳನ್ನು ಯಾವಾಗಲೂ ಸ್ಮಡಿಯಾಗಿ ಮಡಿಸಿರುವ ಕಾಗದದಲ್ಲಿಯೇ ಬರೆಯಬೇಕು. ವಿಷಯವು ಲ್ಪವಾಗಿದ್ದರೂ ಕಾಗದವನ್ನು ಸಂಕೋಚ ಮಾಡಕೂಡದು. ಹಾಗೆ ಬರೆದ ಕ್ಷದಲ್ಲಿ ಕಾಗದವನ್ನು ಓದಿಕೊಳ್ಳತಕ್ಕವರ ಮರ್ಯಾದೆಗಿಂತಲೂ ಬರೆಯು ರಿಗೆ ಕಾಗದದ ಬೆಲೆಯೇ ಹೆಚ್ಚಾಯಿತೆಂಬ ಊಹೆಮಾಡಲು ಮಾರ್ಗವಾಗಿ ವದು. ಆದುದರಿಂದ ತಿಳಿಸುವ ಸಂಗತಿಗಳು ನಾಲ್ಕೈದು ಪಂಗ್ತಿಗಳನ್ನು ಯುವದಾದರೂ ಸರಿಯಾದ ಲೆಟರ್ ಪೇಪರಿನಲ್ಲಿ ಬರೆದು ಸೊಟ್ಟಸೊ ಗಿ ಮಡಿಸದೆ ಕವರಿನಲ್ಲಿಹಾಕಿ ಶುಭ್ರವಾದ ಅಂಟಿನಿಂದ ಅಂಟಿಸಬೇಕು.

೩. ಮುಖತಃ ಮಾತನಾಡುವದಕ್ಕಿಂತಲೂ ಕಾಗದಗಳಲ್ಲಿ ಬರೆಯಲ್ಪ ದ ಸಮಾಚಾರಗಳು ಮತ್ತು ಮನೋಭೀಷ್ಟಗಳು ಬಹಳಕಾಲ ನಿಲ್ಲತಕ್ಕ ಳಾದ್ದರಿಂದ ನಾವು ಯಾರಿಗೆ ಬರೆಯುವೆವೊ ಅವರಲ್ಲಿ ನಮಗೆ ಇರತಕ್ಕ ವ, ವಿಶ್ವಾಸ, ಮರ್ಯಾದೆ ಮುಂತಾದವುಗಳನ್ನು ವ್ಯಕ್ತಪಡಿಸಲಿಕ್ಕೆ ತಕ್ಕ ಯಾಗಿ ಬರೆದಿರಬೇಕು. ಬಹಳಕಾಲದಿಂದಲೂ ಆಚರಣೆಯಲ್ಲಿರುವ ಪದ್ಧ ಕಾರ ಇಂತಿಂಥಾವರಿಗೆ ಹೀಗೆ ಹೀಗೆ ಎಂಬ ವಿಳಾಸ ಒಳಗಣ ಒಕ್ಕಣೆ ತಾದವುಗಳನ್ನು ಬರೆಯಬೇಕೆಂದು ನಿರ್ಧರಿಸುವರು. ಈಚೆಗೆ ಅಂದರೆ

ಆಂಗ್ಲ ಭಾಷೆಯ ನಾಗರೀಕವೂ ಹೆಚ್ಚಾದಹಾಗೆಲ್ಲಾ ಪೂರ್ವದ ರೀತಿಯು ಬಹಳ ತೊಡಕಾದುದೆಂದು ಪ್ರತಿ ಒಂದು ಕಾಗದದಲ್ಲಿಯೂ ಈ ಒಕ್ಕಣೆಗಳನ್ನು ಪುನಃ ಪುನಃ ಬರೆಯುವದು ಕಾಲವಿಳಂಬವೆಂತಲೂ ಕೆಲಸಕೇಡೆಂತಲೂ ಎಣಿಸಿ ಪೂರ್ವದ ಶೈಲಿಯನ್ನು ಬಿಟ್ಟಿರುವರು. ಪೂರ್ವದವರಿಗೆ ಇದ್ದಷ್ಟು ವಿರಾಮವು ಈಗಿನವರಿಗೆ ಇಲ್ಲವಾದುದರಿಂದ ಕಾಗದಗಳನ್ನು ಬರೆಯುವ ಕೆಲಸವನ್ನು ಸಾಧ್ಯವಾದಷ್ಟು ಕಡಮೆಮಾಡುವದು ಸಹಜವಾದುದೇಸರಿ. ಯಾವಸಂದರ್ಭದಲ್ಲಿ ಎಷ್ಟು ಮಾತನಾಡಬೇಕೋ ಅಷ್ಟೇಮಾತುಗಳನ್ನು ಕೇಳುವವನ ಮನಸ್ಸಿಗೆ ಹಿಡಿಯುವಂತೆಯು ಮಾತನಾಡುವದು, ಕಾಗದ ಮುಖಾಂತರ ಬರೆಯುವ ಕಾಲದಲ್ಲಿಯೂ ಕಾಗದದ ಒಕ್ಕಣೆಗಳು ಬರೆಯುವ ವಿಧಾನಗಳು ಓದಿಕೊಳ್ಳುವವನ ಮನಸ್ಸಿನಲ್ಲಿ ಸಂತೋಷವೂ ಪಶ್ಚಾತ್ತಾಪವೂ ಭೂತದಯಾರಸವು ಹುಟ್ಟುವಂತಿರಬೇಕು.

೪. ಕಾಗದಗಳಲ್ಲಿ ಇರಬೇಕಾದ ಮುಖ್ಯಸಂಗತಿಗಳು ಯಾವವೆಂದರೆ,—

ಒಕ್ಕಣೆಗಳು.

೧. ಕಾಗದವನ್ನು ಯಾರಿಗೆ ಬರೆಯಬೇಕೋ ಅವರ ಹೆಸರು, ಅಡ್ಡಹೆಸರು ಏನಾದರೂ ಇದ್ದರೆ ಅದನ್ನು ಬರೆಯಬೇಕು. ಮಸಲಾ-ಮಾದನಹಳ್ಳಿ ತಿಮ್ಮೇಗೌಡರು ಎಂಬುವದಕ್ಕೆ ಬದಲಾಗಿ ಮ॥ ರಾ॥ ಮಾ। ತಿಮ್ಮೇಗೌಡರು ಕೋಲಾರದ ರಾಮೈಯ್ಯನವರು ಎಂಬುವದಕ್ಕೆ ಬದಲಾಗಿ ಅಡ್ಡಹೆಸರನ್ನು ಸಂಕ್ಷೇಪವಾಗಿ ಬರೆಯಬೇಕಾದರೆ ಕೋ। ರಾಮೈಯ್ಯನವರು ಅಥವ ಇಂಗ್ಲೀಷ್ ಭಾಷಾರೀತ್ಯಾ ಕೆ. ರಾಮೈಯ್ಯನವರೆಂದು ಬರೆಯಬೇಕು.

೨. ಬರೆಯುವವರ ಹೆಸರು.

೩ ಸ್ಥಳ ಅಥವಾ ಕಾಲ ತಾರೀಖು ತೇದಿ.

೪. ಮರ್ಯಾದೆಯ ಒಕ್ಕಣೆಗಳು.

೫. ಕಾಗದದಲ್ಲಿ ಬರೆಯಬೇಕಾದ ಮನೋಗತಗಳು.

೬. ಕಾಗದದ ಅಂತ್ಯದಲ್ಲಿ ಮುಗಿಸಬೇಕಾದ ಮಾತುಗಳು.

೭. ಮೇಲಿನ ವಿಳಾಸ.

೫. ಕಾಗದ ಯಾರಿಗೆ ಬರೆಯುತ್ತೇವೋ ಅವರಿಗೂ ಬರೆಯುವನಮಗೂ ಇರುವ ಬಂಧುತ್ವ ಸ್ನೇಹ ಮುಂತಾದ ಸಂಬಂಧಾತಿಶಯಕ್ಕನುಸಾರವಾಗಿ ಪ್ರತ್ಯೇಕ ಪ್ರತ್ಯೇಕವಾಗಿ ಆಯಾಯು ಒಕ್ಕಣೆಗಳೊಡನೆ ಬರೆಯಬೇಕು. ಕೆಲವು ಸಂದರ್ಭಗಳಲ್ಲಿ ಕೇವಲ ಪೂರ್ವಪದ್ಧತಿಯನ್ನನುಸರಿಸುವದು ಬಹಳ ಉದ್ದವಾಗಿ ಒಕ್ಕಣೆಗಳನ್ನು ಬರೆಯುವದು ಈಗಿನ ಕಾಲದವರು ಅವುಗಳೆಲ್ಲ

ವು ಅನಾವಶ್ಯಕವೆಂದೂ ಕಾಲಹರಣವೆಂದೂ ಎಣಿಸುವರು. ಆದರೆ ಚಕ್ರವರ್ತಿಗಳಿಗೂ, ಮಹಾರಾಜರುಗಳಿಗೂ, ಗುರುಕುಲದ ಸಂಸ್ಥಾನದ ಮಠಗಳಿಗೂ, ಮಠಾಧಿಕಾರಿಗಳಿಗೂ, ಕುಲದ ಯಜಮಾನ, ಶೆಟ್ಟಿ, ವರ್ತಕರುಗಳಿಗೂ ಬರೆಯುವ ಕಾಲದಲ್ಲಿ ಪೂರ್ವದಿಂದಲೂ ಬಂದ ಪದ್ಧತಿಯನ್ನನುಸರಿಸಿಯೇ ಬಹಳ ಮರ್ಯಾದೆಯಿಂದ ಬರೆಯಬೇಕು. ಸಾಧಾರಣವಾಗಿ ಇತರ ಜನರಿಗೆ ಬರಯುವಕಾಲದಲ್ಲಿ ಇಂತಹ ಬರವಣಿಗೆಗಳನ್ನು ಹೆಚ್ಚಿಸಿದ್ದರಿಂದ ಆದಾಯವೇನೂ ಕಂಡುಬರುವದಿಲ್ಲವು. ಆದುದರಿಂದ ಈ ಕೆಳಗೆ ಸೂಚಿಸಿಸಿರುವಂತೆ ಬರೆಯುವದು ಉತ್ತಮ.

ತಾಯಿ ಮೊದಲಾದ ತಮಗಿಂತಲೂ ಹಿರಿಯರಾದ ಸ್ತ್ರೀ ಬಂಧುವರ್ಗದವರಿಗೆ ಹೀಗೆ ಬರೆಯಬೇಕು.

೫. ಮುತ್ತೈದೆಯರಿಗೆ.

೧. ಮಾತೃಶ್ರೀ ಹರಿದ್ರಾಕುಂಕುಮಶೋಭಿತರಾದ ಭೀಮಾಬಾಯಿಯವರಿಗೆ
೨. ಮಾತೃಶ್ರೀಯವರ ಪಾದಪದ್ಮಂಗಳಿಗೆ.
೩. ಮಾತೃಶ್ರೀಯವರು ಪರಾಮರಿಸತಕ್ಕಬಗ್ಗೆ.
೪. ಮಾತೃಶ್ರೀಯವರ ಪಾದಸರೋಜಗಳಿಗೆ.
೫. ಮಾತೃಶ್ರೀ ಅಕ್ಕನವರ........................
೬. ಮಾತೃಶ್ರೀ ಅತ್ತೆಯವರ........................
೭. ಮಾತೃಶ್ರೀ ಚಿಕ್ಕಮ್ಮನವರ....................

೬. ಸ್ತ್ರೀ ಬಂಧುವರ್ಗದಲ್ಲಿ ತಮಗಿಂತಲೂ ಕಿರಿಯರಾದವರಿಗೆ (ತಂಗಿಯರು ಸೊಸೆಯರು) ಇತ್ಯಾದಿ.

೧. ಚಿ॥ ಸೌಭಾಗ್ಯವತಿ ಕುಂಕುಮಶೋಭಿತೆಯಾದ ಸುಬ್ಬಮ್ಮನಿಗೆ.
೨. ಚಿ॥ ಸೌ॥ ಸುಬ್ಬಮ್ಮನು ನೋಡಿಕೊಳ್ಳತಕ್ಕ ಬಗ್ಗೆ.

೭. ಪುರುಷರಲ್ಲಿ ತಂದೆ ಅಣ್ಣ ಮುಂತಾದ ಹಿರಿಯರಾದ ಬಂಧುಗಳಿಗೆ.

೧. ತೀ॥ ಯಜಮಾನರವರ ದಿವ್ಯಶ್ರೀ ಚರಣಸನ್ನಿಧಾನಂಗಳಿಗೆ.
೨. ತೀರ್ಥರೂಪು ಮಧ್ವರಾಯರವರ ಸನ್ನಿಧಾನಕ್ಕೆ.
೩. ತೀರ್ಥರೂಪು ವೆಂಕಣ್ಣ ಮಾವನವರ........................
೪. ತೀರ್ಥರೂಪು ಅಣ್ಣನವರ..................................

ಮೇಲಿನ ಚುಕ್ಕೆಗಳಿರುವ ಸ್ಥಳದಲ್ಲಿ ಅವರ ಸನ್ನಿಧಾನಕ್ಕೆ ಅಥವಾ ಸನ್ನಿಧಾನಂಗಳಿಗೆ ಎಂದು ಇಷ್ಟಬಂದಂತೆ ಬರೆಯಬಹುದು.

೮. ತಮ್ಮ, ಮಗ, ಅಳಿಯ ಮುಂತಾದ ತಮಗಿಂತಲೂ ಕಿರಿಯರಾದ ಬಂಧುವರ್ಗದವರಿಗೆ ಬರಿಯತಕ್ಕಒಕ್ಕಣೆಗಳು.

೧. ಚಿರಂಜೀವಿ ನೋಡಿಕೊಳ್ಳತಕ್ಕಬಗ್ಗೆ ಇದನ್ನು ಸಹೋದರರು ಅಳಿಯಂದಿರು ಮುಂತಾದವರುಗಳಿಗೆ ಬರೆಯುಬಹುದು.

೨ ಚಿ॥ ಸ॥ ರಾಘುವೇಂದ್ರರಾಯನಿಗೆ.

೩. ಚಿರಂಜೀವಿ ಸಹಸ್ರಾಯುಷ್ಯನಾದಂತ ರಾಘುವೇಂದ್ರರಾಯನಿಗೆ.

೯. ಇತರರಿಗೆ ಬರೆಯತಕ್ಕ ಮರ್‍ಯ್ಯಾದೆಯ ಒಕ್ಕಣೆಗಳು.

೧. ರಾಜಶ್ರಿ ನಮ್ಮ ನೀಲಕಂಠೇಗೌಡರಿಗೆ.

೨. ರಾಜಮಾನ್ಯ ರಾಜಶ್ರಿ........................ ....

....

೩ ಮಹಾರಾಜಶ್ರಿ ನೀಲಕಂಠೇಗೌಡರವರ ಸಮುಕ್ಷಮುಕ್ಕೆ.

೪. ಮಹಾರಾಜಶ್ರಿ ನೀಲಕಂಠೇಗೌಡರವರ ಸನ್ನಿಧಾನಂಗಳಿಗೆ.

೫. ಮಹಾರಾಜಶ್ರಿ ನೀಲಕಂಠೇಗೌಡರ ಚರಣಸನ್ನಿಧಾನಂಗಳಿಗೆ.

೬. ಮಹಾರಾಜಶ್ರಿ ನೀಲಕಂಠೇಗೌಡರ ಕರಕಮಲಗಳಿಗೆ.

ಮೇಲ್ಕಂಡ ಒಕ್ಕಣೆಗಳು ರಾಯರಿಗೂ, ಅರಸರುಗಳಿಗೂ, ಶೆಟ್ಟರುಗಳಿಗೂ ಅನ್ವಯಿಸಬಹುದು.

ಇದರ ಮೇಲೆ ಉದಹರಸಿರುವ ಮರ್‍ಯ್ಯಾದೆಯ ಒಕ್ಕಣೆಗಳನ್ನುಲೌಕೀಕರುಗಳಿಗೆ ಮಾತ್ರ ಉಪಯೋಗಿಸತಕ್ಕದ್ದು. ವಯಸ್ಸಿನಲ್ಲಿಯೋ ಅಥವಾ ಯೋಗ್ಯತೆಯಲ್ಲಿಯೋ ನಮಗಿಂತಲೂ ಸ್ವಲ್ಪ ಕಡಮೆಯಾಗಿರುವವರಿಗೆ ರಾಜಶ್ರೀ ಎಂದು ಬರೆಯಬೇಕು.

ಜಾತಿ ಪದ್ಧತೀಪ್ರಕಾರ ಮತಾನುಸಾರವಾಗಿ ಗುರುಮರ್ಯಾದೆಯ ಒಕ್ಕಣೆಗಳು.

೧. ಶ್ರೀಪರಕಾಳಮಠದ ಸಂಸ್ಥಾನಕ್ಕೆ.

ಶ್ರೀಲಕ್ಷ್ಮೀಹಯವದನ ಪರಬ್ರಹ್ಮಣೇನಮಃ-

ಶ್ರೀಮದ್ವೇದಮಾರ್ಗಪ್ರತಿಷ್ಠಾಪನಾಚಾರ್ಯಾಣಾಂ ಪರಮಹಂಸ ಪರಿವ್ರಾಜಿಕಾಚಾರ್ಯಾಣಾಂ ಸರ್ವತಂತ್ರಸ್ವತಂತ್ರೋಭಯ ವೇದಾಂತಾಚಾರ್ಯಾಣಾಂ ಶ್ರೀಮತ್ಕವಿಕಥಕಂಠೀರವ ಚರಣಯುಗಳವಿನ್ಯಸ್ತಸಮಸ್ತಾತ್ಮಭರಣಾಂ ಶ್ರೀಭಗವದ್ರಾಮಾನುಜ ಸಿದ್ಧಾಂತನಿರ್ಧಾರಣಸಾರ್ವಭೌಮಾನಾಂ ಶ್ರೀಮತಾಂ...........ಪರಕಾಲಯತೀಂದ್ರ ಮಹಾದೇಶಿಕಾನಾಂ ದಿವ್ಯಚರಣಾರವಿಂದಯುಗಳ ದಿವ್ಯಸನ್ನಿಧೌ.

೨. ಶ್ರೀ ವ್ಯಾಸರಾಯಮಠದ ಸಂಸ್ಥಾನಕ್ಕೆ.

ಶ್ರೀ ಸತ್ಯಭಾಮಾಸಮೇತ ಶ್ರೀ ಗೋಪಾಲಕೃಷ್ಣಾಯನಮಃ.

ಶ್ರೀಮತ್ಪರಮಹಂಸಪರಿವ್ರಾಜಿಕಾಚಾರ್ಯಾಣಾಂ ಶ್ರೀಮದ್ವೈಷ್ಣ
ಸಿದ್ಧಾಂತಪ್ರತಿಷ್ಠಾಪನಾಚಾರ್ಯಾಣಾಂ ಶ್ರೀಮದ್ರಾಮಚಂದ್ರ ದಿವ್ಯಶ್ರೀ ಪಾ
ಪದ್ಮಾರಾಧಕಾನಾಂ ಪದವಾಕ್ಯಪ್ರಮಾಣ ಪಾರಾವಾರ ಪಾರೀಣ ಸರ್ವತಂ
ಸ್ವತಂತ್ರಾಣಾಂ ಶ್ರೀಮದ್ವ್ಯಾಸರಾಜದಿವ್ಯ ಶ್ರೀ ಸಿಂಹಾಸನಾಧೀಶ್ವರಾಣಾ
ಶ್ರೀಮದ್ವಿದ್ಯಾಶ್ರೀಧರತೀರ್ಥ ಶ್ರೀಪಾದಸ್ವಾಮಿ ಕರಕಮಲಸಂಜಾತ ಶ್ರೀಮ
ದ್ವಿದ್ಯಾ ಶ್ರೀನಿವಾಸತೀರ್ಥ ಶ್ರೀಪಾದಸ್ವಾಮಿ ದಿವ್ಯಶ್ರೀ ಕರಕಮಲ ಸಂಜಾ
ಶ್ರೀ ವಿದ್ಯಾವಾರಿಧಿತೀರ್ಥ ಶ್ರೀಪಾದಸ್ವಾಮಿನಾಂ ದಿವ್ಯಶ್ರೀ ಚರಣನಳಿ
ಯುಗಳ ಸನ್ನಿಧೌ.

(ನೋಟ:—ನೀವು ಬರೆಯುವಕಾಲದಲ್ಲಿ ಯಾರು ಪೀಠದಲ್ಲಿರುತ್ತಾರೋ ಅವರ ಹೆಸರನ್ನು ಕೂಲಂಕಷವಾಗಿ ಬರೆಯಬೇಕು.)

೩. ಶ್ರೀ ಶೃಂಗೇರಿ ಮಠಕ್ಕೆ.

ಶ್ರೀಮದ್ವಿದ್ಯಾಶಂಕರ ಗುರುವರಬ್ರಹ್ಮಣೇನಮಃ.

ಶ್ರೀಮತ್ಪರಮಹಂಸಪರಿವ್ರಾಜಕಾಚಾರ್ಯ ಪದವಾಕ್ಯಪ್ರಮಾಣ ಪಾರಾವಾರ ಪಾರೀಣ ಯಮನಿಯಮಾಸನ ಪ್ರಾಣಾಯಾಮ ಪ್ರತ್ಯಾಹಾರ ಧ್ಯಾನ ಧಾರಣಸಮಾಧ್ಯಷ್ಟಾಂಗ ಯೋಗಾನುಷ್ಠಾನನಿಷ್ಠ ತಪಶ್ಚಕ್ರವರ್ತ್ಯನಾದ್ಯವಿಚ್ಛಿನ್ನ ಗುರುಪರಂಪರಾಪ್ರಾಪ್ತ ಷಡ್ದರ್ಶನ ಸ್ಥಾಪನಾಚಾರ್ಯ ವ್ಯಾಖ್ಯಾನ ಸಿಂಹಾಸನಾಧೀಶ್ವರ ಸಕಲನಿಗಮಾಗಮಸಾರ ಹೃದಯಸಾಂಖ್ಯತ್ರಯಾಪ್ರತಿಪಾಲಕ ವೈದಿಕಮಾರ್ಗಪ್ರವರ್ತಕ ಸರ್ವತಂತ್ರಸ್ವತಂತ್ರಾದಿ ರಾಜಧಾನಿ ವಿದ್ಯಾನಗರ ಮಹಾರಾಜಧಾನಿ ಕರ್ಣಾಟಕಸಿಂಹಾಸನಪ್ರತಿಷ್ಠಾಪನಾಚಾರ್ಯ ಶ್ರೀಮದ್ರಾಜಾಧಿರಾಜ ಗುರುಭೂಮಂಡಲಾಚಾರ್ಯ ಋಷ್ಯಶೃಂಗಪುರವರಾಧೀಶ್ವರ ತುಂಗಭದ್ರಾತೀರವಾಸಿ ಶ್ರೀಮದ್ವಿದ್ಯಾಶಂಕರ ಪಾದಪದ್ಮಾರಾಧಕ ಶ್ರೀಮತ್ಸಚ್ಚಿದಾನಂದ ಜಗದ್ಗುರು ನೃಶಿಂಹಭಾರತಿ ಕರಕಮಲಸಂಜಾತ ಶ್ರೀ ಶೃಂಗೇರಿ ಜಗದ್ಗುರು ಶ್ರೀಮತ್ಸಚ್ಚಿದಾನಂದ....... .....ಶಿವಾಭಿನವ ಸ್ವಾಮಿಗಳವರ ಚರಣ ಸರಸೀರುಹಗಳ ಸನ್ನಿಧಿಗೆ.

೪. ಶ್ರೀಮದಹೋಬಲಮಠಕ್ಕೆ.

ಶ್ರೀ ಲಕ್ಷ್ಮೀನೃಸಿಂಹ ಪರಬ್ರಹ್ಮಣೇನಮಃ.

ಶ್ರೀಮದ್ವೇದಮಾರ್ಗಪ್ರತಿಷ್ಠಾಪನಾಚಾರ್ಯಾಣಾಂ, ಪರಮಹಂಸ ಪರಿವ್ರಾಜಿಕಾಚಾರ್ಯಾಣಾಂ ಸರ್ವತಂತ್ರಸ್ವತಂತ್ರೋಭಯ ವೇದಾಂತಾಚಾ

ಣಾಂ, ಶ್ರೀಭಗವದ್ರಾಮಾನುಜ ಸಿದ್ಧಾಂತ ನಿರ್ಧಾರಣ ಸಾರ್ವಭೌಮಾ
ಂ, ಶ್ರೀಮದಹೋಬಲ ಗುಹಾವಿಹಾರಿರಮಾ ನರಹರಿಚರಣ ಪಲ್ಲವತಲ್ಲ
ಜವರತ ಸೇವಾಸುಧಾಸ್ವಾದಸಂತುಷ್ಟಾಂತಃಕರಣಾನಾಂ, ಶ್ರೀವಾರ್ಕ...
....ದೇಶಿಕಾಣಾಂ, ದಿವ್ಯ ಚರಣಾರವಿಂದಯುಗಳೇ ಸನ್ನಿಧೌ.

೫ ಶ್ರೀ ಉತ್ತರಾದಿ ಮಠಕ್ಕೆ.

ಶ್ರೀಮದ್ರಾಮವೇದ ವ್ಯಾಸಾಯನಮಃ.

ಶ್ರೀಮತ್ಪರಮಹಂಸ ಪರಿವ್ರಾಜಕಾಚಾರ್ಯಾಣಾಂ, ಸರ್ವತಂತ್ರಸ್ವತಂ
ಅನೇಕ ಗುಣಗಣಾಲಂಕೃತಾನಾಂ, ಶ್ರೀಮದ್ವೈಷ್ಣವ ಸಿದ್ಧಾಂತ ಪ್ರತಿ
ನಾಚಾರ್ಯಾಣಾಂ, ಶ್ರೀಮದ್ರಾಮವೇದವ್ಯಾಸದಿವ್ಯಶ್ರೀ ಚರಣನಳಿನಾ
ನಾನಾಂ, ಶ್ರೀಮದುತ್ತರಾದಿ ಮಠಾಧೀಶ್ವರಾಣಾಂ, ಶ್ರೀ ಶ್ರೀಮತ್ಸತ್ಯ
ಮೂರ್ತಿವರ ದಿವ್ಯ ಕರಕಮಲಸಂಜಾತ ಶ್ರೀಮತ್ಸತ್ಯಧ್ಯಾನತೀರ್ಥ ದಿವ್ಯ
ರಣತಾಮರಸಯುಗಳ ದಿವ್ಯಸನ್ನಿಧೌ.

೬. ರಾಘವೇಂದ್ರಸ್ವಾಮಿಗಳವರ ಮಠಕ್ಕೆ.

ಶ್ರೀ ರಾಮಚಂದ್ರಾಯನಮಃ.

ಶ್ರೀಮತ್ಪರಮಹಂಸಪರಿವ್ರಾಜಕಾಚಾರ್ಯಾಣಾಂ. ಅನೇಕ ಗುಣಸಂಪ
ವಾಕ್ಯಪ್ರಮಾಣ ಪಾರಾವಾರಪಾರಂಗತಾನಾಂ, ಸರ್ವತಂತ್ರಸ್ವತಂ
, ಶ್ರೀಮದ್ವೈಷ್ಣವಸಿದ್ಧಾಂತಪ್ರತಿಷ್ಠಾಪನಾಚಾರ್ಯಾಣಾಂ. ಸಂಸ್ಕೃ
ಸಾರಸಂತಾರಣಧುರೀಣಾನಾಂ, ದೀನೋದ್ಧರಣ ನಿಪುಣಾನಾಂ,
ನೀಹಾರಮಾಲಾ ಪರಿಹಾರ ಭಾಸ್ಕರಾಣಾಂ, ಸುರಸರಿದ್ದರ್ಶನಾದಿ
ಚರಿತ್ರಾಣಾಂ. ಅತ್ಯದ್ಭುತಪೂರ್ವವಿಭವಸಂಪನ್ನಾನಾಂ, ಸರ್ವೋರ್ವೀ
ಚೂಡಾಮಣಿಶ್ರೇಣೀ ಶಾಣಕೋಣಕಷಣವಿಮಲೀಕೃತ ಪಾದಪೀ
ಶ್ರೀಮದ್ರಾಘವೇಂದ್ರತೀರ್ಥಯತಿವರ್ಯದಿವ್ಯ ಶ್ರೀಮಠ ಮಧ್ಯವಿ
ನಾನಾಂ, ಶ್ರೀಮತ್ಸುಗುಣೇಂದ್ರತೀರ್ಥ ಕರಕಮಲಸಂಜಾತ
ತ್ಸುಶೀಲೇಂದ್ರತೀರ್ಥಸ್ವಾಮಿದಿವ್ಯಶ್ರೀಚರಣಸರೋಜಸನ್ನಿಧೌ.

ತ್ರವರ ಮುರಗಿರಾಜೇಂದ್ರಸ್ವಾಮಿಗಳವರ ಮಠಕ್ಕೆ.

ಮತ್ಪರಮಪಾವನಚರಿತ್ರ ಚಾರುತರಸಂಮೋಹನಾಂಗ ಮದನ
ಯಾಕೋಲಾಹಲನಿತ್ಯನಿರಂಜನನಿರಾಕಾರನಿಗಮಗೋಚರ ಸಚ್ಚಿ
ತ್ಯಪರಿಪೂರ್ಣಹೃದಯಾ ಜಗದ್ವಿಸ್ತಾರಮೂಲಸ್ತಂಭಾಯಮಾನ
ರೂಪ ಶ್ರೀಮದಲ್ಲಮಪ್ರಭುಸ್ವಾಮ್ಯನ್ವಯ ಸಂಜನಿತಾನಾಂ,

ಶ್ರೀಮದ್ವೀರಶೈವಸಿದ್ಧಾಂತ ಸಕಲಸಿಂಹಾಸನಾಧಿಪ ಪರಮಪಟ್ಟಸ್ಥಳಸ್ಥಾಪನಾಚಾರ್ಯವರ್ಯಾಣಾಂ, ಶ್ರೀಮದ್ದ್ರಾಪುರಾಧೀಶದ್ರಾಕ್ಷಾರಾಮಕ್ಷೇತ್ರರಾಮನಾಥಲಿಂಗೋದ್ಭವ... ....ಸತ್ಪ್ರಭುಮಂಡಿತೋರ್ಧ್ವಹೃದಯಾತ್ಮಕದ್ವಾರಾವತೀಶಶೂನ್ಯ ಸಿಂಹಾಸನಾಧೀಶ್ವರಾಣಾಂ.

---

೪. ತಮ್ಮತಮ್ಮ ಮತದ ವೈದಿಕರಿಗೆ.

ವೇದಮೂರ್ತಿಗಳಾದ ಬ್ರಹ್ಮಶ್ರೀ ರಾಮಾಶಾಸ್ತ್ರಿಗಳವರ ಚರಣ ಸನ್ನಿಧಾನಂಗಳಿಗೆ.

ವೇದಮೂರ್ತಿ ರಾಮಾಶಾಸ್ತ್ರಿಗಳವರ ಸನ್ನಿಧಾನಕ್ಕೆ.

ಇದಕ್ಕಿಂತಲೂ ವಿಶೇಷವಿನಯದೊಡನೆ ಬರೆಯಬೇಕೆಂದರೆ,-

ಶ್ರೀಮದಜನ ಯಾಜನಾಧ್ಯಯನಾಧ್ಯಾಪನ ದಾನಪ್ರತಿಗ್ರಹ ಷಟ್ಕರ್ಮ ನಿರತರಾದಂತಾ ಬ್ರಹ್ಮಶ್ರೀ ....

ಶ್ರೀಮದ್ಯಜನಯಾಜನಾದಿ ಷಟ್ಕರ್ಮನಿರತರಾದ ವೇದಮೂರ್ತಿ

....

ಬ್ರಾಹ್ಮಣೇತರರು ಲೌಕಿಕರಲ್ಲದಿದ್ದರೂ ಅವರಿಗೆ ಈ ಒಕ್ಕಣೆಯನ್ನು ಬರೆಯುತಕ್ಕ ಪದ್ಧತಿ ಇಲ್ಲ,

೮ ನೇ ಪ್ರಕರಣದಲ್ಲಲ್ಲದೆ ಮೇಲೆ ಹೇಳಿರುವ ನಮೂನೆಗಳನ್ನು ಜಾತಿಭೇದವಿಲ್ಲದೆ ಸರ್ವರೂ ಉಪಯೋಗಿಸಬಹುದು. ಬ್ರಾಹ್ಮಣೇತರರಿಗೆ ಅವರವರ ಕಸಬು ಸ್ಥಿತಿ ಮುಂತಾದ ಗುಣಗಳಿಗನುಸಾರವಾಗಿ ಬರೆಯತಕ್ಕ ಕೆಲವು ಮಾದರಿಗಳಿವೆ. ಅವು ಯಾವವೆಂದರೆ,—

ಶ್ರೀಮತ್ಸಕಲಗುಣ ಸಂಪನ್ನರಾದ ಸಕಲಧರ್ಮ ಪ್ರತಿಪಾಲಕರಾದ ಸಕಲ ರಾಜಸ್ಥಾನ ಪೂಜಿತರಾದ ....ಗೆ.

ಶ್ರೀಮತ್ಸಕಲಗುಣ ಸಂಪನ್ನರಾದ ರಾಜಮಾನ್ಯ ರಾಜಶ್ರೀ .. ..

ಶ್ರೀಮತ್ಸಕಲಗುಣ ಸಂಪನ್ನರಾದ .... ಬಂಧೂಜನ ಚಿಂತಾಮಣಿಗಳಾದ... ....ಗೆ.

ರಾಜಪೂಜಿತ ರಾಜಮಾನ್ಯ ರಾಜಶ್ರೀ... ....ಗೆ.

ಶ್ರೀಮತ್ಸಕಲಗುಣ ಸಂಪನ್ನರಾದಂತಾ.........ಗೆ.

ಅಖಂಡಿತಲಕ್ಷ್ಮ್ಯಲಂಕೃತ ರಾಜಮಾನ್ಯ ರಾಜಶ್ರೀ......ಗೆ.

ಶ್ರೀಮತ್ಸಕಲಗುಣಸಂಪನ್ನರಾದ ಅಖಂಡಿತೈಶ್ವರ್ಯಭೂಷಿತರಾದ ....ಗೆ.

೯. ರಾಮಾನುಜಮತಸ್ಥರು ತಮ್ಮ ಜನಗಳಿಗೆ ಪರಸ್ಪರ ಬರೆಯುತಕ್ಕದ್ದು.

ಶ್ರೀಮತೇರಾಮಾನುಜಾಯನಮಃ.

ಶ್ರೀಮದ್ವೇದಮಾರ್ಗ ಪ್ರತಿಷ್ಠಾಪನಾಚಾರ್ಯೋಭಯವೇದಾಂತಪ್ರವರ್ತಕರಾದ ಶ್ರೀಮಾನ್....... ....ಚರಣಸರೋಜಂಗಳಿಗೆ.

ತಮ್ಮ ದಾಸಾನುದಾಸನಾದ...............ಕೃತಾನೇಕಸಾಷ್ಟಾಂಗ ವಿಜ್ಞಾಪನೆ ಅದಾಗಿ.

೧೦. ರಾಮಾನುಜಮತಸ್ಥರಿಗೆ ಮಾಧ್ವರು ಸ್ಮಾರ್ತರು ಮುಂತಾದವರು ಬರೆಯುತಕ್ಕದ್ದು.

ಶ್ರೀಮದ್ವೇದಮಾರ್ಗಪ್ರತಿಷ್ಠಾಪನಾಚಾರ್ಯೋಭಯ ವೇದಾಂತ ಪ್ರವರ್ತಕರಾದ............... ಸಮಕ್ಷಮಂಗಳಿಗೆ.

೧೧. ವೈಶ್ಯರು ತಮ್ಮ ಜನಗಳಿಗೆ ಬರೆಯುತಕ್ಕದ್ದು.

ಶ್ರೀಮತ್ಸಕಲಗುಣ ಸಂಪನ್ನರಾದ ನೀತಿಕಾರ್ಯಧುರಂಧರರಾದ ದೇವ ಬ್ರಾಹ್ಮಣ ಪೂಜಾವಿಧೇಯರಾದ ವಾಸವಾಂಬಾವರಪ್ರಸಾದಕ ಅಖಂಡಿತ ಲಕ್ಷ್ಮೈಶ್ವರ್ಯಸಂಪನ್ನರಾದ..........ಗೆ.

...—...ಮಾಡುವ ವಿಜ್ಞಾಪನೆ ಆದಾಗಿ.

ಬರೆಯುವವರ ಹೆಸರು.

೧೨. ಬರೆಯುವವರ ಹೆಸರಿನ ವಿಷಯದಲ್ಲಿಯೂ ಸಮಯಾನುಸಾರವಾದ ನಿಬಂಧನೆಗಳಿವೆ. ಬಂಧುಜನರಲ್ಲಿ ಹಿರಿಯರಿಗೆ ಬರೆಯುವಾಗ,—

ಬಾಲಕ ಭೀಮನು ಮಾಡುವ ವಿಜ್ಞಾಪನೆ.

ಬಾಲಕ ಭೀಮಣ್ಣನು ಮಾಡುವ ನಮಸ್ಕಾರಪೂರ್ವಕ ವಿಜ್ಞಾಪನೆ.

ಇ ತ ರ ರಿ ಗೆ ,—

ಸೇವಕ ಕೃಷ್ಣಪ್ಪನ ವಿಜ್ಞಾಪನೆಗಳು.

ಸೇವಕ ಕೃಷ್ಣನು ಮಾಡುವ ಅನೇಕ ಸಾಷ್ಟಾಂಗನಮಸ್ಕಾರಗಳು.

ಸೇವಕನ ಬಿನ್ನಹ.

ತಮ್ಮ ಮಿತ್ರನಾದ . . . ವಿಜ್ಞಾಪನೆ.

ರಾಮಣ್ಣನ ಶರಣಾರ್ತಿ.

ಆಜ್ಞಾಧಾರಕ . . . ಬಿನ್ನಹ

ಬಂಧುಗಳ ಎದಕಿರಿಯರಿಗೆ.

ಶಾಮಶಾಸ್ತ್ರಿ ಮಾಡುವ ಅನೇಕ ಆಶೀರ್ವಾದಗಳು.
. . . ವೇದೋಕ್ತ ಆಶೀರ್ವಚನಗಳು.
ಲಿಂಗಣ್ಣನ ಆಶೀರ್ವಾದಗಳು.

ಇದರಲ್ಲಿ ಕಿರಿಯರಿಗೆ

ನಾರಾಯಣರಾಯರು ಬರಸಿ ಕಳುಹಿಸಿದ ವಿವರ.
ಭೀಮಣ್ಣನ ವಿನಯಾರ್ಥ.

ಶ್ರೀಮನ್ಮಹಾರಾಜರವರಿಗೆ ವಿಶೇಷ ಒಕ್ಕಣೆಗಳೊಡನೆ ಬರೆಯಬೇಕೆಂದರೆ,—

ಶ್ರೀಮತ್ಸಮಸ್ತಭೂಮಂಡಲ ಮಂಡನಾಯಮಾನ ನಿಖಿಲದೇಶಾವತಂಸ ಕರ್ಣಾಟಜನಪದ ಸಂಪದಧಿಸ್ಥಾನಭೂತ ಶ್ರೀಮನ್ಮಹೀಶೂರಮಹಾಸಂಸ್ಥಾನಮಧ್ಯ ದೇದೀಪ್ಯಮಾನ ವಿಕಲಸುಧಾಕರ ಕುಲಕ್ರಮಾಗತ ರಾಜಕ್ಷಿತಿಪಾಲ ಪ್ರಮುಖನಿಖಿಲ ರಾಜಾಧಿರಾಜ ರಾಜಪರಮೇಶ್ವರ ಪ್ರೌಢಪ್ರತಾಪಾಪ್ರತಿಮ ವೀರ ನರಪತಿ ಬಿರುದೆಂತೆಂಬರಗಂಡ ಲೋಕೈಕವೀರ ಯದುಕುಲ ಪಯಃಪಾರಾವಾರಕಳಾನಿಧಿ ಶಂಖಚಕ್ರಾಂಕುಶಕುಠಾರ ಮಕರಮತ್ಸ್ಯ ಶರಭ ಸಾಳ್ವ ಗಂಡಬೇರುಂಡ ಧರಣೀವರಾಹ ಹನುಮದ್ಗರುಡ ಕಂಠೀರವಾದ್ಯನೇಕ ಬಿರುದಾಂಕಿತರಾದ ಶ್ರೀ ಚಾಮರಾಜೇಂದ್ರ ಒಡೆಯರವರ ತನೂಜ ಶ್ರೀ ಕೃಷ್ಣರಾಜೇಂದ್ರಒಡೆಯರ್ ಬಹದ್ದೂರ್, ಜಿ. ಸಿ. ಎಸ್. ಐ., ಯವರ ಸನ್ನಿಧಾನಂಗಳಿಗೆ.

ಆಜ್ಞಾಧಾರಕ ಬಿನ್ನಹ.

ಈ ನಳಸಂವತ್ಸರದ..................ವರೆಗೆ

ಮಹಾಸ್ವಾಮಿಯವರ ಅನ್ನಪ್ರಭಾವದಿಂದ ಕ್ಷೇಮವಾಗಿದ್ದೇನೆ. ಮಹಾಸ್ವಾಮಿಯವರ ಶ್ರೇಯೋಭಿವೃದ್ಧಿಯು ದಿನೇದಿನೇ ಬೆಳೆಯುತಿರಬೇಕೆಂದು ಅನವರತವೂ ಇಷ್ಟದೇವತಾಪ್ರಾರ್ಥನೆಯನ್ನು ಮಾಡುತ್ತಿರುವೆನು ಮಹಾಸ್ವಾಮಿಾ.

ಸೇವಕನು ಮಹಾಸ್ವಾಮಿಯವರ ಅನುಗ್ರಹಬಲದಿಂದಲೂ ಕೆಲವರು ಈ ಊರಿನ ಮಹಾಜನಗಳ ಸಹಾಯದಿಂದಲೂ ಒಂದು ಅನಾಥಾಲಯವನ್ನು ಕಟ್ಟಿಸಿರುವನು. ಈ ಆಲಯದಲ್ಲಿ ಬ್ರಹ್ಮ, ಕ್ಷತ್ರಿ, ವೈಶ್ಯ. ಶೂದ್ರರಾದಿಯಾಗಿ ಸಮಸ್ತರಿಗೂ ಉಪಯೋಗವಾಗಿರಬೇಕೆಂದು ಇದಕ್ಕಾಗಿ ೫೦ ಸಹಸ್ರ ರೂಪಾಯಿಗಳನ್ನು ತಮ್ಮ ಸರ್ಕಾರದ ಖಜಾನೆಗೆ ಪಾರಖಾವಣಿ ಮಾಡಿಧೇನೆ.

ಆದುದರಿಂದ ಖಾವಂದರು ದಯಮಾಡಿ ಅದನ್ನು ಪ್ರತಿಷ್ಠೆ ಮಾಡಿದರೆ ಸ್ಥಿರವಾಗಿ ನಿಲ್ಲುವದೆಂಬ ಭರವಸೆಯುಂಟಾಗಿ ನಮ್ಮಗಳ ಕೆಲಸವೆಲ್ಲಾ ಸಾರ್ಥಕ್ಯ ಹೊಂದುವದಲ್ಲದೆ ಸರ್ವರಿಗೂ ಆನಂದ ಉಂಟಾಗುವುದು. ಆದುದರಿಂದ ಇತರ ಕಾರ್ಯದ ಅಡಚಣೆ ಇಲ್ಲದೆ ಇರುವಾಗ ಒಂದು ಘಳಿಗೆಯಮಟ್ಟಿಗೆ ದಯಮಾಡುವ ಅಭಯವುಂಟಾದರೆ ಆ ಮಹೋತ್ಸವಕ್ಕೆ ತಕ್ಕ ಉಪಕರಣಗಳನ್ನು ಸಿದ್ಧಪಡಿಸಿಕೊಂಡು ಅರಿಕೆಮಾಡಿಕೊಳ್ಳುತ್ತೇನೆ ಮಹಾಸ್ವಾಮಿ!

ಸಮಸ್ತವನ್ನೂ ತಿಳಿದಿರುವ ದಿವ್ಯಚಿತ್ತಕ್ಕೆ ಹೆಚ್ಚಾಗಿ ಅರಿಕೆಮಾಡಿಕೊಳ್ಳಲು ಅಶಕ್ತನಾಗಿದೇನೆ.

ಇದು

ಕಂತಿನ ಗೋಪಾಲಶೆಟ್ಟಿ

ಅತ್ಯಂತ ಭಕ್ತಿವಿನಯಪೂರ್ವಕವಾದ

ಬಿನ್ನಹ

೧೯೧೬. ಮಹಾಸ್ವಾಮಿ.

ದಿವಾನರವರಿಗೆ ಓಪನ್ ಲೆಟರ್.

ಶ್ರೀಮನ್ ಮಹಿಸೂರು ಸೀಮೆಯ ದಿವಾನ್ ಸಾಹೇಬರವರಾದ
ರಾಜ್ಯಧುರಂಧರರಾದ ಸರ್ ಮೋಕ್ಷಗುಂಡಂ ವಿಶ್ವೇಶ್ವರಯ್ಯ
ರವರು ಕೆ. ಸಿ. ಐ. ಇ. ಯವರ ಸನ್ನಿಧಾನಂಗಳಿಗೆ.

ಆಶ್ರಿತನ ವಿಜ್ಞಾಪನೆಗಳು.

ತಾವು ಮೈಸೂರುದೇಶದಲ್ಲಿ ಜನಿಸಿ ಮೈಸೂರು ದೇಶದಲ್ಲಿಯೇ ವಿದ್ಯಾಭ್ಯಾಸ ಮಾಡಿ ಬ್ರಿಟಿಷ್ ರಾಜ್ಯಭಾರದಲ್ಲಿ ಇಂಜನಿಯರ್ ಇಲಾಖೆಯಲ್ಲಿ ಪ್ರವೇಶಿಸಿ ಆ ಇಲಾಖೆಯ ಕೆಲಸದಲ್ಲಿ ಅಸಮಾನರೆಂದು ಕೀರ್ತಿಪಡೆದಿರೆಂದು ಹೇಳಲು ತಮಗೆ ಅಲ್ಲಿನ ಮಹಾಜನಗಳು ಕೊಟ್ಟಿರುವ ಬಿರುದಾವಳಿಗಳ ಸಮೂಹ ಪರಂಪರೆಯು ನಿದರ್ಶನೀಯವಾಗಿರುವದು. ತಮ್ಮ ಕೀರ್ತಿಯು ಈರೀತಿ ಬ್ರಿಟಿಷ್ ಚಕ್ರಾಧಿಪತ್ಯದಲ್ಲಿ ಪ್ರಶಂಸಿಸುತ್ತಿರುವ ಸಮಯದಲ್ಲಿ ಮೈಸೂರು ದೇಶೀಯರ ಭಾಗ್ಯೋದಯದಿಂದ ನಮ್ಮನ್ನಾಳುವ ದಯಾಳುಗಳಾದ ಶ್ರೀಮನ್ಮಹಾರಾಜಾ ಕೃಷ್ಣರಾಜೇಂದ್ರ ಒಡೆಯರ್ ಬಹದ್ದೂರ್ರವರಿಗೆ ತಮ್ಮ ಸ್ವದೇಶವಾತ್ಸಲ್ಯವು ಹುಟ್ಟಿ ತಮ್ಮ ದೇಶೀಯರು ಯಾವ್ಯಾವ ಸ್ಥಳದಲ್ಲಿರುವರೋ ಎಂದು ವಿಚಾರಿಸಲು ಎತ್ನಿಸಿ ಅವರನ್ನೆಲ್ಲಾ ತಮ್ಮ ದೇಶಕ್ಕೆ ಕರೆಸಿಕೊಳ್ಳಬೇಕೆಂದು ಪ್ರಯತ್ನಿಸಿದರು. ಹಾಗೆಯೇ ತಮ್ಮನ್ನು ಮ|| ರಾ|| ಕರ್ಪೂರ ಶ್ರೀನಿವಾಸರಾಯರನ್ನು ಇಲ್ಲಿಗೆ ಕರೆಸಿಕೊಂಡರು. ಈಗ ಬೊಂಬೈನಲ್ಲಿರುವ ಮ|| ರಾ|| ಸೆಟ್ಲೂರರವರನ್ನು ಚೀಫ್‌ಕೋರ್ಟಿಗೆ ಕರೆಸಿದರು.

ಆದರೆ ಇವರು ಪುನಃ ಸ್ವಲ್ಪಕಾಲದೊಳಗಾಗಿಯೇ ಬೊಂಬೈಗೆ ವಾಪಸ್‌ಹೋಗಬೇಕಾದಕಾರಣವೇನೋ ಗೊತ್ತಾಗಲಿಲ್ಲವು. ತಾವೂ ಕೆಲವು ಕಾಲದೊಳಗಾಗಿಯೇ ಇಲ್ಲಿನ ಸಚಿವಪದವಿಯನ್ನಲಂಕರಿಸಿದ್ದಕ್ಕಾಗಿ ಇಲ್ಲಿನಪ್ರಜೆಗಳಿಗೂ ನಮಗೂ ಉಂಟಾದ ಸಂತೋಷವನ್ನು ಹೇಳುವದಕ್ಕಾಗುವದಿಲ್ಲವು. ದಿವಾನಗಿರಿ ಛಾರ್ಜನ್ನು ವಹಿಸಿಕೊಂಡಕಾಲದಲ್ಲಿ ಇಲ್ಲಿನ ಲಾಲ್‌ಬಾಗ್ ಉದ್ಯಾನವನದ ಆಲ್ಬರ್ಟ್ ವಿಕ್ಟರ್‌ಹಾಲ್‌ನಲ್ಲಿ ಬೆಂಗಳೂರು ಪುರನಿವಾಸಿಗಳು ಅಭಿನಂದನಪತ್ರಿಕೆಯನ್ನು ಒಪ್ಪಿಸಿದ್ದು ಸರಿಯಷ್ಟೆ? ಆ ಕಾಲದಲ್ಲಿ ತಾವುಗಳು ಕೊಟ್ಟ ಪ್ರತ್ಯುತ್ತರದಿಂದಲೇ ತಮಗೆ ಈ ದೇಶದಮೇಲೆ ಇರುವ ಸ್ವದೇಶವಾತ್ಸಲ್ಯವು ವ್ಯಕ್ತವಾಯಿತು. ಅದರಂತೆಯೇ ತಾವು ಸಚಿವಪದವಿಯನ್ನಲಂಕರಿಸಿದ ಸ್ವಲ್ಪಕಾಲದೊಳಗಾಗಿಯೇ ಮೈಸೂರು ದೇಶದ ಸಂಪತ್ತನ್ನು ನಾನಾಭಾಗದಲ್ಲಿಯೂ ವೃದ್ಧಿಯಾಗುವಂತೆ ಏರ್ಪಾಡುಮಾಡಿದಿರಿ. ಇದಕ್ಕಾಗಿಯೇ ಮೈಸೂರು ಸಂಪದಭ್ಯುದಯಸಮಾಜವೆಂದು ಒಂದು ಸಂಘವನ್ನೇರ್ಪಡಿಸಿದಿರಿ. ಇದರಿಂದ ದೇಶದಸಂಪತ್ತು ವೃದ್ಧಿಯಾಗುವದೆಂದರಿಯದೆ ಅನೇಕ ಜನಗಳು ಮತ್ತುಒಂದೆರಡು ವರ್ತಮಾನಪತ್ರಿಕೆಗಳವರು ನಿಮ್ಮನ್ನು ದೂಷಿಸಿದರು. ಈಗ ದಿನೇದಿನೆ ಅದರಿಂದ ನಾನಾಭಾಗದಲ್ಲಿಯೂ ಪ್ರಯೋಜನವಾಗುತ್ತಿರುವದನ್ನು ನೋಡಿ ನಿಮ್ಮಕಾರ್ಯಕೌಶಲತೆಯನ್ನು ನೋಡಿ ಹೊಗಳುತಲಿರುವರು. ಯಾರು ಏನಾದರೂ ಹೇಳಲಿ! ಕನ್ನಂಬಾಡಿ ತಲಾವಿನಿಂದ ಈದೇಶ ಉದ್ಧಾರವಾಗುವದೆಂದು ಆಬಾಲವೃದ್ಧರು ಒಪ್ಪುತ್ತಿರುವರು. ಈ ಕೆರೆಯಿಂದ ಲಕ್ಷಾಂತರ ರೂಪಾಯಿಗಳ ಹುಟ್ಟುವಳಿಯು ನಮ್ಮ ಶ್ರೀಮನ್ಮಹಾರಾಜಾ ಸರ್ಕಾರಕ್ಕೆ ಆಗುವದಲ್ಲದೆ ದೇಶದವರಿಗೆಲ್ಲಾ ನಿರಂತರವಾದ ಸಮಾರಾಧನೆಯನ್ನು ಕಲ್ಪಿಸಿದಿರೆಂದು ನಾನು ಧಾರಾಳವಾಗಿ ಹೇಳುತ್ತೇನೆ. ನಾನು ಅರಿಕೆ ಮಾಡಿಕೊಳ್ಳುವ ವಿಷಯಗಳು ಇನ್ನೂ ಅನೇಕವಾಗಿವೆ. ಅವುಗಳನ್ನೆಲ್ಲಾ ಮತ್ತೊಂದುಕಾಲ ವಿಶೇಷದಲ್ಲಿ ಅರಿಕೆಮಾಡಿಕೊಳ್ಳಬೇಕಾಗಿರುವದರಿಂದ ಈಗ ಸದ್ಯಕ್ಕೆ ಮಾನಶೀಕ ಮಾಡಿರುತ್ತೇನೆ.

ತಮ್ಮ ವಿಧೇಯ,
ದುರ್ಗದ ನಾರಶಿಂಹ.

ಶ್ರೀಮನ್ಮಹಿಸೂರು ಮಹಾರಾಜರವರ ಪ್ರಥಮ ಕೌನ್ಸೆಲರ್
ಸರದಾರ್ ಎಂ. ಕಾಂತರಾಜೇ ಅರಸಿನವರ ಜನಾಬಿಗೆ.

ಕೋಲಾರದ ಡಿಸ್ಟ್ರಿಕ್ಟ್ ಕಸಬಾ ನಿವಾಸಿಗಳು
ಒಪ್ಪಿಸಿದ ವಿಜ್ಞಾಪನಾ ಪತ್ರಿಕಾ.

ತಮ್ಮ ಸವಾರಿಯು ನಮ್ಮ ಗ್ರಾಮಕ್ಕೆ ಬಿಜಯಮಾಡಿಸಿ ನಮ್ಮಗಳಿಗೆ ತಮ್ಮ ಅಪೂರ್ವವಾದ ಭೇಟಿಯನ್ನು ದಯಪಾಲಿಸಿದ್ದು ನಮ್ಮ ಭಾಗ್ಯೋದ

ಯುಪೇಸರಿ. ಮೇಲಾಗಿ ನಮ್ಮ ಊರಿನಲ್ಲಿ ವಿದ್ಯಾರ್ಥಿಗಳ ಸ್ಕೂಲ್ ಕಟ್ಟಡವು ಬಹಳ ಶಿಥಿಲವಾಗಿರುವದರಿಂದ ನಮ್ಮ ಬಾಲಕರನ್ನು ಸ್ಕೂಲಿಗೆ ಕಳುಹಿಸಲು ಭಯಪಡುತ್ತಿದ್ದೇವೆ. ಮತ್ತು ಗ್ರಾಮದಲ್ಲಿ ಮುನಿಸಿಪಾಲಿಟಿ ಏರ್ಪಾಡು ತೃಪ್ತಿಕರವಾಗಿಲ್ಲವು. ಅನೇಕ ಸಂದುಗೊಂದುಗಳಲ್ಲಿ ಸರಿಯಾದ ಮೋಹರಿಗ ಳಿಲ್ಲದೆ ಕೊಚ್ಚೆನೀರು ರಸ್ತೆಗೆ ಹರಿದು ಮಾರ್ಗಸ್ತರಿಗೆ ಬಹಳ ಅಸಹ್ಯವನ್ನುಂ ಟುಮಾಡುತ್ತಿದೆ. ಇನ್ನೂ ಅನೇಕ ಕೊರತೆಗಳಿದ್ದಾಗ್ಯೂ ನಾವು ಸ್ವಾಮಿ ಯವರ ಪಾದಕ್ಕೆ ಅರಿಕೆಮಾಡಿಕೊಳ್ಳಲು ಅಶಕ್ತರಾಗಿರುವೆವು.

ಮೇಲ್ಕಂಡ ಸ್ಕೂಲಿಗೆ ತಕ್ಕಸ್ಥಳದಲ್ಲಿ ಕಟ್ಟಡವನ್ನು ಕಟ್ಟಿಸಿಕೊಡುವಂತೆ ಏರ್ಪಾಡು ಮಾಡುವದಲ್ಲದೆ ಬಚ್ಚಲುನೀರಿನಿಂದಾಗುತ್ತಿರುವ ಅನಾರೋಗ್ಯ ವನ್ನೂ ಅಸಹ್ಯವನ್ನೂ ನಿವಾರಣೆ ಮಾಡುವಂತೆ ಅಪ್ಪಣೆದಯಪಾಲಿಸಬೇ ಕಾಗಿ ನಮ್ಮಗಳ ಪ್ರಾರ್ಥನೆ.

ಪುರನಿವಾಸಿಗಳ ರುಜು.

ಶಿವಿಲ್.

ದಿನಕಂತು ದಾವಾ.

ಬೆಂಗಳೂರು ಫಸ್ಟ್ ಮುನ್ಸೀಫ್ ಕೋರ್ಟಿಗೆ.

1914—14 ನೆ ಇಸವಿ S. C. No.

ವಾದಿ.	ಪ್ರತಿವಾದಿಯರು.
ಬೆಂಗಳೂರು ದೇವರಾಯಶೆಟ್ಟಿಪೇಟೆ ಯಲ್ಲಿ ಇರುವ ಲಿಂಗಾಯತರ ಚಸಪ್ಪನ ಮಗ 40 ವರುಷದ ವೇಲಾಯುಧ ಬಟಿಟ್ಟ ಕಸಬು ಲೇವಾದೇವಿ.	1. ಬೆಂಗಳೂರು ಶೀಗೇಬೇಲಿಯಲ್ಲಿ ರುವ ಮುಸಲ್ಮಾನರಫಕ್ರೂದ್ದೀನ್‌ಸಾಬಿ ಮಗ ಸುಮಾರು ವರುಷದ ಅಬ್ದುಲ್ ಖಾದರ್ ಸಾಬಿ. 2. ಸೈದ್ ಹಯಾತ್‌ಸಾಬಿ ಮಗ ಸುಮಾರು ವರುಷದ ಸೈದ್ ರಹಿಮಾನ್‌ಸಾಬಿ ಉರುಫ್ ಬಾಬಾಸಾಬಿ. ಕಸಬು.

ಆರ್ಡರ್ ೭ ರೂಲ್ ೧ ರ ಮೇರೆ ದಾವಾ.

೧. ವಾದಿಬಳಿ ಪ್ರತಿವಾದಿಯರು ೩೭—೧೨—೦. ರೂಪಾಯಿ ಸಾಲಾ ಪಡೆದು ಸದರಿ ಮೊಬಲಗ್ಗೆ ೩—೧೨—೦. ನಷ್ಟ ಸೇರಿಸಿ ಜುಮ್ಲಾ ೩೭ ೮-೦.

ರೂಪಾಯಿಯನ್ನು ದಿನ ೧ಕ್ಕೆ ೦—೬—೦, ಯಂತೆ ಕಂತು ಪಾವತಿಮಾಡು ವದಾಗಿಯು ಹಾಗೆ ಕಂತು ಪಾವತಿಮಾಡದೆ ತಪ್ಪಿದರೆ ಶೇಕಡಾ ತಿಂಗಳು ೧ಕ್ಕೆ ೨—೦—೦. ರೂಪಾಯಿನಂತೆ ಬಡ್ಡಿ ಸೇರಿಸಿ ಒಂದೇಗಂಟಿನಲ್ಲಿ ಪಾವತಿಮಾ ಡುವದಾಗಿ ಇದರಸಂಗಡ ಹಾಜರ್ಮಾಡಿರುವ ಕಂತಿನಪತ್ರವನ್ನು ೧೪ ೯-೯೪ ರಲ್ಲಿ ಬರದುಕೊಟ್ಟರು.

೨. ಮೇಲ್ಕಂಡ ಪತ್ರಕ್ಕಾಗಿ ದಫಾವಾರು ೧೪—೦—೦. ರೂ. ಮಾತ್ರ ವಸೂಲ್‌ಕೊಟ್ಟು ಬಾಕಿಯನ್ನು ಎಷ್ಟುತಗಾದೆ ಮಾಡಿದಾಗ್ಯೂ ಕೊಡದೆ ಕಾಲ ಹರಣ ಮಾಡುತ್ತಾರಾಗಿ ದಾವಾ.

೩. ವ್ಯಾಜ್ಯಕಾರಣ ೨೩—೧೦—೯೧೧ ರ ಲಾಗಾಯಿತು ಈಕೋರ್ಟಿನ ಸರಹದ್ದಿಗೆ ಒಳಪಟ್ಟ ಬೆಂಗಳೂರು ಸಿಟಿಯಲ್ಲಿ ಉಂಟಾಗಿ ಇರುತ್ತೆ.

ಜಡ್ಜಮೆಂಟ್‌ಬಗ್ಯೆ ಪ್ರಾರ್ಥನೆ.

ಕಂತುಪತ್ರದಬಾಬತು ವಸೂಲ್ ಜಾತಾ ಬಾಕಿ ಇರುವ ಅಸಲು ೨೩ ಲ-೦
೨೩—೧೦—೯೧೧ ರ ಲಾಗಾಯಿತು ದಾವಾ
ತಾರೀಖಿನ ವರಿಗೆ ಆಗುವ ೨೫ ತಿಂಗಳಿಗೆ
ಶೇಕಡಾ ತಿಂಗಳು ೧ ಕ್ಕೆ ೨—೦—೦.
ರೂಪಾಯಿನಂತೆ ಆಗುವ ಬಡ್ಡಿ ೧೧—ಲ—೦.

ಜುಮ್ಲಾ. ೩೫...೦—೦.

ಈ ಮೊಬಲಗು ಕೋರ್ಟುಖರ್ಚು ಚಾಲ್ತಿಬಡ್ಡಿ ಸಹಾ ಪ್ರತಿವಾದಿಯ ರಿಂದಾ ವಾದಿಗೆ ಸಲ್ಲುವಂತೆ ಡಿಕ್ರಿ ಕೊಡಿಸಬೇಕೆಂದು ಪ್ರಾರ್ಥನೆ.

ಇದರಸಂಗಡ ಹಾಜರು ಮಾಡಿರುವ ದಾವಾಪತ್ರ ವಿನಹಾ ಇನ್ನೇನೂ ಹಾಜರು ಮಾಡತಕ್ಕದ್ದು ಇಲ್ಲಾ.

ಇದರಲ್ಲಿ ಬರದಿರುವದೆಲ್ಲಾ ಖುದ್ದು ತಿಳಿದು ನಿಜವೆಂದು ಸತ್ಯವಾಗಿ ಹೇಳುತ್ತೇನೆ

ಇದರಂತೆಯೇ ಬಾಕಿ ಡಿಸ್ಟ್ರಿಕ್ಟ್ ತಾಲ್ಲೂಕ್ ಹೋಬಳಿ ಗ್ರಾಮದವರು ದಾವಾದಲ್ಲಿ ಬರೆಯಬೇಕು. ಎಗ.

ಎಕ್ಸ್‌ಪಾರ್ಟಿ ಡಿಕರಿಯಾಗಿರುತ್ತೆ. ರಿಜಸ್ಟರು ಪತ್ರದಮೇಲೆ ದಾವಾ.

ಬೆಂಗಳೂರು ಸಿಟಿ ಪ್ರಿನ್ಸಿಪಲ್ ಮುನ್ಸೀಫ್ ಕೋರ್ಟಿಗೆ.

Os. 1910—11.

ವಾದಿ. ಪ್ರತಿವಾದಿ.

Vs.

ಹೊನ್ನೇಗೌಡ ಉಪೇಂದ್ರರಾವ್

ವಾದೀದಾವಾ.

೧. ತಾ|| ೧-೫-೧೯೦೬ ರಲ್ಲಿ ವಾದಿಬಳಿ ಪ್ರತಿವಾದಿಯು ತನ್ನ ಕುಟುಂಬದ ದರದಿಗಾಗಿ ೭೦೦-೦-೦ ರೂಪಾಯಿ ಸಾಲವಾಗಿ ಪಡೆದು ಬಡ್ಡೀಷರತ್ತಿನಿಂದ ಲಗತ್ತಿರುವ ರಿಜಿಸ್ಟರ್ ಆಧಾರದ ಪತ್ರವನ್ನು ಬರೆದುಕೊಟ್ಟು ಇರುತ್ತಾನೆ,

೨ ಈ ಪತ್ರದ ಅಸಲಿಗಾಗಲಿ, ಬಡ್ಡಿಗಾಗಲಿ, ಏನನ್ನೂ ವಸೂಲ್ ಕೊಡದೆ ಕಾಲಹರಣ ಮಾಡುತ್ತಾನಾಗಿ ದಾವೆ.

೩. ಇದಕ್ಕೆ ವ್ಯಾಜ್ಯಕಾರಣ ತಾ|| ೨-೫-೧೯೦೬ ರಲಾಗಾಯಿತು ಕೆಂಪನಹಳ್ಳಿ ಗ್ರಾಮದಲ್ಲಿ ಉಂಟಾಗಿರುತ್ತೆ.

೪. ಜಡ್ಜಮೆಂಟ್‌ಬಗ್ಗೆ ಪ್ರಾರ್ಥನೆ,

ಅಸಲು ಮೊಬಲಗು ೨೦೦-೦-೦ ರೂಪಾಯಿ ಬಡ್ಡಿಯನ್ನು ವಾಯಿದೆಯಲ್ಲಿ ಅಸಲು ಮತ್ತು ತಿಂಗಳು ತಿಂಗಳಿಗೂ ಪಾವತೀಮಾಡದೆ ತಪ್ಪಿದ್ದರಿಂದ ಶೇಕಡಾ ೧-೪-೦ ರಂತೆ ಪ್ರತಿವಾದಿ ಕರಾರು ಅನುಸರಿಸಿ ಪತ್ರದ ತಾರೀಖಿನವರೆಗ ೧೨೦-೦-೦ ಜುಮ್ಲಾ ೩೩೦-೦-೦ ರೂಪಾಯಿ ಕೋರ್ಟುಖರ್ಚು ಚಾಲ್ತಿ ಬಡ್ಡಿ ಮತ್ತು ಇತರ ಯುಕ್ತಪರಿಹಾರಗಳನ್ನು ವಾದಿಗೆ ಪ್ರತಿವಾದಿಯಿಂದಲೂ ಮತ್ತು ಆಧಾರಸ್ವತ್ತಿನಿಂದಲೂ ಸಲ್ಲುವಂತೆ ಡಿಕ್ರಿಆಗಬೇಕು. ಪ್ರಮಾಣವಚನ ಅಸಲಿನಲ್ಲಿ ಬರೆದಿದೆ.

ಷೆಡ್ಯೂಲ್.

೧೦. ನೆಲಮಂಗಲದ ತಾಲ್ಲೂಕು ಬೇಗೂರುಹೋಬಳಿ ಮುದಲುಕುಂಟೆ ಬಳಿ ಪ್ರತಿವಾದಿಯು ಹೆಸರಿಗೆ ಖಾತೆ ದಾಖಲ್ ಆಗಿರುವ ಸರ್ವೇ ೧೮ ನೇ ಪೋಡು ಒಂದು. ಎರಡನೇ ನಂಬರಿಗೆ ಚಕ್ಕುಬಂದಿ,

ಪೂರ್ವಕ್ಕೆ ಸಿದ್ಧಭೈರನ ಹೊಲ, ಪಶ್ಚಿಮಕ್ಕೆ ಮುದ್ಧರಾಚೈಯ್ಯನ ಹೊಲ, ಉತ್ತರಕ್ಕೆ ನರಶಿಂಹ ವಗ್ಯೆರೇರ ಜಮೀನು, ದಕ್ಷಿಣಕ್ಕೆ ಓಣಿ. ಈ ಮಧ್ಯೆ ಇರುವ ಖುಷ್ಕಿ ೩, ಎಕರೆ ೧೦ ಗುಂಟೆಗೆ ಆಕಾರ .... ಉಳ್ಳ ಜಮೀನು ಒಂದು.

೨. ಡಿಟೋ ಗ್ರಾಮದಲ್ಲಿರುವ ಪೋಡು ಒಂದನೇ ಸರ್ವೆ ೧೦ನೇ ನಂಬರಿಗೆ ಚಕ್ಕುಬಂದಿ.

ಪೂರ್ವಕ್ಕೆ ಮುತ್ತಾಲಮ್ಮನ ಹೊಲ, ಪಶ್ಚಿಮಕ್ಕೆ ಕರಿಯಣ್ಣನಹೊಲ, ಉತ್ತರಕ್ಕೆ ನುಗ್ಗೈಯ್ಯ ವಗೈರೇರ ತೋಟ, ದಕ್ಷಿಣಕ್ಕೆ ಓಣಿ. ಈ ಮಧ್ಯೆ ಇರುವ ಖುಷ್ಕಿ ೪ ಎಕರೆ, ೧೮ ಗುಂಟೆಗೆ ಆಕಾರ ೩-೮ ಉಳ್ಳ ಜಮೀನು ಒಂದು.

೩. ಡಿಟೋ ಗ್ರಾಮದಲ್ಲಿರುವ ಸಿದ್ದಲಿಂಗೈಯ್ಯನ ಹೆಸರಿಗೆ ಖಾತೆ ದಾಖಲ್ ಆಗಿರುವ ಸರ್ವೆ ೫೧ ನೇ ನಂಬರಿಗೆ ಚಕ್ಕುಬಂದಿ.

ಪೂರ್ವಕ್ಕೆ ಹೊರೆಬಂದಹಾಗೆ, ಪಶ್ಚಿಮಕ್ಕೆ ನರಸಮ್ಮನಗದ್ದೆ, ಉತ್ತರಕ್ಕೆ ಮಲಿಯಪ್ಪನ ಪಟ್ಟೇಜಮೀನು. ದಕ್ಷಿಣಕ್ಕೆ ತೊರೆ. ಈಮಧ್ಯೆ ಇರುವ ತರಿ ೧. ಎಕರೆ ೩೨. ಗುಂಟೆ ಆಕಾರ ೯-೪. ಮತ್ತು ಖುಷ್ಕಿ ೩೫. ಗುಂಟೆಗೆ ಆಕಾರ ೧-೧೨. ಜುಮ್ಲಾ - ಎಕರೆ ೨೭. ಗುಂಟೆಗೆ ಆಕಾರ ೧೧ ಉಳ್ಳ ಜಮೀನಿನಲ್ಲಿ ಪ್ರತಿವಾದಿ ಅರ್ಧ ಹಿಸ್ಸೆಗೆ ಆಗುವ ತರೀ ಖುಷ್ಕಿ ದೇಖಿಲ್ ೧ ಎಕರೆ ೧೩ ಗುಂಟೆಗೆ ಆಕಾರ ೫-೮-೦ ಉಳ ಜಮೀನು ಒಂದು.

೪. ಬೇಗೂರು ಹೋಬಳಿ ಕೆಂಪಹಳ್ಳಿ ತೋಟದ ಬೈರಣ್ಣನ ಖಾತೆಗೆ ಸೇರಿದ ಸರ್ವೆ ೬೩ ನೇ ಪೋಡು ೧ ಉಳ್ಳ ೩೫ ಗುಂಟೆಗೆ ಆಕಾರ ॥ ೧೬ರ ಪೈಕಿ ೫ ರೂ. ೫-೪ ಉಳ್ಳ ac 2 guntas ಚಕ್ಕುಬಂದಿ.

ಪೂರ್ವಕ್ಕೆ ಮಂಡೇರಿ, ಪಶ್ಚಿಮಕ್ಕೆ ನನ್ನ ಗದ್ದೆ, ಉತ್ತರಕ್ಕೆ ಇದೇ ನಂಬರ್ ಬೈರಣ್ಣನ ಹಿಸ್ಸೆ. ದಕ್ಷಿಣಕ್ಕೆ ತೊರೆ॥

೩.

ಮಾಮೂಲ್ ಬಚ್ಚಲು ಮುಚ್ಚಿದ್ದಕ್ಕೆ ದಾವಾ.

ಬೆಂಗಳೂರು ಪ್ರಿನ್ಸಿಪಲ್ ಮುನ್ಸೀಫ್ ಕೋರ್ಟಿನಲ್ಲಿ

131 of 1207—08.

ವಾದಿ. ಪ್ರತಿವಾದಿ.

ಗಂಗಾಧರೈಯ್ಯ ಅಕ್ಕೈಯ್ಯ ವಗೈರೇರು

ವಾದಿ ದಾವಾ.


ಲಗತ್ತು ಪಶ್ಚಿಮ ಮನೆ ಮಾಲೀಕರಾದ ಮತ್ತು ವಾದಿಗೆ ಮಾತಾಮಹರಾದ ವೆಂಕಟೇಶಭಟ್ಟರವರು ಗತ ೧೭೮೨ನೆ ಮಾರ್ಚಿಯಲ್ಲಿ ಎ. ಬಿ. ಸಿ. ಡಿ. ಎಂಬ ಉತ್ತರಭಾಗವನ್ನು ವಾದಿ ಚಿಕ್ಕತಂದೆ ಈಶ್ವರಯ್ಯಗೆ ಕ್ರಯಪತ್ರಾಗಿ

ಕೊರ್ಟದ್ದಲ್ಲದೆ ಮಾಮುಲುಪ್ರಕಾರ ಅಡಿಗೆಯ ಮನೆ. ಬಚ್ಚಮನೀರು ಒ. ಪಿ. ಕ್ಯೂ. ಆರ್. ಮಾರ್ಗವಾಗಿ ಹೋಗತಕ್ಕದ್ದೆಂದು ಒಂದು ರಿಜಸ್ಟರ್ ಕರಾರು ಸಹಾ ಬರೆಸಿ ಗೊತ್ತು ಮಾಡಿರುತ್ತಾರೆ. ಡಿಟೋ ಪ್ರಕಾರ ಕರಾರು ಅನುಸರಿಸಿ ನಡೆದುಬಂದು ಈಶ್ವರಯ್ಯನವರು ಪ್ರತಿವಾದಿಗೆ ಏ. ಬಿ. ಇ. ಎಫ್. ಭಾಗವನ್ನು ೧೯೦೬ ರಲ್ಲು ಕ್ರಯಮಾಡಿವರು. ತನಿಗೆ ಕ್ರಯವಾದನಂತರ ಪ್ರತಿವಾದಿಯು ಡಿಟೋಮನೆಯಲ್ಲಿ ವಾಸಮಾಡುತ್ತಾ ಈಚೆಗೆ ವಾದಿಗೆ ಆಗದವರ ಮಾತನ್ನುಕೇಳಿ ವಾದಿಗೆ ಮೋಸಪಡಿಸಲು ವಾದಿ ಅಡಿಗೆ ಮನೆ ಬಚ್ಚಲುನೀರು ಪೋಗದಂತೆ ಆಟಂಕಿಸಿ ಬಂದುಮಾಡಿಬಿಟ್ಟದ್ದನ್ನು ನೋಡಿ ತನ್ನಲಾಯರಮೂಲಕ ನೋಟೀಸ್ ಕೊಡಿಸಿದಾಗ್ಯೂ ಜವಾಬುಸಹ ಕೊಡದೆತಪ್ಪಿ ಮಾಮೂಲ್ ಬಚ್ಚಲು ಮುಚ್ಚಿದ್ದಾಗಿ ದಾವಾತಲಾಯಿತು.

ಇದಕ್ಕೆ ವ್ಯಾಜ್ಯಕಾರಣ—ಪ್ರತಿವಾದಿಯು ಡಿಟೋ ಬಚ್ಚಲು ಮುಚ್ಚಿ ವಾದಿ ಹಕ್ಕನ್ನು ಧಿಕ್ಕರಿಸಿದ ಈ ಜೂನ್ ಆಖೈರಿನಲ್ಲಿ ಉಂಟಾಯಿತು.

(ಎ.) ದಾವೆ ಪ್ಲಾನನಲ್ಲಿ ಒ. ಪಿ. ಕ್ಯೂ. ಆರ್. ಗುರ್ತುಗಳ ಮಾರ್ಗವಾಗಿ ವಾದಿ ಅಡಿಗೆಮನೆ ಬಚ್ಚಲುನೀರು ಹರಿದು ಮನೆಗೆ ಉತ್ತರದಲ್ಲಿರುವ ಸರ್ಕಾರದ ಚರಂಡಿಗೆ ಬೀಳುವಂತೆ ನೀರುದಾರಿ ಪ್ರತಿವಾದಿ ಮನೆಯೊಳಗೆ ವಾದೀಗೆ ಹಕ್ಕು ಉಂಟೆಂದು ಡಿಕ್ಲೇರ್ ಮಾಡುವದಲ್ಲದೆ

(ಬಿ.) ಪ್ರತಿವಾದಿ ಮುಚ್ಚಿರುವುದನ್ನು ಕಿತ್ತು ತನ್ಮೂಲಕ ಮಾಮೂಲ್ ಬಚ್ಚಲು ನೀರುಹರಿಯಲು ಪ್ರತಿವಾದಿ ಆಟಂಕಿಸಕೂಡದಂತೆ ಇಂಜಂಕ್ಷನ್ ಕೊಡಿಸುವದಲ್ಲದೆ ಮೇಲ್ಕಂಡ ಬಚ್ಚಲನೀರನ್ನು ಪ್ರತಿವಾದಿ ಬಂಧಿಸಿರುವ ಪ್ರಯುಕ್ತ ವಾದಿಗೆ ತಗಲುವ ಲಾಗುವಡನ್ನು ಪ್ರತಿವಾದಿ ಕೊಡತಕ್ಕದ್ದೆಂದು ಮತ್ತು ಈ ಬಾಬತು ವಾದಿಗೆ ತಗಲಿ ಇರುವ ಲುಕ್ಸಾನು ಹತ್ತು ರೂಪಾಯಿಯನ್ನು ಮತ್ತು ಈ ಮೊಕದ್ದಮೆ ವಾದೀಖರ್ಚನ್ನು ಇತರಯುಕ್ತಪರಿಹಾರವನ್ನು ವಾದಿಗೆ ಕೊಡತಕ್ಕದ್ದೆಂದು ಡಿಕ್ರಿ ಬೇಡುತ್ತೇನೆ.



ರುಜು.

೪

ಮೋಸಪಡಿಸಬೇಕೆಂಬ ಇರಾದೆಯಿಂದ ದಾವಾಮಾಡಿ ಪ್ರತಿವಾದಿಗಳಿಗೆ ತಿಳಿಯದಂತೆ ಮೋಸದಿಂದ ಕಬೂಲಿ ಡಿಕ್ರಿ ಪಡೆದು ಇದ್ದರೆ ಈರೀತಿ ದಾವಾ ತಂದರೆ ಸ್ವತ್ತನ್ನು ಉಳಿಸಿಕೊಳ್ಳಬಹುದು.

ಬೆಂಗಳೂರು ಪ್ರಿನ್ಸಿಪಲ್ ಮುನಸೀಫ್ ಕೋರ್ಟಿಗೆ.

1911—1912 ನೆ ಇಸವಿ. Os. No. **526**.

ವಾದಿ. ಬೆಂಗಳೂರು ತಾಲ್ಲೂಕ್ ಉತ್ತರಹಳ್ಳಿ ಹೋಬಳಿ ಜರುಗನಹಳ್ಳಿಯಲ್ಲಿರುವ ಬುಡ್ಡಪ್ಪನ ಮಗ ಸುಮಾರು ೬೫ ವರ್ಷ ವಯುಸ್ಸುಳ್ಳ ಬೊಮ್ಮಯ್ಯ.

ಪ್ರತಿವಾದಿಗಳು.

೧. ಡಿಟೋ ತಾಲ್ಲೂಕು ಡಿಟೋ ಹೋಬಳಿ ಕಾಯಂಗುತ್ತಾ ಕತ್ತರಿಗುಪ್ಪೆಯಲ್ಲಿರುವ ಒಕ್ಕಲಿಗರ ನಾರಣಪ್ಪನ ಮಗ ಜಿರಾಯಿತಿ ಕಸಬು ಮಾಡುವ ಸುಮಾರು ೬೫ ವರ್ಷದ ಯಸ್ಸುಳ್ಳ ರಾಮಣ್ಣ.

೨. ಡಿಟೋ ತಾಲ್ಲೂಕು ಡಿಟೋ ಹೋಬಳಿಗೆ ಸೇರಿದ ಹೊಲೆಕೆರೆಯಲ್ಲಿರುವ ಜರುಗನಹಳ್ಳಿ ಒಕ್ಕಲಿಗರ ಬೈರಪ್ಪನ ಮಗ ಕೋನಪ್ಪ. ಫೌತಿ ಇವನ ಹೆಂಡತಿ ಬೈಯ್ಯಮ್ಮ ವಯುಸ್ಸು ಸುಮಾರು ೨೦ ಹಾಲಿ ಇವಳು ಸದರಿ ಹೊಲಯನಕೆರೆಯಲ್ಲಿ ತನ್ನತಂದೆ ದೇವಂಡಹಳ್ಳಿ ಬೈರಪ್ಪ ನಮನೆಯಲ್ಲಿ ವಾಸವಾಗಿರುದ್ದಾಳೆ

ಶಿವಿಲ್ ಪ್ರೊಸಿಜರ್‌ಕೋಡ್ ಆರ್ಡರ್ ೭ ರೂಲ್ ೧.

ಅನುಸರಿಸಿ ವಾದಿಯು ಹೇಳಿಕೊಳ್ಳುವದೇನಂದರೆ,—

೧. ವಾದಿ ಸಹೋದರ ಬೈರಪ್ಪನೆಂಬುವನಿಗೆ ಕೋನಪ್ಪನೆಂಬ ಒಬ್ಬ ಮಗನಿದ್ದನು. ಸದರಿ ಬೈರಪ್ಪ ಈಗ್ಗೆ ಸುಮಾರು ೪" ವರ್ಷಗಳ ಕೆಳಗೂ ಸದರಿ ಕೋನಪ್ಪನೆಂಬುವನು ಈಗ್ಗೆ ಸುಮಾರು ೧೮ ತಿಂಗಳ ಕೆಳಗೂ ಸ್ವಗತಪಟ್ಟುಹೋದರು ೨ ನೆ ಪ್ರತಿವಾದಿಯು ಸದರಿ ಕೋನಪ್ಪನಿಗೆ ಹೆಂಡತಿಯಾಗಬೇಕು. ಸದರಿ ಕೋನಪ್ಪನಿಗೆ ಗಂಡುಮಕ್ಕಳಾಗಲಿ ಹೆಣ್ಣುಮಕ್ಕಳಾಗಲಿ ಇಲ್ಲ. ಈ ವಾದಿಯು ಅವನಿಗೆ ಖಾಸಾ ದೊಡ್ಡಪ್ಪನಾಗಿಯೂ, ಉತ್ತರ ವಾರಸುದಾರನಾಗಿಯೂ, ಅಂದರೆ ರಿವರ್ಷನರಾಗಿಯೂ ಇರುತ್ತಲಿದ್ದಾನೆ.

೨. ಸದರಿ ಕೋನಪ್ಪನ ಖಾಸಾ ತಂಗಿಯರಾದ ಚಿಕ್ಕಮುನಿಯಮ್ಮ ಮತ್ತು ಮುನಿವೆಂಗಟಮ್ಮ ಇವರಿಗೆ ಗಾರ್ಡಿಯನಾಗಿ ತನ್ನನ್ನು ನೇಮಿಸತಕ್ಕಬಗ್ಗೆ ಈ ವಾದಿಯು ಬೆಂಗಳೂರು ಸಬ್‌ಜಡ್ಜಿಯವರಕೋರ್ಟ್, ೧೯೧೦-೧೯೧೧ ನೇ ಇಸವಿ ಮಿಸ್ ಕೇಸ್ ೨೬೭ ರಲ್ಲು ಅರ್ಜಿ ದಾಖಲ್ಮಾಡಿದ್ದನು. ಇದರಲ್ಲಿ ೧೯೧೧ ನೇ ಇಸವಿ ಜನವರಿ ಅಥವಾ ಫೆಬ್ರವರಿ ಆದಿಭಾಗದಲ್ಲಿ ೨ನೇ ಪ್ರತಿವಾದಿಗೆ ನೋಟೀಸ್ ಜಾರಿ ಆಗಿ ಆಖೈರಿನಲ್ಲಿ ಸದರಿ ಮೈನರ್‌ಗಳಿಗೆ ಈ ವಾದಿಯು ಗಾರ್ಡಿಯನಾಗಿರಲು ೩ ನೇ ಪ್ರತಿವಾದಿಯು ಕಬೂಲ್ಪಟ್ಟಳು. ಸದರಿ ಮೈನರ್‌ಗಳಿಗೆ ಈವಾದಿಯನ್ನೇ ಕೋರ್ಟಿನವರು ೨೨-೮-೧೯೧೧ ರಲ್ಲು ಗಾರ್ಡಿಯನಾಗಿ ನೇಮಿಸಿದರು,

೩. ೧ ನೇ ಪ್ರತಿವಾದಿಯು ೨ ನೇ ಪ್ರತಿವಾದಿಯ ಗಂಡ ಕೋನಪ್ಪನ ಖಾಸಾ ತಂಗಿಯಾದ ಬಾಲಮ್ಮನ ಗಂಡನಾದ ನರಸಣ್ಣನ ಮಗ ರಾಮಣ್ಣ ಎಂಬುವನಿಗೆ ಚಿಕ್ಕಪ್ಪನಾಗಬೇಕು. ಅಂದರೆ ೧ ನೇ ಪ್ರತಿವಾದಿ ರಾಮಣ್ಣನ ತಂದೆಯೂ ಸದರಿ ನರಸಣ್ಣನ ತಂದೆಯೂ ಅಣ್ಣತಮ್ಮಂದಿರಾಗಬೇಕು.

೪. ೨ ನೇ ಪ್ರತಿವಾದಿಯ ಗಂಡ ಕೋನಪ್ಪನು ೧ ನೇ ಪ್ರತಿವಾದಿಗೆ ೧೧೦. (ನೂರುಹತ್ತು) ರೂಪಾಯಿಗಳು ಕೊಡಬೇಕಾಗಿದ್ದಂತೆಯೂ ಈ ರೂಪಾಯಿಗಳನ್ನ ೧ ನೇ ಪ್ರತಿವಾದಿಗಾಗಲಿ ಅಥವಾ ಇವನ ಆರ್ಡರಿಗಾಗಲಿ ಪಾವತಿಮಾಡುವುದಾಗಿ ೨ ನೇ ಪ್ರತಿವಾದಿಯು ೧ ನೇ ಪ್ರತಿವಾದಿಯ ಹೆಸರಿಗೆ ೧೩-೩-೧೯೧೧ ರಲ್ಲು ಆನ್‌ಡಿಮಾಂಡ್ ಪ್ರಾಂಸರಿನೋಟ್ ಬರಿಸಿಕೊಟ್ಟಂತೆಯೂ, ಇದಕ್ಕಾಗಿ ಏನೂ ವಸೂಲ್‌ಕೊಡಲಿಲ್ಲವೆಂತಲೂ, ಸಹಾ ೨ ನೇ ಪ್ರತಿವಾದಿ ಮೇಲೆ ಡಿಕ್ರಿ ಕೊಡಿಸಬೇಕೆಂದು ೧ ನೇ ಪ್ರತಿವಾದಿಯು ೨ ನೇ ಪ್ರತಿವಾದಿ ಮೇಲೆ ಬೆಂಗಳೂರ್ ಸಬ.ಜಡ್ಜಿಯವರ ಕೋರ್ಟ್ ೧೯೧೦—೧೧ ನೇ ಇಸವಿ ಸ್ಮಾಲ್‌ಕಾಸ್ ಸೂಟ್‌ನಂಬರ್ ೮೩೫ ರಲ್ಲು ೨೦—೩೧೯೧೧ ರಲ್ಲು ದಾವೆ ಮಾಡಿದ್ದನು. ಅದರಲ್ಲು ಖರ್ಚು ದೇಖೀಲ್ ೧೨೦-೨-೩ ರೂಪಾಯಿಗಳಿಗೆ ೨ ನೇ ಪ್ರತಿವಾದಿ ಮೇಲೆ ಡಿಕ್ರಿ ಆಯಿತು. ಅಂದರೆ ೧-೨ ನೇ ಪ್ರತಿವಾದಿಗಳ ಕಬೂಲಿಮೇಲೆ ಡಿಕ್ರಿ ಆಯಿತು. ಈ ಸಂಗತಿ ಈಚೆಗೆ ಈ ವಾದಿಗೆ ತಿಳಿಯಬಂತು.

೫. ಸದರಿ ಡಿಕ್ರಿಯನ್ನು ೧ ನೇ ಪ್ರತಿವಾದಿಯು ಬೆಂಗಳೂರ್ ಸಬ್ ಜಡ್ಜಿಯವರ ಕೋರ್ಟ್ ೧೯೧೧— ೧೯೧೨ ನೇ ಇಸವಿ ಜಾರಿ ನಂಬರ್ ೬೬೪ ರಲ್ಲು ಜಾರಿ ಮಾಡಿಸಿರುವದ್ದರಲ್ಲಿ ೨ ನೇ ಪ್ರತಿವಾದಿಯ ಗಂಡ ಫೌತಿ ಕೋನಪ್ಪನ ಬಾಬತು ಇದರಸಂಗಡ ಹಾಜರ್ಮಾಡಿರುವ ಷೆಡ್ಯೂಲ್‌ನಲ್ಲಿ ಕಂಡ ಆಸ್ತಿ ಅಂದರೆ ಸ್ಥಿರಸ್ವತ್ತನ್ನು ಜಫ್ತಿಮಾಡಿಸಿರುತ್ತಾನೆ. ಮತ್ತು ಇದನ್ನು ೧೩-೩-೧೨ಕ್ಕೆ ಹರಾಜಿಗೆ ಇಟ್ಟರುತ್ತೆ.

೬. ಘೌತಿ ಕೋನಪ್ಪನು ೧ ನೇ ಪ್ರತಿವಾದಿ ಬಳಿ ೧೦೦ ರೂ ಗಳು ಸಾಲಾಪಾಡಿದವನಲ್ಲ. ಸಾಲಾಮಾಡಲು ಕಾರಣವೂ ಇರಲಿಲ್ಲಾ ಈಸಾಲ ಮಾಡಿದವನೆಂದು ಹೇಳುವ ಅಂಶ ಸುಳ್ಳು. ಈ ದಾವಾ ಅರ್ಜಿ ೧ ನೇ ಪ್ಯಾರಾದಲ್ಲಿ ಕಂಡಂತೆ ಸದರಿ ಕೋನಪ್ಪನಿಗೆ ಈವಾದಿಗೆ ರಿವರ್ ಷನರ್ ಆ ದ್ದರಿಂದಲೂ ಕೋನಪ್ಪನ ಚರಸ್ಥಿರ ಆಸ್ತಿಗಳೆಲ್ಲಾ ೨ ನೇ ಪ್ರತಿವಾದಿಯ ಸುಬರ್ದಿನಲ್ಲಿರುವದ್ದರಿಂದಲೂ ಈ ಆಸ್ತಿಯನ್ನು ವಾದಿಗೆ ದಕ್ಕಲಿಸಬಾರ ದೆಂಬ ಇರಾದೆಯಿಂದಲೂ ಈ ಪ್ರತಿವಾದಿಗಳು ೨ ನೇ ಪ್ರತಿವಾದಿ ತಂದೆ ದೇವಂಡಳ್ಳಿ ಬೈರಪ್ಪ ಮತ್ತೊಬ್ಬ ಕತ್ತರಿಗುಪ್ಪೆಯಲ್ಲಿರುವ ನರಸಣ್ಣನವುಗ ರಾಮಣ್ಣ ಇವರೆಲ್ಲರ ಷರೀಕಿನಿಂದ ಹೋಲ್ಕಂಡ ಪ್ರೋನೋಟ್ ಕೊಟ್ಟಿರು ವದಾಗಿ ವಾದಿ ನಂಬುತ್ತಾನೆ. ಮತ್ತು ಅದರಮೇಲೆ ದಾವೆಮಾಡಿ ಈಪ್ರ ತಿವಾದಿಗಳ ಕಬೂಲಿಮೇಲೆ ಡಿಕ್ರಿ ಆಗಿರುತ್ತೆ.

೭. ೨ ನೇ ಪ್ರತಿವಾದಿಮೇಲೆ ೧ ನೇ ಪ್ರತಿವಾದಿಗೆ ಆಗಿರುವ ಡಿಕ್ರಿ ೨ ನೇ ಪ್ರತಿವಾದಿಮೇಲ ಪರ್ಸನಲ ಡಿಕ್ರಿ ಆಗಿದೆಯೇಹೊರ್ತು ೨ ನೇ ಪ್ರತಿ ವಾದಿಯು ಸುಬರ್ದಿನಲ್ಲಿರುವ ಇವಳ ಗಂಡ ಘೌತಿ ಕೋನಪ್ಪನ ಆಸ್ತಿಮೇಲೆ ಡಿಕ್ರಿ ಆಗಿರುವುದಿಲ್ಲ. ಈ ಡಿಕ್ರಿಯನ್ನು ಅನುಸರಿಸಿ ೨ ನೇ ಪ್ರತಿವಾದಿ ಸುಬರ್ದಿನಲ್ಲಿರುವ ಘೌತಿ ಕೋನಪ್ಪನ ಅಸ್ತಿಯನ್ನು ಜಪ್ತಿಮಾಡಿಸಲು ೧ ನೇ ಪ್ರತಿವಾದಿಗೆ ಏನೂ ಹಕ್ಕು ಇರುವುದಿಲ್ಲ. ಇದು ವಾದಿಯು ರಿವರ್ಷ ನರಿ ಹಕ್ಕಿಗೆ ನ್ಯೂನತೆ ಉಂಟುಮಾಡತಕ್ಕದ್ದಾಗಿಯೂ ಮೋಸಕರವಾದ್ದಾ ಗಿಯೂ ಇರುತ್ತೆ.

೮. ಸದರಿ ಡಿಕ್ರಿಯನ್ನು ಅನುಸರಿಸಿ ಕೋನಪ್ಪನ ಸ್ವತ್ತನ್ನು ೧ ನೇ ಪ್ರತಿವಾದಿ ಜಪ್ತಿ ಮಾಡಿಸಿರುವಧ್ದರಿಂದಲ ಇದು ಹರಾಜಾದರೆ ವಾದಿಯು ರಿವರ್ ಷನರಿ ಹಕ್ಕಿಗೆ ನ್ಯೂನತೆ ಉಂಟಾಗಿ ಸದರಿ ಸ್ವತ್ತು ಕೈಬಿಟ್ಟುಹೋ ಗಲು ಕಾರಣವಾಗುತ್ತಾದ್ದರಿಂದಲೂ ಘೌತಿ ಕೋನಪ್ಪನ ಆಸ್ತಿ ಸದರಿ ಡಿಕ್ರಿಗ ಜಪ್ತಿಹರಾಜಾಗತಕ್ಕದ್ದಲ್ಲವೆಂದು ಡಿಕ್ಲೇರ್ ಮಾಡಿಸಿಕೊಳ್ಳಲು ವಾದಿಯಿಂದ ಈ ದಾವಾ ತರಲ್ಪಟ್ಟಿರುತ್ತೆ.

೯. ಈ ದಾವೆಗೆ ವ್ಯಾಜ್ಯಕಾರಣ—೧ ನೇ ಪ್ರತಿವಾದಿಪರ ಮೇಲ್ಕಂ ಡಂತೆ ಡಿಕ್ರಿ ಆಗಿರುತ್ತೆಂಬ ಸಂಗತಿ ವಾದಿಗೆ ತಿಳಿದ ಈಗ್ಯೆ ಸುಮಾರು ಅರುತಿಂಗಳ ಲಾಗಾಯತು ಅಥವಾ ಕೋನಪ್ಪನ ಸ್ಥಿರಸೊತ್ತು ಜಪ್ತಿ ಯಾದ ಈಗ್ಯೆ ಸುಮಾರು ಎರಡುತಿಂಗಳ ಲಾಗಾಯಿತು ಈ ಕೋರ್ಟ್ ಅಧಿಕಾರ ಸರಹದ್ದು ಬೆಂಗಳೂರ್ ಸಿಟಿಯಲ್ಲಿ ಉಂಟಾಗಿರುತ್ತೆ.

೧೦ ಜಡ್ಜ್‌ಮೆಂಟ್ ಬಗ್ಗೆ ಪ್ರಾರ್ಥನೆ,—

(೧) ವಾದಿಯ ರಿವರ್ಷನರಿ ಹಕ್ಕಿಗೆ ಸಂಬಂಧಪಟ್ಟ ಮಟ್ಟಿಗೆ ಬೆಂಗಳೂರ್ ಸಬ್‌ಜಡ್ಜಿಯವರ ಕೋರ್ಟಿನ ಸ್ಮಾಲ್‌ಕಾಸ್ ಸೂಟ್ ನಂಬರ್ $\frac{845}{10\text{-}11}$ ರಲ್ಲು ೧ ನೇ ಪ್ರತಿವಾದಿಯು ೨ ನೇ ಪ್ರತಿವಾದಿಮೇಲೆ ಪಡದಿರುವ ಡಿಕ್ರಿ ಮೋಸಕರವಾದ್ದರಿಂದಲೂ ಸದರಿ ಡಿಕ್ರಿ ೨ ನೇ ಪ್ರತಿವಾದಿ ಮೇಲೆ ಆಗಿರುವ ಪರ್ಸನಲ್ ಡಿಕ್ರಿಯಾಗಿರುವದ್ದರಿಂದಲೂ ಸದರಿ ಡಿಕ್ರಿಯನ್ನು ಅನುಸರಿಸಿ ಫೌತಿ ಕೋನಪ್ಪನ ಆಸ್ತಿಯನ್ನು ಜಫ್ತಿಹರಾಜು ಮಾಡಿಸಲು ೨ ನೇ ಪ್ರತಿವಾದಿಗೆ ಹಕ್ಕು ಇಲ್ಲವೆಂದು ಡಿಕ್ಲೇರ್ ಮಾಡಿಸಬೇಕೆಂತಲೂ

(೨) ಈ ಮೊಖದ್ದಮೆ ಕೋರ್ಟುಖರ್ಚು ವಿಸಿಷ್ಟವೂ ಪ್ರತಿವಾದಿಗಳಿಂದ ವಾದಿಗೆ ಸಲ್ಲುವಂತೆಯೂ ಮತ್ತೂ

(೩) ಕೋರ್ಟಿನವರಿಗೆ ಯುಕ್ತವೆಂದು ತೋರುವ ಇತರ ಎಲ್ಲಾ ಪರಿಹಾರಗಳೂ ಸಹಾ ಕೊಡಿಸಬೇಕೆಂದು ವಾದಿಯು ಪ್ರಾರ್ಥಿಸುತ್ತಾನೆ.

೧೧. ೧ ನೇ ಪ್ರತಿವಾದಿಯು ೨ ನೇ ಪ್ರತಿವಾದಿಯ ಮೇಲೆ ಬೆಂಗಳೂರ್ ಸಬ್‌ಜಡ್ಜಿಯವರ ಕೋರ್ಟ್ ೧೯೧೦—೧೧ ನೇ ಇಸಿವಿ ಸ್ಮಾಲ್ ಕಾಸ್ ಸೂಟ್ ನಂಬರ್ ೮೪೫ ರಲ್ಲು ಪಡದ ಡಿಕ್ರಿಯನ್ನ ಅದೇ ಕೋರ್ಟ್ಟ ೧೯೧೧—೧೨ ನೇ ಇಸಿವಿ ಜಾರಿ ನಂ॥ ೬೬೪ ರಲ್ಲು ಜಾರಿ ಮಾಡಿಸಿದ್ದರಲ್ಲಿ ಫೌತಿ ಕೋನಪ್ಪನ ಬಾಬತು ಸ್ಥಿರಸೊತ್ತನ್ನುಜಫ್ತಿಮಾಡಿಸಿರುತ್ತಾನೆ. ಈ ಜಫ್ತಿಪಟ್ಟಿ ನಕಲ್ ಅಂದರೆ ಸರ್ಟಿಫೈಡ್ ಕಾಪಿ ಒಂದು ಇದರೊಂದಿಗೆ ಹಾಜರ್ಮಾಡಿರುತ್ತೆ.

೧೨. ಈ ಮೊಕದ್ದಮೆಯಲ್ಲಿ ಡಿಕ್ಲರೇಟರಿ ಡಿಕ್ರಿ ಕೇಳುವದ್ದರಿಂದ ಇದಕ್ಕೆ ೧೦ ರೂಪಾಯಿಗಳ ಫೀ ಕೊಟ್ಟಿರುತ್ತೆ.

ಅಸಲಿಗೆ ವಾದಿ ರುಜು ಆಗಿದೆ. ಪ್ರಮಾಣವಚನ ಬರದಿದೆ.

ಷೆಡ್ಯೂಲ್.

ಬೆಂಗಳೂರ್ ಸಬ್‌ಜಡ್ಜಿಯವರ ಕೋರ್ಟು ೧೯೧೦— ೧೧ ನೇ ಇಸಿವಿ ಸ್ಮಾಲ್ಕ್ಯಾಸ್ ಸೂಟ ನಂಬರು ೮೪೫ ಮತ್ತು ಅದೇಕೋರ್ಟು ೧೯೧೧ ೧೨ ನೇ

ಇಸಿವಿ ಜಾರಿ ನಂಬರು ೬೬೪ ರಲ್ಲು ಜಫ್ತಿಯಾಗಿ ೧೩-೩ ೧೦ ಕ್ಕೆ ಹರಾಜು ಇಟ್ಟಿರುವ ಫೌತಿ ಕೋನಪ್ಪದ ಬಾಬತು ಸ್ಥಿರಶೊತ್ತಿನ ತಪ್ಸೀಲ್.

ಬೆಂಗಳೂರು ತಾ॥ ಉತ್ತರಹಳ್ಳಿ ಹೋಬಳಿ ಮಂಚೇನಹಳ್ಳಿಯಲ್ಲಿರುವ ಸರ್ವೇ ೧೨ನೇ ನಂಬರು (೬-೩) ಗೆ ಆಕಾರ (೯-೨೨) ರೂ. ಉಳ್ಳ ಜಮೀನಿಗೆ ಚಕ್ಕುಬಂದಿ. ಪೂರ್ವಕ್ಕೆ ಒಲಬಯ್ಯನ ಹೊಲ. ಪಶ್ಚಿಮಕ್ಕೆ ಕೋನಾಯ್ಕನಹಳ್ಳಿ ಕಾನೆ, ಉತ್ತರಕ್ಕೆ ಮುನಿಶಾಮಪ್ಪನ ತೋಟ ಬೊಮ್ಮಯ್ಯನ ಹೊಲ, ದಕ್ಷಿಣಕ್ಕೆ ಬೊಮ್ಮಯ್ಯನ ಹೊಲ. ಈಮಧ್ಯೆ ಇರುವ ಹೊಲ.

(Signed) by.

Copy. K. T. Narasimha Iyengar

Advocate for Plaintiff,

*

೧೦೦ ರೂಪಾಯಿನ ದಿನಕಂತಿನ ದಾವಾ.

ಬೆಂಗಳೂರು ಫಸ್ಟು ಮುನಶೀಫ್ ಕೋರ್ಟಿಗೆ.

1913—24 ನೆ ಇಸಿವಿ S. C. No.

ವಾದಿ.

ಬೆಂಗಳೂರು ದೇವರಾಯಶೆಟ್ಟಿಪೇಟೆಯಲ್ಲಿ ಇರುವ ಲಿಂಗಾಯತರ ಬಸಪ್ಪನವರ ಮಗ 40 ವರುಷದ ವೇಲಾಯುಧ ಬಶೆಟ್ಟಿ ಕಸಬು ಲೇವಾದೇವಿ.

ಪ್ರತಿವಾದಿಯರು.

1. ಡಿಟೋ ಪೇಟೆಯಲ್ಲಿರುವ ಶಿವಾಚಾರದ ಚೆನ್ನಬಸಪ್ಪನಕೊಮಾರ ಕುಮಾರು 30 ವರುಷದ ಬಸಲಿಂಗಪ್ಪ.
2. ಡಿಟೋ ಸ್ಥಳದಲ್ಲಿರುವ ನಾಯಕರ ಹುಚ್ಚಪ್ಪನ ಮಗ ಸುಮಾರು 45 ವರುಷದ ಮುತ್ತಣ್ಣ ಕಸಬು ಚಿಲ್ಲರೇ ಅಂಗಡಿ ವ್ಯಾಪಾರ.

ಆರ್ಡರ್ ೭ ರೂಲ್ ೧ ರ ಮೇರೆಗೆ.

೧. ವಾದಿ ಬಳಿ ಪ್ರತಿವಾದಿಯರು ೯೦—೦—೦. ರೂಪಾಯಿಗಳು ಸಾಲಾ ಪಡದು ಸದರಿ ಮೊಬಲಗ್ಗೆ ೧೦—೦—೦. ರೂಪಾಯಿ ನಫೇ

ಸೇರಿಸಿ ಜುಮ್ಲಾ ೧೦೦—೦—೦. ರೂಪಾಯಿಗಳನ್ನು ದಿನ ೧ ಕ್ಕೆ ೦-೧೨ ೦ ಆಣೆಯಂತೆ ಕಂತು ಪಾವತಿಮಾಡುವದಾಗಿಯೂ ಹಾಗೆ ಕಂತು ಪಾವತಿಮಾಡದೆ ತಪ್ಪಿದರೆ ಸೇಕಡಾ ತಿಂಗಳು ೧ ಕ್ಕೆ ೨—೦—೦ ರೂಪಾಯಿನಂತೆ ಬಡ್ಡಿ ಸೇರಿಸಿ ಒಂದೇ ಗಂಟನಲ್ಲಿ ಪಾವತಿ ಮಾಡುವದಾಗಿ ಒಪ್ಪಿ ಇದರ ಸಂಗಡ ಹಾಜರ್ಮಾಡಿರುವ ಕಂತುಪತ್ರವನ್ನು ೧೪-೪-೯೧೨ ರಲ್ಲಿ ಬರದುಕೊಟ್ಟರು.

೨. ಮೇಲ್ಕಂಡ ಪತ್ರಕ್ಕಾಗಿ ದಫಾವಾರು ೭೪—೦—೦ ರೂಪಾಯಿ ಮಾತ್ರಾ ವಸೂಲ್ಕೊಟ್ಟು ಬಾಕಿಯನ್ನು ಎಷ್ಟು ತಗಾದೆ ಮಾಡಿದಾಗ್ಯೂ ಕಾಲಹರಣ ಮಾಡುತ್ತಾರಾಗಿ ದಾವಾ.

೩. ವ್ಯಾಜಕಾರಣ. ೨೨—೭—೯೧೨ ರ ಲಾಗಾಯಿತು ಈ ಕೋರ್ಟು ಸರಹದ್ದಿಗೆ ಒಳಪಟ್ಟ ಬೆಂಗಳೂರು ಸಿಟಿಯಲ್ಲಿ ಉಂಟಾಗಿರುತ್ತೆ.

ಜಡ್ಜಮೆಂಟ್‌ಬಗ್ಯೆ ಪ್ರಾರ್ಥನೆ.

ಕಂತುಪತ್ರದ ಬಾಬತು ಅಸಲು	೨೬—೦—.
೨೨—೨—೯೧೨ ರ ಲಾಗಾಯಿತು ದಾವಾ ತಾ॥ ವರಿಗೆ ಆಗುವ ೧೬ ತಿಂಗಳಿಗೆ ಸೇಕಡಾ ತಿಂಗಳು ೧ ಕ್ಕೆ ೨—೦—೦ ರೂಪಾಯಿನಂತೆ ಆಗುವ ಬಡ್ಡಿ	೮—೫—೦.
ಜುಮ್ಲಾ	೩೪—೫—೦.

ಈ ಮೊಬಲಗು ಕೋರ್ಟುಖರ್ಚು ಚಾಲ್ತಿ ಬಡ್ಡಿ ಸಹಾ ಪ್ರತಿವಾದಿಯರಿಂದಾ ವಾದಿಗೆ ಸಲ್ಲುವಂತೆಯೂ ಮತ್ತು ಕೋರ್ಟಿನವರಿಗೆ ಯುಕ್ತತೋರುವ ಇತರ ಪರಿಹಾರಗಳೊಡನೆ ಡಿಕ್ರೀ ಕೊಡಿಸಬೇಕೆನದು ಪ್ರಾರ್ಥನೆ. ಇದರಸಂಗಡ ಹಾಜರ್ಮಾಡಿರುವ ದಾವಾಪತ್ರ ವಿನಹಾ ಇನ್ನೇನು ಹಾಜರ್ಮಾಡುವದು ಇಲ್ಲಾ.

ಇದರಲ್ಲಿ ಬರದಿರುವದೆಲ್ಲಾ ಖುದ್ದು ತಿಳಿದು ನಿಜವೆಂದು ಸತ್ಯವಾಗಿ ಹೇಳುತ್ತೇದೆ.

ನಮೂನೆ ನಂಬರು ೬

೧೫೦ ರೂಪಾಯಿನ ದಿನಕಂತು ದಾವಾ.

ಬೆಂಗಳೂರು ೧ ನೇ ಮುನ್ಸೀಫ್ ಕೋರ್ಟಿಗೆ.

1913—14 ನೇ ಇಸವಿ So. No.

ವಾದಿ.	Vs.	ಪ್ರತಿವಾದಿ
ವೇಲಾಯುಧಶೆಟ್ಟಿ,		೧. ಕಳಸಪ್ಪ. ೨. ಲಿಂಗಪ್ಪ. ೩. ವೆಂಕಟಪ್ಪ.

ವಾದಿ ದಾವಾ.

೧. ವಾದಿಬಳಿ ಪ್ರತಿವಾದಿಯರು ೧೩೫—೦—೦ ರೂ. ಸಾಲಾಪಡದು ಸದರಿ ಮೊಬಲಗೆ ೧೫—೦—೦ ರೂ. ನಫೆಸೇರಿಸಿ ಜುಮ್ಲಾ ೧೫೦—೦—೦ ರೂ. ಮುನ್ನು ದಿನ ೧ ಕ್ಕೆ ೧-೦-೦ ರೂ. ನಂತೆ ಕಂತು ಪಾವತಿಮಾಡುವದಾಗಿಯೂ, ಹಾಗೆ ಕಂತು ಪಾವತಿ ಮಾಡದೆ ತಪ್ಪಿದರೆ ಸೇಕಡಾ ತಿಂಗಳು ೧ ಕ್ಕೆ ೨-೦-೦ ರೂ. ನಂತೆ ಬಡ್ಡಿ ಸೇರಿಸಿ ಒಂದೇಗಂಟಿನಲ್ಲಿ ಪಾವತಿಮಾಡುವದಾಗಿ ಒಪ್ಪಿ ಇದರಸಂಗಡಾ ಹಾಜರ್ಮಾಡಿರುವ ಕಂತು ಪತ್ರವನ್ನು ೧-೭-೧೨ ರಲ್ಲಿ ಬರೆದುಕೊಟ್ಟರು.

೨. ಮೇಲ್ಕಂಡ ಪತ್ರಕ್ಕಾಗಿ ದಫೇವಾರ್ ೧೦೨-೧೨-೦ ಮಾತ್ರ ವಸೂಲ್ ಕೊಟ್ಟು ಬಾಕಿಯನ್ನು ಎಷ್ಟು ತಗಾದೆ ಮಾಡಿದಾಗ್ಯೂ ಕೊಡದೆ ಕಾಲಹರಣ ಮಾಡುತ್ತಾರಾಗಿ ದಾವಾ.

೩. ವ್ಯಾಜ್ಯಕಾರಣ. ೧೩—೯—೧೨ ರ ಲಾಗಾಯಿತು ಈ ಕೋರ್ಟಿನ ಸರಹದ್ದಿಗೆ ಒಳಪಟ್ಟ ಬೆಂಗಳೂರು ಸಿಟಿಯಲ್ಲಿ ಉಂಟಾಗಿರುತ್ತೆ.

ಜಡ್ಮೆಂಟ್ಬಗ್ಗೆ ಪ್ರಾರ್ಥನೆ.

ಕನತಿನ ಪತ್ರದಬಾಬತು ವಸೂಲ್ ಜಾತಾಬಾಕಿ ಅಸಲ್	೩೧—೪—೦
೧೧—೯—೧೨ ರ ಲಾಗಾಯಿತು ತಾವಾ ತಾ॥ ವರಿಗೆ ಆಗುವ ೧೪॥ ತಿಂಗಳಿಗೆ ಸೇಕಡ ತಿಂಗಳು ೧ ಕ್ಕೆ ೨—೦—೦ ರೂ. ನಂತೆ ಆಗುವ ಬಡ್ಡಿ	೪-೧೨-೦
	೩೬-೦-೦.

ಈ ಮೊಬಲಗು ಕೋರ್ಟುಖರ್ಚು ಚಾಲ್ತಿಬಡ್ಡಿ ಸಹಾ ಪ್ರತಿವಾದಿಯರಿಂದ ವಾದಿಗೆ ಸಲ್ಲುವಂತೆ ಡಿಕ್ರಿ ಕೊಡಿಸಬೇಕೆಂದು ಪ್ರಾರ್ಥನೆ.

ರುಜು.

ನಮೂನೆ ನಂಬರು ೭.

೪ ನೇ ಸಿವಿಲ್, ದಾವಾ ಓ. ಎಸ್. ನಂ|| ೫೬೨ ಕ್ಕೆ ಜಬಾಬು ಕೊಟ್ಟ ರಿಟನ್ ಸ್ಟೇಟ್ಮೆಂಟ್.

ಬೆಂಗಳೂರು ಪ್ರಿನ್ಸಿಪಲ್ ಮುನ್ಸೀಫ್‌ರವರ ಕೋರ್ಟಿಗೆ.

ವಾದಿ.	ಪ್ರತಿವಾದಿ.
ಬೊಮ್ಮಯ್ಯ.	೨ ನೇ ಬೈಯ್ಯಮ್ಮ.

೨ ನೇ ಪ್ರತಿವಾದಿ ರಿಟನ್ ಸ್ಟೇಟ್‌ಮೆಂಟ್.

೧. ೨ ನೇ ಪ್ರತಿವಾದಿ ಘೌತಿ ಗಂಡನು ಸಾಯುವಕಾಲ ದಲ್ಲಿ ೧ ನೇ ಪ್ರತಿವಾದಿಗೆ ೧೦೦ ರೂಪಾಯಿ ನರಸಪ್ಪನ ಮಗ ರಾಮಣ್ಣನಿಗೆ ೧೫೦ ರೂಪಾಯಿ. ಮುನಯ್ಯನೆಂಬುವನಿಗೆ ೫೦ ರೂಪಾಯಿಗಳು. ಈ ಸಾಲಗಳು ಕೊಡಬೇಕೆಂದು ಹೇಳಿದ್ದನು.

೨, ೧ ನೇ ಪ್ರತಿವಾದಿಯು ಬಳಿ ಈಪ್ರತಿವಾದಿಯು ಗಂಡ ಘೌತಿ ಕೋನಪ್ಪನು ೬—೫—೧೯೧೦ ರಲ್ಲು ೧೦೦ ರೂಪಾಯಿಗಳು ತೆಗೆದುಕೊಂಡಿದ್ದದ್ದಕ್ಕೆ ತಗಾದೆ ಮಾಡಲು ಆ ಅಸಲು ೧೦೦ ರೂಪಾಯಿ ಬಡ್ಡಿ ೧೦ ರೂಪಾಯಿ ಜುಮ್ಲಾ ೧೧೦ ರೂಪಾಯಿಗೆ ೧೩-೩-೯೧೧ ರಲ್ಲು ಒಂದು ದಸ್ತಾವೇಜನ್ನು ಬರದುಕೊಟ್ಟಳು. ಮತ್ತು ೧ ನೇ ಪ್ರತಿವಾದಿಯು ಹೆಸರನ್ನು ತನ್ನಗಂಡನು ಬರದುಕೊಟ್ಟಿದ್ದ ಇದರೊಡನೆ ಹಾಜರ್ಮಾಡಿರುವ ಸದರಿ ದಸ್ತಾವೇಜನ್ನು ವಾಫಸು ಪಡೆದಳು.

೩. ಸದರಿ ೧೧೦ ರೂಪಾಯಿಗಳು ೧೦ ನೇ ಪ್ರತಿವಾದಿಗೆ ೨ ನೇ ಪ್ರತಿವಾದಿಯು ಗಂಡನ ಆಸ್ತಿಯಿಂದ ಸಲ್ಲಬೇಕಾದ್ದು ನಿಜ. ಇದರ ಮೇಲೆ ಡಿಕ್ರಿ ಆದ್ದು ನಿಜ.

೪. ಈ ವಾದಿಯು ೨ ನೇ ಪ್ರತಿವಾದಿಮೇಲೆ ಬೆಂಗಳೂರು ಸಬ್ಜಡ್ಜಿಯವರ ಕೋರ್ಟನಲ್ಲಿ ಘೌತಿ ಕೋನಪ್ಪನವರ ತಂಗಿಯರ ಖರ್ಚಿಗಾಗಿ ೧೫ ರೂಪಾಯಿಗೆ ಆರ್ಡರು ಪಡೆದಿರುತ್ತಾನೆ.

೫. ವಾದಿಯು ಈ ದಾವಾ ತಂದಿರುವುದು ನ್ಯಾಯವೂ ಅಲ್ಲಾ. ಸಾಚಾವಾದ್ದಲ್ಲಾ.

ಈ ಕಾರಣಗಳಿಂದ ದಾವಾಖರ್ಚು ನಿಸಿ ಡಿಸ್‌ಮಿಸ್ ಮಾಡಿಸಬೇಕೆಂದು ಪ್ರಾರ್ಥನೆ.

○ ಈ ಗುರ್ತು ಬಯ್ಯಮ್ಮ ಹಾಕಿದ್ದು.
ಮೇಲ್ಕಂಡ ಸಂಗತಿಗಳೆಲ್ಲಾ ನಿಜವಾದ್ದೆಂದು ೨ ನೇ ಪ್ರತಿವಾದಿಯಾದ ನಾನು ಸತ್ಯವಾಗಿ ಹೇಳುತ್ತೇನೆ.

● ಈ ಗುರ್ತು ಬಯ್ಯಮ್ಮ ಹಾಕಿದ್ದು.

ನಮೂನೆ ನಂಬರ್ ೮.

ಶಿವಿಲ್ ದಾವೆ.

ಕೈಸಾಲಪತ್ರದಮೇಲೆ ದಾವಾ.

………………………ಮುನ್ಸೀಫರವರ
ಕೋರ್ಟಿಗೆ.

ನೇ ಇಸವಿ ಸಿವಿಲ್ ದಾವೆ.
ನಂಬರು……………

ವಾದಿ. ಪ್ರತಿವಾದಿ.

…………………………… ……………………………

೧೯೧೬ ನೇ ಜನವರಿ ೧೫ ನೆಯ ತಾರೀಖಿನಲ್ಲಿ ಮೇಲ್ಕಂಡ ವಾದಿಯು ಹೇಳಿಕೊಳ್ಳುವುದೇನಂದರೆ:—

೧೯೧೫ ನೇ ಇಸವಿ ಜನವರಿ ತಾ॥ ೧೫ ರಲ್ಲಿ ವಾದಿಯಿಂದ ೫೦ ರೂಪಾಯಿ ಸಾಲವಾಗಿ ಪಡೆದು ಮೂರುತಿಂಗಳ ವಾಯಿದೆಯೊಳಗೆ ಪ್ರತಿವಾದಿಯು ಇದರೊಡನೆ ಹಾಜರ್ಮಾಡಿರುವ ಪತ್ರವನ್ನು ಬರೆದುಕೊಟ್ಟನು.

೨. ಇದಕ್ಕೆ ಏಪ್ರೆಲ್ ೧೫ ರ ವರಿಗಿನ ಬಡ್ಡಿ ೧॥ ರೂಪಾಯಿಮಾತ್ರ ಕೊಟ್ಟು ಬಾಕಿ ಅಸಲು ಬಡ್ಡಿಯನ್ನು ಕೊಡದೆ ತಪ್ಪಿದಾನೆ.

೩. ವ್ಯಾಜ್ಯಕ್ಕೆ ಕಾರಣ ಪತ್ರದ ವಾಯಿದೇ ಕಳದ ೧೯೧೫ ನೇ ಇಸವಿಯ ಏಪ್ರೆಲ್ ೧೫ ನೇ ತಾರೀಖಿನಿಂದ ಉಂಟಾಯಿತು.

೪. ಕೆಳಗ ವಿವರಿಸಿರುವ ಮೊಬಲಗಿಗೆ ಕೋರ್ಟು ಖರ್ಚುಗಳಸಹಿತ ಫೈಸಲಾಗಬೇಕೆಂದು ವಾದಿಯು ಪ್ರಾರ್ಥಿಸುತ್ತಾನೆ

ಪತ್ರದ ಅಸಲು	೫೦-೦-೦.
ದಾವಾ ತಾರೀಖಿನವರಿಗೆ ಆಗುವ ಬಡ್ಡಿ ತಿಂಗಳು ೧೨ ಕ್ಕೆ ಶೇಕಡ ೧ ರೂ. ಪ್ರಕಾರ ರೂ.	೬-೦-೦

ಪೈಕಿ ವಸೂಲು ರೂ.	೧-೮ ೦
ಜಾತಾ ಬಾಕಿ.	೪-೮-೦
	೫೪-೮-೦.

ಐವತ್ತುನಾಲ್ಕು ರೂಪಾಯಿ ಎಂಟಾಣೆ.

ರುಜು ಚಿಕ್ಕಣ್ಣ.

ಮೇಲೆ ಹೇಳಿರುವ ಸಂಗತಿಗಳೆಲ್ಲಾ ....

...............ಇತ್ಯಾದಿ.

ರುಜು ಚಿಕ್ಕಣ್ಣ.

ನಮೂನೆ ನಂಬರು ೯.

ಬಾಡಿಗ್ಗೆ ಕೊಟ್ಟಮನೆ ಪುನಃ ಸುಪರ್ದಿಗೆ ದಾವಾ.

ಸಿವಿಲ್ ದಾವೆಯ ಅರ್ಜಿ.

....ಮುನ್ಸೀಫರವರ ಕೋರ್ಟಿಗೆ.

ವಾದಿ.	ಪ್ರತಿವಾದಿ.
ಶಿಡ್ಲಪುರದಲ್ಲಿರುವ ಕೃಷ್ಣಪ್ಪನ ಮಗ ೩೫ ವರ್ಷದ ವಯಸ್ಸಿನ ಹರಿಯಣ್ಣ.	ಶಿಡ್ಲಪುರದಲ್ಲಿರುವ ....

.... ನೇ ತಾರೀಖಿನಲ್ಲಿ

ಮೇಲ್ಕಂಡ ವಾದಿಯು ಹೇಳಿಕೊಳ್ಳುವುದೇನಂದರೆ,—

ವಾದಿಯಿಂದ ಪ್ರತಿವಾದಿಯು ಕೆಳಗೆ ವಿವರಿಸಿರುವ ಮನೆಯನ್ನು ನೇ ತಾರೀಖಿನಲ್ಲಿ ಮಾಡಿಕೊಂಡ ಕರಾರಿನಪ್ರಕಾರ ೧ ವರ್ಷದ ವಾಯಿದೆಯ ವರೆಗೂ ಬಾಡಿಗೆಗೆ ತೆಗದುಕೊಂಡನು. ಸದರೀ ಕರಾರನ್ನು ಇದರೊಡನೆ ಹಾಜರಾಮಾಡಿದೆ.

ಅದರಲ್ಲಿ ಕಂಡ ವಾಯಿದೆಯು ಕಳೆದುಹೋದಮೇಲೆ ಆ ಮನೆಯನ್ನು ಬಿಡದೆ ತಕರಾರ್ ಮಾಡುತ್ತಿದಾನೆ.

ಈ ವ್ಯವಹಾರಕ್ಕೆ ಕರಾರಿನ ವಾಯಿದೆಯು ಕಳೆದುಹೋದ ನೆಯ ತಾರೀಖಿನಲ್ಲಿ ಕಾರಣ ಉಂಟಾಯಿತು.

ಸದರೀ ಮನೆಯನ್ನು ಬಿಡಿಸಿಕೊಟ್ಟು ಈ ದಾವೆಯ ಖರ್ಚುಗಳನು ಕೊಡಿಸಬೇಕೆಂದು ವಾದಿಯು ಪ್ರಾರ್ಥಿಸುತ್ತಾನೆ.

ಮನೆಯ ವಿವರ.

....................ಊರಿನ...........................ಬೀದಿಯಲ್ಲಿ
ಪೂರ್ವಕ್ಕೆ.....................ದಕ್ಷಿಣಕ್ಕೆ.............................
ಉತ್ತರಕ್ಕೆ...... .... ಪಶ್ಚಿಮಕ್ಕೆ........ .. ..

ಇವುಗಳ ಮಧ್ಯೆ ಇರುವ   ನೆಯ ನಂಬರುಳ್ಳ......... ಮನೆ ಇದಕ್ಕೆ ಬೆಲೆ ೨೫೦೦ ರೂ.

(ರುಜು) ಹರಿಯಣ್ಣ.

ಮೇಲೆ ಹೇಳಿರುವ ಸಂಗತಿಗಳೆಲ್ಲಾ ನನಗೆ ಸ್ವತಃ ತಿಳಿದಿರುವಮಟ್ಟಿಗೆ ಸತ್ಯವಾಗಿವೆಯೆಂತಲೂ ನನಗೆ ಸ್ವತಃ ತಿಳಿಯದ ಸಂಗತಿಗಳನ್ನು ನಿಶ್ಚಯವೆಂದು ನಾನು ನಂಬಿದೇನೆಂದೂ ದೃಢವಾಗಿ ಹೇಳುತ್ತೇನೆ.

(ರುಜು) ಹರಿಯಣ್ಣ.

ನಮೂನೆ ನಂಬರ್ ೧೦.

ಆಧಾರಪತ್ರದ ಮೇಲೆದಾವಾ.

ಬೆಂಗಳೂರು ಪ್ರಿನ್ಸಿಪಲ್ ಮುನಸೀಫ್ ಕೋರ್ಟಿಗೆ.

Os. No. 1916—1917 ನೆ ಇಸವಿ.

ವಾದಿ.   ಪ್ರತಿವಾದಿ.

ಆರ್ಡರ್ ೭ ರೂಲ್ ೧ ರ ಮೇರೆ.

ವಾದಿ ದಾವಾ.

೧. ವಾದಿಬಳಿ ಪ್ರತಿವಾದಿಯು ೫೦೦ ರೂಪಾಯಿಗಳು ಸಾಲಾಪಡೆದು ಸದರಿ ಮೊಬಲಗ್ಯೆ ಶೇಕಡಾ ತಿಂಗಳು ೧ ಕ್ಕೆ ಒಂದು ರೂಪಾಯಿನಂತೆ ಬಡ್ಡಿ ಶೇರಿಸಿ ಒಂದುವರುಷ ವಾಯಿದೆಯಲ್ಲಿ ಪಾವತಿ ಮಾಡುವದಾಗಿ ಒಪ್ಪಿ ದಾವಾ ಹೆಡ್ಯೂಲ್‌ನಲ್ಲಿ ಕಂಡ ಸ್ಥಿರಸ್ವತ್ತುಗಳನ್ನು ಆಧಾರ ಮಾಡಿ ಇದರ ಸಂಗಡ ಹಾಜರ್ಮಾಡಿರುವ ರಿಜಿಸ್ಟರ್ ಆಧಾರಪತ್ರವನ್ನು
ನೇ ತಾರೀಖಿನಲ್ಲಿ ವಾದಿಯು ಹೆಸರಿಗೆ ಪ್ರತಿವಾದಿಯು ಬರದುಕೊಟ್ಟನು.

೨. ಮೇಲ್ಕಂಡ ದಸ್ತೈವಜು ಬಾಬತು ಅಸಲ್‌ಬಡ್ಡಿ ಮೊಬಲಗು ಕೊಡ ಹೇಳಿ ಪ್ರತಿವಾದಿಯನ್ನು ಅನೇಕವೇಳೆ ತಗಾದೆ ಮಾಡಿ ರಿಜಿಸ್ಟರ್ ನೋಟೀ

ಸ್ ಕೊಟ್ಟಾಗ್ಯೂ ಕೊಡದೆ ಕಾಲಹರಣ ಮಾಡುತ್ತಾನಾಗಿ ದಾವಾಕ್ಕೆ ಕಾರಣವಾಯಿತು.

೩ ವ್ಯಾಜ್ಯಕಾರಣ ಪತ್ರದ ವಾಯಿದೆನಂತರ ಈ ಕೋರ್ಟಿನ ಸರಹದ್ದಿಗೆ ಒಳಪಟ್ಟ (ಲೇವಾದೇವಿ ಷುರುವಾದ ಊರಲ್ಲಿ) ಉಂಟಾಗಿ ಇರುತ್ತದೆ

೪. ಜಡ್ಜ್ ಮೆಂಟ್ ಬಗ್ಯೆ ಪ್ರಾರ್ಥನೆ,

ರಿಜಿಸ್ಟರ್ ಆಧಾರಪತ್ರದ ಬಾಬತು ಅಸಲ್	೫೦೦- ೦- ೦.
ಪತ್ರದ ತಾರೀಖು ಲಾಗಾಯಿತು ದಾವಾ ತಾರೀಖು ವರಿಗೆ ಬಡ್ಡಿ ವರುಷ ೩ ಕ್ಕೆ.	೧೮೦- ೦- ೦.
ಜುಮ್ಲಾ	೬೮೦- ೦- ೦.

ಈ ಮೊಬಲಗು ಕೋರ್ಟುಖರ್ಚು ಚಾಲ್ತಿ ಬಡ್ಡಿ ಸಹಾ ಆಧಾರದ ಸ್ವತ್ತುಗಳು ಹರಾಜ್ ಮಾಡಿಸುವುದರ ಮೂಲಕವೂ ಮತ್ತು ಪ್ರತಿವಾದಿಯ ಖುದ್ದು ಜವಾಬ್ದಾರಿಯಿಂದಲೂ ವಾದಿಗೆ ಸಲ್ಲುವಂತೆಯೂ ಮತ್ತು ಕೋರ್ಟಿನವರಿಗೆ ಯುಕ್ತತೋರುವ ಇತರ ಪರಿಹಾರಗಳೊಡನೆ ಡಿಕ್ರಿ ಕೊಡಿಸಬೇಕೆಂತ ಪ್ರಾರ್ಥನೆ.

ವಾದಿ ರುಜು.

ಇದರಲ್ಲಿ ಬರೆದಿರುವದೆಲ್ಲಾ ವಾದಿಯಾದ ಅಥವಾ (ಒಬ್ಬನಿಗಿಂತಲೂ ಜಾಸ್ತಿ ವಾದಿಗಳಿದ್ದರೆ) ವಾದಿಗಳಾದ ನನಗೆ (ನಮಗೆ) ಖುದ್ದು ತಿಳಿದು ನಂಬಿಕೆ ಇರುವಮಟ್ಟಿಗೂ ನಿಜವೆಂದು ಸತ್ಯವಾಗಿ ಹೇಳುತ್ತೇನೆ.

ರುಜು.

ನಮೂನೆ ನಂಬರ್,

ಕ್ರಿಮಿನಲ್.

ಮದ್ದಗಿರಿ ಸಬ್‌ಡಿವಿಜನ್ ಫಸ್ಟ್ ಕ್ಲಾಸ್ ಮ್ಯಾಜಿಸ್ಟ್ರೇಟ್ ರವರ ಕೋರ್ಟಿನಲ್ಲಿ.

1914—15 ನೇ ಕ್ರಿಮಿನಲ್ ಕೇಸ್ ನಂಬರ್ 11೮.

ಫಿರ್ಯಾದಿ—ಪಾವುಗಡ ತಾಲ್ಲೂಕು ಕಡಪಲಕೆರೆಯಲ್ಲಿರುವ ಪೂಜಾರಿ ನಲ್ಲಪ್ಪ.

ಅಪರಾಧಿಗಳು,—ಸದರಿ ಊರಿನಲ್ಲಿರುವವರು,

೧ ನೇ ದೊಡ್ಡನರಸಪ್ಪ.

೨ ನೇ ಗವುಡ ನರಸಣ್ಣನ ಮಗ ನರಸಪ್ಪ.

೩ ನೇ ಗವುಣಿ ಈರಣ್ಣ.
೪ ನೇ ಗವುಣಿ ಚಿಕ್ಕೀರಪ್ಪ.
೫ ನೇ ಗವುಣಿ ನಲ್ಲಪ್ಪ.
೬ ನೇ ಗುಂಡಾಲಿಗ.
೭ ನೇ ನರಸಿಗ.
೮ ನೇ ಹಾಲಿ ಪಟೇಲಿ ಕೆಲಸ ನೋಡತಕ್ಕ ವೈಶ್ಯರ ಬೀಮಯ್ಯ.
೯ ನೇ ಈತನ ಹೆಂಡತಿ ಲಕ್ಷ್ಮಮ್ಮ.
೧೦ ನೇ ಆಕುತೋಟದ ಲಿಂಗಪ್ಪಯ್ಯನಮಗ ಶೆಂಭೋನು.

ಫಿರ್ಯಾದಿಯು ಬರೆಸಿಕೊಂಡ ಫಿರ್ಯಾದು ಅರ್ಜಿ ಏನೆಂದರೆ.

೧. ಫಿರ್ಯಾದಿಯು ಸದರಿ ಕಡಪಲಕೆರೆ ಗ್ರಾಮದ ಪಾತಪ್ಪದೇವರ ಪೂಜಾರಿ ಕೆಲಸ ಮಾಡುತ್ತಾ ಇದ್ದಾನೆ. ೯ ನೇ ಅಪರಾದಿ ಶಿವಾಯಿ ಬೇರೆ ಅಪರಾದೀರು ಆಯಾಕೊಡುತ್ತಾ ಇದ್ದವರು ಕೊಡದೆ ಹೋದ್ದರಮೇಲೆ ಫಿರ್ಯಾದಿಗೂ ಅಪರಾಧಿಗಳಿಗೂ ಮಾತುನಡೆದು ಫಿರ್ಯಾದಿಗೆ ಪೂಜಾರಿ ಕೆಲಸವೇ ತಪ್ಪಿಸಬೇಕೆಂತ ಪಾವುಗಡಾ ತಾಲ್ಲೂಕಿಗೆ ಅರ್ಜಿಕೊಟ್ಟು ಅದರಮೇಲೆ ಫಿರ್ಯಾದಿಯನ್ನು ಹೊಡೆದು ಜುಲುಂ ಮಾಡಿದರು.

೨. ಫಿರ್ಯಾದಿ ಸದರೀ ವಿಷಯದಲ್ಲಿ ಪಾವುಗಡ ತಾಲ್ಲೂಕಿನಲ್ಲಿ ಅಪರಾಧೀರಪ್ಯೆಕಿ ಕೆಲವರಮೇಲೆ ಫಿರ್ಯಾದು ಮಾಡಿದ್ದನು ಅದು ವಜಾಆಯಿತು.

೩. ಸದರೀ ಮೇರೆ ತಮ್ಮಗಳಮೇಲೆ ಫಿರ್ಯಾದು ಮಾಡಿದನೆಂಬ ಆಕ್ರೋಶದಮೇಲೆ ಅಪರಾಧೀರೆಲ್ಲರೂ ಮಾರ್ಚಿತಿಂಗಳು ೨೮ ನೇ ತಾರೀಖಿನಲ್ಲಿ ಅಕ್ರಮವಾಗಿ ಗುಂಪು ಸೇರಿಕೊಂಡು ಮಸಲತ್ ಮಾಡಿಕೊಂಡು ರಾತ್ರಿ ಸುಮಾರು ೯ ಘಂಟೆ ಸಮಯದಲ್ಲಿ ಫಿರ್ಯಾದೀನ ಹೊಡೆದು ಕೊಂದುಹಾಕಿಬಿಡುತ್ತೇವೆಂತ ಕೂಗಿಕೊಂಡು ಕೆಲವರು ದೊಣ್ಣೆಗಳೂ, ಕೆಲವರು ಕುಡುಗೋಲುಗಳೂ, ತೆಗದುಕೊಂಡು ಫಿರ್ಯಾದಿಯ ಮನೆಯಬಳಿಗೆ ಬಂದು ಫಿರ್ಯಾದೀನ ಹೊರಕ್ಕೆ ಬಾ ಕಡಿದು ಹಾಕುತ್ತೇವೆಂತ ಅಂದರು.

೪. ಇದನ್ನು ಕೇಳಿ ಫಿರ್ಯಾದಿಯು ಭಯಪಟ್ಟು ಮನೆಯಿಂದ ಹೊರಕ್ಕೆ ಬಂದು ಓಡಿಹೋಗುತ್ತಿರುವಾಗ ಎಲ್ಲರೂ ಗುಂಪಾಗಿ ಫಿರ್ಯಾದೀನ ಹಿಡಿದುಕೊಳ್ಳಲು ಬಂದರು. ಅಷ್ಟರಲ್ಲೇ ಫಿರ್ಯಾದಿಯು ಲಕ್ಕಪ್ಪನೆಂಬುವನ ಮನೆವಳಕ್ಕೆ ಹೋಗಿ ಸೇರಿಕೊಂಡನು. ಹಾಗೂ ಬಿಡದೆ ಅಪರಾದೀರೆಲ್ಲರೂ ಸದರಿ ಲಕ್ಕಪ್ಪನ ಮನೆ ಸುತ್ತಲೂ ನಿಂತುಕೊಂಡು ಈಚೆಗೆ ಬಂದರೆ ಕಡಿದುಹಾಕಿಬಿಡುತ್ತೇವೆಂತ ಮನ್ಸಾನೆ ಮಾತುಗಳಾಡುತ್ತಲೇ ಕಾದುಕೊಂಡಿದ್ದರು, ಫಿರ್ಯಾ

ದಿ ಭಯಪಟ್ಟು ಹೊರಕ್ಕೆ ಬಾರದೇಲೆ ಹೋದ್ದರಿಂದ ಸರಹೊತ್ತಿನವೇಲೆ ಅಪರಾಧಿರೆಲ್ಲರೂ ಹೊರಟುಹೋದರು.

೫ ಲಕ್ಕಪ್ಪನ ಮನೇಲಿ ಫಿರ್ಯಾದಿ ಬಚ್ಚಿಟ್ಟುಕೊಳ್ಳದಿದ್ದರೆ ಫಿರ್ಯಾದೀನ ಹೊಡೆದುಹಾಕುತ್ತಿದ್ದರೇ ಹೊರ್ತು ಬಿಡುತ್ತಾ ಇರಲಿಲ್ಲ

೬ ಗ್ರಾಮದಲ್ಲಿ ೧ನೇ ಅಪರಾಧಿ ಮುಖಂಡನಾಗಿದ್ದಾನೆ, ಇವನಿಗೆ ಎಲ್ಲರೂ ವಶವಾಗಿರುತ್ತಾರೆ. ಫಿರ್ಯಾದಿ ಬಹಳ ಬಡವ, ಒಬ್ಬಂಟಿಗ, ಅನಾಥನಾಗಿ ಜೀವನ ಮಾಡಿಕೊಂಡಿರುತ್ತಾನೆ.

೭ ಅಪರಾಧಿಗಳು ದ್ವೇಷಮಾಡುತ್ತಾ ಇರುವದ್ದರಿಂದ ಅಲ್ಲಿ ಇರುವದು ಬಹಳ ಕಷ್ಟವಾಗಿರುತ್ತೆ. ಆದ್ದರಿಂದ ಘನವುಳ್ಳ ಕೋರ್ಟಿನವರು ಅಪರಾಧಿಗಳನ್ನು ಕರೆಸಿ ಖುದ್ದು ವಿಚಾರಣೆಯಿಂದ ಬಂದೋಬಸ್ತು ಮಾಡಿಸಬೇಕಾಗಿ ಫಿರ್ಯಾದಿ ಬೇಡಿಕೊಳ್ಳುತ್ತಾನೆ.

೮ ೧ ರ ಲಾಗಾಯಿತು ೭ ರ ವರೆಗಿನ ಅಪರಾಧೀರು ಒಂದೇ ಜಾತಿಯವರು. ಮತ್ತು ಅಣ್ಣತಮ್ಮಂದಿರು ೮-೯ ನೇಯವರು ಅವರೊಡನೆ ಸಹಾ ಬಹಳ ವಿಶ್ವಾಸವಾಗಿ ಲೇವಾದೇವಿ ಮಾಡಿಕೊಂಡಿರುವವರು. ಆದ್ದರಿಂದ ಈ ಎಲ್ಲರೂ ಏಕಸ್ಥರಾಗಿ ಮೇಲ್ಕಂಡ ಫಿರ್ಯಾದಿ ವಿಷಯದಲ್ಲಿ ಅಕ್ರಮಕೃತ್ಯ ನಡಿಸುತ್ತಾರೆ.

ತಾ॥ ೨—೪—೧೯೧೫, ಪೂಜಾರಿ ನಲ್ಲಪ್ಪನ ರುಜು (ಎಂದಿಧೆ).

ಕ್ರಿಮಿನಲ್—ನಮೂನೆ ನಂಬರ್ ೨.

……………………ತಾಲ್ಲೂಕು ೨ ನೇ ಕ್ಲಾಸ್

ಮಾಜಿಸ್ಟ್ರೇಟ್ ಕೋರ್ಟಿನಲ್ಲಿ.

1616—17 ನೇ ಕ್ರಿಮಿನಲ್ ಕೇಸ್ ನಂಬರ್.

ಫಿರ್ಯಾದಿ,……ಡಿಟೋ ತಾಲ್ಲೂಕು………… ಹೋಬಳಿ . ……….. ಗ್ರಾಮದ……………ಹಜಾಮರ ಚಿಕ್ಕರಂಗ.

ಅಪರಾದಿಗಳು,— ೧, ಡಿಟೋ ಗ್ರಾಮದ ಪಟೇಲ್ ………… … ಗೌಡ

೨, ಡಿಟೋ ಗ್ರಾಮದ ತಳವಾರ ತಿಮ್ಮಾ ೩ ತೋಟಿ ಚಿಕ್ಕ.

ಫಿರ್ಯಾದಿಯು ಅರ್ಜಿ ಏನೆಂದರೆ,—

೧. ಕಳದ ನೇ ತಾ॥ ಸೋಮವಾರ ಸಾಯಂಕಾಲ ಸುಮಾರು ೪-೪॥ ಘಂಟೆ ಸಮಯದಲ್ಲಿ ೧ ನೇ ಅಪರಾದಿಯು ತನ್ನ ಹೋರಿಗಳನ್ನು

ಫಿರ್ಯಾದಿಯು ಊರುಮುಂದಿನ ಮಾನ್ಯದ ಹೊಲದ ಬದುವಿನಲ್ಲಿ ಮೇಯಿಸುತ್ತಿದ್ದನು.

೨. ಫಿರ್ಯಾದಿ ಹೆಂಡತಿ ರಾಮಿ ಎಂಬುವಳು ಕಂಡು ಏನ್ರಿ ಗೌಡನೋರೆ ಹೋರಿಗಳನ್ನು ಬದುವಿನಲ್ಲಿ ಬಿಟ್ಟು ಮೇಯಿಸುತ್ತಿದ್ದೀರಿ. ಅವುಗಳು ಹೊಲವನ್ನು ತುಳಿದು ಹಾಳುಮಾಡುತ್ತಿದ್ದಾವೆ. ಎಂದು ಹೇಳಿದ್ದಕ್ಕೆ ಸದರೀ ಅಪರಾದಿಯು ಎಲೆ ಮುಂಡೇ ಶಾನೇ ಕೂಗಬೇಡ. ನೀನುತರುವ ದಂಡನ್ನೆಲ್ಲಾ ತೆಗದುಕೊಂಡು ಬಾ, ನಮ್ಮ ಮನೇಲಿ ಹೊಟ್ಟೆಗೆ ಹಿಟ್ಟು ಕಾಣದಷ್ಟು ಜನರು ಬಿದ್ದವರೆ, ಅವರೆಲ್ಲಾ ನೀನುತರುವ ದಂಡಿಗೆ ಹುರುಳೀ ಬೇಯಿಸುತ್ತಾರೆ ಎಂದು ಹೇಳಿದಾ.

೩. ಆಮಾತಿಗೆ ಫಿರ್ಯಾದಿ ಹೆಂಡತಿಯು ಮನೆಗೆ ಓಡಿಬಂದು ಫಿರ್ಯಾದಿಗೆ ತಿಳಿಸಿದಳು, ಫಿರ್ಯಾದಿಯು ಆಕಾಲದಲ್ಲಿ ಇದೇ ಗ್ರಾಮದಲ್ಲಿರುವ ಚಿಲ್ಲರೇ ಅಂಗಡಿ ಪಾಪೈಯ್ಯಶೆಟ್ಟರಿಗೆ ಕ್ಷೌರಮಾಡುತ್ತಾ ಇದ್ದನು. ಫಿರ್ಯಾದಿಯು ಆಕಾಲದಲ್ಲಿ ಸದರಿ ಪಾಪೈಯ್ಯಶೆಟ್ಟರ ಗಡ್ಡವನ್ನು ಬೋಳಿಸುತ್ತಿದ್ದನು,

೪. ಅರ್ಧಗಡ್ಡಮಾತ್ರ ಕ್ಷೌರವಾಗಿತ್ತು, ಬಾಕಿ ಅರ್ಧ ಗಡ್ಡವನ್ನು ಅವಸರವರವಾಗಿ ಬೋಳಿಸಿಬಿಟ್ಟು ಹೊಲದಬಳಿಗೆ ಓಡಿಹೋಗಿ ಏನು ಗೌಡನೋರೆ ಹೀಂಗೆ ಬಡವನ ಹೊಲ ಹಾಳುಮಾಡುತ್ತೀರಾ ಎಂದು ಕೇಳಿದನು ಅದಕ್ಕೆ ೧ ನೇ ಅಪರಾದಿ ಹೋಗೆಲಾ ಶಾನೆ ಕೂಗಬೇಡಾ ಒದ್ದುಬಿಟ್ಟೇನು ಎಂದನು

೫. ಫಿರ್ಯಾದಿಗೆ ಸಂಕಟ ತಡಿಯಲಾರದೆ ಓಡಿಹೋಗಿ ಹೋರಿಗಳ ಹಗ್ಗವನ್ನು ಕೈಗೆ ಕಿತ್ತುಕೊಂಡು ಹೊಡಿರಿ ಸ್ವಾಮಿ ಆಚೆಗೆ ಎಂದು ಹೇಳುತ್ತಾ ಹೋರಿಗಳನ್ನು ಆಚೆಗೆ ಹೊಡೆಯುತ್ತಿದ್ದನು. ಅದನ್ನು ಸಹಿಸಲಾರದೆ ೧ನೇ ಅಪರಾದಿಯು ಪಿರ್ಯಾದಿ ಪಕ್ಕೆಗೆ ಒದ್ದನು. ಆ ಪೆಟ್ಟಗೆ ಪಿರ್ಯಾದಿಯು ಕೆಳಕ್ಕೆ ಬಿದ್ದನು.

೬. ಫಿರ್ಯಾದಿಗೆ ಸಾಯುವಸಂಕಟವಾದುದರಿಂದ ಹ್ಯಾಗಾದರು ಸಾಯುತ್ತೇನೆಂಬ ಜಿಗುಪ್ಸೆಯಿಂದ ಚೇತರಿಸಿಕೊಂಡು ಮೇಲಕ್ಕೆ ಎದ್ದು ಅಪರಾದಿಯ ಮೇಲೆ ಒಂದು ಸಣ್ಣ ಪೆಟ್ಟು ಹಾಕಿದನು. ಅಪರಾಧಿಯು ಸಮೀಪದಲ್ಲಿದ್ದ ೨ ನೇ ಅಪರಾಧಿ ತಿಮ್ಮನನ್ನು, ೩ ನೇ ಅಪರಾಧಿ ತೋಟಿ ಚಿಕ್ಕನನ್ನು ಕರೆದು ಎಲಾ ಇವನನ್ನು ಈದಿವಸ ನೀವು ಉಗದು ಜಾತಿ ಕೆಡಿಸಿಬಿಡಿರೆಲಾ ಎಂದು ಅಪ್ಪಣೆ ಮಾಡಿದನು.

೭. ೨-೩ ನೇ ಅಪರಾದಿಗಳು ಬರುವಾಗ್ಯೆ ಫಿರ್ಯಾದಿಯು ಓಡಿಹೋಗಿ ಮನೇ ಶೇರಿಕೊಂಡನು. ಅನಂತರ ೨—೩ ನೇ ಅಪರಾದಿಗಳು ಫಿರ್ಯಾ ಮನೆಗೆ ಬಂದು ಫಿರ್ಯಾದೀನ ಮನೆಮುಂದೀಚಗೆ ಕರೆದರು.

೮ ಫಿರ್ಯಾದಿಯು ಒಬ್ಬಂಟಿಗನಾದುದರಿಂದ ಈಚಿಗೆ ಬಾರದಿರಲು ೨-೩ ನೇ ಅಪರಾದಿಗಳು ಫಿರ್ಯಾದಿ ಮನೆಯೊಳಕ್ಕೆ ನುಗ್ಗಿ ಫಿರ್ಯಾದೀನ ಮನೆಯಿಂದೀಚೆಗೆ ಎಳದುಕೊಂಡು ಬಂದರು. ೩ ನೇ ಅಪರಾದಿ ಫಿರ್ಯಾದಿಯ ಕೈಗಳನ್ನು ಹಿಡಿದುಕೊಂಡನು. ೨ ನೇ ಅಪರಾದಿಯು ಹೊಡಯುವದಕ್ಕೆ ಕೈ ಎತ್ತುತ್ತಿರುವ ಸಮಯದಲ್ಲಿ ಫಿರ್ಯಾದಿಯ ಆಜೂಬಾಜೂ ಮನೆಯ ಹೆಂಗಸರು ಮಕ್ಕಳು ಈ ಗಲಾಟೆಯನ್ನು ನೋಡುವದಕ್ಕೆ ಕೂಡಿದರು.

೯ ಅನಂತರ ಸ್ವಲ್ಪ ಹೊತ್ತಿನಮೇಲೆ ೨—೩ ನೇ ಅಪರಾದಿಗಳು ಒಳ್ಳೇದೆಲೆ ರಂಗಾ ಈಸಲಾ ಸುಗ್ಗೀಲಲ್ಲವೇ ನಿನ್ನ ಬಂಡವಾಳ ತಿಳಿಸೋದು. ನಿನ್ನ ಮಿರಾಶಿ (ಅಡದಿಗೆಲ್ಲಾ) ನಾನು ನಾಮಾ ಇಕ್ಕದಿದ್ದರೆ ಸರಿ ತಳವಾರ ತಿಮ್ಮಾ ಎಂದು ಹೇಳು ಎಂದು ಛಲಾ ಕಟ್ಟಿಕೊಂಡು ಹೊರಟುಹೋದನು. ೩ ನೇ ಅಪರಾದಿಯೂ ಸಹ ಅವನ ಹಿಂದೆಯೇ ಹೊರಟುಹೋದನು.

೧೦ ಈ ಕೃತ್ಯಗಳನ್ನು ಇದೇ ಗ್ರಾಮದಲ್ಲಿರುವ ಕಡೇಮನೆ ಲಿಂಗಣ್ಣ ಹಳ್ಳದಕೇರಿ ನಾಗಣ್ಣನ ಮಗ ಸುಬ್ಬರಾಯಪ್ಪನು ಇನ್ನೂ ಅನೇಕರು ನೋಡಿರುತ್ತಾರೆ. ೧-೨-೩ ನೇ ಅಪರಾದಿಗಳು...........ನೇ ಸೆಕ್‌ಷನ್ ಪ್ರಕಾರ ತಪ್ಪಿತಸ್ತರಾಗುತ್ತಾರಾದ್ದರಿಂದ ವಿಚಾರಣೆಯಿಂದ ತಕ್ಕ ಬಂದೋಬಸ್ತು ಮಾಡಿಸಬೇಕು.

೧೧ ......ನೇ ಸೆಕ್‌ಷನ್ ಪ್ರಕಾರ ಅಪರಾದಿಗಳಿಂದ ನೆಮ್ಮದಿ ಭಂಗಕ್ಕೆ ಜಾಮೀನಿ ಮುಚ್ಚಳಿಕೆ ತೆಗದುಕೊಳ್ಳಬೇಕೆಂದು ಪ್ರಾರ್ಥಿಸುತ್ತೇನೆ.

ರುಜು.

ಕ್ರಿ. ನಮೂನೆ ನಂಬರ್ ೩.

ಅಕ್ರಮತಡೆ ಮತ್ತು ಸಂಕಟಕರವಾದ ಹಿಂಸೆ.

ತಾಲ್ಲೂಕ್ ಫಸ್ಟ್‌ಕ್ಲಾಸ್ ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ.

1916—1917 ನೇ ಕ್ರಿಮಿನಲ್ ಕೇಸ್ ನಂಬರ್.

ಫಿರ್ಯಾದಿ:—.........ತಾಲ್ಲೂಕ್ ಮಜಕೂರ್ .... ಹೋಬಳಿ ... . ಗ್ರಾಮದ ನೀಲಕಂಠೈಯ್ಯ.

ಅಪರಾಧಿ,—ಡಿಟೋ ಊರಿನಲ್ಲಿರುವ ಪೊಲೀಸ್ ರಂಗಣ್ಣನ ಮಗ ರಂಗ.

ಫಿರ್ಯಾದಿಯು ಅರ್ಜಿ ಏನಂದರೆ—

೧. ಈ ತಿಂಗಳು ೯ ನೇ ತಾರೀಖು ಸೋಮವಾರ ಸಾಯಿಂಕಾಲ ಫಿರ್ಯಾದಿಯು ಮಾಮೂಲ್ ಮೇರಿಗೆ ತನ್ನ ದನಗಳನ್ನು ಮನೆಗೆ ಹೊಡೆದುಕೊಂಡು ಹೋಗುತ್ತಿರಲು ಅಪರಾಧಿಯು ದಾರಿಗೆ ಅಡ್ಡಲಾಗಿ ಬಂದು ತಡೆದನು.

೨. ಫಿರ್ಯಾದಿಯು ಅಪರಾಧಿಯನ್ನು ತನ್ನ ದನಗಳನ್ನು ತಡೆಯುವದಕ್ಕೆ ಕಾರಣವೇನೆಂದು ಕೇಳಲು ಅಪರಾಧಿಯು ತಾನು ಸದರಿ ಜಮೀನನ್ನು ಕಂದಾಯಕ್ಕೆ ಮಾಡಿಕೊಂಡಿದ್ದೇನೆ. ಇನ್ನು ಮೇಲೆ ಇಲ್ಲಿ ಬಿಡಕೂಡದೆಂದು ಹೇಳಿದನು, ಅದಕ್ಕೆ ಈಗ ಬಹಳದಿವಸಗಳಿಂದಲೂ ಬರುತ್ತಿದ್ದ ದಾರಿಯಲ್ಲಿ ಬರುವದೇಸರಿ ಬಿಡುವದಿಲ್ಲವೆಂದು ಹೇಳಿದನು. ಈಮಾತಿಗೆ ಓಡಿ ಬಂದು ಎಲ್ಲಿಯೋ ನಿನ್ನಮಾಮೂಲು ನನ್ನಮುಂದೆ ಈ ತುಂಟಾಟವೆಲ್ಲಾ ನಡೆಯುವದಿಲ್ಲವೆಂದು ದನಗಳನ್ನು ಚದುರಿಸಿ ಕೈಲಿ ಹುಲ್ಲುಕುಯ್ಯುವದಕ್ಕಾಗಿ ಹಿಡಿದುಕೊಂಡಿದ್ದ ಕುಡುಗೋಲಿನಿಂದ ಹೊಡೆಯುವದಕ್ಕೆ ಬಂದನು.

೩. ಆ ವಳಗಾಗಿ ಕುಡುಗೋಲಿನ ಮೊದಲುಪೆಟ್ಟು ವನ್ನ ಕಣ್ಣು ಹುಬ್ಬಿಗೆ ಬಿದ್ದು ಘಾಯವಾಗಿ ರಕ್ತ ಸುರಿಯಿತು. ಆ ರಕ್ತವನ್ನು ವರಸಿದ ಬಟ್ಟೆಯನ್ನು ಫಿರ್ಯಾದಿ ಕೋರ್ಟಿಗೆ ರೂಬ್‌ರೂಬ್ ಹಾಜರ್ಮಾಡಿರುತ್ತಾನೆ. ಅಪರಾಧಿ ಹೊಡೆದಪೆಟ್ಟು ಫಿರ್ಯಾದಿ ಕಣ್ಣಿಗೆ ಪೂರ್ತಿಯಾಗಿ ಬಿದ್ದಿದ್ದರೆ ಕಣ್ಣು ಉಳಿಯುತ್ತಿರಲಿಲ್ಲ, ಆದ್ದರಿಂದ ಅಪರಾಧಿಯು ಇಂಡಿಯನ್ ಪಿನಲ್‌ಕೋಡ್

ನೇ ಸೆಕ್ಷನ್ ಪ್ರಕಾರ ಸಂಕಟಕರವಾದ ಹಿಂಸೆಯನ್ನುಂಟುಮಾಡಲು ಪ್ರಯತ್ನಪಟ್ಟ ತಪ್ಪಿತಸ್ತನಾಗುತ್ತಾನೆ. ವಿಚಾರಣೆಯಿಂದ ಅಪರಾಧಿಗೆ ತಕ್ಕ ಸಿಕ್ಷೆ ವಿಧಿಸಿ ಫಿರ್ಯಾದಿ ಕೋರ್ಟಿನಖರ್ಚನ್ನು ಇತರ ಪರಿಹಾರವನ್ನು ಕೊಡಿಸಿಕೊಡಬೇಕೆಂದು ಪ್ರಾರ್ಥನೆ.

ರುಜು.

೩. ನಮೂನೆ ನಂಬರ್ ೪.

ಕಡೂರು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟ್ ಸಾಹೇಬರವರ ಕೋರ್ಟಿಗೆ.

916—17 ನೇ ವರ್ಷದ ಕ್ರಿಮಿನಲ್ ಅಪ್ಪೀಲ್

ಅರ್ಜಿನಂಬರು.......................

ಅರ್ಜಿದಾರ ....

ಚಿಕ್ಕಮಗಳೂರು ತಾ॥ ... .

......ಇರುವ ಚಾಮೇಗೌಡನಮಗ ಉರಗೌಡ

ಮೇಲ್ಕಂಡ ಅರ್ಜಿದಾರನು ಅರಿಕೆ ಮಾಡಿಕೊಳ್ಳುವುದೇನಂದರೆ;—

ಈ ಚಿಕ್ಕಮಗಳೂರು ತಾಲ್ಲೂಕು ಮ್ಯಾಜಿಸ್ಟ್ರೇಟರವರ ಕೋರ್ಟಿನ ಇದೇ ೩೩ನೆಯ ೩೩ ನೆಯ ನಂಬರು ಕ್ರಿಮಿನಲ್ ಮೊಕದ್ದಮೆಯಲ್ಲಿ ಅರ್ಜಿದಾರನಮೇಲೆ ಜುಲುಂ ತಪ್ಪಿತವನ್ನು ಹೊರಿಸಿ ಪಿನಲ್‌ಕೋಡ್ ೩೪೦ ನೆಯ ಸೆಕ್ಷನ್ ಪ್ರಕಾರ ಅವನಿಗೆ ೫೦ ರೂಪಾಯಿನ ದಂಡವನ್ನು ತೆರಬೇಕೆಂಬ ಶಿಕ್ಷೆಯನ್ನು ವಿಧಿಸಿದಾರೆ.

೨. ಫಿರ್ಯಾದಿಗೂ ಈ ಅರ್ಜಿದಾರನಿಗೂ ಮೊದಲಿಂದ ಜಿದ್ದಿತ್ತೆಂದೂ, ಫಿರ್ಯಾದಿಯ ಸಾಕ್ಷಿಗಳು ಅವನ ಕೈಕೆಳಗಿನ ಆಳುಗಳೆಂದೂ, ಸಾಫಾಗಿ ರುಜುವಾತಾಗಿದೆ. ಇದರಿಂದಲೂ ಸಾಕ್ಷಿಗಳು ಪರಸ್ಪರ ವಿರೋಧವಾಗಿ ಹೇಳಿರುವುದರಿಂದಲೂ ಫಿರ್ಯಾದು ನಂಬುಗೆಗೆ ಅರ್ಹವಾದುದಲ್ಲ. ಆದುದರಿಂದ ಕೆಳಗಿನ ಕೋರ್ಟಿನ ಕಟ್ಟನ್ನು ತರಿಸಿ ಸದರಿ ಅನ್ಯಾಯವಾಗಿ ವಿದಿಸಿರುವ ಶಿಕ್ಷೆ ರದ್ದು ಮಾಡಬೇಕೆಂದು ಪ್ರಾರ್ಥಿಸುತ್ತೇನೆ.

ರುಜು.

ತಾ॥ ಕಲಂ, ಮೇಲಿನ ಜಿದ್ದನ್ನುರುಜುವಾತು ಕೊಡುವದಕ್ಕೆ ಏನಾದರೂ ರಿಕಾರ್ಡಿದ್ದರೆ ಆ ಕೋರ್ಟಿಗೆ ಸಬ್‌ಪಿನಾ ಮಾಡಿಸಬೇಕು.

ತಾ॥ ಕಲಂ. ೨. ಇಂತಹ ಮೊಖದ್ದಮೆಗಳಲ್ಲಿ ಕೆಳಗಿನ ಕೋರ್ಟುಗಳಲ್ಲಿಯೇ ಅಂತಹ ರಿಕಾರ್ಡುಗಳನ್ನು ಮ್ಯಾಜಿಸ್ಟ್ರೇಟರ ಮುಂದೆ ಹಾಜರ್ಮಾಡುವದು ಉತ್ತಮ.

ಕ್ರಿ. ನಮೂನೆ ನಂಬರ್ ೫.

....ಮೇಜಸ್ಟ್ರೇಟರವರ ಕೋರ್ಟಿಗೆ.

ನೇ ಇಸವಿ ಕ್ರಿಮಿನಲ್ ನಂಬರ್.

ಫಿರ್ಯಾದಿ.	ಅಪರಾದಿ.
ಬೈಚಪುರದಲ್ಲಿರುವ ಪಕ್ಕಲಿಗರ ಜಾತಿಯ ರಂಗೇಗೌಡನ ಮಗ ೩೦ ವರ್ಷ ವಯಸ್ಸಿನ ಮುದ್ದರಂಗೈಯ್ಯ.	ಡಿಟೋ ಊರಿನಲ್ಲಿರುವ ಚನ್ನಪ್ಪಾಚಾರಿ ಮಗ ಭೈರಪ್ಪಾಚಾರಿ.

ನೇಯ ತಾರೀಖಿನಲ್ಲಿ

ಫಿರ್ಯಾದಿಯು ಹೇಳಿಕೊಳ್ಳುವುದೇನಂದರೆ,—

ಅಪರಾಧಿಯು ಬೈಜಾಪುರದಲ್ಲಿ ಅಕ್ಕಸಾಲೆಯ ಉದ್ಯೋಗವನ್ನು ಮಾಡಿಕೊಂಡಿದಾನೆ.

೨. ಫಿರ್ಯಾದಿಯು ಒಂದು ಚಿನ್ನದ ಡಾಬನ್ನು ಮಾಡಿಸಬೇಕೆಂದು ನೇ ತಾರೀಖಿನ ಅಪರಾಧಿಯುವಶಕ್ಕೆ ಚಿನ್ನಕ್ಕೋಸ್ಕರ ನಲವತ್ತು ಪೌನುಗಳನ್ನು ಕೊಟ್ಟನು. ಅಪರಾಧಿಯು ಅವುಗಳಿಂದ ಚಿನ್ನದ ಡಾಬನ್ನು ಮಾಡಿ ಎಂಟು ದಿವಸದಲ್ಲಿ ಕೊಡುವುದಾಗಿ ಒಪ್ಪಿಕೊಂಡನು.

೩. ಅಪರಾಧಿಯು ಆ ಒಡವೆಯನ್ನು ವಾಯಿದೆಗೆ ಸರಿಯಾಗಿ ಕೊಡದೆ ತಪ್ಪಿದುದರಿಂದ ಫಿರ್ಯಾದಿಗೆ ಸಂದೇಹವುಂಟಾಗಿ ವಿಚಾರಿಸಿದ್ದರಲ್ಲಿ ತಾನುಕೊಟ್ಟ ಪೌನುಗಳನ್ನು ರಾಮಶೆಟ್ಟಿ ಎಂಬ ವರ್ತಕನ ಬಳಿಯಲ್ಲಿ ಒತ್ತೆ ಇಟ್ಟು ಅಪರಾಧಿಯು ೩೦೦ ರೂಪಾಯಿ ಸಾಲಾ ತೆಗೆದುಕೊಂಡಿರುವುದಾಗಿ ತಿಳಿಯಬಂದಿದೆ.

೪. ತನ್ನ ವಶಕ್ಕೆ ಒಪ್ಪಿಸಲ್ಪಟ್ಟ ಪದಾರ್ಥವನ್ನು ಅಪರಾಧಿಯು ಹೀಗೆ ಅಪಹರಿಸಿಕೊಂಡಿರುವುದರಿಂದ ಕೋರ್ಟಿನವರು ಅವನನ್ನು ಕ್ರಿಮಿನಲ್ ಶಿಕ್ಷೆಗೆ ಗುರಿಪಡಿಸಿ ತನ್ನ ಸೊತ್ತನ್ನು ತನಗೆ ಹಿಂದಕ್ಕೆ ಕೊಡಿಸಿಕೊಡಬೇಕೆಂದು ಫಿರ್ಯಾದಿಯು ಪ್ರಾರ್ಥಿಸುತ್ತಾನೆ.

ಮುದ್ದರಂಗೈಯ್ಯ (ರುಜು).

ಈ ಸಂಗತಿಗಳೆಲ್ಲವನ್ನು ಕಂಡಿರುವ ಸಾಕ್ಷಿಗಳು,

೧. ಬೈಜಾಪುರದಲ್ಲಿರುವ ಮುದ್ದಬಸಪ್ಪನ ಮಗ ಬಸಪ್ಪ.
೨. ....
೩. ....

(ರುಜು)

ಕ್ರಿ. ನಮೂನೆ ನಂಬರ್ ೬.

ಹುಬ್ಬಳ್ಳಿ ೧ ನೇ ಕ್ಲಾಸ್ ಮ್ಯಾಜಿಸ್ಟ್ರೇಟರವರ ಕೋರ್ಟಿನಲ್ಲಿ.

1916—17 ನೇ ಇಸವಿ ಕ್ರಿಮಿನಲ್ ಕೇಸ್ ನಂಬರು.

ಫಿರ್ಯಾದಿ.	ಅಪರಾಧಿ.
ರುದ್ರಶೆಟ್ಟಿ ಮಗ ಶಿದ್ದೈಯ್ಯ.	ಡಿಟೋ ಊರಿನಲ್ಲಿರುವ ಶಿವಲಿಂಗೈಯ್ಯ ಮಗ ನಂಜುಂಡ.

ಫಿರ್ಯಾದಿಯು ಹೇಳಿಕೊಳ್ಳುವುದು ಏನಂದರೆ,—

ಅಪರಾಧಿಯು ಫಿರ್ಯಾದಿಯ ದೊಡ್ಡಪ್ಪನ ಮಗನು. ಅಪರಾಧಿಯು ಬಾಬತು ಯಾವ ಸ್ವತ್ತೂ ಫಿರ್ಯಾದಿಯಲ್ಲಿಲ್ಲ. ಆದರೂ ಫಿರ್ಯಾದಿಯು ಆಸ್ತಿಯ ಪೈಕಿ ಅರ್ಧವನ್ನು ತನಗೆ ಕೊಡದಿದ್ದರೆ ತಾನು ಫಿರ್ಯಾದಿಯನ್ನು ಕೊಲ್ಲುತ್ತೇನೆಂದು ಅಪರಾಧಿಯು ಫಿರ್ಯಾದಿಯನ್ನು ಹೆದರಿಸುತ್ತಿದ್ದಾನೆ. ಆದುದರಿಂದ ಕೋರ್ಟಿನವರು ದಯವಿಟ್ಟು ತನಿಖೆಯಿಂದ ಅಪರಾದಿಗೆ ಇಂಡಿಯನ್ ಪಿನಲ್ ಕೋಡ್ ೫೦೬ ನೇ ಸೆಕ್ಷನ್ ಮೇರೆ ಶಿಕ್ಷೆ ವಿಧಿಸಬೇಕಲ್ಲದೆ ನೆಮ್ಮದಿಗೆ ಭಂಗವುಂಟುಮಾಡದಂತೆ ಇವನಿಂದ ಕ್ರಿಮಿನಲ್ ಪ್ರೊಸಿಜರ್‌ಕೋಡ್ ೧೦೬ ನೇ ಸೆಕ್ಷನ್ ಮೇರೆ ಜಾಮೀನು ಮುಚ್ಚಳಿಕೆಯನ್ನು ತೆಗೆದುಕೊಳ್ಳಬೇಕೆಂದು ಪ್ರಾರ್ಥನೆ.

ತಾ॥ ಶಿವೈಯ್ಯನ ರುಜು.

ಕ್ರಿಮಿನಲ್ ನಮೂನೆ ನಂಬರ್ ೭.

ರಾಜೀನಾಮೆಯ ಅರ್ಜಿ.

ಕಂಪಲಾಪುರದ ೧ ನೇ ಕ್ಲಾಸ್ ಮ್ಯಾಜಿಸ್ಟ್ರೇಟರವರ ಕೋರ್ಟಿನಲ್ಲಿ

1915—1916 ನೇ ಇಸವೆ ಕ್ರಿಮಿನಲ್ ಕೇಸ್ ನಂಬರು.

ಫಿರ್ಯಾದಿ. ಅಪರಾಧಿ.

ಭೀಮನ ಮಗ ರಾಮ. ಮಧ್ವನ ಮಗ ಕೃಷ್ಣ.

ಮೇಲ್ಕಂಡ ಫಿರ್ಯಾದಿ ಅಪರಾಧಿಗಳು ಬರೆದುಕೊಂಡ ರಾಜೀನಾಮೆಯ ಅರ್ಜಿ ಏನಂದರೆ,—

ನಾವುಗಳು ಹತ್ತಿರದ ಬಂಧುಗಳಾಗಿರುವುದರಿಂದ ಅನ್ಯೋನ್ಯವಾಗಿರಬೇಕೆಂದು ಆಲೋಚಿಸಿ ನಮ್ಮಗಳ ಮಧ್ಯೆ ನಡೆಯುತ್ತಿರುವ ಮೇಲ್ಕಂಡ ಮೊಕದ್ದಮೆಯನ್ನು ರಾಜೀಮಾಡಿಕೊಂಡಿರುತ್ತೇವೆ. ಆದುದರಿಂದ ಕೋರ್ಟನವರು ಸದರಿ ಮೊಕದ್ದಮೆಯನ್ನು ವಜಾಮಾಡಿಸಬೇಕೆಂದು ಪ್ರಾರ್ಥನೆ

ತಾ॥ ರುಜುಗಳು.

ಕ್ರಿಮಿನಲ್ ನಮೂನೆಯು ನಂಬರ್ ೪.

ರಾಸುಗಳನ್ನು ದೊಡ್ಡಿಗೆ ಕೊಡಲು ಅಡ್ಡಿ ಮಾಡಿದುದಕ್ಕಾಗಿ ಕೊಡುವ ಅರ್ಜಿ.

ರಾಣಿಬೆನ್ನೂರು ೩ ನೇ ಕ್ಲಾಸ್ ಮ್ಯಾಜಿಸ್ಟ್ರೇಟರವರ ಕೋರ್ಟಿನಲ್ಲಿ.

1916—1917 ನೇ ಕ್ರಿಮಿನಲ್ ಕೇಸ್ ನಂಬರು.

ಫಿರ್ಯಾದಿ.	ಅಪರಾಧಿ.
ರಾಣಿಬೆನ್ನೂರಿನಲ್ಲಿರುವ ಷಡಾಕ್ಷರಿಯಪ್ಪನ ಮಗ ಚಿಕ್ಕಷಡಾಕ್ಷರಿಯಪ್ಪ.	ಡಿಟೋ ಊರಿನಲ್ಲಿರುವ ಶಂಭುಮಗ ಶಿದ್ದಲಿಂಗೈಯ್ಯ.

ಫಿರ್ಯಾದಿಯು ಹೇಳಿಕೊಳ್ಳುವದೇನಂದರೆ,—

ಇದೇ ತಿಂಗಳು ೧೬ ನೇ ತಾರೀಖು ಗುರುವಾರ ಸಾಯಂಕಾಲ ೫ ಗಂಟೆಯ ಹೊತ್ತಿನಲ್ಲಿ ಫಿರ್ಯಾದಿಯು ಬಾಬತು ಗರೊತ್ತಿನ ರಾಗಿಬೆಳೆ ಮಾಡಿರುವ ಹೊಲದಲ್ಲಿ ರಾಗಿಬೆಳೆಯನ್ನು ಮೇಯುತ್ತಿದ್ದ ಅಪರಾಧಿಯ ಬಾಬತು ೭ ರಾಸುಗಳನ್ನು ದೊಡ್ಡಿಗೆ ಕೊಡಲು ಫಿರ್ಯಾದಿಯು ಅವುಗಳನ್ನು ದೊಡ್ಡಿಗೆ ಹೊಡೆದುಕೊಂಡು ಹೋಗುತ್ತಿರುವಾಗ್ಗೆ ಅಪರಾಧಿಯು ಬಂದು ಬಲಾತ್ಕಾರದಿಂದ ಅವುಗಳನ್ನು ಬೆದರಿಸಿ ದೊಡ್ಡಿಗೆ ಹೊಡೆಯುವುದನ್ನು ಅಡ್ಡಿ ಮಾಡಿ ಹೊಡೆದು ಕೊಂಡು ಹೋದನು. ಆದುದರಿಂದ ಇವನು ಪೌಂಡ್ ಆಕ್ಟ್ ೨೫ನೇ ಸೆಕ್ಷನ್ ರೀತ್ಯಾ ತಪ್ಪಿತಸ್ಥನಾಗಿರುತ್ತಾನಾಗಿ ಸಮರ್ನ್ ಯಾ, ವಾರಂಟು ಕೊಟ್ಟು ಇವನನ್ನು ಬರಮಾಡಿಕೊಂಡು ವಿಚಾರಣೆಯಿಂದ ಇವನಿಗೆ ತಕ್ಕ ಬಂದೋಬಸ್ತು ಮಾಡಿಸಬೇಕೆಂದು ಪ್ರಾರ್ಥನೆ.

ತಾ॥ ರುಜು.

ನಮೂನೆಯು ನಂಬರ್ ೯.

ರಾಸುಗಳನ್ನು ಅನ್ಯಾಯವಾಗಿ ದೊಡ್ಡಿಗೆ ಕೊಡಿದ್ದುದಕ್ಕಾಗಿ ಅರ್ಜಿ.

ಕೊಯಂಬತ್ತೂರು ಡಿಸ್ಟ್ರಿಕ್ಟು ಮ್ಯಾಜಿಸ್ಟ್ರೇಟರವರ ಕೋರ್ಟಿನಲ್ಲಿ

ಫಿರ್ಯಾದಿ.	ಅಪರಾಧಿ.
ಕೊಯಿಮುತ್ತೂರಿನಲ್ಲಿರುವ ಕುಂಭೆಗೌಡನ ಮಗ ಈಶ್ವರೈಯ್ಯ.	ಡಿಟೋ ಊರಿನಲ್ಲಿರುವ ಚಿಕ್ಕೇಗೌಡನ ಮಗ ಬಾಲೇಗೌಡ.

ಫಿರ್ಯಾದಿಯು ಹೇಳಿಕೊಳ್ಳುವುದೇನಂದರೆ,—

೧. ಫಿರ್ಯಾದಿಯ ಮತ್ತು ಅಪರಾಧಿಯ ಊರಿನಲ್ಲಿ ಜಮೀನುಗಳಲ್ಲಿದ್ದ ಫಸಲೆಲ್ಲಾ ಕಟಾವ್ ಮಾಡಲ್ಪಟ್ಟು ಜಮೀನುಗಳಲ್ಲಿ ಕೂಳೆಗಳುಮಾತ್ರ ಉಳಿದಿವಿಯೇಹೊರತು ಫಸಲು ಯಾವದೂ ಇಲ್ಲ. ಇಂಥ ಕೂಳೇಕಾಲದಲ್ಲಿ ಊರ ದನಕರುಗಳಿಗೆಲ್ಲಾ ಯಾವ ಅಡ್ಡಿಯೂ ಇಲ್ಲದೆ ಎಂದರೆ, ಒಬ್ಬರ ದನಗಳು ಮತ್ತೊಬ್ಬರ ಜಮೀನಿನಲ್ಲಿ ಮೇಯುವುದು ಪದ್ಧತಿಯಾಗಿರುತ್ತದೆ, ಇದೇಮೇರೆ ಅಪರಾದಿಯ ಜಮೀನಿನಲ್ಲೂ ಕೂಳೆಮಾತ್ರವಿರುವುದಾಗಿ ಅದರಲ್ಲಿ ಅಡ್ಡಿಯಿಲ್ಲದೆ ಇತರರ ದನಗಳು ಆಗ್ಗೆ ೧೫ ದಿವಸಗಳಿಂದಲೂ ಮೇಯುತ್ತಿವೆ. ಹೀಗಿದ್ದರೂ ಸಹ ನೆನ್ನೇದಿವಸ ಮಧ್ಯಾಹ್ನದಲ್ಲಿ ಅಪರಾಧಿಯು ಕೂಳೆಯ ಜಮೀನಿನಲ್ಲಿ ಇತರ ದನಗಳೊಡನೆ ಮೇಯುತ್ತಿದ್ದ ಫಿರ್ಯಾದಿಯ ಬಾಬತು ೮ ದನಗಳನ್ನು ಅಪರಾಧಿಯು ಹೊಡೆದುಕೊಂಡು ಹೆಡೇಗಿ ದೊಡ್ಡಿಗೆ ಕೂಡಿರುತ್ತಾನೆ.

೨. ಫಿರ್ಯಾದಿಯ ಬಾಬತು ರಾಸುಗಳು ಅಪರಾಧಿಯ ಹೊಲದಲ್ಲಿ ಮೇಯುದ್ದರಿಂದ ಅವನಿಗೆ ಯಾವ ನಷ್ಟವೂ ಆಗಲಿಲ್ಲ. ಈಗ್ಗೆ ೨ ತಿಂಗಳ ಸುಮಾರಿನಲ್ಲಿ ಫಿರ್ಯಾದಿಯ ಹೊಲದಲ್ಲಿ ಬೆಳೆಯನ್ನು ಮೇಯ್ದು ನಷ್ಟಮಾಡುತ್ತಿದ್ದ ಅಪರಾಧಿಯ ರಾಸುಗಳನ್ನುಫಿರ್ಯಾದಿಯು ದೊಡ್ಡಿಗೆ ಕೂಡಿದ್ದನು. ಆ ದ್ವೇಷಕ್ಕಾಗಿ ಅಪರಾದಿಯು ಮೇಲೆ ಕಂಡಮೇರೆಗೆ ಫಿರ್ಯಾದಿಯ ರಾಸುಗಳನ್ನು ಅನ್ಯಾಯವಾಗಿ ದೊಡ್ಡಿಗೆ ಕೂಡಿರುತ್ತಾನೆ.

೩. ಸದರಿ ದನಗಳಪೋಷಣೆಯ ಖರ್ಚಿಗಾಗಿಯೂ, ದಂಡಕ್ಕಾಗಿಯೂ ಫಿರ್ಯಾದಿಯು ಪಟೇಲನಬಳಿ ೨ ರೂ. ನ್ನು ಅಮಾನತ್ತಿಟ್ಟು ರಾಸುಗಳನ್ನು ತೊಂಡಿನಿಂದ ಬಿಡಿಸಿಕೊಂಡು ಬಂದನು.

೪. ಆದುದರಿಂದ ಅಪರಾಧಿಯು ಪೌಂಡಾಕ್ಟು ೨೦ ನೇ ಸೆಕ್ಷನ್ ತಪ್ಪಿತವನ್ನು ಮಾಡಿರುತ್ತಾನಾಗಿ ಇವನಿಗೆ ತಕ್ಕ ಬಂದೋಬಸ್ತು ಮಾಡಿಸುವುದಲ್ಲದೇನೇ ಫಿರ್ಯಾದಿಗೆ ಆಗಿರುವ ನಷ್ಟವನ್ನು ಅಪರಾಧಿಯಿಂದ ಕೊಡಿಸಿಕೊಡಬೇಕೆಂದು ಪ್ರಾರ್ಥನೆ

ತಾ॥ ರಾಜು.

ನಮೂನೆಯ ನಂಬರ್ ೧೦.

ನೇಕ್'ಚಾಲ್' ಜಾಮೀನನ್ನು ತೆಗೆದುಕೊಳ್ಳಲು ಅರ್ಜಿ.
(ಎರಡನೆ ವಿಧ.)

ಕುಂದಾಪುರದ ಫಸ್ಟ್‌ಕ್ಲಾಸ್ ಮ್ಯಾಜಿಸ್ಟ್ರೇಟರ ಕೋರ್ಟಿನಲ್ಲಿ.

1905—1906 ನೇ ಇಸವಿ ಕ್ರಿ. ಮಿಸ್'. ಕೇಸ್ ನಂಬರು.

ಅರ್ಜಿದಾರ. ಇದಿರು ಅರ್ಜಿದಾರ

............ಪುರದಲ್ಲಿರುವ ಪಟೇಲ್ ......ವಗೈರೆ. ಸದರಿ............................ಮಗ

ಎಷ್ಟು ಜನಗಳು ಬೇಕಾದರೂ ಅರ್ಜಿದಾರರಾಗಿ ಸೇರಬಹುದು.

ಅರ್ಜಿದಾರರು ಕ್ರಿ. ಪ್ರೊ. ೧೧೦ ನೇ ಸೆಕ್ಷನ್ ಮೇರೆ ಹೇಳಿಕೊಳ್ಳುವುದೇನಂದರೆ,

ಇದಿರು ಅರ್ಜಿದಾರನು ಸದರಿ .... ಪುರದ ವಾಸಸ್ಥನು. ಈ ಊರಿನಲ್ಲಿರುವ ಜನಗಳು ಇವನು ಕೇಳಿದುದನ್ನೆಲ್ಲಾ ಕೊಡದಿದ್ದರೆ ತಾನು ಅವರಿಗೆ ಕೆಡಕು ಮಾಡುತ್ತೇನೆಂದು ಹೆದರಿಸುವುದು, ಅವರಿಂದ ಚಂದಾವನ್ನು ವಸೂಲ್ಮಾಡುವುದು, ಇತರರ ಕುಮ್ಮಕ್ಕಿನಮೇಲೆ ಅವರಿಗೆ ಆಗದೆ ಇರತಕ್ಕವರನ್ನು ಜುಲುಂ ಮಾಡುವುದು, ಹಿಂಸೆ ಮಾಡುವುದು. ಈ ವಿಧವಾದ ದುಷ್ಕಾರ್ಯಗಳನ್ನು ಇದಿರು ಅರ್ಜದಾರನು ನಡಿಸುತ್ತಾ ಈ ವೂರಿನಲ್ಲಿ ಬಹಳ ದುಷ್ಟನಾಗಿರುತ್ತಾನೆ.

ಆದುದರಿಂದ ಕೋರ್ಟಿನವರು ದಯವಿಟ್ಟು ಕ್ರಿ. ಪ್ರೊ. ಕೋ. ೧೧೦ ನೇ ಸೆಕ್ಷನ್ ಮೇರೆ ವಿಚಾರಣೆ ಮಾಡಿ, ಇದರು ಅರ್ಜಿದಾರನಿಂದ ನೇಕಚಾಲಿಗೆ ಜಾಮೀನನ್ನು ತೆಗೆದುಕೊಳ್ಳಬೇಕೆಂದು ಪ್ರಾರ್ಥನೆ.

ತಾ॥ (ಇಲ್ಲಿ ಅರ್ಜಿದಾರರು ರುಜು ಮಾಡಬೇಕು.)

ರೆವಿನ್ಯೂ ಅರ್ಜಿಗಳು.

ನಮೂನೆಯು ನಂಬರ್ ೧.

ಜಮೀನಿಗೆ ದರಖಾಸ್ತು ಕೊಡುವ ನಮೂನೆ.

ತಿಪಟೂರು ತಾಲ್ಲೂಕು ಅಮಿಲ್‌ರವರ ಜನಾಬಿಗೆ.

.........................ತಾಲ್ಲೂಕ್ ಮುಜಕೂರು...................

ಹೋಬಳಿ ....ಗ್ರಾಮದಲ್ಲಿ ವಾಸವಾಗಿರುವ

ಗಾಣಿಗರ ತಿಮ್ಮಯ್ಯನು ಬರೆದುಕೊಂಡ ಜಮೀನಿನ ದರಖಾಸ್ತು ಆದಾಗಿ.

ಡಿಟೋ ಗ್ರಾಮದ ಸರ್ವೆ ನಂಬರು ಬೀಜವರಿ ಎಕರೆ ಗುಂಟೆ

ಆಕಾರವುಳ್ಳ ಖುಷ್ಕಿ ಜಮೀನನ್ನು ಈ

ಸಂವತ್ಸರಕ್ಕೆ ಕಂದಾಯಕ್ಕೆ ಕೊಡಿಸಿಕೊಡಬೇಕೆಂದು ಪ್ರಾರ್ಥಿಸುತ್ತೇನೆ.

ತಿಪಟೂರು. ದರಖಾಸ್ತುದಾರನ ರುಜು.

ತಾ॥ ಗ್ರಾಮ

ಹೋಬಳಿ

ತಾ॥ಕಲಂ1 ಮುಂದಿನ ಸಂವತ್ಸರಕ್ಕೆ ಕಂದಾಯಕ್ಕೆ ಪಡೆಯಬೇಕಾದರೆ ಬರುವ ಇಂಥಾಸಂವತ್ಸರಕ್ಕೆ ಕಂದಾಯಕ್ಕೆ ಕೊಡಿಸಿ ಕೊಡಬೇಕೆಂದು ಬರೆಯಬೇಕು

ನಮೂನೆಯು ನಂಬರ್ ೨.

ಸೂಚನೆ—ಬಹಳ ದಿವಸಗಳಿಂದಲೂ ಪಾಳುಬಿದ್ದಿರುವ ಜಮೀನುಗಳನ್ನು ಆಬಾದಿಗೆ ತರಬೇಕೆಂದು ಗೌವರ್ನಮೆಂಟಿನವರ ಉದ್ದೇಶವಿರುವುದು, ಇಂಥಾ ಜಮೀನುಗಳನ್ನು ೫ ವರುಷ ೧೦ ವರುಷ ಶ್ರಯಕಂದಾಯಕ್ಕೆ ಕೊಡುವರು

ಇಂಥಾ ಜಮೀನುಗಳು ಈ ಮೈಸೂರು ದೇಶದಲ್ಲಿಯೂ ಬೊಂಬೈ ಜಿಲ್ಲಾ, ಧಾರ್ವಾಡಜಿಲ್ಲಾ, ಮದ್ರಾಸ್ ಜಿಲ್ಲಾದ ಅನೇಕ ಭಾಗಗಳಲ್ಲಿಯೂ, ಇರುವದು. ಜಮೀನು ಬೇಕಾದವರು ನೀರಿಗೂ, ಗೊಬ್ಬರಕ್ಕೂ, ಸಾಗುವಳಿಗೂ, ಅನುಕೂಲವಾದ ಸ್ಥಳಗಳನ್ನು ಚುನಾಯಿಸಿ ಹತ್ತು ಹದಿನೈದು ವರುಷಗಳ ಶ್ರಯಕ್ಕೆ ದರಖಾಸ್ತು ಮಾಡಬಹುದು. ಅಂಥ ದರಖಾಸ್ತುಗಳನ್ನು ಬರೆಯುವ ವಿಧಾನವನ್ನು ಇದಡಿ ಸೂಚಿಸಿರುವೆವು.

ಯಾವ ಜಮೀನನ್ನೇ ಆಗಲಿ ಶ್ರಯಕ್ಕೆ ದರಖಾಸ್ತು ಮಾಡಬೇಕಾದರೆ ಅರ್ಜಿ ನಮೂನೆ.

ಕೊಪ್ಪದ ತಾಲ್ಲೂಕು ಅಮಲ್ದಾರ್ರವರ ಜನಾಬಿಗೆ.

ಇದೇ ಕೊಪ್ಪದ ತಾಲ್ಲೂಕು ....ಹೋಬಳಿ ....ಗ್ರಾಮದ ರೈತ ಚನ್ನಮಲ್ಲಪ್ಪನು ಬರದುಕೊಂಡ ಜಮೀನಿನ ಶ್ರಯ ದರಖಾಸ್ತು ಅದಾಗಿ.

ಈ ಗ್ರಾಮದ ಸರ್ವೆ ನೇ ನಂಬರು ಬಾಗಾಯಿತು ತೋಟವೂ ಈಗ ಸುಮಾರು ಕಳೆದ ಧಾತು ಈಶ್ವರ ಸಂವತ್ಸರದಿಂದ ಕಂದಾಯಕ್ಕೆ

ಸಾಗುವಳಿ ಇಲ್ಲದೆ ಬಂಜರು ಬಿದ್ದು ಇದೆ. ಈ ತೋಟದಲ್ಲಿದ್ದ ಅಡಿಕೆಮರಗಳು, ಬಾಳೆ, ಕಳೆದ ಕ್ಷಾಮದಲ್ಲಿ ನೀರಿನ ದುರ್ಭಿಕ್ಷದ ದೆಶೆಯಿಂದ ನೀರಿಲ್ಲದೆ ಒಣಗಿಹೋದವು. ಮತ್ತು ಈ ಜಮೀನಿಗೆ ಕಂದಾಯದ ದರವು ಎಕರೆ ೧ ಕ್ಕೆ ೧೬ ರೂಪಾಯಿಗಳು ಬಿದ್ದಿದೆ. ಹಿಂದೆ ಸರ್ವೆ ಆಗುವಾಗ್ಯೆ ಕಾಲ ಸುಭಿಕ್ಷವಾಗಿತ್ತು. ಕಾಲಕಾಲಕ್ಕೆ ಮಳೆ ಆಗಿ ನೀರು ಸಮೃದ್ಧಿಯಾಗಿದ್ದುದರಿಂದ ತೋಟವು ಬಹಳ ಉತ್ತಮಸ್ಥಿತಿಯಲ್ಲಿತ್ತು. ಈಗ ಕಳದ ಕ್ಷಾಮದಲ್ಲಿ ರೈತಜನಗಳಿಗೂ ಜಮೀನ್ದಾರರಿಗೂ ಜೀವನಕ್ಕೆ ಮಾರ್ಗವಿಲ್ಲದೆ ಈ ತೋಟ ಸಾಗುವಳಿ ಮಾಡುತ್ತಿದ್ದ ರೈತನು ಕಂದಾಯ ತೆರಲಾರದೆ ಜಮೀನಿಗೆ ರಾಜೀನಾಮೆಯನ್ನು ಕೊಟ್ಟನು. ಮತ್ತು ಅದೇಕ್ಷಾಮದಲ್ಲಿಯೇ ಅವರ ಮನೆಯವರೆಲ್ಲಾ ಕೆಟ್ಟು ಸತ್ತುಹೋದರು. ಆ ಲಾಗಾಯಿತು ಈ ತಹಲ್‌ಪರಿವಿಗೂ ಪಾಳು ಬಿದ್ದು ಇದೆ. ಮತ್ತು ಈ ಜಮೀನಿನ ಕಂದಾಯ ದರವೂ ದುಬಾರಿಯಾಗಿರುವದ್ದರಿಂದ ಯಾರೂ ಕಂದಾಯಕ್ಕೆ ಮಾಡಬೇಕಾದರೂ ಹೆದರುತ್ತಾರೆ. ಆದ್ದರಿಂದ ಈ ಜಮೀನಿನ ಕಂದಾಯವನ್ನು ಬಾಜು ಹೋಬಳಿ ಗ್ರಾಮದ ದರದಂತೆ ಕಮ್ಮಿ ಹಾಕಿಸಿ ಎಕರೆ ೧ಕ್ಕೆ ೮ ರೂಪಾಯಿನಂತೆ ಖಾಯಂ ಮಾಡಿಸಿ ಕಂದಾಯಕ್ಕೆ ಕೊಡಿಸಿಕೊಡಬೇಕು. ಸರಕಾರದವರು ಹಾಗೆ ಮಾಡುವುದಕ್ಕೆ ಅಸಾಧ್ಯವಾದರೆ (ಲೇಟ್ ದಿವಾನ್ ಸರ್. ಪಿ. ಎನ್. ಕೃಷ್ಣಮೂರ್ತಿಗಳು ಮತ್ತು ಮೆ॥ ವಿ. ಪಿ. ಮಾಧವರಾಯರವರು ಈಬಾಬಿನಲ್ಲಿ ಮಾಡಿರುವ ಪ್ರೊಸಿಡಿಂಗ್ಸ್‌ನಂತೆ ಹತ್ತುವರುಷದ ಶ್ರಯ ಕಂದಾಯಕ್ಕೆ ಅಪ್ಪಣೆ ಆದಲ್ಲಿ ಅಡಿಕೆ, ತೆಂಗು, ಬಾಳೆ, ಫಸಲುಗಳನ್ನು ಇಟ್ಟು ತೋಟ ಆಬಾದಿಗೆ ತರುತ್ತೇನೆ. ಖಾವಂದರವರು ಈ ವಿಷಯದಲ್ಲಿ ಹಜರತ್ ಡೆಪ್ಯುಟಿಕಮಿಷನರವರಿಗೆ ಪೂರಾ ಶಿಫಾರಸ್ ಮಾಡಿ ಜಮೀನು ಶ್ರಯಕಂದಾಯಕ್ಕೆ ಕೊಡಿಸಿ ಶಾಶ್ವತವಾದ ಕೀರ್ತಿಯನ್ನು ಪಡೆಯಬೇಕೆಂದು ಪ್ರಾರ್ಥಿಸುತ್ತೇನೆ ಸ್ವಾಮಿ.

ದರಖಾಸ್ತುದಾರನ ರುಜು.

ಗ್ರಾಮ

ಹೋಬಳಿ

ತಾಲ್ಲೂಕು

ನಮೂನೆಯ ನಂಬರ್ ೩.

ತಕಾವಿ ಹಣಕ್ಕೆ ಅರ್ಜಿ.

ಅನೇಕರಿಗೆ ಸಾಗುವಳಿಗೆ ಲಾಯಖಾದ ಜಮೀನುಗಳಿವೆ. ಆದರೆ ಆಜಮೀನುಗಳು ಸಾಗುವಳಿ ಆಗತಕ್ಕದ್ದಕ್ಕೆ ಭಾವಿ ಕಪಿಲೆ ಮುಂತಾದ ನೀರಾವರಿ ಸಲಕರಣೆಗಳನ್ನು ಮತ್ತು ಗೊಬ್ಬರ ಬೀಜ ಮುಂತಾದವುಗಳನ್ನು ಅನುಕೂ

ಲಪಡಿಸಿಕೊಳ್ಳಲು ಹಣವಿಲ್ಲವೆ ಪಶ್ಚಾತ್ತಾಪಪಡುತ್ತಿರುವರು. ಇಂತಹವರೆಲ್ಲರು ತಮ್ಮತಮ್ಮ ಜಮೀನುಗಳನ್ನು ಸಾಗುವಳಿ ಮಾಡಿಕೊಂಡು ವೃದ್ಧಿಯಾಗಬೇಕೆಂದು ಬ್ರಿಟಿಷ್ ಸರಕಾರದವರು ಬೊಂಬೈ ಮದ್ರಾಸ್‌ಜಿಲ್ಲಾ ರೈತರಿಗೂ ಮೈಸೂರ್ ಶ್ರೀಮನ್ಮಹಾರಾಜರವರು ತಮ್ಮ ಸರ್ಕಾರದ ಖಜಾನೆಯಿಂದ ತಮ್ಮ ರೈತರಿಗೂ ತಕಾವಿ ಮೂಲಕ ಸಾಲವಾಗಿ ಹಣವನ್ನು ಕೊಟ್ಟು ದಿನಕ್ರಮೇಣ ವಸೂಲ್ಮಾಡಿಕೊಳ್ಳುವರು. ಈ ಹಣಕ್ಕೆ ಶೇಕಡಾ ೪ ಆಣೆ ಮೊದಲ್ಗೊಂಡು ೭ ಆಣೆ ವರಿಗೂ ಬಡ್ಡಿಮಾತ್ರ ತೆಗದುಕೊಳ್ಳುವರು. ಈ ಹಣಕ್ಕೆ ವಾಯಿದೆ ೧೦ ವರುಷಗಳು. ಭಾವಿ ಮತ್ತು ಜಮೀನಾಬಾದಿಗೆ ತೆಗದುಕ್ಕೊಂಡರೆ ೩೦ ವರ್ಷಗಳುವಾಯಿದೆ ಉಂಟು. ಇದುವರಿಗೆ ಬೊಂಬೈ ಮದರಾಸ್ ಮೈಸೂರು ಸರ್ಕಾರದವರು ಅನೇಕ ಲಕ್ಷ ರೂಪಾಯಿಗಳನ್ನು ಕೊಟ್ಟಿರುವರು. ಈ ಹಣಕ್ಕಾಗಿ ಸರ್ಕಾರವರು ಯಾರ ಜಮೀನು ಆಬಾದಿಗಾಗಿ ಹಣ ಕೇಳುತ್ತಾರೋ ಆ ಜಮೀನನ್ನು ಈಡು ಮಾಡಿಕೊಂಡು ಹಣ ಕೊಡುವರು. ಈ ಈಡು ಕೊಡುವ ಹಣಕ್ಕಿಂತಲೂ ಪಾಲಿಗಿಂತಲೂ ಜಾಸ್ತಿ ಅಂದಾಜಿರಬೇಕು. ಈ ತಕಾವಿ ಹಣವನ್ನು ೨ ಪಾಲು ಪಡೆಯುವದಕ್ಕೆ ಸಾಧಕವಾದ ಅರ್ಜಿಯ ನಮೂನೆಯನ್ನು ಇದರಡಿ ಮುದ್ರಿಸಿ ಇದೆ.

ನಮೂನೆಯು ನಂಬರ್ ೪.

ಮಾಲೂರು ತಾಲ್ಲೂಕು ಅಮಲ್ದಾರ್ರವರ ಜನಾಬಿಗೆ.

ಇದೇ ಮಾಲೂರು ತಾಲ್ಲೂಕು ಮಾಸ್ತಿ ಗ್ರಾಮದ ನೆಂಬ
ಜಮೀನುದಾರನು ಬರೆದುಕ್ಕೊಂಡ ತಕಾವಿ ಅರ್ಜಿ. ಅದಾಗಿ.

ಈ ಗ್ರಾಮದಲ್ಲಿ ನನಗೆ ೨೫ ಎಕರೆ ಖುಷ್ಕಿ ಜಮೀನನ್ನು ೫ ಎಕರೆ ೮ ಗುಂಟೆ ತರಿ ಜಮೀನು ಇದೆ. ಇದನ್ನು ಸಾಗುವಳಿ ಮಾಡುವದಕ್ಕೆ ಬಲವಾದ ಎತ್ತುಗಳು ಅಥವಾ ಕೋಣಗಳು ಇಲ್ಲದೇಲೂ ಮತ್ತು ಗೊಬ್ಬರ ಬೀಜ ವಗೈರೆ ಸಲಕರಣೆಗಳನ್ನುಂಟುಮಾಡಿಕೊಳ್ಳಲು ದ್ರವ್ಯಸಹಾಯವಿಲ್ಲದೆ ನಾನು ನನ್ನಹೆಂಡತಿ ಮಕ್ಕಳುಗಳು ಕಷ್ಟಪಡುತ್ತಿದ್ದೇವೆ. ಈ ಮೇಲ್ಕಂಡ ನನ್ನ ಜಮೀನುಗಳೆಲ್ಲವನ್ನು ಸಾಗುವಳಿ ಮಾಡಿಕ್ಕೊಂಡರೆ ನನ್ನ ಸಂಸಾರಕ್ಕೆಲ್ಲಾ ಜೀವನವಾಗುವದು. ಎತ್ತು ಗೊಬ್ಬರ ಬೀಜ ಕೊಳ್ಳುವದಕ್ಕಾಗಿ ೨೫೦ ರೂಪಾಯಿ ಬೆಲೆ ಬಾಳುವದು. ಖಾವಂದರವರು ರೂಲ್ಸಪ್ರಕಾರ ಬಾಜು ಗ್ರಾಮಸ್ಥರಿಂದ ಅಂದಾಜು ನೋಡಿಸಿ ಜಮೀನನ್ನು ಆಧಾರ ಮಾಡಿಕ್ಕೊಂಡು ಮೇಲ್ಕಂಡ ೨೫೦ ರೂಪಾಯಿಗಳನ್ನು ಕೊಡಿಸಿಕೊಡಬೇಕೆಂದು ಪ್ರಾರ್ಥಿಸುತ್ತೇನೆ ಸ್ವಾಮಿ.

೨೫೧ ರೂಪಾಯಿಗೆ ಮೇಲ್ಪಟ್ಟರೆ ಡೆಪ್ಯುಟಿಕಮಿಾಷನರವರಿಗೆ ಅರ್ಜಿ ಬರೆದುಕೊಳ್ಳಬೇಕು

(ಅರ್ಜಿದಾರನ ರುಜು.)

ತಾ॥ ಕಲಂ॥ ಅನೇಕರು ಹೀಗೆ ಹಣಗಳನ್ನು ತೆಗದುಕೊಂಡು ತಾವು ಉದ್ದೇಶಿಸಿದ ಭೂವ್ಯವಸಾಯಕ್ಕೆ ಖರ್ಚುಮಾಡದೆ ತವ್ಮ ವಸ್ತ್ರಾಲಂಕಾರಗಳಿಗಿಟ್ಟು ನಷ್ಟಪಟ್ಟಿರುವರು. ಹೀಗೆ ಜಮಿಾನಾಬಾದಿಗಾಗಿ ಹಣ ತೆಗದವರು ಅದಕ್ಕಾಗಿಯೇ ಖರ್ಚು ಮಾಡಬೇಕು

ನಮೂನೆಯು ನಂಬರ್ ೫.

ಸರಕಾರ ನೌಕರರ ಕಸೂರಿ ರಹಸ್ಯ.

ಸೂಚನೆ— ರಾಜಧಾನಿ, ಪಟ್ಟಣಗಳಲ್ಲಿಯೂ, ಡಿಸ್ಟ್ರಿಕ್ಟ ಹೆಡ್‌ಕ್ವಾರ್ಟರಿನಲ್ಲಿಯೂ, ಹೋಬಳಿಗಳಲ್ಲಿಯೂ, ಗ್ರಾಮಾಂತರಗಳಲ್ಲಿಯೂ ಸಾಗುವಳಿಗೂ ಖರೀದಿಗೂ ಕೊಡದೆ ಇರತಕ್ಕ ಖಾತೆ ಇಲ್ಲದ ಸಮಸ್ತ ಜಮಿಾನುಗಳು ಸರ್ಕಾರದವರದಾಗಿರುತ್ತದೆ. ಇಂತಹ ಜಮಿಾನುಗಳನ್ನು ಪ್ರಜೆಗಳು ತಮ್ಮ ಸುಪರ್ದಿಗೆ ಪಡೆದುಕೊಳ್ಳಬೇಕಾದರೆ ದರಖಾಸ್ತುಕೊಟ್ಟು ರಿಯಾಯತಿ ಖರೀದಿಗಾಗಲೀ ಹರಾಜಿನಲ್ಲಾಗಲೀ ಖರೀದಿಗೆ ತೆಗದುಕೊಳ್ಳಬೇಕು. ಈ ಜಮಿಾನುಗಳನ್ನು ಖರೀದಿಗೆ ಕೊಡುವಕಾಲದಲ್ಲಿ ಆಗಲೀ ಹರಾಜ್ ಹಾಕಿಸುವಕಾಲದಲ್ಲಾಗಲೀ ಸರ್ಕಾರದ ನೌಕರರಲ್ಲಿ ಕೆಲವರು ತಮ್ಮ ದಾಕ್ಷಿಣ್ಯಕ್ಕೆ ಒಳಪಟ್ಟವರಿಗೆ ಜಮಿಾನು ಮಾಡಿಕೊಡಬೇಕೆಂದು ಹರಾಜ್ ಇಸ್ತಿಹಾರನ್ನು ಬಹಳ ಜನಗಳ ತಿಳುವಳಿಕೆಗೆ ತರದೆ ಇಸ್ತಿಹಾರಿಗೆ ತಮಗೆ ಬೇಕಾದ ಕೆಲವು ಜನಗಳ ರುಜುವು ಮಾತ್ರ ಹಾಕಿಸಿ ಮೇಲಕ್ಕೆ ರವಾನೆಮಾಡಿ ಗುಟ್ಟಾಗಿ ಹರಾಜು ಮಾಡಿ ಸಾಗುವಳಿಚೀಟಿ ಅಥವಾ ಅಧಿಕಾರಪತ್ರಿಕೆ ಕೊಡುವರು. ಸಾಗುವಳಿದಾರರು ಸಹಾ ಕೂಡಲೇ ಸಾಗುವಳಿ ಮಾಡದೆ ಬಾಯಿದೆ ಕಳೆಯುವವರಿಗೂ ಗುಟ್ಟಾಗಿದ್ದು ನಂತರ ಆ ಜಮಿಾನಿಗೆ ಪ್ರವೇಶ ಮಾಡುವರು. ಆ ಕಾಲದಲ್ಲಿ ನೆರೆಹೊರೆಯುವರು ಈ ಜಮಿಾನ್ ಇವನಿಗೆ ಹ್ಯಾಗೆ ಬಂತು ಎಂದು ಆಶ್ಚರ್ಯಪಡುವರು. ಆ ಕಾಲದಲ್ಲಿ ನೆರೆಹೊರೆಯುವರು ಸರ್ಕಾರಕ್ಕೆ ಅರ್ಜಿಕೊಟ್ಟು ಕೇಳುವಲ್ಲಿ ನೀವೂ ಕೇಳುವ ಜಮಿಾನು ಹೋದವರುಷವೇ ಪಬ್ಲಿಕ್ ಹರಾಜಾಗಿ ಇಂತವರ ಹೆಸರಿಗೆ ಸಾಗುವಳಿಚೀಟಿಕೊಟ್ಟು ಇದೆಯೆಂದು ಇಂಡಾರಸ್ ಕೊಡುವರು. ಇಂತಹ ಕೇಸುಗಳು ಅಲ್ಲಲ್ಲಿ ನಡೆದುಯಿದೆ. ರೂಲ್ಸ್ ತಿಳಿಯದವರಾದರೆ ಆ ಇಂಡಾರ್ಸನ್ನೇ ನೋಡಿಕೊಂಡು ಸುಮ್ಮನೆ ಇರುವರು. ಸ್ವಲ್ಪ

ಕಾನೂನು ತಿಳದವರಾದರೆ ಕಲೆಕ್ಟರ್ ಅಥವಾ ಡೆಪ್ಯುಟಿಕಮಿಾಷನರ್ ರೆವಿನ್ಯೂಕಮಿಾಷನರ ರೆವಿನ್ಯೂಬೋರ್ಡಿನವರವರಿಗೂ ಚರ್ಚೆಮಾಡಿ ತಪ್ಪಿತಸ್ತರ ತಪ್ಪನ್ನು ಹೊರಪಡಿಸುವರು. ಆಗಲೂ ಆ ಜಮಿಾನಿನ ಹರಾಜು ಬಹಿರಂಗಪಡಿಸಲಿಲ್ಲವೆಂಬ ರುಜುವಾತು ಕೊಟ್ಟಹೊರ್ತು ಮೇಲಿನವರು ಸಹಾ ಏನು ಮಾಡಲಾರರು. ಇಂತಹ ವಿಷಯುಗಳು ಎಲ್ಲಾಕಡೆಯು ನಡೆಯುತ್ತಿರುವದು. ಆದುದರಿಂದಲೇ ಜನಗಳು ಇಂತಹ ಮೂಢಾವಸ್ತೆಗೆ ಶಿಲುಕಬಾರದೆಂದೇ ದೇಶಾಭಿಮಾನಿಗಳಾದ ವಿದ್ಯಾವಂತರು ಸಮುಸ್ತಪ್ರಜೆಗಳನ್ನು ಬಲವಂತವಾಗಿ ವಿದ್ಯಾವಂತರನ್ನಾಗಿ ಮಾಡಬೇಕೆಂದು ಚರ್ಚಿಸುತಲಿರುವರು. ಕೆಲವು ಬ್ರಾಹ್ಮಣೇತರರು ಸಕಲಕೋಮಿನವರು ವಿದ್ಯಾವಂತರಾಗುವದು ಬ್ರಾಹ್ಮಣರಿಗೆ ಇಷ್ಟವಿಲ್ಲವೆಂದು ಹೇಳುವರು.

ಈ ಅಭಿಪ್ರಾಯ ಕೆಲವರಲ್ಲಿ ಇದ್ದಾಗ್ಯೂ ಸಾಧಾರಣವಾಗಿ ಈ ಪ್ರಪಂಚದಲ್ಲೆಲ್ಲಾ ಬ್ರಾಹ್ಮಣರು ಅತ್ಯಲ್ಪ ಸಂಖ್ಯೆಯುಳ್ಳವರಾಗಿರುವರು. ಇವರ ಸಹಾ ಈ ಕಾಲ ಧರ್ಮಾನುಗುಣ್ಯವಾಗಿ ಮಿಲಟೆರಿ ಬಾರ್ಸವಾರ್ ಪೋಲಿಸ್ ವ್ಯವಸಾಯ ಮತ್ತು ರೈಲ್ವೆ ಹೊಗೇಯಂತ್ರಗಳು ನಡೆಸುವ ಕಾರ್ಯಗಳಲ್ಲಿಯೂ ವಿದ್ಯುಚ್ಛಕ್ತಿಯನ್ನು ಪ್ರಸರಿಸುವದರಲ್ಲಿಯೂ ತೊಡಗಿರುವರು. ಇನ್ನೂ ಸ್ವಲ್ಪಕಾಲದೊಳಗಾಗಿಯೇ ಬಾಕಿ ಉಳಿದಿರುವ ಬ್ರಾಹ್ಮಣರೆಲ್ಲರೂ ಇತರ ಮತೀಯರ ಉದ್ಯೋಗಗಳನ್ನು ಸ್ವೀಕರಿಸುವರು. ಆದ್ದರಿಂದ ಸಕಲರು ವಿದ್ಯಾವಂತರಾಗುವದು ಕ್ಷೇಮಕರವಾದದ್ದು. ವಿದ್ಯಾವಂತರಿರುವ ಸ್ಥಳಗಳಲ್ಲಿನ ಅಧಿಕಾರಿಗಳು ಇಂತಹ ಮೋಸಗಳನ್ನು ನಡೆಸಲು ಅವಕಾಶವಿರುವದಿಲ್ಲವು.

ಹೀಗೆ ಅನ್ಯಾಯಗಳು ನಡೆದಲ್ಲಿ ಮೇಲ್ಪಟ್ಟ ಅಧಿಕಾರಿಗಳಿಗೆ ತಿಳಿಸಬೇಕು.

ನಮೂನೆಯು ನಂಬರ್ ೬.

ಅರ್ಜಿ ನಮೂನೆ.

ಡಿಸ್ಟ್ರಿಕ್ಟು ಡೆಪ್ಯುಟಿ ಕಮಿಾನಷನರವರ ಅಥವಾ ಕಲೆಕ್ಟರವರ ಜನಾಬಿಗೆ,—

ಸ್ನ………ನೇ ಮಾಹೆ………………ತಾರೀಖು……………ರಲ್ಲು ……………………………ತಾಲ್ಲೂಕು……………ಹೋಬಳಿ………… ಗ್ರಾಮ…………ಜಮಿಾನ್ದಾರ್ ನೆಂಬುವನು ಬರದುಕೊಂಡ ಅಹವಾಲ್

ಅರ್ಜಿ ಅದಾಗಿ— ಇದೇ ಗ್ರಾಮದ ನನ್ನ ಸರ್ವೆ........ನೇ ನಂಬರು ಬಾಗಾಯಿತು ತೋಟಕ್ಕೆ ಪಶ್ಚಿಮಭಾಗದಲ್ಲಿರುವ ತರಿ......ನೇ ನಂಬರ್ ಗುಟ್ಟೆಗದ್ದೆ ಎಂಬುವ ಜಮೀನು ಈಗ ೧೦—೧೨ ವರುಷಗಳಿಂದಲೂ ಸಾಗುವಳಿ ಇಲ್ಲದೆ ಬಂಜರು ಇತ್ತು. ಈಗ ೩ ದಿವಸದ ಮುಂಚೆ .... ನೆಂಬುವನು ಈ ಜಮೀನನ್ನು ಉತ್ತು ಅಗತೆ ಮಾಡಿ ಅಲ್ಲಲ್ಲಿ ಬಾಳೆ ನೆಟ್ಟು ಇರುತ್ತಾನೆ. ಈಜಮೀನು ನನ್ನ ಬಾಗಾಯಿತು ತೋಟಕ್ಕೆಲಗತ್ತಾಗಿದೆ. ಈ ಜಮೀನನ್ನು ನಾನು ಕಂದಾಯಕ್ಕೆ ಮಾಡಿಕೊಂಡು ನನ್ನ ತೋಟಕ್ಕೆ ಶೇರಿಸಿಕೊಳ್ಳಬೇಕೆಂದು ಈಗ್ಯೆ ೩—೪ ವರುಷಗಳ ಕೆಳಗೆ ತಾಲ್ಲೂಕು ಆಮಿಲ ರವರಿಗೆ ದರಖಾಸ್ತು ಕೊಟ್ಟುಯಿದ್ದೆ. ಆಗ್ಯೆ ಅಮಲ್‌ದಾರ್ರವರು ಈ ಜಮೀನಿನಲ್ಲಿ ಈಚಲುಮರಗಳು ವಿಶೇಷವಾಗಿರುವದರಿಂದ ಸಾಗುವಳಿಗೆ ಕೊಡಲು, ಆಗುವದಿಲ್ಲವೆಂದು ಇಂಡಾರ್ಸ್ ಹುಕುಂ ಅಪ್ಪಣೇಕೊಟ್ಟರು. ಈಗ ಹ್ಯಾಗೋ................ಈ ಜಮೀನನ್ನು ಸರ್ಕಾರದವರು ಸಾಗುವಳೀಗೆ ಕೊಟ್ಟಿರುವರು. ಈ ಜಮೀನು ಕ್ರಮವಾಗಿ ಹರಾಜಾಗದೆ ಅವ್ವಲ್ ದರಖಾಸ್ತುದಾರನಾದ ನನಿಗೂ ನನ್ನ ಬಾಜೂ ರೈತರಿಗೂ ತಿಳುವಳಿಕಗೆ ತಾರದೇ ಈ ಜಮೀನು..............ಗೆ ಹ್ಯಾಗೆ ಬಂತೋ ನಾನರಿಯಲು ಆಶ್ಚರ್ಯವಾಗಿದೆ. ಹಾಗೆ ಈ ಜಮೀನು ಬಹಿರಂಗವಾಗಿ ಹರಾಜುಮಾಡಿ ಇದ್ದಲ್ಲಿ ನಾನು ಮತ್ತುಗ್ರಾಮದ ನನ್ನ ನೆರೆಹೊರೆಯುವರು ೨೦೦— ೩೦೦ ರೂಪಾಯಿಗಳವರಿಗೂ ಸವಾಲು ಮಾಡುತ್ತಿದ್ದರು. ಈಗಲೂ ಖಾವಂದರವರು ಈ ಬಾಬಿನಲ್ಲಿ ನಡೆದಿರತಕ್ಕಂತಾ ರಿಕಾರ್ಡನ್ನು ಕಟ್ಟನ್ನು ತರಿಶಿಕೊಂಡು ಪರಾಂಬರಿಸಿ ದುಸರಾ ಹರಾಜಿಗೆ ಹುಕ್ಕುಂ ಅಪ್ಪಣೆ ಆದಲ್ಲಿ ಹರಾಜಿನಲ್ಲಿ ತೆಗೆಯಲು ಶಿದ್ಧವಾಗಿದ್ಧೇವೆ. ಅಪ್ಪಣೆ ಆದರೆ ೩೦೦ ರೂಪಾಯಿಗಳನ್ನು ಈಗಲೇ ಸನ್ನಿಧಾನದಲ್ಲಿ ಠೇವಣಾತಿ ಇಡಲೂ ಕಬೂಲಿದ್ಧೇನೆ.

(ಅರ್ಜಿದಾರನ ರುಜು.)

(ಗ್ರಾಮ.)

ತಾ॥ ಕಲಂ॥ ಇಂತಹ ವಿಷಯಗಳು ಪಟೇಲ್ ಶ್ಯಾನುಭೋಗರುಗಳು ....ಗ್ರಾಮದ ಗೌಡರಲ್ಲಿ ಕರ್ಣೀಕರುಗಳು ರೆವಿನ್ಯು ಇನಸ್ಪೆಕ್ಟರು ತಾಲ್ಲೂಕು ನೌಕರರು ರಹಸ್ಯವಾಗಿ ಶೇರಿದಹೊರ್ತು ನಡೆಸಲು ಆಗುವದಿಲ್ಲವು. ಆದುದರಿಂದ ಮೇಲಿನ ಅಧಿಕಾರಿಗಳಿಗೆ ಅರ್ಜಿ ಬರೆದುಕೊಳ್ಳುವವರ ತಮ್ಮ ಗ್ರಾಮ ನೆರೆಹೊರೆರೈತರಲ್ಲಿ ಆಲೋಚಿಸಿ ಅರ್ಜಿ ಬರೆದು ಮೇಲೆ ನಮೂದಿಸಿದಂತೆ ಮೇಲ್ಕಂಡ ಅಧಿಕಾರಿಗಳಿಗೆ ರಿಜಸ್ಟರ್‌ಮಾಡಿ ಪೋಸ್ಟಿನಲ್ಲಿ

ರವಾನಿಸಿ ರಿಜಸ್ಟರ್ ರಶೀದಿಯನ್ನು ಪಡೆಯಬೇಕು. ಮೇಲಿನ ಅಧಿಕಾರಿಗಳು ತಾಲ್ಲೂಕಿನಲ್ಲಿ ಈ ಜಮೀನ್ ಬಾಬಿನಲ್ಲಿ ನಡೆದಿರತಕ್ಕ ರಿಕಾರ್ಡನ್ನು ತರಸಿದ್ದು ಸಹ ಹರಾಜಗೆ ಹುಕುಂ ಕೊಡುವರು. ಕೆಲವು ಜಮೀನುದಾರರು ತಾವು ಪ್ರಥಮ ಹರಾಜ್ ಇಸ್ತಿಹಾರಿಗೆ ರುಜು ಮಾಡಿಯೂ ಹರಾಜ್ ಕಾಲಕ್ಕೆ ಹಾಜರಾಗದೆಯೋ ಅಥವಾ ಹಾಜರಾಗಿದ್ದರೋ ಅಧಿಕಾರಿಗಳ ದಾಕ್ಷಿಣ್ಯಕ್ಕೂ ಹೆದರಿ ಸವಾಲ್ ಮಾಡದೆ ಸುಮ್ಮನಿದ್ದು ಅನಂತರ ಪಶ್ಚಾತ್ತಾಪಪಡುವರು. ಹಾಗೆ ಮಾಡಿಯಿದ್ದು ಪುನಃ ಅರ್ಜಿ ಕೊಡುವದು ಸರಿಯಾದದ್ದಲ್ಲವು. ಹಾಗಿಲ್ಲದೆ ತಾವು ಯಾವದೊಂದು ಕಾಣದೆ ನಡೆದುಯಿದ್ದರೆ ನ್ಯಾಯವಿದ್ದಂತೆ ನಡೆಯುವದು.

ಯಾವ ಸಂದರ್ಭಕ್ಕಾಗಲಿ ಜಮೀನ್ ಹಿಡುವಳಿದಾರರು ಅವರ ಜಮೀನ್ ಇರುವ ಗ್ರಾಮಗಳ ನಕಾಸೆಯನ್ನು ಸಮೀಪದಲ್ಲಿ ಇಟ್ಟುಕೊಂಡಿರುವದು ಉತ್ತಮ. ಸರ್ವೇ ಇಲಾಖೆಯವರಿಗೆ ಇದರ ಫೀಜ್ ಅಂದರೆ ೧ ಅಥವಾ ೨ ರೂಪಾಯಿಗಳನ್ನು ಕೊಟ್ಟು ತರಿಶಿಟ್ಟುಕೊಳ್ಳಬೇಕು. ಗ್ರಾಮಕ್ಕೆ ಒಬ್ಬೊಬ್ಬರಲ್ಲಿ ಇದ್ದರೆ ಸಾಕು.

ನಮೂನೆಯು ನಂಬರ್ ೭.

ಮರ ಬೇಲಿ ಇವುಗಳ ವಿಷಯವಾದ ಅರ್ಜಿ.

ಸೂಚನೆ— ಅನೇಕ ಜಮೀನುಗಳ ಬಾಂದು ಸರಹದ್ದು ಪಹಣಿ ಕಲ್ಲಿನಿಂದೀಚೆಗೂ ಆಚೆಗೂ ಬೇಲಿಗಳೂ ಕಾಲಿವೆಗಳೂ ಗೋಡೆಗಳೂ ಮುಂತಾದವುಗಳು ಇರುವವು ಹೀಗೆ ಇದ್ದಮಾತ್ರಕ್ಕೆ ಸರ್ಕಾರದವರು ಸರ್ವೆಯಲ್ಲಿ ಅಳತೆ ಮುಂತಾದ ಅನುಕೂಲಕ್ಕೋಸ್ಕರ ಸ್ವಲ್ಪ ಸರಿಮಾಡಿಕೊಳ್ಳುವದುಂಟು. ಸರಹದ್ದು ಬಾಂದಿಗೆ ನೇರವಾಗಿ ಹಾಕಿದ ಗಿಡ ಮರಗಳು ದಿನಕ್ರಮೇಣ ಬೆಳೆಯುವದರಿಂದ ಆಜು ಬಾಜು ಜಮೀನುಗಳಿಗೆ ಇರಚಲು ಉಂಟಾಗಿ ನಷ್ಟ ಉಂಟಾಗುವದು ನೆರೆ ಹೊರೆಯ ರೈತರು ಪರಸ್ಪರ ಒಬ್ಬರೊಬ್ಬರ ತೊಂದರೆಗಳನ್ನು ಸಹಿಸಿಕೊಳ್ಳುವದರಿಂದ ಯಾವ ಬಾಧಕವೂ ಇರುವದಿಲ್ಲವು. ಅಥವಾ ಬಾಜುದಲ್ಲಿ ಸರ್ಕಾರ್ ಬಂಜರ್ ಜಮೀನುಗಳು ಇದ್ದರೆ ನೆರೆ ಹೊರೆ ರೈತರಾಗಲೀ ಗೌಡ ಕರ್ಣೀಕರಾಗಲೀ ಅಸೂಯೆಗೆ ಸರ್ಕಾರಕ್ಕೆ ಅರ್ಜಿ ಬರೆದುಕೊಂಡರೆ ಕೊಡುವದೂ ಉಂಟು. ಇಂತಹ ಸಂದರ್ಭಗಳಲ್ಲಿ ಸರ್ಕಾರದವರಿಗೆ ಜಮೀನುದಾರರು ಈರೀತಿ ಅರ್ಜಿ ಬರೆದುಕೊಳ್ಳಬಹುದು.

ಅರ್ಜಿ ನಮೂನೆ.

ತಾಲ್ಲೂಕ್ ಅಮುಲ್ದಾರ್ರವರ ಜನಾಬಿಗೆ.

ಹೋಬಳಿ ಗ್ರಾಮದ ರೈತ

ನೆಂಬುವನು ಬರದುಕೊಂಡ ಅಹವಾಲ್ ಅರ್ಜಿ

ಏನಂದರೆ:—ಅದಾಗಿ. ಈ ಗ್ರಾಮಕ್ಕೆ ನಾನು ಭಾರಿ ಕಂದಾಯ ಕೊಡುತ್ತಾ ಇದ್ದೇನೆ. ನನ್ನ ಹೊಲ ಗದ್ದೆ ಜೊತೆಗೆ ೭—೮ ಎಕರೆ ಬಾಗಾಯಿತು ತೋಟವೂ ಮಾಡಿಕೊಂಡಿದ್ದೇನೆ. ಹೊಲದಲ್ಲಿಯೂ, ಗದ್ದೆಯಲ್ಲಿಯೂ, ಪ್ರತಿ ವರ್ಷವೂ ಮಳೆ ಆಗಿ ಪೂರಾ ಬೆಳೆ ಆಗುವದಿಲ್ಲವು. ಮಳೆ ಬಂದ ವರುಷಮಾತ್ರ ಫಸಲ್ ಸಂದಿಸುತ್ತದೆ. ಇಲ್ಲದವರುಷದಲ್ಲಿ ಕಂದಾಯವನ್ನು ದಂಡವಾಗಿ ಕೊಡಬೇಕಾಗಿದೆ ಅಂಥಾ ಕ್ಷಾಮಕಾಲದಲ್ಲಿ ಬಾಗಾಯಿತು ಜಮೀನುಗಳನ್ನು ಪ್ರತಿಒಬ್ಬ ರೈತನು ಉಂಟಾಗಿರಬೇಕೆಂದು ನಮ್ಮದಯಾಳುಗಳಾದ ಸರ್ಕಾರದವರ ಇಷ್ಟವಿರುವದ್ದರಿಂದ ಅವರಂತೆ ಬಾಗಾಯಿತು ತೋಟವನ್ನು ಮಾಡಿಕೊಂಡು ನನ್ನ ಕುಟುಂಬವನ್ನು ಪೋಷಣೆ ಮಾಡಿಕೊಳ್ಳುವದಲ್ಲದೆ ಸರ್ಕಾರಕ್ಕೆ ಬಿಕ್ಷುಪುಕಾರು ಕಂದಾಯವನ್ನು ಕಟ್ಟುತ್ತಿರುತ್ತೇನೆ. ಇಂತಹ ತೋಟಕ್ಕೆ ದನಗಳು ಕಳ್ಳರು ವಗೈರೆ ಬಾರದಂತೆ ತೋಟದ ಸುತ್ತಲೂ ಬಿದರು ಮೆಳೆ ವಗೈರೆ ಬೇಲಿ ಹಬ್ಬಿಸಿದ್ದೇನೆ. ಇದರಬುಡಗಳು ನನ್ನ ಜಮೀನಿನಲ್ಲಿದ್ದರೂ ಕೊಂಬೆಗಳು ಮರದ ಬೇರುಗಳು ಬಾಂದುಕಲ್ಲು ಸರಹದ್ದು ಮೀರಿ ಆಚೆ ಜಮೀನಿಗೂ ಇರಚಲಾಗಿದೆ. ಈ ಸಂಗತಿ ಹೀಗಿರುವಲ್ಲಿ ನನಿಗೂ ಈ ಗ್ರಾಮದ ಪಟೇಲನಿಗೂ ಜಿದ್ದುಬರಲು ನನ್ನ ತೋಟದ ಬೇಲಿಯನ್ನು ಕತ್ತರಿಸಿ ಹಾಕುವಂತೆ ಖಾವಂದರಿಗ ರಿಪೋರ್ಟು ಮಾಡಿರುತ್ತಾನೆ. ನನ್ನ ತೋಟದ ಮೂರು ದಿಕ್ಕುಗಳಲ್ಲಿಯೂ ಸಾಗುವಳಿ ಜಮೀನು ಇಲ್ಲವು. ಮತ್ತು ನನ್ನ ತೋಟದ ಬೇಲಿಯಿಂದ ಯಾರ ಬಾಜೂ ಜಮೀನಿಗೂ ನಷ್ಟವಾಗುವದಿಲ್ಲವು. ಬಾಕಿ ಒಂದುಕಡೆ ಮಾತ್ರ ಇದೇಗ್ರಾಮದ ಜಮೀನ್ದಾರ್ ನವರ ಗದ್ದೆ ಜಮೀನು ಇದೆ. ಇವರೂಸಹಾ ತೋಟದ ಬೇಲಿಯನ್ನು ತೋಟಕ್ಕೆನಷ್ಟವಾಗುತ್ತೆಂದು ತಿಳಿದು ನನಿಗೆ ತೊಂದರೆ ಕೊಡದೆ ನನ್ನ ತೊಂದರೆಯನ್ನು ಅವರು ರಹಿಸುತ್ತಾ ಇದ್ದಾರೆ. ಅವರಿಗೆ ಪ್ರತಿವರ್ಷವೂ ನನ್ನ ತೋಟದ ಬೇಲಿಯ ಇರಚಲಿನಿಂದ ೫—೬ ರೂಪಾಯಿಗಳು ನಷ್ಟವಾಗುತ್ತಿರುವದು. ಇಂತವರೂಸಹಾ ಫಿರ್ಯಾದು ಮಾಡದೆ ಇರುವಕಾಲದಲ್ಲಿ ಗ್ರಾಮದ ರೈತರುಗಳಿಗೆ ತಾಯಿಯೋಪಾದಿಯಲ್ಲಿರಬೇಕಾಗಿರುವಂತ ಪಟೇಲ್ ಶಾನುಭೋಗ್ ಶೇಕದಾರ್ ಮುಂತಾದ ಅಧಿಕಾರಿಗಳು ವೃಥಾ ನನ್ನಮೇಲೆ ಜಿದ್ದುಮಾ

ಡಿದರೆ ಗರೀಬರಾದ ರೈತರು ಜೀವಿಸುವದು ಹ್ಯಾಗೋ ಖಾವಂದರವರೇ ಪರಾಂಬರಿಸಬೇಕು. ಮೇಲಾಗಿ ನನ್ನ ತೋಟದ ಪೂರ್ವ ಪಶ್ಚಿಮ ದಕ್ಷಿಣ ದಿಕ್ಕುಗಳಲ್ಲಿ ಯಾವ ಸಾಗುವಳೀ ಜಮೀನೂ ಇಲ್ಲಾ. ಮತ್ತು ಸರ್ಕಾರದ ಬಂಜರು ಜಮೀನಿದ್ದಾಗ್ಯೂ ಬೇಲಿ ಇರಚಲು ಬೀಳುವ ಪ್ರದೇಶವೆಲ್ಲವೂ ನೀರು ಹರಿಯುವ ಹಳ್ಳ ಕೊರಕಲಾಗಿ ಖರಾಬಿನಲ್ಲಿದೆ. ಇದರಿಂದ ಯಾರಿಗೇನು ನಷ್ಟವಿಲ್ಲವು. ಆದ್ದರಿಂದ ಖಾವಂದರವರು ರೂಬುರೂಬು ಅಜಮಾಯಿಷಿ ಮಾಡಿ ನನ್ನ ಅಹವಾಲನ್ನು ಚಿತ್ತಕ್ಕೆ ತಂದು ಪಟೇಲ್ ಶಾನುಭೋಗರು ಶೇಕದಾರರು ನನಿಗೆ ಪದೇಪದೆ ತಗಾದೆ ಮಾಡದಂತೆ ಹುಕುಂ ಅಪ್ಪಣೆಯಾಗಬೇಕೆಂದು ಕೋರುತ್ತೇನೆ.

(ಅರ್ಜದಾರನ ರುಜು.)

ಹೀಗೆಯೇ ಅನೇಕ ರೈತರ ಸ್ಥಿತಿಯಾಗಿದ್ದರೆ ಅವರೆಲ್ಲರು ಇದೇರೀತಿ ಮೇಲ್ಪಟ್ಟ ಅಧಿಕಾರಿಗಳಿಗೆ ಅರ್ಜಿಗಳನ್ನು ಕೊಡಬೇಕು. ಆದರೆ ಗ್ರಾಮದ ಪಟೇಲ್ ಶಾನುಭೋಗರು ರೆವಿನ್ಯೂ ಇನಸ್ಪೆಕ್ಟರುಗಳಿಂದಾಗತಕ್ಕ ಉಪಕಾರಗಳು ಮೇಲ್ಪಟ್ಟ ಅಧಿಕಾರಿಗಳಿಂದ ಆಗುವದಿಲ್ಲವು ಸ್ವಲ್ಪ ಶ್ರಮದಿಂದ ಈ ಕೀಳಧಿಕಾರಿಗಳ ದಯ ಸಂಪಾದಿಸಿಕೊಂಡಿರುವದು ಸುಲಭಸಾಧ್ಯವಾದದ್ದು. ಈ ಗ್ರಾಮಾಧಿಕಾರಿಗಳಿಗೆ ತನ್ನ ತೋಟದಲ್ಲಿ ಬೆಳದ ಕೆಲವು ತುಂಡುಬಾಳೆಯ ಲೆಯನ್ನಾಗಲೀ ಅದಿಲ್ಲದಿದ್ದರೆ ರೈತರು ಮತ್ತಾವಪದಾರ್ಥವನ್ನಾದರು ಕೊಡಬಹುದು. ಆ ಉಪಾಯತಿಳಿಯದವರು ಗ್ರಾಮಾಧಿಕಾರಿಗಳಲ್ಲಿಯೂ ತಮ್ಮ ನೆರೆಹೊರೆಯವರಲ್ಲಿಯೂ ದ್ವೇಷ ಸಂಪಾದಿಸಿಕೊಂಡು ಲಾಯರುಗಳಿಗೆ ತೆತ್ತು ನಷ್ಟಪಡುವರು.

ಪರಂತು ತಮಗೆ ಸಾಧ್ಯವಾದಷ್ಟುಮಟ್ಟಿಗೂ ಎಲ್ಲರಲ್ಲಿಯೂ ಸ್ನೇಹಬೆಳಸಿಕೊಂಡಿರುವದು ಉತ್ತಮ. ಥೊರೆಯುತನಕ ದೂರು ಹೊಳೆತನಕ ಓಟ ಸಾಧ್ಯವಿಲ್ಲದೆ ಹೋದರೆ (ಬಲಾ ಎಂಬ ಗಾದೆಯಂತೆ) ಮೇಲಕ್ಕೆ ತಿಳಿಸತಕ್ಕದ್ದೆ ನ್ಯಾಯ.

ಕಂದಾಯ ರಿಮಿಷನ್ನಿಗೆ ಅರ್ಜಿ.

ನಮೂನೆಯ ನಂಬರ್ ೪.

ಸೂಚನೆ—ಮಳೆ ಸಾಲದೆ ಹೋದವರ್ಷಗಳಲ್ಲಿ ಫಸಲಿಗೆ ನೀರು ಸಾಲದೆ ಅನೇಕ ಗದ್ದೆಗಳ ಬೆಳೆ ಕೆಟ್ಟುಹೋಗಿ ಪೀಕುಸುಕ್ಕೆ ಆಗಿರುವದು. ಇಂಥಾ ಕ್ಷಾಮಕಾಲಗಳಲ್ಲಿ ದಯಾಳುಗಳಾದ ಗೌರ್ನಮೆಂಟು ಅಧಿಕಾರಿಗಳು ಅಂತಹ

ಸ್ಥಳಗಳ ರೈತರಿಗೆ ತಂೀ ಜಮೀನಿಗೆ ಅರ್ಧ ಕಂದಾಯ ಮಾಫ್ ಮಾಡಬೇಕೆಂದು ಶಿಫಾರಷ್ ಮಾಡುವರು. ಸಣ್ಣ ಕೆರೆಗಳಿರುವಕಡೆ ವರುಷಕ್ಕೆ ೩—೪ ಸಲ ಮಳೆಯಿಂದ ಭರ್ತಿ ಅದಹೊರ್ತು ತರಿ ಸಾಗುವಳಿ ಪೂರೈಸುವದಿಲ್ಲವು. ಇಂಥಾ ಕಾಲಗಳಲ್ಲಿ ರೈತರು ಜಮೀನುದಾರರು ಕಂದಾಯುವನ್ನು ಕಡಮೆಮಾಡುವದಕ್ಕೂ ಕೆರೆಗಳನ್ನು ಬಡಾಯಿಸಿ ನೀರಾವರಿ ಮಾಡಿಕೊಡುವದಕ್ಕಾಗಿ ಡೆಪ್ಯುಟಿ ಕಮಿಶನರಿಗೂ ಅವರ ಮೇಲ್ಪಟ್ಟ ಆಫೀಸರಿಗೆ ಅರ್ಜಿಗಳನ್ನು ಬರಾಯಿಸಿಕ್ಕೊಳ್ಳಬೇಕು ಅಂತಹ ಅರ್ಜಿಗಳನ್ನು ಈ ಕೆಳಗೆ ನಮೂದಿಸಿರುವಂತೆ ಬರೆಯಬೇಕು.

ನಮೂನೆಯು ನಂಬರ್ ೯.

ಧಾರವಾಡ ಡಿಸ್ಟ್ರಿಕ್ಟ್ ಡೆಪ್ಯುಟಿ ಕಲೆಕ್ಟರವರ ಜನಾಬಿಗೆ.

ರಾಣಿಬಿದನೂರು ತಾಲ್ಲೂಕ್.............................ಹೋಬಳಿ

ಗಾಮದ ರೈತರು ಬರೆದುಕ್ಕೊಂಡ ಅರ್ಜಿ ಅದಾಗಿ.

ಈ ಗಾಮದ ಬಸವನಕಟ್ಟೆ ಎಂಬ ಕೆರೆಯಲ್ಲಿ ಭರ್ತಿಯಾಗುವ ನೀರು ಈ ಕೆರೇಕೆಳಗಿನ ಅಚ್ಚುಕಟ್ಟಿಗೆ ಸಾಲದೆ ಮಳೆ ಕಡಮೆ ಆದವರುಷ ತೆನೆಮೇಲೆ ಪೈರು ಒಣಗಿ ಬೆಳೆ ಕೆಟ್ಟುಹೋಗುತ್ತಾ ಇರುವದು. ಇದರೆಂದ ರೈತಜನಗಳಿಗೆ ಬಹಳ ನಷ್ಟವಾಗುತ್ತಿರುವದು. ಖಾವಂದರವರು ಈ ಕೆರೆಯುನ್ನು ಪೂರ್ಣ ಬಡಾಯಿಶಿಕ್ಕೊಡಲು ಹುಕುಂ ಅಪ್ಪಣೆ ಯಾಗಬೇಕೆಂದು ಬೇಡಿಕ್ಕೊಳ್ಳುತ್ತೇನೆ ಮಹಾಸ್ವಾಮಿ.

(ರೈತರುಗಳ ರುಜು)

ಬರವಣಿಗೆ ಬರುವಹಾಗಿದ್ದರೆ ಅವರ ಹೆಸರುಗಳಲ್ಲಿ ರುಜು ಹಾಕಬೇಕು.

ಕಶ್ಮಲ ನಿವಾರಣೆಗೆ ಅರ್ಜಿ.

ನಮೂನೆಯು ನಂಬರ್ ೧೦.

ರೂಚನೆ—ಜನಗಳು ವಾಸವಾಗಿರುವ ಮನೆಗಳಬಳಿ ಕಶ್ಮಲ ಜಮಾಯಿಶಿದರೆ ಅನಾರೋಗ್ಯ ಉಂಟಾಗುವದು ಇಂತಹ ಸಂದರ್ಭದಲ್ಲಿ ವಾಸಸ್ತರು ಮುನಶಿಪಾಲಿಟಿಗೆ ಆಗಲಿ ಬೋರ್ಡಿಗೆ ಆಗಲೀ ಅರ್ಜಿ ಕೊಟ್ಟು ಅನಾರೋಗ್ಯವನ್ನು ನಿವಾರಣೆ ಮಾಡಿಕೊಳ್ಳಬೇಕು

ಕನ್ನಡ ಗ್ರಂಥಾಲಯ, ವಿಶ್ವವಿದ್ಯಾಲಯ, ಹಂಪಿ

ಅರ್ಜಿ ನಮೂನೆ.

ಮುನಶಿಪಲ್ ಬೋರ್ಡ್ ವೈಸ್‌ಪ್ರೆಶಿಡೆಂಟರವರ ಸನ್ನಿಧಾನಂಗಳಿಗೆ.

………………… ಪೇಟೆ ವಾಸಸ್ತ ತಿಮ್ಮಾಜಿಗಣೇಶ ಬರೆದು ಕೊಂಡ ಅರ್ಜಿ ಅದಾಗಿ.

ಈಗ ೧ ವಾರದಿಂದಲೂ ನಮ್ಮ ಮನೆಬಳಿ ಗುಡಿಸಿದ ಕಸವನ್ನು ಸಾಗಿಸದೆ ನಮ್ಮ ಮನೆಬಳಿ ಕಸದತೊಟ್ಟಿಯಲ್ಲಿ ಹಾಕಿರುವ ಪಾಯಿಖಾನೆ ಮುಂತಾದವುಗಳು ಕೊಳತು ನಾತಬಡಿಯುತ್ತಿರುವದು. ಈ ತೊಟ್ಟಿಯ ಆಜೂಬಾಜು ಇರತಕ್ಕ ಕಕ್ಕಸುಗಳಲ್ಲಿ ಪ್ರತಿನಿತ್ಯವೂ ಬೀಳುವ ಪಾಯಖಾನೆ ಮಲಮೂತ್ರ ಮುಂತಾದುವುಗಳನ್ನು ಕಕ್ಕಸು ಗುಡಿಸುವವನು ತಂದು ತುಂಬುತ್ತಿದ್ದಾನೆ. ಕಸ ಹೊಡೆಯುವವನನ್ನು ಕೇಳಿದರೆ ಕಸ ತುಂಬುವ ಗಾಡಿಯೇ ಬರುವದೇ ಇಲ್ಲಾಯೆಂದು ಹೇಳುತ್ತಿದ್ದಾನೆ. ತೊಟ್ಟಿಯಲ್ಲಿ ಕಸ ಕೊಳತು ದುರ್ಗಂಧ ನಾತ ಹತ್ತಿರುವದು' ಇದರಿಂದ ಆರೋಗ್ಯವೂ ಬಹಳ ಕೆಟ್ಟು ಹೋಗಿದೆ. ಈ ಅರ್ಜಿ ಪರಾಂಬರಿಸಿ ಕೂಡಲೇ ಕಸವನ್ನು ತೆಗೆಶಿ ಪಾಕುಮಾಡಿಸುವದಲ್ಲದೆ ತೊಟ್ಟಿಯಲ್ಲಿನ ದುರ್ಗಂಧ ಹೋಗುವಂತೆ ತಾವು ಬಳಿಸಬೇಕೆಂದು ಪ್ರಾರ್ಥಿಸುತ್ತೇವೆ.

054035

(ಅರ್ಜದಾರರ ರುಜು)

ರೈಲ್ವೆ ಇಲಾಖೆಗೆ.

ರೈಲ್ವೆ ಟ್ರಾಫಿಕ್ ಮ್ಯಾನೇಜವರರಿಗೆ ಬರೆಯುವ ಅರ್ಜಿ ನಮೂನೆ, ಮದ್ರಾಸ್ ಮತ್ತು ಸದರ್ನ್ ಮರಾಟಾ ರೈಲ್ವೆ ಟ್ರಾಫಿಕ್ ಮ್ಯಾನೇಜರವರ ಜನಾಬಿಗೆ,

ಬೆಂಗಳೂರು ಸಿಟಿ ಚಿಕ್ಕಪೇಟೆ ನೇ ನಂಬರು ಮನೆಯಲ್ಲಿ
ವಾಸವಾಗಿರುವ ನ ಅಹವಾಲ್ ಅರ್ಜಿ ಅದಾಗಿ,

ಬೆಂಗಳೂರಿಂದ ಪೂನಾಕ್ಕೂ ಬೆಂಗಳೂರಿಂದ ಮೈಸೂರಿಗೂ ಹಿಂದುಪುರಕ್ಕೂ ಹೋಗುವ ಪ್ರಯಾಣೀಕರುಗಳಿಗಿರುವ ಕಷ್ಟಗಳನ್ನು ಸ್ವಲ್ಪಮಟ್ಟಿಗೆ ತಮ್ಮ ಚಿತ್ತಕ್ಕೆ ತರಬೇಕೆಂದು ನೆನಶಿ ಈ ಕೆಳಗಿನ ಸಂಗತಿಗಳನ್ನು ತಮ್ಮ ಗಮನಕ್ಕೆ ತಂದಿರುತ್ತೇನೆ.

ಪ್ರತಿನಿತ್ಯವೂ ತುಮಕೂರುಕಡೆ ಹೋಗುವ ಪ್ರಯಾಣೀಕರು ಹೇರಳವಾಗಿರುವದ್ದರಿಂದ ಪ್ರಯಾಣೀಕರುಗಳಿಗೆ ಸಾಕಾದಷ್ಟು ಕುಳಿತುಕೊಳ್ಳುವ

೩ ನೇಕ್ಲಾಸ್ ಗಾಡಿಗಳನ್ನು ತಗಲಿಹಾಕದಿರುವದರಿಂದ ಒಂದೊಂದು ಕಂಪಾರ್ಟ್ಮೆಂಟಿನಲ್ಲಿ ೧೧-೧೨ ಜನ ಪ್ರಯಾಣೀಕರು ಒಬ್ಬರಮೇಲೊಬ್ಬರು ಕುಳಿತುಕೊಂಡು ಕಷ್ಟಪಟ್ಟುಕೊಂಡು ಹೋಗಬೇಕಾಗಿದೆ, ಈ ತೊಂದರೆಯಿಂದ ಪ್ರನಿತ್ಯವೂ ಪ್ರಯಾಣೀಕರುಗಳಿಗೆ ಪರಸ್ಪರ ಜಗಳಗಳು ನಡೆಯುತಲೇ ಇರುವವು. ಇಲ್ಲಿಂದ ತುಮಕೂರುಪ್ರಾಂತ್ಯ ಹೋಗುವ ಪ್ರಯಾಣೀಕರ ಗಾಡಿಗಳು ಬೆಂಗಳೂರಿಂದ ಭರ್ತಿಯಾಗುತ್ತಾ ಹೋಗುತ್ತಿದ್ದಾಗ್ಯೂ ತುಮಕೂರಿನಿಂದಾಚೆ ಗಾಡಿಗಳಲ್ಲಿ ಭರ್ತಿ ಇಲ್ಲಿಗೆ ಖಾಲಿ ಹೋಗಬೇಕಲ್ಲಾ ಎಂದೆಣಿಶಿ ತಕ್ಕಷ್ಟು ಗಾಡಿಗಳನ್ನು ತಗಲಿಸುವದಿಲ್ಲವು. ಹೀಗೆ ಮಾಡುವದಕ್ಕೆಬದಲು ಬೆಂಗಳೂರಿಂದ ಎರಡು ಮೂರು ಗಾಡಿಗಳು ಜಾಸ್ತಿಯಾಗಿ ತಗಲಿಶಿ ಇದ್ದು ತುಮಕೂರಿನಲ್ಲಿ ಖಾಲಿಯಾಗುತಲೇ ಎರಡು ಹೆಚ್ಚುಗಾಡಿಗಳನ್ನು ಅಲ್ಲಿಯೇ ಬಿಟ್ಟು ಪುನಃ ಭರ್ತಿಯಾಗುತ ಹರಿಹರ ಸ್ಟೇಷನ್ವರಿಗೂ ಟ್ರೈನ್ ಸುಲಭವಾಗಿ ಹೋಗಬಹುದು ಪುನಃ ಹರಿಹರದಲ್ಲಿ ಅವಶ್ಯವಾಗುವಷ್ಟು ಗಾಡಿಗಳನ್ನು ಹುಬ್ಬಳ್ಳಿ ಧಾರವಾಡದವರಿಗೂ ತಗಲಿಶಿಕೊಂಡು ಹೋಗಬಹುದು. ಪುನಃ ಪ್ರಯಾಣೀಕರುಗಳು ಜಾಸ್ತಿ ಪ್ರಯಾಣ ಮಾಡುವಕಡೆಗಳಲ್ಲೆಲ್ಲಾ ಈ ರೀತಿ ಮಾಡಿದರೆ ಪ್ರಯಾಣೀಕರಿಗೆ ತುಂಬಾ ಸೌಲಭ್ಯವಾಗುವದು. ಖಾವಂದರವರು ಈ ಸೌಲಭ್ಯವನ್ನು ಕಲ್ಪಿಸಿಕೊಡಬೇಕಲ್ಲದೆ ಕೆಲವು ರೈಲ್ವೇ ನೌಕರರು ತಮ್ಮ ಕೆಲಸಗಳಲ್ಲಿ ಅಶ್ರದ್ಧೆಯುಳ್ಳವರಾಗಿರುವರು, ಇವರುಗಳು ತಮ್ಮ ತಮ್ಮ ಕೆಲಸಗಳನ್ನು ತಾವುತಾವು ಮಾಡುತ್ತಾಬಂದರೆ ಪ್ರಯಾಣೀಕರಿಗೂ ಪ್ರಯೋಜನವಾಗುವದು. ಕಂಪನಿಯವರಿಂದ ಇವರು ಸಂಬಳ ತೆಗದುಕೊಂಡದ್ದಕ್ಕೂ ಸಾರ್ಥಕವಾಗುವದು. ಕಂಪನಿಯಿಂದ ನೇಮಕವಾಗಿ ಇರತಕ್ಕ ನೌಕರರು ತಾವು ಮಾಡುವ ಕರ್ತವ್ಯವನ್ನು ಸರಿಯಾಗಿ ಮಾಡಿದರೆ ಪ್ರಯಾಣೀಕರುಗಳ ಫಿರ್ಯಾದು ತಮ್ಮಗಳವರಿಗೆ ಬರಬೇಕಾಗಿರಲಿಲ್ಲ. ಇದಕ್ಕೆ ಉದಾಹರಣೆ ಏನಂದರೆ:—

ಪ್ರತಿದಿನವೂ ಹೊರಡುವ ಗಾಡಿಯಲ್ಲಿ ಮೊದಲುಬಂದ ಪ್ರಯಾಣೀಕರು ತಮ್ಮಗಳ ಮನಸ್ಸುಬಂದಂತೆ ಪ್ರಥಮದಲ್ಲಿ ಯಾರನ್ನೂ ಶೇರಿಸದೆ ಕುಳಿತುಕೊಂಡು ಅನಂತರ ಜನಗಳುಬಂದು ಗಾಡಿಹೊರಡುವ ಕಾಲವು ಸಮೀಪಿಸುತ್ತಾಬಂದರೆ ರೈಲ್ವೆ ನೌಕರರು ಪ್ರಯಾಣೀಕರು ನೂಕುಮುಗ್ಗಲಾಗಿ ಗಾಡಿಗಳ ಬಾಗಿಲನ್ನುತೆರೆದು ಒಂದೊಂದುಗಾಡಿಯಲ್ಲಿ ಕ್ಲುಪ್ತಕಿಂತಲೂ ಜಾಸ್ತಿ ಜನಗಳನ್ನು ತುಂಬುತ್ತಾರೆ. ಇದರಿಂದ ಜನಗಳಿಗೆ ಕಷ್ಟವಾಗುವದು. ಹಾಗಿಲ್ಲದ ಗಾಡಿ ಫಾರಂ ಆಗುತಲೇ ಒಬ್ಬ ರೈಲ್ವೇ ನೌಕರನು ಗಾಡಿಬಳಿನಿಂತುಕೊಂಡು ಒಂದೊಂದು ಗಾಡಿಯನ್ನೇ ಕ್ಲುಪ್ತವಾದ ಸಂಖ್ಯೆಯಿಂದ ಭರ್ತಿಮಾಡುತ್ತಾ ಬಂದರೆ ಆಖೈರಿಗೆ ಜನನಿಂತರೆ ಬೇಕಾದಷ್ಟು ಗಾಡಿಗಳನ್ನುಹಾಕಬಹುದು.

ಮುಂದೆ ಯಾದರೂ ಈ ಏರ್ಪಾಡು ಮಾಡುವಂತೆ ತಮ್ಮ ಇಲಾಖೆಯವರಿಗೆ ಅಪ್ಪಣೆ ಮಾಡಬೇಕೆಂದು ನನ್ನ ಕೋರಿಕೆ.

ಅರ್ಜಿದಾರರ ರುಜು.
ಮನೆ ನಂಬರು.
ಪೇಟೆ.
ಗ್ರಾಮ.

ತಾ॥ ಕಲಂ॥ ತಮ್ಮ ನೋಟೀಶಿಗೆ ತರತಕ್ಕ ಆಂಶಗಳು ಇನ್ನೂ ಅನೇಕವಾಗಿವೆ ಅವುಗಳನ್ನೆಲ್ಲಾ ಮತ್ತೊಂದಕಾಲ ವಿಶೇಷದಲ್ಲಿ ಅರಿಕೆ ಮಾಡಿಕೊಳ್ಳುವೆವು.

(ಚಿಕ್ಕದಸ್ಕತ್ತು.)

ದೇವಸ್ಥಾನ ಜೀರ್ಣೋದ್ಧಾರಕ್ಕೆ ಅರ್ಜಿ.

ನಮೂನೆಯ ನಂಬರ್ ೨.

ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರ್
ಸಾಹೇಬರವರ ಜನಾಬಿಗೆ.

.. . .

ಅರ್ಜಿ ಅದಾಗಿ.

ಈ ಗ್ರಾಮದ ಗುಡೀಗೆ ಅಕಸ್ಮಾತ್ತಾಗಿ ಬೆಂಕಿಬಿದ್ದು ಹೊರಗಿನ ಪ್ರಕಾರವೆಲ್ಲಾ ಹೋದತಿಂಗಳು ಸಂಪೂರ್ಣವಾಗಿ ಸುಟ್ಟು ಹೋಯಿತು. ಇದರಿಂದ ಸಾವಿರಾರು ರೂಪಾಯಿ ನಷ್ಟವಾಗಿ ಹೋಯಿತು. ಪುನಃ ಅದನ್ನು ಕಟ್ಟಿಸುವುದಕ್ಕೆ ಗ್ರಾಮಸ್ಥರೆಲ್ಲರೂಸೇರಿ ೫೦೦ ರೂಪಾಯಿಯನ್ನು ಕೂಡಹಾಕಿಕೊಂಡು ಇದ್ದೇವೆ ಸರ್ಕಾರದಿಂದ ೫೦೦ ರೂಪಾಯಿಗಳನ್ನು ಮುಫತ್ತಾಗಿ ಕೊಡಿಶಿಕೊಟ್ಟರೆ ತಾವು ಈ ದೇವಸ್ಥಾನವನ್ನು ಜೀರ್ಣೋದ್ಧಾರ ಮಾಡಿದಂತಾಗುತ್ತದೆ. ಖಾವಂದರವರು ಪರಾಮರಿಕೆಯಿಂದ ಈ ಗ್ರಾಮದವರಮೇಲೆ ಅಭಿಮಾನ ವಿಟ್ಟು ಇದನ್ನು ಕೊಡಿಸಿಕೊಡಬೇಕೆಂದು ಬೇಡಿಕೊಳ್ಳುತ್ತೇನೆ.

ರುಜು. ....

ಕಂದಾಯ ಕಮ್ಮಿಗೆ ಅರ್ಜಿ.

ನಮೂನೆಯು ನಂಬರ್ ೩.

ದಾರ್ವಾಡಜಿಲ್ಲಾ ಕಲೆಕ್ಟರ್ ಸಾಹೇಬರವರ ಜನಾಬಿಗೆ.

ಸನ್ ೧೯೧೬ನೇ ಇಸವಿ ಜುಲೈತಾರೀಖು ೪ ರಲ್ಲಿ ಹಾವೇರಿ ತಾ॥
ಹಳ್ಳಿಯಲ್ಲಿರುವ ಬಸಪ್ಪಶೆಟ್ಟಿಯು ಬರೆದುಕೊಂಡ
ಮನವೆ ಅರ್ಜಿ ಅದಾಗಿ.

ನಮ್ಮ ತಾಲೂಕ್ ಮಾಮ್ಲತ್‌ದಾರ್ರವರು ಇಲ್ಲಿಗೆ ಡಯಮಾಡಿ ಜಮಾಬಂದಿ ಮಾಡುವಲ್ಲಿ ನನ್ನವ್ಯಾಪಾರದಿಂದ ನನಗೆ ಸಾಲೀಯಾನಾ ೨,೦೦೦ ಸಾವಿರ ರೂಪಾಯಿ ಆದಾಯವಿದೆ ಎಂಬ ಅಂದಾಜಿನಮೇಲೆ ನನಗೆ ಆದಾಯದ ತೆರಿಗೆ (ಇನ್‌ಕಂಟ್ಯಾಕ್ಸ್) ಯನ್ನು ದಾಖಲ್‌ಮಾಡಿರುತ್ತಾರೆ. ನನ್ನ ವ್ಯಾಪಾರದ ಲೆಕ್ಕವನ್ನು ಕ್ರಮವಾಗಿ ಇಟ್ಟಿದ್ದೇನೆ. ಇದನ್ನು ತರಿಸಿಕೊಂಡು ನೋಡದೆ ನನಗೆ ದ್ವೇಷಿಗಗಳಾದ ಕೆಲವರು ಮಾತನ್ನು ನಂಬಿಕೊಂಡು ಮಾಮ್ಲೇದಾರ್ರವರು ಅನ್ಯಾಯಮಾಡಿರುತ್ತಾರೆ, ನನಗೆ ಹೋದವರ್ಷವೂ ಮತ್ತು ಹಿಂದಿನ ಯಾವವರ್ಷವೂ ೫೦೦ ರೂಪಾಯಿಗೆ ಮೀರಿದ ಲಾಭ ಬರಲಿಲ್ಲ ಖಾವಂದರ ಪರಾಮರಿಕೆಯಬಗ್ಗೆ ನನ್ನ ಲೆಕ್ಕದ ಬುಕ್ಕುಗಳನ್ನು ಹಾಜರ್ಮಾಡಿರುತ್ತೇನೆ. ಇದನ್ನು ಚನ್ನಾಗಿ ವಿಚಾರಿಸಿ ಧರ್ಮಪ್ರಭುಗಳು ನನಗೆ ಅನ್ಯಾಯವಾಗಿದಾಖಲಾಗಿರುವ ತೆರಿಗೆಯನ್ನು ವಜಾಮಾಡಿಸಬೇಕೆಂದು ಅತ್ಯಂತ ವಿಧೇಯನಾಗಿ ಬೇಡಿಕೊಳ್ಳುತ್ತೇನೆ

(ಬಸಪ್ಪಶೆಟ್ಟಿ ರುಜು.

ನೌಕರಿಗೆ ಅರ್ಜಿ.

ನಮೂನೆಯು ನಂಬರ್ ೪.

.......................ಡಿಸ್ಟ್ರಿಕ್ಟ್ ಮುಜರಾಯಿ ಆಫೀಸರವರ
..................................ಜನಾಬಿಗೆ...................................
ಬೇಲೂರು........ ....ಭಟ್ಟನ ಅರ್ಜಿ.

ಸ್ವಾಮಿ! ಬೇಲೂರು ದೇವಸ್ಥಾನದ ಧರ್ಮದಪ್ಠಿಕೆ ರುದ್ರಾಭಿಷೇಕಕ್ಕೋಸ್ಕರ ನೇಮಿಸಿರುವ ಕೆಲಸವು ಈಗ ಖಾಲಿ ಇದೆ ಎಂದು ಕೇಳೀತ್ತೇನೆ. ನನಗೆ ಯಜುರ್ವೇದದಲ್ಲಿ ಘನಾಂತವಾಗಿದ್ದರೂ ಅಧ್ಯಯನ ಓದಿದವನಿಗೆ ಮಧ್ಯಾಹ್ನಕ್ಕೆ ಹಿಟ್ಟಿಲ್ಲವೆಂಬ ನುಡಿ ನನ್ನಲ್ಲಿಯೇ ಸಾರ್ಥಕ್ಯವನ್ನು ಹೊಂದಿದೆ.

ಈ ದರಿದ್ರಕ್ಕೆ ತಕ್ಕಂತೆ ನಾಲ್ವರು ಹೆಣ್ಣುಮಕ್ಕಳು ಮೂವರ ಗಂಡುಮಕ್ಕಳು ಚಿಕ್ಕವರು ಕಿತ್ತುಕೊಂಡು ತಿನ್ನುತ್ತಿರುವುದರಿಂದ ನನ್ನ ಕಷ್ಟವನ್ನು ಸರಿಯಾಗಿ ಅರಿಕೆ ಮಾಡಿಕೊಳ್ಳಲು ಅಶಕ್ತನಾಗಿದ್ದೇನೆ ಬ್ರಾಹ್ಮಣರ ಪೋಷಣಾರ್ಥವಾಗಿ ಏರ್ಪಡಿಸಿರುವ ಈ ಕೆಲಸಕ್ಕೆ ನನ್ನನ್ನು ನೇಮಿಸಿದರೆ ಭಕ್ತಿಯಿಂದ ದೇವರಸೇವೆಯನ್ನು ನೆರವೇರಿಸಿಕೊಂಡು ತಮ್ಮ ಶ್ರೇಯಃ ಪ್ರಾರ್ಥನೆಯನ್ನು ಮಾಡಿಕೊಂಡು ಒಂದುಹೊತ್ತಿನ ಅನ್ನವಸ್ತ್ರಾದರೂ ಉಂಟು ಮಾಡಿಕೊಳ್ಳುತ್ತೇನೆ.

ಸ್ವಪ್ರಶಂಶೆಯನ್ನು ಹೇಳಿಕೊಳ್ಳೊಂಡರೆ ಪ್ರಯೋಜನವಿಲ್ಲವಾಗಿ ನನ್ನ ವಿಷಯವಾಗಿ ತಾಲ್ಲುಕು ಸುಭೇದಾರರ ಮೂಲಕ ತಾವು ವಿಚಾರಣೆ ನಡಿಸಿಕೊಳ್ಳಬಹುದೆಂದು ಬೇಡಿಕೊಳ್ಳುತ್ತೇನೆ.

ರುಜು. ಶಾ॥ L. B. ಭಟ್ಟ.

ನಮೂನೆಯ ನಂಬರ್ ೫.

ಜಮೀನುದಾರನ ದರಖಾಸ್ತು.

೨ನೇವಿಧ.

ಕೋಲಾರ ತಾಲ್ಲೂಕು ಕಚೇರಿಗೆ.

ಈ ತಾಲ್ಲೂಕು ಕಸಬಾ ಬಾರಂಡಳ್ಳಿ ಹೋಬಳಿ ದಿಬ್ಬಹಳ್ಳಿಯ ಗ್ರಾಮದ ರಾಘುವಯ್ಯನ ದರಖಾಸ್ತು.

ಈ ಗ್ರಾಮದಲ್ಲಿ ಈಗ ಸರ್ಕಾರೀ ಬಂಜರಾಗಿರುವ ಕೆಳಗೆ ವಿವರಿಸಿರುವ ಜಮೀನನ್ನು ಸಾಗುವಳಿಗೆ ಪಡೆದುಕೊಳ್ಳಲು ನಾನು ಆಪೇಕ್ಷೆಯುಳ್ಳವನಾಗಿರವದ್ದರಿಂದ ದಯವಿಟ್ಟು ಅದನ್ನು ನನಗೆ ಈ ಸಾಲು ಲಾಗಾಯಿತು ಕೊಡಿಸಬೇಕೆಂದು ಬೇಡಿಕೊಳ್ಳುತ್ತೇನೆ.

ಜಮೀನಿನ ವಿವರ;—ಸರ್ವೆನಂಬರು ಎಕ್ರೆ|೨೫ ಕಂದಾಯ ೨೩ ರೂ. ಇದಕ್ಕೆ ಚಕ್ಕುಬಂದಿ—ಪುರ್ವಕ್ಕೆ ನೇ ನಂ॥ ಹೊಲ, ಪಶ್ಚಿಮಕ್ಕೆ ನೇನಂಬರು, ಉತ್ತರಕೆ ೪ನೇ॥ ನಂ॥ ಬಾಗಯಿತು. ದಕ್ಷಿಣಕ್ಕೆ ರಾಮುಪುರದ ರಸ್ತೆ.

ಪ್ರತಿವರ್ಷವೂ ಸರ್ಕಾರಕ್ಕೆ ನಿಬಂಧನೆಯಾಗಿರುವ ಕಂದಾಯ ಕೊಡವುದು ಮುಂತಾದ ಮಾಮೂಲಿನ ಷರತ್ತುಗಳಿಗೆ ಬದ್ಧನಾಗಿರುವೆನೆಂದು ಒಪ್ಪಿ ಇದಕ್ಕೆ ರುಜುಮಾಡಿದ್ದೇನೆ.

೧೫ ನೇ ಜನವರಿ ೧೮೯೨.

(ರುಜು)

ಸರ್ವೆ ನಂಬರು ಗೊತ್ತಾಗಿರುವಾಗ ಚಕ್ಕುಬಂದಿ ಬರೆಯುಬೇಕೆಂಬ ಅವಶ್ಯಕತೆ ಇಲ್ಲ. ಮುಖ್ಯವಾಗಿ ಜಮೀನು ಇಂತಾದ್ದೆಂದು ತಿಳಿದರೆ ಸಾಕು.

ಪೋಡಿಗೆ ಅರ್ಜಿ.

ನಮೂನೆಯು ನಂಬರ್ ೬.

ಅಷ್ಟಗ್ರಾಮದ ತಾಲ್ಲೂಕ್ ಅಮಲ್ದಾರರವರ

ಸನ್ನಿಧಾನಕ್ಕೆ.

....

ಮಲ್ಲಪ್ಪನ ಅರ್ಜಿ.

ಈ ಗ್ರಾಮದಲ್ಲಿ ನನ್ನ ಹಿಡುವಳಿಯಲ್ಲಿರುವ ಖುಷ್ಕಿ ೫೦ ನೇ ನಂಬರು ಜಮೀನಿನಪೈಕಿ ಉತ್ತರದಿಕ್ಕಿನಲ್ಲಿ ೨ ಎಕ್ರೆಯುಷ್ಟು ದೊಡ್ಡಕೆರೆಯ ನೀರಿನಿಂದ ತರೀಸಾಗುವಳಿಗೆ ಲಾಯಖ್ಖಾಗಿದೆ. ದಯವಿಟ್ಟು ಇದನ್ನು ಪೋಡ್ ಮಾಡಿಸಿ ಇದಕ್ಕೆ ತರೀದರ ದಾಖಲ್ಮಾಡಿಸಿ ಕೊಡಬೇಕೆಂದು ಬೇಡಿಕೊಳ್ಳುತ್ತೇನೆ.

೫ ನೇ ಮಾರ್ಚಿ ೧೮೯೦.

(ರುಜು) ಮಲ್ಲಪ್ಪ

ಫೋಡ್ ಮಾಡುವುದೆಂದರೆ ಜಮೀನನ್ನು ಭಾಗಮಾಡಿ ಅದಕ್ಕೆ ಬೇರೆ ನಂಬರು ದಾಖಲ್ಮಾಡುವುದು.

ಜಮೀನಿನ ರಾಜೀನಾಮೆ.

ನಮೂನೆಯು ನಂಬರ್ ೧. ನಂ .೭.

....ಅಮಲ್ದಾರರವರ

ಸ ನ್ನಿ ಧಾ ನ ಕ್ಕೆ.

ಇದರ ಕೆಳಗೆ ನಮೂದಾಗುವ ಜಮೀನಿನ ಹಿಡುವಳೀದಾರನಾದ ... . ಡಿಸ್ಟ್ರಿಕ್ಟ್ .... ತಾಲ್ಲೂಕ್ .... ಗ್ರಾಮದ ವಾಸಸ್ಥನಾದ ಗೌಡನ ಮಗ ಗೌಡನೆಂಬ ನಾನು ಸದರೀ ಜಮೀನಿನ ಹಿಡುವಳಿಯನ್ನು ಬಿಟ್ಟಿರುತ್ತೇನೆಂದು ಇದಕ್ಕೆ ನಾನು ರುಜುಮಾಡಿ ಇದರ ಮೂಲಕ ತಿಳಿಯಪಡಿಸಿರುತ್ತೇನೆ.

ಜಮೀನಿನ ವಿವರ.

ತಾಲ್ಲೂಕು.	ಹೋಬಳಿ.	ಗ್ರಾಮ.	ಸರ್ವೆ ನಂಬರು.	ಪೋಟ್ ನಂಬರು.	ಚಕ್ಕುಬಂದಿ.	ಖುಷ್ಕಿ ತರಿ ಅಥವಾ ಬಾಗಾಯತು.	ವಿಸ್ತೀರ್ಣ.		ಅಕಾರ.		
೧	೨	೩	೪	೫	೬	೭	೮		೯		
							ಎಕರೆ.	ಗುಂಟೆ	ರೂ.	ಆ.	ಪೈ.

ತಾರೀಖು ನೇ ಮಾರ್ಚಿ ೧೯ .

ಈ ರಾಜೀನಾಮೆಯನ್ನು ಬರೆದುಕೊಟ್ಟವನು ಅದರಲ್ಲಿ ವಿವರಿಸಿರುವ ಗೌಡನೇ ಎಂದು ನಾವು ಬಲ್ಲೆವು. ಅವನು ನಮ್ಮ ಸಮಕ್ಷಮದಲ್ಲಿ ರುಜು ಮಾಡಿದ್ದಾನೆ.

ಸಾಕ್ಷಿಗಳು.

....

....

ಜಮೀನಿನ ಗುರ್ತು ಇತರವಿಧವಾಗಿ ತಿಳಿಯದಿದ್ದರೆ ಚಕ್ಕುಬಂದಿಯನ್ನು ೬ ನೇ ಸಂಖ್ಯೆಯ ಮನೆಯನ್ನು ಬರೆಯಬೇಕು.

ಆಕಾರ ಅಂದರೆ ಲೆಕ್ಕದಲ್ಲಿ ಜಮೀನಿಗೆ ದಾಖಲಾಗಿರುವ ಕಂದಾಯದ ಮೊಬಲಗು.

ವರ್ಗ ರಾಜೀನಾಮೆ.

ನಮೂನೆಯ ನಂಬರ್ ೪.

....ಅಮಲ್ದಾರ್ರವರ

ಸಮಕ್ಷಮಕ್ಕೆ.

ಇದರಕೆಳಗೆ ನಮೂದಿಸುವ ಜಮೀನಿನ ಹಿಡುವಳಿದಾರನಾದ
ಡಿಸ್ಟ್ರಿಕ್ಟು ತಾಲ್ಲೂಕು
ಗ್ರಾಮದ ವಾಸಸ್ಥನಾದ ಗೌಡನ ಮಗನಾದ ಗೌಡ ನೆಂಬ ನಾನು ಸದರೀಜಮೀನಿನ ಹಿಡುವಳಿಯನ್ನೂ ಇದರ ಸಂಬಂಧವಾದ ವಿಶಿಷ್ಟ ಹಕ್ಕನ್ನೂ ಸದರ ತಾಲ್ಲೂಕು ಗ್ರಾಮದ ಗೌಡನ ಮಗ ಗೌಡನಿಗೆ ಈ ತಾರೀಖು ಲಾಗಾಯಿತು ವರ್ಗ ಕೊಟ್ಟಿದ್ದೇನೆಂದು ಇದರ ಮೂಲಕ ತಿಳಿಯಪಡಿಸಿದ್ದೇನೆ. ಈ ಅರ್ಥಕ್ಕೆ ನಾನು ಇದರ ಕೆಳಗೆ ರುಜು ಮಾಡಿದ್ದೇನೆ.

ತಾರೀಖು ನೇ ಮಾಹೆ ಸನ್ ೧೯೧೬ ನೆಯ ಇಸವಿ

(ರುಜು) ರಾಮೇಗೌಡನ ಮಗ ಶಿಂಗರಿಗೌಡ.

ಸಾಕ್ಷಿಗಳು.

೧.

೨.

ನಮೂನೆಯು ನಂಬರ್ ೯.

ಗ್ರಾಮದ ಗಸ್ತಿನ ವಿಷಯದ ಅರ್ಜಿ.

ಸೂಚನೆ:—

ಸರ್ಕಾರದವರು ಪ್ರಜೆಗಳ ಯೋಗಕ್ಷೇಮಕ್ಕಾಗಿಯೇ ಪಟೇಲ್ ಶ್ಯಾನುಭೋಗರು, ಶೇಕದಾರರು ಮುಂತಾದ ರೆವಿನ್ಯು ಅಧಿಕಾರಿಗಳನ್ನು ಪೋಲೀಸ್ ಇಲಾಖೆಯನ್ನು ಏರ್ಪಡಿಸಿರುಲರು ಈ ಅಧಿಕಾರಿಗಳಲ್ಲಿ ಕೆಲವರು ಯಾವದೋಒಂದು ಆಶಯದಿಂದ ಪ್ರಜೆಗಳಲ್ಲಿ ಪಕ್ಷಪಾತ ನಡಿಸುವದುಂಟು. ಅಂತಹ ಅಂಶಗಳನ್ನು ಮೇಲ್ಪಟ್ಟ ಅಧಿಕಾರಿಗಳಿಗೆ ತಿಳಿಸಿದ ಹೊರತು ಪ್ರಜೆಗಳ ಕಷ್ಟವು ನಿವಾರಣೆ ಆಗುವದಿಲ್ಲವು. ಅಂತಹ ಸಂದರ್ಭಗಳಲ್ಲಿ ಮೇಲ್ಪಟ್ಟವರಿಗೆ ಅರಿಕೆ ಮಾಡಿಕೊಳ್ಳಬೇಕಾದ ಒಂದೆರಡು ಅಂಶಗಳನ್ನು ಇಲ್ಲಿ ನಮೂದಿಸಿರುವೆವು.

ಕುಣಿಗಲ್ ತಾಲ್ಲೂಕು ಅಮಲ್ದಾರ್ರವರ ಜನಾಬಿಗೆ.

ಸನ್ ಮಾಹೆ ತಾರೀಖಿನಲ್ಲಿ ಈ ಕೆಳಗೆ ರುಜುಮಾಡಿದ ಗ್ರಾಮದ ರೈತರ ಅಹವಾಲ್ ಅರ್ಜಿ ಏನಂದರೆ ಅದಾಗಿ—

ಈಗ್ರಾಮದಲ್ಲಿ ಎಲ್ಲಾ ಕೋಮಿನವರಿಂದಲೂ ೩೫ ಮನೆಗಳಿವೆ. ಎರಡು ಮನೆಗಳಲ್ಲಿ ಗಂಡಸರು ಇಲ್ಲ. ಒಬ್ಬರಿಬ್ಬರು ಹೆಂಗಸರು ಸಣ್ಣ ಸಣ್ಣ ಮಕ್ಕಳುಗಳು ಮಾತ್ರ ಇರುವರು. ಬಾಕಿ ೩೩ ಮನೆಗಳವರು ಚಾವಡಿಯಲ್ಲಿ

ಸದರಿ ವೇರೆ ಮಲಗಬೇಕೆಂದು ಗೊತ್ತುಮಾಡಿ ಇದ್ದಾರೆ. ಪೋಲಿಸ್ ದಫೆದಾರರು ಗೊತ್ತುಮಾಡಿದ ಪಟ್ಟೀಪ್ರಕಾರ ಕೆಲವರು ಮಲಗುವದಕ್ಕೆ ಬರುವದೇ ಇಲ್ಲಾ. ಗ್ರಾಮದ ತಳವಾರನು ಪ್ರತಿರಾತ್ರಿಯಲ್ಲಿಯು ೨ ಸಲ ತಪಟೆಯೊಡನೆ ಊರೆಲ್ಲಾ ಗಸ್ತುಮಾಡುವಂತೆ ನೇಮಕವಾಗಿತ್ತು. ಆರೀತಿ ಸ್ವಲ್ಪ ದಿನಗಳು ನಡೆಯಿತು, ಈಚೆಗೆ ಆ ತಪಟೆಗಸ್ತು ನಿಂತುಹೋಯಿತು. ಅರ್ಧ ರಾತ್ರಿಯಲ್ಲಿ ತಪಟೆಯ ಶಬ್ದವಾಗುತ್ತಿದ್ದುದರಿಂದ ಜನಗಳು ಎಚ್ಚರಿಕೆಯಾಗಿರುತ್ತಿದ್ದರು. ಈಗ ಒಂದೆರಡು ತಿಂಗಳು ಲಾಗಾಯಿತು ಆ ಪದ್ಧತಿಯು ಇಲ್ಲದೇಹೋದುದರಿಂದ ಕಳ್ಳರಭಯವು ದಿನೇದಿನೆ ಹೆಚ್ಚುತ್ತಲಿದೆ. ಮೊನ್ನೆ ದಿವಸ ಇದೇಗ್ರಾಮದ ಚಾವಡಿ ಹಿಂದಣ ಮುದ್ದರಂಗಯ್ಯನ ಮನೆ ಚಿಲಕದ ಬಳಿ ಯಾರೋ ಕಳ್ಳರು ತೂತುಕೊರದು ಹೊರಗಿನಿಂದ ಚಿಲುಕ ತೆಗದರು. ಆಪಳಗಾಗಿ ಮನೆಯವರು ಜಲಶಂಕೆಗಾಗಿ ಈಚೆಗೆ ಬಂದ ಶಬ್ದವನ್ನು ಕಳ್ಳರು ನೋಡಿ ಓಡಿಹೋದರು. ಈ ಗ್ರಾಮದಸ್ಥಿತಿ ಈರೀತಿಯಾಗಿರುವದ್ದರಿಂದ ಖಾವಂದರವರು ಪೂರ್ವಮೂಲಿನಂತೆ ಗ್ರಾಮದಲ್ಲಿ ತಳವಾರ ಸರಿಯಾಗಿ ತಪಟೆಗಸ್ತುಮಾಡುವಂತೆ ಅಪ್ಪಣೆ ಆಗಬೇಕೆಂದು ಪ್ರಾರ್ಥಿಸುತ್ತೇವೆ.

ಅರ್ಜಿದಾರರ ರುಜುಗಳು

ಬರೆಯುವದಕ್ಕೆಬರದವರು ಎಡಗೈ ಹೆಬ್ಬೆಟ್ಟಿನ ಗುರ್ತನ್ನುಮಶಿಯಿಂದ ಒತ್ತಬೇಕು.

ರೆವಿನ್ಯೂ ನಮೂನೆ ನಂಬರ್ ೧೦.

ಮರದಮಾಲ್ಕಿ ಅರ್ಜಿ.

ಸೂಚನೆ.—ಕಂದಾಯದ ಹೊಲಗಳಲ್ಲಿರುವ ಗಿಡ ಮರಗಳಪೈಕಿ ಕೆಲವು ಗಿಡ ಮರಗಳು ಸರಕಾರಕ್ಕೂ ರೈತರಿಗೂ ಸಹಾ ಇರುವದು. ಇಂಥಾಸಂದರ್ಭದಲ್ಲಿ ಸರಕಾರದ ಮರವನ್ನು ತಮ್ಮ ಕಂದಾಯಕ್ಕೇನೆ ಶೇರಿಸಿಕೊಳ್ಳಬೇಕಾದವರು ಈ ಕೆಳಗಿನ ನಮೂನೆಯಂತೆ ರೆವಿನ್ಯೂ ಸರ್ವೆ ಇಲಾಖೆಗೂ. ಅಮಲ್ದಾರ್ರವರಿಗೂ ಅರ್ಜಿ ಕೊಡಬೇಕು.

ಅರ್ಜಿ ನಮೂನೆ.

ಮಾಗಡಿ ತಾಲ್ಲೂಕು ಅಮಲ್ದಾರ್ರವರ ಜನಾಬಿಗೆ.

ತಾಲ್ಲೂಕು ಮುಜಕೂರು ಹೋಬಳಿ

ಗ್ರಾಮದ ರೈತ ನೆಂಬುವನು ಬರೆದುಕೊಂಡ ಅಹವಾಲ್ ಅರ್ಜಿ ಏನಂದರೆ,— ಅದಾಗಿ ನನ್ನ ಹೆಸರಿನಲ್ಲಿ ಖಾತೆ ಇರುವ ನೆ ನಂಬರು

ಜಮೀನನ್ನು ನಾನು ಕಂದಾಯಕ್ಕೆ ಪಡೆದಾಗ ಒಂದು (ಇಲ್ಲಿ ಮರದಜಾತಿ) ಮರವನ್ನು ಸರಕಾರಕ್ಕೆ ಉಳಿಸಿಕೊಂಡು ನನಿಗೆ ಕಂದಾಯಕ್ಕೆ ಕೊಟ್ಟರು. ಈ ಮರವು ಸಾಗುವಳಿ ಜಮೀನಿನ ಮಧ್ಯೆ ಇರುವದರಿಂದ ಇದರ ಇಛಲಿನಿಂದ ಸುಮಾರು ೨೫ ಗುಂಟೆ ಜಮೀನಿನಲ್ಲಿ ಬೆಳೆ ಆಗದೆ ಪ್ರತಿವರುಷವೂ ಇಟ್ಟ ಫಸಲ್ ಕೆಟ್ಟುಹೋಗಿ ನನಿಗೆ ನಷ್ಟವಾಗುತ್ತಿರುವದು- ಈರೀತಿ ನಾನು ಜಮೀನು ಮಾಡಿಕೊಂಡಲಾಗಾಯಿತು ನನಿಗೆ ಬಹಳ ನಷ್ಟವಾಗುತ್ತಿರುವದು. (ಮತ್ತು ಈ ಮರದಲ್ಲಿ ಸರ್ಕಾರಕ್ಕೆ ಹಸರುವಣಿ ಹುಟ್ಟುವಳಿ ಆಗುತ್ತಾ ಪ್ರತಿವರುಷವೂ ಬಟಾಯಿ ಅಮರಾಯಿ ಇಜಾರೆದಾರರು ಫಸಲ್ ರೂಡಿಸಿಕೊಳ್ಳುವಕಾಲದಲ್ಲಿ ಸದರಿ ಜಮೀನಿನಲ್ಲಿ ಇಟ್ಟ ಫಸಲನ್ನು ತುಳಿದು ನಷ್ಟವಾಗುತ್ತಿರುವದು. ಆದ್ದರಿಂದ ಗೌರ್ನಮೆಂಟ್ ರೂಲ್ಸ್ ಪ್ರಕಾರ ಈಮರದ ಮಾಲ್ಕಿಯನ್ನು ನನ್ನಿಂದ ತೆಗದುಕೊಂಡು ಮರವನ್ನು ನನ್ನ ಹೆಸರಿಗೇಸೇರಿಸಿ ಸರ್ಕಾರದ ಲೆಖ್ಖಗಳಲ್ಲಿಯೂ ಅದೇರೀತಿ ದಾಖಲ್ಮಾಡಿಸಿ ನನಿಗೆ ಉಂಟಾಗುತ್ತಿರುವ ನಷ್ಟವನ್ನು ಉಳಿಸಿಕೊಡಬೇಕೆಂದು ಪ್ರಾರ್ಥಿಸುತ್ತೇನೆ.

ತಾರೀಖು   ಅರ್ಜಿದಾರನ ರುಜು.

ಗ್ರಾಮ   ಹೋಬಳಿ   ತಾಲ್ಲೂಕು

ರಸ್ತೆ ಹಾಕಿಸಿಕೊಳ್ಳುವದಕ್ಕೆ ಅರ್ಜಿ.

(ಮೈಸೂರು ಶೀಮೆಯಾದರೆ ದಿವಾನರವರು)

ಕುಂಪಣಿಶೀಮೆ ಆದರೆ ಮದ್ರಾಸ್ ಬೊಂಬೈ ಜಿಲ್ಲಾ ಗೌರ್ನರ್ ಅಥವಾ ಕಲೆಕ್ಟರವರಿಗೆ ಅರ್ಜಿ ಬರೆದುಕೊಳ್ಳಬೇಕು.

ಅರ್ಜಿ ನಮೂನೆ.

ಘನನನ್ನು ಹೊಂದಿದ ಬೊಂಬೈ ಗೌರ್ನರವರ ಜನಾಬಿಗೆ.

ಡಿಸ್ಟ್ರಿಕ್ಟ   ತಾಲ್ಲೂಕು   ಮಾಗಣಿ

೧-೨-೩-೪-೫-೬ ೭-೮ ೯-೧೦ ೧೧-೧೨-೧೩-೧೪-೧೫-೧೬ ಗ್ರಾಮಗಳ

ನಿವಾಶಿಗಳು ವಿನಯಪೂರ್ವಕವಾಗಿ ಜಾಹಿರ್ಮಾಡುವ ಅಹವಾಲ್ ಅರ್ಜಿ ಅದಾಗಿ. ಡಿಟೋ ಗ್ರಾಮಕ್ಕೆ   ಊರಿಂದಾ   ಗೆ ರಸ್ತೆಯಿಲ್ಲದೆ ಈ ಕೆಳಗೆ ರುಜು ಹಾಕಲ್ಪಟ್ಟ ಜನಗಳು ಗ್ರಾಮಗಳ ಸಂಚಾರಕ್ಕೂ ಗಾಡಿಗಳ ಆಮದ್‌ರಫ್ತಿಗೂ ಬಹಳ ಕಷ್ಟವಾಗಿದೆ. ನಮ್ಮಗಳ ವ್ಯವಸಾಯೋಪಕರಣಗಳನ್ನು ಸಾಗಿಸುವದಕ್ಕೂ ನಾವು ಬೆಳೆಸ ದವಸವನ್ನು ಕಸ

ಬೆಗಳಲ್ಲಿ ಮೂರಿ ಸರ್ಕಾರದ ಕಂದಾಯ ವಗೈರೆ ಕಟ್ಟುವದಕ್ಕೂ ಬಹಳ ಅನಾನುಕೂಲವಾಗಿರುವದು. ಈ ಅರ್ಜಿಯಲ್ಲಿ ಮೇಲೆ ನಮೂದಿಸಿರುವ ೧೬ ಗ್ರಾಮಗಳ ರೈತರಾದ ನಾವುಗಳು ವರ್ಷ ೧ಕ್ಕೆ ೩೭೬೫೩ ರೂಪಾಯಿಗಳು ಫಿಕ್ಸ್ಡ ಜಮೀನ್ ಕಂದಾಯಮಾತ್ರ ಕೊಡುತ್ತಾ ಇರುವೆವು. ಈ ರೂಪಾಯಿಗಳಿಗೆ ರೂಪಾಯಿ ೧ಕ್ಕೆ ಒಂದಾಣೆಯಂತೆ ಲೋಕಲ್ ಸೆಸ್ ಪ್ರತ್ಯೇಕವಾಗಿ ಕೊಡುತ್ತಾ ಇರುವೆವು. ಈರೀತಿ ಈಗ ಸರ್ವೆ ಆದಲಾಗಾಯಿತು ೩೦ ವರುಷಗಳಿಂದ ಕೊಟ್ಟರತಕ್ಕದ್ದು ೭೦೫೯೯—೦—೦ ಆಗಿರುವದು. ಇದಕ್ಕಾಗಿ ಘನವುಳ್ಳ ಸರಕಾರದವರು ಈ ೧೬ ಗ್ರಾಮಗಳಿಗಾಗಿ ೧೬ ಸಾವಿರ ರೂಪಾಯಿಗಳು ಮಾತ್ರ ಖರ್ಚು ಮಾಡಿರುವರು. ಅವು ಯಾವ್ಯಾವಗಳೆಂದರೆ — ಈ ಮೇಲ್ಕಂಡ ೧೬ ಗ್ರಾಮಗಳಲ್ಲಿ ೬ ಗ್ರಾಮಗಳಲ್ಲಿ ಪಾಠಶಾಲೆಗಳಿರುವವು. ಇದಕ್ಕಾಗಿಯೂ ೭-೮ ಗ್ರಾಮಗಳಲ್ಲಿ ಕುಡಿಯುವ ನೀರಿನ ಭಾವಿಗಳು ತೆಗೆಯುವದಕ್ಕಾಗಿಯೂ ಚಾವಡಿಗಳನ್ನು ದುರಸ್ತು ಮಾಡಿಸಿದ್ದಕ್ಕೂ ಇತರ ಚಿಲ್ಲರೆ ಕೆಲಸಗಳಿಗೂ ಖರ್ಚುಮಾಡಿರುವರು. (ಅಥವಾ ಇನ್ನೆಷ್ಟು ರೂಪಾಯಿಗಳು ಖರ್ಚು ಆಗಿವೆಯೋ ಅದನ್ನು ಲೋಕಲ ಫಂಡ್ ಬೋರ್ಡಿನಿಂದ ಕೇಳಿ ತಿಳಿದುಕೊಂಡು ಬರೆಯಬೇಕು.) ಬಾಕಿ ರೂಪಾಯಿಗಳು ನಮ್ಮ ಸೆಸ್ ಬಾಬತು ಬೋರ್ಡಿನಲ್ಲಿ ಉಳಿದಿರುವದು. ಆದ್ದರಿಂದ ಈ ಹಣದಲ್ಲಿ ಸ್ವಲ್ಪಭಾಗವನ್ನಾದರೂ ಖರ್ಚುಮಾಡಿ ಮೇಲ್ಕಂಡ ರಸ್ತೆಯನ್ನು ಮಾಡಿಸಿಕೊಟ್ಟು ಕೀರ್ತಿಪಡೆಯಬೇಕೆಂದು ಪ್ರಾರ್ಥಿಸುತ್ತೇವೆ.

೧. ಗ್ರಾಮಸ್ಥರ ರುಜು.
೨. ಗ್ರಾಮಸ್ಥರ ರುಜು.

ಈಮೇರೆಗೆ ಎಷ್ಟು ಗ್ರಾಮಗಳವರು ಸೇರಿರುತ್ತಾರೋ ಅವರ ರುಜುಗಳನ್ನೆಲ್ಲಾ ಹಾಕಿ ಅರ್ಜಿ ಪೋಸ್ಟಿನಲ್ಲಿ ರಿಜಸ್ಟರ್ ಮಾಡಿ ಹಾಕಿ ರಿಜಸ್ಟರ್ ಶೀದಿ ಒಬ್ಬ ಮುಖಂಡನಲ್ಲಿಡಬೇಕು ಅಥವಾ ರುಜು ಹಾಕಿರತಕ್ಕವರೆಲ್ಲರು ಆ ಅಧಿಕಾರಿ ಇರತಕ್ಕ ಸ್ಥಳದಲ್ಲಿ ಕಚೇರಿಕಾಲದಲ್ಲಿ ಕೊಡಬೇಕು.

ಪಾಠಶಾಲೆ ಸ್ಥಾಪನೆಗೆ ಅರ್ಜಿ.

ಸೂಚನೆ— ಪ್ರಜೆಗಳು ಸರ್ಕಾರಕ್ಕೆ ಸಕಲ ವಿಧವಾಗಿಯೂ ತೆರಿಗೆ ಕೊಡುತ್ತಿರುವದರಿಂದ ಸರ್ಕಾರದವರು ಪ್ರಜೆಗಳಿಗೆ ಅವಶ್ಯಕವಾದ ಸೌಲಭ್ಯಗಳನ್ನು ಕಲ್ಪಿಸಿಕೊಡಲು ಬದ್ಧರಾಗಿರುವರು. ಅನೇಕ ಸ್ಥಳಗಳಲ್ಲಿ ವಿದ್ಯಾಭ್ಯಾಸದ ಪಾಠಶಾಲೆಗಳು, ರಸ್ತೆಗಳು, (ಆಸ್ಪತ್ರೆ) ವೈದ್ಯಶಾಲೆಗಳು, ಪಾನಕ್ಕೆ ಸಿಹಿನೀರು ಭಾವಿಗಳು ಮುಂತಾದ ಕೆಲಸಗಳು ಆಗಬೇಕಾಗಿರುತ್ತವೆ.

ಇಂತಹ ವಿಷಯಗಳಲ್ಲಿ ಗ್ರಾಮಸ್ಥರೋ, ಪೇಟೆಗಳವರೊ, ಇಲ್ಲವೆ ಅನೇಕ ಸಂದರ್ಭಗಳಲ್ಲಿ ೫- ೬- ೧೦ ಗ್ರಾಮಗಳ ರೈತರು ಆಯಾಯ ಇಲಾಖಾಧಿಕಾರಿಗಳಿಗೆ ಅರ್ಜಿ ಬರೆದುಕೊಳ್ಳಬೇಕಾಗುವದು. ನಮ್ಮ ದೇಶದಲ್ಲಿ ಅನೇಕರು ತಮ್ಮ ಕೊರತೆಗಳೇನಾದರೂ ಇರಲಿ, ಅದನ್ನು ಕೆಲವರು ಒಟ್ಟುಗೂಡಿ ಅರ್ಜಿಮೂಲಕ ಸರ್ಕಾರಕ್ಕೆ ತಿಳಿಯಪಡಿಸಿ ಸೌಲಭ್ಯಗಳನ್ನು ಕಲ್ಪಿಸಿಕೊಳ್ಳದೆ ಅವರು ಮಾಡಲಿ? ಇವರು ಮಾಡಲಿ? ಮತ್ತೊಬ್ಬರು ಮಾಡಲಿ? ಮಗದೊಬ್ಬರು ಮಾಡಲಿ? ಅಥವಾ ತಮ್ಮ ನೆರೆಹೊರೆಯವರಾದ ರಾಮಯ್ಯ ಭೀಮಯ್ಯ ಮುಂತಾದವರು ಮಾಡಲಿ ಎಂದು ಅನಾದರರಾಗಿರುವದು. ಇದರಿಂದ ತಮಗೂ ತಮ್ಮ ನೆರೆಯವರಿಗೂ ಕಷ್ಟನಷ್ಟಗಳು ಪರಂಪರೆಯಾಗಿರುವುದು. ಇಂತಹ ಕೊರತೆಗಳನ್ನು ಪರಿಹರಿಸಿಕೊಳ್ಳಬೇಕಾದರೆ ನಾವು ಮೇಲೆ ಹೇಳಿದಂತೆ ಅರ್ಜಿ ಗುಜರಾಯಿಸಿಕೊಳ್ಳಬೇಕು.

ಪಾಠಶಾಲೆ ಅವಶ್ಯಕವಾದರೆ ಬರೆಯುವ ಅರ್ಜಿ ನಮೂನೆ—

ವಿದ್ಯಾಭ್ಯಾಸದ ಇನ್‌ಸ್ಪೆಕ್ಟರ್ ಜನರಲ್ ಸಾಹೇಬರವರ

ಜನಾಬಿಗೆ.

ಡಿಸ್ಟ್ರಿಕ್ಟ .... ತಾಲ್ಲೂಕು

ಗ್ರಾಮದ ನಿವಾಸಿಗಳು ಜಾಹಿರ್ಮಾಡಿಕೊಂಡ ಅಹವಾಲ್ ಅರ್ಜಿ ಅದಾಗಿ—

ಈ ಗ್ರಾಮದಲ್ಲಿ ಎಲ್ಲಾ ಕೋಮಿನವರಿಂದಲೂ ೬೦ ಮನೆಗಳಿವೆ. ಈ ೬೦ ಮನೆಗಳಗಳಲ್ಲಿ ೨೫ ಮಂದಿ ಬಾಲಕರು, ೭ ಮಂದಿ ಬಾಲಕಿಯರು ಓದಲು ಅರ್ಹರಾಗಿಯೂ, ಅಪೇಕ್ಷೆಯುಳ್ಳವರಾಗಿಯೂ ಇರುವರು. ಈಗ್ರಾಮಕ್ಕೆ ಸಮೀಪವಾಗಿ ಅಂದರೆ ೩ ಮೈಲಿ ಫಾಸಲೆಯೊಳಗೆ ಯಾವ ಪಾಠಶಾಲೆಯೂ ಇರುವದಿಲ್ಲ. ಆದಕಾರಣ ಹುಡುಗರೆಲ್ಲರಿಗೂ ವಿದ್ಯಾಭ್ಯಾಸವಿಲ್ಲದ ಮೂಢಾವಸ್ಥೆಯಲ್ಲಿರಬೇಕಾಗುವದು. ಪಾಠಶಾಲೆಗಳಿರುವ ದೊಡ್ಡ ದೊಡ್ಡ ಗ್ರಾಮಗಳಿಗೆ ಆಗಲಿ, ಪಟ್ಟಣಗಳಿಗೆ ಆಗಲಿ ನಮ್ಮ ಬಾಲಕರನ್ನು ಕಳುಹಿಸಲು ಮನುಸ್ಸು ಸಾಲದೆ ಚಿಕ್ಕಹುಡುಗರಾಗಿರುವದರಿಂದಲೂ ಅನೇಕರು ಆ ರೀತಿ ಮಾಡಲು ಚೈತನ್ಯವುಳ್ಳವರಾಗಿಲ್ಲವಾದುದರಿಂದಲೂ ಅನಾನುಕೂಲವಾಗಿದೆ. ಆದ್ದರಿಂದ ಈಅರ್ಜಿ ನೋಡಿದಕೂಡಲೇ ಗರೀಬರ ಅಹವಾಲನ್ನು ಖಾವಂದರವರ ದಿವ್ಯವಾದ ಚಿತ್ತಕ್ಕೆ ತಂದು ಈ ಗ್ರಾಮದಲ್ಲಿ ಒಂದು ಕನ್ನಡ ಪಾಠಶಾಲೆ ಆಗಲು ಹುಕ್ಕುಂ ಅಪ್ಪಣೆಯಾಗಬೇಕೆಂದು ವಿನಯಪೂರ್ವಕವಾಗಿ ಪ್ರಾರ್ಥಿಸುತ್ತೇವೆ.

ಗ್ರಾಮಸ್ಥರ ರುಜುಗಳು ಬರೆಯುವದಕ್ಕೆ ಬಾರದೆ ಇರುವವರು ತಮ್ಮ ಎಡಗೈ ಹೆಬ್ಬೆಟ್ಟಿನ ಗುರ್ತನ್ನು ಹಾಕಬಹುದು.

ಲೇವಾದೇವಿ ತಂಸೂಕುಗಳು—ಪಾರಿಷತ್ತುಗಳು, ವಗೈರೆ.

ನಮೂನೆಯು ನಂಬರ್ ೧.

ಕೈಸಾಲದ ಪತ್ರ.

ಸ್ರೀ ಸಾವಿರದ ಒಂಭೈನೂರ ಆರನೇ (೧೯೦೬) ನೇ ಇಸವಿ ಜನವರೀ ತಾರೀಖು (೧೬) ರಲ್ಲು ತಾಲ್ಲೂಕು ಹೋಬಳಿ ಗ್ರಾಮದಲ್ಲಿರುವ ಜಾತಿ ಮಕ್ಕಳ ಸುಮಾರು ೪೦ ವರ್ಷ ವಯಸ್ಸುಳ್ಳ ಅದೇ ತಾಲ್ಲೂಕು ಸುಮಾರು ವಯಸ್ಸುಳ್ಳ ರಿಗೆ ಬರೆದುಕೊಟ್ಟ ಕೈಸಾಲದ ಪತ್ರವೇನೆಂದರೆ— ಈ ದಿವಸ ನನ್ನದರದು ನಿಮಿತ್ತವಾಗಿ ನಿಮ್ಮಲ್ಲಿ (೫೦೦) ರೂಪಾಯಿಗಳನ್ನು ಸಾಲವಾಗಿ ತೆಗೆದುಕೊಂಡಿರುತ್ತೇನೆ. ಸೇಕಡಾ ಮಾಹೇಯಾನಾ ಒಂದು ರೂಪಾಯಿನಮೇರೆ ಈ ಮೊಬಲಗಿಗೆ ಆಗುವ ಬಡ್ಡಿಯನ್ನೂ ಮತ್ತು ಮೇಲೆ ಕಂಡ ಅಸಲನ್ನೂ ಈ ತಾರೀಖು ಲಾಗಾಯಿತು ೧೨ ತಿಂಗಳಲ್ಲಿ ನಿಮಗೆ ಪಾವತೀಮಾಡುತ್ತೇನೆ. ಈ ವಾಯಿದೆಯಲ್ಲಿ ಪಾವತೀಮಾಡಲು ತಪ್ಪಿದರೆ ತಪ್ಪಿದ ತಾರೀಖುಲಾಗಾಯಿತು ಸೇಕಡಾ ಮಾಹೇಯಾನಾ ಒಂದೂವರೆರೂ. ನಂತ ಬಡ್ಡಿಯನ್ನು ಕೊಡಲುಳ್ಳವನು ಎಂದು ನಾನು ಮನಃಪೂರ್ವಕವಾಗಿ ಗ್ರಾಮದಲ್ಲಿ ಬರೆದುಕೊಟ್ಟ ಪತ್ರ.

ಸಾಕ್ಷಿಗಳು.

ನನ್ನಸಮಕ್ಷಮ ಪತ್ರದ ಹಣವು ಬರೆಯಿಸಿಕೊಂಡವರಿಂದ ಬರೆದುಕೊಟ್ಟವರಿಗೆ ಸಂದಾಯವಾಗಿದೆ. ಮತ್ತು ಬರೆದುಕೊಟ್ಟವರು ರುಜೂ ಮಾಡಿರುತ್ತಾರೆ.

೧ ಗ್ರಾಮದಲ್ಲಿರುವ ಶ್ಯಾನುಭೋಗ ರುಜು.

ನನ್ನ ಸಮಕ್ಷಮ ಪತ್ರದ ಹಣವು ಬರೆಯಿಸಿಕೊಂಡವರಿಂದ ಬರೆದುಕೊಟ್ಟವರಿಗೆ ಸಂದಾಯವಾಗಿದೆ. ಮತ್ತು ಬರೆದುಕೊಟ್ಟವರು ರುಜೂ ಮಾಡಿರುತ್ತಾರೆ.

೨ ತಾಲ್ಲೂಕು ಲ್ಲಿರುವ ಗೌಡನ ಮಗ ರುಜು.

ಬಿಕ್ಕಲಂ—ಬರೆದುಕೊಟ್ಟವರ ಸ್ವಹಸ್ತ.

ಪತ್ರದ ಸಾಕ್ಷಿಗಳು ಪತ್ರದ ಯಾವ ಮುಖ್ಯ ವಿಷಯಗಳಿಗೆ ಸಾಕ್ಷೀಭೂತರಾಗಿರಬೇಕೋ ಆ ವಿಷಯಗಳನ್ನು ಮೇಲೆಕಂಡಂತೆ ಅವರಿಂದಲೇ ಪ್ರತಿ ದಸ್ತಾವೇಜಿನಲ್ಲೂ ಬರೆಯಿಸಿ ಅವರ ರುಜು ಹಾಕಿಸಿದರೆ, ಕೋಟಿನಲ್ಲಿ ವಿವಾದ ಬಿದ್ದಾಗ್ಗೆ "ತಮಗೆ ಪತ್ರದ ಒಂದು ವಿಷಯವೂ ತಿಳಿಯದು, ಸುಮ್ಮನೆ ಪತ್ರಕ್ಕೆ ರುಜು ಮಾಡಿದೆವು" ಎಂಬದಾಗಿ ಸುಳ್ಳು ಸಾಕ್ಷಿ ನುಡಿಯಲಿಕ್ಕೆ ಅವಕಾಶವಾಗುವದಿಲ್ಲವು.

ಸ್ಟಾಂಪು—ವೈಸಾಲದ ಪತ್ರಕ್ಕೂ, ಪ್ರಾಮಿಸರಿ ನೋಟಿಗೂ, ಖರಾರಿಗೂ ಒಂದಕ್ಕೊಂದಕ್ಕಿರುವ ವ್ಯತ್ಯಾಸಗಳನ್ನು ತಿಳಿದುಕೊಳ್ಳುವದು ಅವಶ್ಯಕ. ಯಾವದಸ್ತಾವೇಜಿನಲ್ಲಿ "ಆರ್ಡರಿಗೆ" "ಅನುಜ್ಞೆಗೆ" ಎಂಬ ಷರತ್ತು ಇಲ್ಲವೋ, ಮತ್ತು ಸಾಕ್ಷಿಗಳ ರುಜುವಿದೆಯೋ, ಮತ್ತು ಹಣವಲ್ಲದೆ ಧಾನ್ಯ ಮೊದಲಾದವುಗಳನ್ನು ಕೊಡಬೇಕೆಂದು ಷರತ್ತು ಇದೆಯೋ, ಅದು ಪ್ರೋನೋಟಾಗುವದಿಲ್ಲ. ಪತ್ರಕ್ಕೆ ಹಣವನ್ನು ಕೊಡುವುದು ಮುಖ್ಯಷರತ್ತಾಗಿರುತ್ತದೆ. ಖರಾರಿನಲ್ಲಾದರೋ ಒಂದು ಕೆಲಸವನ್ನು ಮಾಡುವುದು ಮುಖ್ಯ ಷರತ್ತಾಗಿರುತ್ತದೆ.

ವೈಸಾಲದ ಪತ್ರಕ್ಕೆ ದಾವಾ ಲಿಮಿಟೇಷನ್

ಮೂರುವರುಷ.

ನಮೂನೆಯ ನಂಬರ್ ೨.

ವೈಸಾಲದ ಪತ್ರ. (೨ನೇ ವಿಧ.)

ಸನ್ ತಾರೀಖಿನಲ್ಲಿ ನು ನಿಗೆ ಬರೆದು ಕೊಟ್ಟ ವೈಸಾಲದ ಪತ್ರವೇನಂದರೆ ನಾನು ನಿನಗೆ ೧೯೧೬ ನೇ ಇಸವಿ ಮಾರ್ಚಿ ತಾರೀಖು ೬ರಲ್ಲಿ ಬರೆದುಕೊಟ್ಟಿರುವ ಪತ್ರದ ಬಾಬತು ಅಸಲು ೪೦ ರೂಪಾಯಿ ಈವರೆಗಿನ ಬಡ್ಡಿ ೧೦ ರೂಪಾಯಿ ಮತ್ತು ಈಗ್ಯೆ ೬ ತಿಂಗಳಲ್ಲಿ ನಿನ್ನಿಂದ ನಾನು ಕಡವಾಗಿ ಕ್ರಯಕ್ಕೆ ತೆಗೆದುಕೊಂಡ ಎತ್ತಿನ ಕ್ರಯದ ಬಾಬತು ೭ ರೂಪಾಯಿ ಮತ್ತು ಈಗ್ಯೆ ೭ ತಿಂಗಳಲ್ಲಿ ನಿನ್ನಿಂದ ಕೈಗಡವಾಗಿ ನಾನು ತೆಗೆದುಕೊಂಡಿದ್ದ ೨ ರೂಪಾಯಿ ಮತ್ತು ಈದಿವಸ ನಿನ್ನಿಂದ ನಾನು ನಗದಾಗಿ ತೆಗೆದುಕೊಂಡಿರುವ ೨೫ ರೂಪಾಯಿ, ಜುಮ್ಲಾ ರೂಪಾಯಿಗಳು ನನ್ನಿಂದ ನಿನಗೆ ಈಗ ಸಲ್ಲಬೇಕಾಗಿರುತ್ತದೆ. ಈ ಅಸಲು ಮೊಬಲಗು

ರೂ. ನ್ನು ನಡೆದಷ್ಟು ದಿವಸದಲ್ಲಿ ನಿನಗೆ ಫಾವತಿ ಮಾಡುತ್ತೇನೆ. ಈ ಹಣಕ್ಕೆ ಸೇಕಡಾ ತಿಂಗಳು ೧ಕ್ಕೆ ಎಂಟಾಣೆ ಪ್ರಕಾರ ಆಗುವ ಬಡ್ಡಿಯನ್ನು

ಅಸಲು ಸಂದಾಯವಾಗುವವರೆಗೂ ವರ್ಷಕ್ಕೊಂದಾವರ್ತಿ ಪತ್ರದ ಕಾಲಾವಧಿಯಲ್ಲಿ ನಿನಗೆ ಪಾವತೀ ಮಾಡುತ್ತಾ ಬರುತ್ತೇನೆ. ಎಂಬದಾಗಿ ನನ್ನ ಆತ್ಮ ಸಂತೋಷದಿಂದ ಬರೆದುಕೊಟ್ಟ ಪತ್ರ.

(ಬರೆದುಕೊಟ್ಟವನ ಮತ್ತು ಸಾಕ್ಷಿಗಳ ರುಜುವು ಮತ್ತು ಬಿಕ್ಕಲಂ ೧ನೆಯ ನಮೂನೆಯಂತೆ.)

ಟಿಪ್ಪಣಿ.

ಸ್ಟಾಂಪು, ಲಿಮಿಟೇಷನ್ ರಿಜಿಸ್ಟ್ರೇಷನ್ ವಿಷಯದಲ್ಲಿ ಮುಂದಣ ನಮೂನೆಯ ಟಿಪ್ಪಣಿಯನ್ನು ನೋಡಬೇಕು.

ನಮೂನೆಯ ನಂಬರ್ ೩.

ಕಂತುಪತ್ರ.

ಸನ್ ತಾರೀಖಿನಲ್ಲಿ ನಂಜುಂಡೈಯ್ಯನು ವೀರಭದ್ರಯ್ಯನಿಗೆ ಬರೆದುಕೊಟ್ಟ ಕಂತುಪತ್ರವೇನಂದರೆ— ಈ ದಿವಸ ನಾನು ನನ್ನ ಮಗಳ ಮದುವೆಗಾಗಿ ನಿಮ್ಮಲ್ಲಿ ೨೦೦ ರೂಪಾಯನ್ನು ಸಾಲವಾಗಿ ತೆಗೆದುಕೊಂಡಿರುತ್ತೇನೆ. ಈ ಮೊಬಲಗನ್ನು ತಿಂಗಳಗಟ್ಟಲೆ ಕಂತುಗಳಾಗಿ ೧ಕ್ಕೆ ೨೦ ರೂ ನಂತೆ ೧೦ ತಿಂಗಳಲ್ಲಿ ಪಾವತೀ ಮಾಡುತ್ತೇನೆ. ಮುಂದಣ ಫೆಬ್ರವರೀ ತಿಂಗಳ ಲಾಗಾಯಿತು ಪ್ರತಿ ತಿಂಗಳು ೧೦ ನೇ ತಾರೀಖಿನೊಳಗೆ ಕಂತನ್ನು ನಿಮಗೆ ಸಲ್ಲಿಸುತ್ತೇನೆ. ಸೇಕಡಾ ಮಾಹೇಯಾನಾ ೧ ರೂ. ನಂತೆ ಮೇಲ್ಕಂಡ ಅಸಲು ೨೦೦ ರೂ. ಗೆ ಅಥವಾ ಈ ಪೈಕಿ ವಸೂಲೀಕೊಡುವ ಕಂತು ಮೊಬಲಗು ಜಾತಾ ಉಳಿಯುವ ಅಸಲು ಮೊಬಲಗಿಗೆ ಆ ಕಂತು ಪಾವತಿಯಾಗುವವರೆಗೆ ಆಗುವ ಬಡ್ಡಿಯನ್ನು ಸಹ ಅಸಲು ಕಂತಿನೊಡನೆ ಪಾವತೀ ಮಾಡುತ್ತೇನೆ, ಎಂಬದಾಗಿ ನಾನು ಮನಃಪೂರ್ವಕವಾಗಿ ಬರೆದುಕೊಟ್ಟ ಕಂತುಪತ್ರ.

(ಬರೆದುಕೊಟ್ಟವನ ಸಾಕ್ಷಿಗಳ ರುಜುವು, ಬಿಕ್ಕಲಂ ಸಹ,
೧ ನೆಯ ನಮೂನೆಗಿರುವಂತೆ.)

ಟಿಪ್ಪಣಿ.

ಸ್ಟಾಂಪು ರಿಜಿಸ್ಟ್ರೇಷನ್ ವಿಷಯದಲ್ಲಿ ೬ ನೆಯ ನಮೂನೆಯ ಟಿಪ್ಪಣಿಯನ್ನು ನೋಡಿ.

ಲಿಮಿಟೇಷನ್—ಆ ಆ ಕಂತು ಕೊಡಬೇಕಾದ ವಾಯಿದೆಯು ಕಳೆದಲಾಗಾಯಿತು ೩ ವರ್ಷದಲ್ಲಿ ಆ ಆ ಕಂತಿಗೆ ಲಿಮಿಟೇಷನ್ ವಾಯಿದೆಯು ಗತಿಸಿ ಹೋಗುತ್ತದೆ.

ನಮೂನೆಯು ನಂಬರ್ ೪.

ಕಂತು ಪ್ರಾಮಿಸರಿನೋಟ್.

ಕೃಷ್ಣಸಾಗರ.

೧೯೧೬ ನೇ ಇಸವಿ ಮೇ ತಾರೀಖು ೯ ರಲ್ಲು.

ತಿಮ್ಮಯ್ಯ ಈರಭೈರೈಯ್ಯನಿಗೆ ಬರೆದುಕೊಟ್ಟ ಕಂತು ಪ್ರಾಮಿಸರಿ ನೋಟು ಏನಂದರೆ—ನಾನು ನಿಮಗೆ ಸರಿಯಾದ ಪ್ರತಿಫಲಕ್ಕಾಗಿ ಕೊಡಬೇಕಾಗಿರುವ ೧೦೦ ರೂ. ನ್ನು ಕಂತು ೧ ಕ್ಕೆ ೨೫ ರೂ. ನಂತೆ ೪ ಕಂತುಗಳಾಗಿ ೩ ತಿಂಗಳ ಕಟ್ಟಲೇ ಕಂತುಗಳಂತೆ, ಈ ತಾರೀಖು ಲಾಗಾಯಿತು ೩ ತಿಂಗಳು ಕಳೆದಕೂಡಲೇ ಮೊದಲನೇ ಕಂತನ್ನೂ, ನಂತರ ಉಳಿದ ಕಂತುಗಳನ್ನು ಪ್ರತಿಯೊಂದು ಮೂರು ಮೂರು ತಿಂಗಳು ಕಳೆದ ಕೂಡಲೇ ಒಂದೊಂದು ಕಂತಿನಂತೆ ಒಂದು ವರ್ಷದೊಳಗಾಗಿ ನಿಮಗಾಗಲಿ ನಿಮ್ಮ ಆರ್ಡರಿಗಾಗಲಿ ಪಾವತಿಮಾಡಲು ಒಪ್ಪಿರುತ್ತೇನೆ.

ರೂ. ೧೦೦–೦–೦. ತಿಮ್ಮಯ್ಯ ರುಜು.

ದಾವಾ ಲಿಮಿಟೇಷನ್ ೩ ವರುಷ.

ನಮೂನೆಯು ನಂಬರ್ ೫.

ಕಂತುಪತ್ರ.

ಸನ್ ರಲ್ಲಿ ಶಂಕರನಂಜುಂಡೈಯ್ಯನು ಕರಗೈಯ್ಯನಿಗೆ ಬರೆದುಕೊಟ್ಟ ಕಂತುಪತ್ರವೇನಂದರೆ— ನಮ್ಮ ಕುಟುಂಬದ ಉಪಯೋಗಕ್ಕಾಗಿ ನಿಮ್ಮಲ್ಲಿ ನಾನು ಈ ದಿವಸ ಸಾಲವಾಗಿ ೮೦ ರೂಪಾಯಿಗಳನ್ನು ತೆಗೆದುಕೊಂಡಿರುತ್ತೇನೆ. ಈ ಮೊಬಲಗಿಗೆ ನಾನು ಕೊಡಬೇಕಾದ ನಫೆ ೨೦ ರೂ. ಸೇರಿ ಜುಮ್ಲಾ ೨೦೦ ರೂ. ನ್ನು ತಿಂಗಳು ೧ ಕ್ಕೆ ೨೦ ರೂ. ಮೇರೆ ೧೦ ತಿಂಗಳಲ್ಲಿ ಕೊಡುವದಾಗಿ ನಾನು ನಿಷ್ಕರ್ಷೆ ಮಾಡಿಕೊಂಡಿರುವದರಿಂದ, ಮುಂದ ತಿಂಗಳ ಲಾಗಾಯಿತು ಪ್ರತಿ ತಿಂಗಳಲ್ಲಿಯೂ ೧೦ನೆ ತಾರೀಖಿಗೆ ಸರಿಯಾಗಿ ಪ್ರತಿಯೊಂದು ಕಂತು ಮೊಬಲಗು ೨೦ ರೂ. ನ್ನುನಿಮಗೆ ಪಾವತೀಮಾಡುತ್ತಾ ಬರುತ್ತೇನೆ. ಹಾಗೆ ಸರಿಯಾಗಿ ಪಾವತೀಮಾಡಲು ತಪ್ಪಿದರೆ, ತಪ್ಪಿದ ಕಂತು

ಗಳಿಗೆಸೇಕಡಾ ಮಾಹೇಯಾನಾ ೧ರೂ. ನಂತೆ ತಪ್ಪಿದ ತಾರೀಖುಲಾಗಾಯಿತು ಬಡ್ಡಿಯನ್ನು ಕೊಡಲು ಒಪ್ಪಿರುತ್ತೇನೆ. ಮತ್ತು ಮೇಲೆಕಂಡಂತೆ ಯಾವ ಕಂತು ಪಾವತಿಮಾಡಲು ತಪ್ಪಿದರೂ ಆವರೆಗೆ ಪಾವತಿಯಯಗಿರುವ ಕಂತುಗಳು ಜಾತಾ ಬಾಕಿ ಎಲ್ಲಾ ಕಂತುಗಳನ್ನೂ ಒಂದೇಗಂಟಿನಲ್ಲಿ ನೀವು ಕೇಳಿದ ವೇಳೆ ಪಾವತೀಮಾಡಲು ನಾನು ಬದ್ಧನಾಗಿರುತ್ತೇನೆ, ಎಂಬದಾಗಿ ನನ್ನಖುದ್ದುರಾಜಯಿಂದ ಬರೆದುಕೊಟ್ಟ ಕಂತುಪತ್ರ ಸಹಿ.

(ಬರೆದುಕೊಟ್ಟವನ ಸಾಕ್ಷಿಗಳ ರುಜುವೂ ಬಿಕ್ಕಲಂ ಸಹ ೧ನೇ ನಮೂನೆಗಿರುವಂತೆ.)

ನೋಟ್—ಇದರಂತೆ ಪ್ರೋನೋಟನ್ನೂ ಸಹ ಬರೆಯುಬಹುದು. ಪ್ರೋನೋಟಾದರೆ "ಆರ್ಡರಿಗೆ" ಅಥವಾ "ಅನುಜ್ಞೆಗೆ" ಎಂಬ ಮಾತುಗಳನ್ನು ಬರೆಯುಬೇಕು.

ನಮೂನೆಯು ನಂಬರ್ ೬.

ಒಬ್ಬನು ಅನೇಕರ ಹೆಸರಿಗೆ ಬರೆದುಕೊಡುವ ಸಾಲದಪತ್ರ.

(ನಮೂನೆ.)

ಸ‌ರ್......ರಲ್ಲು......ಹನುಮಯ್ಯನು........ಭದ್ರಿಗೂ...ರಾಮಕ್ಕನಿಗೂ ಬರೆದುಕೊಟ್ಟ ಮೈಸಾಲದ ಪತ್ರ ಅದಾಗಿ—ನಾನು ನನ್ನ ದರದುನಿಮಿತ್ತವಾಗಿ ನಿಮ್ಮಬಳಿ ಈ ದಿವಸ ೬೦೦ ರೂಪಾಯಿಗಳನ್ನುಸಾಲವಾಗಿ ತೆಗೆದುಕೊಂಡಿರುತ್ತೇನೆಯಾಗಿ ಈ ಮೊಬಲಗನ್ನು ಸೇಕಡಾ ಮಾಹೆಯಾನಾ ೧ ರೂ. ನಂತೆ ಈ ಮೊಬಲಗಿಗೆ ಆಗುವ ಬಡ್ಡಿಯೊಡನೆ ನಡೆದಷ್ಟು ದಿವಸದಲ್ಲಿ ನಿಮಗೆ ಪಾವತಿಮಾಡುತ್ತೇನೆ.

(ಬರೆದುಕೊಟ್ಟವನ ಸಾಕ್ಷಿಗಳ ರುಜುವೂ ಬಿಕ್ಕಲಂ ಸಹ ೧ ನೆಯು ನಮೂನೆಗಿರುವಂತೆ.)

ಟಿಪ್ಪಣಿ.

ವಿಚಾರ— ಅನೇಕರು ಸೇರಿ ಸಾಷಾಕೊಟ್ಟು ಪತ್ರ ಬರೆಯಿಸಿಕೂಂಡರೆ ಅವರೆಲ್ಲರೂ ಒಟ್ಟಾಗಿ ಸೇರಿ ಸಾಲವನ್ನು ವಸೂಲಾಡಿಕೊಳ್ಳಬಹುದೇ ಹೊರತು ಕೆಲವರನ್ನು ಬಿಟ್ಟು ಮತ್ತೆ ಕೆಲವರು ಮಾತ್ರ ವಸೂಲ್ಮಾಡಿಕೊಳ್ಳಲಾಗುವದಿಲ್ಲ. ಇವರಪೈಕಿ ಯಾರಾದರೂ ಮೃತಪಟ್ಟರೆ ಇವರ ವಾರಸ

ದಾರರನ್ನು ಜತೆಯುಲ್ಲಿ ಸೇರಿಸಿಕೊಂಡು, ಪತ್ರಾ ಬರೆಯಿಸಿಕೊಂಡ ಬಾಕಿಯ ವರು ಹಣವನ್ನು ಕೇಳಬೇಕು. ಪತ್ರಾ ಬರೆಯಿಸಿಕೊಂಡವರೆಲ್ಲರೂ ಮೃ ತಪಟ್ಟರೆ ಇವರೆಲ್ಲರ ವಾರಸುದಾರರು ಒಟ್ಟಿಗೆ ಸೇರಿ ಸಾಲವನ್ನು ವಸೂ ಲ್ಮಾಡಬೇಕು.

ಸ್ಟಾಂಪು, ರಿಜಿಸ್ಟ್ರೇಷನ್, ಮತ್ತು ಲಿಮಿಟೇಷನ್— ರೂಲ್ಸ್ ಮೇರೆಗೆ.

ನಮೂನೆಯ ನಂಬರ್ ೨.

ಜೀತದ (ನೌಕರಿ ಕರಾರು) ಪತ್ರ.

(ನಮೂನೆ.)

ಸನ್ ರಲ್ಲು ರೇವಣ್ಣನವರಿಗೆ ಗುಮ್ಮಯ್ಯನು ಬರೆದು ಕೊಟ್ಟ ಜೀತದ ಪತ್ರ ಅದಾಗಿ—ಈ ದಿವಸ ನನ್ನ ದರಿದು ನಿಮಿತ್ತವಾಗಿ ನಿಮ್ಮಲ್ಲಿ ೧೦೦ ರೂ. ನ್ನು ಸಾಲವಾಗಿ ತೆಗೆದುಕೊಂಡಿರುತ್ತೇನೆ. ಇದಕ್ಕೆ ಬಡ್ಡಿಯನ್ನು ನಾನು ಕೊಡಬೇಕಾದುದಿಲ್ಲ. ಅಸಲು ಸಾಲವನ್ನು ತೀರಿ ಸಲು ನನ್ನ ಮಗನಾದ ಬಸವನನ್ನು ನಿಮ್ಮ ಮನೆಯಲ್ಲಿ ಈ ಲಾಗಾಯಿತು ೬ ವರ್ಷ ಜೀತಕ್ಕೆ ಇರಿಸಿರುತ್ತೇನೆ. ನೀವು ಅವನಿಗೆ ಹೊಟ್ಟೆಬಟ್ಟೆಯನ್ನು ಕೊಟ್ಟುಕೊಂಡು ಅವನಿಂದ ಚಾಕರೀಮಾಡಿಸಿಕೊಂಡು ಅವನ ಸಂಬಳಕ್ಕಾ ಗಿ ನೀವು ವರ್ಷ ೧ ಕ್ಕೆ ಕೊಡಬೇಕಾದ ೨೦ ರೂಪಾಯನ್ನು ನಿಮ್ಮ ಸಾಲ ಕ್ಕೆ ವಜಾ ಹಾಕಿಕೊಳ್ಳಬೇಕು ಈಮೇರೆ ೫ ವರ್ಷ ಸದರಿ ಬಸವನು ನಿಮ್ಮ ಮನೆಯಲ್ಲಿ ಜೀತಾಮಾಡಿ ಮೇಲೆ ಕಂಡ ಸಾಲವನ್ನು ತೀರಿಸುವನು. ಸರಿ ಯಾದ ಕಾರಣವಿಲ್ಲದೆ ಸದರಿ ಬಸವನು ನಿಮ್ಮ ಜೀತವನ್ನು ಬಿಟ್ಟರೆ, ಮೇ ಲೆ ಕಂಡ ಅಸಲು ಮೊಬಲಗು ಪೈಕಿ ಮೇಲೆಕಂಡ ಮೇರ ಜೀತಾಮಾಡಿ ತೀರಿಸಬಹುದಾದ ಮೊಬಲಗು ಜಾತಾ ಬಾಕೀಮೊಬಲಗನ್ನೂ, ಮತ್ತು ಸೇ ಕಡಾ ಮಾಹೆಯಾನಾ ೪ ರೂ. ನಂತೆ ಈಮೊಬಲಗಿಗೆ ಆಗುವ ಬಡ್ಡಿಯನ್ನೂ ಸಹ ನೀವು ಕೇಳಿದವೇಳೆ ನಿಮಗೆ ಕೊಡಲು ನಾನು ಒಪ್ಪಿರುತ್ತೇನೆ. ಎಂಬ ದಾಗಿ ನನ್ನ ಖುದ್ದು ರಾಜಿಯಿಂದ ಬರೆದುಕೊಟ್ಟ ಜೀತದ ಪತ್ರ.

(ಬರೆದುಕೊಟ್ಟವನ, ಸಾಕ್ಷಿಗಳ ರುಜುವು, ಬಿಕ್ಕಲಂ ಸಹ ೧ ನೆಯ ನಮೂನೆಗಿರುವಂತೆ)

ಟಿಪ್ಪಣಿ.

ಸ್ಟಾಂಪು—ಇಲ್ಲಿ ಸಾಲಾತೀರಿಸುವುದು ಮುಖ್ಯೋದ್ದೇಶವಲ್ಲದೆ ಜೀತಾ ಮಾಡುವುದು ಮುಖ್ಯವಲ್ಲವಾಗಿ ಇಂಥ ಒಕ್ಕಣೆ ಇರುವ ದಸ್ತಾವೇಜನ್ನು ಸಾಲದ ಪತ್ರವೆಂದೆಣಿಸಿ ೧ ನೇ ನಮೂನೆಯ ಟಿಪ್ಪಣಿಯಲ್ಲಿ ಕಂಡಂತೆ ಸ್ಟಾಂಪು ಕಾಗದದಲ್ಲಿ ಬರೆಯಬೇಕು. ಜೀತಾಮಾಡುವುದೇ ಮುಖ್ಯೋದ್ದೇಶವಾಗಿದ್ದರೆ ಆಗ ಖರಾರಾಗುತ್ತಿತ್ತು. ಖರಾರುಗಳ ನಮೂನೆಗಳು ಮುಂದಕ್ಕೆ ತೋರಿಸಲ್ಪಡುತ್ತವೆ.

ರಿಜಿಸ್ಟ್ರೇಷನ್—ರೂಲ್ಸ್ ಮೇರಿಗೆ.

ಲಿಮಿಟೇಷನ್—ಜೀತಮಾಡಲು ಮಧ್ಯೆ ಬಿಟ್ಟರೆ, ಹಾಗೆ ಬಿಟ್ಟ ತಾರೀಖು ಲಾಗಾಯಿತು ೩ ವರ್ಷದಲ್ಲಿ ಹಣಕ್ಕೆ ದಾವಾ ತರಬೇಕು. ಅನಂತರ ಆದರೆ ಲಿಮಿಟೇಷನ್ ಹೋಗುತ್ತೆ.

ನಮೂನೆಯ ನಂಬರ್ ೪.

ಜಾಮೀನು ಪತ್ರ.

(ನಮೂನೆ.)

ಸನ್ ರಲ್ಲು...ನಂಜುಂಡಪ್ಪನವರು ಮತ್ತು...ಕೃಷ್ಣಪ್ಪನವರು...ರಾಮಚಂದ್ರಯ್ಯನವರಿಗೆ ಬರೆದುಕೊಟ್ಟ ಪತ್ರವೇನೆಂದರೆ--ನಮ್ಮಗಳ ಪೈಕಿ ೧ ನೇ ನಂಜುಂಡಪ್ಪನಾದ ನಾನು ನನ್ನ ದರದು ನಿಮಿತ್ತವಾಗಿ ನಿಮ್ಮ ಬಳಿ ಈ ದಿವಸ ೫೦ ರೂ. ನ್ನು ಸಾಲವಾಗಿ ಪಡೆದು ಇರುತ್ತೇನೆ. ಈ ಮೊಬಲಗಿಗೆ, ಸೇಕಡಾ ಮಾಹೆಯಾನಾ ಒಂದು ರೂಪಾಯಿನಂತೆ ಆಗುವ ಬಡ್ಡಿಯನ್ನು ಸೇರಿಸಿ ಅಸಲು ಮೊಬಲಗನ್ನು ಈ ಲಾಗಾಯಿತು ಒಂದು ವರ್ಷದಲ್ಲಿ ನಿಮಗೆ ಪಾವತೀಮಾಡುತ್ತೇನೆ. ಸದರಿ ೧ ನೇ ನಂಜುಂಡಪ್ಪನು ಮೇಲೆಕಂಡ ಷರತ್ತಿನಂತೆ ಸಾಲಾ ತೀರಿಸತಕ್ಕಬಗ್ಗೆ ೨ ನೇ ಕೃಷ್ಣಪ್ಪನಾದ ನಾನು ಜಾಮೀನುದಾರನಾಗಿರುತ್ತೇನೆ, ಸದರಿ ನಂಜುಂಡಪ್ಪನು ಮೇಲೆಕಂಡ ಮೇರೆ ಸಾಲಾತೀರಿಸಲು ತಪ್ಪಿದಲ್ಲಿ ಕೃಷ್ಣಪ್ಪನಾದ ನಾನು ಸದರಿ ಸಾಲವನ್ನು ತೀರಿಸಲು ಬದ್ಧನಾಗಿರುತ್ತೇನೆ. ಎಂಬದಾಗಿ ನಮ್ಮಗಳ ಖುದ್ದುರಾಜಿಯಿಂದ ಬರೆದುಕೊಟ್ಟ ಪತ್ರ.

(ಬರೆದುಕೊಟ್ಟವರ, ಸಾಕ್ಷಿಗಳ ರುಜುವೂ, ಬಿಕ್ಕಲಂ ಸಹ ೧ನೆಯ ನಮೂನೆಗಿರುವಂತೆ)

ಟಿಪ್ಪಣಿ.

ವಿಚಾರ—ಯಾರ ಉಪಯೋಗಕ್ಕೆ ಸಾಲವು ಮಾಡಲ್ಪಟ್ಟಿತೋ ಅಂಥ ವನಿಗೆ ಮುಖ್ಯ ಋಣಿಯೆಂತಲೂ, ಅದನ್ನು ತೀರಿಸದೆ ತಪ್ಪಿದರೆ ಯಾವ ನು ತೀರಿಸಬೇಕೋ ಅವನಿಗೆ ಜಾಮೀನುದಾರನೆಂತಲೂ ಹೆಸರು. ಮೇಲೆ ಕಂಡ ಸಮೂನೆಯಲ್ಲಿ ನಂಜುಂಡಪ್ಪನು ಮುಖ್ಯ ಋಣಿಯೂ, ಕೃಷ್ಣಪ್ಪ ನು ಜಾಮೀನುದಾರನೂ ಆಗಿರುತ್ತಾರೆ.

ಪ್ರೋನೋಟು ಹುಂಡಿಗಳನ್ನೂ ಕಂಪೆನಿಗಳ ಷೇರನ್ನೂ ವರ್ಗಮಾ ಡುವವರು ಜಾಮೀನುದಾರರಂತೆ ಬದ್ಧರಾಗುತ್ತಾರೆ.

ಋಣವು ದ್ವಿಗುಣವಾಗಿ ಹೆಚ್ಚುವವರೆಗೂ ಸಾಲಕೊಟ್ಟವನು ಸುಮ್ಮ ನೆ ಇದ್ದು, ಅನಂತರ ವಸೂಲ್ಮಾಡಿಕೊಳ್ಳಲು ಪ್ರಯತ್ನಿಸಬಹುದು. ಮು ಖ್ಯಋಣಿಯು ಸಾಲಾ ತೀರಿಸದಿದ್ದಲ್ಲಿ ಅದನ್ನೆಲ್ಲಾ ಜಾಮೀನುದಾರನೇ ಕೊಡಬೇಕಾಗುವುದು. ಮತ್ತು ಸಾಲಗಾರನು ಮುಖ್ಯ ಋಣಿಯನ್ನು ಬಿಟ್ಟುಬಿಟ್ಟು, ಜಾಮೀನುದಾರನ ಮೇಲೆ ದಾವಾಮಾಡಬಹುದು. ೭. ಬೊ. ೧೪೬. ಆದುದರಿಂದ ಜಾಮೀನುದಾರನು ವಾಯಿದೆಯಾದ ಕೂಡಲೆ ತಾನೇ ಸಾಲವನ್ನು ತೀರಿಸಿ ತಾನು ತೀರಿಸಿದ ಮೊಬಲಗನ್ನು ಮುಖ್ಯಋಣಿಯಿಂದ ವಸೂಲ್ಮಾಡಿಕೊಳ್ಳಲು ಪ್ರಯತ್ನಿಸುವದು ಉತ್ತಮವಾಗಿರುತ್ತದೆ. ಅಥವ ಜಾಮೀನಿನ ಪತ್ರದಲ್ಲಿ ತಕ್ಕ ಷರತ್ತುಗಳನ್ನು ಬರೆಯುವುದರ ಮೂಲಕ ಮೇಲೆ ಕಂಡ ಅಪಾಯಗಳಿಂದ ತಪ್ಪಿಸಿಕೊಳ್ಳಬಹುದು.

ಜಾಮೀನಿನ ಮುಚ್ಚಳಿಕೆಯಲ್ಲಿ ಅಥವಾ ಜಾಮೀನಿನ ಪತ್ರದಲ್ಲಿ ಈಪ್ರ ಕಾರವಾದ ಷರತ್ತುಗಳನ್ನು ಬರೆಯಬಹುದು.

(ಶಿರೋಭಾಗವು ಮೇಲಿನ ನಮೂನೆಗಿರುವಂತೆ)

“ ಮೇಲೆಕಂಡ ವಾಯಿದೆಯೊಳಗಾಗಿ ಎಂದರೆ ಒಂದು ವರ್ಷದ ಒಳ ಗಾಗಿ ಸದರೀ ಬಸಪ್ಪನು ಸಾಲವನ್ನು ತೀರಿಸದೆ ತಪ್ಪಿದರೆ, ನೀವು ಸ್ವಲ್ಪವೂ ಸಾವಕಾಶ ಮಾಡದೆ ಹಣಕ್ಕೆ ದಾವಾಮಾಡಿ ಡಿಕ್ರಿಯನ್ನು ಪಡೆದುಕೊಂಡು ಅವನಿಂದಲೂ ಅವನ ಸ್ವತ್ತಿನಿಂದಲೂ ಡಿಕ್ರೀಮೊಬಲಗನ್ನು ವಸೂಲ್ಮಾಡಿ ಕೊಳ್ಳಲು ಪ್ರಯತ್ನಿಸಬೇಕು. ಹಾಗೂ ಅವನಿಂದ ವಸೂಲಾಗದಿದ್ದರೆ, ನಾನು ಕೊಡಲು ಬದ್ಧನಾಗಿರುತ್ತೇನೆ. ಈ ಷರತ್ತಿಗೆ ನೀವು ತಪ್ಪಿದರೆ ನನ್ನ ಜವಾಬ್ದಾರಿಯು ತಪ್ಪಿಹೋಗುತ್ತದೆ.”

ಸಾಲಾಕೊಟ್ಟವನಿಗೂ ಋಣಿಗೂ, ಜಾಮೀನುದಾರನಿಗೂ ಮೊದಲು ನಡೆದ ಒಪ್ಪಂದಗಳ ಪೈಕಿ ಯಾವುದನ್ನಾದರೂ ಸಾಲ ಕೊಟ್ಟವನೂ, ಮುಖ್ಯ ಋಣಿಯೂ ಇಬ್ಬರೂ ಸೇರಿ, ಜಾಮೀನುದಾರನಿಗೆ ತಿಳಿಯದಂತೆ ವ್ಯತ್ಯಸ್ತಮಾಡಿಕೊಂಡರೆ, ಜಾಮೀನುದಾರನ ಜವಾಬ್ದಾರಿಯು ತಪ್ಪಿಹೋಗುವುದು

ಉದಾಹರಣೆ—ತಿಂಗಳು ೧ ಕ್ಕೆ ೫ ರೂ. ನಂತೆ ಬಾಡಿಗೆಗೆ ಸುಬ್ಬನ ಮನೆಯನ್ನು ರೇವನು ತೆಗೆದುಕೊಳ್ಳುವನು. ರೇವನಿಗೋಸ್ಕರ ರಾಮನು ಜಾಮೀನಾಗುವನು. ೬ ರೂ. ನಂತೆ ಬಾಡಿಗೆ ಕೊಡಬೇಕೆಂದು ರಾಮನು ರೇವನೊಡನೆ ಮಧ್ಯದಲ್ಲಿ ಸುಬ್ಬಯ್ಯನ ಅನುಮತಿಯಿಲ್ಲದೆ ಹೊಸ ಖರಾರನ್ನು ಮಾಡಿಕೊಳ್ಳುವನು. ಆಗ ಹೊಸಖರಾರು ನಡೆದನಂತರ ಬಾಡಿಗೆಯನ್ನು ರೇವನು ಕೊಡಲು ತಪ್ಪಿದರೆ ರಾಮನು ಕೊಡಲು ಬದ್ಧನಾಗುವದಿಲ್ಲ

ಜಾಮೀನುದಾರನ ಅನುಮತಿಯಿಲ್ಲದೆ ಸಾಲಾಕೊಟ್ಟವನು ಮುಖ್ಯ ಋಣಿಯೊಡನೆ ಹೊಸ ಒಪ್ಪಂದವನ್ನು ಮಾಡಿಕೊಂಡು, ಸಾಲಾತೀರಿಸಲು ಮುಖ್ಯಋಣಿಗೆ ಹೆಚ್ಚು ವಾಯಿದೆ ಕೊಟ್ಟರೂ, ಅಥವ ಅವನಮೇಲೆ ದಾವಾ ಮಾಡದೆ ಬಿಟ್ಟರೂ ಸಹ ಜಾಮೀನುದಾರನ ಜವಾಬ್ದಾರಿಯು ತಪ್ಪಿಹೋಗುತ್ತದೆ.

ಉದಾಹರಣೆ—ವಾಯಿದೆ ಕಳೆದ ಕೂಡಲೇ ದಾವಾ ಮಾಡದೆ ಸಾಲಾಕೊಟ್ಟವನು ಮುಖ್ಯ ಋಣಿಯಿಂದ ಒಂದು ವರ್ಷದ ಬಡ್ಡಿಯನ್ನು ಅಡ್ವಾನ್ಸಾಗಿ ತೆಗೆದುಕೊಂಡು ಸಾಲಾ ತೀರಿಸಲು ಒಂದು ವರ್ಷದ ವಾಯಿದೆಯನ್ನು ಹೆಚ್ಚಾಗಿ ಕೊಡುತ್ತಾನೆ. ಅಥವಾ ಸಾಲಾಕೊಟ್ಟವನು ಋಣಿಯ ಮೇಲೆ ಲಿಮಿಟೇಷನ್ ವಾಯಿದೆಯೊಳಗೆ ದಾವಾತರಲು ತಪ್ಪುತ್ತಾನೆ. ಈ ಎರಡು ಸಂದರ್ಭಗಳಲ್ಲು ಜಾಮೀನುದಾರನ ಜವಾಬ್ದಾರಿಯು ತಪ್ಪಿ ಹೋಗುತ್ತದೆ.

ಸ್ಟಾಂಪು—ಇಲ್ಲಿ ಜಾಮೀನಿನ ಒಪ್ಪಂದವು ಸಾಲದ ಪತ್ರದಲ್ಲೇ ಅಡಗಿರುವುದರಿಂದ ೧ ನೇ ನಮೂನೆಯಂತೆ ಎಣಿಸಬೇಕು.

ರಿಜಿಸ್ಟ್ರೇಷನ್—ನೇ ನಮೂನೆಯಂತೆ.

ಲಿಮಿಟೇಷನ್—ಸಾಲ ಕೊಟ್ಟವನು ವಾಯಿದೆ ಗತಿಸಿದ ೩ ವರ್ಷದಲ್ಲಿ ದಾವಾತರಬೇಕು. ಜಾಮೀನುದಾರನು ಸಾಲವನ್ನು ತೀರಿಸಬೇಕಾಗಿಬಂದು, ಹಾಗೆ ತೀರಿಸಿದರೆ ತೀರಿಸಿದ ಲಾಗಾಯಿತು ೩ ವರ್ಷದಲ್ಲಿ ಮುಖ್ಯ ಋಣಿಯಮೇಲೆ ದಾವಾತರಬೇಕು. ಜಾಮೀನುದಾರರು ಅನೇಕರಿದ್ದು, ಅವರ

ಪೈಕಿ ಒಬ್ಬನೇ ಸಾಲವನ್ನು ತೀರಿಸಿದರೆ, ಇತರ ಜಾಮೀನುದಾರರಿಂದ ಅವ
ರವರ ಭಾಗದ ಮೊಬಲಗನ್ನು ವಸೂಲ್ಮಾಡಲಿಕ್ಕೆ ತಾನು ತೀರಿಸಿದ ೩ ವರ್ಷ
ದಲ್ಲಿ ದಾವಾತರಬೇಕು,

ನಮೂನೆಯು ನಂಬರ್ ೯.

ಜಂಟಿಪತ್ರ

ಸ॥ ರಲ್ಲು ರಾಮನೂ ಮತ್ತು ಸೋಮನೂ ಸಹ ಜುಂಜ
ಯ್ಯನಿಗೆ ಬರದುಕೊಟ್ಟ ಜಂಟೀ ಸಾಲದಪತ್ರ ಅದಾಗಿ. ಈದಿವಸ ನಾವು
ಗಳು ನಮ್ಮ ದರದು ನಿಮಿತ್ತವಾಗಿ ನಿಮ್ಮಬಳಿ ೨೦೦ ರೂ. ನ್ನು ಸಾಲ
ವಾಗಿ ತೆಗೆದುಕೊಂಡಿರುತ್ತೇವೆಯಾಗಿ ಈ ಮೊಬಲಿಗಿಗೆ ಸೇಕಡಾ ಮಾಹ
ಯಾನಾ ಒಂದು ರೂಪಾಯಿನಂತೆ ಆಗುವ ಬಡ್ಡಿಯನ್ನೂ ಮತ್ತು ಮೇಲ
ಕಂಡ ಅಸಲನ್ನೂ ಸಹ ಈ ಲಾಗಾಯಿತು ಒಂದು ವರ್ಷನಲ್ಲಿ ನಾವಿಬ್ಬರೂ
ಒಟ್ಟಾಗಾದರೂ ಅಥವಾ ನವ್ಮಿಬ್ಬರಲ್ಲಿ |ಯಾರಾದರೂ ಒಬ್ಬರ ಉಜೂರ
ಮತ್ತೊಬ್ಬರಿಡದೆ ನಿಮಗೆ ಪಾವತೀಮಾಡಲುಳ್ಳವರೆಂದು ಬರೆದುಕೊಟ್ಟ
ಜಂಟಿಪತ್ರಸಹಿ.

ಬರೆನುಕೊಟ್ಟವನ ಸಾಕ್ಷಿಗಳ ರುಜುಪೂ ಬಿಕ್ಕಲಂ ಸಹ ೧ ನೆಯ
ನಮೂನೆಗಿರುವಂತೆ.

ನಮೂನೆಯು ನಂಬರ್ ೧೦.

ಧಾನ್ಯದ ಸಾಲದ ಪತ್ರ

ಸ॥ ರಲ್ಲು ತಿರುಮಳಯ್ಯನು ಮಹಮ್ಮದ್ ಖಾದರ
ಸಾಬಿಗೆ ಬರೆದುಕೊಟ್ಟ ಧಾನ್ಯದ ಸಾಲದ ಹತ್ರ ಅದಾಗಿ. ಈ ದಿವಸ ನಾನ
ನಿಮ್ಮಿಂದ ೧೬ ರೂ. ಕ್ರಯ ಬಾಳುವ ೪ ಪಲ್ಲಾ ರಾಗಿಯನ್ನು ಸಾಲವಾ
ತೆಗೆದುಕೊಂಡಿದ್ದೇನೆ. ಇದಕ್ಕೆ ಚುಂಗಡಿ ಪಲ್ಲಾ ೧ಕ್ಕೆ ವರ್ಷ ೧ಕ್ಕೆ ೧
ಸೇರಿನಮೇರೆ ಮೇಲೆ ಕಂಡ ರಾಗಿಗೆ ಆಗುವ ೪೦ ಸೇರು ರಾಗೀ ಚುಂಗ
ಯನ್ನೂ ಮತ್ತು ಮೇಲೆ ಕಂಡ ಅಸಲು ರಾಗಿ ೪ ಪಲ್ಲವನ್ನೂ ಸಹ ಈ ಲ
ಗಾಯಿತು ಒಂದು ವರ್ಷದಲ್ಲಿ ನಿಮಗೆ ಪಾವತಿ ಮಾಡುತ್ತೇನೆಂದು ನಾನ
ಮನಃಪೂರ್ವಕವಾಗಿ ಬರೆದುಕೊಟ್ಟ ಧಾನ್ಯದ ಸಾಲದ ಪತ್ರ.

(ಬರೆದುಕೊಟ್ಟವನ, ಸಾಕ್ಷಿಗಳ ರುಜುವೂ, ಬಿಕ್ಕಲಂ ಸಹ ೧ ನೆಯ ನಮೂನೆಗಿರುವಂತೆ)

ಟಿಪ್ಪಣಿ.

ಸ್ಟಾಂಪು—ಇಲ್ಲಿ ಸ್ಟಾಂಪು ಕಿಮ್ಮತ್ತು ತಿಳಿಯುವುದಕ್ಕಾಗಿ ಸಾಲಾತೆಗೆದುಕೊಂಡ ರಾಗಿಗೆ ೧೬ ರೂ. ಎಂದು ಕಿಮ್ಮತ್ತು ಕಟ್ಟಿರುತ್ತದೆ ಪ್ರತಿಫಲವು ಹಣವರೂಪವಾಗಿಲ್ಲದೆ ಇರುವಾಗ ಯಾವಾಗಲೂ ಪ್ರತಿಫಲಕ್ಕೆ ಸರಿಯಾದ ಬೆಲೆಯನ್ನು ನಮೂದಿಸಬೇಕು. ಬೆಲೆಯನ್ನು ದಸ್ತಾವೇಜುಗಳಲ್ಲಿ ನಮೂದಿಸದೆ ಹೋದರೆ ಬರೆದುಕೊಡುವವನೂ, ದಸ್ತಾವೇಜಿನ ಲೇಖಕನೂ ಸಹ ಕ್ರಿಮಿನಲ್ ತಕ್ಸೀರಿಗೆ ಗುರಿಯಾಗಿ ೫ ಸಾವಿರ ರೂ. ವರೆಗೂ ಜುಲ್ಮಾನೆ ವಿಧಿಸಲ್ಪಡಲು ಅರ್ಹರಾಗುತ್ತಾರೆ.

ನಮೂನೆಯ ನಂಬರ್ ೧೧.

ಜಾಮೀನಿನ ಪತ್ರ ೨ನೇ ವಿಧ.

ಶಕೆ.................ರಲ್ಲೂ... ..ವೆಂಕಟಪ್ಪನಿಗೆ...ರಾಮಯ್ಯನು ಬರೆದುಕೊಟ್ಟ ಜಾಮೀನಿನ ಕ್ರಮವೆಂತಂದರೆ—ನನ್ನ ಅಳಿಯನಾದ ಸುಬ್ಬಯ್ಯನ ಒಳ್ಳೇನಡತೆಗಾಗಿ ನಾನು ಜಾಮೀನಾದರೆ, ನೀವು ಸದರಿ ಸುಬ್ಬಯ್ಯನನ್ನು ನಿಮ್ಮ ಅಂಗಡಿಯಲ್ಲಿ ಗುಮಾಸ್ತೆಯಾಗಿ ಇಟ್ಟುಕೊಳ್ಳುತ್ತೇವೆ ಎಂದು ನೀವು ವಾಗ್ದಾನ ಮಾಡಿದ್ದರಿಂದ, ನಾನು ಒಪ್ಪಿಕೊಂಡಿರುವ ಷರತ್ತುಗಳೇನಂದರೆ—ಸದರಿ ಸುಬ್ಬಯ್ಯನು ನಿಮ್ಮ ಅಂಗಡಿಯಲ್ಲಿ ಈ ಲಾಗಾಯಿತು ೩ ವರ್ಷದ ಪರ್ಯಂತರ ಗುಮಾಸ್ತೇಕೆಲಸವನ್ನೂ, ವ್ಯಾಪಾರದ ಕೆಲಸವನ್ನೂ ಮಾಡಬೇಕು ಈ ವಾಯಿದೆಯೊಳಗೆ ಸದರಿ ವೆಂಕಟಪ್ಪನ ಅವಿಜ್ಞತೆಯಿಂದಲಾದರೂ, ಅಥವಾ ಮೋಸದಿಂದಲಾದರೂ ನಿಮಗೆ ಒಂದುನೂರು ರೂಪಾಯಿವರೆಗೂ, ಉಂಟಾಗಬಹುದಾದ ಲುಕ್ಸಾನನ್ನು ನಿಮಗೆ ಕೊಡಲು ನಾನು ಒಪ್ಪಿಕೊಂಡಿರುತ್ತೇನೆ. ಆದರೆ ನೀವು ಪ್ರತಿಯೊಂದು ತಿಂಗಳಲ್ಲೂ ಸದರೀ ವೆಂಕಟಪ್ಪನು ಬರೆಯುವ ಲೆಕ್ಕಗಳನ್ನು ಅಜಮಾಯಿಷೀಮಾಡಬೇಕು. ೬ ತಿಂಗಳಿಗೊಂದಾವೃತ್ತಿ ನಿಮ್ಮ ಅಂಗಡಿಯ ಸ್ಟಾಕನ್ನು ತೆಗೆಯಬೇಕು. ಎಂದರೆ ನಿಮ್ಮ ಅಂಗಡಿಯ ಜಿನಸಿಯುಪ್ಪೈಕಿ ಬಂದುದು, ಖರ್ಚಾದುದು, ಉಳಿದಿರುವುದು, ಎಷ್ಟೆಂಬದಾಗಿ ಅಜಮಾಯಿಷೀಮಾಡಬೇಕು. ಈ ತನಿಖೆಗಳಲ್ಲಿ ಸದರಿ ವೆಂಕಟಪ್ಪನು ನಿಮಗೆ ಲುಕ್ಸಾನು ಉಂಟಾಗುವಂಥ ತಪ್ಪಿತವನ್ನು ಮಾಡಿರುವುದಾಗಿ ನಿಮಗೆ ತಿಳಿದುಬಂದರೆ ಆ ಕೂಡಲೇ ಅವಿ

ಷಯವನ್ನು ನನಗೆ ತಿಳಿಸಬೇಕು. ಹೀಗೆ ನೀವು ನಡೆದುಕೊಳ್ಳಲು ತಪ್ಪಿದರೆ, ನನ್ನ ಜವಾಬ್ದಾರಿಯು ತಪ್ಪಿಹೋಗುತ್ತದೆ. ಎಂಬುದಾಗಿ ಬರೆದುಕೊಟ್ಟ ಜಾಮೀನು ಪತ್ರ.

(ಬರೆದುಕೊಟ್ಟವನ, ಸಾಕ್ಷಿಗಳ ರುಜುವೂ ಬಿಕ್ಕಲಂ ಸಹ ೧ನೆಯ ನಮೂನೆಗಿರುವಂತೆ.)

ಟಿಪ್ಪಣಿ.

ವಿಚಾರ—೩ ನೇ ಮನುಷ್ಯನಿಂದ ಮೇಲೆ ಕಂಡಂತೆ ಅನೇಕ ದಿವಸಗಳವರೆಗೂ ನಡೆಯಿಸಲ್ಪಡುವ ಅನೇಕ ಕಾರ್ಯಗಳ ವಿಷಯದಲ್ಲಿ ಜಾಮೀನಾದವನು, (ಇಷ್ಟಪಟ್ಟರೆ) ಮುಂದಕ್ಕೆ ತಾನು ಜಾಮೀನು ಆಗುವದಿಲ್ಲವೆಂದು, ಯಾರು ಜಾಮೀನನ್ನು ತೆಗೆದುಕೊಂಡಿದ್ದಾರೋ ಅಂಥವರಿಗೆ ನೋಟೀಸನ್ನು ಕೊಟ್ಟು, ತನ್ನಜವಾಬ್ದಾರಿಯಿಂದ ಮಧ್ಯದಲ್ಲಿ ತಪ್ಪಿಸಿಕೊಳ್ಳಬಹುದು. ಅದರೆ ಆ ನೋಟೀಸು ಕೊಡುವವರೆಗೂ ಉಂಟಾಗಿರುವ ಲುಕ್ಸಾನನ್ನು ಕೊಡಬೇಕಾಗುವುದು. ಕಂ. ೧೩೦.

ಮತ್ತು ಇಂಥ ಜಾಮೀನುದಾರನು ಮಧ್ಯೆ ಮೃತಪಟ್ಟರೆ, ಬಳಿಕ ನಡೆಯತಕ್ಕ ವ್ಯವಹಾರಗಳಿಗೆ ಅವನ ವಾರಸ್ಸುದಾರರು ಜವಾಬ್ದಾರರಾಗುವುದಿಲ್ಲ. ಕಂ. ೧೩೧. ಹಿಂದಣ ಟಿಪ್ಪಣಿಯ ವಿಚಾರವೆಲ್ಲಾ ಇಲ್ಲಿಗೂ ಸಂಬಂಧಿಸುತ್ತದೆ.

ಸ್ಟಾಂಪು—ಎಷ್ಟು ಮೊಬಲಿಗಿನ ಖಾತರೀಬಗ್ಗೆ ಜಾಮೀನು ತೆಗೆದುಕೊಳ್ಳಲ್ಪಡುತ್ತದೋ ಆ ಮೊಬಲಗು ೧,೦೦೦ ರೂ. ಹೆಚ್ಚಿಲ್ಲದಿದ್ದರೆ, ಆ ಮೊಬಲಗಿನಮೇಲೆ ಮೈಸಾಲದ ಪತ್ರದಂತೆ ಸ್ಟಾಂಪು ಹಾಕಬೇಕು. [೧ನೇ ನಮೂನೆಯ ಟಿಪ್ಪಣಿಯನ್ನು ನೋಡಿರಿ) ೧,೦೦೦ ರೂ. ನ ಮೇಲೆ ಎಷ್ಟು ಹೆಚ್ಚಾಗಿದ್ದರೂ ೫ ರೂ. ಸ್ಟಾಂಪು ಮಾತ್ರ ಅವಶ್ಯಕ.

ಸಿವಲ್ ಕ್ರಿಮಿನಲ್ ಕೋರ್ಟುಗಳ ವ್ಯಾಜ್ಯದಲ್ಲಿ, ಜಡ್ಜಿಗಳ ಮತ್ತು ಮ್ಯಾಜಸ್ಟ್ರೇಟರವರ ಅಪ್ಪಣೇಮೇರೆ ಬರೆದುಕೊಡುವ ಜಾಮೀನಪತ್ರಗಳಿಗೆ ೮ ಆಣೆಯ ಬಾಬತು ಕೋರ್ಟು ಫೀ ಸ್ಟಾಂಪನ್ನು ಅಂಟಿಸಬೇಕು. ಕೊ. ಆರ್. ೬,

ಸರ್ಕಾರದವರು ಭೂಮಿಯ ಆಬಾದಿಗಾಗಿಯೂ, ರೈತರ ಪ್ರೋತ್ಸಾಹಕ್ಕಾಗಿಯೂ ಕೊಡುವ ಸಾಲಗಳ ವಿಷಯದಲ್ಲಿ ಬರೆಯಲ್ಪಡುವ ಜಾಮೀನಪತ್ರಗಳಿಗೆ ಸ್ಟಾಂಪು ಅವಶ್ಯಕವಿಲ್ಲ. ಸರಕಾರದ ರೂಲ್ಸ್ ಅನುಸರಿಸಿ

ರಿಜಿಷ್ಟರ್ ಮಯಡಲ್ಪಟ್ಟ ಪರಸ್ಪರ ಸಹಾಯಸಂಘಗಳಲ್ಲಿ ಬರೆದುಕೊಳ್ಳುವ ಪತ್ರಗಳಿಗೂ ಸ್ಟಾಂಪು ಇಲ್ಲಾ.

ರಿಜಸ್ಟ್ರೇಷನ್—೧ ನೇ ನಮೂನೆಯ ಟಿಪ್ಪಣಿಯನ್ನು ನೋಡಿ. ಇಂತಹ ದಸ್ತಾವೇಜುಗಳಲ್ಲಿ ಸ್ಥಿರಸ್ವತ್ತನ್ನು ಆಧಾರವೂ ಸಹ ಮಾಡಬಹುದು. ಹಾಗೆ ಆಧಾರವೂ ಆಗಿದ್ದು ದಸ್ತಾವೇಜಿನ ಮೊಬಲಗು ೧೦೦ ರೂ. ಗೆ ಮೇಲ್ಪಟ್ಟು ಇದ್ದರೆ, ಅವಶ್ಯಕವಾಗಿ ರಿಜಿಸ್ಟರ್ ಮಾಡಿಸಬೇಕು.
ಲಿಮಿಟೇಷನ್—ಹಿಂದಣ ನಮೂನೆಯ ಟಿಪ್ಪಣಿಯನ್ನುನೋಡಿ. H. V. N.

ಇದರ ಮಾದರಿ.

ನಮೂನೆ ನಂಬರ್ ೧೨.

ನೆಲಮಂಗಲದಲ್ಲಿರುವ ರಾ॥ ರಾ॥ ವೀರನಾಗಪ್ಪನವರಿಗೆ, ತಿಪಟೂರು ಅಂದಾನಪ್ಪನವರು ಮಾಡುವ ವಿಜ್ಞಾಪನೆ ಅದಾಗಿ. ಮೂಡಿಗೆರೆ ತಾಲ್ಲೂಕು ಬಸವಪುರದ ನಂಜಪ್ಪನವರ ಮಕ್ಕಳು ವೀರಭದ್ರಪ್ಪನವರು ನಿಮ್ಮಲ್ಲಿ ಬಂದು ನಿಮ್ಮಿಂದ ಕೆಲವು ಉದ್ರಿಯನ್ನೂ ಸಾಲವನ್ನೂ, ಕೇಳುದರು. ಇವರಿಗೆ ಕೊಡುವದಕ್ಕೆ ಅಡ್ಡಿಯಿಲ್ಲ. ಇವರು ನಂಬಿಕಸ್ತರೂ ಪ್ರಾಮಾಣಿಕರೂ ಆಗಿರುತ್ತಾರೆ.

ತಾ.............. ಇತಿ ವಿಜ್ಞಾಪನೆ.

ಸ್ವದಸ್ತೂರು, ಅಂದಾನಪ್ಪನ ರುಜು.

ನಮೂನೆಯ ನಂಬರ್ ೧೩.

ಜಾಮೀನು ಪತ್ರ. ೩ ನೇ ವಿಧ.

(ನ ಮೂ ನೆ.)

ಸನ್ ....ಕಾಮಣ್ಣನಿಗೆ.........ಭೀಮಣ್ಣನು ಬರದುಕೊಟ್ಟ ಜಾಮೀನು ಪತ್ರ ಅದಾಗಿ— ನಮಗೆ...ತಿಮ್ಮಣ್ಣನು ಸನ್......ರಲ್ಲಿ ಬರೆದುಕೊಟ್ಟಿರುವ ರಿಜಸ್ಟರ್ಡ್ ಆದಾರದ ದಸ್ತಾವೇಜಿನ ಬಾಬತು ಅಸಲು ೫೦೦ ರೂ. ಮತ್ತು ಈವರೆಗೆ ಆಗುವ ಬಡ್ಡಿ ೨೦೦ ರೂ. ಜುಮ್ಲಾ ೭೦೦ ರೂಪಾಯಿಗಿಂತ ಹೆಚ್ಚಾಗಿ ಆಧಾರದ ಸ್ವತ್ತಿನಿಂದ ಈ ಹಣವು ವಿಲೆಯಾಗುವ್ವು

ದಿಲ್ಲವಾಗಿ, ನಾನು ಆ ಸಾಲಕ್ಕೆ ಜಾಮೀನಾದರೆ ವಿನಾ ಇಲ್ಲದಿದ್ದರೆ ನೀವು ಈಗಲೇ, ದಾವಾಮಾಡುತ್ತೇವೆ ಎಂದು ಹೇಳಿದುದರಿಂದ ನಾನು ಈ ಪತ್ರವನ್ನು ಬರೆದುಕೊಡುತ್ತೇನೆ. ನೀವು ಇನ್ನು ಒಂದು ವರ್ಷದವರೆಗೂ ದಾವಾಮಾಡಕೂಡದು. ಅಷ್ಟರಲ್ಲಿ ಸದರಿ ತಿಮ್ಮಣ್ಣನು ನಿಮ್ಮ ಸಾಲವನ್ನು ತೀರಿಸುತ್ತಾನೆ, ಹಾಗೆ ಅವನು ತೀರಿಸದಿದ್ದರೆ ನಾನು ಆ ಸಾಲವನ್ನು ತೀರಿಸಲು ಬದ್ಧನಾಗಿರುತ್ತೇನೆ. ಎಂಬದಾಗಿ ನನ್ನ ಖುದ್ದುರಾಜಿಯಿಂದ ಬರೆದುಕೊಟ್ಟ ಜಾಮೀನಪತ್ರ.

ಸಾಕ್ಷಿಗಳು. ....ರುಜು.

ಸ್ಟಾಂಪು......ಮೊದಲಿನ ಪತ್ರಕ್ಕೆ ಸರಿಯಾದ ಸ್ಟಾಂಪು ಕೊಟ್ಟಿದ್ದು ಆ ಪತ್ರದ ಸಾಲಕ್ಕಾಗಿಯೇ ಮತ್ತೊಂದು ಜಾಮೀನಪತ್ರ ಹುಟ್ಟಿದರೆ, ಅದಕ್ಕೆ—ಆ ಜಾಮೀನಪತ್ರದ ಮೊಬಲಗು ೧,೦೦೦ ರೂ. ಮೇಲ್ಪಡದಿದ್ದರೆ ೮ ಆಣೆಯ ಸ್ಟಾಂಪು ಅದಕ್ಕೆ ಮೇಲ್ಪಟ್ಟದ್ದರೆ. ಪ್ರತಿಯೊಂದು ೧,೦೦೦ ರೂ. ಗೂ ಯಾ, ಅದರ ಭಾಗಕ್ಕೂ ೮ ಆಣೆಯಂತೆ ಸ್ಟಾಂಪನ್ನು ಹಾಕಬೇಕು.

ರಿಜಸ್ಟ್ರೇಷನ್ ಮತ್ತು ಲಿಮಿಟೇಷನ್— ಹಿಂದಣ ನಮೂನೆಯ ಟಿಪ್ಪಣಿಯಂತೆ.

ಭಲಾವಣಿಪತ್ರ ಎಂದರೆ ಸಿಫಾರಷ್ಟು ಕಾಗದ ಎಂದರೆ ಲೆಟರ್ ಆಫ್ ಕ್ರೆಡಿಟ್.

ಬರೆಯುವ ನಮೂನೆ.

ಯಾರ ಹೆಸರಿಗೆ ಈ ಕಾಗದವು ಬರೆಯಲ್ಪಡುತ್ತದೋ ಅಂಥವನು ಯಾರಪರವಾಗಿ ಬರೆಯಲ್ಪಡುತ್ತದೋ ಅಂಥವನಲ್ಲಿ ನಂಬಿಕೆಯಿಟ್ಟು ಅವನಿಗೆ ಸಾಲವನ್ನು ಅಥವಾ ಉದ್ರಿಯನ್ನು ಕೊಡಬೇಕೆಂದು ಸಿಫಾರಸ್ಸು ಮಾಡಿ ಒಬ್ಬನು ಬರೆಯಬಹುದಾದ ಕಾಗದಕ್ಕೆ ಈ ಹೆಸರು ಸಲ್ಲುತ್ತದೆ.

ಟಿಪ್ಪಣಿ.

ವಿಚಾರ—ಹೀಗೆ ಸಿಫಾರಷ್ಟು ಕಾಗದವನ್ನು ಬರೆಯುವವನು ಜಾಮೀನ್ದಾರನಂತೆ ಜವಾಬ್ದಾರನಾಗುತ್ತಾನೆ. ಇಷ್ಟು ಹಣದವರೆಗೆ ಮಾತ್ರ ಸಾಲವನ್ನು ಅಥವಾ ಉದ್ರಿಯನ್ನು ಕೊಡಬಹುದೆಂದು ಖಂಡಿತ ಮಾಡಿ ಬರೆದರೆ ಉತ್ತಮ.

ಸ್ಟ್ಯಾಂಪು—೧ ಆಣೆಯ ರಶೀತಿಸ್ಟ್ಯಾಂಪನ್ನು ಅಂಟಿಸಿ ಅದರಮೇಲೆ ರುಜೂಮಾಡಬೇಕು. ಈ ಸಂದರ್ಭದಲ್ಲಿ ಒಂದು ವಿಷಯವನ್ನು ಚೆನ್ನಾಗಿ ಜ್ಞಾಪಕದಲ್ಲಿಟ್ಟುಕೊಳ್ಳಬೇಕು. ಏನಂದರೆ—೧ ಆಣೆಯ ಸ್ಟ್ಯಾಂಪನ್ನು ಹಚ್ಚಿ ಸಲ್ಪಡಬೇಕಾದ ಅಂಡಿಮ್ಯಾಂಡ್ ಪ್ರೋನೋಟ್ ಹುಂಡಿಗಳ ವಿಷಯದಲ್ಲಿ ಹೇಗೋಹಾಗೆ ಇದಕ್ಕೆ ರುಜೂ ಮಾಡುವಾಗ ೧ ಆಣೆ ಸ್ಟ್ಯಾಂಪನ್ನು ಹಚ್ಚಿಸಿದರೆ, ದಶಗುಣದ ಜುಮಾರ್ನೆಯನ್ನು ತೆರಲು ಸಿದ್ಧವಾದರೂ ಸಹ ಇದನ್ನು ಕೋರ್ಟಿನವರು ರುಜುವಾತಾಗಿ ತೆಗೆದುಕೊಳ್ಳುವುದಿಲ್ಲ.

ರಿಜಿಸ್ಟ್ರೇಷನ—ಹಿಂದಣ ನಮೂನೆಯ ಟಿಪ್ಪಣಿಯಂತೆ,

ಲಿಮಿಟೇಷನ...... ಹಣವನ್ನು ಕೊಟ್ಟ ಲಾಗಾಯಿತು ೩ ವರ್ಷದಲ್ಲಿ ದಾವಾ ತರಬೇಕು.

ಅಕ್ನಾಲೆಡ್ಜ್‌ಮೆಂಟ್ ಎಂದರೆ ಒಪ್ಪಿಗೆ ಲಕ್ಷಣ.

ಒಬ್ಬನು ಮತ್ತೊಬ್ಬನಲ್ಲಿ ಅನೇಕ ದಿವಸ ವ್ಯಾಪಾರ, ಲೇವಾದೇವಿ ವಗೈರೆ ವ್ಯವಹಾರಗಳನ್ನು ನಡೆಯಿಸುತ್ತಿರುವಾಗ, ಮಧ್ಯಕಾಲದಲ್ಲಿ ಅವರ ವರಿಗೆ ಲೆಕ್ಕಾಚಾರವಾಗಿ ಒಬ್ಬನಮೇಲೆ ಬಾಕಿಯಾದರೆ, ತನ್ನಮೇಲೆ ಇಷ್ಟು ಬಾಕಿ ಹೊರುತ್ತದೆಂದು ಬಾಕೀದಾರನು ಮುಂದಕ್ಕೆ ರುಜುವಾತನ್ನು ಕಲ್ಪಿಸಬೇಕೆಂಬ ಉದ್ದೇಶದಿಂದ ಬರೆದುಕೊಡುವ ಬರಹಕ್ಕೆ ಈಹೆಸರು ಸಲ್ಲುವದು.

ಇದರ ಮಾದರಿ.

(೨೯ ನೇ ನಮೂನೆ.)

ಈವರೆಗೆ ನಮ್ಮ ನಮ್ಮ ಮಧ್ಯೆ ನಡೆದಿರುವ ಲೇವಾದೇವಿಗಳನ್ನು ಈ ದಿವಸ ನಾವಿಬ್ಬರೂ ಕಲೆತು ಲೆಕ್ಕಾಚಾರ ಮಾಡಲಾಗಿ ನಿಮಗೆ ನನ್ನಿಂದ ೫೦೦ ರೂ. ಸಲ್ಲತಕ್ಕದಾಗಿರುತ್ತದೆ.

ತಾ... ....ರುಜು.

(ಅಥವಾ ಲೆಕ್ಕದಮೇಲೆ ಲೇವಾದೇವಿ ನಡೆದಿದ್ದರೆ

ಈವರೆಗೆ ನಮಗೂ ನಿಮಗೂ ನಡೆದ ವ್ಯವಹಾರದ ಲೆಕ್ಕಗಳನ್ನು ಈ ದಿವಸ ನಾವು ಉಭಯತ್ರರೂ ಸೇರಿ ಅಜಮಾಯಿಷಿ ಮಾಡುವಲ್ಲಿ ನನ್ನ ಮೇಲೆ ಮೇಲೆಕಂಡಂತೆ ೫೦೦ ರೂ. ಬಾಕಿಯಾಗುತ್ತದೆ.

ತಾ . ... ರುಜು.

ಟಿಪ್ಪಣಿ.

ತಪಶೀಲು— ಬಾಕಿಯಾಗುವ ಸದರಿ ಹಣವನ್ನು ತಾನು ಕೊಡುತ್ತೇನೆಂಬ ವಾಗ್ದಾನವನ್ನೂ, ಇಷ್ಟುದಿವಸದಲ್ಲಿ ಕೊಡುತ್ತೇನೆಂಬುವುದನ್ನೂ, ಅಥವಾ ಬಡ್ಡಿಯನ್ನು ಕೊಡುತ್ತೇನೆಂಬುವುದನ್ನೂ, ಈ ಮೊದಲಾದ ಯಾವಷರತ್ತು ಕಂಡಿಷರ್ಜಗಳನ್ನೂ ಕೂಡ ಈ ಒಪ್ಪಿಗೆಯಲ್ಲಿ ಬರೆಯಕೂಡದು.

ಸಾಲಗಾರನು ಅಥವಾ ಬಾಕೀದಾರನು ಅಥವಾ ಇವರಿಂದ ಇದಕ್ಕಾಗಿ ಅಧಿಕಾರಹೊಂದಿದವನು ಈ ಷರತ್ತಿಗೆ ರುಜೂಮಾಡಬೇಕು. ಮತ್ತು ಈ ಒಪ್ಪಿಕೆಯು ಸಾಲಾ ಕೊಟ್ಟವನ ಅಥವಾ ಧಣಿಯು ಹತ್ತಿರವಿರಬೇಕು. ಬರವಣಿಗೆ ಬಾರದವನು ಹೆಬ್ಬೆಟ್ಟಿನ ಗುರ್ತಿನ ರುಜೂ ಮಾಡಬಹುದು.

ಸ್ಟಾಂಪು—೧ ಆಣೆ ಸ್ಟಾಂಪನ್ನು ಅಂಟಿಸಿ ಅದರಮೇಲೆ ರುಜೂಮಾಡಬೇಕು. ಲೆಕ್ಕದ ಜಮಾಖರ್ಚಿನ ಐಟಮ್ಮುಗಳನ್ನು ವ್ಯವಹಾರ ನಡೆಯಿಸುವನಿಂದ ಬರೆಯಿಸುವುದೂ, ಅಥವಾ ಅವುಗಳಿಗೆ ಅವನ ರುಜುವನ್ನು ತೆಗೆದುಕೊಳ್ಳುವದೂ, ಹೇಗೆ ಮಾಡಲ್ಪಟ್ಟರೂ ಹೆಚ್ಚು ಸ್ಟಾಂಪು ಅವಶ್ಯಕವಿಲ್ಲ. ೪ ಕ. ಉಲ೫ ೯. ಕ. ೧೨೭. ಏಕೆಂದರೆ, ಇದು ಲೇವಾದೇವಿ ನಡೆಯಿತೆಂಬುವುದಕ್ಕೆ ರುಜುವಾತಾಗುತ್ತದೆಯೇ ಹೊರತು, ಒಬ್ಬನಿಂದ ಮತ್ತೊಬ್ಬನಿಗೆ ಇಷ್ಟು ಬಾಕಿ ಬರಬೇಕಾಗುವುದೆಂಬುದಕ್ಕೆ ರುಜುವಾತಾಗುವುದಿಲ್ಲ.

ಲೆಕ್ಕಗಳನ್ನು ಅಜಮಾಯಿಷಿಮಾಡಿ, ಐಟಮ್ಮುಗಳನ್ನೆಲ್ಲಾ ಕೂಡಿ ಬಂದ ಲಬ್ಧಗಳೊಂದರಲ್ಲಿ ಮತ್ತೊಂದನ್ನು ಕಳೆದು ಬಾಕಿ ಕಂಡುಹಿಡಿಯುವುದು ಪದ್ಧತಿಯಾಗಿರುತ್ತದೆ. ಹೀಗೆ ಬಾಕಿ ತೆಗೆದು ಅದರ ಕೆಳಗೆ ಬಾಕಿದಾರನು ರುಜು ಮಾಡಿದರೆ ಒಪ್ಪಿಕೆಯಾಗುತ್ತದೆ. ಇದಕ್ಕೆ ಒಂದಾಣೆ ಸ್ಟಾಂಪು ಅವಶ್ಯಕ. ಇಲ್ಲಿ ಬಾಕಿದಾರನು ರೂಜೂ ಮಾಡಿದನಂತರ ಮತ್ತೊಬ್ಬನು ಅದನ್ನು ಕೊಡುವ ಖಾತರಿಬಗ್ಗೆ ತಾನು ಜಾಮೀನಾಗುತ್ತೇನೆಂದು ಬರೆದು ರುಜೂ ಮಾಡಿದರೆ ಒಂದಾಣೆಗಿಂತ ಹೆಚ್ಚು ಸ್ಟಾಂಪು ಅವಶ್ಯಕವಿಲ್ಲವೆಂದು ತೀರ್ಪಾಗಿರುತ್ತದೆ. (ಬಾಬಾಜಿಪಾಂಡು ಸೇಟ್ ಮುಹದ್ದು,) ಬೊ.

ಸಾಲಾ ಕೊಡಬೇಕಾದುದು ಮುಂದಕ್ಕೆ ರುಜೂವಾತಾಗಿ ಪರಿಣಮಿಸಲಿ ಎಂಬ ಉದ್ದೇಶದಿಂದಲ್ಲದೆ ಬೇರೆ ಯಾವ ಸಂದರ್ಭದಲ್ಲಾದರೂ—ಮಸಲ, ಕೋರ್ಟ್ ಕೈಫಿಯತ್ತಿನಲ್ಲಿ ಅಥವಾ ಯೋಗಕ್ಷೇಮಕಾಗದದಲ್ಲಿ—ಋಣಿಯು ಸಾಲ ಕೊಡತಕ್ಕುದನ್ನು ಒಪ್ಪಿಕೊಂಡಿದ್ದರೆ ಅಂಥ ಒಪ್ಪಿಕೆಗೆ ಸ್ಟಾಂಪು ಅವಶ್ಯಕವಿಲ್ಲ. ಹೀಗೆ ಇತರ ಸಂದರ್ಭಗಳಲ್ಲಿ ಒಪ್ಪಿಕೊಂಡ ಲಾಗಾಯಿತು ಲಿಮಿಟೇಷರ್ಜ ವಾಯಿದೆಯು ಕೂಡಿಬರುವುದರಿಂದ, ಇಂಥಾ ಅಂಗೀಕಾರಗ

ಳು ಬಹಳ ಉಪಯೋಗವಾದವುಗಳಾಗಿರುತ್ತವೆ. ಹಿಂದಣ ಟಿಪ್ಪಣಿಯು ಸ್ಟಾಂಪು ಭಾಗವು ಇಲ್ಲಿ ಸಂಬಂಧಿರುತ್ತದೆ.

ರಿಜಿಸ್ಟ್ರೇಷನ್—ಹಿಂದಣ ಟಿಪ್ಪಣಿಯಂತೆ.

ಲಿಮಿಟೇಷನ್—ಒಪ್ಪಿಕೊಂಡು ಕಾಗದ ಬರೆದ ತಾರೀಖು ಲಾಗಾಯಿತು ೩ ವರ್ಷದಲ್ಲಿ ದಾವಾ ತರಬೇಕು.

ಆಧಾರ ಭೋಗ್ಯ ಮೊದಲಾದ ಅಡಮಾನಗಳು.

ತಪಶೀಲ್.

೧. ಆಂಗ್ಲಭಾಷೆಯಲ್ಲಿ ಮಾರ್ಗೇಜ್ ಎಂಬದಾಗಿ ಕರೆಯಲ್ಪಡುವ ಅಡಮಾನದ ವ್ಯವಹಾರಗಳ ಪೈಕಿ ಕೆಳಗೆ ನಮೂದಿಸುವವುಗಳು ಕನ್ನಡ ದೇಶಗಳಲ್ಲಿ ವಾಡಿಕೆಯಲ್ಲಿವೆ.

ಎ. ಆಧಾರ—ಇದರಲ್ಲಿ ಸಾಲಗಾರನು ಸಾಲವನ್ನು ಸ್ವತಃ ತೀರಿಸಲು ಬದ್ಧನಾಗಿ, ಹಾಗೆ ತೀರಿಸದೆ ಹೋದರೆ ಸಾಲಾ ಕೊಟ್ಟವನು ಆಧಾರ ಮಾಡಿದ ಸ್ವತ್ತನ್ನು ಹರಾಜು ಮಾಡಿಸಿ ಸಾಲವನ್ನು ವಿಲೇ ಮಾಡಿಕೊಳ್ಳಬಹುದೆಂದು ಒಪ್ಪಿಕೊಳ್ಳುತ್ತಾನೆ. ಸ್ವತ್ತನ್ನು ಸಾಲಾ ಕೊಟ್ಟವನ ಸುಪರ್ದಿಗೆ ಕೊಡುವುದಿಲ್ಲ. ಇಂಥ ವ್ಯವಹಾರಕ್ಕೆ ತೋರವತ್ತೆ, ತೋರಡವು, ಈಡು, ಅಡಮಾನವೆಂಬ ಹೆಸರುಗಳನ್ನು ಉತ್ತರ, ಪಶ್ಚಿಮ, ಪೂರ್ವದೇಶಗಳಲ್ಲಿ ಹೇಳುತ್ತಾರೆ. ಇಂಗ್ಲೀಷಿನಲ್ಲಿ ಹೈಪಾಥಿಕೇಷನ್ ಅನ್ನುತ್ತಾರೆ.

ಬಿ. ಈಡು—ಇಂಥ ಸ್ವತ್ತಿನಿಂದ ಸಾಲದ ಮೊಬಲಗು ವಿಲೆಯಾಗಬೇಕೆಂಬ ಷರತ್ತು ಇದ್ದು ಈ ಸ್ವತ್ತನ್ನು ಹರಾಜು ಮಾಡಿಸಬಹುದೆಂಬ ಷರತ್ತೂ ಖುದ್ದು ಜವಾಬ್ದಾರಿಯ ಷರತ್ತು ಇಲ್ಲದಿರುವ ವ್ಯವಹಾರಕ್ಕೆ ಈ ಹೆಸರು. ಮುಸಲ—ಜೀವನಾಂಶದ ಮೊಬಲಗು ಇಂಥ ಸ್ವತ್ತಿನಿಂದ ಸಲ್ಲತಕ್ಕದು ಎಂಬ ಷರತ್ತನ್ನು ಮಾಡಿದರೆ ಅಂಥ ಸ್ವತ್ತನ್ನು ಈಡುಮಾಡಿದಂತಾಗುವುದು. ಇಂಗ್ಲೀಷಿನಲ್ಲಿ ಇದಕ್ಕೆ ಚಾರ್ಜ್ ಎಂಬದಾಗಿ ಹೇಳುತ್ತಾರೆ. ಆಧಾರಕ್ಕೂ ಚಾರ್ಜಿಗೂ ಲಿಮಿಟೇಷನ್ ವಿನಾ ಮಿಕ್ಕ ಯಾವ ಭಾಗದಲ್ಲೂ ವ್ಯತ್ಯಾಸವಿಲ್ಲ.

ಸಿ. ಭೋಗ್ಯ—ಸಾಲಗಾರನು ಅಡಮಾನ ಮಾಡಿದ ಸ್ವತ್ತು ಸಾಲಾ ಕೊಟ್ಟವನ ಸ್ವಾಧೀನಾನುಭವಕ್ಕೆ ಕೊಟ್ಟು, ಸಾಲ ತೀರಿಸುವವರೆಗೂ ಆ

ಸ್ವತ್ತನ್ನು ಅವನು ಅನುಭವಿಸಿಕೊಂಡು ಅದರಿಂದುಂಟಾಗುವ ಉತ್ಪತ್ತಿಯನ್ನು ಬಡ್ಡಿಗಾಗಲಿ, ಅಸಲಿಗಾಗಲಿ, ಅಥವಾ ಈ ಎರಡಕ್ಕೂ ಆಗಲಿ ಉತ್ತಾರ ಹಾಕಿಕೊಳ್ಳಬೇಕೆಂದು ಮಾಡಿಕೊಳ್ಳುವ ಕರಾರಿಗೆ ಭೋಗ್ಯವೆಂದು ಹೆಸರು ಇದಕ್ಕೆ ಇಳಿಭೋಗ್ಯ ಸ್ವಾಧೀನ ಅಡಮಾನಗಳೆಂದು ಹೆಸರು.

ಡಿ. ಖರೀದಿ ರೂಪದ ಅಡಮಾನ—ಋಣಿಯು ಅಡಮಾನದ ಸ್ವತ್ತಿನ ಕ್ರಯ ಪತ್ರವನ್ನು ಸಾಲಾ ಕೊಟ್ಟವನ ಹೆಸರಿಗೆ ಬರೆದು, ಸಾಲವನ್ನು ಇಷ್ಟು ದಿವಸದಲ್ಲಿ ತೀರಿಸದೆ ಹೋದರೆ ಸದರೀ ಕ್ರಯವು ಖಾಯಂ ಆಗಬೇಕೆಂದು ಅಥವಾ ಹಾಗೆ ತೀರಿಸಿದರೆ ಸಾಲಾ ಕೊಟ್ಟವನು ಸ್ವತ್ತನ್ನು ಋಣಿಗೆ ವಾಪಸ್ಸು ಕ್ರಯಕ್ಕೆ ಕೊಡಬೇಕೆಂದು ಷರತ್ತು ಬರೆಯುವ ಪತ್ರಕ್ಕೆ ಈ ಹೆಸರು. ಅಥವಾ ಋಣಿಯು ಅಡಮಾನದ ಸ್ವತ್ತನ್ನು ಸಾಲಾಕೊಟ್ಟವನಿಗೆ ಭೋಗ್ಯ ಮಾಡಿ, ಇಷ್ಟು ದಿವಸದೊಳಗೆ ಸಾಲವು ತೀರಿಸಲ್ಪಡದಿದ್ದರೆ ಸಾಲಾಕೊಟ್ಟವನು ಸದರಿ ಸ್ವತ್ತನ್ನು ಕ್ರಯದಾರನಂತೆ ಸಂಪೂರ್ಣ ಹಕ್ಕುದಾರನಾಗಿ ಅನುಭವಿಸಿಕೊಳ್ಳಬೇಕೆಂತಲೂ, ಅದನ್ನು ಭೋಗ್ಯದಿಂದ ಬಿಡಿಸಿಕೊಳ್ಳಲು ತನಗೆ ಹಕ್ಕು ತಪ್ಪಿಹೋಗುವದೆಂತಲೂ ಸಹ ಷರತ್ತುಳ್ಳ ಪತ್ರಕ್ಕೂ ಈ ಹೆಸರು ಸಲ್ಲುತ್ತದೆ. ಇಂಥ ವ್ಯವಹಾರದಲ್ಲಿ ಆಡಮಾನದ ಸ್ವತ್ತನ್ನು ಸಾಲಾ ಕೊಟ್ಟವನ ಸುಫರ್ದು ಮಾಡುವುದೂವುಂಟು, ಮಾಡದಿರುವದೂವುಂಟು.

ವಾಯಿದೆಯೊಳಗೆ ಸಾಲವು ತೀರಿಸಲ್ಪಡದಿದ್ದರೆ, ಭೋಗ್ಯದ ಸ್ವತ್ತು ಭೋಗ್ಯಮಾಡಿಕೊಂಡಿರುವವನಿಗೇ ಸೇರಿಹೋಗತಕ್ಕದ್ದು, ಭೋಗ್ಯದಿಂದ ಬಿಡಿಸಿಕೊಳ್ಳಲು ಋಣಿಗೆ ಹಕ್ಕು ತಪ್ಪೇಹೋಗತಕ್ಕದ್ದು, ಎಂಬ ಭೋಗ್ಯಾಧಾರಗಳಿಂದ ಬಿಡಿಸಿಕೊಳ್ಳುವ ಹಕ್ಕನ್ನು ತಪ್ಪಿಸತಕ್ಕ ಷರತ್ತುಗಳನ್ನು ದಸ್ತಾವೇಜುಗಳಲ್ಲಿ ಬರೆಯುವುದರಿಂದ ಏನೂ ಪ್ರಯೋಜನವಿಲ್ಲ. ಏಕೆಂದರೆ ತೀರಿದಲಾಗಾಯಿತು ೬೦ ವರ್ಷದೊಳಗೆ ಭೋಗ್ಯದಿಂದ ಬಿಡಿಸಿಕೊಳ್ಳಲು ಕೋರ್ಟಿನವರು ಅವನಿಗೆ ಅವಕಾಶ ಕೊಡುತ್ತಾರೆ. ಈ ಹಕ್ಕು ತಪ್ಪಿಸಲು ಯಾವ ವಿಧವಾದ ಷರತ್ತುಗಳಿಂದಲೂ ಆಗುವದಿಲ್ಲ.

ಎಫ್. ಸಾಲದ ಖಾತರೀಬಗ್ಗೆ ಸ್ಥಿರಸ್ವತ್ತಿನ ಹಕ್ಕಿನ ಸಂಬಂಧವಾದ ತಮಸೂಕುಗಳನ್ನು ಸಾಲಾಕೊಟ್ಟವನಲ್ಲಿ ಅಡುವಿಡುವ ವ್ಯವಹಾರಾ ಕ್ರಯ ಪತ್ರ, ದಾನಪತ್ರ ಮೊದಲಾದ ಸ್ಥಿರಸ್ವತ್ತಿನ ಹಕ್ಕಿಗೆ ಸಂಬಂಧಪಟ್ಟ ಮೂಲ ಪತ್ರಗಳನ್ನು ಮಾಲೀಕನಾದ ಋಣಿಯು ತಾನು ಕೊಡಬೇಕಾದ ಸಾಲದ ಖಾತರೀಬಗ್ಗೆ ಸಾಲಾಕೊಟ್ಟವನಲ್ಲಿ ಅಡುವಿಡುವ ಸಂಪ್ರದಾಯವು ಮದ್ರಾಸ್ ಮೊದಲಾದ ಪಟ್ಟಣಗಳಲ್ಲಿ ಉಂಟು. ಹೀಗೆ ಅಡುವಿಡುವುದು ಆಧಾರಕ್ಕೆ

ಸಮಾನವಾದ ವ್ಯವಹಾರವಾಗಿರುತ್ತದೆ. ಹೀಗೆ ಅಡುವಿಟ್ಟ ಅನಂತರ ಆದರೆ ಆಧಾರ ಭೋಗ್ಯದ ಸಾಲಗಳಿಗೆ ಯಾವಸಾಲಕ್ಕೆ ದಸ್ತಾವೇಜುಗಳು ಅಡುವಿಡಲ್ಪಡುತ್ತವೋ, ಆ ಸಾಲವು ಪೂರ್ವಾಧಿಯಾಗುವುದು. ಆದುದರಿಂದ ಕ್ರಮವಾಗಿ ಆಧಾರ ಭೋಗ್ಯಮಾಡಿಕೊಳ್ಳುವ ಸ್ಥಿರಸ್ವತ್ತಿನ ಸಂಬಂಧಪಟ್ಟಮೂಲ ದಸ್ತಾವೇಜುಗಳನ್ನು ತೆಗೆದುಕೊಂಡಿಟ್ಟುಕೊಳ್ಳುವುದು ಅವಶ್ಯಕವಾಗಿರುತ್ತದೆ. ಹೀಗೆ ಗಿರಿವಿ ಎಂದರೆ- ಅಡುವು ಇಡುವುದು. ಅಡುವಿಟ್ಟ ದಸ್ತಾವೇಜಿನಲ್ಲಿ ಕಂಡ ಸ್ಥಿರಸ್ವತ್ತನ್ನು ಮಾಲೀಕನು ಸಾಲಕೊಟ್ಟವನಿಗೆ ಕ್ರಮವಾಗಿ ಭೋಗ್ಯ ಮಾಡಲು ಕರಾರು ಮಾಡಿಕೊಂಡಂತೆ ಊಹಿಸಲ್ಪಡುವುದು. ಹೀಗೆ ದಸ್ತಾವೇಜುಗಳನ್ನು ಅಡುವಿಟ್ಟಿರುವುದನ್ನು ತಿಳಿದು ಮತ್ತೊಬ್ಬನು ಆ ದಸ್ತಾವೇಜುಗಳಿಗೆ ಸಂಬಂದಪಟ್ಟ ಸ್ಥಿರಸ್ವತ್ತನ್ನು ಖರೀದಿಗೆ ತೆಗೆದ ಆ ಕ್ರಯವು ಊರ್ಜಿತವಾಗುವುದಿಲ್ಲ.

೨. ಆಧಾರ ಮಾಡುವ ಸ್ಥಿರಸ್ವತ್ತನ್ನು ಚೆನ್ನಾಗಿ ವಿವರಿಸದೆ ಸುಮ್ಮನೆ "ನಾನು ಸಾಲಾತೀರಿಸಲು ತಪ್ಪಿದರೆ ನನ್ನ ಚರಸ್ಥಿರ ಆಸ್ತಿಯಿಂದೆಲ್ಲಾ ವಿಲೇ ಮಾಡಿಕೊಳ್ಳಬಹುದು" ಎಂಬ ಮೊದಲಾದ ಇಂಥ ಸ್ವತ್ತೇ ಎಂಬುದಾಗಿ ನಿರ್ಧರಿಸುವುದಕ್ಕೆ ಅಸಾಧ್ಯವಾದ ಮಾತುಗಳಿದ್ದರೆ ಆಧಾರ, ಭೋಗ್ಯ ಮಾಡಿದಂತಾಗುವುದೋ ಇಲ್ಲವೋ ಎಂಬುದಕ್ಕೆ ಹೈಕೋರ್ಟುಗಳ ಅಭಿಪ್ರಾಯಗಳು ಬಿನ್ನವಾಗಿರುವುವು. ೯ ಆ ೪೮೬, ೧೨ ಆ. ೭೧೫ ೭ ಕ ೧೯೬.

೩. ವಾಯಿದೆಯೊಳಗೆ ಭೋಗ್ಯದಿಂದ ಬಿಡಿಸಿಕೊಳ್ಳಲಾಗುವುದಿಲ್ಲ. ಆದರೆ ಕೇಳಿದಾಗ ಅಥವಾ ಇಷ್ಟು ದಿವಸಗಳೊಳಗೆ ಸಾಲವನ್ನು ತೀರಿಸಬೇಕೆಂಬ ಷರತ್ತಿದ್ದರೆ ಯಾವಾಗ ಬೇಕಾದರೂ ಬಿಡಿಸಿಕೊಳ್ಳಬಹುದು. ಮಸಲ ೩ ವರ್ಷವಾದಕೂಡಲೆ ಎಂಬುದಕ್ಕೆ ಪ್ರತಿಯಾಗಿ ೩ ವರ್ಷದೊಳಗೆ ಸಾಲವನ್ನು ತೀರಿಸಬೇಕೆಂಬ ಷರತ್ತಿದ್ದರೆ ವಾಯಿದೆಯೊಳಗೆ ಹಣವನ್ನು ಕೊಟ್ಟು ಭೋಗ್ಯದಿಂದ ಬಿಡಿಸಿಕೊಳ್ಳಬಹುದು. ಆಧಾರಪತ್ರದಲ್ಲಿ ವಾಯಿದೆಯು ನಮೂದಿದ್ದರೂ ಆ ವಾಯಿದೆಯೊಳಗೆ ಋಣಿಯು ಸಾಲವನ್ನು ತೀರಿಸಲು ಸಿದ್ಧನಾದರೆ ಸಾಲಾ ಕೊಟ್ಟವನು ಸಾಲವನ್ನು ಫೈಸಲ್ಮಾಡಿಕೊಳ್ಳಬೇಕು.

೪. ಭೋಗ್ಯದ ಸ್ವತ್ತಿನಲ್ಲಿ ಕಿಂಚಿನ್ಮಾತ್ರ ಹಕ್ಕಿರುವವರೆಲ್ಲರೂ ಭೋಗ್ಯದಿಂದ ಬಿಡಿಸಿಕೊಳ್ಳಲು ಹಕ್ಕುಳ್ಳವರಾಗಿರುವರು.

ಉದಾಹರಣೆ— ಭೋಗ್ಯಮಾಡಿದವನೂ, ಇವನ ವಾರಸುದಾರರೂ ಭೋಗ್ಯದ ಸ್ವತ್ತಿನಿಂದ ಜೀವನಾಂಶವನ್ನು ಹೊಂದಲು ಹಕ್ಕುಳ್ಳವರೂ, ಭೋಗ್ಯವಾದಬಳಿಕ ಭೋಗ್ಯದ ಸ್ವತ್ತನ್ನು ಕ್ರಯ ದಾನ ವಗೈರೆ ಮಾಡಿಸಿ

ಕೊಳ್ಳುವವರೂ, ಭೋಗ್ಯದ ಪಾಯಿದೆ ಮುಗಿದನಂತರ ಪುನಃ ಆಧಾರ ಭೋ
ಗ್ಯ ಮಾಡಿಸಿಕೊಳ್ಳುವವರೂ, ಭೋಗ್ಯದ ಸಾಲವನ್ನು ತೀರಿಸಲು ಜಾಮೀ
ನಾಗಿರುವವರೂ, ಮಾಲೀಕನು ಮೈನರು ೧೮ ವರುಷಕ್ಕೆ ಕಮ್ಮಿ ವಯಸ್ಸಿನ
ವರು ಅಥವಾ ಬುದ್ಧಿಸ್ವಾಧೀನವಿಲ್ಲದವನು ಆಗಿದ್ದರೆ ಅಂಥವನ ಗಾರ್ಡಿಯ
ನ್ನೂ, ಮಾಲೀಕನ ಮೇಲೆ ಡಿಕ್ರೀಪಡೆದು ಭೋಗ್ಯದ ಸ್ವತ್ತನ್ನು ಜಫ್ತೀ
ಮಾಡಿಸಿರುವವರೂ ಇವರೆಲ್ಲರೂ ಭೋಗ್ಯದಿಂದ ಬಿಡಿಸಿಕೊಳ್ಳಲು ಹಕ್ಕುಳ್ಳ
ವರಾಗಿರುವರು. ಟ್ರಾ. ೯೧.

ಪರಾಧಿದಾರನು ಪೂರ್ವಾಧಿಯ ಸಾಲವನ್ನು ತೀರಿಸಲು ಅಪೇಕ್ಷಿಸಿದರೆ
ಪೂರ್ವಾಧಿದಾರನು ಹಣವನ್ನು ತೆಗೆದುಕೊಂಡು ಫೈಸಲ್ಮಾಡಿಕೊಳ್ಳಲು ಬದ್ಧ
ನಾಗಿರುತ್ತಾನೆ. ಹಾಗೆ ತೀರಿಸಿದ ಅನಂತರ ಪೂರ್ವಾಧಿದಾರನ ಹಕ್ಕೆಲ್ಲಾ
ಪರಾಧಿದಾರನಿಗೆ ಸೇರುವು ೨.

ಈ ಸಾಲದ ಮೊಬಲಗು ಪೈಕಿ ಕೆಲವು ಭಾಗವನ್ನು ಮಾತ್ರ ಕೊಟ್ಟು
ಆಧಾರ ಭೋಗ್ಯದ ಸ್ವತ್ತಿನ ಪೈಕಿ ಕೆಲವು ಭಾಗವನ್ನು ಮಾತ್ರ ಆಧಾರ
ಭೋಗ್ಯದಿಂದ ಬಿಡಿಸಿಕೊಳ್ಳಲು ಆಗುವುದಿಲ್ಲ. ಆದರೆ ಆಧಾರ ಭೋಗ್ಯ
ಮಾಡಿಕೊಂಡವನೇ ಕ್ರಯ ಮೊದಲಾದ ವ್ಯವಹಾರದ ಮೂಲಕ ಭೋಗ್ಯದ
ಸ್ವತ್ತಿನಲ್ಲಿ ಕೆಲವು ಭಾಗಕ್ಕೆ ಸಂಪೂರ್ಣ ಹಕ್ಕುದಾರಿಯನ್ನು ಹೊಂದಿದರೆ,
ಆಗ ಕೆಲವು ಸಾಲವನ್ನು ಕೊಟ್ಟು ಕೆಲವು ಭಾಗವನ್ನು ಮಾತ್ರ ಬಿಡಿಸಿ
ಕೊಳ್ಳಬಹುದು. ಟ್ರಾ. ೬೦.

ಭೋಗ್ಯಾಧಾರಕ್ಕೆ ಸೇರಿರುವ ಸ್ವತ್ತಿಗೆ ಅನೇಕರು ಹಕ್ಕುದಾರರಾಗಿದ್ದ
ರೆ, ಅವರಪೈಕಿ ಯಾರಾದರೂ ಒಟ್ಟುಸಾಲವನ್ನು ತೀರಿಸಿ ಎಲ್ಲಾಸ್ವತ್ತನ್ನೂ
ಆಧಾರ ಭೋಗ್ಯದಿಂದ ಬಿಡಿಸಿಕೊಳ್ಳಬಹುದು. ಹೀಗೆ ಒಟ್ಟು ಸಾಲವನ್ನು
ತೀರಿಸಿದವನಿಗೆ ಆ ಸ್ವತ್ತಿನಪೈಕಿ ಇತರರ ಹಿಸ್ಸೆಯು ಈಡಾಗಿರುವುದು. ಇವ
ರು ಅವನಿಗೆ ತಮ್ಮ ಭಾಗದ ಬಾಬತು ಸಾಲವನ್ನುಕೊಟ್ಟು ತಮ್ಮ ಸ್ವತ್ತನ್ನು
ಈಡಿನಿಂದ ಬಿಡಿಸಿಕೊಳ್ಳಬಹುದು.

ಉದಾಹರಣೆ- ಮೂವರು ಸಹೋದರರು ಜಂಟಿಯಾಗಿ ತಮ್ಮದೊಂದು
ಜಮೀನನ್ನು ಮತ್ತೊಬ್ಬನಿಗೆ ಭೋಗ್ಯಮಾಡುತ್ತಾರೆ. ಈಗ ಆ ಸಹೋದ
ರರಪೈಕಿ ಯಾರೂಕೂಡ ತಮ್ಮ ಭಾಗದ ಸಾಲವನ್ನು ಕೊಟ್ಟು, ತಮ್ಮ ಭಾ
ಗದ ಜಮೀನನ್ನು ಭೋಗ್ಯದಿಂದ ಬಿಡಿಸಿಕೊಳ್ಳಲಾಗುವುದಿಲ್ಲ. ಆದರೆ ಆ
ಸಹೋದರರ ಪೈಕಿ ಒಬ್ಬನ ಹಿಸ್ಸೆಯ ಜಮೀನನ್ನು ಭೋಗ್ಯಮಾಡಿಕೊಂಡಿ
ರುವವರ ಪೈಕಿ ಒಬ್ಬನು ಕ್ರಯಕ್ಕೆ ತೆಗೆದುಕೊಳ್ಳುವನು. ಈಗ ಮಿಕ್ಕ

ವರು ತಮ್ಮ ತಮ್ಮ ಭಾಗದ ಸಾಲವನ್ನು ಕೊಟ್ಟು ತಮ್ಮ ಭಾಗದ ಜಮೀನನ್ನು ಭೋಗ್ಯದಿಂದ ಬಿಡಿಸಿಕೊಳ್ಳಲಾಗುವುದಿಲ್ಲ. ಆದರೆ ಆ ಸಹೋದರರ ಪೈಕಿ ಒಬ್ಬನ ಹಿಸ್ಸೆಯ ಜಮೀನನ್ನು ಭೋಗ್ಯ ಮಾಡಿಕೊಂಡಿರುವವರ ಪೈಕಿ ಒಬ್ಬನು ಕ್ರಯಕ್ಕೆ ತೆಗೆದುಕೊಳ್ಳುವನು. ಈಗ ಮಿಕ್ಕವರು ತಮ್ಮ ತಮ್ಮ ಭಾಗದ ಸಾಲವನ್ನು ಕೊಟ್ಟು ತಮ್ಮ ಭಾಗದ ಜಮೀನನ್ನು ಭೋಗ್ಯದಿಂದ ಬಿಡಿಸಿಕೊಳ್ಳಬಹುದು. ಆದರೆ ಈ ಸಹೋದರರ ಪೈಕಿ ಒಬ್ಬನು ಒಟ್ಟು ಸಾಲವನ್ನು ಕೊಟ್ಟು ಒಟ್ಟು ಜಮೀನನ್ನು ಭೋಗ್ಯದಿಂದ ಬಿಡಿಸಿಕೊಳ್ಳುವನು. ಈಗ ಇವನು ತೀರಿಸಿದ ಇತರ ಭಾಗದ ಸಾಲಕ್ಕೆ ಸದರಿಯವರ ಭಾಗದ ಸ್ವತ್ತು ಈಡಾಗಿರುವುದು. ಅವರು ತಮ್ಮ ಭಾಗದ ಸಾಲವನ್ನು ಕೊಟ್ಟು ತಮ್ಮ ಭಾಗದ ಹಿಸ್ಸೆಸ್ವತ್ತನ್ನು ಅವನ ಪರವಾಗಿ ಉಂಟಾಗಿರುವ ಭೋಗ್ಯದಿಂದ ಬಿಡಿಸಿಕೊಳ್ಳಬಹುದು.

೬ ಭೋಗ್ಯದಾರನು ಭೋಗ್ಯದ ಷರತ್ತು ಪ್ರಕಾರ ಭೋಗ್ಯದ ಸ್ವತ್ತಿನ ಕಂದಾಯವನ್ನು ಕೊಡಲು ಬದ್ಧನಾಗಿದ್ದರೂ, ಮೋಸದ ಇರಾದೆಯಿಂದ ಕಂದಾಯವನ್ನು ಕೊಡಲು ತಪ್ಪಿ, ಸ್ವತ್ತು ಕಂದಾಯದ ಬಾಕಿಗಾಗಿ ಹರಾಜು ಮಾಡಲ್ಪಟ್ಟು, ಹರಾಜಿನಲ್ಲಿ ಸದರೀ ಸ್ವತ್ತನ್ನು ಭೋಗ್ಯದಾರನಾಗಲಿ ಅಥವಾ ಅವನಿಗೋಸ್ಕರ ಇತರರಾಗಲಿ ಕೊಂಡುಕೊಂಡರೆ, ಆ ಸ್ವತ್ತನ್ನು ಭೋಗ್ಯದಿಂದ ಬಿಡಿಸಿಕೊಳ್ಳುವ ಹಕ್ಕು ಭೋಗ್ಯ ಮಾಡಿದ ಮಾಲೀಕನಿಗೆ ಇದ್ದೇ ಇರುತ್ತದೆ. ಗೊ. ೩೧೮.

೭ ಆಧಾರ ಭೋಗ್ಯದ ಸ್ವತ್ತಿನ ಕಂದಾಯವನ್ನು ಮಾಲೀಕನೇ ಕೊಡಬೇಕೆಂಬ ಕರಾರು ಇದ್ದು, ಕಂದಾಯದ ಬಾಕಿಗಾಗಿ ಆ ಸ್ವತ್ತು ಹರಾಜು ಮಾಡಲ್ಪಟ್ಟರೆ, ಆ ಹರಾಜಿನಲ್ಲಿ ಉತ್ಪತ್ತಿಯಾದ ಮೊಬಲಗಿನ ಪೈಕಿ ಕಂದಾಯದ ಬಾಕಿಗೆ ಹೋಗಿ ಮಿಕ್ಕ ಮೊಬಲಿಗಿನ ಮೇಲೆ ಆಧಾರ ಭೋಗ್ಯದಾರನ ಹಕ್ಕು ಇದ್ದೇ ಇರುತ್ತದೆ. ಟ್ರಾ. ೭೩.

೮ ಆಧಾರ ಭೋಗ್ಯವಾಗಿರುವ ಸ್ವತ್ತು ಹೋಗಿ ಅದಕ್ಕೆ ಬದಲಾಗಿ ಮತ್ತೊಂದು ಸ್ವತ್ತು ಅಥವಾ ಮೊಬಲಗು ಬಂದರೆ, ಆ ಸ್ವತ್ತು ಅಥವಾ ಮೊಬಲಗಿನ ಮೇಲೆ ಮೊದಲಿನ ಆಧಾರ, ಭೋಗ್ಯದ ಹಕ್ಕು ಇದ್ದೇ ಇರುತ್ತದೆ. ಮಸಲ—ಸರ್ಕಾರದವರು ಆಧಾರ ಭೋಗ್ಯದ ಸ್ವತ್ತನ್ನು ಲ್ಯಾಂಡ್ ಅಕ್ವಿಜಿಷನ್ ರೂಲ್ಸ್ ಪ್ರಕಾರ ತೆಗೆದುಕೊಂಡು ಅದಕ್ಕೆ ಕೊಡುವ ಪರಿಹಾರದ ಮೊಬಲಿಗಿನ ಮೇಲೂ, ಅಥವಾ ಅದಕ್ಕೆ ಬದಲಾಗಿ ಕೊಡುವ ಮತ್ತೊಂದು ಸ್ವತ್ತಿನ ಮೇಲೂ ಮೊದಲಿನ ಆಧಾರ, ಭೋಗ್ಯದ ಬಾಧ್ಯತೆ ಇದ್ದೇ ಇರುತ್ತದೆ.

೯ ಕೇಳಿದಾಗ ಅಥವಾ ನಡೆದಷ್ಟು ದಿವಸದಲ್ಲಿ ಸಾಲಾತೀರಿಸಬೇಕೆಂಬ ಕರಾರಿದ್ದಾಗ್ಯೆ ದಾವಾಮಾಡುವುದಕ್ಕಿಂತಮುಂಚೆ ನೋಟೀಸನ್ನು ಕೊಡಬೇಕು.

೧೦ ಭೋಗ್ಯಮಾಡಿದ ಮಾಲೀಕನ ತಪ್ಪಿತದಿಂದ ಭೋಗ್ಯದ ಸ್ವತ್ತು ಭೋಗ್ಯದಾರನ ಸ್ವಾಧೀನವಾಗದೆ ಇದ್ದಲ್ಲೂ, ಅಥವಾ ಸ್ವಾಧೀನತಪ್ಪಿ ಹೋದಲ್ಲೂ, ಸಾಲವು ಭೋಗ್ಯದ ಸ್ವತ್ತಿನ ಉತ್ಪತ್ತಿಯಿಂದ ಖಲೇಯಾಗಬೇಕೆಂಬ ಕರಾರಿರುವುದಾದರೂ ಕೂಡ, ಋಣಿಯು ಸಾಲವನ್ನು ಖುದ್ದಾಗಿ ತೀರಿಸಬೇಕಾಗುವುದು. ಟ್ರಾ. ೬೭.

೧೧ ಮಾಲೀಕನು ಮೊದಲು ತನ್ನ ಸ್ವತ್ತಿನಮೇಲೆ ಮಾಡಿರುವ ಸಾಲವನ್ನು ಮರೆಮಾಚಿ ಮತ್ತೊಬ್ಬನಿಗೆ ಆಧಾರ ಭೋಗ್ಯ ಮಾಡಿದರೂ, ಸಾಲವನ್ನು ತೀರಿಸಬೇಕಾದ ವಾಯಿದೆಯು ಇನ್ನೂ ಕಳೆಯದೇ ಇದ್ದರೂ, ವಾಯಿದೆಯೊಳಗೇ ಅಂಥ ಮತ್ತೊಬ್ಬನು ಸಾಲದ ಹಣಕ್ಕೆ ದಾವಾತರಬಹುದು. ೨೫ ಡಬ್ಲ್ಯು, ಆರ್ ೫೧.

೧೨ ಆಧಾರ, ಭೋಗ್ಯ, ಕ್ರಯಪತ್ರಗಳಲ್ಲಿ "ಯಾವ ವಿಧವಾದ ತಕರಾರು ಬಂದರೂ ನಾನೇ ಜವಾಬ್ದಾರನಾಗಿರುತ್ತೇನೆ" ಅಥವಾ "ನಾನೇ ಅಂಥ ತಕರಾರುಗಳನ್ನು ಪರಿಹರಿಸಿಕೊಡುತ್ತೇನೆ" ಎಂಬ ವಗೈರೆ ಷರತ್ತುಗಳನ್ನು ಪರಭಾರೇಮಾಡುವ ಸ್ವತ್ತಿನ ಮಾಲೀಕರಿಂದ ಆಧಾರ, ಭೋಗ್ಯ ಮೊದಲಾದ ಪತ್ರಗಳಲ್ಲಿ ಬರೆಯಿಸಿಕೊಳ್ಳುವುದು ವಾಡಿಕೆಯಾಗಿರುವುದಷ್ಟೆ. ನ್ಯಾಯವಾದ ಹಕ್ಕುದಾರರಿಂದ ತಕರಾರು ಉಂಟಾದರೆ ಮಾಲೀಕನು ಷರತ್ತುಮೇರೆಗೆ ಜವಾಬ್ದಾರನಾಗುತ್ತಾನೆಯೇ ಹೊರತು ಯಾವ ಹಕ್ಕು ಬಾಧ್ಯತೆಯೂ ಸಂಬಂಧವೂ ಇಲ್ಲದವರು, ಮೋಸದ ಇರಾದೆಯಿಂದಲಾದರೂ ಅಥವಾ ತುಂಟತನದಿಂದಲಾದರೂ ತಕರಾರು ಮಾಡಿದರೂ, ವ್ಯವಹಾರ ನಡೆಯಿಸಿದರೂಕೂಡ ಸ್ವತ್ತನ್ನು ಪರಭಾರೇಮಾಡಿದವನು ಜವಾಬ್ದಾರನಾಗುವುದಿಲ್ಲ. ಆದರೆ ಇಂಥವನಿಂದ ತಕರಾರು ಉಂಟಾದರೆ ಎಂದು ತಕರಾರು ಮಾಡತಕ್ಕವನ ಹೆಸರನ್ನು ಕರಾರಿನಲ್ಲಿ ನಮೂದಿಸಿದ್ದು, ಅಂಥವನಿಂದಲೇ ತಕರಾರು ಉಂಟಾದರೆ, ಆಗ ಮಾಲೀಕನು ಜವಾಬ್ದಾರನಾಗುವನು. ಮತ್ತು ಅಂಥ ಕರಾರಿಗೆ ಒಪ್ಪಿ ಬರೆದುಕೊಟ್ಟವನೇ ಆಗಲಿ, ಅಥವಾ ಅವನ ವಾರಸುದಾರರೇ ಆಗಲಿ ಮಾಡುವ ನ್ಯಾಯವಾದ ಅಥವಾ ಅನ್ಯಾಯವಾದ ಎಲ್ಲಾ ತಕರಾರುಗಳಿಗೂ ಮಾಲೀಕನೇ ಷರತ್ತಿನಪ್ರಕಾರ ಜವಾಬ್ದಾರನಾಗುವನು. ಗೊಲಕ್ಷ್—೩೪೦.

೧೩ ಆಸ್ತಿಯನ್ನು ಪಾಲುಮಾಡಿಕೊಳ್ಳದ ಸಹೋದರರಪೈಕಿ ಒಬ್ಬನು ಸಂಸೃಷ್ಟಸ್ವತ್ತಿನಲ್ಲಿ ಕೆಲವು ಭಾಗವನ್ನು ತನ್ನಭಾಗದ ಹಿಸ್ಸೆಯೆಂದು ಆಧಾರ

ಮಾಡಿದನು. ಬಳಿಕ ಹಾಗೆ ಆಧಾರ ಮಾಡಿದವನಿಗೂ ಅವನ ಅಣ್ಣತಮ್ಮಂದಿರಿಗೂ ಹಿಸ್ಸೆಯಾದುದರಲ್ಲಿ ಆಧಾರ ಮಾಡಿದ ಸ್ವತ್ತು ಮತ್ತೊಬ್ಬನ ಹಿಸ್ಸೆಗೆ ಹೋಯಿತು. ಆಧಾರ ಮಾಡಿದವನ ಪಾಲಿಗೆ ಬಂದ ಇತರ ಸ್ವತ್ತು ಸದರಿ ಆಧಾರ ಹಕ್ಕಿಗೆ ಒಳಪಟ್ಟಿರುತ್ತದೆಂದು ಹೈಕೋರ್ಟಿನವರು ತೀರ್ಮಾನಿಸಿರುತ್ತಾರೆ. ಈ ಸಂದರ್ಭದಲ್ಲಿ ಆಧಾರ ಮಾಡಿಕೊಂಡವನಿಗೆ ಕಡಮೇ ಹಿಸ್ಸೆಯನ್ನು ಕೊಟ್ಟು, ಅಥವಾ ಹಿಸ್ಸೆಯನ್ನು ಕೊಡದೆ, ಮಾಡಿಕೊಳ್ಳುವ ವಿಭಾಗವು ಸಿದ್ಧವಾಗುವದಿಲ್ಲವು. ೧ ಅ ೧೦೬. ಸಿ. ಸಿ.

೧೪ ಭೋಗ್ಯದ ಸ್ವತ್ತು ನಾಶವಾಗುವುದನ್ನುತಪ್ಪಿಸಲೂ, ಕಂದಾಯಕ್ಕೆ ಹರಾಜಾಗುವುದನ್ನು ತಪ್ಪಿಸಲೂ ಮತ್ತು ಇತರರು ಸದರಿ ಸ್ವತ್ತಿಗೋಸ್ಕರ ಮಾಡುವ ವ್ಯವಹಾರಗಳನ್ನು ಪರಿಹರಿಸಿಕೊಳ್ಳಲೂ ಸಹ ಭೋಗ್ಯದಾರನು ಅವಶ್ಯಕವಾದಷ್ಟು ಖರ್ಚುಮಾಡಿ, ಆ ಖರ್ಚುಮಾಡಿದ ಹಣವನ್ನು ತನ್ನ ಅಸಲು ಹಣಕ್ಕೆ ಸೇರಿಸಿಕೊಂಡು ದಾವಾತರಬಹುದು. ಮತ್ತು ಅಸಲಿಗೆ ಯಾವ ದರದ ಬಡ್ಡಿಯೋ ಅದೇ ಬಡ್ಡಿಯನ್ನು ಹೀಗೆ ಖರ್ಚುಮಾಡಿದ ಹಣಕ್ಕೂಸಹ ಕೊಡಿಸುವರು. ಮತ್ತು ಆಧಾರದ ಸ್ವತ್ತು ಕಂದಾಯದ ಬಾಕಿಜಾತ ಹರಾಜು ಆಗುವುದನ್ನು ತಪ್ಪಿಸಲು ಆಧಾರ ಮಾಡಿಕೊಂಡಿರುವವನು ಸರ್ಕಾರಕ್ಕೆ ಕೊಟ್ಟ ಕಂದಾಯದ ಮೊಬಲಗನ್ನು ಅದೇಮೇರೆಗೆ ಅಸಲಿಗೆ ಸೇರಿಸಿಕೊಂಡು ಒಟ್ಟು ಹಣಕ್ಕೆ ದಾವಾ ತರಬಹುದು. ಟ್ರಾ ೭೩.

೧೫ ಒಂದು ಸ್ವತ್ತು ಮೊದಲು ಒಬ್ಬನಿಗೂ ಅನಂತರ ಮತ್ತೊಬ್ಬನಿಗೂ ಎರಡಾವೃತ್ತಿ ಆಧಾರ ಮಾಡಲ್ಪಡುತ್ತದೆ. ಈ ಮೊದಲನೇ ಆಧಾರದ ಸಾಲವು ಮೂರನೇ ಮನುಷ್ಯನ ಹಣದಿಂದ ತೀರಿಸಲ್ಪಡುತ್ತದೆ. ಈಗ ಸದರಿ ಮೂರನೇ ಮನುಷ್ಯನಿಗೆ ಮೊದಲನೇ ಆಧಾರದ ಪೂರ್ವದ ಹಕ್ಕು ಸಲ್ಲಬೇಕಾದರೆ ಅವನು ಏನು ಮಾಡಬೇಕು ? ಮೂರನೆ ಮನುಷ್ಯನು ತನ್ನ ಕೈಯಿಂದ ಮೊದಲನೇ ಆಧಾರದಾರನಿಗೆ ಮೊಬಲಗನ್ನುಕೊಡದೆಯೂ, ಆಧಾರದ ಸಾಲವು ತೀರಿದನಂತರ ಆ ಆಧಾರವನ್ನು ತನ್ನ ಹೆಸರಿಗೆ ವರ್ಗ ಮಾಡಿಸಿಕೊಳ್ಳದೆಯೂ ಹೋದರೆ ಅಂಥ ಮೂರನೇಮನುಷ್ಯನಿಗೆ ಮೊದಲನೇ ಆಧಾರದ ಹಕ್ಕು ಸಲ್ಲುವುದಿಲ್ಲ. ೬ ಬೊ, ೬೪. ಮೂರನೇಮನುಷ್ಯನು ಕೊಡುವ ಹಣದಿಂದ ಮೊದಲನೇಆಧಾರದ ಸಾಲವು ತೀರಿಸಲ್ಪಟ್ಟಿತೆಂದು ಸದರಿ ಮೂರನೇ ಮನುಷ್ಯನು ಬರೆಯಿಸಿಕೊಳ್ಳುವ ಆಧಾರದ ಪತ್ರದಲ್ಲಿ ನಮೂದಿದ್ದರೂ ಮತ್ತು ಫೈಸಲಾದ ಮೊದಲನೇ ಆಧಾರದ ಪತ್ರವು ಸದರಿ ಮೂರನೇಮನುಷ್ಯನಿಗೆ ದಾಖಲೆಗಾಗಿ ಕೊಡಲ್ಪಟ್ಟಿದ್ದರೂ ಕೂಡ ಈ ಮೂರನೇಮನುಷ್ಯನಿಗೆ ಮೊದಲನೇ ಆಧಾರದ ಹಕ್ಕುಸಲ್ಲುವು

ದಿಲ್ಲ. ೧೪ ಬೊ. ೮೩, ೧೧ ಕ. ೨೫೮. ಆದುದರಿಂದ ಪ್ರಥಮ ಆಧಾರದ ಸಾಲವನ್ನು ತೀರಿಸುವ ಮೊದಲನೆ ಮನುಷ್ಯನು ಸದರಿ ಪೂರ್ವಾಧಿಯ ಹಕ್ಕು ತನಗೆ ಬರಬೇಕೆಂದು ಅಪೇಕ್ಷಿಸಿದರೆ, ಆ ಪೂರ್ರ್ವಾಧಿದಾರನಿಗೆ ತಾನೇ ಮೊಬಲಗನ್ನು ಕೊಟ್ಟು ಅವನಿಂದ ಸದರಿ ಪೂರ್ರ್ವಾಧಿಯ ಪತ್ರವನ್ನು ವರ್ಗ ತೆಗೆದುಕೊಳ್ಳುವುದು ಉತ್ತಮ. ಅಥವಾ ಅಂಥ ಪೂರ್ವಾಧಿಯನ್ನು ಋಣಿಯ ಮೂಲಕವೇ ತೀರಿಸಬೇಕಾಗಿ ಬಂದರೆ, ಅಂಥ ಋಣಿಯಿಂದ ಬರೆಯಿಸಿಕೊಳ್ಳಬಹುದಾದ ಆಧಾರ ವಗೈರೆ ಪತ್ರದಲ್ಲಿ ಸದರಿ ಪೂರ್ವಾಧೀಹಕ್ಕನ್ನು ಉಳಿಸಿಕೊಂಡಿದೆ ಎಂಬುದನ್ನು ತೋರಿಸತಕ್ಕ ಮಾತುಗಳನ್ನು ಪತ್ರದಲ್ಲಿ ಬರೆಯಿಸಿಕೊಳ್ಳಬೇಕು.

೧೩ ವೆಂಕಟರಡ್ಡಿಯು ತನ್ನ ಭೂಮಿಯನ್ನು ಮೊದಲು ತಿಮ್ಮೇಗೌಡನಿಗೂ, ಅನಂತರ ನಂಜುಂಡಪ್ಪನಿಗೂ ಆಧಾರ ಮಾಡುತ್ತಾನೆ. ನಂಜುಂಡಪ್ಪನಿಗೆ ಆಧಾರವಾದ ವಿಷಯವನ್ನು ತಿಳಿಯದ ತಿಮ್ಮೇಗೌಡನು ನಂಜುಂಡಪ್ಪನಿಗಾದನಂತರ, ತನ್ನ ಆಧಾರಪತ್ರದ ಮೇಲೆ ಬರಬೇಕಾದ ಅಸಲು ಬಡ್ಡಿಯ ಮೊತ್ತಕ್ಕೆ ಅದೇ ಸ್ವತ್ತನ್ನು ಭೋಗ್ಯಮಾಡಿಕೊಳ್ಳುತ್ತಾನೆ. ಈಗ ೨ ನೇ ಸಲ ಹುಟ್ಟಿದ ನಂಜುಂಡಪ್ಪನ ಪತ್ರ ಮತ್ತು ೩ ನೇ ಸಲ ಹುಟ್ಟಿದ ತಿಮ್ಮೇಗೌಡನ ಭೋಗ್ಯಪತ್ರ ಅವುಗಳಪೈಕಿ ಯಾವುದಕ್ಕೆ ಪೂರ್ರ್ವಾಧಿಯಹಕ್ಕಿದೆ ಎಂಬುದನ್ನು ವಿಚಾರ ಮಾಡಬೇಕು ಮೊದಲನೆಯದಾದ ತಿಮ್ಮೆಗೌಡನ ಪತ್ರದ ಹಣಕ್ಕೆ ೩ ನೇ ಪತ್ರವು ಹುಟ್ಟಿರುವುದರಿಂದ ಈ ೩ ನೇ ಪತ್ರವೇ ನಂಜುಂಡಪ್ಪನ ಪತ್ರಕ್ಕಿಂತ ಪೂರ್ವಾಧಿಯಾಗುತ್ತದೆ. ಇದಕ್ಕೆ ಹೊಸದಾಗಿ ಕೊಟ್ಟ ಸಾಲದ ಮೊಬಲಗು ಸೇರಿದ್ದರೂ ಸಹ ಪೂರ್ವದ ಪತ್ರದ ಮೊಬಲಗಿನಷ್ಟು ಇದು ಪೂರ್ವಾಧಿಯಾಗುವುದು. ಆದರೆ ಈ ಮೂರನೇಪತ್ರದಲ್ಲಿ ಮೊದಲನೇಪತ್ರದ ವಿಷಯವನ್ನು ಹೊಗಳದಿದ್ದರೆ ಇದು ಪೂರ್ರ್ವಾಧಿಯಾಗಲಾರದು. ಫೋಸ್. ೮೪೧-೫೪೩. ಕಲ್‌ಕತ್ತಾ; ೧೪

ರೂಲ್ಸ್ ಹೀಗಿದ್ದರೂ ಕೂಡ ಮೊದಲೇ ಆಧಾರ ಭೋಗ್ಯಪತ್ರಗಳನ್ನು ರದ್ದುಮಾಡಿ ಆ ಪತ್ರದ ಹಣಕ್ಕೆ ಎರಡನೆಯಾವೃತ್ತಿ ಪತ್ರವನ್ನು ಬರೆಯಿಸಿಕೊಳ್ಳುವುದು ಒಳ್ಳೆಯದಲ್ಲ. ಮೊದಲನೆಯ ಪತ್ರವನ್ನು ಬರೆದುಕೊಟ್ಟವನು ಆಸ್ತಿಯ ಸಂಪೂರ್ಣವಾದ ಹಕ್ಕುದಾರನಾಗಿದ್ದರೆ, ಅವನಿಂದ ಪುನಃ ಪತ್ರವನ್ನು ಅದೇಹಣಕ್ಕೆ ಬರೆಯಿಸಿಕೊಳ್ಳುವುದು, ಅಥವಾ ಅವನು ಸತ್ತಮೇಲೆ, ಅವನ ವಾರಸ್ಸುದಾರರಿಂದ ಪುನಃ ಬರೆಯಿಸಿಕೊಳ್ಳುವುದು ಸಹ ಕೆಟ್ಟದು. ಪುನಃ ಸಾಲವನ್ನು ಅದೇ ಸ್ವತ್ತನ್ನು ಆಧಾರ ಭೋಗ್ಯ

ಮಾಡಿಸಿಕೊಳ್ಳಬೇಕಾದರೆ, ಪುನಃ ಈ ಹಣಕ್ಕೇ ಬೇರೇ ಪತ್ರವನ್ನು ಬರೆಯಿಸಿಕೊಳ್ಳುವುದು ಉತ್ತಮ

೧೭ ಪೂರ್ವಾಧೀಸಾಲಕ್ಕಾಗಿ ಜಾಮೀನಾಗಿದ್ದವನು ಆ ಸಾಲವನ್ನು ತೀರಿಸಿದರೆ ಅವನಿಗೆ ಪೂರ್ವಾರ್ಧೀ ಹಕ್ಕು ಸಲ್ಲುವುದು. ಮತ್ತು ಮೊದಲನೇ ಆಧಾರದ ಸಾಲವನ್ನು ತೀರಿಸಿದ ಎರಡನೇ ಆಧಾರದಾರನಿಗೂ ಆ ಪೂರ್ವಾಧೀ ಹಕ್ಕು ಸಲ್ಲುವುದು.

೧೮ ಆಧಾರ ಭೋಗ್ಯ ಮಾಡಿಕೊಂಡಿರುವವನೇ ಸದರಿ ಆಧಾರ ಭೋಗ್ಯದ ಸ್ವತ್ತನ್ನು ಕೋರ್ಟಿನಮೂಲಕವಾಗಿಯೇ ಆಗಲಿ ಹೊರಗೇ ಆಗಲಿ ಕ್ರಯಕ್ಕೆ ತೆಗೆದುಕೊಂಡರೆ ಅವನಿಗೆ ಮೊದಲಿದ್ದ ಆಧಾರ ಭೋಗ್ಯದಹಕ್ಕು ಕ್ರಯದಲ್ಲಿ ಲೀನವಾಗಿ ತೀರಿಹೋಗುತ್ತದೆ. ಆದರೆ ಸದರಿ ಹಕ್ಕು ನಡೆದು ಬರಬೇಕೆಂಬುದನ್ನು ತೋರಿಸತಕ್ಕ ಸರಿಯಾದ ಬರವಣಿಗೆಯನ್ನು ಕ್ರಯ ಪತ್ರದಲ್ಲಿ ಬರೆಯಿಸಿಕೊಂಡರೂ, ಅಥವಾ ಆಗಿನ ಸಂದರ್ಭದಲ್ಲಿ ಆ ಹಕ್ಕನ್ನು ಇಟ್ಟುಕೊಳ್ಳುವುದು ಅವನಿಗೆ ಲಾಭಕರವಾದುದೆಂದು ಊಹಿಸಲ್ಪಡುಬಹುದಾಗಿದ್ದರೂ ಸಹ, ಸದರಿ ಆಧಾರ ಭೋಗ್ಯದ ಹಕ್ಕು ತಪ್ಪಿಹೋಗುವುದಿಲ್ಲ

ಉದಾಹರಣೆ— ಲಿಂಗಯ್ಯನು ಸೂಗಯ್ಯನ ಜಮೀನನ್ನು ೨೦೦ ರೂಪಾಯಿಗೆ ಭೋಗ್ಯ ಮಾಡಿಕೊಂಡಿರುತ್ತಾನೆ. ಇವನಿಗೇ ಭೋಗ್ಯವಾದ ಮೇಲೆ ಶಿದ್ದಯ್ಯನಿಗೆ ಆ ಜಮೀನು ೧೦೦ ರೂಪಾಯಿಗೆ ಆಧಾರವಾಗುತ್ತದೆ. ಇದಾದಮೇಲೆ ಲಿಂಗಯ್ಯನು ಆ ಜಮೀನನ್ನೇ ಕ್ರಯಮಾಡಿಕೊಳ್ಳುತ್ತಾನೆ. ಅನಂತರ ಶಿದ್ದಯ್ಯನು ಸೂಗೈಯ್ಯನಮೇಲೆ ತನ್ನ ಸಾಲಕ್ಕಾಗಿ ಡಿಕ್ರೀಪಡೆದುಕೊಂಡು ಜಮೀನನ್ನು ಹರಾಜಿಗೆ ತರುತ್ತಾನೆ. ಈಗ ಲಿಂಗಯ್ಯನಿಗೆ ಭೋಗ್ಯದ ಹಕ್ಕು ಉಳಿಸಿಕೊಳ್ಳುವುದು ಅವನಿಗೆ ಲಾಭಕರವಾದುದರಿಂದ ಕ್ರಯಮಾಡಿಸಿಕೊಂಡಿದ್ದರೂಕೂಡ ಭೋಗ್ಯದಹಕ್ಕು ಉಳಿದಿರುತ್ತದೆ ಲಿಂಗಯ್ಯನು ಡಿಕ್ರೀಮೊಬಲಗನ್ನು ತಾನು ಕೊಟ್ಟುತಾನು ಕ್ರಯಮಾಡಿಕೊಂಡಿರುವ ಜಮೀನನ್ನು ಉಳಿಸಿಕೊಳ್ಳಲು ಅಪೇಕ್ಷಿಸದೆ ಇದ್ದರೆ, ಲಿಂಗಯ್ಯನ ಭೋಗ್ಯದ ಮೊಬಲಗನ್ನು ಶಿದ್ದಯ್ಯನು ಕೊಟ್ಟು ಜಮೀನನ್ನು ನನ್ನು ಹರಾಜು ಮಾಡಿಸಿ ತನ್ನ ಡಿಕ್ರೀ ಮೊಬಲಗನ್ನು ಪಿಲೇ ಮಾಡಿಕೊಳ್ಳಬೇಕು.

೧೯ ಪೂರ್ವಾರ್ಧಿದಾರನ ರಿಜಿಸ್ಟರಾಗದಿರುವ ಅಧಾರ ಭೋಗ್ಯದ ಹಕ್ಕನ್ನು ತಿಳಿದು ಪುನಃ ಆಧಾರ ಭೋಗ್ಯ ಮಾಡಿಕೊಳ್ಳುವ ಈಚಿನವನ ಆಧಾರ, ಭೋಗ್ಯದ ಪ್ರತ್ರವು ರಿಜಿಸ್ಟರಾಗಿದ್ದರೂ ಕೂಡ ಪೂರ್ವಾರ್ಧಿಯ

ನ್ನು ಬಾಧಿಸಲಾರದು. ೧೯ ಆ ೧೪೫. ಆದರೆ ಪೂರ್ವಾರ್ಥಿಯನ್ನು ತಿಳಿದು ಪುನಃ ಆಧಾರ ಭೋಗ್ಯ ಮಾಡಿಕೊಳ್ಳುವ ಮನುಷ್ಯನಿಗೆ ಉಂಟಾಗುವ ಬಾಧಕವು ಅವನಿಂದ ಅಂಥ ತಿಳುವಳಿಕೆಯಿಲ್ಲದೆ ಕ್ರಮವಾಗಿ ತೆಗೆದುಕೊಳ್ಳುವ ಮನುಷ್ಯನಿಗೆ ಉಂಟಾಗುವುದಿಲ್ಲ. ಮತ್ತು ಅಂಥ ತಿಳುವಳಿಕೆಯಿಲ್ಲದೆ ತೆಗೆದುಕೊಂಡವನಿಂದ ತಿಳುವಳಿಕೆಯಿಂದ ತೆಗೆದುಕೊಳ್ಳುವ ಮನುಷ್ಯನಿಗೂ ಸಹ ಯಾವ ಬಾಧಕವೂ ಇಲ್ಲ. ಗೊ. ೫೨೪.

ಉದಾಹರಣೆ— ಕಾಮನು ತನ್ನ ಜಮೀನನ್ನು ಸೀನನಿಗೆ ೧೦೦ ರೂಪಾಯಿಗೆ ಆಧಾರಮಾಡಿ ಪತ್ರ ಬರೆದುಕೊಡುತ್ತಾನೆ. ಆದರೆ ಆ ಪತ್ರವು ರಿಜಿಸ್ಟರಾಗದಿರುವುದನ್ನು ತಿಳಿದು, ಈ ಲೋಪದ ಕಾರಣದಿಂದ ಪೂರ್ವಾರ್ಥಿದಾರನಿಗೆ ಮೋಸ ಮಾಡಬೇಕೆಂಬ ಇರಾದೆಯಿಂದ ಕಪ್ಪಯ್ಯನು ಕಾಮನಿಂದ ಅದೇ ಜಮೀನನ್ನು ೧೫೦ ರೂಪಾಯಿಗೆ ಪುನಃ ಆಧಾರಮಾಡಿಸಿಕೊಂಡು ಪತ್ರ ಬರೆಯಿಸಿಸಿಕೊಂಡು ರಿಜಿಸ್ಟರ್ ಮಾಡಿಸಿಕೊಳ್ಳುವನು. ಆದರೂ ಕಪ್ಪಯ್ಯನ ಆಧಾರವು ಸೀನನ ಪೂರ್ವಾರ್ಥಿಯನ್ನು ಬಾಧೆಪಡಿಸುವುದಿಲ್ಲ. ಈಗ ಕಪ್ಪಯ್ಯನು ಮೋಸದ ಇರಾದೆಯಿಂದ ಆಧಾರ ಮಾಡಿಸಿಕೊಂಡಿರುವುದನ್ನು ತಿಳಿಯದೆ ವೆಂಕಟಪ್ಪನು ಸರಿಯಾದ ಪ್ರತಿಫಲಕ್ಕೆ ಕಪ್ಪಯ್ಯನ ಆಧಾರಪತ್ರವನ್ನು ಮೇಡೋವರ್ ತೆಗೆದುಕೊಳ್ಳುತ್ತಾನೆ. ವೆಂಕಟಪ್ಪನ ಮೇಡೋವರ್ ಆಧಾರಪತ್ರವು ಪೂರ್ವಾರ್ಥಿಯಾಗುತ್ತದೆಯೇ ಹೊರತು ಸೀನನದು ಆಗುವದಿಲ್ಲ. ಅನಂತರ ಕಪ್ಪಯ್ಯನ ಮೋಸಕೃತ್ಯವನ್ನು ಚೆನ್ನಾಗಿ ತಿಳಿದುಕೊಂಡಿದ್ದ ಅಪ್ಪಣ್ಣನು ವೆಂಕಟಪ್ಪನ ಆಧಾರಪತ್ರವನ್ನು ತಾನು ಮೇಡೋವರ್ ತೆಗೆದುಕೊಳ್ಳುತ್ತಾನೆ. ಈ ಅಪ್ಪಣ್ಣನ ಮೇಡೋವರ್ ಪತ್ರವೂ ಸಹ ಪೂರ್ವಾರ್ಥಿಯಾಗುತ್ತದೆಯೇ ಹೊರತು ಸೀನನದು ಅಗುವುದಿಲ್ಲ.

೨೦ ಹಿಂದೂ ಧರ್ಮಶಾಸ್ತ್ರಗಳ ಪ್ರಕಾರ ಅಧಿಕ್ರಯ ದಾನಗಳನ್ನು ಬರಹಮೂಲಕವಾಗಿಯೇ ಮಾಡಬೇಕೆಂಬ ನಿರ್ಬಂಧವಿಲ್ಲ. ಆದರೆ ಇವುಗಳ ವಿಷಯದಲ್ಲಿ ಪತ್ರಗಳನ್ನು ಬರೆದರೆ ಅವುಗಳು ರಿಜಿಸ್ಟ್ರೇಷನ್ ಮತ್ತು ಸ್ಟಾಂಪ್ ಆಕ್ಟುಗಳಿಗೆ ಅನುಸಾರವಾಗಿರಬೇಕು. ಟ್ರಾನ್ಸ್‌ಫರ್ ಆಫ್ ಪ್ರಾಪರ್ಟಿ ಆಕ್ಟ್ ಜಾರಿಯಲ್ಲಿರುವ ಬ್ರಿಟಿಷ್ ದೇಶಗಳಲ್ಲಿ ಕೆಲವು ಪರಾಧೀನಗಳನ್ನು ಬರಹದಮೂಲಕವಾಗಿಯೇ ಮಾಡಬೇಕೆಂಬ ನಿರ್ಬಂಧವಿರುತ್ತದೆ.

೨೧ ಒಬ್ಬನು ಮತ್ತೊಬ್ಬನಲ್ಲಿ ಮೊದಲು ಭೋಗ್ಯದಮೇಲೂ, ಅನಂತರ ಮೈಸಾಲವಾಗಿಯೂ, ಎರಡಾವೃತ್ತಿ ಸಾಲಗಳನ್ನು ತೆಗೆದುಕೊಳ್ಳುತ್ತಾನೆ. " ಮೊದಲಿನ ಭೋಗ್ಯದ ಸಾಲವನ್ನು ತೀರಿಸುವಾಗ ಈ ಮೈಸಾಲವನ್ನು

ತೀರಿಸಿ ಸ್ವತ್ತನ್ನು ಭೋಗ್ಯದಿಂದ ಬಿಡಿಸಿಕೊಳ್ಳುತ್ತೇನೆ" ಎಂದು ಎರಡ ನೆಯ ಪೈಸಾಲದ ಪತ್ರದಲ್ಲಿ ಷರತ್ತನ್ನು ಬರೆದುಕೊಡುವನು. ಇಂಥ ಷರತ್ತಿದ್ದರೂ ಪೈಸಾಲವನ್ನು ಕೊಡದೆ ಭೋಗ್ಯದ ಸಾಲವನ್ನುಮಾತ್ರ ಕೊಟ್ಟು ಸ್ವತ್ತನ್ನು ಭೋಗ್ಯದಿಂದ ಬಿಡಿಸಿಕೊಳ್ಳಲು ಈಷರತ್ತು ಅಡ್ಡಿ ಮಾಡುವುದಿಲ್ಲ.

೨೨ ಆಧಾರ ಭೋಗ್ಯದ ದಸ್ತಾವೇಜನಲ್ಲಿ ನಿಷ್ಕರ್ಷಿಸಲ್ಪಟ್ಟಿರುವ ದರದಂತೆಯೇ ಡಿಕ್ರಿಯಲ್ಲಿ ಡಿಕ್ರೀಹಣವನ್ನು ಕೊಡಲು ಗೊತ್ತುಮಾಡಲ್ಪ ಟ್ಟ ವಾಯಿದೆಯವರೆಗೂ ಬಡ್ಡಿಯು ಸಲ್ಲತಕ್ಕುದಾಗಿರುತ್ತದೆ. ಅನಂತರ ಸೇಕಡಾ ೬ ರೂ. ನಂತೆ ಸಲ್ಲತಕ್ಕುದು. ೩೧ ಕ. ೧೩೮. ೨೩೩.

೨೩ ಸ್ಥಿರಸ್ವತ್ತನ್ನು ಆಧಾರ ಮಾಡಿದವನು ಎದುವರೆಗೂ ಆ ಸ್ವತ್ತ ನ್ನು ತನ್ನ ಸುಪರ್ದಿನಲ್ಲಿ ಇಟ್ಟುಕೊಂಡಿರುವನೋ, ಅದುವರೆಗೂ ಆ ಭೂಮಿಯಮೇಲೆ ಸರ್ಕಾರಕ್ಕೆ ಸಲ್ಲತಕ್ಕ ಕಂದಾಯವನ್ನು ಸಲ್ಲಿಸುತ್ತಾ ಬರಬೇಕು. ಮೋಸದಿಂದ ಹಾಗೆಮಾಡಲು ತಪ್ಪಿ, ಅದನ್ನು ಕಂದಾಯದ ಬಾಕಿಗಾಗಿ ಹರಾಜು ಮಾಡುವಂತೆ ಮಾಡಿ. ಮತ್ತೊಬ್ಬನ ಹೆಸರಿಗೆ. ತನ ಗೋಸ್ಕರ ಕ್ರಯಮಾಡಿಸಿದರೆ ಆಧಾರದ ಹಕ್ಕು ತಪ್ಪುವದಿಲ್ಲ. ೧೦ ಮೂ. ಇ. ಅ. ೫೪೦. ೫೫೭.

೨೪ ಅವಿಭಕ್ತ ಕುಟುಂಬದವರ ಪೈಕಿ ತಂದೆಯು ತನ್ನ ಸ್ವಾಂತಕ್ಕಾಗಿ ಮಾಡುವ ಕುಟುಂಬದ ಸ್ವತ್ತಿನ ಆಧಾರ ಭೋಗ್ಯವು ಊರ್ಜಿತವಾಗಬೇ ಕಾದರೆ, ಆ ಆಧಾರ ಭೋಗ್ಯವು ಹಿಂದಣಸಾಲಕ್ಕೋಸ್ಕರ ಮಾಡಲ್ಪಟ್ಟು ದಾಗಿರಬೇಕು. ಸಾಲ ಮಾಡಿದಾಗಲೇ ಆ ಸಾಲಕ್ಕೆ ಮಾಡುವ ಆಧಾರ ಭೋಗ್ಯವು ಊರ್ಜಿತವಾಗುವುದಿಲ್ಲ; ಮಕ್ಕಳ ತಕರಾರಿಗೆ ಒಳಪಟ್ಟೇ ಇ ರುವುದು. ೨೧ ಮ. ೨೮.

೨೫ ಸ್ಥಿರಸ್ವತ್ತನ್ನು ಭೋಗ್ಯಮಾಡಿಕೊಂಡು ಸ್ವತ್ತನ್ನು ಅನುಭವಿ ಸುವವನು ಆ ಸ್ವತ್ತಿನಲ್ಲಿ ಮರಗಳನ್ನು ಹಾಕಿ ಬೆಳಸಿದರೆ, ಅವುಗಳ ಉತ್ಪ ತ್ತಿಯು ಭೋಗ್ಯಮಾಡಿದವನಿಗೆ ಸೇರತಕ್ಕುದೇಹೊರತು ಭೋಗ್ಯಮಾಡಿ ಸಿಕೊಂಡಿರುವವನಿಗೆ ಸೇರತಕ್ಕುದಲ್ಲ. ೧೨. ಬೊ. ಹೈ. ರಿ. ೮೮.

೨೬ ಸಾಲಾಕೊಟ್ಟವನು ಋಣಿಗೆ ನಗದುಹಣವನ್ನು ಕೊಟ್ಟನೆಂದು ಸಾಲದ ಪತ್ರದಲ್ಲಿ ನಮೂದಿದ್ದರೂ, ನಗದಾಗಿ ಕೊಡಲ್ಪಡಲಿಲ್ಲ; ಬೇರೆ ವಿಧವಾಗಿ ಕೊಡಲ್ಪಟ್ಟಿತೆಂದು ರುಜುವಾತನ್ನು ಕೊಡಬಹುದು. ೪ ಅ. ಲಾ. ಜ. ೪೪೧. ವ್ಯ॥ ನಿ.

ಫಲಚುಂಗಡಿ ಆಧಾರಪತ್ರದ ನಮೂನೆ ೧೪.

ಸರ್ ....ರಲ್ಲು ಸಿದ್ಧರಾಜೇ ಅರಸಿನವರು ಮೋತಿಲಾಲ್ ಶೇಟರಿಗೆ ಬರೆದುಕೊಟ್ಟ ಆಧಾರಪತ್ರದ ವಿವರವೇನೆಂದರೆ—ಈ ದಿವಸ ನನ್ನದರದುನಿಮಿತ್ತವಾಗಿ ನಿಮ್ಮಲ್ಲಿ ೫೦೦ ರೂಪಾಯಿಗಳನ್ನು ಸಾಲಾತೆಗೆದುಕೊಂಡಿರುತ್ತೇನೆ. ಈ ಮೊಬಲಗಿಗೆ ಸೇಕಡಾ ಮಾಹೇಯಾನಾ ೨ ಖಂಡೀಭತ್ತದಮೇರೆ ಮೇಲೆಕಂಡ ಮೊಬಲಗಿಗೆ ಆಗುವ ೧೦ ಖಂಡಿ ಭತ್ತವನ್ನು ಸಾಲೇಸಾಲು ಕಾಲಾವಧಿಯಲ್ಲಿ ನನ್ನ ಸ್ವಂತ ಖರ್ಚಿನಿಂದ ನಿಮ್ಮ ಮನೆಗೆ ತಂದು ಕೊಡುತ್ತೇನೆ. ಅಸಲು ಮೊಬಲಗನ್ನು ಈ ಲಾಗಾಯಿತು ೩ ವರ್ಷದಲ್ಲಿ ಕೊಡುತ್ತೇನೆ. ಮತ್ತು ಮೇಲೆಕಂಡ ಅಸಲು ಮತ್ತು ಬಡ್ಡಿಯು ಮೊಬಲಗಿನ ಖಾತರೀಬಗ್ಗೆ, ಕೆಳಗೆ ಷೆಡ್ಯೂಲಿನಲ್ಲಿ ನಮೂದಾಗುವ ಸ್ಥಿರಸ್ವತ್ತುಗಳನ್ನು ಆಧಾರಮಾಡಿರುತ್ತೇನೆ. ಮೇಲೆಕಂಡ ವಾಯಿದೆಯೊಳಗೆ ಸದರಿ ಸಾಲವನ್ನು ನಾನು ತೀರಿಸದೆ ತಪ್ಪಿದರೆ, ನೀವು ನನ್ನ ಖುದ್ದು ಜವಾಬ್ದಾರಿಯಿಂದಲೂ, ಷೆಡ್ಯೂಲ್ ಸ್ವತ್ತುಗಳನ್ನು ಕೋರ್ಟಿನಮೂಲಕ ಹರಾಜುಮಾಡಿಸುವುದರಿಂದಲೂ, ಸಾಲವನ್ನು ವಸೂಲ್ಮಾಡಿಕೊಳ್ಳಬಹುದೆಂದು ನನ್ನ ಖುದ್ದುರಾಜಿಯಿಂದ ಬರೆದುಕೊಟ್ಟ ಆಧಾರದ ಫಲಚುಂಗಡಿ ಪತ್ರ.

ಷೆಡ್ಯೂಲ್.

(೧) ಬೆಂಗಳೂರು ತಾಲ್ಲೂಕು. ಕೆಂಗೇರಿ ಹೋಬಳಿ ಅಗ್ರಹಾರದಲ್ಲಿ ತಮ್ಮಣ್ಣನ ಹೆಸರಿನ ಖಾತೆಯಲ್ಲಿರುವ, ನನ್ನ ಪಿತ್ರಾರ್ಜಿತವಾದ ನನ್ನಸ್ವಾಧೀನಾನುಭವದಲ್ಲಿರುವ, ಪೂರ್ವಕ್ಕೆ ತಿರುಮಳಪ್ಪನ ಗದ್ದೆ, ಪಶ್ಚಿಮಕ್ಕೆ ವೆಂಕಟಪ್ಪನಗದ್ದೆ, ಉತ್ತರಕ್ಕೆ ನಾಲೆ, ದಕ್ಷಿಣಕ್ಕೆ ಸರ್ಕಾರೀರಸ್ತೆ, ಈ ಮಧ್ಯದಲ್ಲಿರುವ ಸರ್ವೇನಂಬರು ೨೦, ವಿಸ್ತೀರ್ಣ ೬, ಎಕರೆ, ೮ ಗುಂಟೆ, ಆಕಾರ ೩೭—೯—೦ ಉಳ್ಳ ತರೀಜಮೀನಿನ ಪೈಕಿ ನನ್ನ ತಮ್ಮನ ಹಿಸ್ಸೆಯ ಬಾಬತು ದಕ್ಷಿಣಾರ್ಧದ ಜಮೀನು ಒಂದು.

(೨) ಡಿಟೋ ತಾಲ್ಲೂಕು ಕಸಬಾಹೋಬಳಿ ಮಾವಳ್ಳಿಯಲ್ಲಿರುವ ನನ್ನ ಹೆಸರಿನ ಪಟ್ಟಾಬಾಬತು ನನ್ನ ಸ್ವಾರ್ಜಿತವಾದ ನನ್ನ ಸ್ವಾಧೀನಾನುಭವದಲ್ಲಿರುವ, ಪೂರ್ವಕ್ಕೆ ನಾಗಪ್ಪನ ಹೊಲ, ಪಶ್ಚಿಮಕ್ಕೆ ನಂಜಪ್ಪನ ಹೊಲ. ಉತ್ತರಕ್ಕೆ ಮರಿಯಪ್ಪನ ಹೊಲ, ದಕ್ಷಿಣಕ್ಕೆ ಪುಟ್ಟಪ್ಪನ ಹೊಲ, ಈ ಮಧ್ಯದಲ್ಲಿರುವ ಸರ್ವೇನಂಬರು ೧೮ ವಿಸ್ತೀರ್ಣ ೨೩ ಎಕರೆ, ೧೦ ಗುಂಟೆ, ಆಕಾರ ಲೋಕಲ್‌ಫಂಡು ದೇಖೀಲ್ ೨೪—೮—೦ ಉಳ್ಳ ಜಮೀನು ಒಂದು. ಹಿ

ಗೆಯೋ ಆಧಾರಮಾಡಿರುವ ಸ್ವತ್ತುಗಳ ಚೆಕ್ಕುಬಂದಿಯನ್ನೆಲ್ಲಾ ಬರೆಯಬೇಕು

ನೋಟ್— ಪತ್ರವನ್ನು ರಿಜಿಸ್ಟರ್ ಮಾಡಿಸಬೇಕಾದರೆ ಸಂಖ್ಯೆಗಳನ್ನೆಲ್ಲಾ ಅಕ್ಷರದಲ್ಲೇ ಬರೆಯಬೇಕು. ಹಾಗೆ ಬರೆಯದೆ ಅಂಕೆಗಳಲ್ಲಿ ಮಾತ್ರ ಬರೆದರೆ ರಿಜಿಸ್ಟರ್ ಮಾಡುವುದಿಲ್ಲ. ಮುಂದಣ ನಮೂನೆಗಳಲ್ಲಿ ಬರಬಹುದಾದ ಸ್ಥಿರಸ್ವತ್ತುಗಳ ತಪಶೀಲಿಗೆ ಮೇಲೆ ಬರೆದಿರುವ ತಖ್ಸೀಲೇ ಮಾದರಿಯೆಂದು ಊಹಿಸತಕ್ಕದು.

ತಾತ್ಪರ್ಯ.

ವಿಚಾರ—ಹಿಂದೆ ಕಂಡ ಮೈಸಾಲದ ಪತ್ರಗಳು, ಕಂತುಪತ್ರಗಳು, ಜಂಟೀಪತ್ರಗಳು, ಜಾಮೀನು ಪತ್ರಗಳು, ಇವುಗಳ ಒಕ್ಕಣೆಗಳೊಳಗೆ "ಈ ಸಾಲದ ನಂಬಿಕೆ ಬಗ್ಗೆ ತಪಶೀಲ್ ಸ್ಥಿರಸ್ಸತ್ತುಗಳನ್ನು ಆಧಾರಮಾಡಿರುತ್ತೇನೆ." ಎಂದು ಬರೆದು ಕೆಳಗೆ ಸ್ವತ್ತುಗಳನ್ನು ವಿವರಿಸಿದರೆ, ಅವುಗಳೆಲ್ಲಾ ಆಧಾರಪತ್ರಗಳಾಗುವುವು.

ಬಡ್ಡಿಯನ್ನು ಹಣರೂಪವಾಗಿಯೇ ಕೊಡಬೇಕೆಂಬ ಕರಾರನ್ನು ಮಾಡಿಸಿಕೊಳ್ಳಬಹುದು

ಸ್ಟಾಂಪು—ಮೈಸಾಲದ ಪತ್ರದಂತೆ. (೧ನೇ ನಮೂನೆಯ ತಾತ್ಪರ್ಯವನ್ನು ನೋಡಿ.)

ರಿಜಿಸ್ಟ್ರೇಷನ್— ಪತ್ರದ ಕ್ರುತಿಫಲವು ೧೦೦ ರೂಪಾಯಿ ಅಥವಾ ಅದಕ್ಕಿಂತ ಜಾಸ್ತಿ ಇದ್ದರೆ ಅವಶ್ಯಕವಾಗಿ ರಿಜಿಸ್ಟರ್ ಮಾಡಿಸಬೇಕು. ಒಂದು ವೇಳೆ ಪತ್ರವು ರಿಜಿಸ್ಟರಾಗದಿದ್ದರೆ ಪತ್ರವೇ ರದ್ದಾಗುವುದಿಲ್ಲ. ಸ್ಥಿರಸ್ವತ್ತು ಮಾತ್ರ ಈಡಾಗುವುದಿಲ್ಲ. ಪತ್ರವು ಮೈಸಾಲದ ಪತ್ರದಂತೆ ಎಣಿಸಲ್ಪಡುವುದು.

ಲಿಮಿಟೇಷನ್— ಸಾಲವನ್ನು ಕೇಳಿದಾಗ ಅಥವಾ ನಡೆದಷ್ಟು ದಿವಸದಲ್ಲಿ ತೀರಿಸಬೇಕೆಂಬ ಕರಾರು ಪತ್ರದಲ್ಲಿದ್ದರೆ, ಪತ್ರ ತಾರೀಖು ಲಾಗಾಯಿತೂ; ಸಾಲಾತೀರಿಸಲು ಒಂದು ವಾಯಿದೆಯು ಗೊತ್ತುಮಾಡಲ್ಪಟ್ಟದ್ದರೆ ಸದರಿ ವಾಯಿದೆಯು ಕಳೆದ ಲಾಗಾಯಿತೂ; ಅಥವಾ ಬಡ್ಡಿಗಾಗಲಿ ಅಸಲಿಗಾಗಲಿ ವಸೂಲಿ ಬಂದಿದ್ದರೆ ಆ ವಸೂಲೀ ಕೊಟ್ಟ ತಾರೀಖುಲಾಗಾಯಿತೂ ಲಿಮಿಟೇಷನ್ ವಾಯಿದೆಗಳನ್ನು ಎಣಿಸಬೇಕು. ಪತ್ರವು ರಿಜಿಸ್ಟ

ರಾಗಿದ್ದರೆ ಆ ತಾರೀಖುಗಳ ಲಾಗಾಯಿತು ೬ ವರ್ಷದಲ್ಲೂ, ರಿಜಿಸ್ಟರಾಗಿಲ್ಲದಿದ್ದರೆ ೩ ವರ್ಷದಲ್ಲೂ ದಾವಾ ತರಬೇಕು. ಸಾಲ ಪಡೆದವನ ಖುದ್ದು ಜವಾಬ್ದಾರಿಯು ಅವಶ್ಯಕವಿಲ್ಲದೆ, ಆಧಾರಸ್ವತ್ತಿನಮೇಲೆ ಡಿಕ್ರಿಯಾದರೆ ಸಾಕೆಂಬ ತಾತ್ಪರ್ಯವಿದ್ದರೆ ಮೇಲೆಕಂಡ ತಾರೀಖುಗಳ ಲಾಗಾಯಿತು ೧೨ ವರ್ಷದಲ್ಲಿ ದಾವಾ ತರಬೇಕು. ಕಲ್ಕತ್ತ, ಮುಂಬಯಿ, ಅಲಹಾಬಾದ್ ಹೈಕೋರ್ಟುಗಳಲ್ಲಿ ಇಂಗ್ಲೀಷ್ ಮಾರ್ಗೇಜ್, ಎಂಬ ವ್ಯವಹಾರದ ವಿಷಯದಲ್ಲಿ, ಈ ಸಂದರ್ಭದಲ್ಲಿ ೬೦ ವರ್ಷ ವಾಯಿದೆ ಇದೆಯೆಂದು ತೀರ್ಮಾನಿಸಿದ್ದಾರೆ. ೧೪ ಕ. ೭೩೧೯ ಬೊ. ೯೭೭ ಆ ೨೫೪ ರಿಂದ ೮ ವರೆಗಿನ ಪೇಜುಗಳಲ್ಲಿ ವಿವರಿಸಿರುವ ಸಾಮಾನ್ಯ ಲಿಮಿಟೇಷನ್ ವಿಧಿಗಳನ್ನೂ ಓದಿಕೊಳ್ಳತಕ್ಕದು,

ದಫವಾರಾಗಿ ಮುಂದೆ ಪಡೆಯುವ ಸಾಲಗಳಿಗೆ ಮೊದಲೇ ಮಾಡುವ ಆಧಾರ.

(೧೫ ನೇ ನಮೂನೆ.)

ಸನ್ ...... ರಲ್ಲೂ ಚನ್ನೆಗೌಡನು ಸಾವಂದಪ್ಪನಿಗೆ ಬರೆದುಕೊಟ್ಟ ಆಧಾರಪತ್ರವೇನೆಂದರೆ— ನಾನು ಕಂಬೀಪುರದಲ್ಲಿ ಜಿನಸಿವ್ಯಾಪಾರ ಮಾಡಲು ಅಪೇಕ್ಷಿಸಿ ನಿಮ್ಮನ್ನು ಕೇಳಿಕೊಂಡುದರ ಮೇಲೆ, ನೀವು ನನಗೆ ಕಡವಾಗಿ ಜಿನಸಿಯನ್ನು ಕೊಡಲು ಒಪ್ಪಿಕೊಂಡಿರುವುದು ಸರಿಯಷ್ಟೆ. ನಿಮ್ಮ ಅಂಗಡಿಯಲ್ಲಿರುವ ಎಲ್ಲಾತರದ ಜಿನಸಿಯನ್ನು ನನಗೆ ಕ್ರಯಕ್ಕೆ ಕಡವಾಗಿ ಕೊಡುತ್ತಾ ಬರಬೇಕು. ಜಿನಸೀಮಾರಿದಹಾಗೆಲ್ಲಾ ನಿಮಗೆ ಕೊಡಬೇಕಾದ ಕ್ರಯದ ಮೊಬಲಗನ್ನು ಪಾವತೀಮಾಡುತ್ತಾ ಬರುತ್ತೇನೆ. ನಿಮಗೆ ನಾನು ಕೊಡಬೇಕಾಗುವ ಬಾಕಿಯು ಯಾವಾಗಲೂ ೨,೦೦೦ ರೂಪಾಯಿಗೆ ಹೆಚ್ಚಾಗದಂತೆ ನನಗೆ ಉದ್ರಿಯನ್ನು ಕೊಡುತ್ತಾ ಬರಬೇಕು. ಈಮೇರೆ ನಿಮ್ಮಲ್ಲಿ ನಡೆಯಿಸುವ ಲೇವಾದೇವಿಗಳಿಂದ ನಿಮಗೆ ನಾನು ಕೊಡಬೇಕಾಗಿರಬಹುದಾದ ೨,೦೦೦ ರೂಪಾಯಿವರೆಗಿನ ಮೊಬಲಗಿನ ಖಾತರೀಬಗ್ಗೆ ನನ್ನ ಬಾಬತು ಷೆಡ್ಯೂಲಿನಲ್ಲಿ ವಿವರಿಸಿರುವ ಸ್ಥಿರಸ್ವತ್ತನ್ನು ಆಧಾರ ಮಾಡಿರುತ್ತೇನೆ. ನನ್ನಮೇಲೆ ಬಾಕಿಯಾಗುವ ಹಣವನ್ನು ಸಕಾಲದಲ್ಲಿ ನಿಮಗೆ ನಾನು ಕೊಡದೆ ತಪ್ಪಿದಲ್ಲಿ ನೀವು ನನ್ನ ಖುದ್ದು ಜವಾಬ್ದಾರಿಯಿಂದ ಬರೆದುಕೊಟ್ಟ ಆಧಾರಪತ್ರ.

ಬರೆದುಕೊಟ್ಟವನ ಸಾಕ್ಷಿಗಳ ರುಜುವೂ, ಬಿಕ್ಕಲಂ ಸಹ ೧ನೇ ನಮೂನೆಗಿರುವಂತೆ.)

ವಿಚಾರ— ಎಷ್ಟು ಮೊಬಲಗಿಗೆ ಸ್ವತ್ತು ಆಧಾರವಾಗಿರಬೇಕೋ ಆ ಮೊಬಲಗು ಇಷ್ಟೇ ಎಂಬುದನ್ನು ನಿರ್ಧರಿಸಿ ಮೇಲೆ ಕಂಡಂತೆ ಬರೆಯಬೇಕು. ಇಂಥ ಪತ್ರವು ಹುಟ್ಟಿದಮೇಲೆ ಇದಕ್ಕೆ ಆಧಾರಮಾಡಿದ ಸ್ವತ್ತು ಇತರರಿಗೆ ಪರಾಧೀನ ಮಾಡಲ್ಪಟ್ಟು, ಹಾಗೆ ಪರಾಧೀನವಾದನಂತರ ಈ ಪತ್ರದಲ್ಲಿ ಕಂಡ ಮೊಬಗಲು ಸಾಲಪಡೆದವನಿಗೆ ಸಂದಾಯವಾದರೂಕೂಡ ಈಚಿನ ಪರಾಧೀನಕ್ಕೆ ಮೊದಲಿನ ಈ ಆಧಾರವೇ ಪೂರ್ವಾಧಿಯಾಗುವುದು. ಮಸಲ—ಕಾಮನಿಂದ ಸೀನನು ಮುಂದಕ್ಕೆ ಕಿತ್ತಾವಾರಾಗಿ ಹೊಂದಬಹುದಾದ ೨೦೦ ವರೆಗಿನ ಸಾಲಕ್ಕೆ ಸೀನನು ಮೊದಲೇ ತನ್ನ ಜಮೀನನ್ನು ಕಾಮನಿಗೆ ಆಧಾರಾಮಾಡಿಕೊಡುತ್ತಾನೆ. ಹೀಗೆ ಆಧಾರವಾದ ಅನಂತರ, ಸೀನನು ಸದರಿ ಜಮೀನನ್ನು ಮುನಿಯಣ್ಣನಿಗೆ ೩೦೦ ರೂಪಾಯಿಗೆ ಭೋಗ್ಯಮಾಡುತ್ತಾನೆ. ಈ ಭೋಗ್ಯವಾದ ಬಳಿಕ ಆಧಾರಪತ್ರದ ಪ್ರತಿಫಲದ ಮೊಬಲಗು ೨೦೦ ರೂಪಾಯನ್ನು ಕಾಮನು ಸೀನನಿಗೆ ಕೊಡುತ್ತಾನೆ. ಆದರೂ ಕಾಮನ ಆಧಾರವು ಪೂರ್ವಾರ್ಧಿಯಾಗುತ್ತದೆಯೇಹೊರತು ಈಚಿನ ಭೋಗ್ಯವು ಪೂರ್ವಾರ್ಧಿಯಾಗುವುದಿಲ್ಲ.

ಸ್ಟಾಂಪು, ರಿಜಿಸ್ಟ್ರೇಷನ್, ಲಿಮಿಟೇಷನ್— ಹಿಂದಣ ಆಧಾರಪತ್ರದ ಟಿಪ್ಪಣಿಯಂತೆ.

ಭೋಗ್ಯಪತ್ರ.

(೧೬ ನೇ ನಮೂನೆ.)

ಸನ್.........ರಲ್ಲು ಅನಂತಶೆಟ್ಟರವರಿಗೆ ಶ್ರೀನಿವಾಸಯ್ಯಂಗಾರ್ಯರು ಬರೆದುಕೊಟ್ಟ ಭೋಗ್ಯಪತ್ರದ ಕ್ರಮವೇನೆಂದರೆ......ಈ ದಿವಸ ಕೆಳಗೆ ವಿವರಿಸುವ ಮೇರೆ ನಿಮ್ಮಿಂದ ೧,೦೦೦ ರೂಪಾಯಿಗಳನ್ನು ನಾನು ಸಾಲವಾಗಿ ಪಡದು, ಈ ಮೊಬಗಿಗೆ ಕೆಳಗೆ ಷೆಡ್ಯೂಲಿನಲ್ಲಿ ವಿವರಿಸುವ ಮನೆ ಮತ್ತು ತೋಟಗಳನ್ನು ನಿಮಗೆ ಶುದ್ಧಭೋಗ್ಯಾಮಾಡಿ ಅವುಗಳನ್ನು ನಿಮ್ಮ ಸುಫರ್ದಿಗೆ ಕೊಟ್ಟಿರುತ್ತೇನೆ. ಅಸಲು ಮೊಬಲಗು ನಿಮಗೆ ಸಂದಾಯವಾಗುವ ವರೆಗೂ, ಈ ಅಸಲು ಹಣದ ಬಡ್ಡಿಗಾಗಿ ಸದರೀ ಸ್ವತ್ತುಗಳನ್ನು ನೀವೇ ಅನುಭವಿಸುತ್ತಾ ಬರಬೇಕು. ಈ ಲಾಗಾಯತು ೬ ವರ್ಷ ಕಳೆದಕೂಡಲೆ ಅಸಲು ಹಣವನ್ನು ನಿಮಗೆ ಪಾವತೀಮಾಡಿ, ಈ ಸ್ವತ್ತುಗಳನ್ನು ಭೋಗ್ಯದಿಂದ ಬಿಡಿಸಿಕೊಳ್ಳುತ್ತೇನೆ. ಈ ಭೋಗ್ಯದ ಮನೆಗೆ ರಿಪೇರಿಖರ್ಚು ೧೦೦ ರೂಪಾಯೊಳಗೆ ಬಿದ್ದರೆ ನೀವೇ ಮಾಡಿ ವರ್ಷದ ಮಾಯಿದೆ ಕಳೆದನಂತರ ನಾನು ವಾಪಸ್ಸು ಕೊಡುವ ಅಸಲು ಮೊಬಲಗು ೧,೦೦೦

ರೂ. ನ್ನು ನೀವು ತೆಗೆದುಕೊಂಡು, ಭೋಗ್ಯದ ಸ್ವತ್ತುಗಳನ್ನು ನನ್ನ ಸುಫರ್ದಿಗೆ ಬಿಟ್ಟುಬಿಡಬೇಕು. ಮತ್ತು ಈ ಪತ್ರವನ್ನು ವಸೂಲೀ ಷರಾ ನಿಸಿಯೂ, ಮತ್ತು ನಾನು ದಾಖಲೇಬಗ್ಗೆ ನಿಮಗೆ ಕೊಟ್ಟಿರುವ ೧ನೇ ಐಟ ಮ್ಮು ಬಾಬತು ಮನೆಯ ಮೂಲಕ್ರಯದ ದಸ್ತಾವೇಜನ್ನೂ, ಮೇಲ್ಕಂಡ ಸಾಲಗಳನ್ನು ತೀರಿಸಿದಬಗ್ಗೂ ನೀವು ಹೊಂದುವ ವೌಚರು ರಸೀತಿಗಳನ್ನೂ ಸಹ ವಾಪಸ್ಸು ನನಗೆ ಕೊಡಬೇಕು. ಎಂಬದಾಗಿ ನನ್ನ ಆತ್ಮ ಸಂತೋಷದಿಂದ ಬರೆದುಕೊಟ್ಟ ಭೋಗ್ಯಪತ್ರ.

ಷೆಡ್ಯೂಲ್.

(ಮಿಕ್ಕವಿಷಯ ಹಿಂದಣ ೧ ನೇ ನಮೂನೆಗಳಿಗಿರುವಂತೆ)

ವಿಚಾರ—ಇಷ್ಟು ದಿವಸದೊಳಗೆ ಸಾಲವನ್ನು ತೀರಿಸಬೇಕೆಂದಿದ್ದರೂ ಸಹ ಅಷ್ಟರೊಳಗೆ ಭೋಗ್ಯದಿಂದ ಬಿಡಿಸಿಕೊಳ್ಳಲಾಗುವುದಿಲ್ಲವೆಂದು ಮುಂಬಯಿ ಹೈ ಕೋರ್ಟಿನವರು ತೀರ್ಮಾನಿಸಿದ್ದಾರೆ. ೫ ಬೊ. ೨೨.

ಸ್ಟಾಂಪು—ಕ್ರಯಪತ್ರಕ್ಕೆ ಎಷ್ಟು ಸ್ಟಾಂಪೋ ಅಷ್ಟು ಸ್ಟಾಂಪು ಇದಕ್ಕೂ ಅವಶ್ಯಕ. (ಮುಂದಿನ ಕ್ರಯಪತ್ರದ ನಮೂನೆಯ ಸ್ಟಾಂಪು ಟಿಪ್ಪಣಿಯನ್ನು ನೋಡಿ.)

ರಿಜಿಸ್ಟ್ರೇಷನ್— ರೂಲ್ಸ್ ಮೇರಿಗೆ.

ಲಿಮಿಟೇಷನ್— ಸಾಲವನ್ನು ತೀರಿಸಬೇಕಾದ ತಾರೀಖುಲಾಗಾಯಿತು ೬೦ ವರ್ಷದಲ್ಲಿ, ಭೋಗ್ಯಮಾಡಿಕೊಂಡಿರುವವನು ಭೋಗ್ಯದ ಹಣಕ್ಕೆ ದಾವಾತರಬೇಕು. ಭೋಗ್ಯದಿಂದ ಬಿಡಿಸಿಕೊಳ್ಳಲು ಗೊತ್ತಾದ ತಾರೀಖು ಲಾಗಾಯಿತು ೬೦ ವರ್ಷದಲ್ಲಿ ಸ್ವತ್ತನ್ನು ಭೋಗ್ಯದಿಂದ ಬಿಡಿಸಿಕೊಳ್ಳಲು ಸ್ವತ್ತಿನ ಮಾಲೀಕನು ದಾವಾ ತರಬೇಕು. ಆದರೆ ಸ್ವತ್ತು ಭೋಗ್ಯದಾರನಿಂದ ಮತ್ತೊಬ್ಬನಿಗೆ ಖರೀದಿ ಮಾಡಲ್ಪಟ್ಟದ್ದು, ಅಂಥ ಖರೀದಿದಾರನ ಮೇಲೆ ದಾವಾತರಬೇಕಾದರೆ ೧೨ ವರ್ಷ ಮಾತ್ರ ವಾಯಿದೆ. ಭೋಗ್ಯದ ಪತ್ರದ ಷರತ್ತಿನಂತೆ ಭೋಗ್ಯದಾರನ ಸುಫರ್ದಿಗೆ ಸ್ವತ್ತು ಬಾರದಿದ್ದರೆ, ಪತ್ರದ ತಾರೀಖುಲಾಗಾಯಿತೂ ಅಥವಾ ಸ್ವತ್ತು ಅವನ ಸುಫರ್ದಿನಿಂದ ಮಧ್ಯೆ ತಪ್ಪಿಸಲ್ಪಟ್ಟರೆ, ಆ ತಾರೀಖುಲಾಗಾಯಿತೂ ೧೨ ವರ್ಷದಲ್ಲಿ ಭೋಗ್ಯದಾರನು ಸ್ವತ್ತುಸುಫರ್ದಿಗೆ ದಾವಾತರಬೇಕು. ಭೋಗ್ಯಮಾಡಿದವರು ಅನೇಕರಿದ್ದು ಅವರಪೈಕಿ ಒಬ್ಬನುಮಾತ್ರ ಭೋಗ್ಯದಿಂದ ಬಿಡಿಸಿಕೊಂಡಿ

ದ್ದು, ಅವನಿಂದ ಎತ್ತೊಬ್ಬನು ಬಿಡಿಸಿಕೊಳ್ಳಬೇಕಾದರೆ, ಅವನು ಬಿಡಿಸಿಕೊಂಡಲಾಗಾಯಿತು ೧೨ ವರ್ಷದಲ್ಲಿ ದಾವಾ ತರಬೇಕು. ಮಧ್ಯೆ ಭೋಗ್ಯದಾರನು ತನ್ನ ಭೋಗ್ಯಮಾತ್ರದ ಹಕ್ಕನ್ನು ಒಪ್ಪಿಕೊಂಡಿದ್ದರೆ, ಒಪ್ಪಿಕೊಂಡ ಲಾಗಾಯಿತು ಪುನಃ ೬೦ ವರ್ಷ ವಾಯಿದೆಯು ಪ್ರಾರಂಭಿಸುತ್ತದೆ.

ಇಳಿಭೋಗ್ಯದ ಪತ್ರ.

(೧೭ ನೇ ನಮೂನೆ)

ಸನ್........ರಲ್ಲು ನಾರಾಯಣಸಿಂಗ್ ಬಲರಾಮಶಿಂಗನಿಗೆ ಬರೆದು ಕೊಟ್ಟ ಇಳಿಭೋಗ್ಯ ಪತ್ರವೇನಂದರೆ—ನಿನ್ನಿಂದ ನಾನು ಈ ದಿವಸ ೬೦೦ ರೂಪಾಯಿಗಳನ್ನು ಸಾಲವಾಗಿ ತೆಗೆದುಕೊಂಡು ಅದಕ್ಕೋಸ್ಕರ ಕೆಳಗೆ ಷೆಡ್ಯೂಲಿನಲ್ಲಿ ವಿವರಿಸುವ ನನ್ನ ಸ್ವಾರ್ಜಿತವಾದ ತೋಟವನ್ನು ನಿಮಗೆ ಶುದ್ಧಭೋಗ್ಯಮಾಡಿ ನಿಮ್ಮ ಸುಪುರ್ದು ಸಹ ಮಾಡಿರುತ್ತೇನೆ. ಇದನ್ನು ಇದುವರೆಗೂ ನಾನು ರೂಢಿಸುತ್ತಿದ್ದ ಪ್ರಕಾರ ನೀನು ರೂಢಿಸಿಕೊಂಡು ಬರುವುದು. ಇದರಲ್ಲಿ ಬರುವ ಹುಟ್ಟುವಳಿಯಲ್ಲಿ ಸರಕಾರಕ್ಕೆ ಕೊಡಬೇಕಾದ ೨೦ ರೂಪಾಯಿ ಕಂದಾಯವನ್ನು ನೀನೇ ಕೊಟ್ಟುಕೊಂಡು ಉಳಿದುದನ್ನು ಮೇಲೆ ಕಂಡ ಸಾಲದ ಅಸಲೂ ಮತ್ತು ಬಡ್ಡಿಗೆ ಉತ್ತಾರ ಕಟ್ಟಿಕೊಳ್ಳಬೇಕು. ಈ ಸ್ವತ್ತಿನಲ್ಲಿ ಅಗುವ ಸರಾಸರೀ ಸಾಲೀಯಾನಾ ಉತ್ಪತ್ತಿಯನ್ನುಅಂದಾಜು ಮಾಡಿದುದರ ಮೇಲೆ ನಿನ್ನಸಾಲದ ಮೊಬಲಗು ೨೦ ವರ್ಷದಲ್ಲಿ ತೀರಿಹೋಗುತ್ತದೆ. ಆದುದರಿಂದ ಈ ಲಾಗಾಯಿತು ೨೦ ವರ್ಷ ಎಂದರೆ ಸನ್ ನೇ ಇಸವಿ ತಿಂಗಳು ನೇ ತಾರೀಖುವರೆವಿಗೂ ನೀನು ಸದರಿ ಸ್ವತ್ತನ್ನು ಅನುಭವಿಸಿ ಈ ವಾಯಿದೆ ತುಂಬಿದ ಕೂಡಲೇ ಹರಕತ್ತಿಲ್ಲದೆ ನನ್ನ ಸುಪುರ್ದು ಮಾಡಬೇಕು. ಷೆಡ್ಯೂಲ್ (ನೇ ನಮೂನೆಯಲ್ಲಿ ಕಂಡಂತೆ)

(ಬರೆದು ಕೊಟ್ಟವನ, ಸಾಕ್ಷಿಗಳ ರುಜುವೂ, ಬಿಕ್ಕಲಂ" ಸಹ ೧ನೆಯು ನಮೂನೆಗಿರುವಂತೆ)

ಟಿಪ್ಪಣಿ.

ಸ್ಟಾಂಪು ರಿಜಿಸ್ಟ್ರೇಷನ್, ಲಿಮಿಟೇಷನ್ ರೂಲಿಸಿನಂತೆ.

ಜಮೀನಿನ ಕ್ರಯ ವಿಷಯ ಕರಾರು.

(೧೮ ನೇ ನಮೂನೆ.)

ಸನ್ ರಲ್ಲಿ ರೇವಣ್ಣನು ಕರಿಬಸವಯ್ಯನಿಗೆ ಬರೆದುಕೊಟ್ಟ ಕರಾರು ಏನೆಂದರೆ—ನಿಮ್ಮ ಬಾಬತು ಕೆಳಗೆ ಷೆಡ್ಯೂಲಿನಲ್ಲಿ ವಿವರಿಸುವ ಜಮೀನನ್ನು ೨೦೦೦ ರೂಪಾಯಿ ಕ್ರಯಕ್ಕೆ ತೆಗೆದುಕೊಳ್ಳಲು ಈ ದಿವಸ ನಾನು ಒಪ್ಪಿಕೊಂಡು ಕ್ರಯದ ಮೊಬಲಿಗಿನ ಪೈಕಿ ೧೦೦ ರೂಪಾಯಿಗಳು ನಿಮ್ಮಲ್ಲಿ ಡಿಪಾಜಿಟ್ಟು ಇಟ್ಟಿರುತ್ತೇನೆ. ಈ ಲಾಗಾಯಿತು ಒಂದು ತಿಂಗಳಲ್ಲಿ ಎಂದರೆ ಮುಂದಣ ಅಗಟೋಬರ್ ತಾರೀಖು ೫ ಯಾ, ಅದರೊಳಗೆ ಸದರಿ ಡಿಪಾಜಿಟ್ಟು ಮೊಬಲಗು ಜಾತಾ ೧೯೦೦ ರೂ. ನ್ನು ಸದರಿ ಕ್ರಯ ಪತ್ರ ರಿಜಿಸ್ಟರ್ ಮಾಡುವ ಸಬ್ ರಿಜಿಸ್ಟ್ರಾರವರ ರೂಬರೂಬ್ ನಿಮಗೆ ಪಾವತಿ ಮಾಡುತ್ತೇನೆ. ಛಾಪಾ ಕಾಗದದ ಖರ್ಚನ್ನು ಮತ್ತು ರಿಜಿಸ್ಟ್ರೇಷನ್ ಖರ್ಚನ್ನೂ ಸಹ ನಾನೇ ವಹಿಸಲು ಒಪ್ಪಿಕೊಂಡು ಮೇಲೆ ಕಂಡ ಡಿಪಾಜಿಟ್ಟು ಮೊಬಲಗು ೧೦೦ ರೂ. ನ್ನು ಬೇರೆ ಕೊಟ್ಟಿರುತ್ತೇನೆ. ಸದರಿ ವಾಯಿದೆಯೊಳಗೆ ನಾನು ಅಪೇಕ್ಷಿಸಿದಾಗ ಕ್ರಯಪತ್ರವನ್ನು ರಿಜಿಸ್ಟರು ಮಾಡಿಸಲು ಅನುಕೂಲಿಸುವಂತೆ ಕ್ರಯಪತ್ರವನ್ನು ನೀವು ಬರೆದು ಸಿದ್ಧಪಡಿಸಿಕೊಂಡಿರಬೇಕು. ಮೇಲೆ ಕಂಡ ಷರತ್ತು ಮೇರೆ ಬಾಕೀ ಕ್ರಯದ ಮೊಬಲಗನ್ನು ಕೊಟ್ಟು ಕ್ರಯಕ್ಕೆ ತೆಗೆದುಕೊಳ್ಳಲು ನಾನು ತಪ್ಪಿದರೆ, ಮೇಲೆ ಕಂಡಂತೆ ನಾನು ಡಿಪಾಜಿಟ್ಟು ಇಟ್ಟಿರುವ ೧೦೦ ರೂಪಾಯಿ ನೀವು ನನಗೆ ವಾಪಸ್ಸು ಕೊಡಬೇಕಾದುದಿಲ್ಲ, ಅದು ನಿಮಗೆ ಬಂಡವಾಳವಾಗಿ ಸೇರತಕ್ಕದ್ದು. ಮತ್ತು ಮೇಲೆ ಕಂಡ ಷರತ್ತು ಮೇರೆ ನನಗೆ ಕ್ರಯಕ್ಕೆ ಕೊಡಲು ನೀವು ತಪ್ಪಿದರೆ, ೧೦೦ ರೂ. ನ್ನು ನಷ್ಟಕ್ಕಾಗಿ ನನಗೆ ನೀವು ಕೊಡುತ್ತೇವೆಂದು ಒಪ್ಪಿ, ಇದಿರು ಮುಡೀ ಕರಾರೊಂದನ್ನು ನೀವು ಈ ದಿವಸ ನನಗೆ ಬರೆದುಕೊಟ್ಟಿರುತ್ತೀರಿ. ಎಂಬದಾಗಿ ನನ್ನ ಖುದ್ದುರಾಜಿಯಿಂದ ಬರೆದುಕೊಟ್ಟ ಕರಾರು.

ರುಜು.................

ಇದಕ್ಕೆ ಅನುಸಾರವಾಗಿ ಇದಿರುಮುಡಿ ಕರಾರು ಬರೆಸಿಕೊಳ್ಳಬೇಕು.

ಜಮೀನು ಕ್ರಯಪತ್ರ.

(೧೯ ನೇ ನಮೂನೆ.)

ಸಕ್ ಸಾವಿರದ ಒಂಭೈನೂರ ಹದಿನಾರನೆ ಇಸವಿ ಜನವರಿ ತಾರೀಖು ಒಂದರಲ್ಲು ಬೆಂಗಳೂರು ತಾಲ್ಲೂಕು ಕೆಂಗೇರಿ ಹೋಬಳಿ ಮಾರುಗೊಂಡ ಹಳ್ಳಿ ಕೃಷ್ಣಸಾಗರದ ಕಾಯಂಗುತ್ತಾದಾರ್ ರಾಮಣ್ಣನವರ ಕೊಮಾರ್ರ ಬಿ. ನರಸಿಂಗರಾವ್‌ಯವರಿಗೆ ಇದೇ ಗುರುಗಂಜುಹಳ್ಳಿಯಲ್ಲಿ ಇರುವ ಮುದ್ದನಾಗೈಯ್ಯನ ಮಗ ಪೆದ್ದೈಯ್ಯ ಬರಿಸಿಕೊಟ್ಟ ಜಮೀನ್ ಖರೀದಿ ಪತ್ರ ಅದಾಗಿ ಇದೇ ಗುರುಗಂಜುಹಳ್ಳಿ ಗ್ರಾಮದಲ್ಲಿ ನನ್ನ ಹೆಸರಿಗೆ ಪಟ್ಟೆ ಇರುವ ನನ್ನ ಸ್ವಾಧೀನಾನುಭವದ ಬಾಬತ್ತು ಸರ್ವೆ ಐವತ್ತಾರನೆಯು ನಂಬರು ಪೈಕಿ ಜಮಿನಿಗೆ ಚಕ್ಕುಬಂದಿ ಪೂರ್ವಕ್ಕೆ ರಸ್ತೆ, ಪಶ್ಚಿಮಕ್ಕೆ ದಾರಿ. ಉತ್ತರಕ್ಕೆ ನನ್ನ ಜಮೀನು, ದಕ್ಷಿಣಕ್ಕೆ ಕೆಂಪೈಯ್ಯನಿಗೆ ಕೊಟ್ಟು ಇರುವ ಜಮೀನು ಈ ಮಧ್ಯೆ ಇರುವ ಜಮೀನು ಪೂರ್ವ ಪಶ್ಚಿಮ ಹದಿನೆಂಟು ಗಜ, ಉತ್ತರದಕ್ಷಿಣ ಇಪ್ಪತ್ತುಗಜವುಳ್ಳ ಜಮೀನನ್ನು ಈ ದಿವಸ ನಿಮಗೆ ಮನೆಕಟ್ಟಕೊಳ್ಳುವದಕ್ಕೋಸ್ಕರ ನಿಮಗೆ ಗೌರ್ನಮೆಂಟು ಐವತ್ತಾರು ರೂಪಾಯಿಗಳಿಗೆ ಶುದ್ಧಖರೀದಿಗೆ ಕೊಟ್ಟು ಖರೀದಿಬಾಬತ್ತುಮೊಬಲಗು ಪೂರ್ತಿಯಾಗಿ ಇದರಕೆಳಗೆ ಸಾಕ್ಷಿಹಾಕಿರುವವರ ಮೊಖ್ತಾಬೇಬಾಕಿಯಾಗಿ ತೆಗೆದುಕೊಂಡು ಈ ಜಮೀನನ್ನು ನಿಮ್ಮ ಸುಫರ್ದಿಗೆ ಬಿಟ್ಟು ಇದ್ದೇನೆ. ಈ ಜಮೀನಿನಲ್ಲಿ ಇರುವ ನಿಧಿ, ನಿಕ್ಷೇಪ, ಜಲ, ತರು, ಪಾಷಾಣಾದಿ ಅಷ್ಟಭೋಗಗಳು ಏನಿದ್ದಾಗ್ಯೂ ನೀವು ನಿಮ್ಮ ಪುತ್ರಮಿತ್ರಪೌತ್ರ ಪಾರಂಪರ್ಯವಾಗಿ ಅನುಭವಿಸಿಕೊಂಡು ಬರುವದು. ಈ ಜಮೀನಿನಲ್ಲಿ ಮನೆ ಕಟ್ಟಲು ಸರ್ಕಾರದಿಂದ ಲೈಸನ್ಸ್ ಪಡೆದು ಮನೆಕಟ್ಟಕೊಳ್ಳಬಹುದೆಂದು ನನ್ನ ಖುದ್ದುರಾಜಿಯಿಂದ ಒಪ್ಪಿ ಬರಿಸಿಕೊಟ್ಟ ಜಮೀನ್ ಶುದ್ಧಕ್ರಯ ಪತ್ರಸಹೀ.

— ಈ ನೇಗಲು ಗುರ್ತಿನ ರುಜು ಮುದ್ದನಾಗಯ್ಯನ ಮಗ ಪೆದ್ದನಾಗಯ್ಯ ಹಾಕಿದ್ದಕ್ಕೆ ಈತನ ಮಗ ರಾಮಯ್ಯನ ಬರಹ.

ಇದಕ್ಕೆ ಸಾಕ್ಷಿಗಳು.

೧. ಕೆಂಗೇರಿ ಗುರಪ್ಪನ ಮಗ ಬಸವಯ್ಯನ ಸಾಕ್ಷಿ.

೨ ಕೆಂಗೇರಿಯಲ್ಲಿರುವ ರಾಮನಾಯ್ಕನ ಮಗ ಪುಟ್ಟನಂಜಪ್ಪ.

ಬಿಕ್ಕಲಂ ಗುರುಗಂಜುಹಳ್ಳಿಯಲ್ಲಿರುವ ಪತ್ರದಾರ್ ಪೆದ್ದಯ್ಯನ ಮಗ ರಾಮನ ಬರಹ.

— ಈ ಗುರ್ತು ಪೆದ್ದಯ್ಯ ಹಾಕಿದ್ದಕ್ಕೆ ಪುಟ್ಟನಂಜಪ್ಪನ ಬರಹ. ಚೊಡೇನಪುರದ ಪುಟ್ಟನಂಜಪ್ಪನ ರುಜು.

ಸಬ್ ರಿಜಿಸ್ಟ್ರಾರ್ರ ರುಜು.

ಸ್ಥಿರಸ್ವತ್ತಿನ ಕ್ರಯಪತ್ರ.

(೨ನೇ ನಮೂನೆ.)

ಸನ್ . ..ರಲ್ಲು ......ಅನಂತಶೆಟ್ಟರವರಿಗೆ........ಗುಂಡಾಭಟ್ಟರ ಹೆಂಡತಿ ಪಾರ್ವತಮ್ಮನು ಬರೆದುಕೊಟ್ಟ ಕ್ರಯಪತ್ರವೇನಂದರೆ..... ಪೌತಿಯಾಗಿರುವ ನಮ್ಮ ಯಜಮಾನ ಗುಂಡಾಭಟ್ಟರು ಬೆಂಗಳೂರು ಚಿಕ್ಕಪೇಟೆ ಕೋ-ಆಪರೇಟಿವ್ ಸೊಸೈಟಿಗೆ ಬರೆದುಕೊಟ್ಟಿರುವ ೧೯೧೬ನೆ ಮುರ್ಕಮಿನ ಪ್ರಾಮಿಸರಿ ನೋಟಿನ ಬಾಬತು ೩೦೦ ರೂಪಾಯನ್ನು ಸದರಿ ಸೊಸೈಟಿಗೆ ಕೊಡಬೇಕಾದುದಕ್ಕೆ ಸೊಸೈಟಿಯವರು ಬಹಳ ತಗಾದೆ ಮಾಡುತ್ತಿದ್ದಾರೆ. ಅಲ್ಲದೆ, ಕೂಡಲೇ ಸಾಲವನ್ನು ತೀರಿಸದಿದ್ದರೆ ಅವರು ದಾವಾ ಮಾಡತಕ್ಕವರಾಗಿದ್ದಾರೆ. ಮದ್ದೂರಿನಲ್ಲಿರುವ ನಮ್ಮ ಬಾಬತು ಸರ್ವೆ ೫ನೆ ನಂಬರು ಜಮೀನಿನ ಕಳೆದ ೧ ವರ್ಷದ ಕಂದಾಯ ೮೦ ರೂಪಾಯನ್ನು ಸರ್ಕಾರಕ್ಕೆ ಕೊಡಬೇಕಾಗಿರುತ್ತದೆ. ಮತ್ತು ನನ್ನ ಮಗಳು ಚಿಕ್ಕನಂಜಿಯು ಮದುವೆಗೆ ಆತುಬಂದಿರುವಳಾಗಿ, ಅವಳಿಗೆ ಕೂಡಲೇ ಲಗ್ನಮಾಡಬೇಕಾಗಿರುತ್ತದೆ. ಆ ಲಗ್ನಕ್ಕೆ ಸುಮಾರು ೪೦೦ ರೂಪಾಯಿಯು ಬೇಕಾಗಿರುತ್ತದೆ. ನಮ್ಮ ಯಜಮಾನರು ಮೃತಪಡುವಾಗ್ಯೆ ಸುತರಾಂ ನಗದು ಹಣವಾವುದೂ ಇಟ್ಟಿರಲಿಲ್ಲವಾದ್ದರಿಂದ ಮೇಲೆಕಂಡ ಅವಶ್ಯಕತೆಗಳಿಗಾಗಿ ಈ ಕ್ರಯವನ್ನು ಮಾಡಬೇಕಾಗಿ ಬಂದಿದೆ. ಆದುದರಿಂದ ಈ ದಿವಸ ನಿಮಗೆ ಕೆಳಗೆ ಷೆಡ್ಯೂಲಿನಲ್ಲಿ ವಿವರಿಸಿರುವ ಜಮೀನನ್ನು ೮೦೦ ರೂಪಾಯಿಗೆ ಶುದ್ಧಕ್ರಯ ಮಾಡಿರುತ್ತೇನೆ. ಕ್ರಯದ ಮೊಬಲಗಿನಪೈಕಿ ೩೦೦ ರೂಪಾಯನ್ನು ಈ ದಿವಸ ನಿಮ್ಮಿಂದ ತೆಗೆದ ಕೊಂಡಿದ್ದೇನೆ. ಬಾಕಿ ೫೦೦ ರೂಪಾಯನ್ನು ಈ ಪತ್ರವು ರಿಜಿಸ್ಟರಾಗುವಾಗ್ಗೆ ಸಬ್ ರಿಜಿಸ್ಟ್ರಾರ್ರವರ ರೂಬರೂಬು ತೆಗೆದುಕೊಳ್ಳುತ್ತೇನೆ. ಮೇಲೆ ಕಂಡ ಬ್ಯಾಂಕಿಗೆ ೩೦೦ ರೂಪಾಯನ್ನು ಪಾವತಿ ಮಾಡಿ ವಸೂಲಿ ಷರಾನಿಶಿ ಬ್ಯಾಂಕಿನಿಂದ ವಾಪಸ್ಸು ಪಡೆಯುವ ಪ್ರೋನೋಟನ್ನೂ, ಮತ್ತು ಕಂದಾಯದ ಬಾಕಿ ೮೦ ರೂಪಾಯನ್ನು ಸಲ್ಲಿಸಿ

ಅದಕ್ಕಾಗಿ ಪಡೆಯುವ ಹಣಸಂದ ರಸೀತಿಯನ್ನೂ ಸಹ ಈ ಪತ್ರವು ರಿಜಿಸ್ಟರಾಗುವುದರೊಳಗಾಗಿ ದಾಖಲೇಬಗ್ಗೆ ನಿಮಗೆ ಕೊಡುತ್ತೇನೆ. ಇನ್ನು ಸದರಿ ಸ್ವತ್ತಿನ ನಿಧಿ, ನಿಕ್ಷೇಪ, ಜಲ, ತರು, ಪಾಷಾಣಾದಿ ಅಷ್ಟಭೋಗ್ಯಗಳಿಗೂ ಅಧಿ, ಕ್ರಯ. ದಾನ, ಪರಿವರ್ತನೆಗಳೆಂಬ ವ್ಯವಹಾರಚತುಷ್ಟಯಕ್ಕೂ ನೀವೇ ಹಕ್ಕುದಾರರಾಗಿ ನಿಮ್ಮ ಪುತ್ರಪೌತ್ರಾದಿ ವಂಶಪಾರಂಪರ್ಯವಾಗಿ ಅನುಭವಿಸಲು ಹಕ್ಕುಳ್ಳವರಾಗಿರುತ್ತೀರಿ. ಇದುವರೆಗೂ ಈ ಸ್ವತ್ತನ್ನು ಯಾರಿಗೂ ಆಧಾರ, ಭೋಗ್ಯ, ಕ್ರಯ ಮೊದಲಾದ ಪರಾಧೀನವನ್ನು ಮಾಡಿಲ್ಲ. ಹಾಗೆ ನಾನಾಗಲಿ, ನನಗೆ ಪೂರ್ವದ ಹಕ್ಕುದಾರರಾಗಲಿ, ನ್ಯಾಯಕ್ಕೆ ಸಲ್ಲುವ ಯಾವ ಪೂರ್ವಾಧಿಯನ್ನು ಮಾಡಿದ್ದರೂ ಮತ್ತು ಮತ್ತಾವವಿಧವಾಗಾದರೂ ಪರಾಧೀನ ಮಾಡಿದ್ದರೂ ಸಹ ಅಥವಾ ಈ ಸ್ವತ್ತಿನ ಮೇಲೆ ಇತರರಿಗೆ ನ್ಯಾಯವಾದ ಹಕ್ಕಿದ್ದು ಅವರಿಂದ ತಕರಾರುಂಟಾದರೂ ಸಹ ಅವುಗಳನ್ನೆಲ್ಲ ಪರಿಸಿಕೊಳ್ಳಲು ನಾನೇ ಬದ್ಧಳಾಗುತ್ತೇನೆ. ಅಂಥ ತಂಟೆ ತಕರಾರುಗಳಿಂದ ನಿಮಗೆ ಉಂಟಾಗುವ ನಷ್ಟಕ್ಕೆಲ್ಲ ನಾನೇ ಗುರಿಯಾಗುತ್ತೇನೆ ಎಂದು ನನ್ನ ಮನಃಪೂರ್ವಕವಾಗಿ ಬರೆದುಕೊಟ್ಟ ಪತ್ರ.

ಬರೆದು ಕೊಟ್ಟವರ ರುಜು......................

... .ಸಾಕ್ಷಿ

ದಾನಪತ್ರ.

(೨೧ ನೇ ನಮೂನೆ)

ಸಹಿ...... ರಲ್ಲು....... ಲಿಂಗಪ್ಪನು.... ಸಿದ್ಧಲಿಂಗಪ್ಪನವರಿಗೆ ಬರೆದು ಕೊಟ್ಟ ದಾನದ ಪತ್ರವೇನಂದರೆ— ಕೆಳಗೆ ಷೆಡ್ಯೂಲಿನಲ್ಲಿ ವಿವರಿಸಿರುವ ನನ್ನ ಸ್ವಾರ್ಜಿತವಾದ ಸ್ವಾಧೀನಾನುಭವದಲ್ಲಿರುವ ಸುಮಾರು ೨೫೦ ರೂ. ಬೆಲೆ ಬಾಳುವ ನನ್ನ ಜಮೀನನ್ನು ನನಗೆ ಪರೋಪಕಾರಪ್ರಾಪ್ತಿಯುಂಟಾಗುವದಕ್ಕೋಸ್ಕರ ಶಿವಾರ್ಪಿತವಾಗಿ, ಹಿರಣ್ಯೋದಕ ಧಾರಾಪೂರ್ವಕವಾಗಿ ನಿಮಗೆ ಧಾರೆಯನ್ನೆರೆದುಕೊಟ್ಟು, ನಿಮ್ಮ ಸುಪರ್ದು ಮಾಡಿರುತ್ತೇನೆ. ಇನ್ನು ಮೇಲೆ ಈ ಸ್ವತ್ತಿನ ಅಧಿ, ಕ್ರಯ, ದಾನ, ಪರಿವರ್ತನೆಗಳೆಂಬ ವ್ಯವಹಾರ ಚತುಷ್ಟಯಕ್ಕೂ, ಅಷ್ಟಭೋಗ್ಯಕ್ಕೂ ನೀವೇ ಸಂಪೂರ್ಣ ಹಕ್ಕುದಾರರಾಗಿ ನಿಮ್ಮ ಪುತ್ರಪೌತ್ರ ಪಾರಂಪರ್ಯವಾಗಿ ಪಾಠಪ್ರವಚನ ಮುಂತಾದ ಸತ್ಕಾಲಕ್ಷೇಪ ಮಾಡುತ್ತಾ ನಮ್ಮ ಶ್ರೇಯಃಪ್ರಾರ್ಥನೆ ಮಾಡಿಕೊಂಡು,

ಸದರಿ ಸ್ವತ್ತನ್ನು ಅನುಭವಿಸಿಕೊಂಡು ಬರುವುದು ಎಂಬದಾಗಿ ನನ್ನ ಆತ್ಮ ಸಂತೋಷದಿಂದ ಬರೆದುಕೊಟ್ಟ ದಾನಪತ್ರ.

ರುಜು................

ಚರಸ್ವತ್ತಿನ ಕ್ರಯಪತ್ರ.

(೨೨ ನೇ ನಮೂನೆ.)

ಸರ್......ರಲ್ಲು ...... ಚನ್ನೇಗೌಡನು ... ವೆಂಕಟ್ರಮಣ ಗೌಡನಿಗೆ ಬರೆದುಕೊಟ್ಟ ಜಿನಸಿ ಕ್ರಯಪತ್ರವೇನಂದರೆ— ಮುಂದಣ ಫಾಲ್ಗುಣ ಬಹುಳ ಅಮಾವಾಸ್ಯೆಯೊಳಗಾಗಿ ನಿಮಗೆ ನಾನು ಪಲ್ಲಾ ೧ ಕ್ಕೆ ೧೦ ರೂ. ಮೇರೆ ೨೦೦ ಪಲ್ಲಾ ಗೋಧಿಯನ್ನು ಕ್ರಯಕ್ಕೆ ಕೊಡಲು ಒಪ್ಪಿಕೊಂಡು, ಸದರಿ ಕ್ರಯದ ಮೊಬಲಗು ಪೈಕಿ ೧೦೦ ರೂಪಾಯನ್ನು ಅಡ್ವಾನ್ಸಾಗಿ ಈ ದಿವಸ ನಿಮ್ಮಿಂದ ತೆಗೆದುಕೊಂಡಿದ್ದೇನೆ. ಸದರಿ ಗೋಧಿಯನ್ನು ನಿಮಗೆ ನಾನು ಕೊಡದಿದ್ದರೆ ಈಗ ಅಡ್ವಾನ್ಸಾಗಿ ತೆಗೆದುಕೊಂಡಿರುವ ಮೊಬಲಗಿಗೆ ಸೇ॥ ಮಾ॥ ೧ ರೂಪಾಯಿಯಂತೆ ಈಲಾಗಾಯಿತು ಬಡ್ಡಿ ಕೊಡಲು ಒಪ್ಪಿಕೊಂಡಿರುತ್ತೇನೆ ಎಂಬದಾಗಿ ನನ್ನ ಖುದ್ದು ರಾಜಿಯಿಂದ ಬರೆದುಕೊಟ್ಟ ಜಿನಸಿ ಕ್ರಯಪತ್ರ.

ಬರೆದುಕೊಟ್ಟವನ ರುಜು..........

ಸಾಕ್ಷಿಗಳ ರುಜು.

ಮೇಡೋವರ್ ಮಾಡಿದವನು ಸಾಲಗಾರನಿಗೆ ಕೊಡುವ ನೋಟೀಸ್.

(೨೩ ನೇ ನಮೂನೆ.)

ರಾಂಪುರದ....ನಂಜಯ್ಯನು ರಾಂಪುರದ...ರಂಗಯ್ಯನಿಗೆ ತಿಳಿಸುವುದೇನಂದರೆ—ನೀನು ನನ್ನಿಂದ ೧೦೦ ರೂಪಾಯನ್ನು ಸಾಲಾಪಡೆದು...ನೇ ಮಕರ್ಮಿನಲ್ಲಿ ನನಗೆ ಬರೆದುಕೊಟ್ಟಿರುವ ಆಧಾರದ ದಸ್ತಾವೇಜಿನ ಮೇಲೆ ನನಗಿರುವ ಹಕ್ಕುಬಾಧ್ಯತೆಯನ್ನೆಲ್ಲ....ರಾಮಯ್ಯನಿಗೆ ಮೇಡೋವರ್ (ಯಾ, ಆನ್ವಾಧಿ) ಮಾಡಿಬಿಟ್ಟಿರುತ್ತೇನೆ. ಆದುದರಿಂದ ನೀನು ಸದರಿ ಆಧಾರ ದಸ್ತಾವೇಜಿನಮೇಲೆ ಸಲ್ಲತಕ್ಕದ್ದನ್ನು ಸದರಿ ರಾಮಯ್ಯನಿಗೆ ಸಲ್ಲಿಸಬೇಕೇ ಹೊರತು ನನಗೆ ಕೊಡಬೇಕಾದುದಿಲ್ಲ.

ತಾ॥ ನಂಜಯ್ಯನ ರುಜು.

ಟಿಪ್ಪಣಿ.

ವಿಷಯ—ಮೇಡೋವರ್ ಪತ್ರವು ಬರೆದುಕೊಟ್ಟಾಗಲೇ ಮೇಡೋವರ್ ಕೊಟ್ಟವನಿಂದ ಮೇಲೆ ಕಂಡಮೇರೆ ನೋಟೀಸನ್ನು ಬರೆಯಿಸಿ, ರಿಜಿಸ್ಟರ್ ಪೋಸ್ಟ್ ಮೂಲಕವಾಗಿ ರವಾನಿಸಬೇಕು. ಹೀಗೆ ಮಾಡಲು ತಪ್ಪಿದಲ್ಲಿ, ಮೇಡೋವರ್ ಕೊಟ್ಟವನೂ, ಋಣಿಯೂ ಷರೀಕಾಗಿ, ಪತ್ರದ ಸಾಲವನ್ನು ಮೇಡೋವರ್ ಕೊಟ್ಟವನಿಗೇ ಕೊಟ್ಟುಬಿಟ್ಟೆನೆಂದು ಋಣಿಯು ಹೇಳಿಬಿಡಬಹುದು,

ದಸ್ತಾವೇಜಿನ ಅನ್ಯಾಧಿಪತ್ರ.

(೨೪ ನೇ ನಮೂನೆ.)

ಶಕ ರಲ್ಲಿ ದೇವಯ್ಯನು ನರಸಯ್ಯನಿಗೆ ಬರೆದುಕೊಟ್ಟ ಅನ್ಯಾಧಿಯ ಪತ್ರವೇನಂದರೆ— ಈ ದಿವಸ ನನ್ನ ದರದು ನಿಮಿತ್ಯವಾಗಿ ೨೦೦ ರೂ. ಸಾಲಾಪಡೆದಿರುತ್ತೇನೆ. ಇದರ ಬಡ್ಡಿಗಾಗಿ ಸೇ॥ ಮಾ॥ ಒಂದು ರೂ. ನಂತೆ ಆಗುವ ಬಡ್ಡಿಯನ್ನು ಕೊಡಲು ಒಪ್ಪಿರುತ್ತೇನೆ. ಅಸಲೂ ಮತ್ತು ಆ ವರೆಗೆ ಆಗುವ ಬಡ್ಡಿಯನ್ನು ಈ ಲಾಗಾಯಿತು ೩ ವರುಷದಲ್ಲಿ ಕೊಡುತ್ತೇನೆ. ಈ ಅಸಲೂ ಬಡ್ಡಿಯ ಖಾತರೀಬಗ್ಗೆ ಅಗ್ರಹಾರದ ತಿಮ್ಮಯ್ಯನೆಂಬುವನು ನನ್ನಿಂದ ೨೦೦ ರೂ. ಸಾಲಾಪಡೆದು ನನಗೆ ಬರೆದುಕೊಟ್ಟಿರುವ.. ನೇ ಮುಸ್ಕಿಮ್ಮಿನ ಆಧಾರದ ಪತ್ರವನ್ನು ನಿನಗೆ ಅನ್ಯಾಧಿ ಮಾಡಿರುತ್ತೇನೆ. ಸದರಿ ಆಧಾರದ ಪತ್ರಕ್ಕಾಗಿ ಸದರಿ ತಿಮ್ಮಯ್ಯನಿಂದ ನನಗೆ ಏನೂ ಬಂದಿಲ್ಲ. ಸದರಿ ದಸ್ತಾವೇಜನ್ನು ದಾಖಲೇಬಗ್ಗೆ ನಿಮಗೆ ಕೊಟ್ಟಿರುತ್ತೇನೆ ಎಂಬದಾಗಿ ಖುದ್ದು ರಾಜಿಯಿಂದ ನಾನು ಬರೆದುಕೊಟ್ಟ ಅನ್ಯಾಧಿಯ ಪತ್ರ.

(ಬರೆದುಕೊಟ್ಟವನ, ಸಾಕ್ಷಿಗಳ, ಲೇಖಕನ ರುಜುಗಳು.)

ಕಾಗದಮುಖಾಂತರ ನಡೆಸತಕ್ಕ ಚರಸ್ವತ್ತಿನ ಕ್ರಯಗಳು.

(ವ್ಯಾಪಾರಕ್ಕೆ ಸಂಬಂಧಪಟ್ಟದ್ದು.)

೨೫ ನೇ ನಮೂನೆ.

ಹಡಗು, ರೈಲು, ಅಂಚೆ, ತಂತಿಸಮಾಚಾರ, ವ್ಯಾಲ್ಯೂಪೇಬಲ್ ಪೋಸ್ಟ್ ಏರ್ಪಾಟುಗಳಿಂದ ಕ್ರಯಿಕನಾಗಲಿ, ಅವನಕಡೆಯವನಾಗಲಿ ವಿಕ್ರಯಿ

ಕನ ಬಳಿಗೆ ಹೋಗಿ ಹಣವನ್ನು ಕೊಟ್ಟು ಮಾಲನ್ನು ತೆಗೆದುಕೊಳ್ಳುವ ಆವಶ್ಯಕತೆಯೇ ತಪ್ಪಿಹೋಗಿರುತ್ತದೆ. ಮೈಸೂರಿನಲ್ಲಿರುವವನು ಬೊಂಬೈನಲ್ಲಿರುವವನಿಂದ ಮಾಲನ್ನು ಕೊಂಡುಕೊಳ್ಳಬೇಕಾದರೆ ಮೈಸೂರಿನವನು ತಂತಿ ಸಮಾಚಾರ, ಯಾ, ಅಂಚೆ ಮನಿಆರ್ಡರಿನ ಮೇಲೆ ಹಣವನ್ನು ಬೊಂಬೈನವನಿಗೆ ರವಾನಿಸಿದಲ್ಲಿ ಬೊಂಬೈನವನು ಮಾಲನ್ನು ಅಂಚೆಯ ಮೇಲೆ, ಯಾ, ರೈಲಿನ ಮೇಲೆ ಮೈಸೂರಿನವನಿಗೆ ರವಾನಿಸುವನು; ಅಥವಾ, ಮಾಲು ಕೈಗೆ ಸೇರುವಾಗ ಹಣವನ್ನು ಕೊಡಬೇಕೆಂದು ಮೈಸೂರಿನವನು ಅಪೇಕ್ಷಿಸಿ ಈ ಅಪೇಕ್ಷೆಯನ್ನು ಬೊಂಬೈನವನಿಗೆ ಬರೆದರೆ, ಅವನು ವ್ಯಾಲ್ಯೂಪೇಬಲ್ ಮೇಲೆ ಮಾಲನ್ನು ಅಂಚೆಯಮೂಲಕ ರವಾನಿಸುವನು. ಕೊಂಡುಕೊಳ್ಳುವವನು ಆ ಮಾಲಿನ ಮೌಲ್ಯವನ್ನು ಅಂಚೆ ಆಫೀಸಿಗೆ ಕೊಟ್ಟು, ಮಾಲನ್ನು ತೆಗೆದುಕೊಳ್ಳಬಹುದು. ಕಳುಹಿಸಲ್ಪಡಬೇಕಾದ ಮಾಲು ವಿಶೇಷವಾಗಿರುವುದರಿಂದ ಪೋಸ್ಟ್ ಮೇಲೆ ಕಳುಹಿಸಲಾಗದಿದ್ದರೆ, ಅವನು ಅದನ್ನು ರೈಲಿನಮೇಲೆ ರವಾನಿಸಿ, ರೈಲಿನವರು ಕೊಡುವ ರೈಲ್ವೇ ರಸೀತಿ ಎಂಬ ಚೀಟಿಯನ್ನು ಪೋಸ್ಟಿನಮೇಲೆ ರವಾನಿಸುವನು. ಕ್ರಯಿಕನು ಮೂಲ್ಯವನ್ನು ಪೋಸ್ಟ್ ಆಫೀಸಿಗೆ ಕೊಟ್ಟು ಪೋಸ್ಟಿನಿಂದ ಆ ರಸೀತಿಯನ್ನು ತೆಗದುಕೊಂಡು ಅದನ್ನು ರೈಲಿನವರಿಗೆ ಕೊಟ್ಟರೆ ಅವರು ಮಾಲನ್ನು ಕೊಡುವರು. ಮಾಲು ಸಮುದ್ರದ ಆಚೆನ ದೇಶದಿಂದ ಬರಬೇಕಾದರೆ ವಿಕ್ರಯಿಕನು ಆ ಮಾಲನ್ನು ಹಡಗಿನಲ್ಲಿ ಕಳುಹಿಸಿ, ಹಡಗಿನವರು ಕೊಡುವ ಬಿಲ್ ಆಫ್ ಲೇಡಿಂಗ್ ಎಂಬ ಅಧಿಕಾರ ಪತ್ರಿಕೆಯನ್ನು ಕೊಟ್ಟು ಆ ಪತ್ರಿಕೆಯನ್ನು ತೆಗದುಕೊಂಡು ಹೋಗಿ ಹಡಗಿನವರಿಗೆ ತೋರಿಸಿ ಮಾಲನ್ನು ತೆಗೆದುಕೊಳ್ಳುವನು.

ಗುತ್ತಿಗೆ ಕರಾರುಗಳು.

೧. ಹೊಲವನ್ನಾಗಲಿ, ಮನೆಯನ್ನಾಗಲಿ ಅವುಗಳ ಮಾಲೀಕನು ಮತ್ತೊಬ್ಬನಿಗೆ ಸಾಗುವಳಿಗಾಗಲಿ ಯಾ, ಬಾಡಿಗೆಗಾಗಲಿ ಕೊಡುವ ವ್ಯವಹಾರಕ್ಕೆ ಸಂಬಂಧಪಟ್ಟ ಸರ್ವಸಾಮಾನ್ಯವಾದ ಲಾದ ವಿಧಿಗಳು "ಟ್ರಾನ್ಸ್‌ಫರ್ ಆಫ್ ಪ್ರಾಪರ್ಟಿ ಆಕ್ಟ್" ಎಂಬ ಖಾನೂನಿನಲ್ಲಿ ಗರ್ಭೀಕರಿಸಲ್ಪಟ್ಟಿರುವುದು. ಆದರೆ ಜಮೀನು ಸಾಗುವಳಿಗೆ ಸಂಬಂಧಪಟ್ಟ ಜಮೀನಿನ ವಿಷಯದಲ್ಲಿ ರೆವಿನ್ಯೂಕೋಡ್. ರೆಂಟ್‌ರಿಕವರಿ ಆಕ್ಟು, ರೆವಿನ್ಯೂ ರಿಕವರಿ ಆಕ್ಟು ಮೊದಲಾದ ರೆವಿನ್ಯೂ ರೂಲ್ಸ್‌ಗಳು ಇರುವುದರಿಂದ ವ್ಯವಸಾಯಸಂಬಂಧದ ಜಮೀನಿನ ವಿಷಯದಲ್ಲಿ ಆ ರೆವಿನ್ಯೂ ಖಾನೂನುಗಳೇ ಪ್ರಮಾಣಗಳಾಗಿರುವುವು ಮೈಸೂರು ದೇಶದಲ್ಲಿ "ಟ್ರಾನ್ಸ್‌ಫರ್ ಆಫ್

ಪ್ರಾಪರ್ಟಿ'' ಆಕ್ಟು ಜಾರಿಯಲ್ಲಿಲ್ಲದಿದ್ದರೂ ಅದರಲ್ಲಿರುವ ಸರ್ವಸಮ್ಮತವಾದ ನಿಬಂಧನೆಗಳು ಪ್ರಮಾಣವಾಗಿ ಅಂಗೀಕರಿಸಲ್ಪಡುವುವು.

೨. ಹಿಡುವಳಿದಾರರು ತಮ್ಮ ಚಿಕ್ಕ ಹಿಡುವಳಿದಾರರಿಂದ ಬರಬೇಕಾದ ಕಂದಾಯ ಗುತ್ತಿಗೆ ವಗೈರೆ ಪ್ರತಿಫಲವನ್ನು ವಸೂಲ್ಮಾಡಿಕೊಳ್ಳಲು ಚಿಕ್ಕ ಹಿಡುವಳಿದಾರರು ಫಸಲನ್ನು ರೇಖೆ ಮಾಡಿಕೊಳ್ಳುವುದಕ್ಕೆ ಅಡ್ಡಿ ಮಾಡುವುದೂ, ಅವರ ಚರಸ್ವತ್ತನ್ನು ಬಲಾತ್ಕಾರವಾಗಿ ತೆಗೆದುಕೊಳ್ಳುವುದೂ, ಹಾಗೆ ತೆಗೆದುಕೊಂಡ ಆ ಸ್ವತ್ತನ್ನು ಹರಾಜು ಮಾಡುವುದೂ, ಜಮೀನನ್ನು ಅವರ ಕೈ ತಪ್ಪಿಸುವುದೂ, ಅವರನ್ನು ದಸ್ತಗಿರಿ ಮಾಡುವುದೂ ಈ ಮೊದಲಾದ ನಿರ್ಬಂಧಗಳನ್ನು ಸ್ವತಂತ್ರವಾಗಿ ಉಂಟುಮಾಡುವುದಕ್ಕೆ ಮೇಲು ಹಿಡುವಳಿದಾರರಿಗಿರುವ ಹಕ್ಕು ಮತ್ಯಾವ ಋಣದಾತೃಗಳಿಗೂ, ಸಾಲ ಕೊಟ್ಟವರಿಗೂ ಇರುವದಿಲ್ಲ. ಮತ್ತು ಮೇಲುಹಿಡುವಳದಾರರು ಕೀಳು ಹಿಡುವಳಿದಾರರಿಗೆ ಮೇಲೆ ಕಂಡ ನಿರ್ಬಂಧಗಳನ್ನುಂಟುಮಾಡಿ ತಮಗೆ ಬರತಕ್ಕುದನ್ನು ವಸೂಲ್ಮಾಡಿಕೊಳ್ಳಲು ಇವರಿಗ ಸರ್ಕಾರದವರು ಅವಕಾಶವನ್ನೂ, ಸಹಾಯವನ್ನೂ ಕೊಡುವಷ್ಟು ಮತ್ಯಾವ ಋಣದಾತೃಗಳಿಗೂ ಕೊಡುವುದಿಲ್ಲ. ಮತ್ತು ಕೀಳು ಹಿಡುವಳಿದಾರರು ಇತರರಿಗೆ ಕೊಡಬೇಕಾದ ಇತರ ಋಣಕ್ಕಿಂತಲೂ ಮೇಲು ಹಿಡುವಳಿದಾರರಿಗೆ ಕೊಡಬೇಕಾದ ಕಂದಾಯ, ಯಾ. ಗುತ್ತಿಗೆ ವಗೈರೆ ಋಣವು ಕೆಲಸಂದರ್ಭದಲ್ಲಿ ಪ್ರಧಾನವಾಗುವುದು. ಎಂದರೆ, ಮೊದಲಿನ ಋಣವು ಎರಡನೆಯದಕ್ಕಿಂತ ಮೊದಲು ಉತ್ಪನ್ನವಾದುದಾದರೂ, ಋಣಿಯ ಕೆಲವು ಸ್ವತ್ತಿನಿಂದ (ಮಾಸಲ - ಸಾಗುವಳಿಯ ಜಮೀನಿನಮೇಲೆ ಬೆಳದ ಬೆಳೆ) ಎರಡನೇ ಋಣವು ವಸೂಲಾದಬಳಿಕ ಮಾತ್ರ ಮೊದಲನೇ ರುಣವು ವಸೂಲಾಗತಕ್ಕುದು

೩. ಈ ಅಸಾಧಾರಣವಾದ ಅಧಿಕಾರಿಗಳು ಜಹಗೀರ್‌ದಾರರೂ, ಇನಾಂದಾರರೂ ಇಂತಹ ದೊಡ್ಡ ದೊಡ್ಡ ಜಮೀನ್‌ದಾರರಿಗೆ ಮಾತ್ರವಿರುತ್ತವೆಯೆಂದು ತಿಳಿಯಕೂಡದು; ಜಮೀನನ್ನು ಸಾಗುವಳಿ ಮಾಡುವುದಕ್ಕಾಗಿ ಕೊಡುವ ಗುತ್ತಿಗೆ, ಯಾ, ಕಂದಾಯ, ಯಾ, ವಾರ ಇವೇ ಮೊದಲಾದವುಗಳನ್ನು ತೆಗೆದುಕೊಳ್ಳಲು ಹಕ್ಕುಳ್ಳ, ಜಮೀನಿನ ಸಣ್ಣ ಹಿಡುವಳಿದಾರರು, ಪಟ್ಟೇದಾರರು ಮೊದಲಾದವರಿಗೂ ಇರುತ್ತವೆ. ಇಂಗ್ಲಾಂಡ್ ಮೊದಲಾದ ಪಶ್ಚಿಮದೇಶಗಳಲ್ಲಿ ಕಟ್ಟಡವನ್ನು ಬಾಡಿಗೆಗೆ ಕೊಟ್ಟಿರುವವರಿಗೂ ಇಂಥ ಹಕ್ಕುಗಳಿರುತ್ತವೆ.

೪. ಮೇಲು ಹಿಡುವಳಿದಾರರಿಗೂ ಕೀಳು ಹಿಡುವಳೀದಾರರಿಗೂ ಅನ್ಯೋನ್ಯವಾದ ಹಕ್ಕು ಬಾಧ್ಯತೆಗಳ ವಿಷಯಕವಾಗಿರುವ ಲಾದ ನಿಯ

ಮುಗಳು, ಮದ್ರಾಸ್ ಆಧಿಪತ್ಯದಲ್ಲಿ ೧೮೬೫ ನೇ ಇಸವಿಯ ೮ನೇ ನಂಬರು ಆಕ್ಟಿನಲ್ಲಿಯೂ, ಬೊಂಬಾಯಿ ಆಧಿಪತ್ಯದಲ್ಲಿ ಲ್ಯಾಂಡ್ ರೆವಿನ್ಯೂ ಕೋಡಿನ ೮೩-೯೪ ನೆ ಸೆಕ್ಷನ್‌ಗಳಲ್ಲಿಯೂ, ಮೈಸೂರು ದೇಶಶಲ್ಲಿ ಲ್ಯಾಂಡ್ ರೆವಿನ್ಯೂ ಕೋಡಿನ ೭೯-೧೦೫ ನೇ ಸೆಕ್ಷನ್‌ಗಳಲ್ಲಿಯೂ ಗರ್ಭಿತವಾಗಿವೆ.

೧. ಈ ಲಾಗಳ ವಿಧಿಗಳು ರೆವಿನ್ಯೂ ಲಾದಲ್ಲಿ ವಿವರಿಸಲ್ಪಡುತ್ತವೆ. ಇಲ್ಲಾದಗೊ ಈ ವಿಷಯಕ್ಕೆ ಸಂಬಂಧಪಟ್ಟ ಸಾದಾರಣವಾದ ಲಾದ ವಿಧಿಗಳು ಕೊಡಲ್ಪಡುತ್ತವೆ.

೨. ಮತ್ತು ಜಮೀನುದಾರ ಸಾಗುವಳಿದಾರರ ಮಧ್ಯೆ ವಾಯಿದೆಯು ಗೊತ್ತುಮಾಡಲ್ಪಟ್ಟದ್ದರೆ, ಮೈಸೂರು ಮುಂಬಯಿ ದೇಶಗಳಲ್ಲಿ ಒಂದು ವರ್ಷದ ಎಪ್ರಿಲ್ ೩೧ ರ ಲಾಗಾಯಿತು ಮುಂದಣ ವರ್ಷದ ಎಪ್ರಿಲ, ೩೧ ರ ವರೆಗೆ ನಡೆಯುತ್ತದೆಂದು ವಿಧಿತವಾಗಿದೆ. ಎಪ್ರಿಲ್ ೩೧ ಕ್ಕೆ ವಾಯಿದೆಯನ್ನು ಆಖೈರು ಮಾಡಬೇಕಾದರೆ, ೩ ತಿಂಗಳಿಗೆ ಮುಂಚೆಯಾದರೂ ನೋಟೀಸನ್ನು ಒಬ್ಬನು ಮತ್ತೊಬ್ಬನಿಗೆ ಕೊಡಬೇಕು.

೩. ಜಮೀನಿಗೆ ಅವಶ್ಯಕವಾದ ಕಾಮಗಾರಿಯನ್ನು ಜಮೀನುದಾರನು ಮಾಡಿಸಿಕೊಡದೆ ಹೋಗುವುದರಿಂದ ಸಾಗುವಳಿದಾರನಿಗೆ ನಷ್ಟವುಂಟಾಗುವುದಾಗಿದ್ದರೆ, ಸಾಗುವಳಿದಾರನೇ ಹಾತ್ ಲಾಗೋಡಿನಿಂದ ಮಾಡಿಸಿ, ಅದರ ಖರ್ಚನ್ನು ಜಮೀನುದಾರನಿಗೆ ಕೊಡತಕ್ಕ ಕಂದಾಯ, ಯಾ, ಗುತ್ತಿಗೆಯಲ್ಲಿ ವಜಾ ಹಾಕಿಕೊಳ್ಳಬಹುದು.

೪. ಸಾಗುವಳಿದಾರನು ಸಾಗುವಳಿಗೆ ಮಾಡಿಕೊಂಡಿರುವ ಜಮೀನಿಗೆ ಮತ್ತೊಬ್ಬನು ಯಾವಪ್ರಕಾರವಾದರೂ ನಷ್ಟ ಮಾಡಿದರೆ, ಆ ವಿಷಯವನ್ನು ಸಾಗುವಳಿದಾರನು ಜಮೀನುದಾರನಿಗೆ ತತ್‌ಕ್ಷಣವೇ ತಿಳಿಸಬೇಕು.

೫. ಇಂತಿಂಥ ಷರತ್ತುಗಳಿಗೆ ಸಾಗುವಳಿದಾರನು ತಪ್ಪಿದಾಗ ಗೇಣಿ ವಾಯಿದೆಯು ಮುಗಿಯಬೇಕು ಎಂದು ಖರಾರಿನಲ್ಲಿ ಷತ್ತುಮಾಡಲ್ಪಟ್ಟಿದ್ದು ಆ ಷರತ್ತಿಗೆ ಸಾಗುವಳಿದಾರನು ತಪ್ಪಿದರೆ ಗೇಣಿಯು ಮುಗಿದು ಹೋಗುತ್ತದೆ.

೬. ಸಾಗುವಳಿದಾರನು ಯಾರಿಂದ ಜಮೀನನ್ನು ಸಾಗುವಳಿಗೆ ಪಡೆದನೋ ಅಂಥವನ ಹಕ್ಕನ್ನು ತಿರಸ್ಕರಿಸುವಂಥ ಕಾರ್ಯವನ್ನು ಮಾಡಿದರೆ ಗೇಣೀ ವಾಯಿದೆಯು ಇನ್ನೂ ಇದ್ದರೂ ಸಾಗುವಳಿದಾರನಿಂದ ಜಮೀನನ್ನು ಬಿಡಿಸಬಹುದು.

೭. ಖಾಯಂ ಗುತ್ತಿಗೆಯಾಗಿರುವ ಜಮೀನುಗಳ ಕಂದಾಯವನ್ನು ಸರ್ಕಾರದವರು ಹೆಚ್ಚು ಮಾಡಿದರೆ ಅದಕ್ಕೆ ತಕ್ಕಷ್ಟು ಹೆಚ್ಚಾದ ಗುತ್ತಿಗೆಯನ್ನು ಸಾಗುವಳಿದಾರರು ಕೊಡಲು ಬದ್ಧರಾಗುತ್ತಾರೆ. ಮತ್ತು ಕಂದಾಯವನ್ನು ಕಡಮೆ ಮಾಡಿದರೆ ಅದಕ್ಕೆ ತಕ್ಕ ಗುತ್ತಿಗೆಯನ್ನು ಬಿಟ್ಟು ಬಿಡಲು ಜಮೀನುದಾರರು ಬದ್ಧರಾಗುತ್ತಾರೆ. ಇನಾಂದಾರರೂ ಅವರ ಖದೀಂ ರೈತರೂ ಡೆಪ್ಯುಟಿ ಕಮಿಷನರವರಲ್ಲಿ ಯಾ ಕಲೆಕ್ಟರಲ್ಲಿ ದಾವಾ ತಂದು ಕಂದಾಯವನ್ನು ಹೆಚ್ಚು ಕಡಮೆ ಮಾಡಿಸಿಕೊಳ್ಳಬಹುದು.

ಗುತ್ತಿಗೆ ಹಣಕ್ಕೆ ಆಧಾರ ಬರೆಯುವ ವಿಧಾನ.

(೨೬ ನೇ ನಮುನೆ.)

ಸರ್   ರಲ್ಲು ಬಾಲರಡ್ಡಿಹಳ್ಳಿ ನರಸಿಂಹರಡ್ಡಿಯು ಮುಂಚೇನಹಳ್ಳಿ ಕೆಂಪನಾರಣಪ್ಪನವರ ರಾಮಕೃಷ್ಣಪ್ಪನವರಿಗೆ ಬರೆದುಕೊಟ್ಟ ಗುತ್ತಿಗೆಚೀಟಿ ಅಥವಾ ಆಧಾರಪತ್ರ ಕ್ರಮವೆಂತೆಂದರೆ— ನಿಮ್ಮ ಬಾಬತು ಕೆಳಗಿನ ಷೆಡ್ಯೂಲ್ ೧ ನೆ ಐಟಂ ಮುಂಚೇನಹಳ್ಳಿ ಕೆರೆ ಕೆಳಗಿನ ಕಬ್ಬಿನ ತೋಟವನ್ನು ಈ ಲಾಗಾಯಿತು ನೀವೂ ನಡಿಸಿಕ್ಕೊಡುವವರಿಗೂ ಸಾವಿರಕ್ಕೆ ಒಂದು ಅಡಿಗೆ ಬೆಲ್ಲಾ ನಿಮಗೆ ಪ್ರತಿಸುಗ್ಗಿಯಲ್ಲಿಯೂ ಕೊಡುವದಕ್ಕೆ ಒಪ್ಪಿ ಗುತ್ತಿಗೈ ತೆಗದುಕ್ಕೊಂಡು ಇರುತ್ತೇನೆ. ನೀವೂ ಸದರಿ ಜಮೀನನ್ನು ಬಿಡಬೇಕೆಂದು ಅಪೇಕ್ಷೆಪಟ್ಟಲ್ಲಿ ಕಬ್ಬು ಹಾಕಿದಾಗ ಕಬ್ಬಿನ ಆಲೆಕಟ್ಟುವದಕ್ಕೆ ೩ ತಿಂಗಳು ಮುಂಚಿತವಾಗಿ ನೀವು ನನಿಗೆ ಬರಹಮೂಲಕವಾದ ತಿಳುವಳಿಕೆ ನೋಟೀಸನ್ನು ರಿಜಷ್ಟರ್ ಟಪಾಲುಮೂಲಕ ಕೊಡಬೇಕು. ಹಾಗೆ ನೋಟೀಸ್ ಕೊಟ್ಟಲ್ಲಿ ಸದರಿ ಜಮೀನನ್ನು ಆ ಸಾಲಿನ ಫಸಲ್ ಕಟಾವ್ ಆದಕೂಡಲೆ ನಿಮ್ಮ ಸುಫರ್ದಿಗೆ ಕೊಡಲುಳ್ಳವನು. ಗುತ್ತಿಗೆಯ ಬೆಲ್ಲವನ್ನು ಪ್ರತಿಸುಗ್ಗಿ ಅಂದರೆ—ಫಾಲ್ಗುಣ ಬಹುಳ ಅಮಾವಾದಶೆಯೊಳಗಾಗಿ ಕೊಡಲು ತಪ್ಪಿದರೆ ಅಡಿಗೆ ಒಂದಕ್ಕೆ ೬ ರೂಪಾಯಿಪ್ರಕಾರ ನಾನು ಕೊಡಬೇಕಾದ ಬೆಲ್ಲದ ಕಿಮ್ಮತ್ತನ್ನೆಲ್ಲಾ ಲೆಖ್ಖಾಚಾರಪ್ರಕಾರ ನಿಮಗೆ ಪಾವತಿ ಮಾಡಿ ನಿಮ್ಮಿಂದ ರಶೀದಿ ಪಡೆಯುತ್ತೇನೆ. ಈ ಗುತ್ತಿಗೆ ಬೆಲ್ಲದ ಹಣದ ಆಧಾರಕ್ಕಾಗಿ ಈ ಕೆಳಗೆ ಕಾಣಿಸುವ ಷೆಡ್ಯೂಲಿನಲ್ಲಿ ನಮೂದಾಗುವ ಜಮೀ

ನನ್ನು ನಿಮಗೆ ಆಧಾರವಾಡಿ ಕೊಟ್ಟಿರುತ್ತೇನೆ; ಎಂಬುದಾಗಿ ನನ್ನ ಖುದ್ದು ರಾಜಿಯಿಂದ ಬರೆಧುಕೊಟ್ಟ ಗುತ್ತಾಚೀಟಿ, ಪ, ಆಧಾರಪತ್ರ. ಷೆಡ್ಯೂಲ್ (ಬರೆದುಕೊಟ್ಟವನ ಸಾಕ್ಷಿಗಳ ರುಜುವೂ, ಮತ್ತು ಬಿಕ್ಕಲಂ ಸಹ ೧ ನೇ ನಮೂನೆಗಿರುವಂತೆ.)

ಚಾಲಗೇಣಿ ಪತ್ರ.

(೨೬ ನೇ ನಮೂನೆ.)

ಸರ್ ರಲ್ಲು ಡಿಸ್ಟ್ರಿಕ್ಟು ತಾಲ್ಲೂಕು ಹೋಬಳಿ ಗ್ರಾಮದ ವಾಸಸ್ಥನಾದ ನು ಇದೇ ತಾಲ್ಲೂಕು ಹೋಬಳಿ ಗ್ರಾಮದ ಕಾಯಂಗುತ್ತಿಗೆದಾರ್ರು ಗೋಪಾಲರಾಯರಿಗೆ ಬರೆದುಕೊಟ್ಟ ಚಾಲಗೇಣಿಚೀಟಿ ಕ್ರಮವೆಂತೆಂದರೆ—ಕೊಮ್ಮಘಟ್ಟದ ಕಪ್ಪಣ್ಣನವರ ಬಾಬತು ನೀವು ೯ ವರುಷಗಳ ಗುತ್ತಿಗೆಗೆ ಪಡೆದಿರುವ ಕೆಳಗ ಷೆಡ್ಯೂಲಿನಲ್ಲಿ ವಿವರಿಸಿರುವ ತೋಟವನ್ನು ಈ ಸಾಲಿಗೆ ನಾನು ಚಾಲಗೇಣಿಗೆ ತೆಗದುಕೊಂಡು ಇರುತ್ತೇನೆ. ಇದಕ್ಕೆ ಈ ಸಾಲಿಗೆ ಮೊಕರೂರಾದ ೮೦ ರೂಪಾಯಿಗಳನ್ನು ಬರುವ ಸುಗ್ಗಿಗೆ ಅಂದರೆ ಈ ನಳನಾಮ ಸಂವತ್ಸರದ ಫಾಲ್ಗುಣ ಬಹುಳ ಅಮಾವಾದಶೆಗ ಸರಿಯಾಗಿ ನಿಮಗೆ ಪಾವತಿಮಾಡಿ ನಿಮ್ಮಿಂದ ರಶೀದಿ ಪಡೆಯುತ್ತೇನೆ, ಮತ್ತು ಈ ಜಮೀನಿನ ಬಡಗಲುಗಡಿಯ ಬೇಲಿಯನ್ನು ಚರಂಡಿಯನ್ನು ನನ್ನ ಸ್ವಂತಖರ್ಚಿನಿಂ ಮಾಡಿಸುವದಕ್ಕೆ ಒಪ್ಪಿಕೊಂಡಿರುವದಲ್ಲದೆ ತೋಟದಲ್ಲಿರುವ ಹಳೇದಿನ್ನೆಯನ್ನು ಸಮಮಾ ಬೆಳೆ ಇಡುವದಕ್ಕೆ ಒಪ್ಪಿಕೊಂಡಿರುತ್ತೇನೆ. ಮುಂದಿನ ವರ್ಷ ಕಾಲಾವದಿಯಲ್ಲಿ ನೀವು ಮತ್ತಾರಿಗಾದರೂ ಸಾಗುವಳಿ ಮಾಡಲು ಅಪೇಕ್ಷೆ ಪಟ್ಟರೆ ನೀವು ಸಾಗುವಳಿಗ ಕೊಡಲು ನನ್ನ ಅಭ್ಯಂತರವೇನೂ ಇರುವದಿಲ್ಲ. ಥವಾ ನಾನೇ ಕಬ್ಬು ಸಾಗುವಳಿ ಮಾಡಿದಲ್ಲಿ ಸಾವಿರಕ್ಕೆ ೧ ಅಡಿಗೆ ಅಥವಾ ಅದರ ಖರೀದಿ ಅಡಿಗ ೧ ಕ್ಕೆ ೬ ರೂಪಾಯಿನಂತೆ ಈ ಜಮೀನಿನ ಅಳತೆ ಪ್ರಕಾರ ಆಗುವ ಮೊಬಲಗನ್ನು ನಿಮಗೆ ಪಾವತೀಮಾಡುತ್ತಾ ನೀವೂ ನಡೆಸಿಕೊಂಡು ಬರುವರಿಗೂ ಕೊಡುತ್ತಾ ಗುತ್ತಿಗೆ ಹಣವನ್ನು ನಿಮಗೆ ಪಾವತಿಮಾಡಿದ ಕೂಡರೇ ರಶೀದಿ ಪಡೆಯುತ್ತಾ ಬರುತ್ತೇನೆಂದು ಬರೆದುಕೊಟ್ಟ ಚಾಲಗೇಣಿ ಚೀಟಿ.

ರುಜು............

ಸಾಕ್ಷಿಗಳು

೧. ....

೨. ....

ಬಿಕ್ಕಲಂ,

ಮೂಲಗೇಣಿ ಅಥವಾ ಖಾಯಂಗುತ್ತಾ ಕರಾರು.

(೨೮ ನೇ ನಮೂನೆ.)

ಸರ್ ರಲ್ಲು ಶಿವಮೊಗ್ಗಾ ಡಿಸ್ಟ್ರಿಕ್ಟು ಕುಂಸಿ ತಾಲ್ಲೂಕು ಆನಂದೂರು ಹೋಬಳಿ ಅಂದಲಗೆರೆ ಸುಬ್ಬರಾಯರಿಗೆ ಇದೇ ತಾಲ್ಲೂಕು ಅಮೃತೂರು ಹೋಬಳಿ ಸಿಡವಂದಗ್ರಾಮದ ಪಟೇಲ್ ಬೈರೇಗೌಡನು ಬರೆದುಕೊಟ್ಟ ಮೂಲಗೇಣಿಚೀಟಿ ಅಥವಾ ಖಾಯಂಗುತ್ತಾ ಖರಾರು ಏನಂದರೆ—ನಿಮ್ಮ ಖಾಯಂಗುತ್ತಾ ಗ್ರಾಮಕ್ಕೆ ಸೇರಿದ ಕೆಳಗೆ ಷೆಡ್ಯೂಲಿನಲ್ಲಿ ವಿವರಿಸಿರುವ ಜಮೀನನ್ನು ನಾನು ಈ ತಾರೀಖು ಲಾಗಾಯಿತು ಖಾಯಂ ಗುತ್ತಿಗೆಗೆ ತೆಗೆದುಕೊಂಡು, ಜಮೀನನ್ನು ನನ್ನ ಸುಫರ್ದಿಗೆ ತೆಗೆದುಕೊಂಡಿದ್ದೇನೆ ಇದಕ್ಕೆ ಸಾಲು ೧ ಕ್ಕೆ ಗುತ್ತಿಗೆಗಾಗಿ ಗೊತ್ತಾಗಿರುವ ೮ ಪಲ್ಲಾ ರಾಗಿಯನ್ನೂ, ನಗದು ೪ ರೂಪಾಯಿಯನ್ನೂ, ಒಂದು ಬಂಡಿ ರಾಗೀಹುಲ್ಲನ್ನೂ ನಿಮಗೆ ಪ್ರತಿಸಾಲಿನ ಫಾಲ್ಗುಣ ಬಹುಳ ಅಮಾಸ್ಯೆಯೊಳಗಾಗಿ ಪಾವತಿ ಮಾಡುತ್ತಾಬರುತ್ತೇನೆ. ನಾನೂ, ಯಾ, ನನ್ನ ಮುಂದಿನವರೂ ಎದುವರಿಗೂ ಗುತ್ತಿಗೆಯನ್ನು ಸಲೀಸಾಗಿ ಸಲ್ಲಿಸುತ್ತಾ ಬರುತ್ತೇವೋ ಅದುವರೆಗೂ ಇದಕ್ಕಿಂತಲೂ ಹೆಚ್ಚಾಗಿ ಗೇಣಿಯನ್ನು ಕೇಳಲೂ ಮತ್ತು ಈ ಸ್ವತ್ತುಗಳನ್ನು ನಮ್ಮಗಳಿಂದ ಬಿಡಿಸಿಕೊಳ್ಳಲೂ ನಿಮಗಾಗಲೀ, ನಿಮ್ಮ ಸಂತತಿಯವರಿಗಾಗಲೀ ಯಾವ ಹಕ್ಕೂ ಇರುವುದಿಲ್ಲ. ಗೇಣಿಯನ್ನು ಬಾಕಿ ಮಾಡಿಕೊಂಡರೆ, ಬಾಕಿ ಮಾಡಿಕೊಂಡ ತಾರೀಖು ಲಾಗಾಯಿತು ರಾಗಿಗೆ ಪಲ್ಲಾ ೧ ಕ್ಕೆ ೫ ಕೊಳಗದಂತೆಯೂ, ನಗದು ಗುತ್ತಿಗೆಗೆ ಸೇಕಡ ಸಾಲಿಯಾನ ೨೪ ರೂಪಾಯಿಯಂತೆಯೂ ಬಡ್ಡಿಯನ್ನು ಕೊಡಲು ನಾನು ಬದ್ಧನಾಗಿರುತ್ತೇನೆ. ೨ ವರ್ಷದ ಗುತ್ತಿಗೆಯು ಬಾಕೀಬೀಳುವ ಸಂದರ್ಭದಲ್ಲಿ ನಿಮ್ಮಿಂದ ಜಮೀನನ್ನು ಬಿಡಿಸಿಕೊಳ್ಳಲು ನೀವು ಹಕ್ಕುದಾರರಾಗಿರುತ್ತೀರಿ ಸದರಿ ಜಮೀನಿನಲ್ಲಿ ಬೇಕಾದ ಬೆಳೇಮಾಡಲು, ಮತ್ತು ಇತರರಿಗೆ ಅದನ್ನು ಅಧಿ, ಕ್ರಯ, ದಾನ ಮೊದಲಾದ ವ್ಯವಹಾರಗಳ ಮೂಲಕ ಪರಭಾರೇಮಾಡಲು ನನಗೂ ನನ್ನ ವಂಶಸ್ಥರಿಗೂ ಯಾವ ಅಡ್ಡಿಯೂ ಇರುವುದಿಲ್ಲ. ಇದೇ ದಿವಸ ಇದೇ ಖಾಯಂಗುತ್ತಿಗೆಯ ವಿಷಯದಲ್ಲಿ ಈ ಷರತ್ತುಗಳನ್ನೇ ನಮೂದಿಸಿ ನೀವು ನನಗೆ ಒಂದು ಇಥಿರುವಳಿಯನ್ನು ಬರೆದುಕೊಟ್ಟಿರುತ್ತೀರಿ ಎಂಬುದಾಗಿ ಬರೆದುಕೊಟ್ಟ ಖಾಯಂ ಗುತ್ತಾಖರಾರು. ಷೆಡ್ಯೂಲ್

(ಬರೆದುಕೊಟ್ಟವನ ಸಾಕ್ಷಿಗಳ ರುಜುವೂ, ಬಿಕ್ಕಲಂ ಸಹ ೧ ನೆಯ ನಮೂನೆಗಿರುವಂತೆ.)

ಷ್ಟಾಂಪು ರಿಜಿಷ್ಟ್ರೇಷನ್ ರೂಲ್ಸಿನಂತೆ.

ಧೃವಪೈರು ಬಾಗಾಯಿತು ಸಾಗುವಳಿ ಕರಾರು.

(೬೯ ನೇ ನಮೂನೆ.)

ಸನ್ ರಲ್ಲು ವೀರಭದ್ರಯ್ಯನು ನರಸಿಂಗರಾಯರಿಗೆ ಬರೆದು ಕೊಟ್ಟ ಧೃವಪೈರು ಸಾಗುವಳಿ ಕರಾರು ಏನೆಂದರೆ- ನಾನು ಈಕೆಳಗೆ ನಮೂದಿಸುವ ಚೆಕ್ಕುಬಂದೀಗೆ ಒಳಪಟ್ಟಿರುವ ಷೆಡ್ಯೂಲಿನ ನಿಮ್ಮ ಬಾಬತು ಗುಣಿ ಗದ್ದೆ ಎಂಬ ಜಮೀನನ್ನು ನಾನು ಈ ಲಾಗಾಯಿತು ೧೨ ವರುಷದವರಿಗೆ ಗುತ್ತಿಗಗೆ ತೆಗದುಕೊಂಡು ಇರುತ್ತೇನೆ. ಈ ಜಮೀನಿನಲ್ಲಿ ನಾನೇ ನನ್ನ ಹಾತ್‌ಲಾಗನಡಿನಿಂದ ೧,೦೦೦ ಅಡಿಕೆ ಸೊಸಿಗಳನ್ನು ಹಾಕಿ ಈ ಲಾಗಾಯಿತು ೧೧ ವರುಷಗಳು ಅವುಗಳನ್ನು ಪೋಷಿಸಿ ಸದರಿ ೧೧ ವರ್ಷ ವಾಯಿದೆ ಮುಗಿದಕೂಡಲೇ ಸದರಿ ಅಡಿಕೆ ಸಶಿಗಳೊಡನೆ ಸದರಿ ಜಮೀನನ್ನು ನಿಮ್ಮ ಸುಪರ್ದು ಮಾಡಲುಳ್ಳವನು. ಮತ್ತು ಈ ಲಾಗಾಯಿತು ೧೧ ವರ್ಷಗಳ ವರಿವಿಗೂ ಈ ಜಮೀನಿನಲ್ಲಿ ಬಾಳೆ ವಗೈರೆ ಏನು ಕೀಳುಫಸಲು ಇಟ್ಟಾಗ್ಯೂ ನನ್ನದೇಹೊರ್ತು ನಿಮ್ಮದಲ್ಲ. ಈ ಮೇಲ್ಕಂಡ ಅಡಿಕೆತೋಟವನ್ನು ಮಾಡಿಕೊಡುವದಕ್ಕಾಗಿ ಈ ಜಮೀನಿನಲ್ಲಿ ಇಡುವ ಫಸಲೆಲ್ಲವು ನಾನೇ ತೆಗದುಕೊಳ್ಳುತ್ತೇನಾದ್ದರಿಂದ ತೋಟ ತಯಾರ್ಮಾಡಿದುವಕ್ಕಾಗಿ ಮತ್ಯಾವ ಪ್ರತಿಫಲವು ನೀವು ನನಿಗೆ ಕೊಡತಕ್ಕ ಅವಶ್ಯಕವಿರುವದಿಲ್ಲ. ಈ ಜಮೀನನ್ನು ನಾನು ನಿಮಗೆ ವಹಿಸುವವರಿಗೂ ಇದರ ಕಂದಾಯದಲ್ಲಿ ಅರ್ಧ ಅ ರೂಪಾಯಿಯನ್ನು ನಾನು ವರ್ಷಂಪ್ರತಿ ವರ್ಷವೂ ನಿಮಗೆ ಪಾವತೀ ಮಾಡುತ್ತಾ ಬರುತ್ತೇನೆ. ನಾನು ಮೇಲ್ಕಂಡ ೧೧ ವರುಷನಂತರ ತೋಟವನ್ನು ನಿಮಗೆ ಒಪ್ಪಿಸುವಕಾಲದಲ್ಲಿ ಆ ಪತ್ರದಲ್ಲಿ ನಮೂದಿರುವಂತೆ ಸರಿಯಾಗಿ ೧,೦೦೦ ಅಡಿಕೆ ಸಸಿಗಳನ್ನು ಇಬ್ಬರು ಪಂಚಾಯಿತರ ಮೊಖ್ತಾ ಎಣಿಸಿ ಕೊಡಲುಳ್ಳವನು. ಹಾಗೇನಾದರೂ ಸಶಿಗಳ ಸಂಖ್ಯೆಯು ಕಡಮೆ ಬಂದಲ್ಲಿ ಪ್ರತಿಒಂದು ಸಶಿಗೂ ೫ ರೂಪಾಯಿನಂತೆ ಲುಕ್ಸಾನ್ ಕಟ್ಟಿಕೊಡುತ್ತೇನೆ ಎಂದು ನನ್ನ ಖುದ್ದುರಾಜಿಯಿಂದ ಬರೆದುಕೊಟ್ಟ ಸಾಗುವಳಿ ಗುತ್ತಿಗೆ ಕರಾರು ಅದಾಗಿ. ರುಜು.

ಸಾಲಾಬಾದು ಕರಾರು.

(೩೦ ನೇ ನಮೂನೆ.)

ಸನ್ ಸಾವಿರದ ಒಂಭೈನೂರ ಹದಿನಾರನೇ ಇಸವಿ ಮೇ ಇಪ್ಪತ್ತರಲ್ಲು
ಬೆಂಗಳೂರು ತಾಲ್ಲೂಕು ಕೆಂಗೇರಿ ಹೋಬಳಿ ಮಾರಗೊಂಡಹಳ್ಳಿ ಕೃಷ್ಣ
ಸಾಗರದ ಖಾಯಂ ಗುತ್ತಿಗೆದಾರರ್‍ರಾಮಣ್ಣನವರ ಮಕ್ಕಳು ಬಿ. ನರ
ಸಿಂಗರಾಯರಿಗೆ ಇದೇ ಬೆಂಗಳೂರು ತಾಲ್ಲೂಕು ಕೆಂಗೇರಿ ಸಮ್ಮತು ಸೂಲಿ
ಕೆರೆ ಗ್ರಾಮದಲ್ಲಿರುವ ಬ್ಯಾಡರಹಳ್ಳಿ ನಂಜುಂಡಯ್ಯನ ದತ್ತುಮಗ ನಂಜ
ಪ್ಪಯ್ಯ ಬರದುಕೊಟ್ಟ ಗೇಣಿಕರಾರು ಅದಾಗಿ ನಾನು ನಿಮ್ಮ ಕೃಷ್ಣಸಾಗ
ರಗ್ರಾಮದಲ್ಲಿ ಕಬ್ಬು ವಗೈರೆ ಸಾಗುವಳಿ ಮಾಡಿ ಗ್ರಾಮವನ್ನು ಆಬಾದು
ಮಾಡುವದಕ್ಕಾಗಿ ಈ ನಳಸಂವತ್ಸರದ ಲಾಗಾಯಿತು ಕಾಳಯುಕ್ತಿ ಸಂll
ರದ ಫಾಲ್ಗುಣ ಅಮಾವಾಸ್ಯೆವರಿಗೂ ೩ ವರುಷಗಳು ಗುತ್ತಿಗೆ ತೆಗದು
ಕೊಂಡು ಸಾಲಿಯಾನಾ ನಿಮಗೆ ಮುನ್ನೂರು ರೂಪಾಯಿಗಳು ಕೊಡಲು
ಒಪ್ಪಿಧೇನೆ. ಕಬ್ಬಿನ ಸಾಗುವಳಿಗೂ ಕುಷ್ಕಿ ತರಿ ಬಾಗಾಯಿತು ಆಬಾದಿಗೂ
ಏನು ಖರ್ಚು ಲಾಗವಡು ಬಿದ್ದಾಗ್ಯೂ ನಾನೇ ಕೊಟ್ಟು ರೈತರು ವಗೈರೆ
ರನ್ನು ಜಮಾಯಿಸಿಕೊಳ್ಳುತ್ತೇನೆ. ನಾನೂ ಮಾಡುವ ಸಾಗುವಳಿಗೋ
ಸ್ಕರ ನಿಮ್ಮ ಗಿಡಗಳನ್ನೇ ಆಗಲಿ ಮತ್ತ್ಯಾರದನ್ನೇ ಆಗಲಿ ಕಡಿದು ನಾಶ
ಪಡಿಸಿದರೂ ಅದಕ್ಕೆ ತಾವು ಹೇಳುವ ಲುಕ್ಸಾನನ್ನು ಕೊಡಲುಳ್ಳವನು.
ಮತ್ತು ನಿಮ್ಮ ಸ್ವಂತ ವ್ಯವಸಾಯವನ್ನಿಟ್ಟು ಅದಕ್ಕೆ ಬೇಕಾದ ಸಲಕರಣೆಗ
ಳನ್ನು ಒದಗಿಸಿಕೊಳ್ಳಲು ಮತ್ತು ನಿಮ್ಮ ಗ್ರಾಮದ ಅಳಲೆ, ಶೀಗೆ, ಹೊಂ
ಗೆ, ಮಾವು, ಇಪ್ಪೆ, ಗೇರು ವಗೈರೆ ಗಿಡಗಳಿಗೆ ಪಾತಿ ಉಕ್ಕೆಮಾಡಿ ಆಬಾದು
ಮಾಡಿಸಲು ನನ್ನ ಅಡ್ಡಿಯಿಲ್ಲಾ. ಮೇಲ್ಕಂಡ ಗುತ್ತಿಗೆ ಮೊಬಲಗನ್ನು
ಆಯಾಯ ವರುಷದ ಸುಗ್ಗಿ ಶಿವರಾತ್ರಿಯಲ್ಲಿ ಪಾವತಿಮಾಡಿ ರಶೀತಿ ಪಡೆ
ಯಲುಳ್ಳವನು ಎಂದು ಬರಶಿಕೊಟ್ಟ ಸಾಲಾಬಾದಿ ಪತ್ರ ಅದಾಗಿ.

ಪರಿವರ್ತನೆ ಅಥವಾ ಬದಲಾಬದಲಿ ಪತ್ರ.

(೩೦ನೇ ನಮೂನೆ.)

ಸ್ಕ ರಲ್ಲು ಕೆಂಪೇಗೌಡನು ಪಂಚಾಂಗದ ಸುಬ್ಬಾಭಟ್ಟರಿಗೆ ಬರೆದುಕೊಟ್ಟ ಪರಿವರ್ತನೆ ಪತ್ರವೇನಂದರೆ— ಈ ಕೆಳಗೆ ನಮೂದಿಸುವ ಷೆಡ್ಯೂಲಿನ ೧ ನೆ ಐಟಂನಲ್ಲಿ ವಿವರಿಸುವ ನನ್ನ ಬಾಬತು ನಾನು ಹೋದವರುಷದಲ್ಲಿ ಮಲ್ಲಿಕುಂಟೆ ಚಿಕ್ಕಣ್ಣನಿಂದ ೨೦೦ ರೂಪಾಯಿಗೆ ಖರೀದಿಗೆ ಪಡೆದು ಇರುವ ೨೫ ಅಂಕಣ ಹೆಂಚಿನ ಮನೆಯನ್ನು ನಿಮಗೆ ಕೊಟ್ಟು ಇದಕ್ಕೆ ಬದಲಾಗಿ ೨ ನೆ ಐಟಂ ಚಕ್ಕುಬಂದಿಯಲ್ಲಿ ನಮೂದಿಸುವ ನಿಮ್ಮ ಬಾಬತು ೨೦೦ ರೂಪಾಯಿ ಬಾಳುವ ಊರುವತ್ತಿನ ಹೊಲವನ್ನು ತೆಗದುಕೊಂಡಿರುತ್ತೇಯಲ್ಲದೆ ಸದರಿ ನಮ್ಮ ಹೊಲವನ್ನು ನನ್ನ ಸುಫರ್ದಿಗೆ ತಗದುಕೊಂಡು ಇರುತ್ತೇನೆ. ಮತ್ತು ನನ್ನ ಬಾಬತು ಮನೆಯನ್ನು ನಿಮ್ಮ ಸುಫರ್ದು ಮಾಡಿರುತ್ತೇನೆ. ಇದಕ್ಕೆ ಬದಲಾಗಿ ಇದಿರುನುಡಿಯಾಗಿ ನೀವು ಬರೆದು ಕೊಟ್ಟಿರುವ ಪರಿವರ್ತನೆ ಪತ್ರವನ್ನು ನಾನು ಸ್ವೀಕರಿಸಿರುತ್ತೇನೆ ಎಂಬದಾಗಿ ಬರೆದುಕೊಟ್ಟ ಪರಿವರ್ತನೆ ಸಹಿ.

ಷೆಡ್ಯೂಲ್ (ಚಕ್ಕುಬಂದಿ.)

ರುಜು.........

ಸಾಕ್ಷಿಗಳು,

೧ ....
೨ ....

ಬಿಕ್ಕಲಂ.

ಕ್ರಯರೂಪದ ಅಡಮಾನ (ಕಂಡಿಷನಲ್ ಕ್ರಯ—೨ನೇ ವಿಧ.)

(೩೨ ನೇ ನಮೂನೆ.)

ಸರ್ಹ............ರಲ್ಲು ಚನ್ನಬಸವಯ್ಯನು ಮೂರ್ತಿರಾಯರಿಗೆ ಬರೆದು ಕೊಟ್ಟ ಕ್ರಯರೂಪದ ಅಡಮಾನವೇನಂದರೆ— ಈ ದಿವಸ ನಾನು ಕೆಳಗೆ ಷೆಡ್ಯೂಲಿನಲ್ಲಿ ವಿವರಿಸುವ ನನ್ನ ಬಾಬತು ಮನೆಯನ್ನು ನಿಮಗೆ ೧೦೦ ರೂ. ಗೆ ಕ್ರಯಮಾಡಿ, ಕ್ರಯದ ಮೊಬಲಗನ್ನು ತೆಗದುಕೊಂಡು ಮನೆಯನ್ನು ನಿಮ್ಮ ಸುಪರ್ದುಮಾಡಿದ್ದೇನೆ. ಆದರೆ ಈ ಲಾಗಾಯಿತು ೧ ವರ್ಷದಲ್ಲಿ ಮೇಲೆಕಂಡ ಮೊಬಲಗು ೧೦೦ ರೂ. ನ್ನು ನಿಮಗೆ ನಾನು ಕೊಟ್ಟರೆ ಈ ಕ್ರಯವು ರದ್ದಾಗತಕ್ಕದ್ದು ಮತ್ತು ಸದರೀ ವಾಯಿದೆಯೊಳಗೆ ಸದರೀ ಮೊಬಲಗನ್ನು ಕೊಟ್ಟಕೂಡಲೇ ಈ ಮನೆಯನ್ನು ನೀವು ನನ್ನಸುಪರ್ದು ಮಾಡಬೇಕು ಎಂಬದಾಗಿ ನಾನು ಮನಃಪೂರ್ವಕವಾಗಿ ಬರೆದುಕೊಟ್ಟ ಕ್ರಯ ರೂಪದ ಅಡಮಾನಪತ್ರ. ಷೆಡ್ಯೂಲ್— (ಚತುರ್ದಿಕ್ಕಿನನ ಚಕ್ಕುಬಂದಿ ಯನ್ನು ನಮೂದಿಸಬೇಕು. ಬರೆದುಕೊಟ್ಟವನ, ಸಾಕ್ಷಿಗಳ ರುಜುವೂ, ಬಿಕ್ಕಲಂ ಸಹ ೧ ನೆಯ ನಮೂನೆಗಿರುವಂತೆ.)

ನೋಟ್— ಸ್ವತ್ತನ್ನು ಋಣಿಯೇ ತನ್ನ ಸುಪರ್ದಿನಲ್ಲಿಟ್ಟುಕೊಂಡು "ವಾಯಿದೆಯೊಳಗೆ ಸಾಲವನ್ನು ತೀರಿಸದೆ ತಪ್ಪಿದರೆ, ಸಾಲಾಕೊಟ್ಟವನು ಸದರೀ ಸ್ವತ್ತನ್ನು ಋಣಿಯ ಸುಪರ್ದಿನಿಂದ ತನ್ನ ಸುಪರ್ದಿಗೆ ತೆಗೆದು ಕೊಳ್ಳಬಹುದು" ಎಂದು ಸಾಲಾಕೊಟ್ಟವನಿಗೆ ಅಧಿಕಾರ ಕೊಟ್ಟರೂ ಇಂಥ ಪತ್ರವು ಆಗುತ್ತದೆ.

ಕ್ರಯರೂಪದ ಅಡವಮಾನ (೧ನೇ ವಿಧ.)

(೩೩ ನೇ ನಮೂನೆ.)

ಸರ್ಕ ರಲ್ಲು . . . ಆದಿರಾಜಯ್ಯ . . . ಬೊಮ್ಮಯ್ಯನಿಗೆ ಬರೆದುಕೊಟ್ಟ ಭೋಗ್ಯದ ಪತ್ರವೇನೆಂದರೆ— ಈ ದಿವಸ ನಾನು ನಿನ್ನಬಳಿ ೧೦೦ ರೂ. ನ್ನು ಸಾಲಾಪಡೆದು, ಷೆಡ್ಯೂಲಿನಲ್ಲಿ ಕಂಡ ಸ್ಥಿರಸ್ವತ್ತನ್ನು ನಿಮಗೆ ಭೋಗ್ಯಮಾಡಿ ಸ್ವತ್ತನ್ನು ನಿಮ್ಮ ಸುಪರ್ದು ಮಾಡಿರುತ್ತೇನೆ. ಈ ಸಾಲದ ಬಡ್ಡಿಗಾಗಿ ನೀವು ಸದರೀ ಸ್ವತ್ತನ್ನು ಅನುಭವಿಸುವುದು. ಈ ಲಾಗಾಯಿತು ೬ ವರ್ಷದಲ್ಲಿ ಮೇಲೆಕಂಡ ಅಸಲು ೧೦೦ ರೂ. ನ್ನುನಿಮಗೆ ಪಾವತಿಮಾಡಿ ಸ್ವತ್ತನ್ನು ಭೋಗ್ಯದಿಂದ ಬಿಡಿಸಿಕೊಳ್ಳುತ್ತೇನೆ. ಹಾಗೆ ಸದರಿ ವಾಯಿದೆಯೊಳಗಾಗಿ ಸದರಿ ಹಣವನ್ನು ಕೊಡದೆ ನಾನು ತಪ್ಪಿದರೆ, ಅಲ್ಲಿಂದ ಮುಂದೆ ಆ ಸ್ವತ್ತು ನಿನ್ನದೇಹೊರತು ನನ್ನದಲ್ಲ. ಆ ಬಳಿಕ ಸ್ವತ್ತನ್ನು ಭೋಗ್ಯದಿಂದ ಬಿಡಿಸಿಕೊಳ್ಳಲು ನನಗೆ ಹಕ್ಕು ತಪ್ಪಿಹೋಗುವುದು. ನೀನು ಕ್ರಯದಾರನಂತೆ ಸಂಪೂರ್ಣವಾದ ಹಕ್ಕುದಾರನಾಗಿ ಸ್ವತ್ತನ್ನು ಅನುಭವಿಸುವುದು ಎಂಬದಾಗಿ ಬರೆದುಕೊಟ್ಟಭೋಗ್ಯಪತ್ರ. ಷೆಡ್ಯೂಲ್— ಚಕ್ಕುಬಂದಿ, ಬರೆದುಕೊಟ್ಟವನ, ಸಾಕ್ಷಿಗಳ ರುಜುವೂ, ಬಿಕ್ಕಲಂ ಸಹ ೧ ನೆಯ ನಮೂನೆಗಿರುವಂತೆ.

ಗೇಣೇ ಚೀಟಿ.

(೩೪ ನೇ ನಮೂನೆ.)

ಸರ್ಕ ರಲ್ಲು ನಂಬಾಜಟ್ಟಿಯು ವೆಂಕಟಾಜಟ್ಟಿಗೆ ಬರೆದುಕೊಟ್ಟಗೇಣೀ ಚೀಟಿ ಏನಂದರೆ—ನಿಮ್ಮ ಬಾಬತು ಕೆಳಗೆ ಷೆಡ್ಯೂಲಿನಲ್ಲಿ ವಿವರಿಸುವ ಗದ್ದೆಯನ್ನು ಈ ಪ್ಲವ ಸಂವತ್ಸರದ ಲಾಗಾಯಿತು ೫ ವರ್ಷ ಎಂದರೆ, ವಿಶ್ವಾವಸು ಸಂವತ್ಸರದ ಫಾಲ್ಗುಣ ಶುದ್ಧ ಪೂರ್ಣಿಮೆವರಿಗೆ ನಾನು ಗುತ್ತಿಗೆ ಸಾಗುವಳಿ ಮಾಡಲು ಒಪ್ಪಿ, ಜಮೀನನ್ನು ಪದ್ಧತಿ

ಮೇರೆ ರೂಢಿಸಿಕೊಂಡು ನಿಮಗೆ ಸಾಲು ೧ಕ್ಕೆ ಕೃಷ್ಣರಾಜ ೮ ಖಂಡಿ ಹಸರ್ ಸಣ್ಣಬತ್ತವನು ಜೈಲ್ ೯ ಸೇರಿನ ಕೊಳಗದಲ್ಲಿ ತುಂಬಳತೆಯಿಂದ ಗುತ್ತಿಗೆಗಾಗಿ ಕೊಡಲು ಒಪ್ಪಿರುತ್ತೇನೆ. ಈ ಬಾಬತು ಗುತ್ತಿಗೆ ಬತ್ತವನ್ನು ಆ ಆ ಸಾಲು ಸುಗ್ಗಿ ಎಂದರೆ— ಮಾಘ ಬಹುಳ ಅಮಾವಾಸ್ಯೆ ಇಂದ ಪಾಲ್ಗುಣಬಹುಳ ಅಮಾವಾಸ್ಯೆಯೊಳಗಾಗಿ ಹುಣಸೂರಿನಲ್ಲಿರುವ ನಿಮ್ಮ ಮನೆಗೆ ಗಾಡಿಯಮೇಲೆ ತಂದು ಹಾಕಿ, ಗಾಡಿಯ ಬಾಡಿಗೆ ೩ ರೂಪಾಯಿಯನ್ನು ನಿಮ್ಮಿಂದ ತೆಗೆದುಕೊಳ್ಳುತ್ತೇನೆ. ವಾಯಿದೆ ಪೂರೈಸಿದ ನಂತರ ಕೊಳೆಯ ಮೇಲೆ ಜಮೀನನ್ನು ನಿಮ್ಮ ಸ್ವಾಧೀನಕ್ಕೆ ಬಿಟ್ಟುಕೊಡುತ್ತೇನೆ. ಈ ಜಮೀನಿನಲ್ಲಿ ಗಸ್ತಾ ಫಸಲು ವಗೈರೆ ಯಾವುದು ಮಾಡಿದಾಗ್ಯೂ ನನ್ನದೇಸರಿ. ಮೇಲೆಕಂಡ ಮೇರೆ ಯಾವ ವರ್ಷದಲ್ಲಾದರೂ ಗುತ್ತಿಗೆ ಕೊಡಲು ತಪ್ಪಿದಲ್ಲಿ, ನೀವು ಅಪೇಕ್ಷಿಸಿದರೆ ಜಮೀನನ್ನು ವಾಯಿದೆಯೊಳಗೆ ನಿಮ್ಮ ಸುಪುರ್ದಿಗೆ ಬಿಟ್ಟುಕೊಡುತ್ತೇನೆ ಎಂಬದಾಗಿ ನನ್ನ ಖುದ್ದುರಾಜಿಯಿಂದ ಬರೆದುಕೊಟ್ಟ ಗೇಣೀಚೀಟಿ. ಷೆಡ್ಯೂಲ್— (೩೦ನೇ ನಮೂನೆಯ ಷೆಡ್ಯೂಲಿನಂತೆ ಬರೆದುಕೊಟ್ಟವನ, ಸಾಕ್ಷಿಗಳ ರುಜುವೂ, ಬಿಕ್ಕಲಂ ಸಹ ೧ನೆಯ ನಮೂನೆಗಿರುವಂತೆ.)

ಸಾಮಾನು ಬಾಡಿಗೆ ಕರಾರು.

(೩೫ ನೇ ನಮೂನೆ.)

ಸರ್ ಸಾವಿರದ ಎಂಟನೂರ ತೊಂಭತ್ತಯ್ಯೆದನೆ ಇಸವಿ ಅಕ್ಟೋಬರ್ ತಾರೀಖು ಇಪ್ಪತ್ತಮೂರರಲ್ಲು ಬೆಂಗಳೂರು ವೆಸ್ಟ್ರನ್ ಯಕ್ಸ್ಟೆನ್ಷನ್‌ಗೆ ಸೇರಿದ ಐವತ್ತೊಂಬತ್ತನೆ ನಂಬರು ಮನೆಯಲ್ಲಿರುವ ಮ॥ ರಾ॥ ಶೇಕದಾರ್ ರಾಮಣ್ಣನವರ ಮಕ್ಕಳು ಸೂರ್ಯೋದಯ ಪ್ರೆಸ್ ಪ್ರೊಪ್ರೈಟರ್ ಮ॥ ರಾ॥ ಬಿ. ನರಶಿಂಗರಾಯರಿಗೆ ಮೈಸೂರಿಂದ ಬಂದಿರುವ ಬೂದಿಗುಟ್ಟೆ ಚಕ್ರವರ್ತಿ ಗೋಪಾಲಾಚಾರ್ಯರ ಮಗ ಮೈಸೂರ್ ದೇಶಾಭಿಮಾನಿ ಎಡಿಟರ್ ಬಿ. ಸಿ. ಶ್ರೀನಿವಾಸೈಯ್ಯಂಗಾರ್ಯನಾದ ನಾನು ಬರೆದುಕೊಟ್ಟ ಬಾಡಿಗೆ ಕರಾರು ಏನಂದರೆ— ತಮ್ಮ ಬಾಬತು ಪ್ರಿಂಟಿಂಗ್ ಪ್ರೆಸ್ಸು ಮತ್ತು ಅದಕ್ಕೆ ಶೇರಿದ ಅಕ್ಷರ ವಗೈರೆ ಸಾಮಾನುಗಳನ್ನು ಅದು ಇಟ್ಟು ಇರುವ ಪ್ರದೇಶದೊ

ಡನೆ ಮಾಹೆಯಾನಾ ಏಳು ರೂಪಾಯಿಗೆ ಬಾಡಿಗೆ ಮಾತನಾಡಿ ಈ ತಾರೀ ಖುಲಾಗಾಯಿತು ಹದಿನಾಲ್ಕು ತಿಂಗಳ ಬಾಡಿಗೆ ತೆಗದುಕೊಂಡು ಇರು ತ್ತೇನೆ. ಈ ಬಾಬತು ಬಾಡಿಗೆಯನ್ನು ಆಯಾಯ ತಿಂಗಳು ಪೂರೈಸಿದ ಕೂಡಲೆ ಪಾವತಿಮಾಡಿ ಈ ಖರಾರಿನ ಹಿಂದೆ ವಸೂಲು ಬರಿಯುತ್ತೇನೆ. ಹಾಗೆ ಮಾಡದೆ ಮಧ್ಯಕಾಲದಲ್ಲಿ ನಾನು ಬಿಟ್ಟಪಕ್ಷಕ್ಕೆ ಮೇಲ್ಕಂಡ ವಾಯಿ ದೆಗೆ ಆಗುವ ಮೊಬಲಗನ್ನು ನಿಮಗೆ ಪಾವತಿಮಾಡಿ ಪ್ರೆಸ್ಸನ್ನು ಮತ್ತು ಇತರ ಸಾಮಾನುಗಳನ್ನು ನಿಮ್ಮ ಸುಪರ್ದಿಗೆ ಬಿಡಲುಳ್ಳವನು. ತಾವಾಗಿ ಮಧ್ಯಕಾಲದಲ್ಲಿ ನನ್ನನ್ನು ಬಿಡಬೇಕೆಂದು ಅಪೇಕ್ಷಿಸಿದಲ್ಲಿ ನಾನು ಬಿಡತಕ್ಕ ವನಲ್ಲಾ ಎಂಬದಾಗಿ ನನ್ನ ಖುದ್ದುರಾಜಿಯಿಂದ ಬರೆದುಕೊಟ್ಟ ಬಾಡಿಗೆ ಖರಾರು ಸಹಿ.

ಬಿ. ಸಿ. ಶ್ರೀನಿವಾಸೈಯ್ಯಂಗಾರ್ ಸ್ವದಸ್ತೂರ್.

ಸಾಕ್ಷಿಗಳು.

೧. ಮೈಸೂರು ಲಕ್ಷ್ಮೀನಾರಣೈಯ್ಯಂಗಾರ್ ಸಾಕ್ಷಿ.

೧. ಲಕ್ಕೂರು ರಾಮಾಶಾಸ್ತ್ರಿ ಸಾಕ್ಷಿ.

ಅರೆಕಂದಾಯದ ಸಾಗುವಳಿದಾರನು ಭೂಮಾಲೀಕರಿಗೆ ಬರೆದುಕೊಡುವ ಸಾಗುವಳಿ ಚೀಟಿ.

(೩೬ ನೇ ನಮೂನೆ.)

ಸಕ ೧೮೯೪ ನೆ ಇಸವಿ ಮಾರ್ಚಿ ತಾರೀಖು ೧೯ ರಲ್ಲು ಕೃಷ್ಣಸಾಗ ರದ ಕಾಯಂಗುತ್ತಿಗೆದಾರ್ರು ಬಿ. ನರಶಿಂಗರಾಯಿರಿಗೆ—ಬೆಂಗಳೂರು ತಾಲ್ಲೂ ಕು ಕೆಂಗೇರಿ ಹೋಬಳಿ ಮಾರುಗೊಂಡಹಳ್ಳಿ ದಾಖಲೆ ಗುಲುಗಂಜಹಳ್ಳಿ ಚಿಕ್ಕನಾಗಿ ಮಗ ಮಲ್ಲ, ನಂಜ ಸಹ ಬರಸಿಕೊಟ್ಟ ಸಾಗುವಳಿ ಚೀಟಿ ಅದಾಗಿ ಇದೇ ಗ್ರಾಮದಲ್ಲಿ ಇರತಕ್ಕ ಬಿಳೇಕಲ್ಲುಹೊಲವನ್ನು ನನಿಗೆ ಅರ ಗಂದಾಯದ ಸಾಗುವಳಿಗೆ ನೀವು ಕೊಟ್ಟುಯಿರುವದ್ದರಿಂದ ಈ ಜಮಿನಿನ ಅರ್ಧಕಂದಾಯವನ್ನು ನಾನೇ ಕಟ್ಟಿಕೊಂಡು ಗೊಬ್ಬರಗೋಡು ವಗೈರೆ

ಹಾಕಿ ಸಾಗುವಳಿಮಾಡಿ ಈಪೈಕಿ ನಾಲ್ಕರಲ್ಲಿ ಒಂದು ಭಾಗವನ್ನು ಪಾಲುಕೊಟ್ಟುಕೊಂಡು ಹೋಗಲುಳ್ಳವನು. ಶಿವಾಯಿ ಈಜಮೀನಿನಲ್ಲಿ ಅಂದರೆ ಪೂರ್ವಕ್ಕೆ ತೊರೇಹಳ್ಳ ಮತ್ತು ಭೂತನ ಜಮೀನು, ಪಶ್ಚಿಮಕ್ಕೆ ಈದೇ ಹೊಲದಲ್ಲಿ ಫೋಡಾದ ಶಾನುಭೋಗ ರಂಗಣ್ಣನವರ ಹೊಲ, ಉತ್ತರಕ್ಕೆ ಕಾಫೀ ಚನ್ನನ ಹೊಲ, ದಕ್ಷಿಣಕ್ಕೆ ಸದರಿ ಭೂತಯ್ಯನ ಹೊಲ. ಈ ಚತುರ್ದಿಕ್ಕಿನ ಮಧ್ಯೆ ನೀವು ನಿಮ್ಮ ಕೈಯಿಂದ ಲಾಗೋಡು ಇಟ್ಟು ತಯಾರುಮಾಡಿಶಿರುವ ಕೇಸರಿನಾ ಮತ್ತು ಬೇವಿನಸೊಸಿಗಳು ಮತ್ತು ಇದರಲ್ಲಿ ಇರತಕ್ಕ ತಮಾಂ ಇತರ ಗಿಡಗಳನ್ನು ಸಹ ಯಾರು ಕಡಿಯದಂತೇಲು ದನಕರುಗಳು ಹಲಾಕು ಮಾಡದಂತೇಲು ಉಸ್ತುವಾರಿ ಮಾಡಲುಳ್ಳವನು. ಇದರಲ್ಲಿ ಏನಾದರು ಹಲಾಕಾದಲ್ಲಿ ಇದರ ಲುಕ್ಸಾನು ನಾನು ಕೊಡಲುಳ್ಳವನು. ಈ ಜಮೀನಿನ ಕಂದಾಯ ಒಂಭತ್ತುರೂಪಾಯಿನ ಪೈಕಿ ನಾನು ನಾಲ್ಕುವರೆ ರೂಪಾಯಿಯನ್ನು ಕೊಡಲುಳ್ಳವನು. ಇನ್ನು ಮೂರು ವರುಷ ಅರ್ಧರೂಪಾಯಿ ಕಂದಾಯವನ್ನು ಮಾಫುಮಾಡಿ ಇರುತ್ತೀರಿ ಅನಂತರ ನಾಲಕುವರೆರೂಪಾಯಿಯನ್ನ ಸರಿಯಾಗಿ ಕಟ್ಟಿಕೊಂಡು ಹೋಗಲುಳ್ಳವನು ಎಂದು ಬರಸಿಕೊಟ್ಟ ಸಾಗುವಳಿಚೀಟಿ ಅದಾಗಿ.

ಈ ನೇಗಲು ಗುರುತಿನ ರುಜು ಮಲ್ಲ ಹಾಕಿದ್ದಕ್ಕೆ ಸದರಿ ಬರಹ.

ಈ ನೇಗಲು ಗುರುತಿನ ರುಜು ಮಲ್ಲನ ತಮ್ಮ ನಂಜ ಹಾಕಿದ್ದಕ್ಕೆ ಅ. ಶಾಮಣ್ಣನ ಬರಹ.

ಇದಕ್ಕೆ ಸಾಕ್ಷಿಗಳು,

೧. ಶಿವಲಿಂಗಯ್ಯನ ಸಾಕ್ಷಿ ರುಜು.

೧. ಈ ನೇಗಲು ಗುರುತಿನ ರುಜು ಕೆಂಪರಂಗಯ್ಯನ ಸಾಕ್ಷಿ ರುಜು.

೧. ಶಿ॥ ರಾಮಯ್ಯನ ಸಾಕ್ಷಿ ರುಜು.

ಬಿಕ್ಕಲಂ ಅ॥ ಶಾಮಣ್ಣ.

ನೌಕರಿ ಕರಾರು (ಬ್ರೀಚ್ ಆಫ್ ಕಂಟ್ರಾಕ್ಟ್ ಆಕ್ಟ)

(೩೭ ನೇ ನಮೂನೆ.)

ಸರ್ ರಲ್ಲು ಬಿ. ನರಶಿಂಗರಾಯರಿಗೆ ವೆಂಕಟಪ್ಪನು ಬರೆದುಕೊಟ್ಟ ನೌಕರೀ ಕರಾರು ಏನಂದರೆ—ಈ ದಿವಸ ನಿಮ್ಮ ಬಳಿ ಅಡ್ವಾನ್ಸಾಗಿ ೪೦ ರೂ. ಗಳನ್ನು ತೆಗೆದುಕೊಂಡಿರುತ್ತೇನೆ. ವರ್ಷ ೧ಕ್ಕೆ ೪೦ ರೂಪಾಯಿ ಸಂಬಳದಮೇರೆ ಈ ಲಾಗಾಯಿತು ೧ ವರುಷದವರಿಗೆ ನಿಮ್ಮ ಜಿರಾಯಿತೀಕೆಲಸವನ್ನು ಮಾಡಿ ಮೇಲೆ ಕಂಡ ಸಂಬಳದ ಮೊಬಲಗನ್ನು ನೀವು ಅಡ್ವಾನ್ಸ್ ಕೊಟ್ಟಿರುವ ಸದರಿ ಸಾಲಕ್ಕೆ ವಜಾಕೊಡುವುದರಮೂಲಕ ಸದರಿ ಸಾಲವನ್ನು ತೀರಿಸುತ್ತೇನೆ. ಹೀಗೆ ಕೆಲಸ ಮಾಡಲು ನಾನು ನಿಷ್ಕಾರಣವಾಗಿ ತಪ್ಪಿದರೆ, ಬ್ರೀಚ್ ಆಫ್ ಕಂಟ್ರಾಕ್ಟು ಆಕ್ಟುಪ್ರಕಾರ ಶಿಕ್ಷೆಗೆ ಗುರಿಯಾಗುತ್ತೇನೆಂದು ನಾನು ಬರೆದುಕೊಟ್ಟನೌಕರೀ ಕರಾರು.

(ಬರೆದುಕೊಟ್ಟವನ, ಸಾಕ್ಷಿಗಳ, ಲೇಖಕನ ರುಜುಗಳು ೧ ನೇ ನಮೂನೆಯಂತೆ)

ಟಿಪ್ಪಣಿ.

ನೋಟ್—ಕಂಟ್ರಾಕ್ಟಿಗೆ ತಪ್ಪಿದರೆ, ಕ್ರಿಮಿನಲ್ ಬ್ರೀಚ್ ಆಫ್ ಕಂಟ್ರಾಕ್ಟು ಆಕ್ಟಮೇರೆ ಶಿಕ್ಷೆಗೆ ಗುರಿಯಾಗುತ್ತೇನೆಂಬ ಷರತ್ತು ಪತ್ರದಲ್ಲಿರಬೇಕಾದ ಅವಶ್ಯವಿಲ್ಲ. ಈ ಷರತ್ತು ಇಲ್ಲದಿದ್ದರೂ ಸದರಿ ಆಕ್ಟುಮೇರೆ ಕ್ರಿಮಿನಲ್ ಶಿಕ್ಷೆಗೆ ಗುರಿಮಾಡಬಹುದು

ವಿಚಾರ— ೧. ಅಡ್ವಾನ್ಸ್ ತೆಗೆದುಕೊಳ್ಳದೆ ಹಿಂದಣ ಸಾಲಕ್ಕಾಗಿ ಪತ್ರವನ್ನು ಬರೆದುಕೊಟ್ಟರೆ, ಅದು ಬ್ರೀಚ್ ಆಫ್ ಕಂಟ್ರಾಕ್ಟು ಆಕ್ಟಿಗೆ ಲಗಾವು ಆಗುವುದಿಲ್ಲ.

೨. ಇಟ್ಟಿಗೇ ಮಾಡುವವನು, ಸ್ವತಃ ಇಟ್ಟಿಗೆಯನ್ನು ಮಾಡುವುದಿಲ್ಲವಾದುದರಿಂದಲೂ, (೭ ಮ. ೧೦೦) ಹೊರೇ ಸಾಗಿಸಲು ಒಪ್ಪಿಕೊಂಡ ಗಾಡಿಯವನೂ, ಮನೆಯಲ್ಲಿ ಕೆಲಸ ಮಾಡುವವನೂ. ಸೌದೆ ಸರಬರಾಯಿ

ಮಾಡುತ್ತೇನೆಂದು ಒಪ್ಪಿಕೊಂಡವನೂ ಸಹ, ಸದರಿ ಆಕ್ಟಿನ ತಪ್ಪಿತಕ್ಕೆ ಗುರಿಯಾಗುವುದಿಲ್ಲವೆಂದು ತೀರ್ಮಾನ ಮಾಡಿದ್ದಾರೆ.

೩. ಇಷ್ಟೇ ಹೊರೆ ಸಾಮಾನುಗಳನ್ನು ಸರಬರಾಯಿ ಮಾಡುತ್ತೇನೆಂದು ಒಪ್ಪಿಕೊಳ್ಳುವವನೂ, ಇಷ್ಟೇ ವ್ಯವಸಾಯದ ಕೆಲಸವನ್ನು ಮಾಡುತ್ತೇನೆಂದು ಒಪ್ಪಿಕೊಳ್ಳುವವನೂ, ಗೊತ್ತಾದ ಕಾಲದಲ್ಲಿ ಕೆಲಸಮಾಡಲು ಎಷ್ಟು ದಿವಸ ತಪ್ಪುವನೋ ಅಷ್ಟುದಿವಸ ವಾಯಿದೆಯಾದಮೇಲೆ, ಕೆಲಸ ಮಾಡುತ್ತೇನೆಂದು ಒಪ್ಪಿಕೊಂಡವನೂ, ಕೆಲವು ಕೂಲಿಗಳನ್ನು ಕರೆದುಕೊಂಡು ಬಂದು ಅವರಿಂದ ಕೆಲಸ ಮಾಡಿಸುತ್ತೇನೆಂದು ಒಪ್ಪಿಕೊಂಡವನೂ, ಯಜಮಾನನಿಂದ ಮಗ್ಗ ಮೊದಲಾದ ಸಾಮಗ್ರಿಗಳನ್ನು ತೆಗೆದುಕೊಂಡು ನೆಯ್ಗೆ ಕೆಲಸವನ್ನು ಮಾಡುತ್ತೇನೆಂದು ಒಪ್ಪಿಕೊಂಡವನೂ, ಕೆಲಸ ಮಾಡಲು ತಪ್ಪಿದರೆ; ಇಷ್ಟು ಮೊಬಲಗು ಎಂತಲಾದರೂ, ಅಥವಾ, ದಿವಸಕ್ಕೆ ಇಷ್ಟರಂತೆ ಎಂತಲಾದರೂ ನಷ್ಟವನ್ನು ಕೊಡುತ್ತೇನೆಂದು ಒಪ್ಪಿಕೊಂಡವನೂ ಇವರೆಲ್ಲರೂ ಅಡ್ವಾನ್ಸನ್ನು ತೆಗೆದುಕೊಂಡು ಕೆಲಸ ಮಾಡಲು ತಪ್ಪಿದರೆ, ಸದರಿ ಆಕ್ಟಿನಪ್ರಕಾರ ಶಿಕ್ಷೆಗೆ ಗುರಿಯಾಗುವರೆಂದು ತೀರ್ಪುಮಾಡಿದ್ದಾರೆ.

೪. ಅಡ್ವಾನ್ಸನ್ನು ತೆಗೆದುಕೊಂಡು ಕೆಲಸಮಾಡುವುದನ್ನು ಬಿಡುತ್ತಲೇ, ಸದರಿ ಮೊಬಲಗನ್ನು ವಾಪಸ್ಸು ಕೊಟ್ಟುಬಿಡುತ್ತೇನೆಂದು ಒಪ್ಪಿಕೊಳ್ಳುವುದೂ, ಅನೇಕರು ಜಾಯಿಂಟಾಗಿ ಅಡ್ವಾನ್ಸನ್ನು ತೆಗೆದುಕೊಂಡು ಕೆಲಸ ಮಾಡಲು ಒಪ್ಪುವುದೂ ಸಹ ಈ ಆಕ್ಟಿಗೆ ಲಗಾವು ಆಗುವುದಿಲ್ಲ.

೫. ಇಂಥ ಒಪ್ಪಂದವು ಬರವಣಿಗೆಯಲ್ಲಿದ್ದರೂ ಇರಬಹುದು. ಅಥವಾ, ಜುಬಾನಿಯಾಗಾದರೂ ಇರಬಹುದು. ಇಷ್ಟೇ ಕೆಲಸ ಮಾಡುತ್ತೇನೆಂತಲಾದರೂ, ಅಥವಾ, ಇಷ್ಟೇ ದಿವಸ ಕೆಲಸ ಮಾಡುತ್ತೇನೆಂತಲಾದರೂ ಬರೆಯಬಹುದು.

೬. ಈ ಆಕ್ಟಿನ ಕ್ರಿಮಿನಲ್ ಸಂಬಂಧವಾದ ಹೆಚ್ಚು ಮಾಹಿತಿಗಳು ಆಕ್ಟಿನಲ್ಲಿ ತಿಳಿಸಲ್ಪಟ್ಟಿವೆ.

ಸ್ಟಾಂಪು—೮ ಆಣೆಯ ಸ್ಟಾಂಪು. ಆದರೆ ಮದ್ರಾಸು, ಕೊಡಗು, ಮೈಸೂರು ದೇಶಗಳಲ್ಲಿನ ಕಾಫೀ ತೋಟಗಳಲ್ಲಿ ಕೆಲಸಮಾಡಲು ಬರೆದುಕೊಡುವ ಕರಾರುಗಳಿಗೆ ಅಡ್ವಾನ್ಸು ಮೊಬಲಗು ೨೦ ರೂ. ಗೆ ಹೆಚ್ಚಿಲ್ಲದಿದ್ದರೆ, ಒಂದಾಣೆ ಸ್ಟಾಂಪು ಮಾತ್ರ ಅವಶ್ಯಕ.

ರಿಜಿಸ್ಟ್ರೇಷನ್ ಮತ್ತು ಲಿಮಿಟೇಷನ್—ಹಿಂದಣ ನಮೂನೆಯಂತೆ.

ಜಮೀನುದಾರನು ಸಾಗುವಳಿದಾರನಿಗೆ ಬರೆದುಕೊಡುವ ಗೇಣೀಚೀಟಿ.

(೩೮ ನೇ ನಮೂನೆ.)

ಸಕ.........ರಲ್ಲು.... ನರಶಿಂಗರಾಯರು .... ವೆಂಕಟದಾಸರಿಗೆ ಬರೆದುಕೊಟ್ಟ ಗೇಣೀಚೀಟಿ ಏನಂದರೆ— ನನ್ನ ಬಾಬತು ಈ ಕೆಳಗೆ ವಿವರಿಸಿರುವ ತೋಟದ ಜಮೀನನ್ನು ಈ ನಳಸಂವತ್ಸರದ ಲಾಗಾಯಿತು ೯ ವರುಷ ಎಂದರೆ, ರಕ್ತಾಕ್ಷಿ ಸಂವತ್ಸರದ ಫಾಲ್ಗುಣ ಶುದ್ಧ ಪೂರ್ಣಿಮೆವರೆಗೆ ನಿನಗೆ ಗುತ್ತಿಗೆಗೆ ಕೊಟ್ಟು, ಡಿಟೋ ಜಮೀನನ್ನು ನಿನ್ನ ಸ್ವಾಧೀನಮಾಡಿರುತ್ತೇನೆ. ಇದರ ಗುತ್ತಿಗೆಗಾಗಿ ವರ್ಷ ೧ ಕ್ಕೆ ೧೫೦ ರೂಪಾಯಿ ಆ ಆ ಸಂವತ್ಸರದ ಮಾಘ ಬಹುಳ ಅಮಾವಾಸ್ಯೆಯಿಂದ ಫಾಲ್ಗುಣಮಾಸದ ಅಮಾವಾಸ್ಯೆಯೊಳಗಾಗಿ ನಮಗೆ ಪಾವತಿ ಮಾಡಬೇಕು. ಮೇಲೆ ಕಂಡ ವಾಯಿದೆ ಪೂರೈಸಿದ ಕೂಡಲೇ ಜಮೀನನ್ನು ನಮ್ಮ ಸುಫರ್ದಿಗೆ ಬಿಟ್ಟುಕೊಡಬೇಕು. ಈ ಜಮೀನಿನಲ್ಲಿ ನೀನು ಕಬ್ಬಿನ ಫಸಲನ್ನು ಮಾಡಿದರೆ, ೩ ರಲ್ಲಿ ೧ ಭಾಗದ ವಾರ ಫಸಲನ್ನೂ ನಮಗೆ ನೀನು ಕೊಡಬೇಕು ಇದೇ ದಿವಸ ಇದೇ ಗುತ್ತಿಗೆಗಾಗಿ ನೀನು ನನಗೆ ಇದಿರುನುಡಿಯಾಗಿ ಬರೆದುಕೊಟ್ಟಿರುವ ಲೇಖನವನ್ನು ನಾನು ಸ್ವೀಕರಿಸಿರುತ್ತೇನೆ, ಎಂಬುದಾಗಿ ನಾನು ಮನಃಪೂರ್ವಕವಾಗಿ ಬರೆದುಕೊಟ್ಟ ಗೇಣೀ ಚೀಟಿ.

ಫಲಚುಂಗಡಿ ಪತ್ರ.

(೩೯ ನೇ ನಮೂನೆ.)

ಸಕ ೧೮೯೦ ನೇ ಇಸವಿ ಜುಲೈ ತಾರೀಖು ೯ ರಲ್ಲು ಕಷ್ಣಸಾಗರದ ಕಾಯಂಗುತ್ತಿಗೆದಾರ್ ನರಶಿಂಗರಾಯರಿಗೆ—ಬೆಂಗಳೂರು ತಾಲ್ಲೂಕು ಕೆಂಗೇರಿ ಹೋಬಳಿ ಮಾರುಗೊಂಡಹಳ್ಳಿಯಲ್ಲಿ ಇರುವ ಎಡಗೈ ಮೂಡ್ಲನ

ಮಗ ಚಿಕ್ಕಹನುಮ ಮತ್ತು ಕೊರಮರ ವೆಂಕಟಶೆಟ್ಟಿ ಸಹ ಬರಸಿಕೊಟ್ಟ ಫಲಚುಂಗಡಿ ಪತ್ರಕ್ರಮ ಹ್ಯಾಗಂದರೆ—ನಾವುಗಳು ನಿಮ್ಮಲ್ಲಿ ಈ ದಿವಸ ಫಲಚುಂಗಡಿಗಾಗಿ ಸಾಲ ತೆಗದುಕೊಂಡು ಇರುವದು ರೂಪಾಯುಗಳು ಹದಿನೈದು ಇದಕ್ಕೆ ವರುಷ ಒಂದಕ್ಕೆ ರೂಪಾಯಿ ಒಂದಕ್ಕೆ ಹತ್ತುಶೇರಿನ ಕೊಳಗದಲ್ಲಿ ಒಂದು ಕೊಳಗ ರಾಗಿಪ್ರಕಾರ ಆಗುವ ಚುಂಗಡಿಯನ್ನು ಅಸಲನ್ನು ಸಹ ಒಂದು ವರುಷದೊಳಗಾಗಿ ಪಾವತಿಮಾಡಿ ಪತ್ರದಲ್ಲಿ ಸಲಿಕೆ ಬರಸಿ ಈ ಪತ್ರವನ್ನು ವಾಪಸು ತೆಗದುಕೊಳ್ಳಲುಳ್ಳವರು ಎಂದು ಬರಸಿಕೊಟ್ಟ ಫಲಚ ಂಗಡಿ ಪತ್ರ,ಸಹಿ. ರಾಗಿ ದೊರೆಯದಿದ್ದರೆ ಖಂಡಿವಂದಕ್ಕೆ ೫ ರೂಪಾಯಿವೋರಿಗೆ ಕರೀದಿ ಕೊಡಲುಳ್ಳವರು.

ವೆಂಕಟಶೆಟ್ಟಿ ಕಡ್ಡಿಮುಟ್ಟಿದ ರುಜುವಿಗೆ ಸಂಜೀವಯ್ಯನ ಬರಹ.

ಚಿಕ್ಕಹನುಮ ಕಡ್ಡಿಮುಟ್ಟಿದ ರುಜುವಿಗೆ ಸದರಿ ಬರಹ.

ಇದಕ್ಕೆ ಸಾಕ್ಷಿಗಳು.

೧. ಹೊಟ್ಟಗ ಕಡ್ಡಿಮುಟ್ಟಿದ ರುಜು ಸಾಕ್ಷಿಗೆ ಸಂಜೀವಯ್ಯನ ಬರಹ.

೧. ವೀರಕೆಂಪ ಕಡ್ಡಿಮುಟ್ಟಿದ ರುಜು ಸಾಕ್ಷಿಗೆ ಸದರಿ ಬರಹ.

ಬಿಕ್ಕಲಂ. ಅ॥ ಸಂಜೀವಯ್ಯ.

ಇದಕ್ಕೆ ಲಿಮಿಟೇಷನ್ ಮೂರು ವರುಷಗಳು ಮಾತ್ರ. ಬಡ್ಡಿವಗೈರೆ ಸಲಿಕೆ ಬರೆದಲ್ಲಿ ಬರೆದ ತಾರೀಖು ಲಾಗಾಯಿತು ಇನ್ನೂ ೩ ವರುಷಗಳು ಇರುತ್ತೆ.

ಹೆಂಡತಿಗೆ ಬರೆದುಕೊಡುವ ರಿಲೀಜ್ ಪತ್ರ.

(೪ಂನೇ ನಮೂನೆ.)

ಶೂದ್ರರಲ್ಲಿ ಕೆಲವು ದೇಶದಲ್ಲಿಯೂ ಮತ್ತು ಕೂಡಿಕೆ ಮಾಡಿಕೊಳ್ಳುವ ಜಾತಿಗಳಲ್ಲಿಯೂ ಗಂಡಹೆಂಡರಿಗೆ ಸರಿಬೀಳದೆ ಹೋದರೆ ತಮ್ಮ ತಮ್ಮ ಮದುವೆಯ)ವಿವಾಹ) ದ ಬಂಧವಿಮೋಚನೆಯನ್ನು ಮಾಡಿಕೊಳ್ಳುವದುಂಟು.

ಸ್ಥ ರಲ್ಲು ವೆಂಕಟೇಗೌಡನು ತನ್ನ ಹೆಂಡತಿ ಹನುಮಿಗೆ ಬರೆದುಕೊಟ್ಟ ವಿವಾಹಬಂಧವಿಮೋಚನೇ ಪತ್ರವೇನಂದರೆ— ನೀನು ನನಗೆ ಮದುವೆಯಾದ ಹೆಂಡತಿಯಾಗಿರುತ್ತೀಯೆ ನನಗೂ ನಿನಗೂ ಸರಿಬೀಳದೆ ಇರುವುದರಿಂದ ನಮ್ಮ ಜಾತಿಪದ್ಧತಿಯಮೇರೆ ನನ್ನ ಮದುವೇ ಖರ್ಚಿನ ಬಾಬತು ೨೦೦ ರೂ. ನ್ನು ನಿಮ್ಮ ತಂದೆಯಿಂದ ತೆಗೆದುಕೊಂಡು ನಿನ್ನನ್ನು ತ್ಯಜಿಸಿಬಿಟ್ಟಿರುತ್ತೇನೆ ನೀನು ಮತ್ತೊಬ್ಬನನ್ನು ಮದುವೆಮಾಡಿಕೊಳ್ಳಲು ನನ್ನ ಆಕ್ಷೇಪಣೆ ಯಾವುದೂ ಇರುವುದಿಲ್ಲ ಎಂಬದಾಗಿ ನನ್ನ ಖುದ್ದುರಾಜಿಯಿಂದ ಬರೆದುಕೊಟ್ಟ ವಿವಾಹಬಂಧವಿಮೋಚನೆ ಪತ್ರ.

ನೋಟ್—ಮದುವೇ ಖರ್ಚನ್ನು ತೆಗೆದುಕೊಳ್ಳದೆ ಇದ್ದರೆ, ಆಮಾತನ್ನು ಇಲ್ಲಿ ಬರೆಯಬೇಕಾದ ಅವಶ್ಯಕತೆಯಿಲ್ಲ.

(ಬರೆದುಕೊಟ್ಟವನ, ಸಾಕ್ಷಿಗಳ, ಲೇಖಕನ ರುಜುಗಳು ೧ ನೇ ನಮೂನೆಯಂತೆ)

ನಗ ಗಿರಿವಿ ಪತ್ರ.

(೪೧ ನೇ ನಮೂನೆ.)

ಸ್ಥ ರಲ್ಲು ರುದ್ರಪ್ಪಶೆಟ್ಟರು ಚನ್ನಮಾರೇಗೌಡರಿಗೆ ಬರೆದುಕೊಟ್ಟ ಗಿರಿವಿ ಪತ್ರವೇನಂದರೆ— ಈ ದಿವಸ ನನ್ನ ದರದು ನಿಮಿತ್ತವಾಗಿ ನಿಮ್ಮಬಳಿ ೨೦೦ ರೂಪಾಯಿಯನ್ನು ಸಾಲವಾಗಿ ಪಡೆದಿರುತ್ತೇನೆ. ಈ ಮೊಬಲಗಿಗೆ ಸೇ॥ ಮಾ॥ ಓಂದು ರೂಪಾಯಿನಂತೆ ಬಡ್ಡಿಯನ್ನು ಕೊಡಲು ಒಪ್ಪಿರುತ್ತೇನೆ. ಈ ಅಸಲು ಬಡ್ಡಿ ಖಾತರೀಬಗ್ಗೆ ನನ್ನ ಬಾಬತು ಸುಮಾರು ೨೦೦ ರೂ, ಕ್ರಯ ಬಾಳುವ ೧೦ ವರಹ ತೂಕದ ಅಪರಂಜೀಗಟ್ಟಿ ಕೈಬಳೆಗಳ ಜೋಡಿಯನ್ನೂ, ಮತ್ತು ಸುಮಾರು ೧೦೦ ರೂ. ಕ್ರಯಬಾಳುವ ಕೆಂಪು ಕೆತ್ತಿದ ಬಳೆ ಸಹ ನಿಮ್ಮಲ್ಲಿ ಅಡುವಿಟ್ಟಿರುತ್ತೇನೆ. ಈ ಲಾಗಾಯಿತು ೧ ವರ್ಷದಲ್ಲಿ ಮೇಲೆಕಂಡ ಆಸಲು ಮತ್ತು ಬಡ್ಡಿಯನ್ನು ನಿಮಗೆ ಸಲ್ಲಿಸಿ ಸದರಿ ಒಡವೆಗಳನ್ನು ನಿಮ್ಮಿಂದ ವಾಪಸ್ಸು ತೆಗೆದುಕೊಳ್ಳುತ್ತೇನೆ. ಎಂಬದಾಗಿ ನನ್ನ ಮನೋರಾಜಿಯಿಂದ ಬರೆದುಕೊಟ್ಟ ಗಿರಿವಿ ಪತ್ರ.

(ಬರೆದುಕೊಟ್ಟವನ, ಸಾಕ್ಷಿಗಳ, ರುಜುವೂ, ಬಕ್ಕಲಂ ಸಹ ೧ ನೆಯ ನಮೂನೆಗಿರುವಂತೆ.)

ಬೆಳೆಯುಮೇಲಿನ ಆಧಾರಪತ್ರ.

(೪೨ ನೇ ನಮೂನೆ.)

ಸಣ........ರಲ್ಲು ಬಳ್ಳಾರಿ ತಿಮ್ಮಯ್ಯನು ಅಣಜಿ ಸಿದ್ದಪ್ಪನಿಗೆ ಬರೆದುಕೊಟ್ಟ ಬೆಳೆಯುಮೇಲಿನ ಆಧಾರಪತ್ರವೇನಂದರೆ— ಈ ದಿವಸ ನಾನು ನಿಮ್ಮಲ್ಲಿ ೧೦೦ ರೂಪಾಯನ್ನು ಕಡವಾಗಿ ತೆಗದುಕೊಂಡಿರುತ್ತೇನೆ. ಈ ಹಣವನ್ನೂ ಈ ಲಾಗಾಯಿತು ಆರು ತಿಂಗಳಲ್ಲಿ ನಿಮಗೆ ಸಲ್ಲಿಸುತ್ತೇನೆ. ಅಸಲು ಬಡ್ಡಿ ಪಾವತೀಮಾಡುವುದರ ಖಾತರೀಗಾಗಿ ನನ್ನ ಬಾಬತು ಷಡ್ಯೂಲಿನಲ್ಲಿ ವಿವರಿಸುವ ನನ್ನ ಹೊಲದಲ್ಲಿರುವ ಭತ್ತದ ಬೆಳೆಯನ್ನು ನಿಮಗೆ ಆಧಾರಮಾಡಿರುತ್ತೇನೆ. ನಾನು ವಾಯಿದೆಯೊಳಗೆ ಮೇಲೆಕಂಡ ಸಾಲವನ್ನು ನಿಮಗೆ ಕೊಡದಿದ್ದರೆ, ಸದರಿ ಬೆಳೆಯ ಪೈಕಿ ನಿಮ್ಮ ಸಾಲಕ್ಕೆ ಬೇಕಾದಷ್ಟು ಬೆಳೆಯನ್ನು ನನ್ನ ಉಜೂರು ಇಡದೆ ನೀವೇ ತೆಗೆದುಕೊಳ್ಳಬಹುದು. ಅಥವಾ ನೀವು ಅಪೇಕ್ಷೆಪಟ್ಟರೆ. ಸದರಿ ಬೆಳೆಯನು, ನಿಮ್ಮ ಸಮಕ್ಷಮ ನಾನೇ ಕಟಾವ್ ಮಾಡಿ, ಮದೇಹಾಕಿ, ರೇಖೆ ವಗೈರೆ ಮಾಡಿ, ಬಂದ ಫಸಲಿನ ಪೈಕಿ ಆಗಿನ ಧಾರಣೇಮೇರೆ ನಿಮ್ಮ ಸಾಲಕ್ಕೆ ಎಷ್ಟುಬೇಕೋ ಅಷ್ಟನ್ನು ನಿಮಗೆ ಪಾವತಿಮಾಡುತ್ತೇನೆ. ಇದಲ್ಲದೆ ಈ ಬೆಳೆಯನ್ನು ನಾನು ಉಸ್ತುವಾರಿ ಮಾಡುತ್ತೇನೆ; ನಿಮ್ಮ ಅನುಮತಿ ಇಲ್ಲದೇನೆ ಬೇರೆ ಯಾವ ವಿಧವಾಗಿಯಾದರೂ. ಅದರ ತಂಟೆಗೆ ನಾನು ಹೋಗುವುದಿಲ್ಲವೆಂಬದಾಗಿ ಬರೆದುಕೊಟ್ಟ ಬೆಳೆಯ ಆಧಾರಪತ್ರ ಷಡ್ಯೂಲ್—ಚತುರ್ದಿಕ್ಕಿನಲ್ಲಿ ಇರುವ ಚಕ್ಕುಬಂದಿ ೧ ನೆಯ ಷಡ್ಯೂಲಿನಂತೆ ಬರೆದುಕೊಟ್ಟವನ ಸಾಕ್ಷಿಗಳ ರುಜುವೂ ಮತ್ತು ಬಿಕ್ಕಲಂ ಸಹ ೧ ನೇ ನಮೂನೆಗಿರುವಂತೆ.

ನೋಟ್—ಕಾಫೀ ಬೆಳೆಯುವ ಸ್ಥಳಗಳಲ್ಲಿ ಕಾಫೀ ಬೆಲೆಯನ್ನು ಆಧಾರಮಾಡಿ ಸಾಲವನ್ನು ತೆಗೆದುಕೊಳುವುದು ವಾಡಿಕೆಯಲ್ಲಿದೆ. ಸಾಲಾತೀರಿಸಲು ಸ್ವಲ್ಪವೇ ವಾಯಿದೆ ಗೊತ್ತುಮಾಡಲ್ಪಟ್ಟಿದ್ದು, ಬೆಳೆಯು ಕಲಲ್ಲಾಗುತ್ತಿಂದು ಕಂಡುಬಂದರೆ ಕೂಡಲೆ ದಾವಾ ದಾಖಲ್ಮಾಡಿ ಬೆಳೆಯನ್ನು ಇಂಜಂಕ್ಷನ್ ಜಪ್ತಿ ಮಾಡಿಸಬಹುದು.

ಪತ್ರದಲ್ಲಿ ಇಂಥ ಷರತ್ತಿದ್ದರೂ, ಬೆಳೆಯನ್ನು ಸಾಲಾಕೊಟ್ಟವನು, ತೆಗೆದುಕೊಳ್ಳಲು ಸಾಲಾಪಡೆದಿರುವವನು ತಕರಾರು ಮಾಡಿದರೆ, ಸಾಲಾ ಕೊಟ್ಟವನು ಕೋರ್ಟಿಗೆ ಹೋಗಬೇಕೇಹೊರತು ಬಲಾತ್ಕಾರವಾಗಿ ಬೆಳೆ ಯನ್ನು ತೆಗೆದುಕೊಳ್ಳಲಾಗದು.

ಚರಸ್ವತ್ತಿನ ಆಧಾರಪತ್ರ.

(೪೩ ನೇ ನಮೂನೆ.)

ಶಕೆ .....ರಲ್ಲು... ಶೇಷಾದ್ರಯ್ಯನವರಿಗೆ... ತಾರಾಯಣಸ್ವಾಮಿಮೊ ದಲಿಯಾರ್ ಬರೆದುಕೊಟ್ಟ ಚರಸ್ವತ್ತಿನ ಆಧಾರಪತ್ರ--ನಿಮ್ಮ ಬಳಿ ೧೦೦ ರೂಪಾಯಿಯನ್ನು ಸಾಲವಾಗಿ ನಾನು ತೆಗೆದುಕೊಂಡು ಇರುತ್ತೇನೆ. ಈ ಮೊಬಲಗಿಗೆ ಸೇ॥ ಮಾ॥ ಒಂದು ರೂಪಾಯಿನಂತೆ ಆಗುವ ಬಡ್ಡಿಯನ್ನೂ ಮತ್ತು ಅಸಲನ್ನೂ ಈ ಲಾಗಾಯಿತು ಒಂದು ವರ್ಷದಲ್ಲಿ ನಿಮಗೆ ಪಾವತಿ ಮಾಡುತ್ತೇನೆ. ಈ ಅಸಲು ಬಡ್ಡಿಯ ಖಾತರೀಬಗ್ಗೆ, ನನ್ನ ಬಾಬತು ಮುಗ್ಗುರುಕೊಂಬಿನ ಬಿಳೆ ಎತ್ತು ಮತ್ತು ಸಾದಾ ಕರೀಬಣ್ಣದ ಹೋರಿ ಒಂದು ಆಧಾರ ಮಾಡಿರುತ್ತೇನೆ. ಮೇಲೆಕಂಡ ವಾಯಿದೆಯೊಳಗೆ ಸದರಿ ಸಾಲವನ್ನು ನಾನು ಸಲ್ಲಿಸದೆಹೋದಲ್ಲಿ ನನ್ನ ಖುದ್ದು ಜವಾಬ್ದಾರಿಯಿಂದ ಲೂ. ಸದರಿ ಚರಸ್ವತ್ತುಗಳಿಂದಲೂ ಸದರಿ ಹಣವನ್ನು ನೀವು ವಸೂಲ್ಮಾ ಡಿಕೊಳ್ಳಬಹುದು. ಮೇಲಕಂಡಮೇರೆ ಆಧಾರ ಮಾಡಿರುವ ಸದರಿ ಚರ ಸ್ವತ್ತುಗಳನ್ನು ನನ್ನಸುಫರ್ದಿನಲ್ಲಿ ಇಟ್ಟುಕೊಂಡು ಅವುಗಳು ಖಲಲ್ ಆಗ ದಂತೆ ಅವುಗಳನ್ನುಕಾಪಾಡುವ ಭಾರವು ನನ್ನದಾಗಿರುತ್ತದೆ. ಮತ್ತುನಿಮ್ಮ ಸಾಲವನ್ನು ತೀರಿಸುವಪರ್ಯಂತರ ಈ ಸ್ವತ್ತುಗಳನ್ನು ನಾನು ಯಾರಿಗೂ ಯಾವ ವಿಧವಾಗಿಯೂ ಪರಾಧೀನ ಮಾಡುವುದಿಲ್ಲವೆಂಬದಾಗಿ ನನ್ನಖುದ್ದು ರಾಜಿಯಿಂದ ಬರೆದುಕೊಟ್ಟ ಚರಸ್ವತ್ತಿನ ಆಧಾರಪತ್ರ.

(ಬರೆದುಕೊಟ್ಟವನ ಸಾಕ್ಷಿಗಳ ರುಜುವೂ, ಬಿಕ್ಕಲಂ ಸಹ ೧ ನೆಯ ನಮೂನೆಗಿರುವಂತೆ.)

ಡಿಕ್ರಿಯನ್ನು ಮೇಡೋವರ್ ಮಾಡುವ ಪತ್ರ.

(೫೫ ನೇ ನಮೂನೆ.)

ಸ್ಥ......ರಲ್ಲು...ವೀರಭದ್ರಯ್ಯನು...ಬಸವಯ್ಯನಿಗೆ ಬರೆದು ಕೊಟ್ಟ ಡಿಕ್ರಿಯ ಮೇಡೋವರ್ ಪತ್ರವೇನಂದರೆ—ಹುಬ್ಬಳ್ಳಿ ಮುನ್ಸಿಪಲ್ ಕೋರ್ಟು ೧೯೧೭ ನೇ ಇಸವಿ ಅಸಲ್ ನಂಬರು ೩೫೩ ರಲ್ಲಿ ನಾನು ಶಿವಯ್ಯನ ಮೇಲೆ ಪಡೆದುಕೊಂಡಿರುವ ಡಿಕ್ರಿಯಮೇಲೆ ಸದರಿ ಪ್ರತಿವಾದಿಯಿಂದ ಡಿಕ್ರಿಯ ಮೊಬಲಗು ೨೦೦ ರೂ. ಮತ್ತು ಕೋರ್ಟು ಖರ್ಚು, ಜಾರೀಖರ್ಚು ವಗ್ಯೆರೆ ೨೮ ರೂ. ಜುಮ್ಲಾ ೨೨೮ ರೂ. ಬರಬೇಕಾಗುತ್ತದೆ. ಈ ದಿವಸ ನಿಮ್ಮಿಂದ ೧೫೦ ರೂ. ನ್ನು ತೆಗೆದು ಕೊಂಡು, ಮೇಲೆ ಕಂಡ ಡಿಕ್ರಿಯ ಮೇಲೆ ನನಗಿರುವ ಹಕ್ಕು ಬಾಧ್ಯತೆಯನ್ನು ನಿಮಗೆ ಮೇಡೋವರ್ ಮಾಡಿ ಕೊಟ್ಟರುತ್ತೇನೆ, ನೀವು ಮೇಲೆ ಕಂಡ ಡಿಕ್ರಿಯನ್ನು ಸದರಿ ಶಿವಯ್ಯನ ಮೇಲೆ ಜಾರೀಮಾಡಿಕೊಂಡು ಮೇಲೆಕಂಡ ಮೊಬಲಗನ್ನು ಅವನಿಂದ ವಸೂಲ್ಮಾಡಿಕೊಳ್ಳಬಹುದು ಎಂಬುದಾಗಿ ಮನಃಪೂರ್ವಕವಾಗಿ ನಾನು ಬರದು ಕೊಟ್ಟ ಡಿಕ್ರಿಯ ಮೇಡೋವರ್ ಪತ್ರ.

(ಬರೆದುಕೊಟ್ಟವನ, ಸಾಕ್ಷಿಗಳ, ಲೇಖಕನ ರುಜುಗಳು ೧ ನೆಯ ನಮೂನೆಯಂತೆ,)

ಫಾರೀಖತ್ತು, ಯಾ, ವಿಭಾಗಪತ್ರ.

(೫೬ ನೇ ನಮೂನೆ.)

ಸ್ಥ......ರಲ್ಲು...ತಳವಾರ ತಿಮ್ಮನ ಮಕ್ಕಳಾದ ೧ನೇ...ಭಂಗ್ಯೋನು, ೨ನೇ ಇವನ ತಮ್ಮ...ದಾಸಾ, ೩ ನೇ ಇವನ ಮಲತಮ್ಮ ಸುಮಾರು ೧೦ ವರ್ಷದ ಚವರಿಗ ಈತನು ಮೈನರಾಗಿರುವುದರಿಂದ ಈತನಿಗೋಸ್ಕರ ಈತನ ಜನಕತಾಯಿಯೂ, ೧— ೨ ನೆ ಯವರ ಮಲತಾಯಿಯೂ ಆದ

ಮರಿಯಮ್ಮ. ಈ ಮೂವರೂ ಸೇರಿ ಇದರ ಕೆಳಗೆ ನಮ್ಮ ತೀರುಜುವನ್ನು ಮಾಡಿರುವ. ನಮ್ಮ ಕುಟುಂಬಕ್ಕೆ ಸೇರಿದ ನಾಗಮ್ಮನೊಡನೆ ನಮ್ಮಗಳ ಪಿತ್ರಾರ್ಜಿತವಾಗಿಯೂ ಮತ್ತು ನಾವುಗಳು ಒಟ್ಟಿಗೆ ಸಂಪಾದನೆ ಮಾಡಿಯೂ ಇರುವ ಕೆಳಗೆ ವಿವರಿಸಿರುವಂತೆ ಸುಮಾರು ೨,೫೦೦ ರೂ. ಅಂದಾಜಿನ ಚರ ಸ್ಥಿರ ಆಸ್ತಿಗಳನ್ನೂ ಮತ್ತು ೬೦೦ ರೂ ನ ದೇಣೆಗಳನ್ನೂ ಸಹ ಈ ಕೆಳಗೆ ಸಾಕ್ಷಿ ಹಾಕಿರುವ ಪಂಚಾಯಿತರ ರೂಬರೂಬು ಹಂಚಿಕೊಂಡಿರುವ ಕ್ರಮವೇನೆಂದರೆ— ಕೆಳಗೆ ವಿವರಿಸುವಂತೆ ಸುಮಾರು ೬೦೦ ರೂ. ನ ದೇಣೆಗಳನ್ನು ನಾವು ಹೊರಕ್ಕೆ ಕೊಡಬೇಕಾಗುತ್ತದೆ. ಮತ್ತು ೨೦೦ ರೂ. ನ ಲೇಣೆಗಳು ಹೊರಗಿನಿಂದ ನಮಗೆ ಬರಬೇಕಾಗಿರುತ್ತವೆ. ಕುಟುಂಬದ ಲೇಣೇದೇಣೆಗಳನ್ನೆಲ್ಲಾ ಮೇಲೆ ಕಂಡ ೧ ನೇ ಭಂಗ್ಯೋನೇ ವಹಿಸಿಕೊಳ್ಳತಕ್ಕದ್ದು; ಎಂದರೆ, ಲೇಣೆಗಳನ್ನು ವಸೂಲ್ಮಾಡಿಕೊಳ್ಳುವ ಹಕ್ಕು ಇವನಿಗೆ ಸೇರಿರುತ್ತದೆ. ಮತ್ತು ದೇಣೆಗಳನ್ನು ತೀರಿಸುವ ಭಾರವೂ ಇವನಿಗೇನೇ ಸೇರಿರುತ್ತದೆ. ಈ ಭಾರವನ್ನು ಇವನು ವಹಿಸಿಕೊಂಡುದಕ್ಕೋಸ್ಕರ ಇವನ ಹಿಸ್ಸೆಗಾಗಿ ಮೇಲೆ ಕಂಡಂತೆ ೫೦ ರೂ. ನ ಲೇಣೆಗಳು ಇವನಿಗೆ ಹೆಚ್ಚಾಗಿ ಕೊಡಲ್ಪಟ್ಟಿವೆ. ಮತ್ತು ಈ ಸಾಲಗಳಿಗೆ ಈಡಾಗಿರುವ ಸ್ಥಿರಸ್ವತ್ತುಗಳೂ ಸಹ ಇವನಹಿಸ್ಸೆಗೆ ಕೊಡಲ್ಪಟ್ಟಿವೆ. ಈ ಲಾಗಾಯಿತು ೬ ತಿಂಗಳಲ್ಲಿ ಇವನು ಸದರಿ ಸಾಲಗಳನ್ನು ತೀರಿಸದಿದ್ದರೆ, ೨—೩ ನೇ ಹಿಸ್ಸೇದಾರರು ಆ ಸಾಲಗಳನ್ನು ತೀರಿಸಿ, ಹಾಗೆ ತೀರಿಸುವುದಕ್ಕೆ ಅವರು ಕೊಡಬೇಕಾಗುವ ಮೊಬಲಗನ್ನು ಆ ಮೊಬಲಗಿಗೆ, ಸೇ॥ ಮಾ॥ ೨ ರೂ. ನಂತೆ ಆಗುವ ಬಡ್ಡಿಯೊಡನೆ ಸದರಿ ಭಂಗ್ಯೋನಿಂದ ವಸೂಲ್ಮಾಡಿಕೊಳ್ಳಲು ಹಕ್ಕುದಾರರಾಗಿರುತ್ತಾರೆ. ೧—೨—೩ ನೇ ಯವರ ಮರಿಯಮ್ಮನ ಮಗಳು ೭ ವರ್ಷ ವಯಸ್ಸಿನ ಸುಬ್ಬಿಯು ಲಗ್ನದವರೆಗೆ ಅವಳ ಜೀವನಾಂಶಕ್ಕಾಗಿಯೂ ಮತ್ತು ಅವಳ ಮದುವೇ ಖರ್ಚಿಗಾಗಿಯೂ ಸಹ ಕೆಳಗೆ ಹಿಸ್ಸೇಪಟ್ಟಿಯಲ್ಲಿ ಕಂಡ ಸ್ಥಿರಸ್ವತ್ತುಗಳು ಅವಳ ತಾಯಿಯಾ ಮತ್ತು ಗಾರ್ಡಿಯನ್ನೂ ಆದ ಸದರಿ ಮರಿಯಮ್ಮನ ಸುಪರ್ದಿಗೆ ಕೊಡಲ್ಪಟ್ಟಿವೆ. ಸದರಿ ಸ್ವತ್ತನ್ನು ಪರಾಧೀನ ಮಾಡಲು ಸದರಿ ಮರಿಯಮ್ಮನಿಗೆ ಪೂರ್ಣವಾದ ಹಕ್ಕನ್ನು ಕೊಟ್ಟುಬಿಟ್ಟಿರುತ್ತದೆ. ಮತ್ತು ೧—೨ ನೆಯವರ ಅಣ್ಣ ಪಾತಿದ್ಯಾವಯ್ಯನ ಹೆಂಡತಿಯಾದ ನಾಗಮ್ಮನ ಜೀವನಾಂಶಕ್ಕಾಗಿ ಕೆಳಗಿನ ಹಿಸ್ಸೇಪಟ್ಟಿಯಲ್ಲಿ ನಮೂದುಮಾಡುವ ಸ್ಥಿರಸ್ವತ್ತು ಅವಳಿಗೆ ಕೊಡಲ್ಪಟ್ಟಿದೆ. ಅವಳು ತನ್ನ ಜೀವಮಾನಪರ್ಯಂತ ಸದರಿ ಸ್ವತ್ತನ್ನು ಅನುಭವಿಸತಕ್ಕದ್ದು. ಅದನ್ನು ಪರಭಾರೆಮಾಡಲು ಅವಳಿಗೆ ಹಕ್ಕಿರುವುದಿಲ್ಲ. ಅವಳು ಮೃತಪಟ್ಟನಂತರ ಸದರಿ ಸ್ವತ್ತು ಸದರಿ ದ್ಯಾವಯ್ಯನ ಹೆಸರಿನ ಮೇಲೆ ವಿದ್ಯಾ

ರ್ಥಿಗಳಿಗೆ ಧರ್ಮಾರ್ಥವಾಗಿ ಅನ್ನಹಾಕಲು ಉಪಯೋಗಿಸಲ್ಪಡಬೇಕು. ಮತ್ತು ೧ ನೇ ಭಂಗ್ಯೋನ ಹೆಂಡತಿಗೂ, ೨ ನೇ ದಾಸನ ಹೆಂಡತಿಗೂ ಮರಿಯಮ್ಮನಿಗೂ, ನಾಗಮ್ಮನಿಗೂ ಧರಿಸಿಕೊಳ್ಳುವುದಕ್ಕಾಗಿ ಕೊಡಲ್ಪಟ್ಟಿರುವ ನಗಗಳು ಅವರವರಿಗೇ ಸೇರತಕ್ಕವು. ನಮ್ಮ ಅವಿಭಕ್ತ ಕುಟುಂಬಕ್ಕೆ ಸೇರಿರುವ ಚಿಲ್ಲರೇ ಅಂಗಡಿಯ ಆಸ್ತಿಯು ಮತ್ತು ಅದರ ಲೇಣೆ ದೇಣೆ ಆದಾಯ ನಷ್ಟವೆಲ್ಲವೂ ೧—೨ ನೇ ಭಂಗ್ಯೋನು. ದಾಸ ಇವರಿಗೇ ಸೇರತಕ್ಕವು. ಇವರಿಬ್ಬರೂ ಇನ್ನು ಮುಂದಕ್ಕೆ ಸದರಿ ಅಂಗಡಿಯನ್ನು ಪಾಲುದಾರರಂತೆ ನಡೆಯಿಸಿಕೊಂಡು ಬರಬೇಕು. ಈ ಅಂಗಡಿಯ ಆಸ್ತಿಯ ಪೈಕಿ ೩ ನೇ ಚವರಿಗನಿಗೆ ಸಲ್ಲಬೇಕಾದ ಸುಮಾರು ೫೦ ರೂ. ನ ಅಂದಾಜಿನ ಹಿಸ್ಸೆಗಾಗಿ ಸದರಿ ಮೊಬಲಗು ಬಾಳುವ ಸ್ಥಿರಾಸ್ತಿಯನ್ನು ಹೆಚ್ಚಾಗಿ ಕೊಟ್ಟು, ಇವನ ಹಿಸ್ಸೆಯನ್ನು ಭರ್ತಿ ಮಾಡಿರುತ್ತದೆ. ಮತ್ತು ಇವನ ಮದುವೇ ಖರ್ಚಿಗಾಗಿ ಕೆಳಗಿನ ಹಿಸ್ಸೇ ಪಟ್ಟಿಯಲ್ಲಿ ಕಂಡಮೇರೆ ೧೦೦ ರೂ. ಬೆಲೆ ಬಾಳುವ ನಗಗಳು ಇವನಿಗೆ ಹೆಚ್ಚಾಗಿ ಕೊಡಲ್ಪಟ್ಟಿರುತ್ತವೆ. ಮತ್ತು ನಮ್ಮ ಪಿತ್ರಾರ್ಜಿತವಾದ, ನಮ್ಮ ಅನುಭವದಲ್ಲಿರುವ, ಪಂಚಾಯಿತರಿಂದ ೧೬ ರೂ. ಅಂದಾಜಾ ಕಟ್ಟಲ್ಪಟ್ಟಿರುವ ಕುದೂರು ಗ್ರಾಮದ ತಳವಾರಿಕೆ ಹಕ್ಕು ಬಾಧ್ಯತೆಯು ಸದರಿ ಜ್ಯೇಷ್ಠನಾದ ಭಂಗ್ಯೋನಿಗೆ ಸೇರತಕ್ಕದು. ಇತರ ಹಿಸ್ಸೇದಾರರಿಗೆ ಈ ತಳವಾರಿಕೆಯಲ್ಲಿರುವ ಹಿಸ್ಸೆಯ ಹಕ್ಕಿಗೆ ಬದಲಾಗಿ, ಹಿಸ್ಸೇಪಟ್ಟಿಯಲ್ಲಿ ಕಂಡಮೇರೆ, ಬೇರೆ ಆಸ್ತಿಯನ್ನು ಇವರಿಗೆ ಕೊಟ್ಟಿರುವುದರಿಂದ ಭಂಗ್ಯೋನು, ಅಥವಾ. ಅವನ ವಾರಸುದಾರರು ಇರುವವರೆಗೂ, ಇತರ ಹಿಸ್ಸೇದಾರರಿಗಾಗಲಿ, ಅಥವಾ ಇವರ ವಾರಸುದಾರರಿಗಾಗಲಿ ಇದರ ಮೇಲೆ ಯಾವ ಹಕ್ಕು ಬಾಧ್ಯತೆಯೂ ಇರುವುದಿಲ್ಲ. ನಮ್ಮ ಹಿತ್ತಲಲ್ಲಿರುವ ಭಾವಿಯು ಹಿಸ್ಸೇಪಟ್ಟಿಯಂತೆ ಭಂಗ್ಯೋನ ಹಿಸ್ಸೆಯ ಹಿತ್ತಲಿನಲ್ಲಿರುತ್ತದಾದರೂ, ಇದನ್ನು ನಮ್ಮ ಕುಟುಂಬಕ್ಕೆ ಸೇರಿದವರೆಲ್ಲರೂ ಉಪಯೋಗಿಸಲು ಹಕ್ಕುದಾರರಾಗಿರುತ್ತಾರೆ. ಮೇಲೆ ಕಂಡ ಮೇರೆ ವ್ಯವಸ್ಥೇಮಾಡಲ್ಪಟ್ಟ ಸ್ವತ್ತುಗಳು ವಿನಾ, ಮಿಕ್ಕ ನಮ್ಮ ಕುಟುಂಬಕ್ಕೆ ಸೇರಿರುವ ಚರಸ್ಥಿರ ಆಸ್ತಿಗಳನ್ನು ನಾವು ಸಮವಾಗಿ ಮೂರು ಹಿಸ್ಸೇಮಾಡಿಕೊಂಡು ಆ ಪೈಕಿ ಒಂದೊಂದು ಹಿಸ್ಸೆಯನ್ನು ನಾವು ಮೂವರು ಪ್ರತಿ ಒಬ್ಬರೂ ತೆಗೆದುಕೊಂಡಿದ್ದೇವೆ. ಮೇಲೆ ಕಂಡ ಮೇರೆ ಜೀವನಾಂಶ, ಹಿಸ್ಸೇ ವಗೈರೆಗಾಗಿ ವ್ಯವಸ್ಥೆ ಮಾಡಲ್ಪಟ್ಟ ಪ್ರಕಾರ, ಯಾರಿಗೆ ಯಾವಾವ ಸ್ವತ್ತು, ಲೇಣೆ, ದೇಣೆಗಳು ಸೇರಿರುತ್ತವೆಯೋ ಅವುಗಳ ತಪ್ಸೀಲು ವಿಶದವಾಗಿ ಕೆಳಗಿನ ಹಿಸ್ಸೇ ಪಟ್ಟಿಯಲ್ಲಿ ವಿವರಿಸಲ್ಪಟ್ಟಿದೆ. ಮೇಲೆ ಕಂಡ ಚವರಿಗನ

ಹಿಸ್ಸೆಗೆ ಕೊಡಲ್ಪಟ್ಟ ಸ್ವತ್ತುಗಳನ್ನೆಲ್ಲಾ ಅವನ ಜನಕತಾಯಿ ಮರಿಯಮ್ಮನ ವಶಕ್ಕೆ ಕೊಟ್ಟಿದೆ. ಮೇಲೆ ಕಂಡ ನಾಗಮ್ಮನು ತನಗೆ ಜೀವನಾಂಶಕ್ಕಾಗಿ ಕೊಡಲ್ಪಟ್ಟ ಸ್ವತ್ತನ್ನು ತಾನು ತೆಗೆದುಕೊಂಡು, ಈ ಫಾರೀಖತ್ತಿಗೆ ಒಪ್ಪಿದುದಕ್ಕೆ ಅವಳು ಈ ಕೆಳಗೆ ತನ್ನ ಸಮ್ಮತೀ ರುಜುವನ್ನು ಹಾಕಿರುತ್ತಾಳೆ. ಈ ಫಾರೀಖತ್ತು ರಿಜಿಸ್ಟರಾದ ನಂತರ, ೧ ನೇ ಭಂಗ್ಯೋಳನ ವಶದಲ್ಲಿರತಕ್ಕದ್ದು. ಈ ಪ್ರಕಾರ ನಾವುಗಳು ನಮ್ಮ ಅವಿಭಕ್ತ ಕುಟುಂಬಕ್ಕೆ ಸೇರಿದ ಸಮಸ್ತವಾದ ಚರಸ್ಥಿರ ಆಸ್ತಿಗಳನ್ನೂ, ಹಕ್ಕುಗಳನ್ನೂ, ಲೇಣೆ, ದೇಣೆಗಳನ್ನೂ ಸಹ ಹಂಚಿಕೊಂಡು, ನಮನಮಗೆ ಸೇರತಕ್ಕುದನ್ನೆಲ್ಲಾ ನಾವು ನಾವು ಸ್ವಾಧೀನ ಸಹ ಮಾಡಿಕೊಂಡಿರುವುದರಿಂದ ಇದವರೆಗೂ ನಮಗೆ ಸಮಷ್ಟಿಯಾಗಿದ್ದ ಅರ್ಥಸಂಬಧವು ಈಗ ತಪ್ಪಿಹೋಗಿರುತ್ತದೆ. ನಮ್ಮ ನಮ್ಮಗಳ ರುಜುನನ್ನು ಸಾಕ್ಷಿಗಳ ಮುಖತಃ ಈ ಪಾರೀಖತ್ತಿಗೆ ಹಾಕಿರುತ್ತೇವೆ ಎಂಬುದಾಗಿ ನಾವುಗಳು ಬರೆದುಕೊಟ್ಟ ಫಾರೀಖತ್ತು.

ಇದರಂತೆ ಎಷ್ಟು ಜನ ಮಕ್ಕಳಿದ್ದರೂ ಅದರಂತೆ ವಿವರಿಸಿ ಬರೆಯತಕ್ಕದ್ದು.

ಇಲ್ಲಿ ಹಿಸ್ಸೆಯಪಟ್ಟಿ ತಪಶೀಲ್.

೧ ನೇ ಯವನಿಗೆ ಇಂತಿಂಥಾದ್ದು.

೨ ನೇ ಯವನಿಗೆ ಇಂತಿಂಥಾದ್ದು.

೩ ನೇ ಯವನಿಗೆ ಇಂತಿಂಥಾದ್ದು.

ಜಮೀನುಗಳ ಚಕ್ಕುಬಂದಿ ಷೆಡ್ಯೂಲ್ ವಗೈರೆ.

ಸಾಕ್ಷಿಗಳು.

ರುಜುಗಳು.

ಬರೆಯುವದಕ್ಕೆ ಬರದವರ ಕೈಲಿ ಹೆಬ್ಬೆಟ್ಟಿನ ಗುರ್ತು ಹಾಕಿಸಬೇಕು.

ಬಿಕ್ಕಲಂ.

ಪತ್ರ ರಿಜಿಸ್ಟ್ರೇಷನ್ ವಗೈರೇದಕ್ಕೆ.

ಸ್ಟಾಂಪು—ಸಮಷ್ಟಿಸ್ವತ್ತನ್ನು ಸಮವಾದ ಅನೇಕ ಭಾಗಗಳನ್ನಾಗಿ ಮಾಡಿಕೊಂಡರೆ, ೧ ಭಾಗ ವಿನಾ ಬಾಕೀ ಭಾಗಗಳ ಮೊತ್ತದ ಮೇಲೆ ಮೈಸೂರ ಪತ್ರದಂತೆ ಸ್ಟಾಂಪು ಹಾಕಬೇಕು. [ಮಸಲ— ೫,೦೦೦ ರೂಪಾಯಿನ ಆಸ್ತಿಯನ್ನು ೫ ಭಾಗ ಮಾಡಿಕೊಂಡರೆ, ೪,೦೦೦ ರೂಪಾಯಿಗೆ ಬೇಕಾದ ೨೦ ರೂ. ನ ಸ್ಟಾಂಪು ಕಾಗದ ಅವಶ್ಯಕ.] [ಹಾಗಿಲ್ಲದೆ ಹಿಸ್ಸೆಯು ಹೆಚ್ಚು ಕಡಮೆಯಾಗಿದ್ದರೆ, ಎಲ್ಲಕ್ಕಿಂತ ಹೆಚ್ಚಾಗಿರುವ ಹಿಸ್ಸೆಯು ಹೊರತು ಬಾಕಿ ಹಿಸ್ಸೆಗಳ ಮೊತ್ತದ ಮೇಲೆ ಮೈಸೂರ ಪತ್ರದಂತೆ ಸ್ಟಾಂಪು ಹಾಕಬೇಕು.] [ಮಸಲ—ತಂದೆಯ ಹಿಸ್ಸೆಗೆ ೧,೮೦೦ ರೂ. ಮೊದಲನೇ ಮಗನ ಹಿಸ್ಸೆಗೆ ೧,೮೪೮ ರೂ. ಎರಡನೇ ಮಗನ ಹಿಸ್ಸೆಗೆ ೧.೯೯೨ ರೂ. ಮೂರನೇ ಯವನ ಹಿಸ್ಸೆಗೆ ೧,೯೦೦ ರೂ. ಬೆಲೆ ಬಾಳುವ ಆಸ್ತಿಯು ಬಂದರೆ, (೧.೮೪೮ + ೧,೯೦೦ + ೧೮೦೦=) ೫,೫೪೮ ರೂ. ಗೆ ಆಗುವ ೩೦ ರೂಪಾಯಿನ ಸ್ಟಾಂಪುಕಾಗದ ಅವಶ್ಯಕ ಮೈ. ಗ. ಪ್ರೊ. ನಂ. ಜಿ ೨೮೬೫-೭೩ ರ. ೧೬-೪. ೭-೪. ೧೯೦೫ ನೇ ಮ.] ಮತ್ತು ವರ್ಷಕ್ಕೆ ಒಂದಾವೃತ್ತಿ ಮಾಡುವ ಸರ್ವೆ ಸೆಟಲ್‌ಮೆಂಟ್ ಆಗಿರತಕ್ಕ, ಸರ್ಕಾರಕ್ಕೆ ಪೂರಾ ಕಂದಾಯ ವಸೂಲಾಗುವ ಜಮೀನುಗಳನ್ನು ಹಿಸ್ಸೇಮಾಡಿಕೊಳ್ಳಬೇಕಾದರೆ, ಆ ಜಮೀನುಗಳ ಕಂದಾಯದ ೫ ರಷ್ಟು ಮೊಬಲಗಿನ ಮೇಲೆ ಲೆಕ್ಕಾಚಾರ ಮಾಡಿ ಮೈಸೂರ ಪತ್ರದಂತೆ ಸ್ಟಾಂಪುಹಾಕಬೇಕು. ಮತ್ತು ವಿಭಾಗ ಮಾಡಿಕೊಳ್ಳುವ ಸ್ಥಿರಸ್ವತ್ತು ಆಧಾರ ಭೋಗ್ಯವಾಗಿದ್ದು, ಆ ಸ್ವತ್ತುಗಳ ಬೆಲೆಯ ಮೇಲೆ (ಮಸಲ—ಮನೆ) ಸ್ಟಾಂಪು ಲೆಕ್ಕಾಚಾರ ಮಾಡಬೇಕಾಗಿದ್ದು, ಈ ಎರಡು ಸಂದರ್ಭಗಳೂ ಇದ್ದಲ್ಲಿ, ಬೆಲೆಯ ಮೊಬಲಗಿನಲ್ಲಿ ಸದರಿ ಆಧಾರ ಭೋಗ್ಯದ ಮೊಬಲಗನ್ನು ಕಳೆದು ಉಳಿಯುವ ಬೆಲೆಯ ಮೇಲೆ ಮೈಸೂರ ಪತ್ರದಂತೆ ಸ್ಟಾಂಪು ಹಾಕಬೇಕು ಈ ವಿಧಿಗಳಿಗನುಸಾರವಾಗಿ ಮೇಲೆ ಕಂಡ ನಮೂನೆಯ ಫಾರೀಖತ್ತಿಗೆ ಎಷ್ಟು ಸ್ಟಾಂಪು ಕೊಡಬೇಕೆಂದರೆ, ಮೊದಲನೆಯವನ ಹಿಸ್ಸೆಯು ಎಲ್ಲರಿಗಿಂತಲೂ ಹೆಚ್ಚಾಗಿರುವುದರಿಂದ ಅದನ್ನು ಬಿಟ್ಟು ಮಿಕ್ಕ ಎಲ್ಲರ ಹಿಸ್ಸೆಗಳನ್ನೂ ಕೂಡಿಸಬೇಕು. ಕಂದಾಯ ಕೊಡತಕ್ಕ ಜಮೀನುಗಳ ವಿಷಯದಲ್ಲಿ ಅವುಗಳ ಅಂದಾಜನ್ನು ತೆಗೆದುಕೊಳ್ಳದೆ, ಕಂದಾಯವನ್ನು ಮಾತ್ರ ತೆಗೆದುಕೊಳ್ಳಬೇಕು. ಆದುದರಿಂದ ೫೮೦+೪೦೦+(೭೦×೫)=೧,೩೫೦ ರೂಪಾಯಿಗೆ ಅವಶ್ಯಕವಾದ ೭-೮-೦ ಸ್ಟಾಂಪು ಕಾಗದದಲ್ಲಿ ಬರೆಯಬೇಕಾಗುತ್ತದೆ.

ರಿಜಿಸ್ಟ್ರೇಷನ್— ೧೦೦ ರೂ. ಅಥವಾ, ಅದಕ್ಕೆ ಮೇಲ್ಪಟ್ಟ ಬೆಲೆಯು ಸ್ಥಿರಸ್ವತ್ತು ಫಾರೀಖತ್ತಿಗೆ ಸೇರಿದ್ದರೆ, ಅವಶ್ಯಕವಾಗಿ ರಿಜಿಸ್ಟರ್ ಮಾಡಿಸಬೇಕು ವ್ಯ. ನಿ. ಎಂ. ಎಂ.

ಸೆಟಲ್‌ಮೆಂಟ್, ಯಾ, ವ್ಯವಸ್ಥಾಪತ್ರ.

ವಿ ವ ರ ಣೆ.

ಒಬ್ಬ ಆಸ್ತಿದಾರನ ಪೋಷಣೆಯಲ್ಲೂ, ಆಶ್ರಯದಲ್ಲೂ, ಬಹುಶಃ ಅವನಿಗೆ ವಾರಸುದಾರರಾಗಿರುವವರೂ ಮತ್ತು ಇತರರೂ ಅನೇಕರಿರುತ್ತಾರೆ. ಆಸ್ತಿದಾರನು ತನ್ನ ಜೀವಮಾನಕಾಲದಲ್ಲೇ ಸದರಿಯವರಿಗೆ ಕೊಡಬೇಕಾದುದನ್ನೆಲ್ಲಾ ಕೊಟ್ಟು ಅ ರಿಗಿರುವ ಹಕ್ಕು ಬಾದ್ಯತೆಗಳನ್ನೂ ಕಾಂಕ್ಷೆಗಳನ್ನೂ ಆಶೆಗಳನ್ನೂ ವ್ಯವಸ್ಥೆ ಮಾಡದೇ ಹೋದರೆ ಅವನು ಮೃತಿಪಟ್ಟ ನಂತರ ಸದರಿ ಜನಗಳಿಗೆ ಮೃತನ ಆಸ್ತಿಯ ವಿಷಯದಲ್ಲಿ ಮಹತ್ಕಲಹಗಳು ಉಂಟಾಗಿ ಬಹಳ ಅನರ್ಥಕ್ಕೆ ಕಾರಣಗಳುಂಟಾಗುತ್ತದೆ. ಇಂಥ ಅನರ್ಥವನ್ನು ತಪ್ಪಿಸುವದಕ್ಕಾಗಿ ಆಸ್ತಿದಾರನು ತನ್ನ ಪೋಷ್ಯವರ್ಗಕ್ಕೆ ಸೇರಿದವರಿಗೆ ಅವರವರಿಗೆ ಕೊಡತಕ್ಕದನ್ನು ಕೊಟ್ಟು ಅವರ ಹಕ್ಕು ಬಾಧ್ಯತೆಗಳನ್ನು ವ್ಯವಸ್ಥೆ ಮಾಡಿ ಬರೆದು ಕೊಡುವ ಪತ್ರಕ್ಕೂ ಮತ್ತು ಮದುವೇ ಕಾಲದಲ್ಲಿ ಗಂಡನು ಹೆಂಡತಿಗೂ (ಮುಸಲ—ಮುಸಲ್ಮಾನರಲ್ಲಿ ಗಂಡನು ಹೆಂಡತಿಗೆ ಮಹರನ್ನು ಗೊತ್ತುಮಾಡುವುದು). ಹೆಂಡತಿಯು ಗಂಡನಿಗೂ ಮದುವೆಯ ಪ್ರತಿಫಲಕ್ಕಾಗಿ ವೊಬಲಗು ಯಾ ಸ್ವತ್ತನ್ನು ಕೊಟ್ಟು ಬರೆದುಕೊಡುವ ಪತ್ರಕ್ಕೂ ಸಹ ಸೆಟಲ್‌ಮೆಂಟ್ ಯಾ ವ್ಯವಸ್ಥಾಪತ್ರವೆಂದು ಹೆಸರು.

ಸೆಟಲ್‌ಮೆಂಟ್, ಯಾ, ವ್ಯವಸ್ಥಾಪತ್ರ.

(೪೩ ನೇ ನಮೂನೆ.)

ಸನ್ ರಲ್ಲು ಸಂಜೀವಯ್ಯನು ಬರೆದ ವ್ಯವಸ್ಥಾಪತ್ರವೇನಂದರೆ—ಕೆಳಗೆ ಷೆಡ್ಯೂಲಿನಲ್ಲಿ ತಪ್ಸೀಲಾಗಿ ವಿವರಿಸಲ್ಪಡುವ ನನ್ನ ಸ್ವಾರ್ಜಿತವಾದ ಸುಮಾರು ೧೦,೦೦೦ ರೂಪಾಯಿ ಬೆಲೆ ಬಾಳುವ ಚರಸ್ಥಿರ ಆಸ್ತಿಗಳು ನನ್ನಲ್ಲಿವೆ. ನನಗೆ ಹನುಮಂತೈಯ್ಯ ತಿಮ್ಮೈಯ್ಯ ಎಂಬಿಬ್ಬರು ಗಂಡು ಮಕ್ಕಳೂ, ಮತ್ತು ಇವರ ಬಲತಾಯಿಯಾದ, ಬೈರಮ್ಮ ಎಂಬ ನನ್ನ ಕಿರೀ

ಹೆಂಡತಿಯೂ ಪುತ್ತು ವಿಧವೆಯಾದ ನನ್ನ ಮನೆಯಲ್ಲೇ ಸೇರಿಕೊಂಡಿರುವ ಚನ್ನಮ್ಮನೆಂಬ ಒಬ್ಬ ಹೆಣ್ಣು ಮಗಳೂ ಸಹ ಇರುತ್ತಾರೆ. ಅಲ್ಲದೆ ನಮ್ಮ ಅಣ್ಣನ ಮಗನಾದ ನನ್ನಿಂದ ಚಿಕ್ಕಂದಿನಿಂದಲೂ ಪೋಷಿತನಾದ ಈರನೆಂಬುವನು ನನ್ನ ಮನೆಯಲ್ಲೇ ಇರುತ್ತಾನೆ. ನಾನು ಈಗ ವೃದ್ಧಾಪ್ಯದ ದೆಸೆಯಲ್ಲಿರುತ್ತೇನೆ. ಆದುದರಿಂದ ನಾನು ಜೀವಂತನಾಗಿರುವಾಗಲೇ ಇವರಿವರಿಗೆ ನನ್ನಿಂದಾಗತಕ್ಕ ಸಹಾಯವನ್ನು ನಿರ್ಧರಿಸಿ ಕೊಡತಕ್ಕುದನ್ನು ಕೊಟ್ಟು ಇವರಿವರು ಮುಂದಕ್ಕೆ ನಿರಾತಂಕವಾಗಿ ಒಬ್ಬರ ತಂಟೆ ಪುತ್ತೊಬ್ಬರಿಗಿಲ್ಲದೆ ಸ್ವತಂತ್ರವಾಗಿ ಜೀವಿಸುವಂತೆ ಮಾಡಬೇಕೆಂಬ ಉದ್ದೇಶದಿಂದ ಈ ಕೆಳಗೆ ವಿವರಿಸುವಂತೆ ವ್ಯವಸ್ಥೆಯನ್ನು ಮಾಡಿರುತ್ತೇನೆ. ಕೆಳಗೆ ಷೆಡ್ಯೂಲಿನಲ್ಲಿ ವಿವರಿಸುವ ೧ನೇ ಐಟಂ ಜಮೀನನ್ನು ನನ್ನ ಹಿರೀ ಮಗನಾದ ಹನುಮಂತೈಯ್ಯನಿಗೂ, ೨ನೇ ಐಟಂ ಜಮೀನನ್ನು ನನ್ನ ಕಿರೀ ಮಗನಾದ ತಿಮ್ಮಯ್ಯನಿಗೂ ೩ನೇ ಐಟಂ ಜಮೀನನ್ನು ನನ್ನ ಅಣ್ಣನ ಮಗನಾದ ಈರನಿಗೂ ಕೊಟ್ಟಿರುತ್ತೇನೆ. ಇವರಿಗೆ ನನ್ನಿಂದ ಇಷ್ಟೇ ಹೊರತು ಮತ್ತೇನೂ ಸೇರತಕ್ಕುದಿಲ್ಲ. ಇವರಿಗೆ ಮೇಲೆ ಕಂಡ ಮೇರೆ ಕೊಡಲ್ಪಟ್ಟಿರುವ ಸ್ವತ್ತನ್ನು ಇವರು ತೆಗೆದುಕೊಂಡು ಈವರೆಗೂ ನಾವು ಒಟ್ಟಿಗೆ ವಾಸಮಾಡುತ್ತಿರುವ ೪ ನೇ ಐಟಂ ಮನೆಯನ್ನು ಬಿಟ್ಟು ಅಲಾಹಿದಾ ತಮ್ಮ ಮನಸ್ಸಿಗೆ ಬಂದಂತೆ ಇದ್ದುಕೊಳ್ಳಬಹುದು. ಸದರಿ ೪ನೇ ಐಟಂ ಮನೆಯನ್ನೂ ಮತ್ತು ಬೆಂಗಳೂರು ಚಿಕ್ಕಪೇಟೆ ಸೊಸೈಟಿ ಬ್ಯಾಂಕಿನಲ್ಲಿ ನಾನು ಡಿಪಾಜಿಟ್ ಇಟ್ಟಿರುವ ೨೦೦ ರೂಪಾಯನ್ನೂ ಸಹ ನಾನೇ ಇಟ್ಟುಕೊಳ್ಳುತ್ತೇನೆ. ಇವುಗಳ ಮೇಲೆ ಇತರರಿಗೆ ಯಾವ ಹಕ್ಕೂ ಇರುವುದಿಲ್ಲ. ಮತ್ತು ೧೯೦೧ ನೇ ಇಸವಿ ಜನವರಿ ೧ನೇ ಮುರ್ಕಂ ಆಧಾರದ ದಸ್ತಾವೇಜಿನ ಮೇಲೆ ಗೋರೀಬಿದನೂರು ಸಾರಣಪ್ಪನವರಿಂದ ನನಗೆ ಸಲ್ಲತಕ್ಕ ಅಸಲು ೨೦೦ ರೂ. ಬಡ್ಡಿ ೨೫ ರೂ. ಜುಮ್ಲಾ ೨೨೫ ರೂಪಾಯಿಗಳು. ಈ ಬಾಬತು ಲೇಣೆಯ ಮೇಲಿನ ಹಕ್ಕು ಬಾಧ್ಯತೆಯನ್ನು ನನ್ನ ಮಗಳಾದ ಸದರಿ ಚನ್ನಮ್ಮನಿಗೆ ವಹಿಸಿ ಕೊಟ್ಟಿರುತ್ತೇನೆ. ಈ ಸಾಲದ ಮೇಲೆ ಮತ್ತಾರಿಗೂ ಹಕ್ಕು ಬಾದ್ಯತೆ ಇರುವುದಿಲ್ಲ. ನನ್ನ ಹೆಂಡತಿ ಬೈರೀಗೆ ನಾನು ಹಾಕಿರುವ ಸುಮಾರು ೫,೦೦೦ ರೂಪಾಯಿ ಬಾಳುವ ನಗಗಳು ಅವಳಿಗೇ ಸೇರತಕ್ಕುದು. ಇವಳು ನನ್ನ ಜೀವಮಾನದವರೆಗೂ ನನ್ನೊಡನೆಯೇ ಇದ್ದುಕೊಂಡು ನನ್ನ ಪೋಷಣೆಯನ್ನು ಮಾಡಬೇಕು. ನನಗೋಸ್ಕರ ನಾನು ಇಟ್ಟುಕೊಂಡಿರುವ ಮನೆ ಮತ್ತು ಡಿಪಾಜಿಟ್ ಮೊಬಲಗು ನನ್ನಿಂದ ಇತರ ವಿಧವಾಗಿ ವ್ಯವಸ್ಥೆ ಮಾಡಲ್ಪಡದೆ ನನ್ನ ಮರಣಾನಂತರ ಉಳಿದ ಪಕ್ಷದಲ್ಲಿ ಅವುಗಳನ್ನು ಅಥವ, ಉಳಿಯುವಷ್ಟನ್ನು ನನ್ನ ಸದರಿ ಇಬ್ಬರು ಮಕ್ಕಳೂ ಸಮ ಹಿಸ್ಸೆ ಮಾಡಿಕೊಂಡು ತೆಗೆದುಕೊಳ್ಳಲು ಹಕ್ಕುಳ್ಳ

ವರಾಗಿದ್ದಾರೆ. ಈ ಮೇರೆ ನಾನು ಮಾಡಿರುವ ವ್ಯವಸ್ಥೆಗೆ ಮೇಲೆ ಕಂಡವರೆಲ್ಲರೂ ಒಪ್ಪಿದುದಕ್ಕೆ ಅವರು ಕೆಳಗೆ ತಮ್ಮ ಸಮ್ಮತಿಯ ರುಜುವನ್ನು ಹಾಕಿರುತ್ತಾರೆ ಎಂಬದಾಗಿ ನನ್ನ ಖುದ್ದು ರಾಜಿಯಿಂದ ನಾನು ಬರೆದುಕೊಟ್ಟ ವ್ಯವಸ್ಥಾ ಪತ್ರ ವಿವರವಾಗಿ ಬರೆಯಬೇಕು. ಷೆಡ್ಯೂಲ್.

ಸಂಜೀವಯ್ಯನ ರುಜು.

ಕೆಳಗೆ ರುಜು ಮಾಡುವ ನಾವುಗಳು ಮೇಲೆ ಕಂಡ ವ್ಯವಸ್ಥೆಗೂ ಮತ್ತು ಸದರಿ ಪತ್ರದಲ್ಲಿ ಕಂಡ ಎಲ್ಲಾ ಷರತ್ತುಗಳಿಗೂ ಸಂಪೂರ್ಣವಾಗಿ ಒಪ್ಪಿರುತ್ತೇವೆ.

ಹನುಮಂತೈಯ್ಯನ ರುಜು. ತಿಮ್ಮೈಯ್ಯನ ರುಜು.
ಈರನ ರುಜು, ಚನ್ನಮ್ಮನ ರುಜು.
ಬೈರಮ್ಮನ ರುಜು.

(ಸಾಕ್ಷಿಗಳ ಮತ್ತು ಲೇಖಕರ ರುಜುಗಳು ೧ನೇ ನಮೂನೆಯಂತೆ)

ನೋಟ್— ಹಿಂದೆ ದಾನ ಟ್ರಸ್ಟುಗಳ ವಿಷಯವಾದ ರೂಲ್ಸುಗಳು ಇಲ್ಲಿಯೂ ಸಂಬಂಧಿಸುತ್ತವೆ.

ಟಿಪ್ಪಣಿ.

ಸ್ಟಾಂಪು—ವ್ಯವಸ್ಥೆಮಾಡಿದ ಸ್ವತ್ತಿನ ಬೆಲೆಯ ಮೇಲೆ ಮೈಸಾಲದ ಪತ್ರದಂತೆ ಲೆಕ್ಕಾಚಾರ ಮಾಡಿ ಸ್ಟಾಂಪು ಹಾಕಬೇಕು. ಈ ವ್ಯವಸ್ಥಾಪತ್ರಕ್ಕೆ ಅನುಸಾರವಾಗಿ ಬೇರೆ ಪತ್ರವನ್ನು ಬರೆಯಬೇಕಾದರೆ, ಆ ಪತ್ರಕ್ಕೆ ೮ ಆಣೆಗಿಂತ ಹೆಚ್ಚು ಸ್ಟಾಂಪು ಅವಶ್ಯವಿಲ್ಲ. ಮಸಲ—ಈ ವ್ಯವಸ್ಥಾಪತ್ರದಲ್ಲಿ ಕಂಡ ಸಂಜೀವಯ್ಯನು ತನ್ನ ಮಗಳಿಗೆ ೪೦೦ ರೂಪಾಯಿನ ಆಧಾರವನ್ನು ಟ್ರಾನ್ಸ್‌ಫರ್ ಮಾಡಿ ಬರೆದುಕೊಡುವ ಟ್ರಾನ್ಸ್‌ಫರ್ ಪತ್ರಕ್ಕೆ ೮ ಆಣೆ ಸ್ಟಾಂಪನ್ನು ಮಾತ್ರ ಕೊಟ್ಟರೆ ಸಾಕು.

ಧರ್ಮಪತ್ರದ ವಿವೇಚನೆ.

ಅನೇಕರು ತಾವು ಸಂಪಾದಿಸಿದ ದ್ರವ್ಯವನ್ನು ಸದ್ವಿನಿಯೋಗ ಮಾಡುವದಕ್ಕೆ ಮಾರ್ಗ ತಿಳಿಯದೆ ಪೇಚಾಡುತ್ತಾರೆ. ಅಂತವರು ತಮ್ಮ ಧರ್ಮವೂ ಶಾಶ್ವತವಾಗಿ ನಡೆಯುವಂತೆ ಸರ್ಕಾರದವರನ್ನಾಗಲಿ ಇತರ ಧರ್ಮಿಷ್ಟರಾದ ೫-೬ ಜನಗಳನ್ನು (ಟ್ರಸ್ಟಿಗಳನ್ನಾಗಿ) ಧರ್ಮಕರ್ತರನ್ನಾಗಿಮಾಡಿ

ಅವರಿಗೆ ಆ ಧರ್ಮವೂ ನಡೆಯುವದಕ್ಕೆ ಬಿಟ್ಟರತಕ್ಕ ಆಸ್ತಿಯನ್ನು ಅವರ ವಶಕ್ಕೆ ಒಪ್ಪಿಸಿ ಅದಕ್ಕಾಗಿ ಅವರಿಗೆ ಒಂದು ಅಧಿಕಾರಪತ್ರವನ್ನು ಬರೆದು ರಿಜಿಷ್ಟರ್ ಮಾಡಿಸಿ ಇಡಬೇಕು. ಅಂತಹ ಟ್ರಸ್ಟ್‌ಪತ್ರದ ನಮೂನೆ ಈ ಕೆಳಗೆ ಬರೆದಂತೆ ಇರಬೇಕು.

ಟ್ರಸ್ಟ್ ಪತ್ರ.

(೪೭ ನೇ ನಮೂನೆ.)

ಸಕ್ ಸಾವಿರದ........ರಲ್ಲು ಬೆಂಗಳೂರು ತಾಲ್ಲೂಕು ಯಶವಂತಪುರದ ಹೋಬಳಿ ಲಗ್ಗೆರೆಯಲ್ಲಿರುವ ಮಾಚೆಗೌಡನು ಯಶವಂತಪುರದ ಪಟೇಲ್ ದೊಡ್ಡಕಾಮರೆಡ್ಡಿಗೂ ನಾಗಶೆಟ್ಟಿಹಳ್ಳಿ ಸಾಹುಕಾರು ವೀರಬಸವಯ್ಯನಿಗೂ, ಗೆದ್ದಲಹಳ್ಳಿಯಲ್ಲಿರುವ ಮೋಗಣಮನೆ ಸಿದ್ದಣ್ಣನವರಿಗೂ, ಹೆಬ್ಬಾಳದ ಗೌರ್ನಮೆಂಟ್‌ಫಾರಂ ಸೂಪರಿಂಟೆಂಡೆಂಟ್ ಮೆ॥ ಡಿ. ಜಿ. ರಾಮಚಂದ್ರರಾಯರಿಗೂ ಮತ್ತು ಬೆಂಗಳೂರು ಚಿಕ್ಕಪೇಟೆಯಲ್ಲಿರುವ ಶ್ರೀ ಗೋಬಾಲಕೃಷ್ಣಸ್ವಾಮಿ ಕೋ-ಆಪರೇಟಿವ್ ಸೊಸೈಟಿ ಸೆಕ್ರೆಟರಿ ಮ॥ ರಾ॥ ಲಾ ಗೆಜಿಟ್ ಎಡಿಟರ್ ಬಿ. ನರಸಿಂಗರಾಯರಿಗೂ ಬರೆದುಕೊಟ್ಟ ಟ್ರಸ್ಟ್‌ಪತ್ರವೇನಂದರೆ— ಅದಾಗಿ ನನ್ನ ಸ್ವಾರ್ಜಿತವಾದ ನನ್ನಸ್ವಾಧೀನಾನುಭವದಲ್ಲಿರುವ ಈ ಕೆಳಗಿನ ಷೆಡ್ಯೂಲಿನಲ್ಲಿ ನಮೂದಿಸುವ ಸುಮಾರು ೧,೦೦೦ ರೂಪಾಯಿಗಳು ಬೆಲೆ ಬಾಳುವ ಜಮೀನಿನಲ್ಲಿ ವರ್ಷಂಪ್ರತಿವರ್ಷವೂ ಹುಟ್ಟತಕ್ಕ ಉತ್ಪತ್ತಿಯಿಂದ ಕೆಳಗೆ ವಿವರಿಸುವ ಧರ್ಮಕಾರ್ಯವನ್ನು ಶಾಶ್ವತವಾಗಿ ನಡೆಯಿಸಲು ನಿಮ್ಮಗಳನ್ನು (ಟ್ರಸ್ಟಿಗಳಾಗಿ) ಈ ಮೂಲಕ ನಿಯಮಿತಿ ಈ ತಾರೀಖಿನಲ್ಲಿ ಸದರಿ ಜಮೀನನ್ನು ನಿಮ್ಮ ಸುಪರ್ದಿಗೆ ಕೊಟ್ಟಿರುತ್ತೇನೆ ಪ್ರತಿವರ್ಷವೂ ನಡೆಯುವ ಬೆಂಗಳೂರು ಧರ್ಮರಾಯನ ಕರಗದ ದಿವಸ ರಾತ್ರೆ ಬೆಂಗಳೂರು ನಗರ್ತಪೇಟೆಯ ಮಧ್ಯದಲ್ಲಿ ಅರವಂಟಿಗೆ ಇಡಿಸಿ ಬಂದಂಥಾ ಯಾತ್ರಿಕರಿಗೆ ಪಾನಕ ನೀರು ಮಜ್ಜಿಗೆ ಹಾಕಿಸಬೇಕು, ಖರ್ಚಿಗಾಗಿ ಎಷ್ಟು ದ್ರವ್ಯಬೇಕೋ ಅಷ್ಟು ದ್ರವ್ಯವು ಈ ಜಮೀನಿನಲ್ಲಿ ಯಾವ ವಿಧವಾಗಿ ಸಾಗುವಳಿಮಾಡಿ ಹ್ಯಾಗೆಹುಟ್ಟಿಸಬೇಕೋ ಎಂಬುವ ಏರ್ಪಾಡನ್ನು ಮಾಡಲು ನೀವು ಸ್ವತಂತ್ರರಾಗಿ

ರುತ್ತೀರಿ. ನಿಮ್ಮಗಳ ಪೈಕಿ ಯಾರೇ ಆಗಲಿ ಟ್ರಸ್ಟಿ ಕೆಲಸ ಯಾವಕಾರಣದಿಂದ ಬಿಟ್ಟಾಗ್ಯೂ ಬಾಕಿಯುವರು ಯೋಗ್ಯರಾದ ಮತ್ತೊಬ್ಬರನ್ನು ಟ್ರಸ್ಟಿಗಳನ್ನಾಗಿ ಆರಿಸಿ ನೇಮಿಸಬೇಕು. ಹೀಗೆ ಈಗ ನಾನು ಮಾಡಿರುವ ಧರ್ಮಕ್ಕೆ ಲೋಪ ಬಾರದಂತೆಯೂ ಅದು ಶಾಶ್ವಿತವಾಗಿ ನಡೆಯುವಂತೆಯೂ ಸದರಿ ಧರ್ಮವನ್ನು ನಡೆಸಿಕೊಂಡು ಬರಬೇಕೆಂದು ನನ್ನ ಬುದ್ಧಿ ಮನೋರಾಜಿಯಿಂದ ಬರೆದುಕೊಟ್ಟ ಟ್ರಸ್ಟ ಪತ್ರ. (ಷೆಡ್ಯೂಲ್ ಮತ್ತು ಚಕ್ಕುಬಂದಿ) ಬರೆದುಕೊಟ್ಟವನ ರುಜು.

ಸಾಕ್ಷಿಗಳು.

೧...............

೨...............

ಬಿಕ್ಕಲಂ.

ಷರಾ.......ಹೀಗೆ ಬರೆದುಕೊಟ್ಟನಂತರ ಸದರಿ ಧರ್ಮವನ್ನು ರದ್ದು ಮಾಡಲಾಗುವದಿಲ್ಲ. ಇನ್ನೂ ಅನೇಕರು ಉತ್ಸವಾದಿಗಳಲ್ಲಿ ಸಂತರ್ಪಣೆಗಳನ್ನು ಮಾಡುವದಕ್ಕೆ ಏರ್ಪಾಡು ಮಾಡುವರು. ಆದರೆ ಈ ಇಂಡಿಯಾ ದೇಶದಲ್ಲಿನ ಶೂದ್ರರಲ್ಲಿ ಅನೇಕರು ವಿದ್ಯವಿಲ್ಲದೆ ಇರುವದರಿಂದ ಧನಿಕರಾದ ಶೂದ್ರರೆಲ್ಲರೂ ಶಕ್ತ್ಯಾನುಸಾರ ಫಂಡನ್ನು ಹಾಕಿ ಶೂದ್ರರಲ್ಲಿ ವಿದ್ಯ ಕಲಿಯುವವರಿಗೆ ಬಹುಮಾನಗಳನ್ನು ಕೊಡುವಂತೆ ಏರ್ಪಾಡುಮಾಡಿ ಇಂಗ್ಲೆಂಡ್ ಅಮೆರಿಕ ಮುಂತಾದ ದೇಶೀಯರಂತೆ ಕೀರ್ತಿ ಪಡೆಯಬೇಕೆಂದು ಸೂಚನೆ.

ವಾರಸಾಗುವಳೀ ಚೀಟಿ.

(೪೮ ನೇ ನಮೂನೆ.)

ಸ.........ರಲ್ಲು...ಕೆಂಪರಂಗಯ್ಯನು...ಬಿ. ನರಶಿಂಗರಾಯರಿಗೆ ಬರೆದುಕೊಟ್ಟ ವಾರಸಾಗುವಳೀ ಚೀಟಿ ಏನಂದರೆ— ಈ ಕೆಳಗೆ ಷೆಡ್ಯೂಲಿನಲ್ಲಿ ವಿವರಿಸುವ ನಿಮ್ಮ ಬಾಬತು ಜಮೀನನ್ನು ನಾನು ಈಲಾಗಾಯಿತು ೬ ವರ್ಷ

ಕ್ಕೆ ವಾರಸಾಗುವಳಿಗೆ ತೆಗೆದುಕೊಂಡಿರುತ್ತೇನೆ. ಮತ್ತು ಸದರಿ ಜಮೀನನ್ನು ಈ ದಿವಸ ನನ್ನ ಸುಫರ್ದಿಗೂ ಸಹ ತೆಗೆದುಕೊಂಡಿರುತ್ತೇನೆ. ಸದರಿ ಜಮೀನಿನಲ್ಲಿ ಆದ ಫಸಲಿನ ಪೈಕಿ, ಅರ್ಧವನ್ನು ವರ್ಷೇ ವರ್ಷೆ ನಿಮಗೆ ಒಕ್ಕಣೆಯಾದ ಕೂಡಲೇ ಕೊಡುತ್ತಾ ಬರುತ್ತೇನೆ! ನಿಮಗೆ ಮೊದಲೇ ತಿಳಿಸಿ ಕಟಾವು ಒಕ್ಕಣೆ ಕೆಲಸಗಳನ್ನು ಮಾಡುತ್ತೇನೆ. ಪಾಯಿದೆಯಾದ ನಂತರ ಕೂಳೇಮೇಲೆ ನಿಮ್ಮ ಜಮೀನನ್ನು ನಿಮ್ಮ ಸುಫರ್ದಿಗೆ ಬಿಟ್ಟುಕೊಡುತ್ತೇನೆ. ಎಂಬದಾಗಿ ನನ್ನ ಖುದ್ದುರಾಜಿಯಿಂದ ಬರಿಸಿಕೊಟ್ಟ ವಾರಸಾಗುಳೀಚೀಟಿ. ಷೆಡ್ಯೂಲ್ ಜಮೀನಿನ ಚಕ್ಕುಬಂದಿ ಸಹ ೧ ನೆಯ ನಮೂನೆಗಿರುವಂತೆ.

ಅಧಿಕಾರಪತ್ರ, ಯಾ, ಪವರ್ ಆಫ್ ಅಟರ್ನಿ.

ಯಾವದಾದರೂ ಒಂದು ಕಾರ್ಯವನ್ನು ಮಾಡಲು ತಮಗೆ ಬದಲಾಗಿ ಮತ್ತೊಬ್ಬರನ್ನು ನೇಮಿಸಬೇಕಾದಾಗಲೂ, ಒಂದು ಮಠ, ಗ್ರಾಮ, ಛತ್ರ ದೇವಾಲಯ ಮುಂತಾದವುಗಳ ಕಾರುಬಾರನ್ನು ನಡೆಸುವದಕ್ಕೆ ವಹಿಸಿದಾಗಲೂ ಒಂದು ಮೊಕದ್ದಮೆಯಲ್ಲಿ ತಮಗೆ ಬದಲಾಗಿ ಇತರರು ನಿಂತು ವ್ಯಾಜ್ಯ ನಡೆಸಲು ಅಧಿಕಾರ ಕೊಡುವ ಕಾಲದಲ್ಲಿಯೂ ಅದಿಕಾರಪತ್ರಗಳನ್ನು ಕೊಡುವದುಂಟು. ಇಂಥಾ ಪತ್ರಗಳಿಗೆ ಪವರ್ ಆಫ್ ಅಟರ್ನಿ ಎಂದು ಹೆಸರು. ವಿಶೇಷ ಸಂದರ್ಭಗಳಲ್ಲಿ ಸ್ಪೆಷಲ್ ಪವರ್ ಆಫ್ ಅಟ್ಟರ್ನಿ ಎಂತಲೂ ಸಾಧಾರಣವಾಗಿ ಅನೇಕ ಕೆಲಸಗಳನ್ನು ನಡೆಸುವದಕ್ಕಾಗಿ ಜನರಲ್ ಪವರ್ ಆಫ್ ಅಟ್ಟರ್ನಿ ಎಂತಲೂ ಹೆಸರು. ಇಂಥಾ ಅಧಿಕಾರಪತ್ರಗಳು ಬರೆದು ರಿಜಿಸ್ಟರ್ ಆದ ನಂತರ ನಡೆದ ಕೆಲಸಗಳಲ್ಲಿ ಉಂಟಾಗುವ ಆದಾಯ ನಷ್ಟಗಳಿಗೆ ಅಧಿಕಾರ ಪತ್ರ ಬರೆದು ಕೊಟ್ಟವನು ಜವಾಬದಾರನಾಗಲಾರನು.

ಸ್ಪೆಷಲ್ ಪವರ್ ಆಫ್ ಅಟರ್ನಿ.

(೪೯ ನೇ ನಮೂನೆ)

ಸಕ ರಲ್ಲು ಚಿಕ್ಕಬಳ್ಳಾಪುರದ ಕೋಗಿಲೆ ಸುಬ್ಬರಡ್ಡಿಯು ಇದೇ ಚಿಕ್ಕಬಳ್ಳಾಪುರದ ಕಂದವಾರದ ಪೇಟೆಯಲ್ಲಿರುವ ಚೆಂಚುರಡ್ಡಿ ಮಗ ತಿರುಮಲರಡ್ಡಿಗೆ ಬರೆದುಕೊಟ್ಟ ಸ್ಪೆಷಲ್ ಪವರ್ ಆಫ್ ಅಟರ್ನಿ ತಪಶೀಲು ಏನಂದರೆ—ಇದೇ ಚಿಕ್ಕಬಳ್ಳಾಪುರದ ತಾಲ್ಲೂಕು ಮಂಚನಬೆಲೆ ಬಳಿ ಕತ್ತರಿಗುಪ್ಪೆ ಗ್ರಾಮದಲ್ಲಿ ನನ್ನ ಅನುಭವದಲ್ಲಿರುವ ಅದೇ ಗ್ರಾಮದ

ಸರ್ವೆ ನಂಬರು ೨೮ನೇ ನಂಬರು ಖುಷ್ಕಿ ಗುಟ್ಟೆ ಹೊಲವನ್ನು ನೀನು ನನಿ ಗೋಸ್ಕರ ಯಾರಿಗಾದರೂ ವಾಜಬಿ ಕ್ರಯಕ್ಕೆ ಮಾರಿ ಇದೇ ಚಿಕ್ಕಬಳ್ಳಾಪುರ ದ ಜವಳಿ ಅಂಗಡಿ ತಲ್ಲಂ ರಾಮುಶೆಟ್ಟರಿಗೆ ಕೊಡತಕ್ಕ ಸಾಲವನ್ನು ಪಾವತಿ ಮಾಡಲು ಈ ಮೂಲಕ ಅಧಿಕಾರ ಕೊಟ್ಟಿರುತ್ತೇನೆ (ಪತ್ರ ರಿಜಸ್ಟರು ಮಾಡಿಸುವ ಸಂದರ್ಭದಲ್ಲಿ) ಸದರಿ ಪತ್ರವನ್ನು ಬರೆದು ಕೊಟ್ಟ ಪತ್ರ ರಿಜ ಸ್ಟರು ಮಾಡಿಸಿ ಕೊಡಲು ಇದರಿಂದ ಅಧಿಕಾರ ವಹಿಸಿರುತ್ತೇನೆ.

ತಾ॥............... ರುಜು.

ಸಾಕ್ಷಿಗಳು

೧.....................

೨.....................

ಬಿಕ್ಕಲಂ.

ಫಾರಿಖತ್ತು ಪತ್ರ ೨ನೆ ವಿಧ.

(೫೦ ನೇ ನಮೂನೆ.)

ಸರ್ ರಲ್ಲು ಚೆನ್ನರಾಯಪಟ್ಟದ ತಾಲ್ಲೂಕು ಹೋಬಳಿ ಗ್ರಾಮದ ಪಟೇಲು ಗುರು ಲಿಂಗೇ ಗೌಡನ ಮಕ್ಕಳು ೧ನೇ ಜೇಷ್ಟ ಪುತ್ರ ಶಿದ್ದೇ ಗೌಡ, ೨ನೇ ರಾಮ ಶಿದ್ದೇ ಗೌಡ, ೩ನೇ ತಿಮ್ಮರಾ ಯ ಗೌಡ, ಈ ಮೂವರೂ ನಮ್ಮ ನಮ್ಮಲ್ಲಿ ವಿಭಾಗ ಮಾಡಿಕೊಂಡ ಪಾರೀಖತ್ತು ವಿವರ—ನಮ್ಮ ತಂದೆ ಗುರುಲಿಂಗೇ ಗೌಡನ ಪಿತರಾರ್ಜಿತ ಮತ್ತು ಸ್ವಾರ್ಜಿತದ ಆಸ್ತಿಯನ್ನು ಈ ಕೆಳಗೆ ಷೆಡ್ಯೂಲಿನಲ್ಲಿ ಕಂಡಂತೆ ವಿಭಾಗ ಮಾಡಿಕೊಂಡು ಸದರಿ ಸ್ವತ್ತುಗಳನ್ನು ನಮ್ಮ ನಮ್ಮ ಸ್ವಾಧೀನ ಕ್ಕೆ ತೆಗೆದುಕೊಂಡು ಇದ್ದೇವೆ. ನಮ್ಮ ತಂದೆ ಇನ್ನೂ ಕೆಲವು ಕಾಲ ಜೀವಂತನಾಗಿರುವದ್ದರಿಂದ ಇವನ ಜೀವನಕ್ಕೆ ಪ್ರತ್ಯೇಕವಾಗಿ ಅವನ ಸ್ವಾರ್ಜಿತವಾದ ಕಟ್ಟೇ ಹೊಲವನ್ನು ಹಳ್ಳದ ಗದ್ದೆಯನ್ನೂ ಅವನ ಜೀವನ

ಕ್ಕಾಗಿ ಬಿಟ್ಟಿದೆ. ಇದು ಶಿವಾಯಿ ಪಾತ್ರೆ, ಪಡಗು, ಕಂಚು, ಮರಮುಟ್ಟು ಪಂಚ ಲೋಹದ ಸಾಮಾನುಗಳನ್ನು ನಮ್ಮ ತಂದೆಯವರ ಸಂಸಾರಕ್ಕೆ ಕೊಟ್ಟದ್ದು ಜಾತಾ ಮೂರು ಪಾಲು ಮಾಡಿ ನಾವುಗಳು ಒಬ್ಬೊಬ್ಬರು ಒಂದೊಂದು ಪಾಲನ್ನು ತೆಗೆದುಕೊಂಡು ಇದ್ದೇವೆ. ಶಿವಾಯಿ ಜೀವರಾಸುಗಳಲ್ಲಿ ಮೂರು ಜೊತೆ ಎತ್ತುಗಳ ಪೈಕಿ ಒಬ್ಬೊಬ್ಬರು ಒಂದೊಂದು ಜೊತೆ ಎತ್ತುಗಳು ತೆಗೆದುಕೊಂಡು ಇಥೇವೆ. ಮತ್ತು ಎಮ್ಮೆ, ಹಸು ಕರುಗಳು ೮ ಜೀವರಾಶಿಗಳು ಇದ್ದುದ್ದಕ್ಕೆ ಒಂದು ಎಮ್ಮೆಯನ್ನೂ ಒಂದು ಕರೆಯುವ ಹಸುವನ್ನೂ ನಮ್ಮ ತಂದೆಗೆ ಕೊಟ್ಟು ಬಾಕಿ ೬ದನಗಳನ್ನು ಮೂರು ಭಾಗಗಳನ್ನು ಮಾಡಿ ತಲಾ ಎರಡೆರಡು ರಾಸುಗಳನ್ನು ಒಬ್ಬೊಬ್ಬರು ತೆಗೆದುಕೊಂಡು ಇದ್ದೇವೆ. ನಮ್ಮ ತಂದೆ ಜೀವನಕ್ಕಾಗಿ ಕೊಟ್ಟರತಕ್ಕ ಹೊಲ ಗದ್ದೆ, ದನಗಳನ್ನು ನಮ್ಮ ತಂದೆ ಕಾಲವಾದ ನಂತರ ನಮ್ಮ ಮನೆ ದೇವರಾದ ಸುಗ್ಗನಹಳ್ಳಿ ನರಸಿಂಹಸ್ವಾಮಿ ದೇವಸ್ಥಾನಕ್ಕೆ ಧರ್ಮಾರ್ಥವಾಗಿ ಕೊಡಬೇಕೆಂದು ನಮ್ಮ ತಂದೆ ಮತ್ತು ಈ ಕೆಳಗೆ ರುಜು ಹಾಕಿರುವ ಪಂಚಾಯಿತರು ಗೊತ್ತುಮಾಡಿದಂತೆ ಕೊಟ್ಟುಬಿಡತಕ್ಕುದು. ಇದು ಶಿವಾಯಿ ನಮ್ಮ ತಂದೆಯ ಸ್ವಾರ್ಜಿತವಾದ ಆಸ್ತಿಯು ಮತ್ಯಾವದೂ ಇಲ್ಲ. ಇನ್ನು ಮುಂದೆ ನಮ್ಮ ನಮ್ಮಗಳಿಗೆ ದೇಹಸಂಬಂದವೇ ಹೊರತು ಅರ್ಥಸಂಬಂದವೇನೂ ಇರುವದಿಲ್ಲವೆಂದು ನಮ್ಮ ನಮ್ಮಗಳ ಖುದ್ದು ರಾಜಿಯಿಂದ ಬರೆದ ಪಾರೀಖತ್ತು ಪತ್ರ ಸಹಿ.

ಷೆಡ್ಯೂಲ್.

1ನೆ ಜೇಷ್ಟ ಪುತ್ರ ಸಿದ್ದೇಗೌಡನಿಗೆ ಊರು ಮುಂದಣ ಹೊಲದಲ್ಲಿ ಉತ್ತರ ಕಡೆ ಮೂರರಲ್ಲಿ ೧ ಹಿಸ್ಸೆ ಸುಮಾರು ೨ ಎಕರೆ, ೮ ಗುಂಟೆ ಆಕಾರ ೨೫ ರೂಪಾ ೩ ೬ ಆಣೆ ಉಳ್ಳ ತರಿ ಗದ್ದೆ ಮತ್ತು ಊರುಮುಂದಣ ಕೆಂಪಯ್ಯನ ಭಾವಿ ಬಳಿ ಸೊಪ್ಪಿನ ತೋಟದಲ್ಲಿ ಮೊದಲನೇ ತಾಕು ಪೂರ್ವ ಪಶ್ಚಿಮ ೨೬ ಗಜ ಉತ್ತರ ದಕ್ಷಿಣ ೧೦ ಗಜವುಳ್ಳ ಸೊಪ್ಪಿನ ತೋಟ ಮತ್ತು ಕೆರೆ ಕೆಳಗಿನ ವಿಳ್ಳೆದೆಲೆ ಅಡಿಕೆ ತೋಟದಲ್ಲಿ ಮೂರರಲ್ಲಿ ೧ ಹಿಸ್ಸೆ ಸುಮಾರು ೩೦ ಗುಂಟೆ ಅಕಾರ ೯ ರೂಪಾಯಿ ಉಳ್ಳದ್ದು. ೨ನೇ ಮಗ ರಾಮಸಿದ್ದೈಯ್ಯನಿಗೆ ಡಿಟೋ ಊರು ಮುಂದಣ ಹೊಲದಲ್ಲಿ ಜೇಷ್ಟಪುತ್ರ ಸಿದ್ದೇಗೌಡನ ಪಾಲಿಗೆ ಹೋದದ್ದು ಜಾತಾ ಎರಡು ಭಾಗಧಲ್ಲಿ ಒಂದು ಭಾಗದಲ್ಲಿ ಒಂದು ಭಾಗ ಹೊಲವು ಗುಣಿಗದ್ದೆಯಲ್ಲಿ ಇದೇ ಮೇರಿಗೆ ಮೂರರಲ್ಲಿ ೧ ಹಿಸ್ಸೆ ಕಬ್ಬಿನ ತೋಟಮತ್ತು ಆನೆ ಚನ್ನನ ಗದ್ದೆಯಲ್ಲಿ ಸುಮಾರು ೪ ಎಕರೆ ೮ ಗುಂಟೆ, ಆಕಾರ ೨೫ ರೂಪಾಯಿ ಆರಾಣೆವುಳ್ಳ ತರಿ ಗದ್ದೆ ಮ

ತ್ತು ಊರುಮುಂದಣ ಸೊಪ್ಪಿನ ತೋಟದಲ್ಲಿ ೨ನೇ ತಾಕು ಪೂರ್ವ ಪಶ್ಚಿಮ ೨೬ ಗಜ ಉತ್ತರದಕ್ಷಿಣ ೧೧ ಗಜ ಉಳ್ಳ ಸೊಪ್ಪಿನ ತೋಟ, ಮತ್ತು ಈ ಊರು ಕೆರೆಕೆಳಗಿನ ವೀಳ್ಯೆದೆಲೆ ಅಡಿಕೆ ತೋಟದಲ್ಲಿ ಮೂರರಲ್ಲಿ ೧ಹಸ್ಸೆ ಸುಮಾರು ೩೦ ಗುಂಟೆ ಆಕಾರ ೯ ರೂಪಾಯಿ ಉಳ್ಳ ತೋಟ ೧. ೩ನೇ ತಿಮ್ಮರಾಯ ಗೌಡನಿಗೆ ಮೇಲ್ಕಂಡ ೧-೨ ನೇ ಯವರಿಗೆ ಕೊಟ್ಟದ್ದು ಜಾತ ಉಳಿದ ೩ನೇ ಹಿಸ್ಸೆ ಹೊಲ, ಗದ್ದೆ, ತೋಟ. ಸೊಪ್ಪಿನ ತೋಟವನ್ನು ಸಮವಾಗಿ ಪಂಚಾಯಿತರ ಮೊಕ್ತಾ ಅಳತೆ ಮಾಡಿ ಹಂಚಿಕೆ ಮಾಡಲ್ಪಟ್ಟದ್ದು.

ವಿವೇಚನೆ—ಮೇಲ್ಕಂಡ ಫಾರೀಖತ್ತು ೩ ಮಂದಿ ಗಂಡು ಮಕ್ಕಳು ವಿಭಾಗ ಮಾಡಿಕೊಂಡು ಜೀವಂತನಾಗಿರುವ ತಂದೆಗೆ ಜೀವನಾಂಶಕ್ಕೆ ಕೆಲವು ಸ್ವತ್ತುಗಳು ಬಿಟ್ಟವೆ. ಅವನ ಕಾಲಾನಂತರ ಆ ಸ್ವತ್ತುಗಳು ಪಾರೀಖತ್ತಿನಲ್ಲಿ ನಮೂದಾಗಿರುವ ಧರ್ಮ ಕೆಲಸಕ್ಕಾಗಿ ಬಿಟ್ಟದೆ.

ವಿವೇಚನೆ—ಈ ರೀತಿ ಮೂರು ಮಕ್ಕಳಿಲ್ಲದೆ ಇನ್ನೂ ೪-೫ ಜನ ಗಂಡು ಮಕ್ಕಳೂ ಇಬ್ಬರು ಮತ್ತು ಜಾಸ್ತಿ ಹೆಣ್ಣು ಮಕ್ಕಳು ಇದ್ದು ಅವರಿಗೆ ಜೀವನಾಂಶ ಅಥವ ದಾನ ವಗೈರೆ ಕೊಡುವ ಸಂದರ್ಭದಲ್ಲಿ ಆ ತಪಶೀಲುಗಳನ್ನೆಲ್ಲಾ ವಿವರಿಸಬೇಕು.

ಸಿದ್ದೇಗೌಡನ ರುಜು.
ರಾಮಸಿದ್ದೈಯ್ಯನ ರುಜು.
ತಿಮ್ಮರಾಯನ ರುಜು.

ಸಾಕ್ಷಿಗಳು

೧ ....

೨ ....

ಬಿಕ್ಕಲಂ.

ಸ್ಟಾಂಪು—ಕಡೇಪಕ್ಷ ೧೦ ರೂಪಾಯಿನಿಂದ ಸ್ವತ್ತಿನ ಬೆಲೆಮೇಲೆ.

ವಿಶೇಷವಾದ ಸ್ಪೆಷಲ್ ಸಿವಿಲ್.

ಅವರವರಿಗೆ ಅನುಕೂಲವಾದ ಹಾಗೆ ಸಂದರ್ಭಾನುಸಾರವಾಗಿ ಹೆಸರುಗಳನ್ನು ಹಣದ ಸಂಖ್ಯೆಯನ್ನು ಬದಲಾಯಿಸಿ ದಾವಾ ಅರ್ಜಿಗಳು ಬರೆಯತಕ್ಕ ನಮೂನೆ.

ಬೆಂಗಳೂರು ಕೋರ್ಟಿನಲ್ಲಿ

192 192 ನೇ O. S. C. ನಂ.

ವಾದಿ.

ಇಲ್ಲಿ ವಾದಿ ಹೆಸರು ಬರೆಯಬೇಕು.

ಪ್ರತಿವಾದಿ.

ಇಲ್ಲಿ ಪ್ರತಿವಾದಿ ಹೆಸರು ಬರೆಯಬೇಕು.

C. P. C. ಆರ್ಡರ್ 7 ರೂಲ್ 1 ರ ಪ್ರಕಾರ ವಾದಿ ದಾವಾ ಏನಂದರೆ—

1. ಶೇಕಡ ಮಾಹೇಯಾನಾ ಪ್ರಕಾರ ಬಡ್ಡಿನಿಶಿ ಅಸಲು ಮೊಬಲಗನ್ನು ಗಳಲ್ಲಿ ಪಾವತಿ ಮಾಡುವದಾಗಿಯೂ ತಪ್ಪಿದರೆ ಶೇಕಡ ಮಾಹೆಯಾನ ಪ್ರಕಾರ ಬಡ್ಡಿಯನ್ನು ಕೊಡುವದಾಗಿಯೂ ಒಪ್ಪಿ ವಾದಿ ಬಳಿ ಪ್ರತಿವಾದಿ ಸಾಲವಾಗಿ ಗಳನ್ನು ತೆಗೆದುಕೊಂಡು ಇದರೊಡನೆ ಹಾಜರ್ಮಾಡಿರುವ ನ್ನು ಲ್ಲಿ ಬರೆದುಕೊಟ್ಟರುತ್ತಾ

2. ಇದರ ಬಡ್ಡಿಗಾಗಿ ಪ್ರತಿವಾದಿ

3. ಅನೇಕಾವರ್ತಿ ತಗಾದೆ ಮಾಡಿದಾಗ್ಯೂ ಪ್ರತಿವಾದಿ ವಸೂಲ್ ಬಂದಿರುವದಿಲ್ಲ ದ

4. ಈ ದಾವಾಕ್ಕೆ ಲಾಗಾಯಿತು ವ್ಯಾಜ್ಯಕಾರಣ ಉಂಟಾಗಿರುತ್ತೆ.

5. ಜೂರಿಸ್‌ಡಿಕ್‌ಷನ್ ಮತ್ತು ಕೋರ್ಟುಫೀ ಗೋಸ್ಕರ ಈ ದಾವಾ ಕಿಮ್ಮತು ಗಳಾಗಿರುತ್ತೆ. ಇದಕ್ಕಾಗಿ ಸ್ಟಾಂಪು ಕೊಟ್ಟಿದೆ.

6. ಆದಕಾರಣ ಪ್ರತಿವಾದಿ ಬರತಕ್ಕ ಅಸಲು ಬಡ್ಡಿ ಶೇಕಡ ಮಾಹೇಯಾನ ಪ್ರಕಾರ

ಜುಮ್ಲಾ

ಈ ಮೊಬಲಗು, ಕೋರ್ಟುಖರ್ಚು, ಚಾಲ್ತಿಬಡ್ಡಿ ಮತ್ತು ಕೋರ್ಟಿನವರಿಗೆ ಯುಕ್ತತೋರುವ ಇತರ ಪರಿಹಾರ ಸಹ ಪ್ರತಿವಾದಿ

ವಾದಿ ಗೆ ಸಲ್ಲುವಂತೆ ಜಡ್ಜ್‌ಮೆಂಟನ್ನು ಅಪ್ಪಣೆ ಕೊಡಿಸಬೇಕಾಗಿ ಪ್ರಾರ್ಥನೆ.

ಇದರಲ್ಲಿ ಬರೆದಿರುವದೆಲ್ಲಾ ವಾದಿ ದ ನ ಗೆ ತಿಳಿದು ನಂಬಿಕೆ ಇರುವ ಮಟ್ಟಿಗೂ ನಿಜವಾದ್ದೆಂತ ಬೆಂಗಳೂರಲ್ಲಿ ಸತ್ಯವಾಗಿ ಹೇಳುತ್ತೇ

ಹಿಂದೂ ಲಾ (ಅಥವಾ ಹಿಂದೂ ಧರ್ಮಶಾಸ್ತ್ರ)

ಹಿಂದೂ ಧರ್ಮಶಾಸ್ತ್ರದ ಮೂಲ—ಈ ಧರ್ಮಶಾಸ್ತ್ರವು ಅನಾದಿಯುಲ್ಲಿ ರುಷಿಗಳಿಂದ ಪ್ರಣೀತವಾದುದು. ಹಿಂದೂ ದೇಶವು ಹಿಮಾಚಲದಿಂದ ರಾಮೇಶ್ವರ ಕನ್ಯಾಕುಮಾರಿವರೆಗೂ ಆವರಿಸಿಕೊಂಡಿರುವದು. ಅನಾದಿಯಲ್ಲಿ ರುಷಿಗಳು ಮತ್ತು ಈಗಿರುವ ಹಿಂದೂ ಜನಗಳೆಲ್ಲರೂ ಈ ದೇಶದಲ್ಲಿ ವಾಸವಾಗಿರಲಿಲ್ಲವು. ರುಷಿಗಳು ಮತ್ತು ಕೆಲವರು ಹಿಂದೂ ದೇಶಕ್ಕೆ ಪಶ್ಚಿಮೋತ್ತರ ಪ್ರಾಂತ್ಯದಿಂದ ಬಂದರು. ಇವರು ಬಂದು ಶೇರುವದಕ್ಕೆ ಮೊದಲು ಈ ಜೀಶವು ದಂಡಕಾರಣ್ಯವಾಗಿತ್ತು. ಇಲ್ಲಿಗೆ ರುಷಿಗಳು ಬಂದನಂತರ ದಶರಥರಾಯನ ಆಳ್ವಿಕೆಯಲ್ಲಿ ಶ್ರೀರಾಮರು ಲಂಕಾನಗರಕ್ಕೆ ಹೋಗಿ ರಾವಣನನ್ನು ಸಂಹಾರ ಮಾಡಿದಾಗ ಇವರ ಪ್ರಾಬಲ್ಯವು ಬಹಳವಾಗಿದ್ದುದರಿಂದ ಈ ಭೂಮಿಗೆ ರಾಮಕ್ಷೇತ್ರವೆಂದು ಹೆಸರಾಯಿತು ಈ ಹಿಂದೂ ಲಾ ಈ ದೇಶದಲ್ಲ ಮಾತ್ರ ಜಾರಿಯಲ್ಲಿರುವದು. ಈ ಹಿಂದೂ (ಲಾ) ಧರ್ಮಶಾಸ್ತ್ರವು ಅನಾದಿಯುಲ್ಲಿ ಪೂರ್ವದ ಅನುಭವ ಸಿದ್ಧರಾದ ರುಷಿಗಳಿಂದ ನಿಷ್ಕರ್ಷಿಸಲ್ಪಟ್ಟು ಈಗಿನ ಬ್ರಿಟಿಷ್ ಸರ್ಕಾರದವರು ಸಹಾ ಅದನ್ನೇ ಅನುಮೋದಿಸಿ ಮದ್ರಾಸ್, ಬೊಂಬಾಯಿ, ಕಲ್‌ಕತ್ತಾ, ಅಲಹಾಬಾದ್

ಮೈಸೂರು ಮುಂತಾದ ಹೈ ಕೋರ್ಟುಗಳಲ್ಲಿ ಜಾರಿಯಲ್ಲಿಟ್ಟುಕೊಂಡು ಅದರಂತೆ ಅನೇಕ ಮೊಕದ್ದಮೆಗಳನ್ನು ತೀರ್ಮಾನಮಾಡಿ ಆ ತೀರ್ಮಾನಗಳನ್ನು ಪ್ರಮಾಣವಾಗಿಟ್ಟುಕೊಂಡು ಅವುಗಳನ್ನೆಲ್ಲಾ ಲಾ ರಿಪೋರ್ಟುಗಳಲ್ಲಿ ಅಚ್ಚು ಹಾಕಿ ಸಿದ್ಧಾಂತವಾಗಿಟ್ಟುಕೊಂಡಿರುವರು. ಈ ತೀರ್ಮಾನಗಳೇ ಮುಂದೆಯೂ ಪ್ರಮಾಣಗಳಾಗಿ ನಿಲ್ಲುವವು. ಈ ಪ್ರಮಾಣಗಳನ್ನನುಸರಿಸಿಯೇ ನಾವು ಈ ಪುಸ್ತಕದಲ್ಲಿ ಹಿಂದೂ ಜನಗಳಿಗೆ ಅವಶ್ಯಕವಾದ ದಾಯಭಾಗ, ದತ್ತುಸ್ವೀಕಾರ, ಮರಣಶಾಸನ ಮುಂತಾದ ಕಾನೂನುಗಳನ್ನು ಅಚ್ಚು ಹಾಕಿ ಪ್ರಕಟಿಸಿರುವೆವು.

ಹಿಂದೂ ಧರ್ಮಶಾಸ್ತ್ರವು ಪೂರ್ವದ ಋಷಿಗಳಿಂದ ಬರೆಯಲ್ಪಟ್ಟಿದ್ದಾಗ್ಯೂ ಈಗಿನ ಆಂಗ್ಲೇಯ ವಿದ್ವಾಂಸರಲ್ಲಿ ಜಾರ್ಜಿ ಮೆಯಿರ್ಣರವರು, ಸರ್ ಥಾಮಸ್ ಸ್ಟ್ರೇಂಜ್‌ರವರು ಅನೇಕ ಪೂರ್ವ ಗ್ರಂಥಗಳಿಂದ ಹುಡುಕಿ ತರ್ಜುಮೆ ಮಾಡಲ್ಪಟ್ಟ ಹಿಂದೂ ಲಾ ಎಂಬ ಗ್ರಂಥಗಳ ಆಧಾರದಿಂದಲೂ ಈಚೆಗೆ ಅನೇಕ ಸಿವಿಲ್ ಕೋರ್ಟುಗಳಲ್ಲಿ ಫೈಸಲಾದ ಹಿಂದು ಲಾ ಸಮ್ಮಂಧವಾದ ತೀರ್ಮಾನಗಳೇ ಈಗಲೂ ಈ ಮುಂದೆಯೂ ವೇದಪ್ರಮಾಣಗಳಂತೆ ಪರಿಗಣಿಸಲ್ಪಡಬೇಕಾಗಿರುವದು. ಪೂರ್ವದಲ್ಲಿ ಮನುಷ್ಯನು ಆಚರಿಸಬೇಕಾದ ಪ್ರತಿಯೊಂದು ಕಾರ್ಯಕ್ಕೂ ಒಂದು ಶಾಸ್ತ್ರವನ್ನು ಮಾಡುತ್ತಿದ್ದರು. ಆ ಶಾಸ್ತ್ರವನ್ನೇ ಅನುಸರಿಸಿ ಈಗಲೂ ನಡೆದರೆ ಸುಖ ಹೆಚ್ಚು. ಈಗಿನ ಕಾಲದಲ್ಲಿ ಮಕ್ಕಳು ಹುಟ್ಟಿದರೂ ಸತ್ತರೂ ಜನನ ಮರಣದ ರಿಜಿಸ್ಟರಿಗೆ ದಾಖಲ್ಮಾಡುವ ಪದ್ಧತಿ ಇಟ್ಟಿರುವರು. ಪೂರ್ವದವರು ಮಕ್ಕಳು ಹುಟ್ಟಿದ ಕೂಡಲೆ ಹುಟ್ಟಿದ ಸಂವತ್ಸರ, ತಿಂಗಳು, ತಿಥಿ. ವಾರ. ನಕ್ಷತ್ರಗಳೊಂದಿಗೆ ಜಾತಕವನ್ನು ಬರೆಯುವ ಪದ್ಧತಿ ಇಟ್ಟಿದ್ದರು. ಈಗಲೂ ಅನೇಕ ಹಿಂದೂಗಳು ಅದನ್ನೇ ಅನುಸರಿಸುತ್ತಿರುವರು, ಈ ಜಾತಕಗಳನ್ನೇ ಉಪನಯನ, ವಿವಾಹ ನೌಕರಿಗಳ ಸರ್ವಿಸ್ ಮುಂತಾದವುಗಳಿಗೆ ಆಧಾರವಾಗಿಟ್ಟುಕೊಂಡಿರುವರು. ಇದರಂತೆಯೇ ಈಗಿನ ಪ್ರವೀಣರುಗಳು ವಿವೇಕಿಗಳು ಪ್ರತಿಯೊಂದೊಂದಕ್ಕೂ ಒಂದೊಂದು ಶಾಸ್ತ್ರವನ್ನು ಮಾಡಿಕೊಂಡಿರುವರು. ಶಾಸ್ತ್ರವೆಂದರೆ ಅನುಭವದಿಂದಲೂ ಪರೀಕ್ಷೆಗಳಿಂದಲೂ ಶಿದ್ಧಾಂತವಾದುದೇ ಶಾಸ್ತ್ರವತ್ತಾಗಿ ಮಾಡಿದರೆ ವ್ಯತ್ಯಾಸವಿಲ್ಲದೆ ನೆರವೇರುವದು. ನಮ್ಮ ಭರತಖಂಡವೂ ಬ್ರಿಟಿಷ್‌ನವರ ಆಳ್ವಿಕೆಗೆ ಒಳಪಟ್ಟಿದ್ದಾಗ್ಯೂ ದಾಯಭಾಗ, ವಾರಸು, ವಿವಾಹ ಮತ್ತು ಜಾತಿ ಕುಲ ಮತಸಮ್ಮಂಧವಾದ ಮೊಕದ್ದಮೆಗಳಲ್ಲಿ ಫೈಸಲ್ ಕೊಡಬೇಕಾದರೆ ಹಿಂದೂಗಳ ವಿಷಯದಲ್ಲ ಹಿಂದೂ ಧರ್ಮಶಾಸ್ತ್ರದಂತೆಯೂ ಮುಹಮ್ಮದೀಯರ ವಿಷಯಗಳಲ್ಲಿ ಮುಹಮ್ಮದೀ

ಯರ ಲಾ ಪ್ರಕಾರವೂ ಅವರವರ ನ್ಯಾಯವನ್ನು ನಡೆಸತಕ್ಕದ್ದೆಂದು ತೀರ್ಮಾನಿಸಿರುತ್ತಾರೆ. ಆದುದರಿಂದ ಒದು ಬರಹಬಲ್ಲ. ಸಮಸ್ತ ಹಿಂದೂಗಳು ತಾವು ತಾವು ನಡೆದುಕೊಳ ಬೇಕಾದ ನ್ಯಾಯವನ್ನು ತಿಳಿದುಕೊಂಡಿದ್ದ (ಕೋರ್ಟು)ನ್ಯಾಯಸ್ಥಾನಗಳಿಗೆ ಹೋಗುವದು ಕಡಿಮೆಯಾಗುವದು.

ಸ್ಮೃತಿಗಳ ಆಧಾರ— ಸ್ಮೃತಿಕರ್ತರು ಮುಂತಾದವರೆಲ್ಲರೂ ಕಾಲಬಂದಾಗೆಲ್ಲ ವೇದಗಳೇ ಸಕಲವಾದ ಆಚಾರ ವ್ಯವಹಾರಗಳಿಗೂ ಮುಖ್ಯವಾದ ಪ್ರಮಾಣಗಳೆಂದು ಹೇಳುತ್ತಾರೆ. ಆದಾಗ್ಯೂ ವ್ಯವಹಾರಕ್ಕೆ ಉಪಯೋಗವಾಗತಕ್ಕ ಅಂಶಗಳು ವೇದದಲ್ಲಿ ಹೇಳಿರುವವು ಬಹಳ ಕಡಿಮೆಯಾಗಿವೆ. ಮನುಸ್ಮೃತಿ, ಯಾಜ್ಞವಲ್ಕ್ಯಸ್ಮೃತಿ ಎಂಬೆರಡು ಮುಖ್ಯವಾದ ಮೂಲ ಸ್ಮೃತಿಗಳು. ಇವಲ್ಲದೆ ನಾರದ, ವಶಿಷ್ಟ, ಆಪಸ್ತಂಬ, ಗೌತಮ, ಕಾತ್ಯಾಯನ, ಬೃಹಸ್ಪತಿ, ಯಮ, ಆಂಗೀರಸ. ಅತ್ರಿ, ದಕ್ಷ, ದೇವಲ, ಶಾಂಡಿಲ್ಯ, ಪ್ರಜಾಪತಿ, ಶಂಖ, ಲಿಖಿತ, ವ್ಯಾಸ, ಪರಾಶರ ಮುಂತಾದವರ ಹೆಸರಿನಲ್ಲಿ ಅನೇಕ ಇತರ ಸ್ಮೃತಿಗಳ ವಚನಗಳನ್ನು ವ್ಯಾಖ್ಯಾನಕರ್ತರು ಅನೇಕ ಸಂದರ್ಭಗಳಲ್ಲಿ ತಮ್ಮ ತಮ್ಮ ಅಭಿಪ್ರಾಯಗಳಿಗೆ ಆಧಾರವಾಗಿ ಉದಾಹರಿಸುತ್ತಾರೆ ಇದಲ್ಲದೆ ಮಿತಾಕ್ಷರವೆಂಬುವ ನ್ಯಾಯವು ಕೋರ್ಟುಗಳಲ್ಲಿ ಪ್ರಮಾಣವಾಗಿ ತೀರ್ಮಾನಿಸಲ್ಪಟ್ಟಿದೆ. ಇವುಗಳಲ್ಲಿ ಅನೇಕ ಗ್ರಂಥಗಳು ಹೀಗೆ ಇತರರು ಉದಾಹರಿಸಿರುವ ವಚನಗಳಿಂದ ಮಾತ್ರವೇ ಇದ್ದವೆಂಬದಾಗಿ ತಿಳಿದುಕೊಳ್ಳಬೇಕೇ ಹೊರತು ಈಗ ಅವು ನಷ್ಟವಾಗಿ ಹೋಗಿರುವದರಿಂದ ಆಮೂಲಾಗ್ರವಾಗಿ ದೊರಕುವದಿಲ್ಲ. ಆದುದರಿಂದ ಈಗಿನ ಕೋರ್ಟುಗಳಲ್ಲಿ ಪೂರ್ವದ ಹಿಂದೂ ಧರ್ಮಶಾಸ್ತ್ರಗಳನ್ನು ಚರ್ಚಿಸಿ ತೀರ್ಮಾನಮಾಡಿದವುಗಳೇ ಪ್ರಮಾಣಗಳಾಗಿವೆ.

ಮಿತಾಕ್ಷರ ಮತ್ತು ಜೀಮೂತವಾಹನ—ವ್ಯವಹಾರಕ್ಕೆ, ಈ ಮೂಲ ಗ್ರಂಥಗಳಿಗಿಂತ ಅವುಗಳಮೇಲೆ ಹುಟ್ಟಿರುವ ವ್ಯಾಖ್ಯಾನಗಳು ಹೆಚ್ಚಾದ ಆಧಾರಗಳಾಗಿವೆ. ಇವುಗಳಲ್ಲಿ ಮುಖ್ಯವಾದುದು ಯಾಜ್ಞವಲ್ಕ್ಯಸ್ಮೃತಿಗೆ ವ್ಯಾಖ್ಯಾನರೂಪವಾಗಿ ವಿಜ್ಞಾನೇಶ್ವರಯೋಗಿಯಿಂದ ರಚಿಸಲ್ಪಟ್ಟ ಮೇಲೆ ಹೇಳಿರುವ ಮಿತಾಕ್ಷರವೆಂಬುವದು ಬಂಗಾಳಸೀಮೆ ವಿನಾ, ಭರತಖಂಡದ ಇತರ ಭಾಗಗಳಲ್ಲೆಲ್ಲಾ, ಇದೇ ಮುಖ್ಯವಾದ ಪ್ರಮಾಣವಾಗಿ ನಿಂತಿದೆ. ಬಂಗಾಳದಲ್ಲೋ, ಜೀಮೂತವಾಹನನಿಂದ ರಚಿತವಾದ ದಾಯಭಾಗವೆಂಬುವದು, ಕೆಲವು ಮುಖ್ಯಾಂಶಗಳಲ್ಲಿ ಇತರ ಸ್ಥಳಗಳಲ್ಲಿರುವದಕ್ಕಿಂತ ವ್ಯತ್ಯಸ್ತವಾದ ಆಚಾರಗಳನ್ನು ಆ ದೇಶದಲ್ಲಿ ಉಂಟುಮಾಡಿದೆ ನಮ್ಮ ಸೀಮೆಗೆ ಆ ಜೀಮೂತವಾಹನನ ಗ್ರಂಥವು ಅನಾವಶ್ಯಕವಾದುದರಿಂದ, ಅದರ ವಿಶೇಷಾಂಶಗಳನ್ನು ಈ ಪುಸ್ತಕದಲ್ಲಿ ತೋರಿಸಿಲ್ಲ. ನೀಲಕಂಠನೆಂ

ಬಾತನು ರಚಿಸಿರುವ ವ್ಯವಹಾರಮಯೂಖವು, ಸಾಧಾರಣವಾಗಿ ಮಿತಾಕ್ಷರವನ್ನೇ ಅವಲಂಬಿಸಿದ್ದರೂ, ಕೆಲವು ವಿಷಯಗಳಲ್ಲಿ ಮಾತ್ರ ಇತರಸ್ಥಳಗಳಲ್ಲಿ ಆಚರಣೆಯಲ್ಲಿಲ್ಲದ ಆಚಾರಗಳನ್ನು ಹೇಳುತ್ತದೆ. ಇದು ಮುಂಬಯಿ ಸೀಮೆಯಲ್ಲಿ ಮುಖ್ಯವಾಗಿ ಗುಜರಾತಿ ಪ್ರದೇಶಗಳಲ್ಲಿ ಅಂಗೀಕರಿಸಲ್ಪಟ್ಟಿದೆ. ಇದೂ ಅಲ್ಲದೆ, ವೀರಮಿತ್ರೋದಯವೆಂಬುವದನ್ನೂ ಮುಂಬಯಿ ಸೀಮೆಯಲ್ಲಿ ಅಂಗೀಕರಿಸಿದಾರೆ. ದಕ್ಷಿಣದೇಶದಲ್ಲಿ ಅಂದರೆ ಆಂಧ್ರ ಕರ್ನಾಟಕ ದ್ರಾವಿಡ ದೇಶಗಳಲ್ಲಿ, ಮಿತಾಕ್ಷರವಲ್ಲದೆ, ಸ್ಮೃತಿಚಂದ್ರಿಕೆ, ದಾಯವಿಭಾಗ, ಸರಸ್ವತೀವಿಲಾಸ, ವ್ಯವಹಾರನಿರ್ಣಯ, ದತ್ತಕಚಂದ್ರಿಕೆ ಎಂಬ ಗ್ರಂಥಗಳನ್ನೂ ಅನುಮೋದಿಸುವರು.

ಭಿನ್ನಾಭಿಪ್ರಾಯಗಳು.— ಈ ಟೀಕಾಕರ್ತರೆಲ್ಲರೂ ತಮ್ಮ ತಮ್ಮ ಅಭಿಪ್ರಾಯಗಳಿಗೆ ಸ್ವತಂತ್ರವಾದ ಬಲವೇನೂ ಇಲ್ಲವೆಂಬದಾಗಿಯೂ, ತಾವು ಸಮಸ್ತ ವಿಷಯಗಳಲ್ಲಿಯೂ ಶ್ರುತಿ, ಸ್ಮೃತಿಗಳನ್ನು ಅನುಸರಿಸಿಯೇ ಬರೆದು ಇರುವದಾಗಿಯೂ ಹೇಳಿಕೊಳ್ಳುತ್ತಾರೆ. ತಮ್ಮತಮ್ಮಲ್ಲಿ ಎಷ್ಟು ಭಿನ್ನಾಭಿಪ್ರಾಯಗಳಿದ್ದರೂ, ಅವಕ್ಕೆಲ್ಲಾ ಸ್ಮೃತಿವಚನಗಳನ್ನೇ ಆಧಾರವಾಗಿ ಹೇಳುವದಲ್ಲದೆ, ಅದೇ ವಚನಕ್ಕೆ ಒಬ್ಬೊಬ್ಬರು ಒಂದೊಂದು ಅರ್ಥವನ್ನು ಅನೇಕ ಸಂದರ್ಭಗಳಲ್ಲಿ ಬೇರೆಬೇರೆಯಾಗಿ ಹೇಳುತ್ತಾರೆ. ಮೂಲಗ್ರಂಥಕ್ಕೆ ತಮ್ಮ ಅಭಿಪ್ರಾಯವೆಷ್ಟು ವಿರೋವಾಗಿದ್ದರೂ, ಅದನ್ನು ಅವರು ಒಪ್ಪಿಕೊಳ್ಳುವದಿಲ್ಲ. ಏನಾದರೂ ಚಮತ್ಕಾರವನ್ನು ಮಾಡಿ ಮೂಲಕ್ಕೆ ತಮ್ಮ ಅರ್ಥವನ್ನೇ ಹುಟ್ಟಿಸುವರು. ಇದಕ್ಕೆಲ್ಲಾ ಮುಖ್ಯಕಾರಣವೇನಂದರೆ,—ಈಚೆಗೆ ವ್ಯಾಖ್ಯಾನಗಳನ್ನು ಬರೆಯುವಕಾಲದಲ್ಲಿ ಸ್ಮೃತಿಗಳಕಾಲದಲ್ಲಿ ಇಲ್ಲದ ಅನೇಕ ಹೊಸ ಆಚರಣೆಗಳು ಉಂಟಾಗಿದ್ದವು. ಇವನ್ನು ಬಿಟ್ಟುಬಿಟ್ಟು ಮೂಲಸ್ಮೃತಿಗಳನ್ನೇ ಕಟ್ಟಿಕೊಂಡು ಹೋದರೆ, ತಾವು ಹೇಳುವಧರ್ಮವು ನಡವಳಿಕೆಗೆ ಸಾಕಾಗುವದಿಲ್ಲವೆಂಬ ಭಯವೊಂದು; ಹೀಗೆ ನೂತನವಾದ ಆಚಾರಗಳು ಉಂಟಾಗಿವೆಯೆಂದು ಕಂಠೋಕ್ತವಾಗಿ ಹೇಳಿದರೆ! ಸ್ಮೃತ್ಯಾಧಾರವಿಲ್ಲದ ಆಚಾರಗಳನ್ನು ಒಪ್ಪಿಕೊಂಡು ಹೇಳಿದಂತಾಗುವ ಕಷ್ಟ ಒಂದು, ಇವೆರಡನ್ನೂ ಬಿಟ್ಟುಕೊಂಡು ಸರಿಮಾಡುವದಕ್ಕೋಸ್ಕರ, ಮೇಲೆ ಹೇಳಿದಂತೆ ಕುಶಲಕಲ್ಪನೆಗಳನ್ನು ಮಾಡುತ್ತಾರೆ. ಬಂಗಾಳಾದೇಶದಲ್ಲಿ ಒಂದು ವಿಧವಾಗಿಯೂ, ದಕ್ಷಿಣದೇಶದಲ್ಲಿ ಒಂದುವಿಧವಾಗಿಯೂ ಸ್ಮೃತಿಗಳಿಗೆ ಅರ್ಥವನ್ನು ಮಾಡುವದಕ್ಕೆ ನಿಜವಾದ ಕಾರಣವೇನಂದರೆ— ಅಲ್ಲಿ ಮೊದಲೇ ಆಚರಣೆಗೆ ಬಂದ ನಡವಳಿಕೆಗೆ ಸರಿಯಾಗಿ ಅವರೂ ಇಲ್ಲಿ ಆಚರಣೆಗೆ ಬಂದ ನಡವಳಿಕೆಗೆ ಸರಿಯಾಗಿ ಇವರೂ ಅರ್ಥ ಮಾಡಿರುವರು. ನಾವಿರಾರು ವರ್ಷಗಳ ಹಿಂದಿನ ಜನಗಳಿಗೋಸ್ಕರ ರಚಿ

ಸಿದ ಸ್ಮೃತಿಗಳಿಂದ, ಈಗಿನವರಿಗೆ ಬೇಕಾದ ಧರ್ಮಗಳನ್ನೆಲ್ಲಾ, ಉಂಟುಮಾಡಿಕೊಳ್ಳಬೇಕೆಂಬುವದು ಅನೇಕ ಸಂದರ್ಭಗಳಲ್ಲಿ, ಮಕ್ಕಳಿಗೆ ಸಾಕಾಗುವ ಮೊಲೆಯ ಹಾಲಿನಿಂದ ದೊಡ್ಡವರು ಜೀವಿಸಬೇಕೆಂಬುವಂತೆ ಆಗುವದು. ಆದ್ದರಿಂದ ಈಗಿನ ಆಚರಣೆಯಲ್ಲಿ ಹೈಕೋರ್ಟುಗಳಲ್ಲಿ ಅನೇಕ ವಿದ್ವಾಂಸರಾದ ಜಡ್ಜಿಗಳಿಂದ ತೀರ್ಮಾನಿಸಲ್ಪಟ್ಟು ಸಿದ್ಧಾಂತಮಾಡಿರುವದನ್ನೇ ಅಂಗೀಕರಿಸುವದೇ ಸಮಸ್ತರಿಗೂ ಅನುಕೂಲವಾದುದು.

ಕೋರ್ಟು ತೀರ್ಪುಗಳೇ ಪ್ರಮಾಣಗಳು—ಮೇಲೆ ಹೇಳಿದವುಗಳು ಮೂಲಾಧಾರಗಳಾದಾಗ್ಯೂ ಕೋರ್ಟುಗಳಲ್ಲಿ ನಡೆದಿರುವ ಮೊಕದ್ದಮೆಗಳ ಫೈಸಲುಗಳು ಯಾವ ಯಾವ ವಿಷಯುಗಳಲ್ಲಿರುತ್ತವೆಯೋ ಆಯಾ ವಿಷಯಗಳಿಗೆಲ್ಲಾ ಆಯಾ ತೀರ್ಪುಗಳಲ್ಲದ ಬೇರೆ ಪ್ರಮಾಣಗಳನ್ನು ಹುಡುಕಬೇಕಾದ ಅವಶ್ಯಕವೇ ಇರುವದಿಲ್ಲ. ಲಾ ರಿಪೋರ್ಟುಗಳಲ್ಲಿ ಮುದ್ರಿಸಿ ಭದ್ರಪಡಿಸಿದೆ. ಬ್ರಿಟಿಷ ಸೀಮೆಯಲ್ಲಿ ಪ್ರಿವೀ ಕೌನ್ಸಿಲ ಎಂಬ ಮಹಾರಾಣಿಯವರ ಸ್ವಕೀಯ ನ್ಯಾಯ ಸಭೆಯವರಿಂದ ಫೈಸಲಾದ ಸಂಗತಿಗಳನ್ನು ವ್ಯವಹಾರಪ್ರಮಾಣಗಳನ್ನಾಗಿ ಸಮಸ್ತ ಕೋರ್ಟುಗಳಲ್ಲಿಯೂ ಅವಲಂಭಿಸಬೇಕು. ಅದನ್ನು ಬಿಟ್ಟರೆ ಆಯಾ ಸೀಮೆಯ ಹೈಕೋರ್ಟಿನವರು ಯಾವ ಸಂಗತಿಗಳನ್ನಾದರೂ ಕುರಿತು ಹ್ಯಾಗೆ ಫೈಸಲು ಮಾಡಿದಾರೆಯೋ ಅದನ್ನು ಆಯಾ ಸೀಮೆಯಲ್ಲಿರತಕ್ಕ ಕೀಳು ಕೋರ್ಟಿನವರು ಅನುಸರಿಸಬೇಕೇ ಹೊರತು ಬೇರೆ ದಾರಿಯಲ್ಲಿ ನಡೆಯುವದಕ್ಕಿಲ್ಲ. ಅವರು ಯಾವದಾದರೂ ಸ್ಮೃತಿವಚನಕ್ಕೆ ತಪ್ಪಾದ ಅರ್ಥವನ್ನು ಮಾಡಿಕೊಂಡಿದ್ದಾಗ್ಯೂ ಅವರ ಈಚಿನವರು ಅದನ್ನು ಸ್ವತಿಂತ್ರಿಸಿ ತಿದ್ದಿಕೊಳ್ಳಕೂಡದು. ಮೈಸೂರು ಸೀಮೆಯಲ್ಲಿ ಬ್ರಿಟಿಷ್ ಸೀಮೆಯ ಕೋರ್ಟುಗಳ ಫೈಸಲುಗಳನ್ನು ಅನುಸರಿಸಿ ನಡೆಯಬೇಕೆಂಬ ನಿರ್ಬಂದವಿಲ್ಲದೆ ಇದ್ದಾಗ್ಯೂ ಸಾಧಾರಣವಾಗಿ ಅಲ್ಲಿಯ ನ್ಯಾಯಾಧಿಪತಿಗಳ ಅಭಿಪ್ರಾಯಗಳನ್ನು ಬಹಳವಾಗಿ ಗೌರವಿಸುವರು. ಇಲ್ಲದೆ ಯಾವ ಆಧಾರವಾಗಿ ಅದಕ್ಕೆ ವ್ಯತಿರಿಕ್ತವಾದ ಮಾರ್ಗದಲ್ಲಿ ಹೋಗುವದಿಲ್ಲ. ಈ ಸೀಮೆಯ ಸಂಪ್ರದಾಯಕ್ಕೂ ದ್ರಾವಿಡ ಸಂಪ್ರದಾಯಕ್ಕೂ ವಿಶೇಷ ವ್ಯತ್ಯಾಸಗಳಿಲ್ಲವಾದುದರಿಂದ ಸಾಧಾರಣವಾಗಿ ಮದ್ರಾಸು ಕೋರ್ಟಿನ ಫೈಸಲುಗಳನ್ನೇ ಬಹಳವಾಗಿ ಇಲ್ಲಿಯೂ ಅನುಸರಿಸುವರು. ಇಲ್ಲಿಯ ಚೀಫ್ ಕೋರ್ಟಿನವರು ಯಾವ ಯಾವ ವಿಷಯಗಳನ್ನು ಕುರಿತು ಹ್ಯಾಗೆ ಫೈಸಲು ಮಾಡಿರುವರೋ ಆಯಾ ವಿಷಯಗಳಲ್ಲ ಈ ಸೀಮೆಯ ಇತರ ಕೋರ್ಟುಗಳವರೆಲ್ಲರೂ ಹಾಗೆಯೇ ನಡೆದುಕೊಳ್ಳಬೇಕು. ಹೈಕೋರ್ಟುಗಳಲ್ಲಿ ವ್ಯವಸ್ಥೆಯಾದ ಸಂಗತಿಗಳನ್ನು ಬೇರೆ ವಿಧವಾಗಿ ತೀರ್ಪುಮಾಡಬೇಕು. ಇಲ್ಲದಿದ್ದರೆ ಸರ್ಕಾರದವರು ಆ ತೀರ್ಪನ್ನು ಬದ

ಲಾಯಿಸುಪದಕ್ಕೆ ಬೇರೆ ಹೊಸದಾಗಿ ಆಕ್ಟೆಂಬ ಶಾಸನವನ್ನು ಉಂಟು ಮಾಡಬೇಕು.

ಅನುಸರಣೆ— ಹಿಂದೂ ಧರ್ಮಶಾಸ್ತ್ರವನ್ನು ಹಿಂದೂ ಜನರೆಲ್ಲರೂ ಅನುಸರಿಸಿ ನಡೆಯಬೇಕು, ಈ ಧರ್ಮ ಶಾಸ್ತ್ರದಲ್ಲಿ ಬಂಗಾಳಾ ಸೀಮೆಗೂ ಇತರ ಪ್ರದೇಶಗಳಿಗೂ ಕೆಲವು ವ್ಯತ್ಯಾಸಗಳಿವೆ ಎಂದು ಹೇಳಿದೆಯಷ್ಟೆ. ದಕ್ಷಿಣದೇಶದವರು ಹೋಗಿ ಬಂಗಾಳ ದೇಶದಲ್ಲಿ ನಿಂತರೂ ಅವರು ಸಾಧಾರಣವಾಗಿ ತಮ್ಮ ಪೂರ್ವ ಧರ್ಮವನ್ನೇ ಅನುಸರಿಸತಕ್ಕದ್ದು. ಬಂಗಾಳದೇಶದವರು ಇತರ ಪ್ರಾಂತ್ಯಗಳಿಗೆ ಹೋಗಿ ನಿಂತರೂ ಹಾಗೆಯೇ ಸರಿ. ಕೆಲವು ಮನೆತನದವರಲ್ಲಿಯೂ ಮತ್ತು ಕೆಲವು ಜಾತಿಯುವರಲ್ಲಿಯೂ ಧರ್ಮಶಾಸ್ತ್ರದಲ್ಲಿ ಹೇಳಿರುವದಕ್ಕೆ ವಿರೋಧವಾದ ಕೆಲವು ಪದ್ಧತಿಗಳು ಪೂರ್ವದಿಂದ ಬಳಿಕೆಗೆ ಬಂದಿರುತ್ತವೆ. ಪೂರ್ವದಿಂದ ಆ ಮನೆತನದವರು ಅಥವಾ ಜಾತಿಯುವದು ಇದೇ ತಮಗೆ ಧರ್ಮವೆಂಬ ಜ್ಞಾನದಿಂದ ಅದನ್ನೇ ಅವಲಂಬಿಸಿಕೊಂಡು ಬಂದಿದ್ದರೆ ಅಂಥಾ ಪದ್ಧತಿಗಳನ್ನು ಕೋರ್ಟಿನಲ್ಲಿ ಅಂಗೀಕರಿಸುವರು. ಆದರೆ ನೀಚಸ್ವಭಾವವುಳ್ಳ ಪದ್ಧತಿಗಳು ಎಷ್ಟುದಿವಸದಿಂದ ಆಚರಣೆಯುಲ್ಲಿದ್ದರೂ ಕೋರ್ಟಿನಲ್ಲಿ ಅವನ್ನು ಅಂಗೀಕರಿಸಕೂಡದು. ಹ್ಯಾಗಂದರೆ.—

ಧರ್ಮಶಾಸ್ತ್ರಪ್ರಕಾರ ಅಣ್ಣತಮ್ಮಂದಿರು ತಮ್ಮ ಇಷ್ಟ ಬಂದಾಗ ಭಾಗಮಾಡಿಕೊಳ್ಳಬಹುದು. ಆದರೆ ಕೆಲವು ಜಮೀನ್ದಾರಿಗಳನ್ನು ಯಾವಾಗಲೂ ಹಿರೀ ಮಗನೇ ಅನುಭವಿಸಬೇಕೆಂಬ ಪದ್ಧತಿ ಇರುತ್ತದೆ. ಈ ಪದ್ಧತಿಯು ಸಾಮಾನ್ಯ ಧರ್ಮಕ್ಕೆ ವಿರುದ್ಧವಾದರೂ ಕೋರ್ಟಿನವರು ಅದನ್ನು ತಪ್ಪಿಸುವದಿಲ್ಲ.

ಮುಂಬಯಿ ಸೀಮೆಯುಲ್ಲಿ ಕೆಲವು ಜಾತಿಗಳಲ್ಲಿ ಗಂಡಹೆಂಡರಿಗೆ ಸರಿಬೀಳದ ಪಕ್ಷದಲ್ಲಿ ಜಾತಿಯುವರೆಲ್ಲರೂ ಸೇರಿ ಅವರನ್ನು ಬಿಡಿಸಿಬಿಡಬಹುದೆಂದೂ ಗಂಡನ ಅನುಮತಿಗೆ ವಿರೋಧವಾಗಿ ಹೆಂಡತಿಯು ಬೇರೆ ಮದುವೆಯನ್ನು ಮಾಡಿಕೊಳ್ಳಬಹುದೆಂದೂ ಪದ್ಧತಿಯುಂಟೆಂದು ಹೇಳಿದಲ್ಲಿ ಈ ಪದ್ಧತಿಯು ನೀಚಪದ್ಧತಿಯೆಂಬ ಕಾರಣದ ಮೇಲೆ ಕೋರ್ಟಿನಲ್ಲಿ ಅಂಗೀಕರಿಸಕೂಡದೆಂದು ಅಲ್ಲಿಯ ಹೈ ಕೋರ್ಟಿನವರು ತೀರ್ಪುಮಾಡಿದಾರೆ.

ಆಚರಣೆ—ಹಿಂದೂಜನರು ಕ್ರಿಸ್ತ, ಮುಸಲ್ಮಾನ ಮುಂತಾದ ಮತಗಳಿಗೆ ಸೇರಿದ ತರುವಾಯ ಅವರೀ ಹಿಂದು ಧರ್ಮಶಾಸ್ತ್ರಕ್ಕೆ ಬದ್ಧರಾಗಿರುವದಿಲ್ಲ. ಮುಸಲ್ಮಾನರಲ್ಲಿ ಕಚ್ಛೀ ಮೇಮನರೆಂಬ ಮುಂಬಯಿ ಸೇಟುಗಳು ಮಾತ್ರ ಮುಸಲ್ಮಾನಮತದವರಾದಾಗ್ಯೂ ಹಿಂದೂ ಲಾ ವನ್ನೇ. ಅನುಸರಿಸು

ವರು, ಮತ್ತು ಸ್ಮೃತಿಗಳಲ್ಲಿ ಹೇಳಿರುವ ನಿರ್ಬಂಧಗಳು ಮುಂತಾದವನ್ನೆಲ್ಲಾ ಬ್ರಾಹ್ಮಣರಿಗೆ ಮಾತ್ರ ಸಂಪೂರ್ಣವಾಗಿ ಅನ್ವಯಿಸುವಂತೆ ಇಟ್ಟುಕೊಳ್ಳಬೇಕೆಂತಲೂ ಶೂದ್ರಾದಿ ಜಾತಿಯವರ ವಿಷಯದಲ್ಲಿ ಅವರವರ ಕುಲಾಚಾರವನ್ನು ಪ್ರಯತ್ನಪೂರ್ವಕವಾಗಿ ತಿಳಿದುಕೊಂಡು ಅದರ ಪ್ರಕಾರ ನ್ಯಾಯವನ್ನು ನಡಿಬೇಕೆಂತಲೂ ಅನೇಕ ನವೀನ ಪಂಡಿತರು ಅಭಿಪ್ರಾಯ ಪಡುತ್ತಾರೆ.

ಪಂಡಿತರುಗಳು ಮತ್ತು ಆಧಾರ— ಇಂಗ್ಲೀಷಿನವರು ಬಹಳ ದಿವಸಗಳವರಿಗೂ, ಧರ್ಮಶಾಸ್ತ್ರವನ್ನು ಹೇಳುವದಕ್ಕೋಸ್ಕರ, ಪ್ರತಿಕೋರ್ಟಿನಲ್ಲಿಯೂ ನ್ಯಾಯಶಾಸ್ತ್ರಪಂಡಿತರನ್ನಿಟ್ಟಿದ್ದರು. ಈಚೆಗೆ ಕೋರ್ಟಿನ ನ್ಯಾಯಾಧಿಪತಿಯೇ ಸ್ವತಃ ನ್ಯಾಯವನ್ನು ತಿಳಿದು ಫೈಸಲ್ಮಾಡಬೇಕೆಂದು, ಆ ಕೋರ್ಟುಪಂಡಿತರ ಕೆಲಸವನ್ನೇ ತಪ್ಪಿಸಿಬಿಟ್ಟರು. ಹೀಗೆ ಮಾಡಿದ್ದರಿಂದ, ನ್ಯಾಯಾಧಿಪತಿಗಳು ಸ್ವತಂತ್ರವಾಗಿ ಓದಿತಿಳಿದುಕೊಳ್ಳಲು ಇಂಗ್ಲೀಷುಭಾಷೆಯ ಗ್ರಂಥಗಳು ಅವಶ್ಯಕವಾದವು. ಈಗ ಸಂಸ್ಕೃತದಲ್ಲಿರುವ ವ್ಯಾಖ್ಯಾನಗಳಿಗಿಂತ ಕಡಮೆಯಿಲ್ಲದ ಅನೇಕ ಇಂಗ್ಲೀಷುಗ್ರಂಥಗಳು ಉಂಟಾಗಿವೆ; ಮತ್ತು ಸಂಸ್ಕೃತದಲ್ಲಿರುವ ಅನೇಕ ಸ್ಮೃತಿಗಳನ್ನೂ ವ್ಯಾಖ್ಯಾನಗಳನ್ನೂ ಬಹಳ ಪರಿಷ್ಕಾರವಾಗಿ ಇಂಗ್ಲೀಷ್ ಭಾಷೆಯಲ್ಲಿ ತರ್ಜುಮೆಮಾಡಿ ಟೀಕುಗಳನ್ನೂ ಮಾಡಿಟ್ಟಿದಾರೆ. ಈ ಸೀಮೆಯಲ್ಲಿ ಈಗ ಅತಿಪ್ರಚುರತೆಯನ್ನು ಹೊಂದಿರುವದು, ಮೇ್ಣ ಎಂಬ ಹೆಸರಿನ ಘನವಿದ್ವಾಂಸರಿಂದ ರಚಿಸಲ್ಪಟ್ಟಿರುವ ಗ್ರಂಥವು. ಮುಂಬಯಿ ಸೀಮೆಗೆ ವೆಸ್ಟ್ ಬುಲರ್ ಎಂಬ ಇಬ್ಬರು ಪಂಡಿತರು ಸೇರಿ ಒಂದು ಪುಸ್ತಕವನ್ನು ರಚಿಸಿದಾರೆ. ಇವಕ್ಕೆ ಮೊದಲೂ ಮತ್ತೂ ಈಚೆಗೂ ನಮ್ಮವರಾದ ಅನೇಕ ವಿದ್ವಾಂಸರಿಂದಲೂ, ಹೂಣಪಂಡಿತರಿಂದಲೂ ಅನೇಕ ಇತರಗ್ರಂಥಗಳು ಇಂಗ್ಲೀಷಿನಲ್ಲಿ ರಚಿಸಲ್ಪಟ್ಟಿವೆ. ಅದರಲ್ಲಿನ ಸಾರಗಳನ್ನು ಸ್ವಲ್ಪಮಾತ್ರ ತಳಿಸಲು ಪ್ರಕೃತ ಸಾಧ್ಯವಾಯಿತು.

ವಿವಾಹ (ಮದುವೆ)— ಪೂರ್ವದಲ್ಲಿ ಬ್ರಾಹ್ಮ, ದೈವ, ಆರ್ಷ, ಪ್ರಾಜಾಪತ್ಯ, ಗಾಂಧರ್ವ, ಆಸುರ, ರಾಕ್ಷಸ, ಪೈಶಾಚವೆಂಬ ಎಂಟುವಿಧವಾದ ವಿವಾಹಗಳು ವಾಡಿಕೆಯಲ್ಲಿದ್ದ ಹಾಗೆ ಹೇಳಿದೆ. ಆದರೆ ಈಗ ಬ್ರಾಹ್ಮ ಆಸುರ ಎಂಬವೆರಡೇ ನಡಿಯುವದು. ಮೊದಲನೇದು ಕನ್ಯಾದಾನ ಎರಡನೇದು ಕನ್ಯಾ ವಿಕ್ರಯ. ಕನ್ಯೆಯನ್ನು ಕೊಟ್ಟು ಬದಲಾಗಿ ಹಣ ತೆಗೆದುಕೊಳ್ಳುವದು ಪಾಪಕೃತ್ಯವೆಂದು ಶಾಸ್ತ್ರದಲ್ಲಿ ಹೇಳಿದ್ದಾಗ್ಯೂ ಹಾಗೆ ನಡಿಸಿದ ವಿವಾಹ ನ್ಯಾಯ ಅಂದರೆ ಲಾ ಗೆ ವಿರೋಧವಲ್ಲ. ಆದರೆ ಹಣಕ್ಕೆ ಪತ್ರವನ್ನು

ಬರಿಸಿಕೊಂಡು ಕನ್ಯೆಯನ್ನು ಕೊಟ್ಟು, ತರುವಾಯ ಫಿರ್ಯಾದು ಮಾಡಿದರೆ ಆ ಪತ್ರದಮೇಲೆ ಕೋರ್ಟಿನವರು ಹಣವನ್ನು ಬರಮಾಡಿಸಿ ಕೊಡಲಾರರು.

ಮೇಲೆ ಹೇಳಲ್ಪಟ್ಟ ೮ ವಿಧ ವಿವಾಹಗಳ ನಡವಳಿಕೆಗಳು.

೧. ಬ್ರಾಹ್ಮ—ವೇದವನ್ನು ತಿಳಿದಿರುವ, ಸುಸ್ವಭಾವದವನನ್ನು ಕರೆದು ಅವನಿಗೆ ಹೊದ್ದಿಸಿ, ಪೂಜೆಮಾಡಿ, ಕನ್ಯೆಯನ್ನು ಕೊಡುವುದಕ್ಕೆ ಬ್ರಾಹ್ಮಧರ್ಮವೆಂದು ಹೆಸರು.

೨. ದೈವ—ವಿಸ್ತಾರವಾದ ಯಜ್ಞದಲ್ಲಿ ಋತ್ವಿಜನು ಕರ್ಮವನ್ನು ಆಚರಿಸುವಾಗ ಅವನನ್ನು ಅಲಂಕರಿಸಿ ಕನ್ಯಾದಾನ ಮಾಡುವುದಕ್ಕೆ ದೈವ ಧರ್ಮವೆಂದು ಹೆಸರು.

೩. ಆರ್ಷ— ಧರ್ಮಪ್ರಕಾರ ವರನಿಂದ ಒಂದು, ಅಥವ ಎರಡು ಗೋವುಗಳನ್ನು ತೆಗೆದುಕೊಂಡು. ವಿಧಿಯುಮೇರೆ ಕನ್ಯೆಯನ್ನು ದಾನಮಾಡುವುದಕ್ಕೆ ಆರ್ಷಧರ್ಮವೆಂದು ಹೆಸರು.

೪. ಪ್ರಾಜಾಪತ್ಯ— ಧರ್ಮವನ್ನು ನೀವಿಬ್ಬರೂ ಕೂಡಿ ಆಚರಿಸಿ ಎಂಬ ಮಾತುಗಳನ್ನು ಹೇಳಿ, ಹೇಳಿಸಿ, ಪೂಜಿಸಿ ಕನ್ಯೆಯನ್ನು ಕೊಡುವುದಕ್ಕೆ ಪ್ರಾಜಾಪತ್ಯವೆಂದು ಹೆಸರು.

೫. ಆಸುರ— ಕನ್ಯೆಗೋಸ್ಕರ ಅವಳ ಜ್ಞಾತಿಗಳಿಗೆ ಹಣವನ್ನು ಕೊಟ್ಟು, ಕನ್ಯೆಯನ್ನು ಕೊಂಡುಕೊಳ್ಳುವುದಕ್ಕೆ ಆಸುರವೆಂದು ಹೆಸರು.

೬. ಗಾಂಧರ್ವ— ಕನ್ಯೆಯೂ ವರನೂ ಅನ್ಯೋನ್ಯಾಪೇಕ್ಷೆಯಿಂದ ಸಂಭೋಗಿಸುವುದಕ್ಕೆ ಗಾಂಧರ್ವವೆಂದು ಹೆಸರು.

೭. ರಾಕ್ಷಸ— ಕನ್ಯೆಯನ್ನು ಹೊಡೆದು ಬಡಿದು ಗಾಯಮಾಡಿ, ದುಃಖಿಸುತ್ತಲೂ ಅಳುತ್ತಲೂ ಇರುವ ಆ ಕನ್ಯೆಯನ್ನು ಬಲಾತ್ಕಾರವಾಗಿ ಮನೆಯಿಂದ ಎತ್ತಿಕೊಂಡು ಹೋಗುವುದಕ್ಕೆ ರಾಕ್ಷಸವೆಂದು ಹೆಸರು,

೮. ಪೈಶಾಚ— ಮದ್ಯಪಾನ ಮಾಡಿ ಮತ್ತಳಾಗಿ ನಿದ್ರೆ ಮಾಡುತ್ತಿರುವವಳೊಡನೆ ರಹಸ್ಯದಲ್ಲಿ ಸಂಭೋಗ ಮಾಡುವುದಕ್ಕೆ ಪೈಶಾಚವೆಂದು ಹೆಸರು. ಇದು ವಿವಾಹಧರ್ಮಗಳಲ್ಲೆಲ್ಲಾ ಅತ್ಯಂತ ಪಾಪಿಷ್ಠ ಮತ್ತು ಅಧಮವಾದುದು. ವ್ಯ॥ ನಿ॥ ಮ॥ ಮ॥

ಮೇಲೆ ವಿವರಿಸಿರುವ ಧರ್ಮಗಳೊಳಗೆ ಮೊದಲನೇ ೪ ವಿಧದವುಗಳು ಸದಾಚಾರಗಳು; ಮಿಕ್ಕವುಗಳು ದುರಾಚಾರಗಳು. ಮತ್ತು ಇವುಗಳೊಳಗೆ ಬ್ರಹ್ಮ, ಆಸುರ ಈ ಎರಡು ವಿಧಗಳು ಮಾತ್ರ ಈಗ ನಡಿಯುತ್ತಿವೆ. ಸಣ್ಣ ಜಾತಿಗಳಲ್ಲಿ ನಡಿಯುವ ವಿವಾಹಗಳು ಆಸುರವೆಂತಲೂ

ದೊಡ್ಡಜಾತಿಗಳಲ್ಲಿ ನಡೆಯುವುವು ಬ್ರಾಹ್ಮವೆಂತಲೂ ಭಾವನೆ, ೮ ಬೊಂ. ೨೪೪. ಆದರೆ ಕನ್ಯೆಗಾಗಿ ಪ್ರತಿಫಲವನ್ನು ತೆಗೆದುಕೊಂಡರೂ ಮದುವೆಯನ್ನು ಬ್ರಾಹ್ಮಪ್ರಯೋಗದಲ್ಲೇ ಎಲ್ಲರೂ ಮಾಡುತ್ತಾರೆ. ವೈಶ್ಯರು ಮತ್ತು ಶೂದ್ರರು ಸಹ ಮದುವೆಯನ್ನು ಬ್ರಾಹ್ಮರೂಪದಲ್ಲಿ ಮಾಡಲು ಯಾವ ಅಡ್ಡಿಯೂ ಇಲ್ಲ. ೨ ಬೊಂ. ೯. ಈಗ ಕೆಲವರಲ್ಲಿ ನಡೆಯುತ್ತಿರುವ ಕೂಡಾವಳಿಯೇ ಗಾಂಧರ್ವವಿವಾಹವು. ೧೦ ಕ. ೧೩೮.

ಗಾಂಧರ್ವ ವಿವಾಹವು.

೧. ಮದುವೆಯಿಂದುಂಟಾಗತಕ್ಕ ಫಲಗಳು:— ಗಂಡನು ಎಲ್ಲಿರುತ್ತಾನೋ ಅಲ್ಲಿಗೆ ಹೋಗಿ ಗಂಡನೊಂದಿಗೆ ಇರಲು ಹೆಂಡತಿ ಬದ್ಧಳಾಗುತ್ತಾಳೆ. [ಗಂಡನು ಹೆಂಡತಿಯ ತೌರುಮನೆಯಲ್ಲೇ ವಾಸಮಾಡಬೇಕು; ಅಲ್ಲಿಂದ ಅವಳನ್ನು ಬೇರೇ ಕಡೆಗೆ ಕರೆದುಕೊಂಡು ಹೋಗಕೂಡದು ಎಂಬ ಕರಾರಿಗೆ ಒಪ್ಪಿಕೊಂಡು ಒಬ್ಬನು ಒಬ್ಬಳನ್ನು ಮದುವೆಯಾಗಿ ಬಳಿಕ ಹೆಂಡತಿಯನ್ನು ಕರೆದುಕೊಂಡು ಹೋಗುವುದಕ್ಕೆ ಪ್ರಯತ್ನಪಟ್ಟನು. ಹೆಂಡತಿಯಕಡೆಯವರು ಒಪ್ಪಲಿಲ್ಲ. ಅವನು ದಾವಾತಂದನು. ಅವನು ಯಾವ ಕರಾರಿಗೆ ಒಪ್ಪಿಕೊಂಡನೋ ಅದು ಲಾಕ್ಕೆವಿರೋಧವಾದ ಕರಾರು. ಆದುದರಿಂದ ಹೆಂಡತಿಯನ್ನು ಕರೆದುಕೊಂಡು ಹೋಗಲು ಅದು ಅಡ್ಡಿಮಾಡಲಾರದೆಂತಲೂ, ಹೆಂಡತಿಯು ಗಂಡನ ಜತೆಯಲ್ಲಿ ಹೋಗಬೇಕೆಂತಲೂ ಸಹ ಕೋರ್ಟಿನವರು ಡಿಕ್ರಿಯನ್ನು ಕೊಟ್ಟರು. ೨೮ ಕ. ೭೫೧.] ಗಂಡನು ಮತ್ತೊಬ್ಬಳನ್ನು ಮದುವೆಯಾದನೆಂಬುವುದು ಅವನನ್ನು ಬಿಟ್ಟಿರಲಿಕ್ಕೆ ಸರಿಯಾದ ಕಾರಣವಲ್ಲ. ಗಂಡನು ಅತಿ ಕ್ರೂರಹಿಂಸೆ ಮಾಡುತ್ತಾನೆಂಬುವುದೊಂದು ಮಾತ್ರ ಸರಿಯಾದಕಾರಣ.

ಗಂಡನು ಹೆಂಡತಿಗೆ ಅಶನ, ವಸನ, ವಾಸ ಇವುಗಳನ್ನು ಉಪಕಲ್ಪಿಸಬೇಕಲ್ಲದೆ ಅವಳೊಡನೆ ನಡೆದುಕೊಳ್ಳುತ್ತಾ ವಾಸಮಾಡಬೇಕು. ಗಂಡನು ಹೆಂಡತಿಯನ್ನು ಅತಿ ಕ್ರೂರಹಿಂಸೆ ಮಾಡುತ್ತಲಿದ್ದರೂ, ಪ್ರಚಂಡತನ ಬಲಾತ್ಕಾರ ಇವುಗಳಿಂದ ಅವಳಿಗೆ ಪ್ರಾಣಭಯವನ್ನುಂಟುಮಾಡಿದರೂ, ಅವಳು ಗಂಡನನ್ನು ಬಿಟ್ಟುಹೋಗಿ ಬೇರೇಯಿದ್ದುಕೊಂಡು ಜೀವನಾಂಶಕ್ಕೆ ದಾವಾ ಮಾಡಬಹುದು ಗಂಡನಿಗೆ ಆಸ್ತಿ ಇರಲೀ, ಇಲ್ಲದಿರಲೀ, ಜೀವನಾಂಶವನ್ನು ಕೊಡಲು, ಇವನು ಖುದ್ದು ಜವಾಬ್ದಾರನಾಗುವನು; ಕೊಡದಿದ್ದರೆ ಸಿವಿಲ್ ಜೈಲಿಗೆ ಹೋಗಬೇಕಾಗುವುದು. ಮೇಲೆ ಕಂಡ ಕಾರಣಗಳಿಲ್ಲದಿದ್ದಲ್ಲಿ, ಗಂಡನನ್ನು ಬಿಟ್ಟು ಬೇರೇ ಇರುವ ಹೆಂಡತಿಯು ಗಂಡನಿಂದ ಪ್ರತ್ಯೇಕ ಜೀವನಾಂಶವನ್ನು ಹೊಂದಲು ಹಕ್ಕಿಲ್ಲ.

ಹೆಂಡತಿಯು ಗಂಡನೊಡನೆ ಇದ್ದುಕೊಂಡು ಬಾಳುವುದಕ್ಕೂ, ಗಂಡನು ಹೆಂಡತಿಯೊಡನೆ ಇದ್ದುಕೊಂಡು ಅವಳೊಡನೆ ನಡೆದುಕೊಳ್ಳುವುದಕ್ಕೂ ತಪ್ಪಿದರೆ, ಒಬ್ಬರು ಮತ್ತೊಬ್ಬರಮೇಲೂ, ಅಂತಹ ಲೋಪಕ್ಕೆ ಪ್ರೋತ್ಸಾಹಕೊಟ್ಟರಬಹುದಾದ ತಾಯಿತಂದೆಗಳು ಇಂತಹರಮೇಲೂ ದಾವಾ ಮಾಡಬಹುದು. ಡಿಕ್ರಿಯಂತೆ ನಡೆದುಕೊಳ್ಳಲು ತಪ್ಪಿದರೆ, ತಪ್ಪಿದವರ ಸ್ವತ್ತನ್ನು ಜಪ್ತಿ ಹರಾಜು ಮಾಡಿಸಬಹುದು; ಮತ್ತು ಅವರನ್ನು ಸಿವಿಲ್ ಜೈಲಿನಲ್ಲಿಯೂ ಇರಿಸಬಹುದು. ಹೆಂಡತಿ, ಯಾ. ಗಂಡನನ್ನು, ಇವರು ವೈನರಾಗಿದ್ದರೂ ಕೂಡ, ಬಲಾತ್ಕಾರದಿಂದ ಸುಪರ್ದುಮಾಡುವುದಿಲ್ಲ ಸಿ. ಪ್ರೊ. ಕೊ. ೨೬೦, ವೈನೆರೆಯದಿದ್ದ ಹೆಂಡತಿಯು ವೈನೆರೆಯುವವರೆಗೂ ತೌರುಮನೆಯಲ್ಲೇ ಇರುವ ಪದ್ಧತಿಯಿದ್ದರೆ, ಅಂತಹಳ ಸ್ವಾಧೀನಕ್ಕೆ ಗಂಡನು ದಾವಾ ತರಲಾಗುವುದಿಲ್ಲ. ವ್ಯ. ನಿ. ೧೫ ಮತ್ತು ಲಾ||ಗೆ||

ವರ್ಣಗಳು— ಮದುವೆಯಾಗತಕ್ಕ ಸ್ತ್ರೀಪುರುಷರು ಒಂದೇಜಾತಿಯವರಾಗಿಯೂ, ಬೇರೆಬೇರೆ ಗೋತ್ರದವರಾಗಿಯೂ ಇರಬೇಕು. ಸ್ಮೃತಿಗಳಲ್ಲಿ ವರ್ಣಗಳೆಂದರೆ ಬ್ರಹ್ಮ, ಕ್ಷತ್ರಿಯ, ವೈಶ್ಯ, ಶೂದ್ರರೆಂಬ ನಾಲ್ಕು ವರ್ಣಗಳೇ ಹೊರತು, ಈಗ ಇವರಿವರಲ್ಲುಂಟಾಗಿರುವ ಅನೇಕ ಶಾಖೋಪಶಾಖೆಗಳ ಮಾತು ಹೇಳಿಲ್ಲ, ಭಾಷಾಭೇದದ ಮಾತು ಮೊದಲೇ ಇಲ್ಲ. ಆದ್ದರಿಂದ ಬ್ರಾಹ್ಮಣರಲ್ಲಿ ಆಂಧ್ರ, ಕರ್ಣಾಟಕ ದ್ರಾವಿಡರೂ, ಸ್ಮಾರ್ತ ವೈಷ್ಣವ ಶ್ರೀವೈಷ್ಣವರೂ, ಮುರುಕನಾಡು ವೆಲನಾಡು ಬಡಗನಾಡು ಮುಂತಾದವರೂ, ಒಬ್ಬರಲ್ಲೊಬ್ಬರು ಹೆಣ್ಣು ಕೊಡುವದೂ ತರುವದೂ ಮಾಡಿಕೊಂಡರೆ, ಮದುವೆಯನ್ನು ಅಶಾಸ್ತ್ರೀಯವೆಂದು ಹೇಳಿ, ರದ್ದುಮಾಡುವದಕ್ಕೇನೂ ಆಧಾರವಿಲ್ಲ. ಆದರೆ ಬಹಳ ದಿವಸದಿಂದ ವಾಡಿಕೆ ಇಲ್ಲದೆ ಇರುವದರಿಂದ ಜನರು ಹೀಗೆ ಮಾಡಲು ಹಿಂತೆಗೆಯುವರು. ವ್ಯ. ದೀ.

ದೇಶಾಚಾರಗಳು—ಸಪಿಂಡ ಬಂಧುತ್ವವುಳ್ಳವರು ಒಬ್ಬರನ್ನೊಬ್ಬರು ಮದುವೆಯಾಗಕೂಡದು. ಅಂದರೆ ಗಂಡಿನ ಹಿರಿಯರೂ ಹೆಣ್ಣಿನ ಹಿರಿಯರೂ ಪಿತೃವರ್ಗದಲ್ಲಿ ಏಳುತಲೆಯೊಳಗಾಗಿಯೂ ಮಾತೃವರ್ಗದಲ್ಲಿ ಐದುತಲೆಯೊಳಗಾಗಿಯೂ ಕಲೆತಿರಕೂಡದು. ಈ ಪ್ರಕಾರ ನೋಡಿದರೆ ಸೋದರ ಮಾವನ ಮಗಳನ್ನು ಅಕ್ಕತಂಗಿಯರ ಮಕ್ಕಳನ್ನೂ ಮದುವೆಮಾಡಿಕೊಳ್ಳುವದು ಅಶಾಸ್ತ್ರೀಯವಾದಾಗ್ಯೂ ಅನೇಕ ಸ್ಥಳಗಳಲ್ಲಿ ಅನೇಕ ಜನರಲ್ಲಿ ಇಂಥಾ ಮದುವೆಗಳು ದೇಶಾಚಾರವಾಗಿ ನಡೆಯುತ್ತವೆ. ಆದ್ದರಿಂದ ಕೋರ್ಟುಗಳಲ್ಲಿ ಅವನ್ನು ಅಂಗೀಕರಿಸುವರು

ಬಾಲ್ಯವಿವಾಹ—ನ್ಯಾಯವಾಗಿ ನೋಡಿದರೆ ಬೊಂಬೆಯ ಮದುವೆಯದನ್ನು ಮಾಡುವ ಹಾಗೆ ಅತಿ ಚಿಕ್ಕ ಮಕ್ಕಳಿಗ ಮದುವೆ ಮಾಡುವದು ಶುದ್ಧ

ವಾಗಿ ಅನುಚಿತವಾದ ಕೆಲಸವು. ಆದರೆ ಎಷ್ಟು ಚಿಕ್ಕವರಿಗೆ ಮಾಡಿದಾಗ್ಯೂ ಮದುವೆಯು ಈಗಿನ ನಡವಳಿಕೆಯ ಪ್ರಕಾರ ಸಲ್ಲುತದೆ. ಬ್ರಾಹ್ಮಣರ ಜಾತಿಯಲ್ಲಿ ಸಾಧಾರಣವಾಗಿ ಎಂಟರಿಂದ ಹತ್ತರವರಿಗೂ ಕನ್ಯೆಯರಿಗೆ ಮದುವೆಗೆ ಸರಿಯಾದ ವಯಸ್ಸೆಂದು ಹೇಳುತ್ತಾರೆ. ಕೆಲವರು ವಿದ್ವಾಂಸರು ಹತ್ತಕ್ಕೆ ಮೊದಲು ಮಾಡುವದು ಅಶಾಸ್ತ್ರೀಯವೆನ್ನುತ್ತಾರೆ. ಬಹುಶಃ ಹುಡುಗಿಯು ದೊಡ್ಡವಳಾದ ಮೇಲೆ ಮದುವೆ ಮಾಡಿದರೆ ಅದು ಈಗಿನ ಆಚಾರದ ಪ್ರಕಾರ ಸಲ್ಲತಕ್ಕದ್ದೆಂಬುವದು ಸಂಶಯಾಸ್ಪದವಾಗಿದೆ. ಅದಕ್ಕೆ ಮೊದಲು ಯಾವ ವಯಸ್ಸಿನಲ್ಲಿ ಮಾಡಿದಾಗ್ಯೂ ಸಲ್ಲುವದಕ್ಕೆ ಸಂದೇಹವಿಲ್ಲ. ಸ್ಮೃತಿಗಳು ಎಂಟು ವರ್ಷದ ಕನ್ನಿಕೆಗೆ ಇಪ್ಪತ್ತುನಾಲ್ಕು ವರುಷದ ವರನಿರಬೇಕೆಂದು ಹೇಳಿದೆ. ಆದರೆ ಈ ವಿಷಯದಲ್ಲಿ ಹುಡುಗಿಗಿಂತ ವರನು ದೊಡ್ಡವನಾಗಿರಬೇಕೆಂಬುವದು ಅವಶ್ಯವೇ ಹೊರತು ಇಬ್ಬರಿಗೂ ವಯಸ್ಸಿನಲ್ಲಿ ಇಷ್ಟೆ ವರುಷ ವ್ಯತ್ಯಾಸವಿರಬೇಕೆಂಬುವ ನಿರ್ಬಂಧವಿಲ್ಲ. ಮೈಸೂರು ಗೌರ್ನಮೆಂಟಿನವರು ಬಾಲ್ಯ ವಿವಾಹ ನಿರೋಧಕವೆಂಬ ಆಕ್ಟನ್ನು ಮಾಡಿರುವರು, ಕನ್ಯೆಗೆ ಮದುವೆಯಾಗುವಾಗ ೮ ವರುಷವಾಗಿರಬೇಕೆಂದು ವಿಧಾಯಕ ಮಾಡಿರುವರು.

ವರ್ಣಭೇದಗಳಲ್ಲಿ ವಿವಾಹ—ಪೂರ್ವದಲ್ಲಿ ಗಂಡಸರು ತಮ್ಮ ವರ್ಣದ ಹೆಂಗಸರನ್ನಾಗಲಿ ಅಥವಾ ಕೀಳುಜಾತಿಯ ಹೆಂಗಸರನ್ನಾಗಲಿ ಮದುವೆ ಮಾಡಿಕೊಳ್ಳಬಹುದಾಗಿತ್ತು. ಈಗ ಆ ಪದ್ಧತಿಯು ತಪ್ಪಿಹೋಗಿರುವದರಿಂದ ಅಂಥಾ ಮದುವೆಗಳು ಸಲ್ಲುವದಿಲ್ಲ. ಆದರೂ ಸ್ವಲ್ಪ ಮಟ್ಟಿಗೆ ಅದೇ ವರ್ಣದವರಲ್ಲಿ ಅಂದರೆ ಬ್ರಾಹ್ಮಣರಲ್ಲಿ ಬೇರೆ ಬೇರೆ ಶಾಖೆಯವರಲ್ಲಿಯೂ ಶೂದ್ರರಲ್ಲಿ ಬೇರೆಬೇರೆ ಪಣದವರಲ್ಲಿಯೂ ಕೊಡುವದು ತರುವದೂ ಉಂಟು. ಇವುಗಳು ಈ ಕೋರ್ಟುಗಳಲ್ಲಿ ಶಾಸ್ತ್ರೀಯವಾಗಿ ಅಂಗೀಕರಿಸಲ್ಪಡುವುವು.

ವಿವಾಹದ ವಿವೇಚನೆ— ಪೂರ್ವ ವಯಸ್ಸಿನಲ್ಲಿಯೇ ಸ್ತ್ರೀಯರಿಗೆ ಮದುವೆಯಾಗ ಬೇಕೆಂಬುವದೂ ಇನ್ನೂ ಇತರ ವಿಧವಾದ ನಿರ್ಬಂಧಗಳೂ ಶೂದ್ರರು ಮುಂತಾದವರಿಗೆ ಶಾಸ್ತ್ರೋಕ್ತವಾಗಿ ಇಲ್ಲದೆ ಇದ್ದಾಗ್ಯೂ ಅವರೂ ಬ್ರಾಹ್ಮಣರಂತೆಯೇ ನಡಿಸತೊಡಗಿದಾರೆ. ಹೀಗೆ ಮನಃಪೂರ್ವಕವಾಗಿ ಇಲ್ಲದಿದ್ದ ಕಷ್ಟವನ್ನು ವುಂಟುಮಾಡಿಕೊಳ್ಳುವರು ಬುದ್ಧಿವಂತರಲ್ಲ.

ಕನ್ಯಾದಾನಕ್ಕೆ ಅರ್ಹರು—ಮದುವೆ ಅಂದರೆ ನಮ್ಮ ಧರ್ಮಶಾಸ್ತ್ರ ಪ್ರಕಾರ ತಕ್ಕ ಪುರುಷನಿಗೆ ಕನ್ಯೆಯನ್ನು ದಾನಮಾಡುವದು. ಹಾಗೆ ದಾನ ಮಾಡಲು ತಂದೆಯೇ ಸ್ವತಂತ್ರನಾಗಿರುವನು. ತಂದೆ ಇಲ್ಲದ ಹುಡುಗಿಯನ್ನು ಮದುವೆ ಮಾಡಿಕೊಡಲು ಅಂಣ, ತಾತ, ಚಿಕ್ಕಪ್ಪ, ದೊಡ್ಡಪ್ಪ, ಸೋ

ದರ ಮಾವ, ತಾಯಿ ಇವರಿಗೆ ಅಧಿಕಾರ ಉಂಟು. ಹೆಂಡತಿ ಮಕ್ಕಳನ್ನು ತಂದೆಯು ಬಿಟ್ಟು ಬಿಟ್ಟಿದ್ದರೆ ತಾಯಿಯೇ ಸ್ವತಂತ್ರಿಸಿ ಕನ್ಯಾದಾನವನ್ನು ಮಾಡಬಹುದು. ಮದ್ರಾಸು ಹೈ ಕೋರ್ಟಿನವರು ಒಂದು ಮೊಕದ್ದಮೆಯಲ್ಲಿ ತಾಯಿಯ ಅನುಮತಿ ಇಲ್ಲದೆ ವಿಭಕ್ತನಾದ ಚಿಕ್ಕಪ್ಪನು ತನ್ನ ಅಣ್ಣನ ಮಗಳನ್ನು ಮದುವೆಮಾಡಿಕೊಡಕೂಡದೆಂದು ಅಡ್ಡಿ ಮಾಡಿದರು. ಬಹುಶಃ ಇಂಥಾ ಮೊಕದ್ದಮೆಗಳಲ್ಲಿ ಹುಡುಗಿಗೆ ಯಾರ ಸಂಬಂಧವು ಒಳ್ಳೇದೋ ಅಲ್ಲಿ ಅವಳನ್ನು ಕೊಟ್ಟು ಮದುವೆಮಾಡಲು ಅವಳ ಬಂಧುಗಳಲ್ಲಿ ಯಾರಾದರೂ ಒಬ್ಬರು ಉದ್ಯುಕ್ತರಾಗಿರುವಾಗ ಮತ್ತೊಬ್ಬರು ನಿಷ್ಕಾರಣವಾಗಿ ಕೊಡದೆಂದರೆ, ಈ ವಿಧವಾದ ಅಡ್ಡಿಗಳನ್ನು ಕೋರ್ಟಿನವರು ತಪ್ಪಿಸಬಹುದಾಗಿ ತೋರುತ್ತದೆ. ಮದುವೆಯಾಗತಕ್ಕ ವಧೂವರರಿಗೆ ಪರಸ್ಪರ ಸರಿಬೀಳದೆ ಇರುವದು ಸಷ್ಟವಾಗಿ ತಿಳಿಯಬಂದರೆ ಅಂಥಾ ಮದುವೆಯನ್ನು ಕೋರ್ಟಿನವರು ಬಲಾತ್ಕಾರದಿಂದ ಮಾಡಿಸಲಾರರು.

ವಿವಾಹದ ರದ್ದು ಯಾವಾಗ?—ಮದುವೆಯು ಪೂರ್ತಿಯಾದಮೇಲೆ ಮೊದಲೇ ಒಪ್ಪಬೇಕಾಗಿದ್ದವರ ಅನುಮತಿಗೆ ವಿರೋಧವಾಗಿಯಾಗಲಿ, ಬಲಾತ್ಕಾರದಿಂದಲಾಗಲಿ ನಡೆದಿದ್ದಾಗ್ಯೂ ಅದು ಕೋರ್ಟಿನಲ್ಲಿ ರದ್ದುಮಾಡಲ್ಪಡುವದಿಲ್ಲ. ಮಂತ್ರಲೋಪವಾಯಿತೆಂಬ ಅಥವಾ ನಕ್ಷತ್ರಾನುಕೂಲವಿಲ್ಲವೆಂಬ ಇಂಥಾ ಕಾರಣಗಳಿಂದಲೂ ರದ್ದಾಗದು. ವಧೂವರರಿಗೆ ಜಾತಿಭೇದ, ಸಗೋತ್ರತ್ವ, ಅಥವಾ ಕೂಡದಾದ ಬಾಂಧವ್ಯ ಮುಂತಾದ ದೋಷಗಳಿದ್ದರೆ ಆ ಮದುವೆಯು ಸಲ್ಲಲಾರದು. ನಡೆದುಹೋದ ತರುವಾಯ ದಂಪತಿಗಳಲ್ಲಿ ಒಬ್ಬರಿಗೆ ಹುಚ್ಚು, ರೋಗ, ನಪುಂಸಕತ್ವ ಮುಂತಾದ ಕಾರಣಗಳಿಂದ ಮದುವೆಯು ರದ್ದಾಗಲಾರದು.

ವಿವಾಹದ ಒಪ್ಪಿಕೆ— ಮದುವೆಯಾಗುವದಕ್ಕೆ ಮುಂಚೆ ನಿಶ್ಚಿತಾರ್ಥವಾಗಿ ಕನ್ನಿಕೆಯನ್ನು ಇಂಥವರಿಗೇ ಕೊಡುವೆವೆಂದು ಒಪ್ಪಿಕೊಳ್ಳುವದುಂಟು. ಮದುವೆಯಲ್ಲಿ ಸಪ್ತಪದಿ ಎಂಬ ಕರ್ಮವಾದಹೊರತು ವಧೂವರರಿಬ್ಬರೂ ಗಂಡಹೆಂಡರಾಗುವದಿಲ್ಲ. ನಿಶ್ಚಿತಾರ್ಥಮಾತ್ರ ಆಗಿದ್ದರೆ, ತರುವಾಯ ಹೆಣ್ಣನ್ನು ಕೊಡುವದಿಲ್ಲವೆಂಬದಾಗಿಯಾಗಲಿ ಮಾಡಿಕೊಳ್ಳುವದಿಲ್ಲವೆಂಬದಾಗಿಯಾಗಲಿ ಉಭಯತ್ರರಲ್ಲಿ ಯಾರಾದರೂ ಒಪ್ಪಿಕೊಂಡ ಕರಾರನ್ನು ತಿರಸ್ಕರಿಸಿ ನಡೆದರೆ, ಕೋರ್ಟುಗಳಲ್ಲಿ ದಾವಾಮಾಡಿ ಬಲಾತ್ಕಾರದಿಂದ ಮದುವೆಯನ್ನು ಆಗ ಮಾಡಿಸಿಕೊಳ್ಳಲು ಆಗುವದಿಲ್ಲ. ನಿಷ್ಕಾರಣವಾಗಿ ಒಡಂಬಡಿಕೆಗೆ ತಪ್ಪಿ ನಡೆಯುವದರಿಂದ ನ್ಯಾಯವಾಗಿ ಉಂಟಾಗಬಹುದಾದ ನಷ್ಟವನ್ನು ಅಂಥಾ ನಷ್ಟವನ್ನು ಹೊಂದಿದವನಿಗೆ ಕೋರ್ಟಿನಲ್ಲಿ ನಷ್ಟಪಡಿಸಿದವನಿಂದ ಕೊಡಿಸಿಕೊಡುವರು.

ವಧೂವರರುಗಳ ಹಕ್ಕು.— ಮದುವೆಯಾಗುವದರಿಂದ ಗಂಡಹೆಂಡರಿಗೆ ಪರಸ್ಪರ ಉಂಟಾಗುವ ಆಸ್ತಿವಿಷಯವಾದ ಹಕ್ಕುಗಳನ್ನು ಮುಂದೆ ವಿವರಿಸುವೆವು. ಹೆಂಡತಿಯು ಮೈನರ್ ಅಂದರೆ— ಚಿಕ್ಕವಯಸ್ಸಿನವಳಾಗಿರುವವರಿಗೂ, ಗಂಡನೇ ಆಕೆಗೆ ಪೋಷಕ (ಗಾರ್ಡಿಯನ್) ನಾಗಿರುವನು. ಬ್ರಾಹ್ಮಣ ಮುಂತಾದ ಜಾತಿಯವರಲ್ಲಿ ಹುಡುಗಿ ದೊಡ್ಡವಳಾಗುವ ಪರಿಯಂತ ತಂದೆಯಮನೆಯಲ್ಲಿಯೇ ಇರುವ ಪದ್ಧತಿಯಿದೆ. ಇತರಕಾಲಗಳಲ್ಲಿ ಹೆಂಡತಿಯು ಗಂಡನ ಮನೆಯಲ್ಲಿಯೇ ಇರತಕ್ಕದ್ದು. ಆತನ ಅನುಮತಿಯಿಲ್ಲದೆ ಮೈನರ್ ಹೆಂಡತಿಯನ್ನು ಬೇರೇ ಯಾರಾದರೂ ತಮ್ಮ ಪೋಷಣೆಯಲ್ಲಿ ಇಟ್ಟುಕೊಂಡಿದ್ದರೆ, ಗಂಡನು ದಾವಾಮಾಡಿ ತನ್ನ ಸ್ವಾಧೀನಕ್ಕೆ ಕರಿಸಿಕೊಳ್ಳಬಹುದು.

ಗಂಡನಿಗೆ ಹೆಂಡತಿಯಮೇಲೆರುವ ಹಕ್ಕು—ಆಕೆಯು ಮೈನರ್ ಅಲ್ಲದೆ ಯೌವನ ಬಂದವಳಾಗಿದ್ದು, ಗಂಡನಮನೆಗೆ ಹೋಗದೆ ಇದ್ದ ಮಾಡಿದರೆ. ಆಕೆಯಮೇಲೆ ದಾವಾಮಾಡಿ ಅವಳು ತನ್ನಸಂಗಡ ಬರಬೇಕೆಂದು ಫೈಸಲನ್ನು ಗಂಡನು ಪಡೆಯಬಹುದು. ಗಂಡನ ಮನೆಯಲ್ಲಿ ಅತಿ ಕಠಿಣವಾಗಿ ತನ್ನನ್ನು ತೊಂದರೆಪಡಿಸುತ್ತಾರೆ, ಅಲ್ಲಿಹೋದರೆ ತನಗೆ ಅಪಾಯದ ಭಯ ಉಂಟೆಂದು ಹೆಂಡತಿಯು ರುಜುವಾತು ಮಾಡಿದರೆ, ಅವನ ಮನೆಗೆ ಅವಳು ಹೋಗಕೆಲಸವಿಲ್ಲ. ತಾನು ಓದಿದವಳು, ಅವನು ಮೂಢನು. ತನ್ನ ಯೋಗ್ಯತೆಗೆ ತಕ್ಕಹಾಗೆ ತನ್ನನ್ನು ಕಾಪಾಡಲಾರನೆಂದು ಹೆಂಡತಿಯು ಹೇಳಿದರೆ, ಅವಳು ಗಂಡನನ್ನು ಬಿಟ್ಟಿರುವದಕ್ಕೆ ಕೋರ್ಟಿನವರು ಒಪ್ಪುವದಿಲ್ಲ. ಕೆಲವರು ತಮ್ಮ ಅಳಿಯನು ತಂದೆತಾಯಿ ಅಥವ ಅಣ್ಣತಮ್ಮಂದಿರು ಅಥವ ಅಕ್ಕತಂಗಿಯರು ಇವರನ್ನು ಬಿಟ್ಟು ಬೇರೇ ಇದ್ದಹೊರತು ತಮ್ಮಮಗಳನ್ನು ಅಳಿಯನ ಮನೆಗೆ ಕಳುಹಿಸುವದಿಲ್ಲವೆನ್ನುವರು. ಇದು ಶಾಸ್ತ್ರಕ್ಕೆ ವಿರೋಧವಾದದ್ದು; ಹೆಂಡತಿಗೆ ಈ ವಾದವನ್ನು ಹೇಳಲಿಕ್ಕೆ ಹಕ್ಕಿಲ್ಲವಾದುದರಿಂದ ಅದನ್ನು ಕೋರ್ಟಿನಲ್ಲಿ ಅಂಗೀಕರಿಸುವದಿಲ್ಲ. ಗಂಡನು ವ್ಯಭಿಚಾರಿಯಾದಾಗ್ಯೂ, ಹೆಂಡತಿಗೆ ಇವನನ್ನು ಬಿಡುವದಕ್ಕೆ ಹಕ್ಕಿಲ್ಲ; ಆದರೆ ಕೀಳುಜಾತಿಯ ಹೆಂಗಸಿನೊಡನೆ ಸೇರಿಕೊಂಡು ಅವಳನ್ನು ಮನೆಯಲ್ಲಿಟ್ಟುಕೊಂಡಿದ್ದು ಹೆಂಡತಿಯನ್ನು ಬರಹೇಳಿದರೆ, ಇವಳು ತಿರಸ್ಕರಿಸಬಹುದು. ಕುಷ್ಟರೋಗ, ಅತಿಮೇಹ ಮುಂತಾದ ಅಸಹ್ಯಗಾದ ರೋಗದಿಂದ ಪೀಡಿತನಾಗಿದ್ದರೆ. ಹೆಂಡತಿಯು ತಾನು ಗಂಡನ ಮನೆಗೆ ಹೋಗುವದಿಲ್ಲವೆಂದು ಹೇಳಬಹುದೆಂಬದಾಗಿ, ಮುಂಬಯಿ ಹೈಕೋರ್ಟಿನವರು ಫೈಸಲ್ ಮಾಡಿದಾರೆ. ಬೊಂ. ಲಾ॥ ರಿ ೨೭.

ಶಿಕ್ಷೆ— ಹೆಂಡತಿಯು ತಾನೇ ಹೋಗುವದಿಲ್ಲವೆನ್ನುವದಲ್ಲದೆ, ಅವಳ

ತಂದೆತಾಯಿ ಮುಂತಾದವರು ಒಳಗೊಳಗೆ ಅವಳಿಗೆ ಬೋಧನೆಮಾಡಿ ಅವಳನ್ನು ನಿಲ್ಲಿಸಿಕೊಂಡರೆ, ಅವರಮೇಲೂ ಗಂಡನು ದಾವಾತರಬಹುದು. ಕೋರ್ಟಿನಲ್ಲಿ ಫೈಸಲಾದಮೇಲೂ, ಹೆಂಡತಿಯು ಹೋಗದೆ ಇದ್ದರೆ, ಸಿವಿಲ್ ಪ್ರೊಸೀಜರ್ ಕೋಡ್ ೨೬೦ ನೇ ಸೆಕ್ಷನಪ್ರಕಾರ ಅವಳಿಗೆ ಬೇರೆಯಾಗಿ ಸ್ವಂತ ಆಸ್ತಿ ಇದ್ದರೆ, ಅದನ್ನು ಜಪ್ತೀಮಾಡಬಹುದು. ಒಂದು ವರ್ಷ ಜಪ್ತಿಯಲ್ಲಿಟ್ಟದ್ದು. ಆದರೂ ಡಿಕ್ರಿಯಪ್ರಕಾರ ಅವಳು ನಡೆಯದೆಇದ್ದರೆ, ಸೊತ್ತನ್ನು ಮಾರಿ ಗಂಡನಿಗೆ ನಷ್ಟವಾದ ದ್ರವ್ಯವನ್ನು ಕೊಡಿಸಬಹುದು ಅದಲ್ಲದೆ ಆರುತಿಂಗಳು ಮಾಯಿದೆಯವರಿಗೂ ಹೆಂಡತಿಯನ್ನು ಸಿವಿಲ್‌ಖೈದಿನಲ್ಲಿ ಇಡಬಹುದು. ನಿಶ್ಚಿತಾರ್ಥಕ್ಕೆ ತಪ್ಪಿದರೆ ಕೋಪಲೆಬನಿಯಾ ಜಾತಿಯ ಒಬ್ಬ ವಾದಿಯು ಪ್ರತಿವಾದಿಯ ೭ ವರುಷದ ಮಗಳನ್ನು ಹುಡುಗಿಗೆ ಮದುವೆಯಾಗಲು ಪ್ರಾಪ್ತವಯಸ್ಸು ಬಂದಕೂಡಲೇ ವಿವಾಹ ಮಾಡಿಕೊಡಬೇಕೆಂದು ನಿಶ್ಚಿತಾರ್ಥಕ್ಕೆ ಬೇಕಾದ ದ್ರವ್ಯ ಮುಂತಾದ ಸಾಮಗ್ರಿಗಳನ್ನೆಲ್ಲಾ ಕೊಟ್ಟನು. ಹುಡುಗಿಗೆ ಪ್ರಾಪ್ತವಯಸ್ಸು ಬರಲು ಹುಡುಗಿ ತಂದೆಯು ಮದುವೆ ಮಾಡಿಕೊಡಲು ತನ್ನ ಮಗಳು ಒಪ್ಪುವದಿಲ್ಲವೆಂದು ಹೇಳಿದನು. ಕೋರ್ಟಿನವರು ಇಷ್ಟವಿಲ್ಲದವಳನ್ನು ಬಲಾತ್ಕರಿಸುವದು ನ್ಯಾಯವಲ್ಲವೆಂದು ವಾದೀಗೆ ಪ್ರತಿವಾದಿಯು ಡಾಮೇಜನ್ನು ಕೊಡುವಂತೆ ಫೈಸಲ್ ಕೊಟ್ಟರು. ಪುರುಷೋತ್ತಮದಾಸ ತ್ರಿಭುವನದಾಸ ವರಸಸ್ ಪುರುಷೋತ್ತಮದಾಸ್ ಮಂಗಲದಾಸ್, ೨೧ ಬಿ. ೨೨. ೧೮೯೮.

ಬಹುಜನ ಗಂಡಂದಿರು—ಒಬ್ಬ ಸ್ತ್ರೀಯನ್ನು ಇಬ್ಬರು ಮೂವರು ಹತ್ತು ಜನ ಪುರುಷರು ಮದುವೆಯಾಗುವ ಪದ್ಧತಿ ಈಗಲೂ ಗುಡ್ಡ ಕಾಡು ಜನಗಳಲ್ಲಿ ಮಾತ್ರ ರೂಢಿಯಲ್ಲಿದೆ. ಇವರಲ್ಲಿ ಆಹಾರಪದಾರ್ಥಗಳು ದೊರೆಯುವದು ಒಂದೊಂದು ಕಾಲದಲ್ಲಿ ಬಹಳ ಕಷ್ಟವಾದ್ದರಿಂದ ಈ ಪದ್ಧತಿಯನ್ನನುಸರಿಸಿಕೊಂಡಿರುವರು. ಈ ಪದ್ಧತಿಯು ಪಾಂಡವರ ಪತ್ನಿಯಾದ ದ್ರೌಪತಿಯು ೫ ಜನ ಗಂಡಂದಿರನ್ನು ಉಂಟಾಗಿದ್ದುದರ ಮೇಲೆ ಪಾಂಚಾಲ ದೇಶದಲ್ಲಿಯೂ, ಸ್ತ್ರೀಮಲಯಾಳದಲ್ಲಿಯೂ ಆಚರಣೆಯಲ್ಲಿದೆ. ಕೆಲವು ಕೆಲವು ಕಡೆ ಒಬ್ಬ ಸ್ತ್ರೀಯು ಒಬ್ಬ ಪುರುಷನನ್ನು ಶಾಸ್ತ್ರೋಕ್ತವಾಗಿ ಮದುವೆಮಾಡಿಕೊಂಡದ್ದಾಗ್ಯೂ ಅವಳು ಮತ್ತೊಬ್ಬನ ಪ್ರೇಮಕ್ಕೆ ಒಳಗಾಗಲು ಅಡ್ಡಿ ಇಲ್ಲವು. ಈ ಪ್ರಾಂತ್ಯಗಳಲ್ಲಿ ಅಳಿಯ ಸಂತಾನವೆಂದು ಹೆಣ್ಣುಮಕ್ಕಳ ಮಕ್ಕಳಿಗೇನೇ ಆಸ್ತಿಯ ಹಕ್ಕು ಬರುವದು. ನಮ್ಮ ಪ್ರಾಂತ್ಯದಲ್ಲಿ ಮೊದಲು ಈ ಪದ್ಧತಿಯು ಇದ್ದಿದ್ದಾಗ್ಯೂ ಈಗ ಅಂತಹವರನ್ನು ದೋಷಯುಕ್ತರನ್ನಾಗಿ ಮಾಡಿ ಕಠಿಣವಾಗಿ ಶಿಕ್ಷಿಸುವರು.

ಬಹುಜನ ಹೆಂಡತಿಯರು—ಪೂರ್ವದಲ್ಲಿ ಒಬ್ಬ ಪುರುಷನು ಅನೇಕ ಸ್ತ್ರೀಯರನ್ನು ಮದುವೆಮಾಡಿಕೊಳ್ಳುವ ಪದ್ಧತಿ ಇತ್ತು. ಶಾಸ್ತ್ರಗಳನ್ನು ಪುರುಷರೇ ಬರೆಯುತ್ತಾ ಬಂದುದರಿಂದ ಅವರಿಗನುಕೂಲವಾದಂತೆ ಬರೆದುಕೊಂಡಿರುವರು. ಈಗಲೂ ಅನೇಕ ಹಿಂದೂಗಳು ತಾವು ತಮ್ಮ ಮನಸ್ಸಿಗೆ ಬೇಕಾದಷ್ಟು ಜನ ಹೆಂಡತಿಯರನ್ನು ಮದುವೆಮಾಡಿಕೊಳ್ಳಬಹುದು ಅದೇ ರೀತಿ ತಮ್ಮ ಹೆಂಡತಿಯರು ಮಾಡುವದು ತಮಗೆ ಅಪಮಾನವೆಂತಲೂ ಭಾವಿಸಿರುವರು. ಈ ಶತಮಾನದಲ್ಲಿ ನಾಗರೀಕವು ಹರಡಿ ಈ ಪದ್ಧತಿಯು ಕಡಮೆಯಾದಾಗ್ಯೂ ಇನ್ನೂ ಕೆಲವು ಪುಣ್ಯವಂತರು ೧೦-೨೦-೩೦ ಕಡೆಗೆ ೭೦-೮೦ ಜನ ಹೆಂಡರನ್ನು ಮದುವೆ ಮಾಡಿಕೊಂಡಿರುವರು. ಯಾವ ಹೆಂಡರು ಸುಪುತ್ರನನ್ನು ಪಡೆಯುತ್ತಾಳೋ ಅವಳಿಗೆ ಶ್ರೇಷ್ಠತ್ವ ಬರುವದಲ್ಲದೆ ಆಕೆಯ ಹೊಟ್ಟೆಯಲ್ಲಿ ಹುಟ್ಟಿದವನಿಗೆ ಪಿತರಾರ್ಜಿತವಾದ ಆಸ್ತಿಯ ಹಕ್ಕು ಬರುವದು ಈ ಪದ್ಧತಿಯು ಕೆಲವು ರಾಜಮನೆತನದಲ್ಲಿರುವದೇ ಹೊರತು ಇತರರಲ್ಲಿ ಅಪರೂಪವಾಗಿರುವದು

ಜೀವನಾಂಶ—ಗಂಡನು ಹೆಂಡತಿಯನ್ನು ನಿಷ್ಕಾರಣವಾಗಿ ಬಿಟ್ಟು ಬಿಟ್ಟರೆ ಆಕೆಯು ತನ್ನನ್ನು ಸೇರಿಸಿಕೊಳ್ಳಬೇಕೆಂದು ಇವನ ಮೇಲೆ ದಾವಾ ಮಾಡುವದಕ್ಕೇನೂ ಅಡ್ಡಿ ಇರುವದಿಲ್ಲ. ಆದರೂ ಇಂಥಾ ದಾವಾಗಳು ವಿಶೇಷವಾಗಿ ಬರುವದಿಲ್ಲ. ಬಹುಶಃ ಬೇಡವೆಂಬ ಗಂಡನ ಮನೆಗೆ ಹೋದಾಗ್ಯು ಬಾಳುವದು ಕಷ್ಟವೆಂಬ ಅನುಮಾನದಿಂದ ಹೀಗಿರಬಹುದು. ಇಂಥಾ ವಿಷಯಗಳಲ್ಲಿ ಹೆಂಡತಿಗೆ ಜೀವನಾಂಶ ಬರಬೇಕೆಂದು ದಾವಾ ಮಾಡುತ್ತಾಳೆ. ಇದರ ವಿಷಯವನ್ನು ಮುಂದೆ ಹೇಳಲಾಗುವದು. ಹೆಂಡತಿಯು ದುರ್ನಡತೆಯುವಳಾಗಿ ಗಂಡನನ್ನು ಬಿಟ್ಟು ಹೋದರೆ ಜೀವನಾಂಶ ದೊರೆಯಲಾರದು.

ಪುನರ್ವಿವಾಹ— (ಎರಡನೆಯ ಮದುವೆ) ಧರ್ಮಶಾಸ್ತ್ರದಲ್ಲಿ ಒಬ್ಬ ಪತ್ನಿ ಇರುವಾಗ ಅವಳು ಅಪುತ್ರತ್ವ ಕೆಟ್ಟ ನಡತೆ ಮುಂತಾದ ಯಾವದಾದರೂ ಕೊರತೆಯುಳ್ಳವಳಾಗಿದ್ದ ಹೊರತು ಮತ್ತೊಬ್ಬಳನ್ನು ಮಾಡಿಕೊಳ್ಳಕೂಡದೆಂದು ಕಂಠೋಕ್ತವಾಗಿ ಹೇಳಿದೆ. ಆದರೆ ಇದು ಪಾಪಭೀತರಿಗೆ ಹೇಳಿದ ಮಾತೇ ಹೊರತು ಅನೇಕ ಸ್ತ್ರೀಯರನ್ನು ನಿಷ್ಕಾರಣವಾಗಿ ಮದುವೆಮಾಡಿಕೊಳ್ಳುವದು 'ಲಾ' ಎಂಬ ವ್ಯವಹಾರ ಧರ್ಮಕ್ಕೆ ವಿರೋಧವಲ್ಲವೆಂದು ಫೈಸಲ್ಮಾಡಿದಾರೆ. ಆದ್ದರಿಂದ ಒಬ್ಬ ಗಂಡಸು ಮನಸ್ಸು ಬಂದಷ್ಟು ಜನ ಹೆಂಗಸರನ್ನು ಮದುವೆ ಮಾಡಿಕೊಳ್ಳಬಹುದು. ಮತ್ತೊಬ್ಬಳನ್ನು ಮಾಡಿಕೊಂಡರೆ ತಾನು ಮನೆಯಲ್ಲಿರುವದಿಲ್ಲವೆಂದು ಹೇಳಲು ಮೊದ

ಲು ಬಂದ ಹೆಂಡತಿಗೆ ಹಕ್ಕಿರುವದಿಲ್ಲವು. ಒಬ್ಬಳು ಸತ್ತ ಮೇಲೆ ಮತ್ತೊಬ್ಬಳನ್ನು ಮಾಡಿಕೊಳ್ಳಬಹುದೆಂಬುದನ್ನು ಹೇಳಲವಶ್ಯಕವೇ ಇಲ್ಲ.

ಸ್ತ್ರೀ ಪುನರ್ವಿವಾಹವು ಅಶಾಸ್ತ್ರೀಯವು—ಹೆಂಗಸರು ಒಬ್ಬ ಗಂಡನಿರುವಾಗ ಮತ್ತೊಬ್ಬನನ್ನು ಮದುವೆ ಮಾಡಿಕೊಳ್ಳುವದು ಅಶಾಸ್ತ್ರೀಯವೆಂದು ಹೇಳಬೇಕಾದದ್ದೇ ಇಲ್ಲ. ಆದರೂ ಕೆಲವರು ಶೂದ್ರರಲ್ಲಿಯೂ ಮತ್ತು ಇನ್ನೂ ಕೀಳು ಜಾತಿಯವರಲ್ಲಿಯೂ ಒಬ್ಬ ಗಂಡನನ್ನು ಬಿಟ್ಟು ಮತ್ತೊಬ್ಬನನ್ನು ಮಾಡಿಕೊಳ್ಳುವ ಪದ್ಧತಿ ಅನೇಕ ಸ್ಥಳಗಳಲ್ಲುಂಟು. ಶೂದ್ರರ ಅನೇಕ ಜಾತಿಗಳಲ್ಲಿ ಮದುವೆಯಿಂದ ಉಂಟಾಗುವ ನಿರ್ಬಂಧಗಳು ಬಹಳ ಕಡಿಮೆಯಾಗಿವೆ ಇವರು ಈ ವಿಷಯದ ನಿರ್ಬಂಧಗಳನ್ನು ಸ್ವಲ್ಪ ಹೆಚ್ಚು ಮಾಡಿಕೊಂಡರೆ ಚೆನ್ನಾಗಿದ್ದೀತು. ಮಹಾರಾಷ್ಟ್ರ ದೇಶದಲ್ಲಿ ಶೂದ್ರರಲ್ಲಿ ಗಂಡನಿಗೆ ಇಷ್ಟಬಂದಾಗ ವಿವಾಹ ಬಂಧ ವಿಮೋಚನಾರ್ಥವಾದ ಕಾಗದವನ್ನು ಕೊಟ್ಟು ಅವಳನ್ನು ಬಿಟ್ಟುಬಿಡಬಹುದು. ಹಾಗೆ ವಿಮುಕ್ತಳಾದ ಹೆಂಗಸು ಪುನಃ ಮತ್ತೊಬ್ಬನನ್ನು ಮದುವೆ ಮಾಡಿಕೊಳ್ಳಬಹುದು. ಮೈಸೂರು ಸೀಮೆ ಮುಂತಾದ ಸ್ಥಳಗಳಲ್ಲಿ ಹೊಲೆಯರು ಮುಂತಾದ ಜಾತಿಗಳಲ್ಲಿ ಒಬ್ಬನ ಹೆಂಡತಿ ಮತ್ತೊಬ್ಬನನ್ನು ಕಟ್ಟಿಕೊಂಡು ಹೋದರೆ ಅವನಿಂದ ಮೊದಲಿನ ಗಂಡನಿಗೆ ತೆರವೆಂಬದಾಗಿ ಮದುವೆಯ ಖರ್ಚನ್ನು ಕೊಡಿಸಿಬಿಡುತ್ತಾರೆ. ಕೆಲವು ಜಾತಿಗಳಲ್ಲಿ ಒಬ್ಬನ ಹೆಂಡತಿಯನ್ನು ಮತ್ತೊಬ್ಬ ಎತ್ತಿಕೊಂಡು ಹೋದರೆ ಇಷ್ಟು ಬೆಲೆ ಕೊಟ್ಟರೆ ಸಾಕೆಂದು ನಿರಖು ಮಾಡಿಕೊಂಡಿದಾರೆ. ಇನ್ನೂ ಕೆಲವು ಜಾತಿಗಳಲ್ಲಿ ಜಾತಿಯವರೇ ಪಂಚಾಯಿತಿ ಸೇರಿ ಗಂಡಹೆಂಡಿರ ಸಂಬಂಧವನ್ನು ಬಿಡಿಸಬಹುದೆಂಬ ಪದ್ಧತಿಯನ್ನು ಮಾಡಿಕೊಂಡಿದಾರೆ. ಮುಂಬಯಿ ಸೀಮೆಯಲ್ಲಿ ಮೊಟ್ಟ ಮೊದಲು ಲಗ್ನವಾದ ಹೆಂಡತಿಗೂ ಗಂಡನನ್ನು ಮಾಡಿಕೊಂಡ ಹೆಂಡತಿಗೂ ವ್ಯತ್ಯಾಸವೇನೂ ಇಲ್ಲವೆಂದು ಹೇಳಿದಾರೆ. ಕೆಲವು ಗುಡ್ಡ ಕಾಡುಜನಗಳಲ್ಲಿ ತಮ್ಮ ಹೆಂಡತಿಯರುಗಳನ್ನು ತಮಗೆ ಅವಶ್ಯಕಬಿದ್ದಾಗ ಭಂಗಾರದ ನಗಗಳಂತೆ ಕೆಲವು ಕಾಲ ಅಡವು ಇಡುವದುಂಟು ಜೀವಂತನಾಗಿರುವ ಗಂಡನ ಅನುಮತಿ ಇಲ್ಲದೆ ಮತ್ತೊಬ್ಬನನ್ನು ಮದುವೆ ಮಾಡಿಕೊಂಡರೆ ಅಂಥವಳು ಸೂಳೆಯಾಗಿರುವಳೇ ಹೊರತು ಅವಳಿಗೆ ಕ್ರಮವಾದ ಹೆಂಡತಿಯಾಗಿರುವದಕ್ಕೆ ಅಧಿಕಾರವಿಲ್ಲ. ಪಂಚಾಯಿತರು ಸೇರಿ ಗಂಡನಿರುವಾಗ ಪುನರ್ವಿವಾಹ ಮಾಡಿಕೊಳ್ಳಬಹುದೆಂದು ಹೆಂಗಸಿಗೆ ಅನುಜ್ಞೆ ಕೊಟ್ಟರೆ ಆ ಪುನರ್ವಿವಾಹವು ಸರಿಯಾದ ಮದುವೆಯಾಗಲಾರದೆಂದೂ ಎರಡನೇ ಸಾರಿ ಇವಳನ್ನು ಮದುವೆಮಾಡಿಕೊಂಡ ಗಂಡನು ವ್ಯಭಿಚಾರ ಮಾಡಿದ ತಪ್ಪಿತಕ್ಕೆ ಶಿಕ್ಷಾರ್ಹನೆಂದೂ, ಮುಂಬಯಿ ಹೈಕೋರ್ಟಿನಲ್ಲಿ ಪೈಸಲು ಮಾಡಿದಾರೆ.

ಮದ್ರಾಸು ಹೈಕೋರ್ಟಿನವರು ದಕ್ಷಿಣ ಕನಡಾದಲ್ಲಿ ಲಿಂಗಾಯಿತರ ಜಾತಿಯ ಹೆಂಗಸನ್ನು ಗಂಡನು ಬಿಟ್ಟಿದ್ದರೆ ಅವಳು ಮತ್ತೊಬ್ಬನನ್ನು ಮದುವೆ ಮಾಡಿಕೊಳ್ಳಬಹುದೆಂದು ತೀರ್ಪು ಮಾಡಿದ್ದಾರೆ. ಧರ್ಮಶಾಸ್ತ್ರಪ್ರಕಾರ ವಿವಾಹದಿಂದುಂಟಾದ ಸಂಬಂಧವೆಂದಿಗೂ ವಿಮೋಚನವಾಗುವದಿಲ್ಲ. ಆದರೆ ಆಯಾ ಜಾತಿಗಳಲ್ಲಿರುವ ಕುಲಾಚಾರದ ಪ್ರಕಾರ ವಿವಾಹಬಂಧ ವಿಮೋಚನೆಯನ್ನು ಮಾಡಿಕೊಳ್ಳಬಹುದೆಂದು ಫೈಸಲಾಗಿದೆ. ಆದರೂ ಮೇಲೆ ಹೇಳಿದ ಪ್ರಕಾರ ಗಂಡನಿರುವಾಗ ಅವನನ್ನು ಬಿಟ್ಟು ಮತ್ತೊಬ್ಬನನ್ನು ಮನಸ್ಸು ಬಂದ ಹಾಗೆಲ್ಲಾ ಕಟ್ಟಿಕೊಳ್ಳತಕ್ಕ ಪದ್ಧತಿಗಳು ಕೋರ್ಟುಗಳಲ್ಲಿ ಎಷ್ಟು ಮಟ್ಟಿಗೆ ಅಂಗೀಕರಿಸಲ್ಪಡುವವೋ ಆ ವಿಷಯವನ್ನು ನಿರ್ಧಾರವಾಗಿ ಹೇಳಲು ಆಗುವದಿಲ್ಲ. ಒಡ್ಡರು ಕೊರಚರಲ್ಲಿ ಮಾತ್ರ ಅನೇಕ ಜನ ಗಂಡಂದಿರನ್ನು ಮದುವೆಯಾಗುವ ಪದ್ಧತಿಯು ಈಗಲೂ ರೂಢಿಯಲ್ಲಿದೆ.

ಗಂಡ ಸತ್ತಮೇಲೆ ಮದುವೆಮಾಡಿಕೊಳ್ಳುವದು —ಮೊದಲು ಗಂಡನಿರುವಾಗಲೇ ಮತ್ತೊಬ್ಬನನ್ನು ಮಾಡಿಕೊಳ್ಳುವ ಮದುವೆಯಂತೆ ನಿಂದಾರ್ಹವಲ್ಲ. ಒಂದು ಸಲ ಮದುವೆಯಾದ ಮೇಲೆ ಪರಸ್ಪರ ಸರಿಬೀಳದಿದ್ದರೆ ಗಂಡ ಹೆಂಡರು ತಮ್ಮ ಮನಸ್ಸು ಬಂದಂತೆ ಬೇರೆಯಾಗುವದನ್ನು ಯಾವ ಸೀಮೆಯಲ್ಲಿಯೂ ಅಂಗೀಕರಿಸುವದಿಲ್ಲ. ಆದರೆ ದಂಪತಿಗಳು ಇಬ್ಬರಲ್ಲೊಬ್ಬರು ಸತ್ತರೆ ವಿವಾಹಬಂಧ ವಿಮೋಚನವಾಯಿತೆಂದು ನಮ್ಮ ಸೀಮೆ ವಿನಾ ಇತರ ಸ್ಥಳಗಳಲ್ಲೆಲ್ಲಾ ಒಪ್ಪಿಕೊಂಡಿದಾರೆ. ಧರ್ಮ ಶಾಸ್ತ್ರಪ್ರಕಾರ ವಿಧವಾ ವಿವಾಹಗಳು ನಡೆಯಬಹುದೆಂದು ಅನೇಕ ವಿದ್ವಾಂಸರು ಹೇಳುತ್ತಾರೆ. ಮತ್ತು ಕೆಲವರು ಶಾಸ್ತ್ರಗಳಲ್ಲಿ ವಿಧವಾ ವಿವಾಹಗಳನ್ನು ನಿಷೇಧಿಸಿರುವುದಾಗಿ ಹೇಳುತ್ತಾರೆ. ಉಭಯತ್ರರೂ ತಮ್ಮತಮ್ಮ ಮತಾನುಸಾರವಾದ ವಚನಗಳನ್ನು ಶ್ರುತಿ ಸ್ಮೃತಿಗಳಿಂದ ತೆಗೆದು ತೋರಿಸಿರುತ್ತಾರೆ. ಮದ್ರಾಸ್ ಮಿ॥ ವಿರೇಶಲಿಂಗಂ ಯವರು ವಿಧವಾ ವಿವಾಹಕ್ಕೆ ಪ್ರೋತ್ಸಾಹಕರಾಗಿ ಅನೇಕ ಗ್ರಂಥಗಳ ಆಧಾರವನ್ನು ತೋರಿಸಿರುವರು. ಮತ್ತು ಮದ್ರಾಸ್ ಆನರೆಬಲ್ ಶ್ರೀನಿವಾಸ ಶಾಸ್ತ್ರಿಗಳು ಋತುಮತಿಯಾದ ನಂತರ ಕೆಲವು ಮದುವೆಗಳನ್ನು ಮಾಡಿರುವರು ಈಗ ನಮ್ಮಲ್ಲಿ ಈ ವಿಷಯವನ್ನು ಕುರಿತು ಹ್ಯಾಗ ಬೇರೇ ಬೇರೇ ವಾದಗಳು ಉಂಟೋ ಅದೇ ಪ್ರಕಾರ ಪೂರ್ವೀಕರಾದ ಮಹರ್ಷಿಗಳಲ್ಲಿಯೂ ಬಿನ್ನವಾದಗಳಿರುತ್ತೆಂಬುವದಕ್ಕೆ ಸಂದೇಹವಿಲ್ಲ. ಆದ್ದರಿಂದಲೇ ಈ ಉಭಯ ಪಕ್ಷದವರೂ ತಮತಮಗ ತಕ್ಕ ಆಧಾರಗಳನ್ನು ಶಾಸ್ತ್ರಗಳಲ್ಲಿ ತೋರಿಸಬಹುದಾಗಿದೆ. ಶಾಸ್ತ್ರಗಳಲ್ಲಿ ನಿಷೇಕಕ್ಕೆ ಮುಂಚೆ ಗಂಡ ಸತ್ತರೆ ಪುನರ್ವಿವಾಹ ಮಾಡಬಹುದೆಂಬುದಕ್ಕೆ ಹೆಚ್ಚಾದ ಆಧಾರವಿದೆ. ಮೊದಲು ಮದುವೆ ವಿಷಯದಲ್ಲಿ ಈಗಿನ

ಷ್ಟು ನಿರ್ಬಂಧಗಳಿರಲಿಲ್ಲವೆಂದು ವೇದಮಂತ್ರಗಳಿಂದಲೂ ಪುರಾಣಮಹಾ ಭಾರತಗಳಲ್ಲಿರುವ ಅನೇಕ ಇತಿಹಾಸಗಳಿಂದಲೂ ತಿಳಿಯುಬರುವದು. ಪೂರ್ವಕಾಲದಲ್ಲಿ ನಮ್ಮ ದೇಶದಲ್ಲಿ ವಿಧವಾ ವಿವಾಹವು ನಡೆಯುತ್ತಿತ್ತೆಂಬುವದನ್ನು ಕುರಿತು ಸಂದೇಹಪಡುವದಕ್ಕೇನೂ ಕಾರಣವೇ ಇಲ್ಲ. ಈಚೆಗೆ ನಿರ್ಬಂಧಗಳು ಹೆಚ್ಚಾಗುತ್ತಾ ವಿಧವಾ ವಿವಾಹದ ಆಚರಣೆಯು ತಪ್ಪಿಹೋಯಿತು. ತಪ್ಪಿ ಹೋದ ಈ ಆಚಾರವು ಈಗ ದುರಾಚಾರವಾಗಿ ಭಾವಿಸಲ್ಪಡುತ್ತಿದೆ. ಈಗ ವಿಧವಾವಿವಾಹವನ್ನು ಕೋರುವ ಪಕ್ಷದವರು ಆ ಆಚಾರವನ್ನು ಪುನಹ ಸ್ಥಾಪಿಸಬೇಕೇ ಹೊರತು ಶ್ರುತಿಸ್ಮೃತಿಗಳಿಂದ ವಚನಗಳನ್ನು ಹೇಳುವದರಲ್ಲಿ ತಕ್ಕ ಪ್ರಯೋಜನವೇನೂ ಇಲ್ಲ. ಕೋರ್ಟುಗಳಲ್ಲಿ ಯಾವ ಪಕ್ಷವನ್ನು ಅಂಗೀಕರಿಸಬೇಕೋ ಎಂಬ ಸಂಶಯವನ್ನು ತಪ್ಪಿಸುವದಕ್ಕೋಸ್ಕರ ೧೮೫೬ನೇ ಇಸವಿಯಲ್ಲಿ ೧೫ನೇ ನಂಬರು ಆಕ್ಟೆಂಬ ಶಾಸನವನ್ನು ಸರಕಾರದವರುಂಟುಮಾಡಿದರು. ಯಾವ ಜಾತಿಯುವರಾಗಲಿ ಈಗ ಗಂಡಸತ್ತ ಮೇಲೆ ಪುನರ್ವಿವಾಹ ಮಾಡಿಕೊಂಡರೆ ಅವರನ್ನು ಕೋರ್ಟುಗಳಲ್ಲಿ ಶಾಸ್ತ್ರೀಯವಾಗಿ ಮದುವೆಯಾದವರಂತೆ ಭಾವಿಸಬೇಕು.

ಪುನರ್ವಿವಾಹವು ಕೆಲವು ಜಾತಿಗಳಲ್ಲಿ ಅನಾದಿಸಿದ್ಧವಾದುದು—ಕೆಲವು ಜಾತಿಗಳಲ್ಲಿ ಪುನರ್ವಿವಾಹವು ಪದ್ಧತಿಯು ಮೇರೆ ಮೊದಲಿಂದಲೇ ನಡೆಯುತಿದೆ. ಕರ್ಣಾಟಕ ದೇಶದಲ್ಲಿ ಅನೇಕ ಶೂದ್ರಜಾತಿಯುವರು ಗಂಡಸತ್ತ ಹೆಂಗಸರಿಗೆ ಕೂಡುವಳಿಯನ್ನು ಮಾಡುತ್ತಾರೆ. ಈಗ ಅವರೂ ಕೂಡ ಈ ಒಳ್ಳೇ ಪದ್ಧತಿಯನ್ನು ಬಿಟ್ಟು ಬಿಟ್ಟು ಬ್ರಾಹ್ಮಣರ ಕ್ರೂರವಾದ ಆಚರಣೆಯನ್ನೇ ತಮ್ಮಲ್ಲಿಯೂ ನಡಿಸುವದರಲ್ಲಿ ಕುತೂಹಲವುಳ್ಳವರಾಗಿದಾರೆ. ಕೂಡುವಳಿ ಅಥವ ಸೀರೆಯುಡಿಕೆಯಾದ ಹೆಂಗಸನ್ನು ಯಾವದಾದರೂ ಹಬ್ಬ ಹರಿದಿನವಾದರೆ ಕರೆಯುಕೂಡದೆಂತಲೂ ಆಕೆಯು ಮದುವೆ ಚಪ್ಪರ ಮುಂತಾದ ಮಂಗಳ ಕಾರ್ಯಗಳು ನಡೆಯುವ ಸ್ಥಳಗಳಿಗೆ ಸೇರಕೂಡದೆಂತಲೂ ಕೆಲವು ಪದ್ಧತಿಗಳನ್ನು ಮಾಡಿಕೊಂಡಿದ್ದಾರೆ. ಇವನ್ನು ಇವರು ಬ್ರಾಹ್ಮಣರ ಪದ್ಧತಿಯನ್ನು ನೋಡಿ ಹೊಸದಾಗಿ ಕಲಿತುಕೊಂಡರೆಂಬುವದಕ್ಕೆ ಸಂದೇಹವಿಲ್ಲ, ಕೋರ್ಟುಗಳ ವ್ಯವಹಾರ ವಿಷಯುಗಳಲ್ಲಿ ಕೂಡುವಳೀ ಹಂಡತಿಗೂ ಲಗ್ನವಾದ ಹೆಂಡತಿಗೂ ಯಾವ ವಿಧವಾದ ವ್ಯತ್ಯಾಸವೂ ಇಲ್ಲ. ವ್ಯ. ದೀ.

ಜಾತಿ ಭ್ರಷ್ಟತೆಯಿಂದ ವಿಮೋಚನೆ—ಗಂಡ ಹೆಂಡರಲ್ಲೊಬ್ಬರು ಕ್ರಿಶ್ಚಿಯನ್ ಮುಂತಾದ ಅನ್ಯ ಮತಕ್ಕೆ ಸೇರಿ ಜಾತಿ ಭ್ರಷ್ಟತೆಯನ್ನು ಹೊಂದಿದಾಗ್ಯೂ ಮದುವೆಯು ಸಂಬಂಧವು ವಿಮೋಚನವಾಗುವದಿಲ್ಲ. ಆದ್ದರಿಂದ ಗಂಡನು ಜಾತಿಕೆಟ್ಟರೆ ಹೆಂಡತಿಯು ಪುನಃ ಮದುವೆಯಾಗಲಿಕ್ಕಿಲ್ಲ. ಇ

ಬ್ಬರಲ್ಲೊಬ್ಬರು ಇತರ ಮತಕ್ಕೆ ಸೇರಿದ್ದರಿಂದ ಉಳಿದ ಮತ್ತೊಬ್ಬರು ಅವರ ಜೊತೆಗೆ ಸೇರುವುದಕ್ಕೆ ಸಮ್ಮತಿಸದಿದ್ದರೆ ಕೋರ್ಟಿನವರು ವಿವಾಹ ಸಂಬಂಧವು ತಪ್ಪುವ ಹಾಗೆ ತೀರ್ಪುಮಾಡುತ್ತಾರೆ. ತರುವಾಯ ಇತರ ಮತಕ್ಕೆ ಸೇರಿರುವವರು ಬೇರೆ ಮದುವೆಯನ್ನು ಮಾಡಿಕೊಳ್ಳಬಹುದು. ಕ್ರಿಶ್ಚಿಯನ್ ಮತದ ಪ್ರಕಾರ ಒಬ್ಬ ಹೆಂಡತಿ ಇರುವಾಗ ಗಂಡನು ಇನ್ನೊಬ್ಬಳನ್ನು ಮದುವೆ ಮಾಡಿಕೊಳ್ಳಕೂಡದು. ಆದ್ದರಿಂದ ಮೇಲೆ ಹೇಳಿದಂತೆ ಹೊಸದಾಗಿ ಅವರಿಗೋಸ್ಕರ ಒಂದು ಆಕ್ಟನ್ನು ಕಲ್ಪಿಸಬೇಕಾಯಿತು. ಜಾತಿಭ್ರಷ್ಟನಾದ ಗಂಡನು ದಾವಾ ಮಾಡಿದರೆ ಹೆಂಡತಿಯು ತಾನು ಅವನೊಡನೆ ಹೋಗುವದಿಲ್ಲವೆಂದು ಹೇಳಬಹುದು. ಕ್ರಿಶ್ಚಿಯನ್ ಮತಕ್ಕೆ ಸೇರಿದ ಗಂಡನು ಕೋರ್ಟಿನ ಫೈಸಲು ಪ್ರಕಾರ ವಿಮುಕ್ತನಾಗಿ ಬೇರೆ ಮದುವೆಯಾದರೆ ಮೊದಲಿನ ಮತದಲ್ಲೇ ಇರುವ ಅವನ ಹೆಂಡತಿಯೂ ಬೇರೇ ಮದುವೆಯಾಗುವದನ್ನು ಕೋರ್ಟಿನಲ್ಲಿ ಅಂಗೀಕರಿಸುವರು.

ಪುತ್ರಸ್ವೀಕಾರ ದತ್ತುಮಾಡಿಕೊಳ್ಳತಕ್ಕವರು—ಅಪುತ್ರವಂತರಾದವರು ತಮ್ಮ ವಂಶಾಭಿವೃದ್ಧಿಗೋಸ್ಕರ ಮತ್ತೊಬ್ಬರ ಮಗನನ್ನು ದತ್ತು ತೆಗೆದುಕೊಳ್ಳುವದುಂಟು, ಹುಡುಗನು ದತ್ತನಾದ ತರುವಾಯ ದತ್ತು ತಾಯಿತಂದೆಗಳಿಗೆ ಹೊಟ್ಟೆಯಲ್ಲಿ ಹುಟ್ಟಿದ ಮಗನಂತೆಯೇ ಆಗುವನು. ಅವನು ಹುಟ್ಟಿದ ಕುಟುಂಬದಲ್ಲಿ ಅವನಿಗೆ ಆಸ್ತಿ ಮುಂತಾದವುಗಳಿಗೆ ಹಕ್ಕುಗಳು ತಪ್ಪಿಹೋಗುವವು. ಮದುವೆ ಮಾಡಿಕೊಳ್ಳಲು ವರ್ಸೆ ನೋಡುವದಕ್ಕೆ ವಿನಾ ಅವನಿಗೂ ಮೊದಲಿನ ಕುಟುಂಬದವರಿಗೂ ದತ್ತು ತಾಯಿ ತಂದೆಗಳ ಮುಖಾಂತರವಿರುವದೇನೋ ಅದು ಹೊರತು ಮೊದಲಿನ ಸಂಬಂಧವೇನೂ ಉಳಿದಿರುವದಿಲ್ಲ. ದತ್ತನು ತನ್ನ ಬಾಂಧವ್ಯಗಳನ್ನೆಲ್ಲ ಸ್ವೀಕೃತ ಕುಟುಂಬದ ಮೂಲಕವಾಗಿಯೇ ಎಣಿಸತಕ್ಕದ್ದು. ದತ್ತು ತೆಗೆದುಕೊಂಡ ಹುಡುಗನನ್ನು ದತ್ತು ತಾಯಿತಂದೆಗಳು ಮತ್ತೊಬ್ಬರಿಗೆ ದತ್ತು ಕೊಡಕೂಡದು.

೧. ದತ್ತು ಮಾಡಿಕೊಳ್ಳಲು ಯೋಗ್ಯರಾರು?—ಎಂಬುವ ವಿಷಯದಲ್ಲಿ ವ್ಯ॥ ನಿರ್ಣಯಕಾರರು ಈಕೆಳಗೆ ವಿವರಿಸುವಂತೆ ಹೇಳಿರುವರು. ದತ್ತು ತೆಗೆದುಕೊಳ್ಳುವವನಿಗೆ ಔರಸಪುತ್ರ, ಪೌತ್ರ ಪ್ರಪೌತ್ರರು ಯಾರೂ ಇರಕೂಡದು. ಸವತಿಯರು ಬೇರೆ ಬೇರೆ ಕಾಲದಲ್ಲಿ ಬೇರೆ ಬೇರೆ ಪುತ್ರರನ್ನು ದತ್ತಸ್ವೀಕಾರ ಮಾಡಿಕೊಂಡರೆ, ಮೊದಲು ಮಾಡಿದ ಸ್ವೀಕಾರವು ಮಾತ್ರ ಊರ್ಜಿತವಾಗುವುದು. ಏಕಕಾಲದಲ್ಲಿ ಅನೇಕ ಪುತ್ರರನ್ನು ಸ್ವೀಕಾರಮಾಡಿಕೊಂಡರೆ, ಯಾವ ಸ್ವೀಕಾರವೂ ಸಲ್ಲುವುದಿಲ್ಲ. ಬ್ರಹ್ಮಚಾರಿಗಳೂ, ಭಾರ್ಯಾವಿಯೋಗವನ್ನು ಹೊಂದಿದವರೂ ದತ್ತಸ್ವೀಕಾರ ಮಾಡಿಕೊಳ್ಳಬ

ಹುದೆಂದು ಮದ್ರಾಸ್ ಕೋರ್ಟಿನವರು ತೀರ್ಮಾನಿಸಿದ್ದಾರೆ. ೩ ಮ. ೧೮೦. ಪಿತ್ರಾರ್ಜಿತ ಆಸ್ತಿಯಲ್ಲಿನ ಹಿಸ್ಸೆಗೆ ಅರ್ಹರಲ್ಲದ ಕುಷ್ಠರೋಗಿಗಳೂ, ಹುಚ್ಚರೂ, ಹುಟ್ಟು ಕಿವುಡ ಮೂಗರೂ ಸಹ ಮಾಡಿಕೊಂಡ ದತ್ತಪುತ್ರರಿಗೆ ದತ್ತು ತಂದೆಯ ಸ್ವಾರ್ಜಿತ ಆಸ್ತಿಯು ಸೇರುವುದೇಹೊರತು ದತ್ತು ತಂದೆಯ ಪಿತ್ರಾರ್ಜಿತ ಆಸ್ತಿಯು ಸಲ್ಲುವುದಿಲ್ಲ. ಬುದ್ಧಿಬಂದಿರುವ ಮೈನರು ಸಹ ಪುತ್ರಸ್ವೀಕಾರ ಮಾಡಿಕೊಳ್ಳಬಹುದು. ದತ್ತು ತೆಗೆದುಕೊಳ್ಳಲು ತನ್ನ ಹೆಂಡಿತಿಗೆ ಅನುಜ್ಞೆಯನ್ನು ಸಹ ಕೊಡಬಹುದು, ಗಂಡನು ತನ್ನ ಹೆಂಡಿತಿಯ ಇಷ್ಟಕ್ಕೆ ವಿರೋಧವಾಗಿ ಸ್ವೀಕಾರ ಮಾಡಿಕೊಳ್ಳಬಹುದು ಆದರೆ ಗಂಡನಿರುವಾಗ ಹೆಂಡಿತಿಯು ಗಂಡನ ಅನುಮತಿಯಿಲ್ಲದೆ ಸ್ವೀಕಾರ ಮಾಡಿಕೊಳ್ಳಕೂಡದು. ಮದ್ರಾಸ್ ಮೈಸೂರು ಸೀಮೆಗಳಲ್ಲಿ ವಿಧವೆಯರು ಸ್ವೀಕಾರ ಮಾಡಿಕೊಳ್ಳಬೇಕಾದರೆ. ಗಂಡನ ಅನುಜ್ಞೆಯಾದರೂ ಇರಬೇಕು; ಅಥವಾ, ಗಂಡನ ಜ್ಞಾತಿಗಳ ಅನುಮತಿಯನ್ನಾದರೂ ಹೊಂದಬೇಕು. ಮುಂಬಯಿ ಪ್ರಾಂತ್ಯದಲ್ಲಾದರೋ ಗಂಡನು ನಿರೋಧಿಸಿದ್ದರೇಹೊರತು ಇಲ್ಲದಿದ್ದರೆ ಹೆಂಡಿತಿಯು ಸ್ವತಂತ್ರಿಸಿ, ಗಂಡನ ಅನುಜ್ಞೆ ಇಲ್ಲದಿದ್ದರೂ, ಅವನ ಜ್ಞಾತಿಗಳು ಒಪ್ಪದಿದ್ದರೂ ದತ್ತಸ್ವೀಕಾರಮಾಡಿಕೊಳ್ಳಬಹುದು. ಇಬ್ಬರು ಹೆಂಡಿತಿಯರು ಬೇರೆಬೇರೆ ಸ್ವೀಕಾರಮಾಡಿಕೊಳ್ಳಬಹುದೆಂದು ಗಂಡನು ಕೊಡುವ ಅಧಿಕಾರವು ಸಲ್ಲುವುದಿಲ್ಲ. ಮತ್ತು ಒಬ್ಬ ದತ್ತಪುತ್ರನು ಸತ್ತರೆ, ಮತ್ತೊಬ್ಬನನ್ನು ಸ್ವೀಕಾರಮಾಡಿಕೊಳ್ಳಬಹುದೆಂದು ಗಂಡನು ಹೆಂಡತಿಗೆ ಅಧಿಕಾರ ಕೊಡಬಹುದು. ಆದರೆ ೨-೩ ಹುಡುಗರನ್ನು ಏಕಕಾಲದಲ್ಲಿ ಸ್ವೀಕಾರ ಮಾಡಿಕೊಳ್ಳಬಹುದೆಂಬ ಅಧಿಕಾರವನ್ನು ಕೊಡಲಾಗದು. ಮತ್ತು ಒಂದಾವೃತ್ತಿ ಸ್ವೀಕಾರ ಮಾಡಲ್ಪಟ್ಟವನು ವಿಧೇಯನಾಗಿ ಸರಿಯಾಗಿ ಇಲ್ಲದಿದ್ದರೆ, ಮತ್ತೊಬ್ಬನನ್ನು ಸ್ವೀಕಾರಮಾಡಿಕೊಳ್ಳಬಹುದೆಂತಲೂ ಸಹ ಅಧಿಕಾರ ಕೊಡಲಾಗುವುದಿಲ್ಲ. ತನ್ನ ಹೆಂಡಿತಿಯು ಆಸ್ತಿಯನ್ನು ಅವಳ ಜೀವಮಾನಪರ್ಯಂತ ಅನುಭವಿಸಿದ ಬಳಿಕ, ಆ ಆಸ್ತಿಯು ಸ್ವೀಕೃತಪುತ್ರನಿಗೆ ಸೇರಬೇಕೆಂಬ ಷರತ್ತು ಏರ್ಪಡಿಸಿ, ಗಂಡನು ಅಧಿಕಾರವನ್ನು ಕೊಡಲು ಆಕ್ಷೇಪಣೆಯಿಲ್ಲ. ೮ ಕೆ. ೩೫೭, ಸ್ವೀಕಾರಾಧಿಕಾರವನ್ನು ಹೆಂಡಿತಿಗೆ ಮಾತ್ರವೇ ಕೊಡಬೇಕೇ ಹೊರತು ಮತ್ತಾರಿಗೂ ಕೊಡಕೂಡದು. ಸ್ವೀಕಾರಾಧಿಕಾರವನ್ನು ಹೊಂದಿದ ವಿಧವೆಯು ಸ್ವೀಕಾರ ಮಾಡಿಕೊಳ್ಳಬೇಕೆಂಬ ನಿರ್ಬಂಧವಿಲ್ಲ, ಸ್ವೀಕಾರ ಮಾಡಿಕೊಳ್ಳಬೇಕೆಂದು ಅವಳನ್ನು ಬಲಾತ್ಕರಿಸಲು ಯಾರಿಂದಲೂ ಆಗುವುದಿಲ್ಲ. ತಾನು ಸತ್ತಕೂಡಲೇ ತನ್ನ ಹೆಂಡತಿಯು ಇಂಥವನನ್ನು ದತ್ತುತೆಗೆದುಕೊಂಡು, ತನ್ನ ಆಸ್ತಿಯನ್ನು ಆ ದತ್ತಪುತ್ರನಿಗೆ ಕೊಟ್ಟುಬಿಡಬೇಕೆಂದು ಗಂಡನು

ಆಜ್ಞಾಪಿಸಿದ್ದರೂ, ಅವಳು ದತ್ತನನ್ನು ತೆಗೆದುಕೊಳ್ಳದಿದ್ದರೆ, ಆ ಹುಡುಗನಿಗೆ ಆ ಆಸ್ತಿಯಮೇಲೆ ಯಾವಹಕ್ಕೂ ಬರುವುದಿಲ್ಲ. ಮೃತನ ಆಸ್ತಿಯು ಅವನವಿಧವೆಯ ವಶದಲ್ಲಿಲ್ಲದೆ, ವಾರಸು ಕ್ರಮದಮೇಲೆ ಇತರರಿಗೆ ಸೇರಿಹೋಗಿದ್ದರೆ, ಆ ವಿಧವೆಯಿಂದ ಸ್ವೀಕಾರ ಮಾಡಿಕೊಳ್ಳಲ್ಪಟ್ಟವನಿಗೆ ಮೃತನ ಆಸ್ತಿಯು ಸೇರುವುದಿಲ್ಲ. [ಮಸಲ— ಒಬ್ಬನು ತಾಯಿಯನ್ನೂ ಹೆಂಡತಿಯನ್ನೂ ಬಿಟ್ಟು ಸಾಯುತ್ತಾನೆ. ಮೃತನ ಆಸ್ತಿಯು ಅವನ ಹೆಂಡತಿಗೆ ಸೇರಿಹೋಗುವುದರಿಂದ ಅವನ ತಾಯಿಯು ದತ್ತಸ್ವೀಕಾರ ಮಾಡಿಕೊಂಡರೆ ಪ್ರಯೋಜನವಿಲ್ಲ.] ಮದರಾಸ್, ಮೈಸೂರು ಸೀಮೆಗಳಲ್ಲಿ ವೈನರ ವಿಧವೆಯು ಸ್ವೀಕಾರ ಮಾಡಿಕೊಳ್ಳಬಹುದು; ಮುಂಬಯಿ ಸೀಮೆಯಲ್ಲಿ ಕೂಡದು. ವ್ಯಭಿಚಾರಿಣಿಯು ಸ್ವೀಕಾರ ಮಾಡಿಕೊಳ್ಳುವ ಅಧಿಕಾರವನ್ನು ಕಳೆದುಕೊಳ್ಳುವಳು. ಮುಂಬಯಿ ಪ್ರಾಂತ್ಯದಲ್ಲಿ ಒಬ್ಬ ಸಕೇಶಿಯು ಕೇಶದೋಷಪರಿಹಾರಾರ್ಥವಾಗಿ, ಪಂಡಿತರ ಅಭಿಪ್ರಾಯಾನುಸಾರ, ಕೆಲವು ದಾನಮಾಡಿದಂತೆ ತಿಳಿಯಬಂತು. ಆದುದರಿಂದ ಇವಳು ಮಾಡಿಕೊಂಡ ಸ್ವೀಕಾರವು ಸಲ್ಲುವುದೆಂದು ತೀರ್ಮಾನಿಸಿದರು. ೧೧ ಬೊಂ. ೩೮೯, ೩೯೩. ಮೃತನ ಅನೇಕ ವಿಧವೆಯರೊಳಗೆ ಅಧಿಕಾರವನ್ನುಹೊಂದಿದವಳೇ ಸ್ವೀಕಾರ ಮಾಡಿಕೊಳ್ಳಬೇಕು. ಮುಂಬಯಿ ಪ್ರಾಂತ್ಯದಲ್ಲಿ ಗಂಡನಿಂದ ಅಧಿಕಾರವನ್ನು ಹೊಂದಬೇಕಾದುದು ಅವಶ್ಯಕವಿಲ್ಲದುದರಿಂದ, ಹಿರೀಹೆಂಡತಿಯ ಅನುಮತಿಯಿಲ್ಲದೆ ಕಿರೀ ಹೆಂಡತಿಯು ಸ್ವೀಕಾರ ಮಾಡಿಕೊಳ್ಳಕೂಡದು. ಜ್ಞಾತಿಗಳ ಅನುಮತಿಯಮೇರೆ ಸ್ವೀಕಾರಮಾಡಿಕೊಳ್ಳುವ ಸಂದರ್ಭದಲ್ಲಿ, ಸ್ವೀಕಾರ ಮಾಡಿಕೊಂಡರೆ ಯಾವ ಜ್ಞಾತಿಗೆ ನಷ್ಟವುಂಟಾಗುತ್ತದೋ ಅಂಥವರೆಲ್ಲರ ಅನುಮತಿಯನ್ನೂ ಹೊಂದಬೇಕು. ವಿಭಕ್ತ ಕುಟುಂಬವಾಗಿದ್ದರೆ, ಬಹಳ ಹತ್ತಿರವಾದ ಜ್ಞಾತಿಗಳ ಅನುಮತಿಯು ಸಾಕು. ಎಲ್ಲರ ಅನುಮತಿಯೂ ಅವಶ್ಯವಿಲ್ಲ. ಗಂಡನಿಗೆ ಸ್ವೀಕಾರೇಚ್ಛೆಯು ಇರಲಿಲ್ಲವೆಂದು ತಿಳಿದುಬಂದರೆ, ವಿಧವೆಯು ಸ್ವೀಕಾರ ಮಾಡಿಕೊಳ್ಳಲಿಕ್ಕೆ ಗಂಡನ, ಅಥವಾ, ಜ್ಞಾತಿಗಳ ಅನುಮತಿಯು ಅವಶ್ಯವಿಲ್ಲ. ೮ ಅ., ೩೧೯, ೧೭ ಕ. ೫೧೮. ಗಂಡನು ಎಷ್ಟರಮಟ್ಟಿನ ಅಧಿಕಾರವನ್ನು ಕೊಟ್ಟಿರುವನೋ ಅಷ್ಟರಮಟ್ಟಿನ ಅಧಿಕಾರವನ್ನು ಮಾತ್ರ ಹೆಂಡತಿಯು ನಡಿಸಲು ಅಧಿಕಾರಿಣಿಯು. [ಮಸಲ—ಇಂಥ ಹುಡುಗನನ್ನೇ ಸ್ವೀಕಾರ ಮಾಡಿಕೊಳ್ಳಬೇಕೆಂದು ಗಂಡನು ಅನುಜ್ಞೆ ಮಾಡಿದ್ದರೆ, ಆ ಹುಡುಗನು ಸಾಯುವಪಕ್ಷದಲ್ಲೂ, ಅಥವಾ, ಅವನ ತಾಯಿತಂದೆಗಳು ಅವನನ್ನು ದತ್ತನನ್ನಾಗಿ ಕೊಡದಿರುವ ಸಂದರ್ಭದಲ್ಲೂ, ಬೇರೇ ಹುಡುಗನನ್ನು ಸ್ವೀಕಾರಮಾಡಿಕೊಳ್ಳಲಿಕ್ಕೆ ಹೆಂಡತಿಗೆ ಹಕ್ಕಿಲ್ಲ. ಆದರೆ ಸುಮ್ಮನೆ ದತ್ತನನ್ನು

ತೆಗೆದುಕೊಳ್ಳಬಹುದೆಂದು ಗಂಡನು ಅಧಿಕಾರ ಕೊಟ್ಟಿದ್ದರೆ, ಮೇಲ್ಕಂಡ ಸಂದರ್ಭಗಳು ಸಂಭವಿಸುವಲ್ಲಿ ಬೇರೆ ಹುಡುಗನನ್ನು ಸ್ವೀಕಾರಮಾಡಿಕೊಳ್ಳಬಹುದು.]

೨. ಪುತ್ರದಾನ ಮಾಡಲಿಕ್ಕೆ ಯೋಗ್ಯರಾರು? ತಾಯಿಯ ಇಷ್ಟವಿಲ್ಲದೆ ತಂದೆಯು ಮಗನನ್ನು ದಾನಮಾಡಬಹುದು. ತಂದೆಯ ಇಷ್ಟಕ್ಕೆ ವಿರೋಧವಾಗಿ ತಾಯಿಯು ಕೊಡಕೂಡದು. ವಿಧವೆಯು ಮಗನನ್ನು ದಾನಮಾಡಬಹುದು. ಆದರೆ ಕೊಡಕೂಡದೆಂದು ಗಂಡನು ನಿರೋಧಿಸಿದ್ದರೆ ಕೊಡದು. ಮತ್ತು ಒಬ್ಬನೇ ಮಗನಾಗಿರುವಾಗಲೂ ಕೊಡದು ತಂದೆ ತಾಯಿ ಇಲ್ಲದವನು ಸ್ವೀಕಾರಕ್ಕೆ ಯೋಗ್ಯನಲ್ಲ. ಏಕೆಂದರೆ ಮತ್ತಾರಿಗೂ ದಾನಮಾಡಲು ಅಧಿಕಾರವಿಲ್ಲ. ಆದರೆ ತಾಯಿ ತಂದೆಗಳು ದಾನಮಾಡಲು ನಿಶ್ಚಯಿಸಿ ಹಾಗೆ ಮಾಡಬೇಕೆಂದು ಇತರ ಮಕ್ಕಳಿಗೆ ಹೇಳಿ ಮೃತಪಟ್ಟರೆ ಅವರು ದಾನ ಮಾಡಬಹುದು. ಬಲತಾಯಿಯು ದಾನಮಾಡಲು ಯೋಗ್ಯಳಲ್ಲ.

೩. ದತ್ತನಾಗಲು ಎಂಥವನು ಯೋಗ್ಯನು— ಯೋಗ್ಯರಾದ ಹುಡುಗರು ಅಣ್ಣ ತಮ್ಮಂದಿರಲ್ಲಿ ಅಥವಾ ಸಗೋತ್ರದವರಲ್ಲಿದ್ದರೂ ಅವರನ್ನು ಬಿಟ್ಟು ಸ್ವಜಾತಿಯಲ್ಲಿ ಯಾವನನ್ನಾದರೂ ಸ್ವೀಕಾರಮಾಡಿಕೊಳ್ಳಬಹುದು. ಏಕಕಾಲದಲ್ಲಿ ಇಬ್ಬರನ್ನು ಸ್ವೀಕಾರಮಾಡಿಕೊಳ್ಳಲಾಗದು.

ಸ್ವೀಕಾರ್ಯನ ತಾಯಿಯು ಆಕೆಯ ಕನ್ಯಾವಸ್ಥೆಯಲ್ಲಿ ಸ್ವೀಕಾರಮಾಡಿಕೊಳ್ಳುವವನನ್ನು ವಿವಾಹಮಾಡಿಕೊಳ್ಳತಕ್ಕ ವಾವೆಯಲ್ಲಿರಬೇಕೆಂಬ ಶೌನಕ ವಚನವನ್ನು ಅನುಸರಿಸಿ ಅಕ್ಕ ತಂಗಿಯರ ಮಗನೂ ಸೋದರತ್ತೆಯ ಮಗನೂ ಮಗಳ ಮಗನೂ ತಾಯಿಯ ಅಕ್ಕತಂಗಿಯರ ಮಗನೂ ತಮ್ಮನೂ ಚಿಕ್ಕಪ್ಪನೂ ಸೋದರಮಾವನೂ ಈ ಮೊದಲಾದವರು ದ್ವಿಜಾತಿಗಳಲ್ಲಿ ಸ್ವೀಕಾರ್ಯರಾಗುವದಿಲ್ಲವೆಂದು ತೀರ್ಮಾನಿಸುತ್ತಾರೆ. ಆದರೆ ದಕ್ಷಿಣ ಹಿಂದೂಸ್ಥಾನದಲ್ಲಿ ದ್ವಿಜಾತಿಗಳಲ್ಲೂ ಮಗಳ ಮಗನನ್ನೂ ಅಕ್ಕತಂಗಿಯರ ಮಗನನ್ನೂ ಸ್ವೀಕಾರ ಮಾಡಿಕೊಳ್ಳುವ ಪದ್ಧತಿಯುಂಟೆಂದು ತೀರ್ಮಾನಿಸಿದ್ದಾರೆ. ೧೧ ಮ ೫೫. ಭಾಗಕ್ಕೆ ಅರ್ಹರಲ್ಲದ ಹುಟ್ಟುಕುರುಡರೂ ಮೂಕರೂ ಮೊದಲಾದವರು ಸ್ವೀಕಾರಕ್ಕೆ ಅರ್ಹರಲ್ಲ. ಮುಂಬಯಿ ಪ್ರಾಂತ್ಯದಲ್ಲಿ ಎಷ್ಟು ವಯಸ್ಸಿನವನನ್ನಾದರೂ ಸ್ವೀಕಾರ ಮಾಡಿಕೊಳ್ಳಬಹುದು. ಇತರ ಪ್ರಾಂತ್ಯಗಳಲ್ಲಿ ದ್ವಿಜಾತಿಯವರಲ್ಲಿ ಉಪನಯನವಿಲ್ಲದವನು ಶೂದ್ರರಲ್ಲಿ ಮದುವೆ ಇಲ್ಲದವನು ದತ್ತನಾಗಲು ಯೋಗ್ಯನು. ಆದರೆ ಪುತ್ರನು ಸಗೋತ್ರದವನಾಗಿದ್ದರೆ ಉಪನಯನವಾದ ಮೇಲೂ ಸ್ವೀಕಾರ

ಮಾಡಿಕೊಳ್ಳಬಹುದು. ೯ ಮ ೧೪೮. ಜೇಷ್ಟಪುತ್ರ ಸ್ವೀಕಾರವು ಶಾಸ್ತ್ರಕ್ಕೆ ವಿರುದ್ಧವಾಗಿದ್ದರೂ ನಡಿಸಿಬಿಟ್ಟದ್ದರೆ ಅಂಥ ಸ್ವೀಕಾರವನ್ನು ರದ್ದು ಮಾಡುವುದಿಲ್ಲ. ೬ ಬೊಂ ೨೨೧, ೨೨೫, ೧೧ ಮ ೪೩. ಏಕ ಪುತ್ರನ ದ್ವಾಮುಷ್ಯಾಯಣ ಸ್ವೀಕಾರವು ಅಂದರೆ ಅಣ್ಣ ತಮ್ಮಂದಿರೊಳಗೆ ಒಬ್ಬನ ಮಗನು ಆ ಇಬ್ಬರಿಗೂ ಮಗನಾಗಿರುವದು ಸಮ್ಮತವು,

ಪುತ್ರಸ್ವೀಕಾರಕ್ಕೆ ಮುಖ್ಯವಾದ ಕರ್ಮಗಳು... ಆ ಆದೇಶದ ಪದ್ಧತಿಯುಮೇರೆ ಸ್ವೀಕಾರ ಮಾಡಿಕೊಳ್ಳಲು ದಾನ ಪರಿಗ್ರಹಗಳೆರಡೂ ಅವಶ್ಯಕ. ಕಲಶಸ್ಥಾಪನೆ ಮಾಡಿ. ಮಂತ್ರೋಚ್ಚಾರಣೆಯಾದ ಮೇಲೆ ಸ್ವೀಕಾರ ಮಾಡಿಕೊಳ್ಳುವವನು ಕೊಡುವವನ ಬಳಿಗೆ ಹೋಗಿ, ಹುಡುಗನನ್ನು ತನಗೆ ದಾನ ಮಾಡಬೇಕೆಂದು ಕೇಳಬೇಕು. ಕೊಟ್ಟೆನೆಂದು ಅವನು ಹೇಳಬೇಕು. ಬಳಿಕ ಸ್ವೀಕರಿಸುವವನು, "ನಾನು ನಿನ್ನನ್ನು ದತ್ತನನ್ನಾಗಿ ತೆಗೆದುಕೊಂಡೆನು, ಶಾಸ್ತ್ರೋಕ್ತವಾದ ಮತಾಚರಣೆಗಳನು ನಡಿಸುವದಕ್ಕಾಗಿಯೂ, ನನ್ನ ವಂಶಾಭಿವೃದ್ಧಿಗಾಗಿಯೂ, ಸ್ವೀಕಾರ ಮಾಡಿಕೊಂಡೆನು" ಎಂಬ ನುಡಿಗಳಿಂದ, ಸ್ವೀಕಾರ ಮಾಡಿಕೊಳ್ಳಬೇಕು, ಬೋಧಾಯನನು ದಾನ ಪರಿಗ್ರಹಗಳ ವಿಧಿಗಳನ್ನು ಹೇಳಿದ್ದಾನೆ. ದ್ವಿಜಾತಿಗಳಲ್ಲಿ ದತ್ತನು ಮಗಳ ಮಗನೂ, ಸಗೋತ್ರದವನೂ ಅಲ್ಲದಿದ್ದರೆ, ದತ್ತ ಹೋಮವು ಅವಶ್ಯಕ. ಶೂದ್ರರಲ್ಲಿ ದಾನ ಪರಿಗ್ರಹಗಳು ಮಾತ್ರ ಅವಶ್ಯಕ. ದತ್ತ ಹೋಮವೂ ಮಂತ್ರಗಳೂ ಅವಶ್ಯವಿಲ್ಲ.

೫. ದತ್ತಕದ ವಿಶೇಷ ವಿಷಯ—ಸ್ವೀಕಾರ ಮಾಡಿಕೊಳ್ಳುವವರು ದತ್ತನನ್ನು ಮಾಡಿಕೊಳ್ಳುವ ಕಾಲದಲ್ಲೇ ತನ್ನ ಆಸ್ತಿಗಳೊಳಗೆ ಕೆಲವನ್ನು ವಿಲೇಮಾಡಿ ಮಿಕ್ಕ ಆಸ್ತಿಯು ಮಾತ್ರ ದತ್ತಪುತ್ರರಿಗೆ ಸೇರಬೇಕೆಂದು ಜನಕತಂದೆಯೊಡನೆ ಮಾಡಿಕೊಳ್ಳುವ ಒಪ್ಪಂದವು ಸಲ್ಲುವುದು ೧೨ ಮ. ೪೯೦ ೧೪ ಮ ೧೯೨. ತಾನು ಜೀವಿಸುವವರೆಗೂ ಆಸ್ತಿಯು ತನ್ನ ಅನುಭವದಲ್ಲೇ ಇದ್ದು ಬಳಿಕ ದತ್ತುಪುತ್ರನಿಗೆ ಹೋಗಬೇಕೆಂದು ಸ್ವೀಕರಿಸಿದ ತಾಯಿಯು ಜನಕ ತಂದೆಯೊಡನೆ ಮಾಡಿಕೊಳ್ಳುವ ವಪ್ಪಂದವು ಸಲ್ಲುವುದೆಂದು ಮದ್ರಾಸ್ ಹೈಕೋರ್ಟಿನವರು ತೀರ್ಮಾನಿಸಿದ್ದಾರೆ. ೧೬ ಮ ೭೦೦ ಮೇಲೆ ವಿವರಿಸುವ ವಿಧಿಗಳಿಗೆ ವಿರುದ್ಧವಾಗಿ ಮಾಡಿಕೊಳ್ಳುವ ಸ್ವೀಕಾರವನ್ನು ಆಕ್ಷೇಪಿಸಬೇಕಾದವರು ಆಕ್ಷೇಪಿಸದೆ ಒಪ್ಪಿಕೊಂಡಿದ್ದರೂ ಅಥವಾ ಅಂಥಾ ಅದನ್ನು ಆಕ್ಷೇಪಿಸದೆ ಬಹಳ ದಿವಸ ಬಿಟ್ಟುಕೊಂಡು ಬಂದರೂ ಸಹ ಅಂಥ ಸ್ವೀಕಾರವು ಊರ್ಜಿತವಾಗುವುದು.

ಒಬ್ಬನು ತನ್ನ ಆಸ್ತಿಯನ್ನೆಲ್ಲಾ ಒಬ್ಬ ಹುಡುಗನಿಗೆ ದಾನಪತ್ರ ಯಾ, ವಿಲ್ಲುಮೂಲಕ ಕೊಟ್ಟು ಆ ಹುಡುಗನನ್ನು ದತ್ತಸ್ವೀಕಾರ ಮಾಡಿಕೊಳ್ಳಬೇಕೆಂದು ಹೇಳಿ ಮೃತಪಡುತ್ತಾನೆ. ಆದರೆ ಆ ಹುಡುಗನನ್ನು ಸ್ವೀಕಾರ ಮಾಡಿಕೊಳ್ಳುವುದಿಲ್ಲ; ಅಥವಾ, ಅವನ ಸ್ವೀಕಾರವು ಅಸಿದ್ಧವಾಗುತ್ತದೆ. ಈಗ ಆಸ್ತಿಗೆ ಆ ಹುಡುಗನು ಹಕ್ಕುದಾರನೇ? ಆ ಹುಡುಗನನ್ನು ಸ್ವೀಕಾರ ಮಾಡಿಕೊಳ್ಳಬೇಕೆಂದು ಮೃತನು ಆಜ್ಞಾಪಿಸುವುದಕ್ಕೂ ಮತ್ತು ಅವನಿಗೆ ಆಸ್ತಿಯನ್ನು ಕೊಡುವುದಕ್ಕೂ ಮೃತನಿಗೆ ಆ ಹುಡುಗನಲ್ಲಿದ್ದ ವಾತ್ಸಲ್ಯವೇ ಕಾರಣವಾಗಿದ್ದರೆ, ಆ ಹುಡುಗನಿಗೆ ಆಸ್ತಿಯು ಸೇರಲೇಬೇಕು. ಹಾಗಿಲ್ಲದೆ, ಆ ಹುಡುಗನಿಗೆ ಮೃತನು ತನ್ನ ಆಸ್ತಿಯನ್ನು ಬಿಟ್ಟುದಕ್ಕೆ ಅವನು ತನ್ನ ದತ್ತಪುತ್ರನಾಗುವುದೇ ಕಾರಣವಾಗಿದ್ದರೆ, ಆಸ್ತಿಯು ಹುಡುಗನಿಗೆ ಸಲ್ಲುವುದಿಲ್ಲ. ೧೧ ಕ. ೪೫೨; ೨೩. ಬೊಂ. ೨೬೧.

ವಿಧವೆಯು ಮೊದಲು ತನ್ನ ಗಂಡನ ಆಸ್ತಿಯನ್ನು ಅನ್ಯಾಯವಾಗಿ ಪರಾಧೀನಮಾಡಿ, ಅನಂತರ ದತ್ತಸ್ವೀಕಾರ ಮಾಡಿಕೊಂಡರೆ, ದತ್ತಪುತ್ರನು ತನ್ನ ದತ್ತು ತಾಯಿಯ ಜೀವಮಾನಕಾಲದಲ್ಲಿಯೇ ದಾವಾ ಮಾಡಿ, ಆ ಪರಾಧೀನವನ್ನು ರದ್ದು ಮಾಡಿಸಬಹುದು. ೧೯ ಬೊಂ. ೮೦೯.

ದತ್ತಸ್ವೀಕಾರ ಪತ್ರ—೧ನೇ ವಿಧ.

ಸರ್......ರಲ್ಲು...ತಿಮ್ಮಯ್ಯನು...ವೆಂಕಟಪ್ಪನಿಗೆ ಬರೆದುಕೊಟ್ಟ ದತ್ತಸ್ವೀಕಾರ ಪತ್ರವೇನಂದರೆ.—ನಾನು ಅಪುತ್ರವಂತನಾಗಿರುವುದರಿಂದ ನನ್ನ ವಂಶಾಭಿವೃದ್ಧಿಗೋಸ್ಕರ ನಿಮ್ಮ ೨ನೇ ಮಗನಾದ ೫ ವರ್ಷ ವಯಸ್ಸಿನ ಉಪನಯನವಿಲ್ಲದಿರುವ ಚಿ॥ ಕೃಷ್ಣನೆಂಬ ಹುಡುಗನನ್ನು ನಾನು ಈ ದಿವಸ ದತ್ತ ಹೋಮ ದಾನ ಸ್ವೀಕಾರ ವಿಧಿಗಳನ್ನು ನೆರವೇರಿಸಿ, ಸ್ವೀಕಾರಮಾಡಿಕೊಂಡಿರುತ್ತೇನೆ. ಮತ್ತು ನನಗೆ ಚಿ॥ ಸೌ॥ ಸುಬ್ಬಮ್ಮನೆಂಬೊಬ್ಬಳೇ ಮಗಳಿರುತ್ತಾಳೆ. ಅವಳಿಗೆ ಅರಿಸಿನ ಕುಂಕುಮಕ್ಕಾಗಿ ಕೆಳಗೆ ಷೆಡ್ಯೂಲಿನಲ್ಲಿ ವಿವರಿಸಿರುವ ೧೦೦ ರೂ ಬಾಳುವ ತೋಟವನ್ನು ಉಚಿತಾರ್ಥವಾಗಿ ನಿಮ್ಮ ಅನುಮತಿಯ ಮೇರೆ ಕೊಟ್ಟಿರುತ್ತೇನೆ. ಈ ಸ್ವತ್ತು ವಿನಾ ನನ್ನ ಮಿಕ್ಕ ಆಸ್ತಿಗೆಲ್ಲಾ ಸದರಿ ನನ್ನ ಸ್ವೀಕೃತ ಪುತ್ರನಾದ ಕೃಷ್ಣನೇ ನನ್ನ ಔರಸಪುತ್ರನಂತೆ ಹಕ್ಕುದಾರನಾಗುತ್ತಾನೆಂದು ನನ್ನ ಮನಃಪೂರ್ವಕವಾಗಿ ಬರೆದು ಕೊಟ್ಟ ದತ್ತ ಸ್ವೀಕಾರ ಪತ್ರ.

ವಿವೇಚನೆ.

ಸ್ಟ್ಯಾಂಪು—ದತ್ತ ಸ್ವೀಕಾರ ಪತ್ರಕ್ಕೆ ಹಾಕಬೇಕಾದುದು ೧೦ ರೂಪಾಯಿನ ಸ್ಟ್ಯಾಂಪು. ದತ್ತ ಸ್ವೀಕಾರ ಪುತ್ರನಿಗೆ ದತ್ತೂ ತಂದೆಯು ಆಸ್ತಿಯೆಲ್ಲಾ ಸೇರಬೇಕೆಂಬ ಷರತ್ತು ಪತ್ರದಲ್ಲಿದ್ದರೂ ಅದಕ್ಕಾಗಿ ಹೆಚ್ಚು ಸ್ಟ್ಯಾಂಪು ಕೊಡಬೇಕಾದ ಅವಶ್ಯವಿಲ್ಲ. ಈ ಮೇಲೆ ಕಂಡ ನಮೂನೆಯಲ್ಲಿ ಮಗಳಿಗೆ ಭೂದಾನ ಮಾಡಿದುದಕ್ಕೆ ಈ ಪತ್ರವೇ ರುಜುವಾತಾಗಿದ್ದರೆ ಅದಕ್ಕೆ ತಕ್ಕ ಸ್ಟ್ಯಾಂಪನ್ನು ಹೆಚ್ಚಾಗಿ ಕೊಡಬೇಕಾಗುತ್ತದೆ.

ರಿಜಸ್ಟ್ರೇಷನ್—ಅವಶ್ಯಕವಾಗಿ ರಿಜಸ್ಟರ ಮಾಡಿಸಬೇಕಾದುದಿಲ್ಲ.

ಲಿಮಿಟೇಷನ್—ದತ್ತ ಸ್ವೀಕಾರವು ಅಸಿದ್ಧವೆಂದು ಅದನ್ನು ರದ್ದು ಮಾಡಿಸಲಿಕ್ಕೆ ದತ್ತನಾದ ವಿಷಯವು ವಾದಿಗೆ ತಿಳಿದ ಲಾಗಾಯಿತು ೬ ವರ್ಷದಲ್ಲಿ ದಾವಾ ತರಬೇಕು. ಸ್ವೀಕಾರವು ಸಿದ್ಧವಾದುದೆಂದು ಸ್ಥಾಪಿಸಲು, ಆ ದತ್ತೂ ವಿಷಯದಲ್ಲಿ ತಕರಾರು ಬಂದ ಲಾಗಾಯಿತು ೬ ವರ್ಷದಲ್ಲಿ ದಾವಾ ತರಬೇಕು. ಆದರೆ ದತ್ತ ಪುತ್ರನಲ್ಲಿರುವ ಆಸ್ತಿಯನ್ನು ಬರ ಮಾಡಿಕೊಳ್ಳಲು ವಾರಸುದಾರರು ದಾವಾ ತರಬೇಕಾದರೂ ಅಥವಾ ವಾರಸುದಾರರಲ್ಲಿರುವ ಆಸ್ತಿಯನ್ನು ಬರಮಾಡಿಕೊಳ್ಳಲು ದತ್ತಪುತ್ರನು ದಾವಾ ತರಬೇಕಾದರೂ ಈ ಮಾಯಿದೆಯು ಸಂಬಂಧಿಸುವುದಿಲ್ಲ. ಇದೇ ದತ್ತು ಸ್ವೀಕಾರದ ವಿಷಯದಲ್ಲಿ ವ್ಯ॥ ದೀಪಿಕಾಕರ್ತರು ಪಟ್ಟಿರುವ ಅಭಿಪ್ರಾಯವನ್ನು ನಮ್ಮ ವಾಚಕರ ಅವಗಾಹನೆಗಾಗಿ ಮುದ್ರಿಸಿರುವೆವು.

ಯಾರ್ಯಾರು ದತ್ತು ಮಾಡಿಕ್ಕೊಳ್ಳಬಹುದು—ಅಪುತ್ರವಂತರಾದ ಪುರುಷರೆಲ್ಲರೂ ಪುತ್ರಸ್ವೀಕಾರವನ್ನು ಮಾಡಿಕೊಳ್ಳಬಹುದು. ಬ್ರಹ್ಮಚಾರಿಯಾದವನೂ ಹೆಂಡತಿ ಸತ್ತವನೂ ಕೂಡ ದತ್ತು ಮಾಡಿಕೊಳ್ಳಬಹುದು. ಮಗನಿಲ್ಲದೆ ಮೊಮ್ಮಗ ಅಥವಾ ಅವನ ಮಗನಿದ್ದರೂ ದತ್ತುಮಾಡಿಕೊಳ್ಳಕೂಡದು. ಒಬ್ಬ ದತ್ತಪುತ್ರನಿರುವಾಗ ಮತ್ತೊಬ್ಬನನ್ನು ಮಾಡಿಕೊಳ್ಳುವದು ಅಶಾಸ್ತ್ರೀಯವು. ಇಬ್ಬರು ಸವತಿಯರು ಒಂದೇಕಾಲದಲ್ಲಿ ಇಬ್ಬರನ್ನು ದತ್ತು ಮಾಡಿಕೊಂಡಾಗ ಎರಡು ದತ್ತುಗಳೂ ರದ್ದಾಗುವವು. ಇತರ ವಿಷಯಗಳಲ್ಲಿ ಸರಿಯಾಗಿದ್ದರೆ ಮೊದಲನೇ ಸಲ ಆದ ದತ್ತು ಊರ್ಜಿತವಾಗಿ ನಿಲ್ಲುವದು. ಒಬ್ಬನಿರುವಾಗ ಮತ್ತೊಬ್ಬನನ್ನು ಮಾಡಿಕೊಂಡರೆ ಮೊದಲನೆಯವನು ತರುವಾಯ ಸತ್ತಾಗ್ಯೂ ಎರಡನೆಯವನು ದತ್ತಪುತ್ರನಾಗುವದಿಲ್ಲ. ಒಬ್ಬ ದತ್ತಪುತ್ರನು ಸಂತಾನವಿಲ್ಲದೆ ಸತ್ತರೆ ಮತ್ತೊಬ್ಬನನ್ನು ದತ್ತು ಮಾಡಿಕೊಳ್ಳಲಿಕ್ಕೇನೂ ಅಡ್ಡಿ ಇಲ್ಲ. ಇದ್ದ ಮಗನು

ಜಾತಿಭ್ರಷ್ಟನಾದರೆ ಅವನಿಗೆ ಬದಲಾಗಿ ದತ್ತುಮಾಡಿಕೊಳ್ಳಬಹುದು. ಆದರೆ ೧೮೫೦ನೇ ಇಸವಿ ೧೫ನೇ ಸಂಖ್ಯೆಯ ಆಕ್ಟು ಪ್ರಕಾರ ಜಾತಿಭ್ರಷ್ಟನಿಗೆ ಆಸ್ತಿಯಲ್ಲಿ ಇರತಕ್ಕ ಹಕ್ಕು ತಪ್ಪುವದಿಲ್ಲವಾದುದರಿಂದ ಕೋರ್ಟುಗಳಲ್ಲಿ ಆಸ್ತಿಗೆ ಹಕ್ಕಿಲ್ಲದ ಈ ದತ್ತಪುತ್ರಬಂಧುತ್ವವನ್ನು ಅಂಗೀಕರಿಸುವದೂ ಸಂದೇಹ. ಹೆಂಡತಿಯು ಗರ್ಭಿಣಿಯಾಗಿರುವಲ್ಲಿ ಮುಂದೆ ಗಂಡು ಮಗು ಹುಟ್ಟಿದರೆ ಅವನಿಗೆ ನಷ್ಟವಾದೀತೆಂದು ದತ್ತುಮಾಡಿಕೊಳ್ಳಕೂಡದೆಂಬದಾಗಿ ತೀರ್ಮಾನಮಾಡಿದ್ದರು. ಆದರೆ ಈಚೆಗೆ ಫೈಸಲಾಗಿರುವ ಪ್ರಕಾರ ಅಂಥಾ ಸಂದರ್ಭಗಳಲ್ಲಿ ದತ್ತುಮಾಡಿಕೊಳ್ಳಬಹುದು. ಮೂಗು. ಕುಂಟು, ಕುಷ್ಠರೋಗ ಇಂಥಾ ಜಾಡ್ಯಗಳಿಂದ ಪೀಡಿತರಾದವರೂ ದತ್ತುಮಾಡಿಕೊಳ್ಳಬಹುದು ಆದರೆ ಇವರಿಗೇನೇ ಪಿತ್ರಾರ್ಜಿತದ ಆಸ್ತಿಯಲ್ಲಿ ಹಕ್ಕಿಲ್ಲವಾದುದರಿಂದ ಅವರ ಸ್ವೀಕೃತ ಪುತ್ರರಿಗೆ ಆ ಹಕ್ಕು ಉಂಟಾಗಲಾರದು. ಅವನೂ ಇವರಂತೆಯೇ ಜೀವನಾಂಶವನ್ನು ಪಡೆಯಬಹುದು. ತಮ್ಮ ದತ್ತು ತಂದೆಗೇನಾದರೂ ಸ್ವಾರ್ಜಿತವಾದ ಸೊತ್ತಿದ್ದರೆ ಅದನ್ನೂ ಹೊಂದಬಹುದು. ಮೈನರಾಗಿರುವವನು ದತ್ತು ಅಂದರೆ ಇಂಥಾದ್ದು ಎಂದು ಅದರ ಸ್ವರೂಪವನ್ನು ತಿಳಿದುಕೊಳ್ಳುವ ಶಕ್ತಿಯುಳ್ಳವನಾದರೆ ದತ್ತುಮಾಡಿಕೊಳ್ಳಬಹುದು. ತಾನು ಸತ್ತ ಮೇಲೆ ಹೆಂಡತಿ ಮಾಡಿಕೊಳ್ಳಬಹುದೆಂಬ ಅನುಜ್ಞೆಯನ್ನೂ ಕೊಡಬಹುದು. ಕೋರ್ಟಾಫ್ ವಾರ್ಡ್ಸ್ ಎಂದು ಸರಕಾರದಿಂದ ಮೈನರ್‌ಗಳ ಆಸ್ತಿಯನ್ನು ನೋಡಿಕೊಳ್ಳಲಿಕ್ಕೋಸ್ಕರ ನೇಮಿಸಲ್ಪಟ್ಟಿರುವ ಉದ್ಯೋಗಸ್ಥರ ಪೋಷಣೆಗೆ ಒಳಪಟ್ಟವನು ಅವರ ಅನುಮತಿಯಿಲ್ಲದೆ ಸ್ವೀಕಾರಮಾಡಿಕೊಂಡರೆ, ಅದು ಸಲ್ಲುವದಿಲ್ಲ. ಅ॥ ಲಾ. ರಿ. ಬೊಂ. ಮ.

ಸಂತೋಕ್ತದ ಅವಶ್ಯಕತೆ—ಪುತ್ರಸ್ವೀಕಾರವೆಂಬುವದು ಗಂಡನಿಗೋಸ್ಕರವೇ ಹೊರತು ಹೆಂಡತಿಗಲ್ಲ. ಆದ್ದರಿಂದ ಹೆಂಡತಿಯ ಅನುಮತಿಗೆ ವಿರೋಧವಾಗಿ ಗಂಡನು ದತ್ತುಮಾಡಿಕೊಳ್ಳಬಹುದು. ಹೆಂಗಸು ತಾನೇ ಸ್ವತಂತ್ರವಾಗಿ ಬೇರೇ ಮಗನನ್ನು ಮಾಡಿಕೊಳ್ಳಕೂಡದು. ತನ್ನ ಗಂಡನಿಗೋಸ್ಕರ ಮಾತ್ರ ಕೆಲವು ಸಂದರ್ಭಗಳಲ್ಲಿ ಅವಳು ಮಗನನ್ನು ದತ್ತು ಮಾಡಿಕೊಳ್ಳಬಹದು. ಈ ವಿಷಯದಲ್ಲಿ ಒಂದೊಂದು ಸೀಮೆಯಲ್ಲಿನ ನ್ಯಾಯ ಒಂದೊಂದು ವಿಧವಾಗಿದೆ. ಗಂಡನಿರುವಾಗ ಅವನ ಆಜ್ಞಾನುಸಾರವಾಗಿ ಅವನ ಹೆಂಡತಿಯು ದತ್ತು ಮಾಡಿಕೊಳ್ಳಬಹುದು. ಮತ್ತು ಅವನಿಗೆ ಹುಚ್ಚುತನದಿಂದ ಆಜ್ಞೆಯನ್ನು ಕೊಡತಕ್ಕ ಶಕ್ತಿ ಇಲ್ಲದ ಪಕ್ಷಕ್ಕೆ ಅವನ ಆಜ್ಞೆ ಇಲ್ಲದ ಪಕ್ಷಕ್ಕೆ ಅವನ ಆಜ್ಞೆ ಇಲ್ಲದೆಯೂ ಮಾಡಿಕೊಳ್ಳಬಹುದೆಂದು

ಮುಂಬಯಿ ಸೀಮೆಯಲ್ಲಿ ಫೈಸಲಾಗಿದೆ. ದತ್ತು ಮಾಡಿಕೊಳ್ಳಕೂಡದೆಂದು ಗಂಡನು ಕಂಠೋಕ್ತವಾಗಿ ಹೇಳಿದ್ದರೆ ಅವನಿರುವಾಗಾಗಲಿ ಅವನು ಸತ್ತ ಮೇಲಾಗಲೀ ಹೆಂಗಸು ದತ್ತುಮಾಡಿಕೊಳ್ಳಲೇಕೂಡದು.

ಹಕ್ಕಿನ ನಿಯಮ—ಗಂಡನು ಸತ್ತನಂತರ ಹೆಂಡತಿಯು ಅವನ ಹೆಸರಿನಲ್ಲಿ ದತ್ತುಮಾಡಿಕೊಳ್ಳಬೇಕಾದರೆ ಮದ್ರಾಸು ಸೀಮೆಯಲ್ಲಿಯೂ ಮೈಸೂರು ಸೀಮೆಯಲ್ಲಿಯೂ ಅವನು ಸಾಯುವದಕ್ಕೆ ಮುಂಚೆ ಅವನಿಂದ ಅಧಿಕಾರ ಪಡೆದವಳಾಗಿರಬೇಕು. ಅಥವಾ ಅವನು ಸತ್ತನಂತರ ತನ್ನ ಗಂಡನ ಸಪಿಂಡರು ಅಂದರೆ ದಾಯಾದರಿಂದ ಅನುಮತಿಯನ್ನು ಪಡೆಯಬೇಕು. ಮುಂಬಯಿ ಸೀಮೆಯಲ್ಲೆಲ್ಲಾ ಗಂಡನ ಅನುಮತಿಯನ್ನಾಗಲೀ ಅಥವಾ ದಾಯಾದರ ಅನುಮತಿಯನ್ನಾಗಲಿ ಪಡೆಯತಕ್ಕದ್ದು ಅವಶ್ಯಕವಿಲ್ಲ. ವಿಧವೆಯು ತಾನೇ ಸ್ವತಂತ್ರಿಸಿ ಪುತ್ರಸ್ವೀಕಾರವನ್ನು ಮಾಡಿಕೊಳ್ಳಬಹುದು. ಗಂಡನು ಬೇಡವೆಂದು ಹೇಳದೆ ಇರುವ ಸಂದರ್ಭದಲ್ಲೆಲ್ಲಾ ಇದು ಅತ್ಯಾವಶ್ಯಕವಾದ ಕಾರ್ಯವಾದ್ದರಿಂದ ಅವನು ಬೇಕೆಂದು ಹೇಳಿದಂತೆಯೇ ಎಂದು ಅಲ್ಲಿನ ಧರ್ಮಶಾಸ್ತ್ರಜ್ಞರು ಹೇಳುವರು. ಉತ್ತರ ದೇಶ ಅಂದರೆ ಬಂಗಾಳ ಮುಂತಾದ ಪ್ರಾಂತ್ಯಗಳಲ್ಲಿ ಕೆಲವು ಕಡೆ ವಿಧವೆಯರು ಪುತ್ರಸ್ವೀಕಾರವನ್ನು ಮಾಡಿಕೊಳ್ಳಲೇ ಕೂಡದು. ಕೆಲವು ಪ್ರಾಂತ್ಯಗಳಲ್ಲಿ ಗಂಡನಿಂದ ಕಂಠೋಕ್ತವಾದ ಅಧಿಕಾರವನ್ನು ಪಡೆದಿರಬೇಕು.

ಪುತ್ರಸ್ವೀಕಾರವನ್ನು ಮಾಡಿಕೊಳ್ಳತಕ್ಕ ಅಧಿಕಾರವನ್ನು ಯಾವ ವಿಧವಾಗಿ ಕೊಟ್ಟಿರೂ ಸರಿಯೆ; ಇದಕ್ಕೋಸ್ಕರ ಬೇರೆ ಅಧಿಕಾರ ಪತ್ರವನ್ನೇ ಬರೆಯಬೇಕೆಂಬ ನಿರ್ಬಂಧವಿಲ್ಲ. ಹಾಗೆ ಪತ್ರವನ್ನು ಬರೆದರೆ ಮಾತ್ರ ಅದು ೧೦ ರೂಪಾಯಿನ ಛಾಪಾಕಾಗದದಲ್ಲಿ ಬರೆಯಲ್ಪಟ್ಟು ರಿಜಿಸ್ಟರ್ ಮಾಡಲ್ಪಡಬೇಕು. ಅಧಿಕಾರವನ್ನು ಕೊಡುವವರು ಯಾವದಾದರೂ ನ್ಯಾಯವಾದ ಷರತ್ತುಗಳನ್ನಿಟ್ಟು ಕೊಡಬಹುದು, ಅವರು ಯಾವ ವಿಧವಾಗಿ ಎಷ್ಟುಮಟ್ಟಿಗೆ ಅಧಿಕಾರ ಕೊಟ್ಟಿರುವರೋ ಹಾಗೆಯೇ ಕಾರ್ಯಗಳನ್ನು ನಡೆಸಬೇಕು. ಇಂಥಾವನನ್ನೇ ದತ್ತು ತೆಗೆದುಕೊಳ್ಳಬೇಕೆಂದು ಕಂಠೋಕ್ತವಾಗಿ ಹೇಳಿದ್ದರೆ ಅವನನ್ನೇ ಸ್ವೀಕಾರಮಾಡಿಕೊಳ್ಳಬೇಕು. ಅವನು ಸರಿಬೀಳದೆ ಇದ್ದು ಮತ್ತೊಬ್ಬನನ್ನು ಮಾಡಿಕೊಂಡರೆ ಆ ದತ್ತು ಕೋರ್ಟುಗಳಲ್ಲಿ ಕ್ರಮವಾದದ್ದೆಂದು ನಿಲ್ಲಲಾರದು. ಒಬ್ಬ ಮಗನನ್ನು ಸ್ವೀಕಾರಮಾಡಿಕೊಳ್ಳ ಹೇಳಿದ್ದರೆ ಅವನು ಸತ್ತರೆ ಮತ್ತೊಬ್ಬನನ್ನು ಮಾಡಿಕೊಳ್ಳತಕ್ಕ ಅಧಿಕಾರವಿಲ್ಲ. ಇಂಥಾವನನ್ನೇ ಮಾಡಿಕೊಳ್ಳಬೇಕೆಂದು ಹೇಳದಿದ್ದರೆ ಹೆಂಗಸು ತನಗೆ ಸರಿಬಿದ್ದವರನ್ನು ಸ್ವೀಕಾರಮಾಡಿಕೊಳ್ಳಬಹುದು. ಮೃತನಾದವನಿಗೆ

ಇಬ್ಬರು ಮೂವರು ಹೆಂಡರಿದ್ದರೆ ಅವರಲ್ಲಿ ಯಾರಿಗ ಅಧಿಕಾರ ಕೊಟ್ಟಿರುವನೋ ಆಕೆಯೊ ದತ್ತು ಮಾಡಿಕೊಳ್ಳತಕ್ಕದ್ದು. ಮುಂಬಯಿ ಸೀಮೆಯಲ್ಲಿ ಜೇಷ್ಟ ಭಾರ್ಯೆಯಾದವಳು ಮಿಕ್ಕಾದವರ ಅನುಮತಿ ಇಲ್ಲದೆ ದತ್ತು ಮಾಡಿಕೊಳ್ಳಬಹುದು. ಮಿಕ್ಕ ಬಾಕಿ ಇಬ್ಬರು ಹೆಂಡತಿಯರು ಇವಳ ಅನುಮತಿ ಇಲ್ಲದೆ ಮಾಡಿಕೊಳ್ಳಕೂಡದು, ಆದರೆ ವ್ಯಭಿಚಾರ ಮುಂತಾದ ದೋಷಗಳಿಂದ ದೊಡ್ಡವಳಿಗೆ ಅಧಿಕಾರ ತಪ್ಪಿದರೆ ಅವರು ಇವಳ ಅನುಮತಿಯನ್ನು ಪಡೆಯದೆ ಮಾಡಿಕೊಳ್ಳಬಹುದು. ಅಧಿಕಾರ ಹೊಂದಿದ ಹೆಂಗಸು ಬಾಲ್ಯವಯಸ್ಕಳು (ಮೈನರ್) ಆಗಿದ್ದಾಗ್ಯೂ ದತ್ತು ಮಾಡಿಕೊಳ್ಳಬಹುದು. ಮುಂಬಯಿ ಸೀಮೆಯಲ್ಲಿ ಮಾತ್ರ ವಿಧವೆಯೇ ಸ್ವತಂತ್ರಿಸಿ ದತ್ತು ಮಾಡಿಕೊಳ್ಳಬಹುದಾದ್ದರಿಂದ ಸರಿಯಾದ ವಯಸ್ಸು ಇಲ್ಲದೆ ಅಂದರೆ ೧೬ ವರ್ಷದೊಳಗಿರುವವಳಾದರೆ ಅವಳಿಗೆ ಪುತ್ರಸ್ವೀಕಾರಕ್ಕೆ ಅಧಿಕಾರವಿಲ್ಲ.

ಹಕ್ಕಿನ ನಿಯಮ— ದತ್ತು ಮಾಡಿಕೊಳ್ಳಬಹುದೆಂದು ಅಧಿಕಾರಹೊಂದಿರುವ ಹೆಂಗಸು ತನ್ನ ಮನಸ್ಸುಬಂದರೆ ಮಾಡಿಕೊಳ್ಳಬಹುದು, ಇಲ್ಲದಿದ್ದರೆ ಹಾಗೆಯೇ ಇರಬಹುದು. ಪುತ್ರಸ್ವೀಕಾರ ಮಾಡಿಕೊಳ್ಳುವವರೆಗೂ ಈಕೆಗೆ ಆಸ್ತಿಯಲ್ಲಿರುವ ಹಕ್ಕು ಕಡಿಮೆಯಾಗುವದಿಲ್ಲ; ಇಲ್ಲದ ಹಕ್ಕುಂಟಾಗುವದೂ ಇಲ್ಲ. ಮತ್ತು ಇಷ್ಟೇಕಾಲಾವಧಿಯೊಳಗಾಗಿ ದತು ಮಾಡಿಕೊಳ್ಳಬೇಕೆಂಬ ನಿರ್ಬಂಧವೂ ಇಲ್ಲ. ಅಧಿಕಾರ ಕೊಟ್ಟಿರುವವನ ಆಸ್ತಿಯು ಮತ್ತೊಬ್ಬರಿಗೆ ಅಂದರೆ—ದತ್ತು ಮಾಡಿಕೊಳ್ಳತಕ್ಕ ಹೆಂಗಸಲ್ಲದೆ ಬೇರೆಯಾರಿಗಾದರೂ ಸೇರಿಹೋದಮೇಲೆ ಆಕೆಗೆ ದತ್ತು ಮಾಡಿಕೊಳ್ಳತಕ್ಕ ಅಧಿಕಾರವು ತಪ್ಪಿಹೋಗುವದು, ಹ್ಯಾಗೆಂದರೆ,—

ಒಬ್ಬ ಮನುಷ್ಯನು ತನ್ನ ಮಗ ಸತ್ತರೆ, ಹೆಂಡತಿಯು ದತ್ತು ಮಾಡಿಕೊಳ್ಳಬಹುದೆಂದು ಅನುಮತಿಯನ್ನು ಕೊಟ್ಟು ಸತ್ತನು. ಅವನ ಮಗನು ಮದುವೆ ಮಾಡಿಕೊಂಡು ಮಕ್ಕಳಿಲ್ಲದೆ ಸತ್ತುಹೋದುದರಿಂದ, ಆ ಮನೆತನದ ಆಸ್ತಿಯೆಲ್ಲಾ ಶಾಸ್ತ್ರರೀತ್ಯಾ ಆ ಮಗನ ಹೆಂಡತಿಯು ಜೀವಮಾನದವರೆಗೂ ಆಕೆಗೆ ಸೇರಿತು. ತರುವಾಯ ಇವಳ ಅತ್ತೆಯು ಅಂದರೆ...ಮೊದಲು ದತ್ತುಮಾಡಿಕೊಳ್ಳಲು ಅಧಿಕಾರವನ್ನು ಹೊಂದಿದ್ದ ಹೆಂಗಸು ಮಾಡಿಕೊಂಡ ದತ್ತನ್ನು ಅಕ್ರಮವೆಂದು ಕೋರ್ಟಿನಲ್ಲಿ ರದ್ದುಮಾಡಿದರು.

ಅನುಮತಿಯ ಅವಶ್ಯಕತೆ— ದಾಯಾದರ ಅನುಮತಿಯೇ ಹೆಂಗಸಿಗೆ ದತ್ತು ತೆಗೆದುಕೊಳ್ಳುವದಕ್ಕೆ ಅಧಿಕಾರವನ್ನು ಕೊಡಲು ಸಾಕಾಗಿರುವದೆಂದು ಹೇಳಿದೆಯಷ್ಟೆ. ಸುಮ್ಮನೆ ಯಾರಾದರೂ ದೂರದ ದಾಯಾದರು ಒಪ್ಪಿದರೆ ಸಾಲದು. ವಿಧವೆಗೆ ಮಾವನಿದ್ದರೆ ಆತನೇ ಒಪ್ಪಬೇಕು; ಇಲ್ಲದಿದ್ದರೆ

ಆಕೆಯು ಗಂಡನ ಅವಿಭಕ್ತ ಸಹೋದರರಿದ್ದರೆ, ಅವರ ಅನುಮತಿಯು ಅವಶ್ಯಕವು. ಮುಂಬಯಿ ಸೀಮೆಯಲ್ಲಿ ಇತರರಿಂದ ವಿಭಕ್ತನಾದವನು ಸತ್ತರೆ ಆತನ ಹೆಂಡತಿಯು ಯಾರ ಅನುಮತಿಯನ್ನೂ ಅಪೇಕ್ಷಿಸದೆ ದತ್ತು ಮಾಡಿಕೊಳ್ಳಬಹುದಾದಾಗ್ಯೂ, ಅವಿಭಕ್ತ ಕುಟುಂಬದಲ್ಲಿ ಗಂಡನಕೂಡ ಇದ್ದ ಅವನ ತಂದೆ ಅಥವಾ ಅಣ್ಣತಮ್ಮಂದಿರು ಇಂಥಾವರ ಅನುಮತಿಯನ್ನು ಪಡೆದುಕೊಳ್ಳದಿದ್ದರೆ, ಆ ದತ್ತು ಊರ್ಜಿತವಾಗಲಾರದು. ದತ್ತು ಮಾಡಿಕೊಳ್ಳುವದರಿಂದ ಮತ್ತೊಬ್ಬರಿಗೆ ಸೇರಿಹೋಗಿರುವ ಆಸ್ತಿಯು ಅವರಿಗೆ ತಪ್ಪಿಹೋಗುವದಾದರೆ, ಅಂಥವರ ಅನುಮತಿಯಿಲ್ಲದೆ ಪುತ್ರಸ್ವೀಕಾರ ಮಾಡಿಕೊಳ್ಳುವದಕ್ಕೆ ಹೆಂಗಸಿಗೆ ಹಕ್ಕಿರಲಾರದು.

ಜಾತಿ ಮತ್ತು ಲಕ್ಷಣ— ಜೈನಮತಸ್ಥರಲ್ಲಿ ಗಂಡಸತ್ತನಂತರ ಹೆಂಡತಿಯು ದತ್ತು ಮಾಡಿಕೊಳ್ಳುವದಕ್ಕೆ ಯಾರ ಅನುಮತಿಯನ್ನೂ ಪಡೆಯತಕ್ಕ ಆವಶ್ಯಕವಿಲ್ಲ. ಹುಡುಗನು ದತ್ತು ತಂದೆಯ ಜಾತಿಯವನೇ ಆಗಿರಬೇಕು. ಮತ್ತು ಮೂಗತನ, ಕುರುಡು ಮುಂತಾದ ದೋಷಗಳಿಲ್ಲದವನಾಗಿರಬೇಕು. ಕೆಲವು ಸ್ಮೃತಿಗಳಲ್ಲಿ ಇವನಿಗೆ ಐದು ವರ್ಷದೊಳಗಾಗಿ ವಯಸ್ಸಾಗಿರಬೇಕು. ಔರಸತಂದೆಯಿಂದ ಚೌಲಕರ್ಮವು ನಡಿಸಲ್ಪಟ್ಟಿರಕೂಡದೆಂದು ಹೇಳಿದೆ. ಆದರೆ ಈಚೆಗೆ ಆಗಿರುವ ತೀರ್ಪುಗಳಮೇರೆ ಮುಂಬಯಿ ಸೀಮೆಯಲ್ಲಿ ಎಲ್ಲಾ ಜಾತಿಯವರಲ್ಲಿಯೂ ಎಷ್ಟು ವಯಸ್ಸಿನವನನ್ನಾದರೂ ದತ್ತು ಮಾಡಿಕೊಳ್ಳಬಹುದು; ಬ್ರಾಹ್ಮಣನಾಗಿದ್ದಾಗ್ಯೂ ಮದುವೆಯಾದಮೇಲೂ ದತ್ತನಾಗಬಹುದು. ಈ ದಕ್ಷಿಣ ಸೀಮೆಯಲ್ಲಿ ಕೊಡುವವರು ತೆಗೆದುಕೊಳ್ಳುವವರು ಒಂದೇಗೋತ್ರದವರಾಗಿದ್ದರೆಮಾತ್ರ ಬ್ರಾಹ್ಮಣರಲ್ಲಿ ಯಾವಾಗಲಾದರೂ ಎಷ್ಟು ವಯಸ್ಸಿನವನನ್ನಾದರೂ ದತ್ತು ಮಾಡಿಕೊಳ್ಳಬಹುದೆಂದೂ, ಬೇರೇ ಗೋತ್ರದವರಾದರೆ ಉಪನಯನಕ್ಕೆ ಮುಂಚೆಯೇ ಸ್ವೀಕಾರವು ಆಗಬೇಕೆಂದೂ ಇರುವದಾಗಿ ತೋರುತ್ತದೆ.

ಏಕಪುತ್ರನ ದತ್ತು— ಸ್ಮೃತಿಗಳಿಗೆ ವಿರೋಧವಾಗಿ ಜ್ಯೇಷ್ಠಪುತ್ರನನ್ನು ದತ್ತು ಕೊಟ್ಟರೆ ಅದು ಆಚಾರಬಲವಿರುವದರಿಂದ ರದ್ದಾಗುವದಿಲ್ಲ. ಹಾಗೆಯೇ ಹೆತ್ತ ತಂದೆತಾಯಿಗಳಿಗೆ ಒಬ್ಬನೇ ಮಗನಿದ್ದಪಕ್ಷದಲ್ಲಿಯೂ, ಅಂಥಾವನನ್ನು ಮದ್ರಾಸ್ ಸೀಮೆಯಲ್ಲಿ ದತ್ತು ಕೊಟ್ಟರೆ ಸಲ್ಲುವದು. ಮುಂಬಯಿ ಸೀಮೆಯಲ್ಲಿ ಸಲ್ಲುವುದೆಂದು ಕೆಲವು ಮೊಕದ್ದಮೆಗಳಲ್ಲಿ ಫೈಸಲಾಗಿದ್ದಾಗ್ಯೂ, ಈಚೆಗೆ ನಡೆದಿರುವ ಫೈಸಲುಗಳಪ್ರಕಾರ ಇಂಥಾ ದತ್ತು ರದ್ದಾಗುವದು. ಒಬ್ಬನೇ ಮಗನಾದಾಗ್ಯೂ, ಅವನನ್ನು ದ್ವ್ಯಾಮುಷ್ಯಾಯಣನಾಗಿ ಕೊಡುವದು ಅಂದರೆ— ಅವನ ಔರಸತಂದೆಯು ತನ್ನ ಸಹೋದರನಿಗೆ ದತ್ತುಕೊಟ್ಟು, ತಾನೂ ಅವನೂ ಇಬ್ಬರೂ ಆ ಹುಡುಗನನ್ನೇ

ಮಗನಾಗಿಟ್ಟುಕೊಂಡಿರಬೇಕೆಂಬುವದು ಸಲ್ಲುತ್ತದೆ. ಏಕಪುತ್ರನನ್ನು ಒಂದು ವೇಳೆ ತಂದೆಯು ನ್ಯಾಯವಾಗಿ ಇತರರಿಗೆ ಕೊಟ್ಟುಬಿಡಬಹುದಾದರೂ, ಕಂಠೋಕ್ತವಾಗಿ ಗಂಡನಿಂದ ಅನುಮತಿಯನ್ನು ಪಡೆದಿದ್ದಹೊರತೂ, ತಾಯಿಗೆ ಹಾಗೆ ಕೊಡತಕ್ಕದ್ದಕ್ಕೆ ಅಧಿಕಾರವಿಲ್ಲವೆಂದು ಮುಂಬಯಿ ಹೈಕೋರ್ಟಿನಲ್ಲಿ ಫೈಸಲಾಗಿದೆ. ಹೀಗೆ ಮುಂಬಯಿ ಸೀಮೆಯಲ್ಲಿ ಹೆಂಡತಿಯು ಮಗನನ್ನು ದತ್ತುಮಾಡಿ ಕೊಡುವದು ತಂದೆಗೊಬ್ಬನೇ ಮಗನಾದರೆ ಕೂಡದೇ ಹೊರತು, ಅವನಿಗೆ ಇಬ್ಬರು ಮುವ್ವರು ಹೆಂಡರಿದ್ದು ಅವರಲ್ಲೊಬ್ಬ ಹೆಂಡತಿಗೆ ದತ್ತು ಕೊಡಲ್ಪಡುವವನೊಬ್ಬನೇ ಮಗನೆಂಬುದೇನೂ ಬಾಧಕವಲ್ಲ.

ದತ್ತತೆಯ ಫಲ—ದತ್ತು ಆದ ತರುವಾಯ, ದತ್ತಪುತ್ರನು ಸ್ವೀಕೃತ ಪಿತೃಗಳಿಗೆ ಔರಸ ಪುತ್ರನಂತೆಯೇ ಎಂದು ಮೊದಲೇ ಹೇಳಿದೆಯಷ್ಟೆ. ಅವನು ಪ್ರೌಢನಲ್ಲಗಿದ್ದರೆ, ದತ್ತುತಾಯಿತಂದೆಗಳ ಸ್ವಾಧೀನದಲ್ಲಿಯೇ ಇರತಕ್ಕದ್ದು. ಅವನಿಗೆ ಮದುವೆ ಮುಂತಾದ ಕಾರ್ಯಗಳನ್ನು ಇವರೇ ಮಾಡತಕ್ಕದ್ದು. ದತ್ತು ತಂದೆಗೆ ಔರಸಪುತ್ರರಿಲ್ಲದಿದ್ದರೆ, ದತ್ತಪುತ್ರನೇ ಆತನ ಆಸ್ತಿಗೆಲ್ಲಾ ಬಾಧ್ಯನಾಗುವನು. ಅದೇರೀತಿಯಾಗಿ, ಸ್ವೀಕೃತ ಮಾತೃವರ್ಗದವರಿಗೂ ಜ್ಞಾತಿಗಳಿಗೂ ಇವನು ಬಾಧ್ಯತೆಯುಳ್ಳವನಾಗುವನು. ಇವನಮಕ್ಕಳೂ ಮಮ್ಮಕ್ಕಳೂ ಕೂಡ, ಔರಸಪುತ್ರನ ಮಕ್ಕಳು, ಮಮ್ಮಕ್ಕಳಂತೆಯೇ, ಬಾಧ್ಯತೆಯನ್ನು ಪಡೆಯುವರು. ದತ್ತುಆದನಂತರ ದತ್ತುಮಾಡಿಕೊಂಡ ತಂದೆತಾಯಿಗಳಿಗೆ ಔರಸಪುತ್ರರು ಹುಟ್ಟಿದರೆ, ಔರಸಪುತ್ರರಿಗೊಬ್ಬೊಬ್ಬರಿಗೆ ಎಷ್ಟೆಷ್ಟು ಆಸ್ತಿಯು ಬರುವದೊ, ಅದರಲ್ಲಿ ದತ್ತನಿಗೆ ಕಾಲುಪಾಲು ಬರುವದು. ಹ್ಯಾಗಂದರೆ:—

ಒಬ್ಬ ಔರಸಹುಟ್ಟಿದರೆ ಐದು ಭಾಗದಲ್ಲಿ ಅವನಿಗೆ ನಾಲ್ಕುಭಾಗಗಳೂ ದತ್ತನಿಗೆ ಒಂದು ಭಾಗವೂ, ಇಬ್ಬರು ಔರಸಪುತ್ರರಾದರೆ, ಒಂಭತ್ತರಲ್ಲಿ ಅವರೊಬ್ಬರಿಗೆ ನಾಲ್ಕು ನಾಲ್ಕು ಭಾಗಗಳೂ, ದತ್ತನಿಗೆ ಒಂದುಭಾಗವೂ ಉಂಟು. ಹೀಗೆಯೇ ಆಸ್ತಿಯು ಪಾಲಾಗಬೇಕಾಗಿರುವದು.

ಆಸ್ತಿವಿಷಯ— ತಂದೆ ಸತ್ತನಂತರ. ಔರಸಪುತ್ರನೂ ದತ್ತಪುತ್ರನೂ ಒಟ್ಟಾಗಿದ್ದಾಗ, ಔರಸಪುತ್ರನು ಗಂಡುಮಕ್ಕಳಿಲ್ಲದೆ ಸತ್ತರೆ, ಅವರಿಬ್ಬರೂ ಜನ್ಮತಃ ಖಾಸಾ ಅಣ್ಣತಮ್ಮಂದರಾಗಿದ್ದರೆ ಹ್ಯಾಗೆಯೋ, ಅದೇಮೇರೆಗೆ ದತ್ತಪುತ್ರನೇ ಸಕಲಸ್ಥಿತಿಗೂ ಬಾಧ್ಯನಾಗುವನು. ಕೆಲವು ಜಾತಿಗಳ ಕುಲಾಚಾರದಪ್ರಕಾರ, ಔರಸಪುತ್ರ ಹುಟ್ಟಿದರೆ, ದತ್ತನಿಗೆ ಆಸ್ತಿಯು ಅರ್ಧ, ಮೂರರಲ್ಲೊಂದುಪಾಲು, ಕಾಲುಪಾಲು, ಕೆಲವುವೇಳೆ ಏನಾದರೂ ತಂದೆಯ ಇಷ್ಟಕ್ಕೆಬಂದ ಸ್ವಲ್ಪಮಾತ್ರ ಹೀಗೆ ಬೇರೆಬೇರೇವಿಧವಾಗಿ ಪಾಲುಕೊ

ಡುವದುಂಟು ಮದ್ರಾಸು ಸೀಮೆಯಲ್ಲಿ, ಶೂದ್ರರಲ್ಲಿ ಸಾಧಾರಣವಾಗಿ ಔರಸನಿಗೂ ದತ್ತನಿಗೂ ಸಮಭಾಗವಾಗುತ್ತದೆ. ದ್ವ್ಯಾಮುಷ್ಯಾಯಣನಾಗಿ ಸ್ವೀಕರಿಸಲ್ಪಟ್ಟವನು ಇಬ್ಬರು ತಂದೆಗಳಾಸ್ತಿಗೂ ಬಾಧ್ಯನಾಗುವನು. ಇಂಥಾವನ ಹೆತ್ತತಂದೆಗೆ ಬೇರೇ ಮಗನು ಹುಟ್ಟಿದರೆ, ಇವನ ಭಾಗದಲ್ಲಿ ಅರ್ಧದಷ್ಟು ಆಸ್ತಿಯು ದ್ವ್ಯಾಮುಷ್ಯಾಯಣನಿಗೆ ಬರುವದು. ದತ್ತು ಮಾಡಿಕೊಂಡ ತಂದೆಗೆ ಬೇರೇಮಗನು ಹುಟ್ಟಿದರೆ, ಅವನಿಗೆ ಬಂದದ್ದರ ಎಂಟರಲ್ಲೊಂದುಪಾಲು ದ್ವ್ಯಾಮುಷ್ಯಾಯಣನಿಗೆ ಬರುವದು ಗಂಡ ಸತ್ತನಂತರ ಹೆಂಡತಿಯು ದತ್ತುಮಾಡಿಕೊಳ್ಳಲೇಬೇಕೆಂದು ಆಕೆಯನ್ನು ನಿರ್ಬಂಧಪಡಿಸತಕ್ಕ ಹಕ್ಕು ಯಾರಿಗೂ ಇಲ್ಲವೆಂದು ಮೊದಲೇ ಹೇಳಿದೆಯಷ್ಟೆ. ಆಕೆಯೇ ಮನಸ್ಸು ಬಂದಾಗ ಮಾಡಿಕೊಳ್ಳಬಹುದು. ಗಂಡ ಸತ್ತನಂತರ ಈಕೆಯು ದತ್ತು ಮಾಡಿಕೊಳ್ಳುವದಕ್ಕೆ ಮುಂಚೆ ತನ್ನ ಗಂಡನ ಆಸ್ತಿಯು ಅವಳಿಗೆ ಗಂಡುಮಕ್ಕಳಿಲ್ಲದುದರಿಂದ ಯಾರಿಗೆ ಸೇರಬೇಕೋ, ಅವರಿಗೆ ಸೇರಿಬಿಡುತ್ತದೆ. ಈ ಹೆಂಗಸೇ ಗಂಡನಿಗೆ ವಾರಸ್ದಾರಳಾಗಿ ಆತನ ಆಸ್ತಿಯನ್ನು ಪಡೆದುಕೊಂಡಿದ್ದರೆ. ದತ್ತುಮಾಡಿಕೊಂಡಕೂಡಲೇ, ಆಕೆಗೆ ಹಕ್ಕು ತಪ್ಪಿ, ಆಸ್ತಿಯೆಲ್ಲಾ ದತ್ತಪುತ್ರನಿಗೆ ಸೇರಿಬಿಡುವದು ಮೃತಪಟ್ಟ ಆಸ್ತಿಗಾರನ ಇಬ್ಬರು ಹೆಂಡರೂ ಸೊತ್ತಿಗೆ ಬಾಧ್ಯರಾಗಿದ್ದು, ಅವರಲ್ಲೊಬ್ಬಳು ದತ್ತುಮಾಡಿಕೊಂಡರೂ ಇಬ್ಬರಿಗೂ ಸೊತ್ತಿಗೆ ಹಕ್ಕುತಪ್ಪಿ, ಎಲ್ಲವೂ ದತ್ತು ಮಗನದೇ ಆಗುವದು. ಮತ್ತು ಹೆಂಡರಲ್ಲದೆ ಮಗನಿಗಿಂತ ದೂರವಾದ ಇತರ ವಾರಸ್ದಾರರಿಗೆ ಸೊತ್ತು ಸೇರಿದಾಗಲೂ, ಅವರ ಹಕ್ಕೂ ತಪ್ಪಿ, ದತ್ತಪುತ್ರನದೇ ಆಗುವುದು. ಹ್ಯಾಗೆಂದರೆ,—

ವಿಭಕ್ತನಾಗಿರುವವನು ಗಂಡುಮಕ್ಕಳಿಲ್ಲದೆ ಸತ್ತರೆ ಅವನ ಹೆಂಡತಿಯೇ ಆಸ್ತಿಗೆ ಬಾಧ್ಯಳಾಗುವಳು. ಈಕೆಗೆ ದತ್ತು ಮಾಡಿಕೊಳ್ಳಲಿಕ್ಕೆ ಅರ್ಹ ಇದ್ದಾಗ್ಯೂ ಅದು ಇಲ್ಲದಿದ್ದರೆ ಗಂಡನ ಸೊತ್ತಿನ ಮೇಲೆ ಎಷ್ಟು ಅಧಿಕಾರವಿರುವದೋ ಅಷ್ಟು ಅಧಿಕಾರವನ್ನು ದತ್ತುಮಾಡಿಕೊಳ್ಳುವವರೆಗೂ ಅವಳು ನಡಿಸಬಹುದು ದತ್ತು ಆದ ನಂತರ ದತ್ತಪುತ್ರನು ಈಕೆಯು ನಡೆಸಿದ ನ್ಯಾಯವಾದ ಕಾರ್ಯಗಳನ್ನು ರದ್ದುಪಡಿಸುವದಕ್ಕಾಗುವುದಿಲ್ಲ. ಅದೇ ರೀತಿಯಾಗಿ ಮೃತ ಪಟ್ಟ ಆಸ್ತಿಗಾರನಿಗೆ ಅವಿಭಕ್ತಸಹೋದರನಿದ್ದರೆ ಆಸ್ತಿಗೆ ಹೆಂಡತಿಗೆ ಬದಲಾಗಿ ಅವನೇ ಬಾಧ್ಯನಾಗುತ್ತಾನೆ. ಈ ಸಂದರ್ಭದಲ್ಲಿಯೂ ಸತ್ತು ಹೋದವನ ಹೆಂಡತಿಯೂ ಸರಿಯಾದ ಅಧಿಕಾರವುಳ್ಳವಳಾಗಿದ್ದು ದತ್ತುಮಾಡಿಕೊಂಡರೆ ದತ್ತ ಪುತ್ರನಿಗೆ ತನ್ನ ಮರಣಹೊಂದಿದ ಸ್ವೀಕೃತ ತಂದೆಗಿದ್ದ ಹಕ್ಕೆಲ್ಲಾ ಉಂಟಾಗುವದು. ಆದರೆ ದತ್ತು ಆಗುವುದಕ್ಕೆ ಮುಂಚೆ ಆ ಅವಿಭಕ್ತ ಸಹೋದರನು ಮಾಡಿದ್ದ ಕಾರ್ಯಗಳು ಯಾವವ

ನ್ನೂ, ಅವು ನಡೆಯುವಾಗ ಮೃತ ಸಹೋದರನಿಗೆ ಮಕ್ಕಳಿದ್ದಿದ್ದರೆ ಜೀವತ್ಸಹೋದರನಿಗೆ ಆ ಕಾರ್ಯಗಳನ್ನು ಮಾಡುವದಕ್ಕೆ ಅಧಿಕಾರವಿರುತ್ತಿರಲಿಲ್ಲವೆಂಬ ಕಾರಣದಿಂದ ರದ್ದುಪಡಿಸುವದಕ್ಕಾಗುವುದಿಲ್ಲ.

ವಾರಸು— ತಾನು ಒಬ್ಬ ಮನುಷ್ಯನಿಗೆ ದತ್ತು ಆದ ಬಲದಮೇಲೆ ತನ್ನನ್ನು ದತ್ತುಮಾಡಿಕೊಂಡ ತಂದೆಗೆ ರಕ್ತಸಂಬಂಧಿಯಾದ ಮತ್ತೊಬ್ಬನು ಸತ್ತರೆ ಆತನ ಆಸ್ತಿಗೆ ವಾರಸ್ದಾರನಾಗಿ ಅದನ್ನು ಪಡೆಯಬೇಕಾದರೆ ಈ ಆಸ್ತಿಗಾರನು ಸಾಯುವದಕ್ಕೆ ಮೊದಲೇ ಅವನು ದತ್ತನಾಗಿರಬೇಕು. ಹಾಗಿಲ್ಲದಪಕ್ಷದಲ್ಲಿ ಆ ಆಸ್ತಿಯು ದೂರದ ವಾರಸುದಾರರಿಗೆ ಸೇರಿಹೋಗುವದು. ತರುವಾಯ ಇವನುದತ್ತನಾದರೂ ಅದು ಇವನಿಗೆಬರಲಾರದು. ಹ್ಯಾಗಂದರೆ,

ರಾಮ ಭೀಮನೆಂಬ ಇಬ್ಬರು ಅಣ್ಣತಮ್ಮಂದಿರು ಒಟ್ಟಾಗಿದ್ದು, ಅವರಲ್ಲಿ ರಾಮನು ಮಕ್ಕಳಿಲ್ಲದೆ ಸಾಯುತ್ತಾನೆ ಈಗ ಆಸ್ತಿಯೆಲ್ಲಾ ಭೀಮನದಾಗುವದು. ತರುವಾಯ ಭೀಮನೂ ಮಕ್ಕಳಿಲ್ಲದೆ ಸತ್ತದ್ದರಿಂದ ಆಸ್ತಿಯು ಅವನ ಹೆಂಡತಿಯದಾಗುವದು. ಹೀಗಾದಮೇಲೆ, ರಾಮನ ಹೆಂಡತಿಯು ದತ್ತು ಮಾಡಿಕೊಳ್ಳುತ್ತಾಳೆ. ಭೀಮನು ಸಾಯುವದಕ್ಕೆ ಮುಂಚೆಯೇ, ನ್ಯಾಯವಾಗಿ ಈ ದತ್ತು ಆಗಿದ್ದರೆ, ಇವರು ಅವಿಭಕ್ತ ಕುಟುಂಬದವರಾದ್ದರಿಂದ, ಈ ದತ್ತಪುತ್ರನೇ ಈ ಅಣ್ಣತಮ್ಮಂದರ ಸೊತ್ತಿಗೆಲ್ಲಾ ಬಾಧ್ಯತೆಯುಳ್ಳವನಾಗುತ್ತಿದ್ದನು ಆದರೆ ದತ್ತು ಆಗುವದಕ್ಕೆ ಮುಂಚೆಯೇ ರಾಮನು ಸತ್ತು, ಸೊತ್ತು ಅವನ ಹೆಂಡತಿಗೆ ಸೇರಿಹೋಗಿರುವದರಿಂದ, ಈ ರಾಮನ ದತ್ತಪುತ್ರನಿಗೆ ಭೀಮನ ಹೆಂಡತಿಯು ಜೀವವಂತಳಾಗಿರುವಾಗ ಆಸ್ತಿಗೆ ಏನೂ ಬಾಧ್ಯತೆಯುಂಟಾಗಲಾರದು.

ಒಬ್ಬ ಆಸ್ತಿಗಾರನು ಹೆಂಡತಿ ಮಕ್ಕಳಿಲ್ಲದೆ ಸತ್ತನಂತರ, ಅವನಾಸ್ತಿಯು ಅತನ ಅಕ್ಕನಮಗನಿಗೆ ಬರುತ್ತದೆ ತರುವಾಯ ಸತ್ತವನ ಅಣ್ಣನ ಹೆಂಡತಿಯಾದ ವಿಧವೆಯು, ದತ್ತು ಮಾಡಿಕೊಳ್ಳುತ್ತಾಳೆ. ಮೊದಲೇ ಈ ದತ್ತು ಆಗಿದ್ದರೆ, ಈ ದತ್ತಪುತ್ರನಿಗೆ ಆ ಸೊತ್ತು ಸೇರುತ್ತಿತ್ತು. ಆದರೂ ಮತ್ತೊಬ್ಬನಿಗೆ ಸೇರಿದ ತರುವಾಯ ದತ್ತುಆದುದರಿಂದ, ಅದಕ್ಕೆ ಈದತ್ತಪುತ್ರನಿಗೇನೂ ಬಾಧ್ಯತೆಯುಂಟಾಗಲಿಲ್ಲ,

ಅಳಿಯ ಸಂತಾನ— ಅಳಿಯ ಸಂತಾನದ ಪದ್ಧತಿಯನ್ನು ಅವಲಂಬಿಸುವವರಲ್ಲಿ, ಗಂಡುಮಗುವನ್ನು ದತ್ತು ಮಾಡಿಕೊಳ್ಳಕೂಡದೆಂದು ಫೈಸಲ್ಮಾಡಿದಾರೆ. ಸೂಳೆಯರು ಹೆಣ್ಣುಮಗಳನ್ನು ದತ್ತು ಮಾಡಿಕೊಂಡರೆ, ಅದು ಶಾಸ್ತ್ರಪ್ರಕಾರ ಸಲ್ಲಲಾರದೆಂದು ಮುಂಬಯಿ ಹೈಕೋರ್ಟಿನವರು ಫೈಸಲ್ಮಾಡಿದಾರೆ. ಆದರೆ, ಈಚೆಗೆ ಆದ ಮದ್ರಾಸು ಫೈಸಲಿನಲ್ಲಿ ಮೇಲೆ

ಹೇಳಿದ ಫೈಸಲು ಒಪ್ಪತಕ್ಕದ್ದಲ್ಲವೆಂದೂ, ಅವರ ಜಾತಿ ಪದ್ಧತಿಯುಪ್ರಕಾರ ಸೂಳೆಯರು ಹೆಣ್ಣುಮಕ್ಕಳನ್ನು ದತ್ತು ಮಾಡಿಕೊಂಡರೆ, ಆ ಮಗಳೇ ಸೊತ್ತಿಗೆ ಬಾಧ್ಯಳಾಗುವಳೆಂದೂ ತೀರ್ಪಾಗಿದೆ. ಆದ್ದರಿಂದ, ಈಗಿನ ಸ್ಥಿತಿಯಲ್ಲಿ ಮದ್ರಾಸು ಸೀಮೆಯಲ್ಲಿ ಇಂಥಾ ಹೆಣ್ಣಿನ ದತ್ತು ಸಲ್ಲುವದೆಂತಲೂ, ಮುಂಬಯಿ ಸೀಮೆಯಲ್ಲಿ ಸಲ್ಲಲಾರದೆಂತಲೂ, ಹೇಳಬೇಕು. ಮೈಸೂರು ಸೀಮೆಯಲ್ಲಿ ಸದ್ಯಃ ಹಾಗೋ ಹೀಗೋ ಹೇಳುವದಕ್ಕವಕಾಶವಿಲ್ಲ ಇಲ್ಲಿನ ಚೀಫ್‌ಕೋರ್ಟಿನಲ್ಲಿ ಈ ವಿಷಯವನ್ನು ಕುರಿತು ಯಾವವಿಧವಾಗಿ ಮುಂದೆ ಫೈಸಲಾಗುತ್ತದೆಯೋ ಅದರಂತೆಯೇ ಭಾವಿಸಬೇಕು ಕೆಲವು ಸ್ಥಳಗಳಲ್ಲಿ ಶೂದ್ರರಿಗೆ ಗಂಡುಮಕ್ಕಳಿಲ್ಲದಿದ್ದರೆ ಒಬ್ಬಮಗಳನ್ನು ಬಸವಿಯನ್ನಾಗಿ ಬಿಟ್ಟು ತಮ್ಮಮನೆಯಲ್ಲಿಯೇ ಇಟ್ಟುಕೊಳ್ಳುವರು ಅವಳಿಗೆ ಮಕ್ಕಳಾದರೆ, ಅವರು ಆಕೆಯ ತಂದೆಗೆ ವಾರಸ್ದಾರರಾಗುವಂತೆ ಜಾತಿಯ ಆಚಾರವನ್ನಿಟ್ಟುಕೊಂಡಿದಾರೆ.

ಸಮಷ್ಟಿ ಕುಟುಂಬ— ನಮ್ಮವರಲ್ಲಿ ಸಾಧಾರಣವಾಗಿ ತಂದೆ, ಮಕ್ಕಳು ಮಮ್ಮಕ್ಕಳು ಮುಂತಾದವರು, ಅಥವಾ ಅಣ್ಣತಮ್ಮಂದರು ಮುಂತಾದವರು, ಸಮಷ್ಟಿಯಲ್ಲಿ ಅಂದರೆ ಒಟ್ಟಿಗೆ ಇರುತ್ತಾರೆ. ಇಂಥಾಕುಟುಂಬದಲ್ಲಿ ಗಂಡಸರಿಗೆ ಮಾತ್ರ ಆಸ್ತಿಗೆ ಹಕ್ಕಿರುವದು; ಹೆಂಗಸರಿಗೆ ಜೀವನಾಂಶಕ್ಕೆ ಬಾಧ್ಯತೆಯೇ ಹೊರತು ಬೇರೆಯೇನೂ ಇರಲಾರದು ಗಂಡಸರಲ್ಲಿಯೂ, ಭಾಗವಾಗುವದಕ್ಕೆಮುಂಚೆ ಇಂಥಾವರ ಆಸ್ತಿ ಇಷ್ಟೇ ಎಂದು ಹೇಳುವದಕ್ಕೆ ಅವಕಾಶವಿರುವದಿಲ್ಲ ಅವಿಭಕ್ತರಲ್ಲಿ ಒಬ್ಬನಿಗಾಗುವದಕ್ಕಿಂತ ಮತ್ತೊಬ್ಬನಿಗೆ ಹೆಚ್ಚಾಗಿ ಖರ್ಚಾದುದರಿಂದ, ಇವನಿಗಿರತಕ್ಕ ಆಸ್ತಿಯು ಹಕ್ಕು ಕಮ್ಮಿಯಾಯಿತೆಂದು ಹೇಳುವದಕ್ಕಿಲ್ಲ, ಹ್ಯಾಗಂದರೆ,—

ಇಬ್ಬರು ಅಣ್ಣತಮ್ಮಂದರಲ್ಲಿ ಒಬ್ಬನಿಗೆ ಎರಡುಸಲ ಮದುವೆಯಾಯಿತು, ಮತ್ತೊಬ್ಬನಿಗೆ ಒಂದೇಸಲವಾಯುತು; ಒಬ್ಬನಿಗೆ ಎಂಟುಮಂದಿ ಮಕ್ಕಳಿದಾರೆ, ಮತ್ತೊಬ್ಬನಿಗೆ ಮಕ್ಕಳೇ ಇಲ್ಲ! ಇಂಥಾ ಕಾರಣಗಳಿಂದ ಆಸ್ತಿಯು ಭಾಗವಾಗತಕ್ಕ ಕಾಲದಲ್ಲಿ ಮಕ್ಕಳಿರುವವನಿಗೆ ಕಮ್ಮಿಯೂ ಮತ್ತೊಬ್ಬನಿಗೆ ಹೆಚ್ಚೂ ಕೊಡಬೇಕೆಂದರಾಗುವದಿಲ್ಲ. ಆದರೆ ಕೆಲವು ಕುಟುಂಬಗಳಲ್ಲಿ, ಬೇರೆಬೇರೆ ಜನಗಳಿಗೆ ಆಗತಕ್ಕ ಖರ್ಚನ್ನೆಲ್ಲಾ ಬೇರೆಬೇರೆ ಲೆಕ್ಕವಿಡುವಪದ್ಧತಿಯುಂಟು.

ಭಾಗಕ್ಕೆ ಅನರ್ಹರು— ಸಮಷ್ಟಿ ಕುಟುಂಬದ ಸ್ತ್ರೀಯರೂ ಮತ್ತು ಗಂಡುಸರಪೈಕಿ ಜಾತಿಭ್ರಷ್ಟರೂ, ಹುಟ್ಟುಕುರುಡರೂ, ಕಿವುಡರೂ, ಮೂಕರೂ, ಕುಷ್ಟರೋಗಿಗಳೂ ಜೀವನಾಂಶಕ್ಕ ಅರ್ಹರೇಹೊರತು ಭಾಗಕ್ಕ

ಅರ್ಹರಲ್ಲ. ಆದರೆ ವಿಭಾಗವಾಗುವಾಗ, ಇಂಥ ಅನರ್ಹರಾದ ಗಂಡುಸರಿಗೆ ಸರಿಯಾದ ಗಂಡುಮಕ್ಕಳಿದ್ದರೆ, ಅವರಿಗೆ ಹಿಸ್ಸೆಯು ಸಿಕ್ಕುವುದು. ಬ್ರಿಟಿಷ್ ಇಂಡಿಯಾದೇಶದಲ್ಲಿ ೧೮೫೦ ನೇ ಇಸವಿ ೨೧ನೇ ಆಕ್ಟ ಪ್ರಕಾರ ಜಾತಿ ಭ್ರಷ್ಟರಿಗೆ ಹಿಸ್ಸೆಯ ಹಕ್ಕು ಹೋಗುವುದಿಲ್ಲ.

ಹಕ್ಕುದಾರರು—ಅವಿಭಕ್ತ ಕುಟುಂಬಕ್ಕೆ ಸೇರಿದ ಭಾಗಾರ್ಹರಾದ ಗಂಡುಸರೆಲ್ಲರೂ ಹಿಸ್ಸೆಯನ್ನು ಕೇಳಲು ಹಕ್ಕುದಾರರಾಗಿರುತ್ತಾರೆ. [ಮುಸಲ—ಅಣ್ಣ, ತಮ್ಮ, ತಮ್ಮನಮಗ ಈ ಮೂವರೂ ಸೇರಿರುವ ಕುಟುಂಬದಲ್ಲಿ, ಅಣ್ಣತಮ್ಮಂದಿರು ಹಿಸ್ಸೆ ಮಾಡಿಕೊಳ್ಳಲು ಒಪ್ಪದಿದ್ದರೂ. ತಮ್ಮನ ಮಗನು ಕೋರ್ಟಿನಮೂಲಕ ಹಿಸ್ಸೆಯನ್ನು ತೆಗೆದುಕೊಳ್ಳಬಹುದು.] ಆದರೆ ತಂದೆಯ ಸ್ವಾರ್ಜಿತ ಆಸ್ತಿಯಲ್ಲಿ ಮಗನು ಹಿಸ್ಸೆಯನ್ನು ಕೇಳಲು ಆಗುವದಿಲ್ಲ. ತಂದೆ ಮಕ್ಕಳಿಗೆ ವಿಭಾಗವಾದಮೇಲೆ ತಂದೆಗೆ ಮಗ ಹುಟ್ಟಿದರೆ, ಅಂಥ ಮಗನು ತಂದೆಯ ಹಿಸ್ಸೆಗೆ ಬಂದ ಆಸ್ತಿಗೂ, ಹಿಸ್ಸೆಯಾದನಂತರ ತಂದೆಯು ಸಂಪಾದಿಸಿದ ಇತರ ಆಸ್ತಿಗೂ ಸಹ ಹಕ್ಕುದಾರನಾಗುವನು. ತಾಯಿಯು ಗರ್ಭಿಣಿಯಾಗಿರುವಾಗ ಮಕ್ಕಳು ಹಿಸ್ಸೆ ಮಾಡಿಕೊಳ್ಳಕೂಡದು. ತಿಳಿಯದೆ ಮಾಡಿಕೊಂಡರೆ, ಮೊದಲು ಮಾಡಿಕೊಂಡ ವಿಭಾಗವು ರದ್ದಾಗುವುದು; ಅಥವಾ, ಮೊದಲು ಭಾಗಮಾಡಿಕೊಂಡವರು ತಮ್ಮ ತಮ್ಮ ಭಾಗದಿಂದ ಭರ್ತಿಮಾಡಿ, ಕೊನೆಯಲ್ಲಿ ಹುಟ್ಟಿದವನಿಗೆ ಸಮನಾದ ಭಾಗವನ್ನು ಕೊಡಬೇಕಾಗುವುದು. ಭಾಗಾರ್ಹರಪೈಕಿ ಕೆಲವರ ಹಿಸ್ಸೆಯನ್ನು ಕ್ರಯಕ್ಕೆ ತೆಗೆದುಕೊಂಡಿರುವವರು ಸಹ ಭಾಗ ಮಾಡಿಸಲು ಅರ್ಹರಾಗಿರುತ್ತಾರೆ.

ಮೈನರುಗಳಿಗೆ ಪ್ರಯೋಜನ— ವಿಭಾಗವಾಗುವುದರಿಂದ ಮೈನರಿಗೆ ಪ್ರಯೋಜನವುಂಟು; ಅಥವಾ ವಿಭಾಗವಾಗದಿದ್ದರೆ, ಮೈನರಿಗೆ ಬಹಳ ನಷ್ಟವು ಸಂಭವಿಸುತ್ತದೆ ಎಂಬುವುದನ್ನು ತೋರಿಸದಿದ್ದರೆ. ಮೈನರಿನ ದಾವಾದಮೇಲೆ ಕೋರ್ಟಿನವರು ಕುಟುಂಬದ ಆಸ್ತಿಯನ್ನು ಭಾಗಮಾಡಿಸುವುದಿಲ್ಲ.

ಹಿಸ್ಸೆಯಾಗಲಾಗದ ಸ್ವತ್ತು—ಶಾನಭೋಗಿ, ಯಾ, ಕುಲಕರಣಿ, ಪಟೇಲಿ, ಯಾ, ಮಣೇಗಾರಿ, ಪೂಜಾರಿ ಈ ಹಕ್ಕುಗಳು ಪ್ರಾಯಶಃ ಹಿಸ್ಸೆಮಾಡಲ್ಪಡಲು ಅರ್ಹವಾದವುಗಳಲ್ಲ. ಆದರೆ ಇವುಗಳನ್ನು ಹಿಸ್ಸೆಯ ಆಸ್ತಿಗಳಲ್ಲಿ ಸೇರಿಸಿಕೊಂಡು, ಇವುಗಳಿಗೆ ಬೆಲೆ ಕಟ್ಟಿ, ಸರ್ಕಾರಿ ಕೆಲಸಕ್ಕೆ ತೊಂದರೆಯಾಗದಂತೆ ಸದರಿ ಬೆಲೆಯನ್ನು ಹಂಚಿಕೊಳ್ಳಲಾಗುವುದು; ಅಥವಾ, ಸರ್ಕಾರದವರ ಅಪ್ಪಣೆಗೆ ವಿರೋಧವಿಲ್ಲದಿದ್ದರೆ, ಇವುಗಳನ್ನು ಸರದೀ

ಮೇರೆ ಅನುಭವಿಸಬಹುದು. ರಾಜ್ಯಗಳು, ಪಾಳ್ಯಗಳು ದೊಡ್ಡ ದೊಡ್ಡ ಜಮೀನ್‌ದಾರಿಗಳು ವಿಭಾಗಿಸಲ್ಪಡಲು ಅರ್ಹವಾದವುಗಳಲ್ಲ. ಇಂಥ ಆಸ್ತಿಗಳನ್ನು ಜ್ಯೇಷ್ಠನೊಬ್ಬನೇ ಹಕ್ಕುದಾರನಾಗಿ ಅನುಭವಿಸುವನು. ಮಿಕ್ಕವರು ಅವುಗಳಿಂದ ಜೀವನಾಂಶವನ್ನು ಹೊಂದಲು ಮಾತ್ರ ಹಕ್ಕುದಾರರು.

ಸತ್ರ, ದೇವಸ್ಥಾನ—ಇದೇ ಮೇರೆ ಸತ್ರ, ದೇವಸ್ಥಾನ, ಮಠಗಳಿಗೂ ಮತ್ತು ಇತರ ಧರ್ಮಕ್ಕಾಗಿಯೂ ದಾನವಾಗಿ ಕೊಡಲ್ಪಟ್ಟ ಆಸ್ತಿಗಳು ವಿಭಾಗಿಸಲ್ಪಡತಕ್ಕವುಗಳಲ್ಲ. ಆದರೆ ಈ ನಿಯಮದ ನೆಪದಿಂದ ಆಸ್ತಿದಾರರು ತಮ್ಮ ಆಸ್ತಿಯನ್ನು ತಮ್ಮ ವಾರಸುದಾರರು ವಿಭಾಗ ಮಾಡಿಕೊಳ್ಳದೆಯೂ ಪರಾಕ್ರಾಂತ ಮಾಡದೆಯೂ ಶಾಶ್ವತವಾಗಿ ಅನುಭವಿಸುವಂತೆ ಏರ್ಪಾಟುಮಾಡುವರು. (ಮಸಲ—ತಿಂಗಳಿಗೆ ೧,೦೦೦ ರೂ. ಉತ್ಪತ್ತಿಯಾಗುವ ಆಸ್ತಿಯನ್ನು ಸಂಪಾದನೆಮಾಡಿರುವವನೊಬ್ಬನು ತನ್ನ ಆಸ್ತಿಯನ್ನು ಹೀಗೆ ದಾನಮಾಡುವನು. ಹೇಗೆಂದರೆ ತನ್ನ ಆಸ್ತಿಯಿಂದ ತನ್ನ ವಾರಸುದಾರರು ಪ್ರತಿದಿನವೂ ೧೦ ಜನಕ್ಕೆ ಅನ್ನವನ್ನು ಹಾಕಬೇಕೆಂದು ವಿಲ್ಲನ್ನು ಬದಿಟ್ಟು ತನ್ನ ಆಸ್ತಿಯನ್ನೆಲ್ಲ ಸದರಿ ಅನ್ನಸತ್ರಕ್ಕೆ ಕೊಟ್ಟುಬಿಡುತ್ತಾನೆ. ಇಲ್ಲಿ ಉತ್ಪತ್ತಿಯಾಗುವ ೧,೦೦೦ ರೂ. ಪೈಕಿ ಉದ್ದಿಷ್ಟದಾನಕ್ಕೆ ಖರ್ಚಾಗಬಹುದಾದ ೪೦ ರೂ. ಜಾತಾ ಉಳಿಯುವ ೯೬೦ ರೂ. ಮಾಹೇಯಾನಾ ಉತ್ಪತ್ತಿಯಾಗುವ ಆಸ್ತಿಯನ್ನು ತನ್ನ ವಾರಸುದಾರರು ವಿಭಾಗಮಾಡಿಕೊಳ್ಳದೆಯೂ ಪರಾಧೀನಮಾಡದೆಯೂ ಶಾಶ್ವತವಾಗಿ ಅನುಭವಿಸಬೇಕೆಂಬುವದು ಈ ಧರ್ಮಕರ್ತನ ಅಂತರುದ್ದಿಶ್ಯವಾಗಿರುತ್ತದೆ. ಏಕೆಂದರೆ ಹೀಗೆ ಆಸ್ತಿಯನ್ನು ಧರ್ಮಕ್ಕೋಸ್ಕರ ಬಿಡದಿದ್ದರೆ ಅದು ವಿಭಾಗವಾಗುವುದನ್ನು ತಪ್ಪಿಸುವುದಕ್ಕಾಗುತ್ತಿರಲಿಲ್ಲ.) ಆದರೆ ಆಸ್ತಿದಾರರು ಮಾಡುವ ಈ ಯುಕ್ತಿಗಳನ್ನು ಕೋರ್ಟುಗಳಿಂದ ಮರೆಮಾಚಲು ಸಾಧ್ಯವಿಲ್ಲ.

ಮೈನರು ಭಾಗ—ಭಾಗಾರ್ಹರ ಪೈಕಿ ಯಾರಾದರೂ ಮೈನರಾಗಿರುವಾಗಲೂ ಹಿಸ್ಸೆ ಮಾಡಿಕೊಳ್ಳಬಹುದು. ಆದರೆ ಮೈನರಿಗೋಸ್ಕರ ಯಾರಾದರೂ ಗಾರ್ಡಿಯನ್ನಾಗಿ ನಿಂತು ಮೈನರಿನ ಹಿಸ್ಸೆಯನ್ನು ತೆಗೆದುಕೊಳ್ಳಬೇಕು. ಮೈನರ್ ಮೇಜರಾದ ಮೇಲೆ ತನಗೆ ಸರಿಯಾದ ಹಿಸ್ಸೆ ಕೊಟ್ಟಿಲ್ಲವೆಂತಲೂ ಪುನಃ ಹಿಸ್ಸೆಯಾಗಬೇಕೆಂತಲೂ ಸಹ ತಕರಾರು ಮಾಡಬಹುದು.

ಸಾಧಾರಣವಾಗಿ ಬಲತಾಯಿಯರ ಮಕ್ಕಳು ತಮ್ಮ ಸಂಖ್ಯಾನುಸಾರವಾಗಿ ಹಿಸ್ಸೆಯನ್ನು ಹೊಂದುವರೇ ಹೊರತು ತಮ್ಮ ತಾಯಿಯರ ಸಂಖ್ಯಾನುಸಾರವಾಗಲ್ಲ. (ಮಸಲ—ಒಬ್ಬ ತಾಯಿಗೆ ಒಬ್ಬ ಮಗನೂ, ಅವಳ ಸಹ

ತಿಗೆ ೪ ಜನ ಗಂಡುಮಕ್ಕಳೂ ಇದ್ದರೆ ಈ ಐವರೂ ಆಸ್ತಿಯನ್ನು ಸಮಹಿಸ್ಸೆ ಮಾಡಿಕೊಂಡು ಒಬ್ಬೊಬ್ಬರು ೫ ರಲ್ಲಿ ೧ ಭಾಗವನ್ನು ಹೊಂದುವರೇ ಹೊರತು ಮೊದಲನೆಯವಳ ಮಗನಿಗೆ ಅರ್ಧ ೨ ನೇಯವಳ ೪ ಜನ ಮಕ್ಕಳೆಲ್ಲರಿಗೂ ಅರ್ಧ ಈ ಮೇರೆ ಅಲ್ಲ.) ತಾಯಿಯರ ಸಂಖ್ಯಾನುಸಾರ ವಿಭಾಗವಾಗುವುದು ಯಾವ ಮನೆತನಗಳಿಗೆ ಪದ್ಧತಿಯಾಗಿದೆಯೋ ಆ ಮನೆತನದ ವಿಷಯದಲ್ಲಿ ಆ ಪದ್ಧತಿಯನ್ನೇ ಅನುಸರಿಸಬಹುದು.

ವಿಧವೆಯರು—ಗಂಡನ ಆಸ್ತಿಯನ್ನು ವಾರಸು ಹಕ್ಕಿನ ಮೂಲಕ ಹೊಂದಿದ ವಿಧವೆಯರು ಈ ಆಸ್ತಿಯನ್ನು ತಾವು ತಾವು ಹಿಸ್ಸೆ ಮಾಡಿಕೊಂಡು ಅನುಭವಿಸಬಹುದು. ಆದರೆ ತಮ್ಮ ತಮ್ಮ ಹಿಸ್ಸೆಯನ್ನು ಪರಭಾರೆ ಮಾಡಲು ಇವರಿಗೆ ಹಕ್ಕಿರುವುದಿಲ್ಲ. ಒಬ್ಬಳು ಸತ್ತನಂತರ ಅವಳ ಹಿಸ್ಸೆ ಆಸ್ತಿಯು ಮತ್ತೊಬ್ಬಳಿಗೆ ಬರುವುದು. ಇವಳು ಇರುವವರೆಗೂ ಸತ್ತವಳ ಮಗಳಿಗೆ ಹಕ್ಕು ಬರುವುದಿಲ್ಲ. ಇದೇ ಮೇರೆ ವಾರಸುಹಕ್ಕಿನ ಮೂಲಕ ಮೃತನಾದ ತಂದೆಯ ಆಸ್ತಿಯನ್ನು ಹೊಂದಿದ ಹೆಣ್ಣು ಮಕ್ಕಳೂ ಸಹ ಹಿಸ್ಸೆ ಮಾಡಿಕೊಂಡು ಆಸ್ತಿಯನ್ನು ತಮ್ಮ ಜೀವಮಾನ ಪರ್ಯಂತ ಅನುಭವಿಸಬಹುದು.

ಪುರೋಹಿತಿಯ ಹಕ್ಕು—ಪುರೋಹಿತಿಯ ಹಕ್ಕು ಶಿಷ್ಯಾರ್ಜನೆಯ ಹಕ್ಕುಗಳು ಆಸ್ತಿಯಲ್ಲ. ಆದುದರಿಂದ ಇಂಥ ಹಕ್ಕುಗಳಲ್ಲಿ ಹಿಸ್ಸೆಯನು ಹೊಂದಲು ತರುವ ದಾವಾ ಊರ್ಜಿತವಾಗುವುದಿಲ್ಲ. ಆದರೆ ಇಂಥ ಹಕ್ಕುಗಳನ್ನು ವಿಭಾಗಕಾಲದಲ್ಲಿ ವಿಭಾಗದ ಇತರ ಆಸ್ತಿಯೊಡನೆ ಹಂಚಿಕೊಳ್ಳಲು ಯಾವ ಅಭ್ಯಂತರವೂ ಇಲ್ಲ.

ಭಾಗಾಂಶಗಳು—ಒಬ್ಬ ಭಾಗಸ್ಥನಿಗೆ ಮಕ್ಕಳು ಮೊದಲಾದವರು ಇರುವುದರಿಂದ ಸಮಷ್ಟಿ ದ್ರವ್ಯದಲ್ಲಿ ಇತರರಿಗಿಂತ ಇವನಿಗೆ ಅಧಿಕವಾಗಿ ವೆಚ್ಚವಾಯಿತು ಎಂಬ ಕಾರಣದ ಮೇಲೆ ಅವನ ಭಾಗವನ್ನು ಕಡಮೆಮಾಡಲಾಗುವುದಿಲ್ಲ. ಕುಟುಂಬಕ್ಕೆ ಯಜಮಾನನಾಗಿದ್ದವನು ಕುಟುಂಬದ ಆಸ್ತಿಯನ್ನು ಚೆನ್ನಾಗಿ ರಕ್ಷಿಸಲಿಲ್ಲ, ಅಥವಾ ದುಬಾರೀ ಖರ್ಚು ಮಾಡಿದನು ಎಂಬ ಕಾರಣಗಳ ಮೇಲೆ ಅವನ ಭಾಗವನ್ನು ತಗ್ಗಿಸಲಾಗುವುದಿಲ್ಲ. ಆದರೆ ಕುಟುಂಬದ ಆಸ್ತಿಯನ್ನು ಅವನು ಮೋಸದಿಂದ ಅಪಹಾರ ಮಾಡಿದ್ದರೆ ಅವನ ಹಿಸ್ಸೆಯಲ್ಲಿ ವಜಾಮಾಡಬಹುದು. ಸಮಷ್ಟಿಗೆ ಸೇರಿದ ಅತಿ ಸ್ವಲ್ಪ ದ್ರವ್ಯದಿಂದ ಇತರರಿಗಿಂತಲೂ ವಿಶೇಷವಾಗಿ ಸಂಪಾದನೆ ಮಾಡಿದ ಭಾಗಸ್ಥನಿಗೂ ಮತ್ತು ತನ್ನ ಸ್ವಾರ್ಜಿತ ಆಸ್ತಿಯನ್ನು ಸಮಷ್ಟಿಯೊಡನೆ ಸೇರಿಸಿಬಿಟ್ಟಿರುವ ಭಾಗಸ್ಥನಿಗೂ ೨ ಭಾಗಗಳು ಕೊಡಲ್ಪಡಬೇಕು. ೯ ಡಬ್ಲ್ಯು ಆರ್. ೬೧, ೧೦ ಇ. ಮೂ. ಅ. ೪೯೦.

ಮದುವೆ ಈಡು—ತಂದೆ ಮಕ್ಕಳು ಕೂಡಿರುವ ಕುಟುಂಬದ ಆಸ್ತಿಯು ನ್ನು ಹಿಸ್ಸೇಮಾಡಿಕೊಳ್ಳುವಾಗ್ಯೆ ಮದುವೆ, ಮುಂಜಿ, ಆಗಿಲ್ಲದೇ ಇರುವ ಭಾಗಾರ್ಹರಿಗೆ ಅವರಿಗೆ ಸಲ್ಲುವ ಹಿಸ್ಸೆಯನ್ನು ಕೊಡುವದಲ್ಲದೆ ಹೆಚ್ಚಾಗಿ ಅವರ ಮದುವೆ ಮುಂಜೀ ಖರ್ಚನ್ನು ಸಹ ಅವರಿಗೆ ಕೊಡಬೇಕು. ೮ ಬೊಂ ಲಾ. ರಿ. ೬೩೨.

ಸಮಷ್ಟಿ ಭಾಗಸ್ಥರು—ಸಮಷ್ಟಿ ಕುಟುಂಬದಲ್ಲಿ ಕೆಲವು ಬಾಗಸ್ಥರು ಮಾತ್ರವೇ ವಿಭಾಗ ಮಾಡಿಕೊಂಡು ಮಿಕ್ಕವರು ಒಟ್ಟಿಗೆ ಇರಬಹುದು. ಅಥವಾ ಕೆಲವು ಸ್ವತ್ತುಗಳನ್ನು ಮಾತ್ರ ವಿಭಾಗಿಸಿಕೊಂಡು ಮಿಕ್ಕ ಸ್ವತ್ತುಗಳನ್ನು ಸಮಷ್ಟಿಯಲ್ಲೇ ಇಟ್ಟುಕೊಂಡಿರಬಹುದು.

ಪುನಃ ಒಟ್ಟು—ಸಮಷ್ಟಿ ಭಾಗಸ್ಥರು ತಾವು ತಾವು ವಿಭಾಗಮಾಡಿಕೊಂಡ ಮೇಲೆ ಅವರೆಲ್ಲರೂ ಅಥವಾ ಅವರ ಪೈಕಿ ಕೆಲವರು ಪುನಃ ಒಟ್ಟಿಗೆ ಸೇರಿಕೊಳ್ಳಬಹುದು. ಹೀಗೆ ಪುನಃ ಒಟ್ಟಿಗೆ ಸೇರಿದವರು ಅವರು ಮೊದಲಿಂದಲೂ ಒಟ್ಟಿಗಿದ್ದರೆ ಯಾವ ಫಲವನ್ನು ಹೊಂದುತಿದ್ದರೋ ಅದೇ ಫಲವನ್ನು ಹೊಂದುವರು. ಆದರೆ ಮೊದಲು ಯಾರು ಒಟ್ಟಿಗಿದ್ದು ಹಿಸ್ಸೆ ಮಾಡಿಕೊಂಡರೋ ಅವರೇ ಪುನಃ ಒಟ್ಟಿಗೆ ಸೇರಿದರೆ ಮಾತ್ರ ಈ ಫಲವು ಉಂಟಾಗುತ್ತದೆ.

ದತ್ತಸ್ವೀಕಾರವಾದನಂತರ—ದತ್ತಸ್ವೀಕಾರವಾದ ನಂತರ ಔರಸಪುತ್ರನು ಹುಟ್ಟಿದರೆ ಮದ್ರಾಸ್ ಆಧಿಪತ್ಯದಲ್ಲಿ ದತ್ತಪುತ್ರನಿಗೆ ೧ ಪಾಲೂ ಔರಸಪುತ್ರನಿಗೆ ೪ ಪಾಲೂ ಸಲ್ಲುತ್ತದೆ. ಆದುದರಿಂದ ಒಬ್ಬನೇ ಔರಸನಿರುವಾಗ ಆಸ್ತಿಯು (೧+೪=) ೫ ಭಾಗ ಮಾಡಲ್ಪಟ್ಟು ಆ ಪೈಕಿ ೧ ಭಾಗ ದತ್ತನಿಗೂ ೪ ಭಾಗಗಳು ಔರಸನಿಗೂ ಸಲ್ಲುತ್ತವೆ ಇಬ್ಬರು ಔರಸರಿರುವಾಗ ಆಸ್ತಿಯು (೧+೪+೪=) ೯ ಭಾಗ ಮಾಡಲ್ಪಟ್ಟು ಆ ಪೈಕಿ ೧ ಭಾಗ ದತ್ತನಿಗೂ ನಾಲ್ಕು ನಾಲ್ಕು ಭಾಗಗಳು ಔರಸರಿಗೂ ಸಲ್ಲುತ್ತವೆ. ೩ ಮಂದಿ ಔರಸರಿದ್ದರೆ ಆಸ್ತಿಯು (೧+೪+೪+೪=) ೧೩ ಭಾಗ ಮಾಡಲ್ಪಟ್ಟು ಆ ಪೈಕಿ ೧ ಭಾಗ ದತ್ತನಿಗೂ ೪ ಭಾಗಗಳು ಪ್ರತಿ ಔರಸನಿಗೂ ಸಲ್ಲುತ್ತವೆ ಮೈಸೂರು ಬೊಂಬಾಯಿ ಸೀಮೆಗಳಲ್ಲೂ ಇದೇ ಮೇರೆ ದತ್ತ ಔರಸಪುತ್ರರಿಗೆ ಹಿಸ್ಸೆಯು ಸಲ್ಲುವದು. ಜೈನರಲ್ಲಿ ಒಬ್ಬ ಔರಸಪುತ್ರನಿದ್ದರೆ ದತ್ತಪುತ್ರನಿಗೆ ಕಾಲುಭಾಗ ಸಲ್ಲುವುದೆಂದು ತೀರ್ಮಾನವಾಗಿದೆ. ೧೯ ಬೊಂ. ೩೪೭- ಮದ್ರಾಸು ಆಧಿಪತ್ಯದಲ್ಲಿ ಶೂದ್ರರಲ್ಲಿ ಔರಸಪುತ್ರನೂ ದತ್ತಪುತ್ರನೂ ಸಹ ಸಮಭಾಗಿಗಳೆಂದು ತೀರ್ಮಾನಿಸಿದ್ದಾರೆ. ೭ ಮ. ೨೫೭.

ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಜಾತಿಗಳಲ್ಲಿ ಇಟ್ಟುಕೊಂಡವಳ ಮಗ

ನಿಗೆ ಹಿಸ್ಸೆಯನ್ನು ಹೊಂದುವ ಹಕ್ಕಿಲ್ಲ. ಶೂದ್ರರಲ್ಲಿ ತಂದೆಯು ಸತ್ತ ಮೇಲೆ ಇಟ್ಟುಕೊಂಡವಳ ಮಗನು ಕಾಲುಭಾಗದ ಹಿಸ್ಸೆಗೆ ಹಕ್ಕುದಾರ ನಾಗುತ್ತಾನೆ. ಉಳಿದ ಮುಕ್ಕಾಲುಪಾಲು ಆಸ್ತಿಗೆ ಔರಸಪುತ್ರನು ಅವನ ಮಗನು ಮೊಮ್ಮಗನು ಇವರಾರೂ ಇಲ್ಲದಿದ್ದರೆ ಆಸ್ತಿದಾರನ ಹೆಂಡತಿ ಮಗಳು ಮೊಮ್ಮಗಳು ಹೀಗೆ ಒಬ್ಬರಿಲ್ಲದಿದ್ದರೆ ಮತ್ತೊಬ್ಬರು ಹಕ್ಕು ದಾರರಾಗುವರು. ಲ. ಪು, ೫೬೧; ೧೪ ಬೊಂ. ೨೮೨.


ವಿಭಾಗ ಮಾಡಿಕೊಂಡ ರುಜುವಾತಿಗೆ ಬರವಣಿಗೆ ಇರಬೇಕೆಂಬ ಅವಶ್ಯವಿಲ್ಲ. ಆದರೆ ಪಾರೀಖತ್ತನ್ನು ಬರೆದರೆ ಅದು ಸ್ಟಾಂಪು ಮತ್ತು ರಿಜಸ್ಟ್ರೇಷನ್ ರೂಲ್ಸಿಗೆ ಅನುಸಾರವಾಗಿರಬೇಕು. ವ್ಯ. ನಿ.

ಸಮುಷ್ಟಿ ಕುಟುಂಬದ ವಿಷಯದಲ್ಲಿ ವ್ಯವಹಾರ ದೀಪಿಕಾಕರ್ತರ ಅಭಿಪ್ರಾಯ—ಪ್ರತಿಕುಟುಂಬದಲ್ಲಿಯೂ ತಂದೆಯೇ ಮುಖ್ಯನಾದಾಗ್ಯು ಕುಟುಂಬದ ಪಿತ್ರಾರ್ಜಿತದ ಸೊತ್ತಿನಲ್ಲಿ ಆತನಿಗೆ ಎಷ್ಟು ಹಕ್ಕಿರುವದೋ ಆತನ ಮಕ್ಕಳಿಗೂ ಅಷ್ಟೇ ಹಕ್ಕಿರುವದು. ತಂದೆ ಇಲ್ಲದ ಅಣ್ಣತಮ್ಮಂದರೇ ಆಗಲಿ ಅಥವಾ ಅವರೂ ಅವರ ಮಕ್ಕಳೂ ಆಗಲಿ ಇದ್ದರೆ ಅವರಲ್ಲಿ ಎಲ್ಲರಿಗೂ ಒಂದೇ ವಿಧವಾದ ಹಕ್ಕಿರುವದು. ಸಾಧಾರಣವಾಗಿ ಸಮುಷ್ಟಿಕುಟುಂಬಗಳಲ್ಲಿ ಯಾರು ದೊಡ್ಡವರೋ ಅವರೇ ಗೃಹಕೃತ್ಯಗಳನ್ನೆಲ್ಲಾ ನಡಿಸಲಿಕ್ಕೆ ಹಕ್ಕುಳ್ಳವರು. ಆದರೆ ಚಿಕ್ಕವರಲ್ಲಿ ಯಾರಾದರೂ ಬುದ್ಧಿವಂತನಾಗಿದ್ದು ಜೇಷ್ಟನು ಕೈಲಾಗದವನಾಗಿದ್ದರೆ ಚಿಕ್ಕವನೇ ಗೃಹಕೃತ್ಯಗಳನ್ನು ನಡಿಸುತ್ತಾನೆ, ತಂದೆಯಾದವನು ಯಜಮಾನನಾಗಿದ್ದಾಗ ಅತನಿಗೆ ಕೆಲವು ವಿಷಯಗಳಲ್ಲಿ ಇತರರು ಯಜಮಾನರಾಗಿರುವಾಗ ಅವರಿಗಿರುವದಕ್ಕಿಂತ ಹೆಚ್ಚಾದ ಸ್ವಾತಂತ್ರ್ಯವಿರುವದು ಕುಟುಂಬಕ್ಕೆ ಸೇರಿದವರಿಗೆ ಬೇಕಾಗುವ ಅನ್ನ ಬಟ್ಟೆಗಳ ಖರ್ಚು ಹೆಣ್ಣು ಗಂಡು ಮಕ್ಕಳುಗಳಿಗೆ ವಿದ್ಯಾಭ್ಯಾಸ ಮುಂತಾದ ಕೆಲಸಗಳನ್ನು ಮಾಡಿಸಲಿಕ್ಕೆ ಬೇಕಾದ ಖರ್ಚು ಮನೆಯಲ್ಲಿ ನಡೆಯ ಬೇಕಾದ ಖರ್ಚು, ಇವೆಲ್ಲವೂ ಅವಶ್ಯಕಗಳಾದ ಖರ್ಚುಗಳು ಇವಕ್ಕೆ ಬೇಕಾಗಿದ್ದ ಪಕ್ಷದಲ್ಲಿ ಕುಟುಂಬದ ಸೊತ್ತನ್ನು ಖರ್ಚುಮಾಡಿದರೆ ತಪ್ಪಲ್ಲ ಕುಟುಂಬಕ್ಕೆ ಲಾಭ ಉಂಟಾಗಬೇಕೆಂದು ವ್ಯಾಪಾರ ಮುಂತಾದ ಇತರ ಕಾರ್ಯಗಳಲ್ಲಿ ಕುಟುಂಬದ ಸೊತ್ತನ್ನು ನ್ಯಾಯವಾಗಿ ಖರ್ಚುಮಾಡಿ ಅದರಿಂದ ನಷ್ಟಬಂದಾಗ್ಯೂ ಗೃಹಕೃತ್ಯಕ್ಕೆ ಕರ್ತನಾದವನು ತಾನು ಮಾತ್ರವೇ ಆ ನಷ್ಟಕ್ಕೆ ಜವಾಬ್ದಾರನಾಗುವದಿಲ್ಲ. ಕುಟುಂಬದ ಸೊತ್ತೆಲ್ಲವೂ ಜವಾಬ್ದಾರಿಯಾಗಿರುವುದು. ಕುಟುಂಬಕ್ಕೆ ಅವಶ್ಯಕವಲ್ಲದ ಖರ್ಚುಗಳನ್ನು ಅಜಾಗರೂಕತೆ ಉದಾಶೀನತ್ವಗಳಿಂದಾಗಲಿ ಮೋಸಗೊಳಿಸುವ ಚಿಂತೆಯಿಂದಾಗಲಿ ಯಾರಾದರೂ ಮಾಡಿದರೆ ಅದರಿಂದುಂಟಾಗುವ ನಷ್ಟಕ್ಕೆ ಖ

ಖರ್ಚುಮಾಡುವವನು ಮಾತ್ರ ಜವಾಬ್ದಾರನಾಗುವನೇ ಹೊರತು ಆ ಕುಟುಂಬದ ಇತರರೂ ಅವನ ಆಸ್ತಿಯೂ ಅದಕ್ಕೆ ಗುರಿಯಾಗುವುದಿಲ್ಲ. ಬೊಂಬೈ ಲಾ॥ ರಿ॥ ೨೭ ಮತ್ತು ಮದ್ರಾಸ್ ಶಿವಿಲ್ ಡೈಜೆಸ್ಟ್ ೧೨೭, ೧೯೦೦.

ಪಿತ್ರಾರ್ಜಿತ— ತಂದೆ ತಾತ ಮುತ್ತಾತ ಇವರುಗಳ ಸೊತ್ತು ಮಗನಿಗೆ ಬಂದರೆ ಅದೂ, ಅದರಿಂದ ಸಹಜವಾಗಿ ವೃದ್ಧಿಯಾಗುವದೂ ಪಿತ್ರಾರ್ಜಿತವೆನಿಸಿಕೊಳ್ಳುವದು. ವೃದ್ಧಿಯೆಂದರೆ ಜಮೀನಿನ ಹುಟ್ಟುವಳಿ, ಹಣದ ಬಡ್ಡಿ, ಇವೂ- ಇವನ್ನು ಕೂಡ ಹಾಕಿಸಿ ಬೇರೇ ಆಸ್ತಿಯನ್ನುಂಟುಮಾಡಿಕೊಂಡರೆ, ಅದೂ- ಪಿತ್ರಾರ್ಜಿತದ ಸೊತ್ತಿನಿಂದ ವ್ಯಾಪಾರ ಮುಂತಾದುದನು ಮಾಡಿ ಸಂಪಾದಿಸಿದ ಲಾಭವೂ- ಪಿತ್ರಾರ್ಜಿತವನ್ನು ಖರ್ಚುಮಾಡಿ ವಿಶೇಷ ವಿದ್ಯೆಗಳನ್ನು ಕಲಿತು ಅದರಿಂದ ಪಡೆದುಕೊಂಡ ಸಂಪಾದನೆಯೂ ಇವೆಲ್ಲಕ್ಕೂ ಅನ್ವಯಿಸುವದು. ಸ್ವಾರ್ಜಿತ- ಅವಿಭಕ್ತ ಕುಟುಂಬಕ್ಕೆ ಸೇರಿದವನ್ನು ಬೇರೇವಿಧವಾಗಿ ಸ್ವತಂತ್ರಿಸಿ ಆಸ್ತಿಯನ್ನು ಪಡೆದುಕೊಂಡರೆ, ಅದು ಸ್ವಾರ್ಜಿತವೆನಿಸಿಕೊಳ್ಳುವದು. ವಾರಸು ಹಕ್ಕಿನಿಂದ ಅಣ್ಣತಮ್ಮಂದರ ಮತ್ತು ಇತರ ಜ್ಞಾತಿಗಳ ಸೊತ್ತೂ, ಮಾತೃವರ್ಗದವರ ಸೊತ್ತೂ, ಒಬ್ಬನಿಗೆ ಸೇರಿದರೆ ಅವು ಅವನ ಸ್ವಾರ್ಜಿತಗಳೆನ್ನಿಸಿಕೊಳ್ಳುವವು. ಒಬ್ಬನ ಮದುವೆಯಲ್ಲಿ ಅವನ ಕುಟುಂಬದವರಿಗೆ ಎಷ್ಟು ಖರ್ಚಾಗಿದ್ದಾಗ್ಯೂ, ಅಳಿಯನಾದ ಅವನಿಗೆ ಆತ್ಮಬಾಂಧವರು ಕೊಟ್ಟ ಪದಾರ್ಥಗಳು ಅವನ ಸ್ವಾರ್ಜಿತವೇ ಹೊರತು. ಅವನ ಕುಟುಂಬಕ್ಕೆ ಸಾಮಾನ್ಯವಾದದ್ದಾಗಿ ಸೇರುವದಿಲ್ಲ. ಪಿತ್ರಾರ್ಜಿತದ ಸಹಾಯವಿಲ್ಲದೆ ತಾನೇ ಬೇರೆ ಸಂಪಾದಿಸಿಕೊಂಡರೆ ಅದೂ ಸ್ವಾರ್ಜಿತವೇ. ಈ ಸೊತ್ತನ್ನು ಸಂಪಾದಿಸಿಕೊಳ್ಳುವಾಗ ಇತರರಂತೆ ತಾನೂ ಕುಟುಂಬದ ಆಸ್ತಿಯಿಂದ ಅನ್ನ ಬಟ್ಟೆಯನ್ನು ಪಡೆಯುತ್ತಿದ್ದರೂ ಸಾಧಾರಣವಾಗಿ ಎಲ್ಲರಂತೆ ವಿದ್ಯೆಯನ್ನು ಕಲಿತುಕೊಳ್ಳುತಿದ್ದರೂ ತನ್ನ ಸ್ವಾರ್ಜಿತವೆಂಬುದು ಪಿತ್ರಾಜಿತವಾಗಲಾರದು. ಸಾಧಾರಣವಾದ ವಿದ್ಯಾಭ್ಯಾಸಕ್ಕೆ ಬೇಕಾದ ಸಹಾಯವನ್ನು ಕುಟುಂಬದ ಆಸ್ತಿಯಿಂದ ಪಡೆದು "ಲಾ" ಎಂಬ ಧರ್ಮಶಾಸ್ತ್ರದ ಜ್ಞಾನವೇ ಮುಂತಾದ ವಿಷಯಗಳನ್ನು ತನ್ನ ಸ್ವಂತ ಸಾಹಸದಿಂದ ಪಡೆದ ಮನುಷ್ಯನು ಜಡ್ಜೀಕೆಲಸಮಾಡಿ ಸಂಪಾದಿಸಿದ ಆಸ್ತಿಯು ಆತನ ಸ್ವಾರ್ಜಿತವೆಂದು ಮುಂಬಯಿ ಹೈಕೋಟಿನಲ್ಲಿ ಫೈಸಲಾಗಿದೆ. ಮದ್ರಾಸು ಫೈಸಲಿನಪ್ರಕಾರ ವಕೀಲನು ಸಂಪಾದಿಸಿದ ಸೊತ್ತು ಕುಟುಂಬದ ಆಸ್ತಿಯ ಸಹಾಯದಿಂದ ಬಂದುದಲ್ಲವೆಂದು ಸ್ಪಷ್ಟವಾಗಿ ದೃಷ್ಟಾಂತವಾದಹೊರತು, ಅದನ್ನು ಪಿತ್ರಾರ್ಜಿತವೆಂದೇ ಭಾವಿಸಬೇಕು ಸೂಳೆಯರಲ್ಲಿ ಮಗಳು ನಾಟ್ಯವೇ ಮುಂತಾದ ವಿದ್ಯೆಗಳನ್ನು ತಾಯಿಯ ಖರ್ಚಿನಿಂದ ಕಲಿತುಕೊಂಡಿದ್ದರೆ, ಅವಳು ಆ ವಿದ್ಯಾಬಲದಿಂದ

ಸಂಪಾದಿಸುವದೆಲ್ಲಾ ಕುಟುಂಬದ ಸೊತ್ತಾಗುವದು; ತಾಯಿಗೂ ಅದರಲ್ಲಿ ಹಕ್ಕುಂಟು. ಆದರೆ ಅವಳು ಬರೀ ಸೂಳೆಗಾರಿಕೆಯಿಂದ ಸಂಪಾದಿಸಿಕೊಂಡ ಆಸ್ತಿಯು ತಾಯಿಗೆ ಬರಲಾರದು. ನಮ್ಮ ಜನಗಳಲ್ಲಿ ತಂದೆ ಮಕ್ಕಳು ಅಣ್ಣತಮ್ಮಂದಿರು ಮುಂತಾದವರು ಒಟ್ಟಿಗಿರುವದೇ ಸಾಧಾರಣವಾದ ಪದ್ಧತಿಯಾದುದರಿಂದ, ಬೇರೆಯಾಗಿರುವದಾಗಿ ಯಾರು ತಮ್ಮ ಪಕ್ಷವನ್ನು ಸಾಧಿಸಲು ವಾದಿಸುತ್ತಾರೆಯೊ, ಅವರೇ ಆ ಸಂಗತಿಯನ್ನು ರುಜುವಾತುಮಾಡಿ ಸ್ಥಾಪಿಸಿಕೊಡಬೇಕು. ಅದೇಮೇರೆಗೆ ಒಟ್ಟಿಗಿರುವವರಲ್ಲೊಬ್ಬನು ಯಾವದಾದರೂ ಆಸ್ತಿಯು ತನ್ನ ಸ್ವಾರ್ಜಿತವೆಂದು ಸ್ಥಾಪಿಸಲು ಸರಿಯಾದ ರುಜುವಾತನ್ನು ಕೊಡದಿದ್ದರೆ ಅದೂ ಪಿತ್ರಾರ್ಜಿತವೇ ಎಂದು ಕೋರ್ಟುಗಳಲ್ಲಿ ಭಾವಿಸಲ್ಪಡುವದು. ಸಮಷ್ಟಿ ಕುಟುಂಬದಲ್ಲಿ ಒಟ್ಟಿಗಿರುವವರೆಲ್ಲರಿಗೂ ಸೊತ್ತಿಗೆ ಬಾಧ್ಯತೆ ಇರುವದಿಲ್ಲ. ಹೆಂಗಸಿಗೆ ಜೀವನಾಂಶದ ಹಕ್ಕುಮಾತ್ರ ಇರುವದು. ಸೊತ್ತಿನ ಬಾಧ್ಯತೆಯನ್ನು ನಿರ್ಧರಿಸಲು, ಧರ್ಮಶಾಸ್ತ್ರದರೀತ್ಯಾ ಗಂಡು ಸಂತಾನದ ಮೇಲೆಯೇ ನೋಡತಕ್ಕದ್ದು. ಆದರೆ ಅಳಿಯ ಸಂತಾನಕ್ಕೆ ಪಿತ್ರಾರ್ಜಿತದ ಹಕ್ಕಿರುವ ದೇಶಗಳಲ್ಲಿ ಹೆಣ್ಣುಸಂತಾನದ ಮೇಲೆ ನೋಡಬೇಕು. ಗಂಡುಸಂತಾನಕ್ಕೆ ಪಿತ್ರಾರ್ಜಿತದ ಆಸ್ತಿ ಹಕ್ಕಿರುವ ಮೈಸೂರು ಬೊಂಬೈ ಮುಂತಾದ ದೇಶೀಯರ ಕುಟುಂಬದಲ್ಲಿ ಜೀವಂತರಾಗಿರುವವರಲ್ಲಿ ಯಾರಿಗಾದರೂ ಮಗ, ಮಮ್ಮಗ, ಮರಿಮಗ ಆದವರಿಗೆಮಾತ್ರ ಬಾಧ್ಯತೆ ಇರುವದು. ಮೂಲಪುರುಷನು ಬದುಕಿರುವಾಗ ಅವನ ಮರಿಮಗನ ಮಗನಿಗೆ ಸೊತ್ತಿನಲ್ಲಿ ಯಾವ ಬಾಧ್ಯತೆಯೂ ಇರುವದಿಲ್ಲ. ಸಮಷ್ಟಿಕುಟುಂಬದ ಆಸ್ತಿಯಲ್ಲಿ ಯಾರುಯಾರಿಗೆ ಬಾಧ್ಯತೆಯುಂಟಾಗಿರುವದೋ ಅವರೆಲ್ಲರೂ ಆ ಕುಟುಂಬದ ಭಾಗಹಾರಿಗಳೆನ್ನಿಸಿಕೊಳ್ಳುವರು. ಇದನ್ನು ಕೆಳಗೆ ಉದಾಹರಣೆಯಮೂಲಕ ವಿಶದಪಡಿಸಿದೆ.



ಈ ವಂಶವೃಕ್ಷದಲ್ಲಿ ಹೇಳಿರುವವರೆಲ್ಲರೂ ಜೀವಂತರಾಗಿ ಒಟ್ಟಿಗೆ ಇರುವಾಗ ಗೋವಿಂದನೆಂಬುವನಿಗೆ ಆತನ ಮಕ್ಕಳು, ಮಮ್ಮಕ್ಕಳು, ಮರಿಮ

ಕ್ಕಳು ಇವರೆಲ್ಲರೂ ಮೂರುತಲೆ ಕಳೆದವರಾದುದರಿಂದ ಆ ಸಮುಷ್ಟಿಕುಟುಂಬದಲ್ಲಿ ಭಾಗಹಾರಿಗಳಾಗುವರು. ಮರಿಮುಗನ ಮಗನಾದ ಮಧು ಮೂಲಪುರುಷನಾದ ಗೋವಿಂದನಿಂದ ಮೂರುತಲೆ ಕಳೆದವನಾದುದರಿಂದ, ಅವನಿಗೆ ಸೊತ್ತಿನಲ್ಲಿ ಭಾಗಕ್ಕೇನೂ ಬಾಧ್ಯತೆಯುಂಟಾಗುವದಿಲ್ಲ. ಆದರೆ ಗೋವಿಂದ ಸತ್ತಮೇಲೆ ಅವನ ಆಸ್ತಿಗೆ ಹಕ್ಕುಳ್ಳ ಮತ್ತು ತನ್ನ ಮೂಲ ಪುರುಷನಾದ ಕೃಷ್ಣನಿಗೆ ಈ ಮಧು ಮೂರುತಲೆ ಕಳೆದ ದಾಯಾದನಲ್ಲವಾದುದರಿಂದ ಇವನಿಗೂ ತಕ್ಕಷ್ಟು ಸೊತ್ತಿನಲ್ಲಿ ಭಾಗಕ್ಕೆ ಹಕ್ಕು ಉಂಟಾಗುವದು.

ಸಮುಷ್ಟಿ ಕುಟುಂಬವು ಮೇಲೆ ಹೇಳಿದ ಸ್ಥಿತಿಯಲ್ಲಿರುವಾಗ ಅದರ ಭಾಗಹಾರಿಗಳಲ್ಲಿ ಯಾರಾದರೂ ಸತ್ತುಹೋದರೆ ಅವರ ಹಕ್ಕು ಪ್ರತ್ಯೇಕವಾಗಿ ಉಳಿಯುವದಿಲ್ಲ. ಹ್ಯಾಗೆಂದರೆ ಒಟ್ಟಿಗಿದ್ದ ಇಬ್ಬರು ಅಣ್ಣತಮ್ಮಂದರಲ್ಲಿ ಒಬ್ಬ ಸತ್ತು ಸತ್ತವನಿಗೆ ಮಗನಿದ್ದರೆ ಅವನಿಗೆ ಸ್ವಂತವಾಗಿ ಆಸ್ತಿ ಹಕ್ಕು ತನ್ನ ತಂದೆ ಇದ್ದಾಗಲೂ ಇದ್ದುದರಿಂದ ಈಗ ತಂದೆಯ ಸ್ಥಾನದಲ್ಲಿ ತಾನು ನಿಲ್ಲುವನು, ಸತ್ತವನಿಗೆ ಮಗನಿಲ್ಲದಿದ್ದರೆ ಅವನು ಮೃತಪಟ್ಟಾಗ ಅವನಿಗೆ ಕುಟುಂಬದ ಆಸ್ತಿಯು ಯಾವ ಭಾಗಕ್ಕೂ ಸ್ವತಂತ್ರವಾದ ಪರಿಪೂರ್ಣ ಬಾದ್ಯತೆಯು ಉಂಟಾಗಿರಲಿಲ್ಲವಾಗಿ ಅವನ ತಮ್ಮನಿಗೇ ಆಸ್ತಿಯೆಲ್ಲಾ ಸೇರಿಹೋಗುವದು. ಆ ಮೃತಿಹೊಂದಿದವನ ಹೆಂಡತಿಗಾಗಲಿ ಮಗಳಿಗಾಗಲಿ ಅಣ್ಣತಮ್ಮಂದರಿಗೆ ಭಾಗವಾದ ಮೇಲೆ ಅವನು ಸತ್ತಿದ್ದರೆ ಅವನ ಪಾಲು ಹ್ಯಾಗೆ ಸೇರಬೇಕಾಗುವದೋ ಹಾಗ ಈಗ ಸೇರುವುದಿಲ್ಲ.

ಸ್ವಾರ್ಜಿತ—ತಂದೆಯು ಬಡವನಾಗಿದ್ದು ಯಾವದೊಂದು ಪಿತ್ರಾರ್ಜಿತ ಸೊತ್ತಿನ ಆಧಾರವಿಲ್ಲದೆ ಮಕ್ಕಳು ಭಿಕ್ಷಾನ್ನ ವಾರ ಯಾಚನೆ ಮುಂತಾದವುಗಳಿಂದ ಜೀವನೋಪಾಯವನ್ನು ಕಲ್ಪಿಸಿಕೊಂಡು ವಿದ್ಯಾಕಲಿತು ದ್ರವ್ಯಸಂಪಾದನೆ ಮಾಡಿದ ಸ್ವತ್ತು ಸ್ವಾರ್ಜಿತವಾಗುವದು. ಮತ್ತು ಪಿತರಾರ್ಜಿತದ ಸ್ವತ್ತಿನ ಸಹಾಯವಿಲ್ಲದೆ ಮಕ್ಕಳು ದೇಶಾಂತರಗಳಿಗೆ ಹೋಗಿ ಸಂಗೀತ, ವೈದ್ಯ ಮುಂತಾದ ವಿದ್ಯೆಗಳನ್ನು ಕಲಿತು ಪ್ರವೀಣರಾಗಿ ಸಂಪಾದಿಸಿದ ಸ್ವತ್ತು ಸ್ವಾರ್ಜಿತವಾಗುವದು. ಅಥವಾ ತಂದೆಯು ದರಿದ್ರನಾಗಿದ್ದು ಮಕ್ಕಳಿಗೆ ಅನ್ನಾಹಾರಗಳನ್ನು ಕೊಡಲು ಶಕ್ತಿಯಿಲ್ಲದೆ ಮಕ್ಕಳು ಅಂಗಡಿ ಮುಂತಾದವುಗಳಲ್ಲಿ ಸಂಬಳಕ್ಕೆ ನಿಂತುಕೊಂಡು ಕ್ರಮೇಣ ದ್ರವ್ಯ ಸಂಪಾದನೆ ಮಾಡಿ ದೊಡ್ಡ ದೊಡ್ಡ ಕಾರ್ಖಾನೆಗಳನ್ನಿಟ್ಟು ಲಕ್ಷಾಂತರ ದ್ರವ್ಯವನ್ನು ಸಂಪಾದನೆ ಮಾಡಿದ ಸ್ವತ್ತು ಸ್ವಾರ್ಜಿತವೆನ್ನಿಸಿ ಕೊಳ್ಳುವದು. ಹೀಗೆ ಸ್ವಾರ್ಜಿತವನ್ನು ಪಿತ್ರಾರ್ಜಿತವನ್ನು ವಿಂಗಡಿಸಿದರೆ ಹಿಂದೂ ಲಾರೀತ್ಯಾ ಬಹಳ ಕದನಗಳು ಹುಟ್ಟುವವು. ಇದಕ್ಕೆ ದೃಷ್ಟಾಂತವಾಗಿ ಮದ

ರಾಸ್ ಜಿಲ್ಲಾ ಲ್ಲಿ ಒಬ್ಬ ಬ್ರಾಹ್ಮಣನ ಮಗನು ಮದರಾಸಿನಲ್ಲಿ ಭಿಕ್ಷಾನ್ನವನ್ನೆತ್ತಿಕೊಂಡು ಬಿ. ಎ. ಬಿ. ಎಲ್., ಎಂ. ಎ. ಎಂ. ಎಲ್., ವರಿಗೂ ವಿದ್ಯಾಭ್ಯಾಸಮಾಡಿ ಲಾಯರಾಗಿ ಅನೇಕ ಸಹಸ್ರ ರೂಪಾಯಿಗಳ ಸ್ವತ್ತನ್ನು ಸಂಪಾದಿಸಿದ್ದನು ಇವನಿಗೆ ಅಕಾಲ ಮರಣವು ಪ್ರಾಪ್ತವಾಗಲು ಇವನ ಅಣ್ಣತಮ್ಮಂದರು ಸತ್ತವನ ಹೆಂಡತಿಯನ್ನು ಮನೆಯಿಂದಾಚೆಗೆ ತಳ್ಳಿ ಮನೆಗೆ ಬೀಗಗಳನ್ನು ಭದ್ರಮಾಡಿದರು. ಹೆಂಡತಿಯ ಅವಸ್ಥೆಯನ್ನು ನೋಡಲಾರದೆ ಕೆಲವರು ದೇಶೋಪಚಾರಿಗಳು ಸೇರಿ ಈ ವಿಷಯವನ್ನು ಕೋರ್ಟಿಗೆ ತಿಳಿಸಲು ವಿದ್ವಾಂಸರಾದ ಜಡ್ಜಿಗಳು (ನ್ಯಾಯಾಧಿಪತಿಗಳು) ಶೇಲ್ಫ್ ಸೆಲ್ಫ್ ಗೆಯಿನಿಂಗ್ ಬಿಲ್ (ಸ್ವಾರ್ಜಿತ ಸಂಪಾದನೆಯ ವಿಧಿ) ಎಂಬುವ ಆಕ್ಟನ್ನು ಮಾಡಿ ಸದರಿ ಮನೆಗೆ ಹಾಗಿದ್ದ ಬೀಗಗಳನ್ನು ತೆಗಿಸಿ ಸ್ವತ್ತನ್ನೆಲ್ಲಾಹೆಂಡತಿಯ ಸ್ವಾಧೀನಮಾಡಿದರು.

ವಿಭಾಗ— ಸಮುಷ್ಟಿಯಲ್ಲಿರುವಂಥವರಿಗೆ ಪರಸ್ಪರ ಸರಿಬೀಳದೆ ಹೋಗಿ ಅವರು ಆಸ್ತಿಯನ್ನು ಪಾಲುಮಾಡಿಕೊಳ್ಳುವದರಿಂದ, ಕುಟುಂಬದ ಸಮುಷ್ಟಿ ದೆಸೆಯನ್ನು ತಪ್ಪಿಸಿಬಿಡುವರು. ಪಿತ್ರಾರ್ಜಿತವಾದ ಸೊತ್ತು ಪಾಲಾಗತಕ್ಕದ್ದೇಹೊರತು, ಸ್ವಾರ್ಜಿತವು ಯಾರಸಂಪಾದನೆಯೋ ಅವರಿಗಲ್ಲದೆ ಇತರರಿಗೆ ಸೇರುವದಿಲ್ಲ ಒಬ್ಬನ ಸ್ವಾರ್ಜಿತವಾದ ಸೊತ್ತನ್ನುಅವನಮಕ್ಕಳು ಹೊಂದಿದಾಗ ಅವರಿಗೆ ಅದೂ ಪಿತ್ರಾರ್ಜಿತವೇ ಆಗುವದು. ಪಿತ್ರಾರ್ಜಿತವಾದ ಆಸ್ತಿಯಲ್ಲಿ ಅಣ್ಣತಮ್ಮಂದರಿಗೆ ಸಮಭಾಗವೆಂಬುವದು ಸಾಧಾರಣವಾಗಿ ತಿಳಿದೇ ಇದೆ. ಚರಸ್ಥಿರಗಳೆಂಬ ಎರಡು ವಿಧವಾದ ಸೊತ್ತಿನಲ್ಲಿಯೂ ಹೀಗೆಯೇ ಸಹೋದರರಿಗೆ ಸಮಭಾಗವು. ತಂದೆಯು ಜೀವಂತನಾಗಿರುವಾಗ, ಆತನಿಗೆ ಮಗನಿಗೆ ಬಂದಂತೆ ತನಗೂ ಸಮಭಾಗವೇಹೊರತು ಹೆಚ್ಚಿಲ್ಲ. ಅಂಣತಮ್ಮಂದರ ಮಕ್ಕಳಿಗೆ ಅವರವರ ತಂದೆಗಳ ಭಾಗವು ಬರುವದು. ಹ್ಯಾಗಂದರೆ —

ಮೇಲೆ ಬರೆದಿರುವ ವಂಶವೃಕ್ಷದ ನಾರಾಯಣ ಕೃಷ್ಣರೆಂಬಿಬ್ಬರು ಅಣ್ಣತಮ್ಮಂದಿರಲ್ಲಿ, ನಾರಾಯಣನಿಗೆ ಮಾಧವ ಪದ್ಮನಾಭರೆಂಬ ಇಬ್ಬರು ಮಕ್ಕಳಿದ್ದರು ಕೃಷ್ಣನಿಗೆ ಒಬ್ಬ ಮಮ್ಮಗ ಸುಂದರ ಮಾತ್ರವೇಯಿದ್ದಾನೆ. ನಾರಾಯಣ ಕೃಷ್ಣರಿಬ್ಬರೂ ಸತ್ತುಹೋಗಿದಾರೆ; ನಾರಾಯಣನ ಮಗ ಪದ್ಮನಾಭನೂ ಸತ್ತಿದಾನೆ; ಅವನಿಗೆ ಇಬ್ಬರು ಮಕ್ಕಳು ಜನಾರ್ಧನ, ವಿಷ್ಣು ಬದುಕಿದಾರೆ. ಸಮುಷ್ಟಿಯಲ್ಲಿ ಈ ಕುಟುಂಬದವರು ವಿಭಾಗಮಾಡಿಕೊಳ್ಳುವದಾದರೆ ಸುಂದರನಿಗೆ ಕುಟುಂಬದ ಒಟ್ಟು ಆಸ್ತಿಯಲ್ಲಿ ಕೃಷ್ಣನ ಅರ್ಧಭಾಗವೂ ಪೂರಾಬರುವದು. ನಾರಾಯಣನ ಅರ್ಧಭಾಗಕ್ಕೆ ಸಮವಾದ ಹಕ್ಕುಳ್ಳ ಮಾಧವ ಪದ್ಮನಾಭರೆಂಬ ಇಬ್ಬರು ಮಕ್ಕಳಿದ್ದುದ್ದರಿಂದ

ಮಾಧವನಿಗೆ ಅದರಲ್ಲಿ ಅರ್ಧ ಅಂದರೆ— ಒಟ್ಟು ಆಸ್ತಿಯಲ್ಲಿ ಕಾಲುಪಾಲು ಸಲ್ಲುವದು. ಉಳಿದ ಕಾಲುಪಾಲು ಎರಡು ಭಾಗವಾಗಿ, ವಿಷ್ಣು ಜನಾರ್ದನರೊಬ್ಬೊಬ್ಬರಿಗೆ ಹಿಂದೊಂದು ಭಾಗ ಸೇರುವದು.

ಅವಿಭಕ್ತರೆಲ್ಲರಿಗೂ ಮೂಲಪುರುಷನಾದವನಿಂದ ಮೂರುತಲೆ ಕಳೆದವರಿಗೆ ಆಸ್ತಿಯ ಹಕ್ಕೇನೂ ಇರುವದಿಲ್ಲ. ಮೂರುತಲೆ ಎಂದರೆ ಮೂಲಪುರುಷನನ್ನೂ, ಭಾಗವನ್ನಪೇಕ್ಷಿಸುವವನನ್ನೂ ಬಿಟ್ಟು ನಡುವೆ ಮೂರುತಲೆಯೆಂದು ತಿಳಿಯತಕ್ಕದ್ದು. ಹ್ಯಾಗಂದರೆ,—

ಮೇಲೆ ಬರೆದಿರುವ ವಂಶವೃಕ್ಷದಲ್ಲಿ ಕೃಷ್ಣ, ಕೇಶವ, ಸುಂದರ ಮುವ್ವರೂ ಸತ್ತತರುವಾಯ, ಗೋವಿಂದನು ಬದುಕಿದ್ದರೆ ಮಾಧೂಗೆ ಅಸ್ತಿಯ ಹಕ್ಕೇ ತಪ್ಪಿಹೋಗುವದು. ತರುವಾಯ ಗೋವಿಂದನು ಸತ್ತರೆ ಆಸ್ತಿಯೆಲ್ಲಾ ನಾರಾಯಣನ ಸಂತತಿಯವರಿಗೇ ಸೇರುವದು. ಆದರೆ ಗೋವಿಂದನು ಸಾಯುವಾಗ ಕೃಷ್ಣ, ಕೇಶವ, ಸುಂದರ ಇವರಲ್ಲಿ ಯಾರಿದ್ದಾಗ್ಯೂ ಅವನಿಗೆ ಗೋವಿಂದನ ಆಸ್ತಿಗೆ ಹಕ್ಕು ಉಂಟಾಗಿ ಅವನ ಮುಖಾಂತರವಾಗಿ ಅವನಿಂದ ಮೂರುತಲೆ ಕಳೆಯದ ಮಧುಸೂದನನಿಗೂ ಕುಟುಂಬದ ಸೊತ್ತಿಗ ಬಾಧ್ಯತೆಯುಂಟಾಗುವದು. ತರುವಾಯ ಹೀಗೆ ಗೋವಿಂದನಿಗೂ ಮಧುಸೂದನನಿಗೂ ಮಧ್ಯದಲ್ಲಿ ವಂಶಪರಂಪರೆಯಲ್ಲಿರುವವನು ಕುಟುಂಬದ ವಿಭಾಗಕ್ಕೆ ಮುಂಚೆಯೇ ಸತ್ತಾಗ್ಯೂ ಮಧುಸೂದನನಿಗೆ ಗೋವಿಂದನ ಆಸ್ತಿಯಲ್ಲಿ ಅರ್ಧಪಾಲು ಬರುವದು ತಪ್ಪುವದಿಲ್ಲ.

ಜಮೀನ್ದಾರಿಗಳು — ಕೆಲವು ರಾಜ್ಯಗಳಂತೆ ಭಾವಿಸಿ, ಯಾವಾಗಲೂ ಪಾಲಾಗಕೂಡದೆಂಬ ಆಚಾರವಿದ್ದು ಜೇಷ್ಠಸಂತತಿಯಲ್ಲಿಯೇ ಇರುತ್ತವೆ. ಅಂಥಾವನ್ನು ಪಾಲುಮಾಡುವದಿಲ್ಲ, ಪೂರ್ವದಲ್ಲಿ ಪಾಲಾಗುವಕಾಲದಲ್ಲಿ ತಾಯಿ, ಅಜ್ಜಿ ಮುಂತಾದವರಿಗೆ ಭಾಗವನ್ನು ಕೊಡುತ್ತಿದ್ದರು. ಈಗ ದಕ್ಷಿಣಶೀಮೆಯಲ್ಲಿ ಆ ಅಭ್ಯಾಸವು ತಪ್ಪಿಹೋಯಿತು. ಶೂದ್ರರಲ್ಲಿ ಇಟ್ಟುಕೊಂಡ ಹೆಂಗಸಿನಿಂದ ಹುಟ್ಟಿದ ಗಂಡುಮಕ್ಕಳಿಗೆ ತಂದೆಯು ತಾನು ಇರುವಾಗಲೇ ಪಾಲುಮಾಡಿಕೊಟ್ಟರೆ, ಅವನ ಇಷ್ಟಬಂದಂತೆ ಮದುವೆಯಾದ ಹೆಂಡತಿಯ ಮಕ್ಕಳಿಗೆ ಕೊಡುವಂತೆ ಸಮಭಾಗವನ್ನು ಇವರಿಗೂ ಕೊಡಬಹುದು. ಆದರೆ ಆತನು ಸತ್ತನಂತರ, ಮದುವೆಯಾದವಳ ಮಗನಿಗೆ ಬರತಕ್ಕದ್ದರಲ್ಲಿ ಅರ್ಧಭಾಗವು ಇಟ್ಟುಕೊಂಡವಳ ಮಗನಿಗೆ ಬರಬೇಕು.

ಕೆಲವು ಮನೆತನಗಳಲ್ಲಿ ಪತ್ನಿವಿಭಾಗ-ಅಂದರೆ ಪತ್ನಿಗಳ ಪ್ರಕಾರ ಆಸ್ತಿಯನ್ನು ಪಾಲುಮಾಡುವ ಪದ್ಧತಿಯುಂಟು. ಹ್ಯಾಗಂದರೆ:—

ಒಬ್ಬ ಮನುಷ್ಯನಿಗಿಬ್ಬರು ಹೆಂಡರಿದ್ದು ಒಬ್ಬಳಿಗಿಬ್ಬರು ಒಬ್ಬಳಿಗೆ ಮೂವ್ವರು ಮಕ್ಕಳಿದ್ದರೆ, ಸಾಧಾರಣ ನ್ಯಾಯಪ್ರಕಾರ ಆಸ್ತಿಯನ್ನು ಐದುಪಾಲುಮಾಡಿ, ಒಬ್ಬೊಬ್ಬ ಮಗನಿಗೆ ಒಂದೊಂದು ಪಾಲು ಕೊಡತಕ್ಕದ್ದು. ಈ ವಿಶೇಷ ಧರ್ಮವನ್ನವಲಂಬಿಸಿದರೆ, ಒಬ್ಬಳ ಮಕ್ಕಳಾದ ಇಬ್ಬರಿಗೆ ಆಸ್ತಿಯಲ್ಲಿ ಅರ್ಧವೂ, ಮತ್ತೊಬ್ಬಳ ಮಕ್ಕಳಾದ ಮೂವ್ವರಿಗೆ ಅರ್ಧವೂ ಕೊಡಬೇಕು. ಆದರೆ ಈ ಪದ್ಧತಿಯು ಬಹಳ ಅಪೂರ್ವ

ಆಸ್ತಿಯು ಭಾಗವು-ಯಾರ್ಯಾರಿಗೆ ಇದೆಯೋ, ಅವರೆಲ್ಲರೂ ತಮ್ಮ ಒಡಂಬಡಿಕೆಯಿಂದಲೇ ಇಷ್ಟಬಂದಾಗ ಪಾಲುಮಾಡಿಕೊಳ್ಳಬಹುದು. ಭಾಗಹಾರಿಗಳಲ್ಲಿ ಒಬ್ಬನು ಪ್ರೈನರ ಅಂದರೆ ಬಾಲನಾಗಿಯಾಗಲಿ ಅಥವಾ ದೇಶಾಂತರಗತನಾಗಿಯಾಗಲಿ ಇದ್ದಾಗ್ಯೂ, ಆತನ ಭಾಗವನ್ನು ನ್ಯಾಯವಾಗಿ ತೆಗೆದು ಭದ್ರವಾಗಿ ಇಡತಕ್ಕ ಏರ್ಪಾಡುಗಳನ್ನು ಮಾಡಿಕೊಂಡು, ಮಿಕ್ಕವರು ಭಾಗಮಾಡಿಕೊಳ್ಳಬಹುದು. ತಂದೆಯು ತನ್ನ ಮಕ್ಕಳು ಭಾಗಮಾಡಿಕೊಳ್ಳಬೇಕು; ಅಥವಾ ಕೂಡದು; ಎಂಬ ನಿರ್ಬಂಧವನ್ನು ಕಲ್ಪಿಸಿದ್ದರೆ, ಅದು ರದ್ದಾಗುವದು; ಇವರು ಬೇಕಾದಾಗ ಬೇರೆಯಾಗಬಹುದು. ಅನೇಕ ಭಾಗಹಾರಿಗಳಲ್ಲಿ ಒಬ್ಬನು ಬೇರೆಯಾದರೆ, ಇತರರೂ ಬೇರೆಯಾಗಬೇಕೆಂಬ ನಿರ್ಬಂಧವಿಲ್ಲ. ಆದರೆ, ತಂದೆಯು ತನ್ನ ಸ್ವಾರ್ಜಿತದ ವಿಷಯವಾಗಿ ನಿರ್ಬಂಧವನ್ನು ಉಂಟುಮಾಡಬಹುದು. ಪಾಲಾಗುವದರಲ್ಲಿ ಸ್ಥಿರಸ್ವತ್ತನ್ನೆಲ್ಲ ಬೇರೆಬೇರೇ ವಿಂಗಡಿಸದೆ ಒಟ್ಟಿಗೆ ಕೂಡಿಸಿ ಅದರ ಫಲವನ್ನು ಭಾಗಮಾಡಿಕೊಂಡು ಅನುಭವಿಸಿದರೂ ಸಾಕು. ಮುಖ್ಯವಾಗಿ ಭಾಗಹಾರಿಗಳಿಗೆ ಕುಟುಂಬದ ಸಮಷ್ಟಿಯನ್ನು ತಪ್ಪಿಸಬೇಕೆಂಬ ಉದ್ದೇಶವಿದ್ದು, ಅದರೊಡನೆ ಆಸ್ತಿಯ ಅನುಭೋಗವನ್ನು ಯಾವವಿಧದಲ್ಲಿಯಾದರೂ ಬೇರೆಬೇರೆ ಮಾಡಿಕೊಂಡರೆ ವಿಭಾಗವನ್ನು ಸ್ಥಾಪಿಸುವದಕ್ಕೆ ಸಾಕು. ಆ ಉದ್ದೇಶವಿಲ್ಲದೆ, ಇತರ ಕಾರಣಗಳಿಂದ ಒಬ್ಬೊಬ್ಬರು ಒಂದೊಂದು ಕಡೆ (ಸರಕಾರದ ಉದ್ಯೋಗವೇ ಮುಂತಾದ ಕಾರಣಗಳಿಂದ) ಇದ್ದರೆ ಹೀಗೆ ಒಬ್ಬರನ್ನೊಬ್ಬರು ಬಿಟ್ಟು ದೂರದಲ್ಲಿರುವದರಿಂದ ಅವರು ನ್ಯಾಯಪ್ರಕಾರ ವಿಭಕ್ತರಾಗುವದಿಲ್ಲ.

ವಿಭಾಗಕ್ಕೋಸ್ಕರ ದಾವಾ—ತಮ್ಮಲ್ಲಿ ತಾವು ಒಪ್ಪಿ ಭಾಗಮಾಡಿಕೊಳ್ಳುವದಾಗದಿದ್ದರೆ ಯಾರುಯಾರಿಗೆ ಭಾಗಕ್ಕೆ ಹಕ್ಕಿರುವದೋ ಅವರೆಲ್ಲರೂ ಕೋರ್ಟಿನಲ್ಲಿ ದಾವಾ ಮಾಡಬಹುದು, ಒಬ್ಬನೇ ದಾವಾ ಮಾಡಿದರೂ ಭಾಗಹಾರಿಗಳಾದ ಸರ್ವರನ್ನೂ ವ್ಯಾಜ್ಯಕ್ಕೆ ಸೇರಿಸಬೇಕು, ಅನೇಕರು ವಾದಿಗಳಾಗಿ ಇತರರ ಮೇಲೆ ದಾವಾ ತರಬಹುದು. ಅಥವಾ ಒಬ್ಬನೇ ದಾವ

ತಂದರೆ ಬಾಕಿಯುವರನ್ನೆಲ್ಲಾ ಪ್ರತಿವಾದಿಯ ಸ್ಥಾನಕ್ಕೆ ಸೇರಿಸಬೇಕು. ಇದಕ್ಕೆ ಸಾಧಾರಣವಾಗಿ ಕಾಲನಿರ್ಬಂಧವಿಲ್ಲ. ಆದರೆ ಯಾರನ್ನಾದರೂ ಅವನಿಗೆ ಪಾಲು ಕೊಡುವದಿಲ್ಲವೆಂದು ಸಮುದಾಯದ ಆಸ್ತಿಯಿಂದ ಹೊರ ಪಡಿಸಿದ್ದರೆ ಆ ಸಂಗತಿ ಈತನಿಗೆ ತಿಳಿದಾಗಿನಿಂದ ೧೨ ವರ್ಷದೊಳಗಾಗಿ ಇವನು ದಾವಾ ತರಬೇಕು.

ದಾವಾ ಮಾಡುವವನ ಸ್ವಾಧೀನವಲ್ಲಿರುವ ಪಿತ್ರಾರ್ಜಿತದ ಸ್ವತ್ತನ್ನೆಲ್ಲಾ ವಿವರಿಸಿ ಅದನ್ನೂ ಲೆಕ್ಕಕ್ಕೆ ಕಟ್ಟಿಕೊಂಡು ಭಾಗಮಾಡಿಸಿಕೊಳ್ಳುವದಕ್ಕೆ ಒಪ್ಪಬೇಕು. ಭಾಗಹಾರಿಗಳಲ್ಲಿ ಯಾರಾದರೂ ಸಮಷ್ಟಿಯಲ್ಲಿದ್ದ ಸೊತ್ತಿನಿಂದ ಹೆಚ್ಚಾಗಿ ಖರ್ಚುಮಾಡಿಕೊಂಡಿದಾರೆಂದು ಅವರಿಗೆ ಕ್ರಮವಾಗಿ ಬರತಕ್ಕ ಭಾಗವನ್ನು ಕಡಮೆಮಾಡಬೇಕೆಂದರೆ ಆಗುವತೆಲ್ಲ. ಆದರೆ ಹೀಗೆ ಹೆಚ್ಚು ಖರ್ಚನ್ನು ಮಾಡಿಕೊಳ್ಳುವಾಗ ಅದನ್ನು ತಾಸೇ ಪ್ರತ್ಯೇಕವಾಗಿ ವಹಿಸಿಕೊಳ್ಳುವದಾಗಿ ಒಪ್ಪಿಕೊಂಡಿದ್ದರೆ ಇವನಿಗೆ ಬರಬೇಕಾದ ಭಾಗದಲ್ಲಿ ಅದನ್ನು ವಜಾ ಮಾಡತಕ್ಕದ್ದು. ಮತ್ತು ಮೋಸಗಾರಿಕೆಯಿಂದ ಇತರರಿಗೆ ತಿಳಿಯದಂತೆ ಒಬ್ಬನು ಕುಟುಂಬದ ಆಸ್ತಿಯನ್ನು ಬಚ್ಚಿಟ್ಟುಕೊಂಡಿದ್ದರೆ ಅಥವಾ ಕರ್ಚುಮಾಡಿಕೊಂಡಿದ್ದರೆ ಅದನ್ನೂ ಆವನ ಭಾಗದಲ್ಲಿ ವಜಾಮಾಡಬೇಕು. ಹೀಗಲ್ಲದೆ ನ್ಯಾಯವಾಗಿ ಖರ್ಚಾದದ್ದು ಹೋಗಿ ಭಾಗವಾಗುವಾಗ ಎಷ್ಟು ಉಳಿದಿರುವದೋ ಅದನ್ನು ಭಾಗಮಾಡಿಕೊಳ್ಳಬೇಕು. ನ್ಯಾಯವಾಗಿ ಕೊಡತಕ್ಕ ಸಾಲಗಳನ್ನು ತೀರಿಸಲು ಬೇಕಾದದ್ದನ್ನೂ ಚಿಕ್ಕವರಿಗೆ ಮದುವೆಯಾಗದಿದ್ದರೆ ಅವರ ಮದುವೆಯ ಖರ್ಚುಗಳೇ ಮುಂತಾದ ಒಟ್ಟು ಕುಟುಂಬಕ್ಕೆ ಅಗತ್ಯವಾದ ಕಾರ್ಯಗಳ ಖರ್ಚುಗಳನ್ನೂ ಒಟ್ಟು ಆಸ್ತಿಯಲ್ಲಿ ತೆಗೆದಿಟ್ಟು ಮಿಕ್ಕದ್ದನ್ನು ಹಂಚಿಕೊಳ್ಳಬೇಕು.

ಅವಿಭಕ್ತನಾಗಿರುವವನ ಸಾಲಕ್ಕೆ ನ್ಯಾಯವಾಗಿ ಅವನಿಗೆ ಕುಟುಂಬದ ಆಸ್ತಿಯಲ್ಲಿರತಕ್ಕ ಹಕ್ಕು ಹರಾಜಾದಾಗ ಅಥವಾ ಅವನೇ ತನ್ನ ಹಕ್ಕನ್ನು ಇಷ್ಟಪಟ್ಟು ಮಾರಿದಾಗ ಅದನ್ನು ಕೊಂಡುಕೊಂಡವನು ಇತರ ಭಾಗಹಾರಿಗಳ ಮೇಲೆ ದಾವಾ ಮಾಡಿ ತಾನು ಕ್ರಯವಾಗಿ ಪಡೆದುಕೊಂಡಿರುವ ಭಾಗವನ್ನು ಬರಮಾಡಿಕೊಳ್ಳಬಹುದು.

ವಿಭಾಗದ ಫಲಗಳು—ಸಮಷ್ಟಿಯಲ್ಲಿರುವಾಗ ಕುಟುಂಬದಲ್ಲಿ ಯಾರು ಆಸ್ತಿಯಲ್ಲಿ ಇಂಥಾ ಭಾಗವೇ ತಮ್ಮದೆಂದು ಹೇಳುವದಕ್ಕೆಲ್ಲ. ಒಟ್ಟು ಆಸ್ತಿಗೆ ಎಲ್ಲರಿಗೂ ಸಮಾನವಾದ ಬಾಧ್ಯತೆ ಇರುವದು. ಪಾಲಾದ ನಂತರ ಒಬ್ಬರ ಪಾಲಿನ ಆಸ್ತಿಗೆ ಮತ್ತೊಬ್ಬರಿಗೆ ಸ್ವಲ್ಪ ಹಕ್ಕೂ ಇರುವದಿಲ್ಲ. ತಮ್ಮ ತಮ್ಮ ಪಾಲಿಗೆ ತಾವು ಸಂಪೂರ್ಣ ಸ್ವಾತಂತ್ರ್ಯವುಳ್ಳ ಅಧಿಕಾರವ

ನ್ನು ಹೊಂದುವರು. ಹೀಗೆ ಎಲ್ಲಾ ಆಸ್ತಿಯಮೇಲೂ ಇರತಕ್ಕ ಸ್ವಾತಂತ್ರ್ಯವಿಲ್ಲದ ಅಪೂರ್ಣವಾದ ಬಾಧ್ಯತೆಯನ್ನು ಬಿಟ್ಟು ಒಂದೊಂದು ಭಾಗದ ಮೇಲೆ ಸಂಪೂರ್ಣವಾದ ಬಾಧ್ಯತೆಯನ್ನು ಒಬ್ಬೊಬ್ಬರು ಪಡೆದುಕೊಂಡ ಹೊರತು ಸುಮ್ಮನೆ ಬೇರೇಬೇರೆ ಮನೆಗಳಲ್ಲಿ ವಾಸಮಾಡುವದೇ ಮುಂತಾದ ಇತರ ಕಾರಣಗಳಿಂದ ಪಾಲಾದಂತಾಗುವದಿಲ್ಲ. ಇಬ್ಬರು ಅಣ್ಣತಂಮುಂದಿರು ಪಾಲುಮಾಡಿಕೊಂಡರೆ ಒಬ್ಬರ ಹಂಗು ಒಬ್ಬರಿಗಿಲ್ಲದೆ ಬೇರೆಯಾಗುವರೇ ಹೊರತು ತಮತಮಗೆ ಗಂಡುಮಕ್ಕಳಿರುವದರಿಂದ ಪಿತ್ರಾರ್ಜಿತ ವಿಷಯವಾಗಿ ಇರುವ ನಿರ್ಬಂಧಗಳನ್ನು ಅವರು ತಪ್ಪಿಸಿಕೊಳ್ಳಲಾರರು.

ವಿಭಾಗಗಳನ್ನು ಮಾಡಿಕೊಳ್ಳುವಾಗ ಕುಟುಂಬದ ಸಕಲವಾದ ಆಸ್ತಿಯನ್ನೂ ವಿಭಾಗಿಸಿಕೊಳ್ಳದೆ ಕೆಲವನ್ನು ಸಮಷ್ಟಿಯಲ್ಲಿಯೇ ಅನುಭವಿಸುವಂತೆ ಭಾಗಹಾರಿಗಳು ಒಪ್ಪಿಕೊಳ್ಳಬಹುದು. ಇಂಥಾ ಏರ್ಪಾಡು ಅಪೂರ್ಣವಾದುದರಿಂದ ಪಾಲಾದ ತರುವಾಯ ಕೆಲವು ಸೊತ್ತು ಮಾತ್ರ ಸಮಷ್ಟಿಯಲ್ಲಿಯೇ ಇದೆ ಎಂದು ಯಾರಾದರೂ ಹೇಳುವದಾದರೆ ಹಾಗೆ ಹೇಳುವಂಥಾವನು ತಕ್ಕ ರುಜುವಾತಿನಿಂದ ಅದನ್ನು ಸಾಧಿಸಲು ಸಿದ್ಧನಾಗಿರಬೇಕು. ವಿಭಾಗಕ್ಕೋಸ್ಕರ ದಾವಾ ಮಾಡುವದರಲ್ಲಿ ಸರಿಯಾದ ಕಾರಣಗಳು ಅಂದರೆ—ಸ್ವತ್ತುಗಳು ಬೇರೇಬೇರೇ ಸ್ಥಳಗಳಲ್ಲಿರುವದರಿಂದ ಎಲ್ಲವುಗಳ ವಿಷಯದಲ್ಲಿಯೂ ಫೈಸಲ್ಮಾಡಲು ಒಂದೇ ಕೋರ್ಟಿಗೆ ಅಧಿಕಾರವಿಲ್ಲದ ಇರೋಣ ಅಥವಾ ಕೆಲವು ಭೋಗ್ಯದಾರನ ಸ್ವಾಧೀನದಲ್ಲಿರೋಣ ಇಂಥಾವು ಇದ್ದ ಹೊರತು ಎಲ್ಲಾ ಆಸ್ತಿಗಳನ್ನೂ ಸೇರಿಸಿ ದಾವಾ ಮಾಡಬೇಕು. ಭಾಗವಾಗುವ ಕಾಲದಲ್ಲಿ ಅಜ್ಞಾನದಿಂದಲಾಗಲಿ ಅಥವ ಯಾರೋ ಒಬ್ಬರು ಮೋಸಗಾರಿಕೆಯಿಂದ ಮುಚ್ಚಿಟ್ಟುಕೊಂಡಿದ್ದುದರಿಂದಾಗಲಿ ಆಸ್ತಿಯಲ್ಲೆಷ್ಟಾದರೂ ಪಾಲಾಗುವ ಮೊತ್ತಕ್ಕೆ ಸೇರದೆ ಇದ್ದು ತರುವಾಯ ತಿಳಿಯಬಂದರೆ ಅದನ್ನು ಪುನಃ ಭಾಗಮಾಡಿಕೊಳ್ಳಬಹುದು. ಸಾಧಾರಣವಾಗಿ ಒಂದು ಸಲ ಪಾಲಾದ ಮೇಲೆ ಪುನಃ ಅವರಿವರ ಪಾಲು ಹೆಚ್ಚು ಕಡಿಮೆಯಾಯಿತೆಂಬ ಕಾರಣದಿಂದ ಆಸ್ತಿಗಳನ್ನೆಲ್ಲ ಸೇರಿಸಿ ಹೊಸದಾಗಿ ಭಾಗ ಮಾಡಬೇಕೆಂದರೆ ಆಗುವದಿಲ್ಲ. ಆದರೆ ಮೊದಲು ಭಾಗವಾದುದು ಕೆಲವರು ಮಾಡಿದ ಮೋಸಗಾರಿಕೆಮುಂತಾದ ಕಾರಣಗಳಿಂದ ಕೃತ್ರಿಮವೆಂದೂ ಮುಖ್ಯವಾಗಿ ಆ ವಿಭಾಗದಿಂದ ಭಾಗಹಾರಿಯಾದ ಮೈನರಿಗೆ ನಷ್ಟವು ಪ್ರಾಪ್ತವಾಯಿತೆಂದೂ ಸ್ಪಷ್ಟವಾಗಿ ರುಜುವಾತಾದರೆ ಆ ಹಳೇ ವಿಭಾಗವು ರದ್ದಾಗಿ ಪುನಃ ನೂತನವಾದ ವಿಭಾಗವಾಗಬೇಕೆಂದು ಫೈಸಲಾಗುವದು.

ಒಂದು ಸಲ ಭಾಗವಾದವರು ಇಷ್ಟಬಂದರೆ ಪುನಃ ಏಕಗೃಹಕೃತ್ಯದಲ್ಲಿ ಸೇರಿಕೊಳ್ಳಬಹುದು. ಹಾಗೆ ಸೇರಿದ ತರುವಾಯ ಸೊತ್ತಿನ ಬಾಧ್ಯತೆ ಅನು

ಭೋಗ ಮುಂತಾದ ವಿಷಯಗಳಲ್ಲಿ ಅವರು ಭಾಗಮಾಡಿಕೊಳ್ಳುವದಕ್ಕೆ ಮುಂಚೆ ಹ್ಯಾಗೆ ಇದ್ದರೋ ಪುನಃ ಹಾಗೆಯೇ ಆಗುವರು. ಯಾರು ಮೊದಲು ಭಾಗಮಾಡಿಕೊಂಡರೋ ಅವರು ಹೀಗೆ ಪುನಃ ಸೇರಿಕೊಳ್ಳಬಹುದೇ ಹೊರತು ಅವರ ಮಕ್ಕಳು ಮುಂತಾದವರು ಸೇರಲಾಗದು. ಮಿತಾಕ್ಷರದ ಪ್ರಕಾರ ಹೀಗೆ ಪುನಃ ಸೇರಿಕೊಳ್ಳತಕ್ಕವನು ತನ್ನ ತಂದೆ ಅಥವ ಸಹೋದರ ಅಥವ ತಂದೆಯ ಸಹೋದರನೊಡನೆ ಮಾತ್ರ ಸೇರಿಕೊಳ್ಳಬಹುದು.

ಜೀವನಾಂಶದವಿವರ—ಕುಟುಂಬಕ್ಕೆ ಸೇರಿದವರಲ್ಲಿ ಆಸ್ತಿಗೆ ಬಾಧ್ಯತೆ ಇಲ್ಲದವರನ್ನು ನಿರ್ಗತಿಕರನ್ನಾಗಿಮಾಡಿ ಬಿಟ್ಟುಬಿಡುವದಕ್ಕಿಲ್ಲ. ಅವರ ಜೀವನಾರ್ಥಕ್ಕೆ ಅವಶ್ಯಕವಾದ ಮಾರ್ಗವನ್ನು ಆಸ್ತಿಗೆ ಹಕ್ಕುಳ್ಳವರು ಸಿದ್ಧಮಾಡಬೇಕು. ಒಟ್ಟಿಗಿರುವಾಗ ಯಜಮಾನನು ಸಂಸೃಷ್ಟಕುಟುಂಬದ ಸೊತ್ತಿಗೆ ಬಾಧ್ಯರಾದವರೆಲ್ಲರಿಗೂ ಮತ್ತು ಅವರ ಹೆಂಡತಿ ಮಕ್ಕಳುಗಳಿಗೂ ಅನ್ನ ಬಟೆಗಳನ್ನು ಸರಿಯಾಗಿ ನಡಿಸಬೇಕೆಂಬುವದು ಸರಿಯಷ್ಟೆ. ಹುಟ್ಟುಕುರುಡರು ಮುಂತಾದವರಿಗೆ ಆಸ್ತಿಗೆ ಹಕ್ಕಿಲ್ಲದೆ ಇದ್ದಾಗ್ಯೂ, ಅವರಿಗೂ ಅವರ ಹೆಂಡತಿ ಮಕ್ಕಳುಗಳಿಗೂ ಇತರರಿಗೆ ನಡಿಸುವಂತೆಯೇ ಜೀವನಕ್ಕೆ ಬೇಕಾದವುಗಳನ್ನು ನಡಿಸಬೇಕು. ಜೀವನಾಂಶವನ್ನು ಕೊಡಬೇಕಾದವರು ಕೊಡದೆ ಇದ್ದರೆ, ಅದಕ್ಕೋಸ್ಕರ ಕೋರ್ಟಿನಲ್ಲಿ ದಾವಾಮಾಡಿ ಪಡೆದುಕೊಳ್ಳಬಹುದು. ವಿವಾದಾರ್ಥಿಗಳ ಯೋಗ್ಯತಾನುಸಾರವಾಗಿ ಜೀವನಾಂಶವನ್ನು ಕೊಡಿಸುವರು. ಅದಲ್ಲದೆ, ದಾವಾಮಾಡುವವರಿಗೆ ಅದುವರಿಗೂ ಬಾಕಿಯಾಗಿ ಇರುವದನ್ನೂ ಅಂದರೆ—ಎಷ್ಟು ದಿವಸದಿಂದ ಜೀವನಾಂಶವನ್ನು ಕೊಟ್ಟಿಲ್ಲವೊ ಅದನ್ನೂ—ಲೆಕ್ಕಮಾಡಿ ನೋಡಿ ವಾಯಿದೆ ಮೀರಿಹೋಗದೆ ಇದ್ದಪಕ್ಷದಲ್ಲಿ ಕೊಡಿಸುವರು. ಜೀವನಾಂಶವನ್ನು ಮುಂದಕ್ಕೆ ವರ್ಷಕ್ಕೆ ಇಷ್ಟರಪ್ರಕಾರ ಕೊಡಬೇಕೆಂದು ಫೈಸಲ್ ಪಡೆದುಕೊಂಡ ತರುವಾಯ, ಅದರಲ್ಲಿ ಬಾಕಿಯು ಬಿದ್ದಾಗಲೆಲ್ಲಾ ಫೈಸಲನ್ನು ಕೋರ್ಟಿನ ಮುಖಾಂತರ ಜಾರೀಮಾಡಿಸಿ ಬಾಕಿಯನ್ನು ಬರಮಾಡಿಸಿಕೊಳ್ಳಬಹುದು. ಫೈಸಲಾದನಂತರ ಜೀವನಾಂಶವನ್ನು ಕೊಡತಕ್ಕ ಆಸ್ತಿಯು ಕೊಡಬೇಕಾದವನ ತಪ್ಪಿಲ್ಲದೆ ಕಡಮೆಯಾದರೆ, ಅವನು ಕೋರ್ಟಿನವರಿಗೆ ಅರ್ಜೀಕೊಟ್ಟು ತಾನು ಕೊಡಬೇಕಾದದ್ದನ್ನೂ ತಕ್ಕಹಾಗೆ ಕಡಮೆಮಾಡಿಸಿಕೊಳ್ಳಬಹುದು. ಅದೇಪ್ರಕಾರ ಆಸ್ತಿಯು ಹೆಚ್ಚಾದರೆ ಜೀವನಾಂಶವನ್ನು ತೆಗೆದುಕೊಳ್ಳುವವರು ತಮಗೆ ಬರಬೇಕಾದದ್ದನ್ನು ಹೆಚ್ಚುಮಾಡಿಸಿಕೊಳ್ಳಲೂಬಹುದು. ವ್ಯ॥ ೬೧॥ ೧೯೯

ಜೀವನಾಂಶಕ್ಕೆ ಕೊಟ್ಟಿರುವ ಸ್ವತ್ತನ್ನು ಮಾರುವ ಹಕ್ಕು— ಜೀವನಾಂಶವನ್ನು ಪ್ರತಿವರ್ಷವೂ ಕೊಡುತ್ತಿರುವದಕ್ಕೆ ಬದುಲಾಗಿ, ಒಂದೇಗಂಟಿನಲ್ಲಿ ಏನಾದರೂ ತಕ್ಕ ಸೊತ್ತನ್ನು ಜೀವನಾಂಶಕ್ಕೆ ಹಕ್ಕುಳ್ಳವರ ಒಡಂಬಡಿಕೆಯಿಂದ ಅವರಿಗೆ ಕೊಟ್ಟುಬಿಟ್ಟರೆ ಸಾಕು. ಹೀಗೆ ಪಡೆದುಕೊಂಡ ಸೊತ್ತನ್ನು ಖರ್ಚುಮಾಡಿಕೊಂಡು ಪುನಃ ಜೀವನಾಂಶವನ್ನು ಕೊಡಿಸಿಕೊಡಬೇಕೆಂದು ಕೇಳಿದರೆ ಕೋರ್ಟಿನವರು ಕೊಡಿಸುವದಿಲ್ಲ. ಜೀವನಾಂಶಕ್ಕೆ ಹುಟ್ಟುವಳಿಯನ್ನು ಅನುಭವಿಸಬೇಕೆಂಬ ಷರತ್ತಿನ ಮೇಲೆ ಹೆಂಗಸರಿಗೆ ಸ್ಥಿರಸ್ವತ್ತು ಮುಂತಾದುದನ್ನುಕೊಟ್ಟಿದ್ದರೆ. ಅವರಿಗೆ ಅದನ್ನುಮಾರಿಕೊಳ್ಳುವ ಹಕ್ಕಿಲ್ಲ. ಅವರ ಮರಣಾನಂತರ ಅದು ಅದನ್ನು ಅವರಿಗೆ ಕೊಟ್ಟಿದ್ದವರಿಗೇ ಸೇರುವದು. ಆದರೆ, ಜೀವನಾಂಶದ ಹಕ್ಕಿಗೆ ಬದುಲಾಗಿ ಶುದ್ಧವಾಗಿ ಆ ಹಕ್ಕುಳ್ಳವರಿಗೇಕೊಟ್ಟುಬಿಡುವ ಆಸ್ತಿಗೆ ಅವರೇಬಾಧ್ಯರಾಗುವರು. ಜೀವನಾಂಶಕ್ಕೆ ದಾವಾ ಮಾಡುವಾಗ ಯಾವದಾದರೂ ಸ್ಥಿರಸ್ವತ್ತನ್ನು ಅದಕ್ಕೆ ಆಧಾರ ಈಡುಮಾಡಿಕೊಡಬೇಕೆಂದು ಕೇಳಿಕೊಂಡರೆ ಮೇಲು. ಯಾಕಂದರೆ, ಹಾಗೆ ಈಡಾಗಬೇಕೆಂದು ಫೈಸಲ್ಮಾಡಿಕೊಟ್ಟ ಸ್ವತ್ತನ್ನು ತರುವಾಯ ಸೊತ್ತುಗಾರನು ಮಾರಿಕೊಂಡಾಗ್ಯೂ, ಈ ವಿಧವಾದ ಈಡಿನಿಂದ ಉಂಟಾದ ಹಕ್ಕು ಜೀವನಾಂಶವನ್ನು ಪಡೆಯುವವರಿಗೆ ತಪ್ಪಿಹೋಗುವದಿಲ್ಲ. ಹೀಗೆ ಸೊತ್ತನ್ನು ಈಡುಮಾಡಿಕೊಳ್ಳದೆಯಿದ್ದರೆ, ಪ್ರತಿವಾದಿಯು ತನ್ನ ಆಸ್ತಿಯನ್ನೆಲ್ಲಾ ಕಳೆದುಕೊಂಡುಬಿಟ್ಟರೆ, ಅವನಿಂದ ಜೀವನಾಂಶವನ್ನು ಬರಮಾಡಿಕೊಳ್ಳುವದಕ್ಕೆ ಮಾರ್ಗವಿಲ್ಲದೆ ಹೋಗಿಬಿಡುವದು.

ಪೋಷಣೆಯ ಅವಧಿ— ವೃದ್ಧರಾದ ತಂದೆತಾಯಿಗಳನ್ನೂ, ಹೆಂಡತಿಯನ್ನೂ, ಮದುವೆಯಾಗುವವರಿಗೆ ಹೆಣ್ಣುಮಕ್ಕಳನ್ನೂ, ದೊಡ್ಡವರಾಗುವವರಿಗೆ ಗಂಡುಮಕ್ಕಳನ್ನೂ, ಪಿತ್ರಾರ್ಜಿತದ ಆಸ್ತಿ ಇರಲಿ, ಇಲ್ಲದೆಹೋಗಲಿ, ಪ್ರತಿ ಒಬ್ಬನೂ ತನ್ನ ಯೋಗ್ಯತಾನುಸಾರವಾಗಿ ಅನ್ನ ಬಟ್ಟೆಗಳನ್ನು ಕೊಟ್ಟು ಕಾಪಾಡಬೇಕು. ಇಟ್ಟುಕೊಂಡವಳ ಹೊಟ್ಟೆಯಲ್ಲಿ ಹುಟ್ಟಿದ ಮಕ್ಕಳಿಗೂಕೂಡ ಅನ್ನ ಬಟ್ಟೆಯನ್ನು ನ್ಯಾಯವಾದ ಮಕ್ಕಳಿಗೆ ಕೊಟ್ಟಂತೆಯೇ ಕೊಡಬೇಕು. ತನ್ನೊಡನೆ ವ್ಯಭಿಚಾರಕೊಳ್ಳಗಾದ ಸ್ತ್ರೀಗೆ ಜೀವನಕ್ಕೆ ಕೊಡಬೇಕೆಂಬ ವಿಧಾಯಕವಿಲ್ಲ; ಆದರೆ ಯಾವ ಹೆಂಗಸನ್ನಾದರೂ ಸ್ಥಿರವಾಗಿ ಇಟ್ಟುಕೊಂಡರೆ ಅವಳಿಗೆ ಕೊಡಬೇಕಾಗುವದು. ದೊಡ್ಡವರಾದ ಮೇಲೆ ಗಂಡುಮಕ್ಕಳಿಗೆ ಜೀವನಕ್ಕೆ ತಂದೆಯು ಕೊಡಬೇಕೆಂಬ ನಿರ್ಬಂಧವಿಲ್ಲ. ಆದರೆ ಪಿತ್ರಾರ್ಜಿತದ ಸೊತ್ತಿನಲ್ಲಿ ಅವರು ಭಾಗವನ್ನು ಪಡೆದುಕೊಳ್ಳಬಹುದು; ಮತ್ತು ವಿಭಾಗಿಸಕೂಡದಾದ ಸೊತ್ತು ಅಂದರೆ ಜಮೀನ್

ದಾರಿ ಹಕ್ಕು ಮುಂತಾದವನ್ನು ಒಬ್ಬನು ಅನುಭವಿಸುತ್ತಿದ್ದರೆ ಅವನು ಇತರರಿಗೆ ಜೀವನಾಂಶವನ್ನು ಕೊಡಬೇಕು. ಹೆಣ್ಣು ಮಕ್ಕಳಿಗೆ ಮದುವೆಯಾದ ತರುವಾಯ ಅವರು ದೊಡ್ಡವರಾಗುವವರಿಗೂ ಅವರ ತಂದೆತಾಯಿಗಳು ಕೇಳಿದ ಪಕ್ಷದಲ್ಲಿ ಗಂಡನೇ ಜೀವನಕ್ಕೆ ಕೊಡಬೇಕಾಗುವದು.

ಹೆಂಡತಿ ಮಕ್ಕಳ ಜೀವನಾಂಶ—ಹೆಂಡತಿಯೂ ಸಣ್ಣ ಮಕ್ಕಳುಗಳೂ ವೃದ್ಧರಾದ ತಾಯಿತಂದೆಗಳೂ ಮಾಡಬಾರದ ಕಾರ್ಯಗಳನ್ನು ನೂರುಸಾರಿ ಮಾಡಿದಾಗ್ಯೂ ಅವರಿಗೆ ಅನ್ನ ಬಟ್ಟೆಗಳನ್ನು ಕೊಟ್ಟು ಕಾಪಾಡಬೇಕೆಂದು ಧರ್ಮಶಾಸ್ತ್ರದಲ್ಲಿ ಹೇಳಿದೆ. ಈಗಿನ ನ್ಯಾಯಪ್ರಕಾರ ಹೆಂಡತಿಯು ವ್ಯಭಿಚಾರಮಾಡಿ ಗಂಡನನ್ನು ಬಿಟ್ಟುಬಿಟ್ಟರೆ ಅವಳಿಗೆ ಅನ್ನ ಬಟ್ಟೆಗಳನ್ನು ಕೊಡಕೆಲಸವಿಲ್ಲ. ಹೆಂಡತಿಯು ಸಹಜವಾಗಿ ಗಂಡನ ಮನೆಯಲ್ಲಿ ವಾಸವಾಗಿದ್ದು ಜೀವನಮಾಡಿಕೊಂಡಿರಬೇಕು. ಕಾರಣವಿಲ್ಲದೆ ಬಿಟ್ಟು ಹೋದರೆ ಅವಳಿಗೆ ಇವನು ಅನ್ನಬಟ್ಟೆಗಳನ್ನು ಕೊಡಕೆಲಸವಿಲ್ಲ. ವ್ಯಭಿಚಾರ ಮಾಡಿದವಳು ತನ್ನ ಕೆಟ್ಟ ನಡತೆಯನ್ನು ಬಿಟ್ಟು ಪುನಃ ಬಂದರೆ ಅವಳಿಗೆ ಗಂಡನು ಎಷ್ಟು ಪ್ರಾಣಾಧಾರಕ್ಕೆ ಅಗತ್ಯವೋ ಅಷ್ಟು ಜೀವನಾಂಶವನ್ನು ಕೊಡಬೇಕೆಂದು ಕೆಲವು ಕಡೆ ನ್ಯೈಸಲಾಗಿದೆ.

ಜೀವನಾಂಶ ಕೊಡದೆ ತಪ್ಪಿದರೆ ಶಿಕ್ಷೆ—ಹೆಂಡತಿಗೂ ಇವಳ ಎಳೇ ಮಕ್ಕಳಿಗೂ ಕಾರಣವಿಲ್ಲದೆ ಅನ್ನಬಟ್ಟೆಗಳನ್ನು ಕೊಡದೆ ತಪ್ಪುಮಾಡಿದ ಗಂಡನ ಮೇಲೆ ಸಿವಿಲ್ ಕೋರ್ಟುಗಳಲ್ಲಿ ದಾವಾಮಾಡುವದಲ್ಲದೆ ಕ್ರಿಮಿನಲ್ ಕೋರ್ಟಿನಲ್ಲಿ ೧ನೇ ಕ್ಲಾಸ್ ಮೇಜಿಸ್ಟ್ರೇಟರಿಗೆ ಅರ್ಜಿಯನ್ನು ಕೊಟ್ಟರೆ ವಿಚಾರಣೆ ಮಾಡಿ ತಿಂಗಳಿಗೆ ಐವತ್ತು ರೂಪಾಯಿಗೆ ಮೀರದಂತೆ ಜೀವನಕ್ಕೆ ಅವನಿಂದ ಕೊಡಿಸುವರು. ಈ ಹಣವನ್ನು ಅವನು ಕೊಡುವದರಲ್ಲಿ ತಪ್ಪಿದರೆ ಅವನನ್ನು ಕಠಿಣ ಖೈದು ಅನುಭವಿಸುವಂತೆ ನಿರ್ಬಂಧಪಡಿಸಿ ಹಣವನ್ನು ಬರಮಾಡಿಸಿಕೊಡುತ್ತಾರೆ. ಜಾಗ್ರತೆಯಾಗಿ ಪಡೆದುಕೊಳ್ಳುವದಕ್ಕಾಗಲಿ ಅಥವಾ ಖರ್ಚುಮಾಡುವದಕ್ಕೆ ಸದ್ಯಃ ಗತಿಇಲ್ಲದಿದ್ದರಾಗಲಿ ಮೇಜಿಸ್ಟ್ರೇಟರಲ್ಲಿ ಅರ್ಜಿ ಕೊಡುವದು ಒಳ್ಳೇ ಉಪಾಯವು. ವ್ಯಭಿಚಾರಿಣಿಯಾದ ಅಥವಾ ನಿಷ್ಕಾರಣವಾಗಿ ಗಂಡನೊಡನೆ ಇರುವದಿಲ್ಲವೆಂದು ಹೇಳುವ ಹೆಂಡತಿಗೆ ಕ್ರಿಮಿನಲ್ ಕೋರ್ಟಿನಲ್ಲಿಯೂ ಜೀವನಾಂಶವನ್ನು ಕೊಡಿಸುವದಿಲ್ಲ. ಕಾರಣವಿದ್ದಲ್ಲಿ ಅಂದರೆ ಗಂಡನು ಅತಿಕ್ರೂರಿಯಾಗಿದ್ದರೂ ಅಥವಾ ಸೂಳೆಯನ್ನಿಟ್ಟುಕೊಂಡು ಜಾರನಾಗಿ ಯಾವಾಗಲೂ ಅವಳ ಸಹವಾಸದಲ್ಲಿಯೇ ಇರುವವನಾಗಿದ್ದರೂ ಹೆಂಡತಿಯು ಇವನೊಡನೆ ತಾನು ಸೇರುವದಿಲ್ಲವೆಂದು ಹೇಳಿದಾಗ್ಯೂ ಅವಳಿಗೆ ಜೀವನಾಂಶವನ್ನು ಕೊಡಿಸುವರು. ಸಂಶಯಾಸ್ಪದವಾದ ಮೊಕ

ದ್ದವೆಗಳಲ್ಲಿ ಸಿವಿಲ್ ಕೋರ್ಟಿನಲ್ಲಿಯೇ ಧಾವಾ ಮಾಡುವದು ಮೇಲು.
ಯಾಕೆಂದರೆ ಕ್ರಿಮಿನಲ್ ಕೋರ್ಟಿನಲ್ಲಿ ಹೆಂಡತಿಯು ವ್ಯಭಿಚಾರಿಣಿ ಎಂಬದಾ
ಗಿ ಫೈಸಲ್ಮಾಡಿದರೆ ಆ ತೀರ್ಪು ತಪ್ಪಾದರೂ ಅಪೀಲ್‌ಮಾಡಿ ತಿದ್ದಿಕೊಳ್ಳು
ವದಕ್ಕೆ ಅಧಿಕಾರವಿಲ್ಲ. ಮೇಜಿಸ್ಟ್ರೇಟರ ಕೋರ್ಟಿನಲ್ಲಿ ಜೀವನಾಂಶವನ್ನು
ಕೊಡಬೇಕೆಂಬ ಹುಕುಂ ಆದ ತರುವಾಯ ಹೆಂಡತಿಯು ವ್ಯಭಿಚಾರ ಮುಂ
ತಾದದನ್ನು ಮಾಡಿದಳೆಂಬ ರುಜುವಾತು ಕೊಟ್ಟರೆ ಆ ಆಜ್ಞೆಯನ್ನು ರದ್ದು
ಮಾಡಿ ಬಿಡುವರು. ಮತ್ತು ಜೀವನಾಂಶಕ್ಕೆ ಅವಳಿಗೆ ಹಕ್ಕಿಲ್ಲವೆಂಬುದಕ್ಕೆ
ಇತರ ಕಾರಣಗಳನ್ನು ಮೊದಲೇ ತೋರಿಸಿದರೆ ಹಾಗೆ ಮೇಜಿಸ್ಟ್ರೇಟರು
ಕೊಡಿಸುವದೇ ಇಲ್ಲ. ಇದರಿಂದ ಸಿವಿಲ್ ಕೋರ್ಟಿನಲ್ಲಿ ದಾವಾ ಮಾಡುವ
ಹಕ್ಕಿಗೇನೂ ಬಾಧಕ ಬರುವದಿಲ್ಲ. ಇಲ್ಲಿ ಅಲ್ಲಿ ಬೇರೇ ವಿಧವಾಗಿ ಫೈಸಲಾದ
ಪಕ್ಷದಲ್ಲಿ ಅದನ್ನು ತಂದು ತೋರಿಸಿದರೆ ಮೇಜಿಸ್ಟ್ರೇಟರು ತಮ್ಮ ಹುಕು
ಮನ್ನು ಮುಂದಕ್ಕೆ ಜಾರೀಮಾಡದೆ ಬಿಟ್ಟುಬಿಡುವರು (ಕ್ರಿ. ಪ್ರೊ. ಕೋ.
ಸೆ. ೪೮೮—೪೯೦.)

ಜೀವನಾಂಶದ ಸೊತ್ತು ಮುಗಿದ ನಂತರ— ಸಮಷ್ಟಿ ಕುಟುಂಬದಲ್ಲಿ
ಭಾಗಹಾರಿಗಳಾಗಿದ್ದು ಸತ್ತು ಹೋದವರ ಹೆಂಡರನ್ನು ಕುಟುಂಬದ ಸೊತ್ತಿ
ರುವವರಿಗೂ ಕಾಪಾಡಬೇಕು. ಪಿತ್ರಾರ್ಜಿತದ ಸೊತ್ತಿಲ್ಲದಿದ್ದರೆ ಮೃತಿ
ಹೊಂದಿರುವ ಹೆಂಡತಿಯರಿಗೆ ಜೀವನಾಂಶಕ್ಕೆ ಕೊಡಬೇಕಾದ ನಿರ್ಬಂಧವಿಲ್ಲ.
ಜೀವನಾಂಶವನ್ನು ಪಡೆಯುವ ವಿಧವೆಯು ಗಂಡನ ಮನೆಯಲ್ಲಿಯೇ ಇರ
ಬೇಕೆಂಬ ಅವಶ್ಯಕವಿಲ್ಲ. ವ್ಯಭಿಚಾರಮಾಡಿದವಳಾದರೆ ಅವಳಿಗೆ ಜೀವನಕ್ಕೆ
ಕೊಡಕೆಲಸವಿಲ್ಲ. ಗಂಡನ ತಂದೆಯು ಅಥವ ಅವನ ಅಣ್ಣತಮ್ಮಂ
ದರ ಮನೆಯನ್ನು ಬಿಟ್ಟುಹೋಗುವದರಿಂದ ಅವರ ಕುಟುಂಬದ ಆಸ್ತಿಯು
ಸ್ವಲ್ಪವೇ ಇದ್ದು ಅದಕ್ಕೆ ಖರ್ಚು ಹೆಚ್ಚಾಗಿರುವದಾದರೆ ಇವಳಿಗೆ ಬೇರೆಯಾಗಿ
ಖರ್ಚಿಗೆ ಹೆಚ್ಚಾಗಿರುವಂತೆ ಕೊಡಿಸುವದಿಲ್ಲ. ಇವಳು ಅವರ ಮನೆಯನ್ನು
ಕೆಟ್ಟ ಕೆಲಸವನ್ನು ಮಾಡುವ ಉದ್ದೇಶದಿಂದ ಬಿಟ್ಟು ಹೋದರೆ ಇವಳಿಗೆ ಜೀ
ವನಾಂಶಕ್ಕೆ ಭಾಧ್ಯತೆಯು ಸಲ್ಲುವದೇ ಇಲ್ಲ. ಆದರೆ ಇವಳು ಕೆಟ್ಟ ಕೆಲಸ
ಕ್ಕೋಸ್ಕರವೇ ಗಂಡನ ಬಂಧುಗಳನ್ನು ಬಿಟ್ಟು ಬೇರೇ ಹೋದಳೆಂದು ಸ್ಪ
ಷ್ಟವಾಗಿ ದೃಢಪಡಿಸಿಕೊಡಬೇಕು. ವ್ಯ॥ ದೀ॥

ಅಕ್ಕತಂಗಿಯರ ಪೋಷಣೆ—ಅಕ್ಕತಂಗಿಯರಿಗೆ ಮದುವೆಯಾಗುವವ
ರಿಗೂ ಅನ್ನಬಟ್ಟೆಗಳನ್ನು ಕೊಡುವದಕ್ಕೂ ಅವರ ಮದುವೆಯ ಖರ್ಚನ್ನು
ಮಾಡುವದಕ್ಕೂ ಸಹೋದರನು ಬದ್ಧನಾಗಿರುವನು. ಆದರೆ ತಂದೆಯ
ಆಸ್ತಿಯು ಇಲ್ಲದ ಪಕ್ಷದಲ್ಲಿ ಕೋರ್ಟಿನಲ್ಲಿ ಅವಕ್ಕೆ ಹಣವನ್ನು ಅವನಿಂದ

ಕೊಡಿಸುವರೋ ಇಲ್ಲವೋ ಖಂಡಿತವಾಗಿ ಹೇಳುವದಕ್ಕೆ ಸರಿಯಾದ ಆಧಾರವಿಲ್ಲ. ಸ್ಮೃತಿಗಳ ಪ್ರಕಾರ ಮದುವೆಯಾದ ಮೇಲೂ ಅವರಿಗೆ ಗಂಡಂದಿರ ಮನೆಯಲ್ಲಿ ಗತಿ ಇಲ್ಲದಿದ್ದರೆ ತೌರುಮನೆಯವರೇ ಜೀವನವನ್ನು ನಡಿಸಬೇಕೆಂದು ಹೇಳಿದೆ. ಹೆಂಡತಿಯ ತಾಯಿಗೆ ಅಳಿಯನು ಅನ್ನ ಬಟ್ಟೆಗಳನ್ನು ಕೊಡಬೇಕೆಂಬುವದಕ್ಕೆ ಆಧಾರವಿದ್ದಾಗ್ಯೂ ಬಹುಶಃ ಇದನ್ನು ಕೋರ್ಟಿನಲ್ಲಿ ವ್ಯವಹಾರ ಮೂಲಕವಾಗಿ ಪಡೆಯುವದಕ್ಕೆ ಆಗಲಾರದು. ಜೀವನಾಂಶಕ್ಕೆ ಫೈಸಲಾದ ತರುವಾಯ ವಿಧವೆಯು ವ್ಯಭಿಚಾರಕ್ಕೆ ಬಿದ್ದರೆ ಆ ಫೈಸಲನ್ನು ರದ್ದುಮಾಡಿಸಿಕೊಳ್ಳಬಹುದು. ಆದರೆ ಇವಳಿಗೆ ಅತ್ಯಾವಶ್ಯಕವಾದಷ್ಟು ಮಾತ್ರವೇ ಜೀವನಾಂಶಕ್ಕೆ ಫೈಸಲಾಗಿದ್ದರೆ ಅದನ್ನು ರದ್ದುಮಾಡುವದಿಲ್ಲವೆಂದು ತೀರ್ಪಾಗಿರುವದರಿಂದ ಈ ವಿಷಯವನ್ನು ಕುರಿತು ಹೀಗೆಯೇ ಎಂದು ದೃಢವಾಗಿ ಹೇಳುವದಕ್ಕಾಗದು.

ಜೀವನಾಂಶದ ಸೊತ್ತಿನ ಜವಾಬ್ದಾರಿ—ಕುಟುಂಬದ ಸೊತ್ತಿನ ಮೇಲೆ ಜೀವನಾಂಶಕ್ಕೆ ಹಕ್ಕಿರುವದನ್ನು ತಪ್ಪಿಸಬೇಕೆಂಬ ಉದ್ದೇಶದಿಂದ ಮತ್ತೊಬ್ಬನಿಗೆ ಅದನ್ನು ಮಾರಿದರೆ ಆ ವಿಷಯ ತಿಳಿದು ಯಾರಾದರೂ ಆ ಸೊತ್ತನ್ನು ತೆಗೆದುಕೊಂಡರೆ ಆ ಸೊತ್ತಿನಮೇಲಿನ ಜೀವನಾಂಶದ ಹಕ್ಕು ತಪ್ಪುವದಿಲ್ಲ. ತಿಳಿದಾಗಲಿ ತಿಳಿಯದೆ ಆಗಲಿ ಅಂಥಾ ಸೊತ್ತನ್ನು ದಾನವಾಗಿ ಪಡೆದುಕೊಂಡವರ ಸ್ವಾಧೀನದಲ್ಲಿರುವಾಗ ಮೊದಲು ಆ ಸೊತ್ತಿಗೆ ಯಾರ ಜೀವನಾಂಶದ ಭಾರವು ಸೇರಿರುವದೋ ಅವರ ಜೀವನದ ಖರ್ಚಿಗೆ ಅದು ಈಗಲೂ ಗುರಿಯಾಗಿಯೇ ಇರುವದು. ಈ ಸಂಗತಿ ತಿಳಿಯದೆ ಹಣ ಕೊಟ್ಟು ಕೊಂಡು ಕೊಂಡವರಿಗೆ ಈ ಭಾರವು ತಪ್ಪಿಹೋಗುವದು.

ಜೀವನಾಂಶಕ್ಕೆ ಪರಿಮಿತಿ—ಜೀವನಾಂಶ ಕೊಡುವದರಲ್ಲಿ ಇಷ್ಟೇ ಕೊಡಬೇಕೆಂದು ಖಂಡಿತವಾಗಿ ಹೇಳುವದಕ್ಕೆ ಆಗುವದಿಲ್ಲ. ಅವರವರ ಆಸ್ತಿ, ಗೌರವ ಮುಂತಾದ ವಿಷಯಗಳಿಗನುಸಾರವಾಗಿ ನಿಷ್ಕರ್ಷಿಸಬೇಕು. ಗಂಡನಿಲ್ಲದ ಹೆಂಗಸಿಗೆ ಗಂಡನಿದ್ದರೆ ಎಷ್ಟು ಖರ್ಚು ಮಾಡುವನೋ ಅಷ್ಟು ಕೊಡಿಸದೆ ಇದ್ದಾಗ್ಯೂ ಸುಮ್ಮನೆ ಒಂದು ಹೊತ್ತಿನ ತಿಂಡಿಗೂ ವರ್ಷಕ್ಕೆರಡು ಕೆಂಪು ಬಟ್ಟೆಗೂ ಮಾತ್ರ ಆಗುವಷ್ಟು ಕೊಡುವೆನೆಂದರೆ ಒಪ್ಪುವದಿಲ್ಲ. ಬಹು ದೊಡ್ಡ ಮನುಷ್ಯರ ಮನೆಯ ಹೆಂಗಸರಿಗೆ ತಿಂಗಳಿಗೆ ನೂರಾರು ರೂಪಾಯಿಗಳನ್ನು ಕೊಡಿಸಬಹುದು. ಯಾರಾದರೂ ಸತ್ತುಹೋದವನ ವಾರಸ್ದಾರನ ಹೆಂಡತಿಗೆ ಅವಳ ಗಂಡನು ಬದುಕಿದ್ದು ಆಸ್ತಿಯಲ್ಲಿ ಭಾಗವನ್ನು ಪಡೆದುಕೊಂಡಿದ್ದರೆ ಅವನ ಭಾಗದಲ್ಲೆಷ್ಟು ಹುಟ್ಟುವಳಿಯಾಗುತ್ತಿತ್ತೋ ಅದಕ್ಕಿಂತ ಹೆಚ್ಚಾಗಿ ಕೊಡಿಸುವದಿಲ್ಲ. ಹೆಂಗಸಿಗೆ ಸ್ತ್ರೀಧನವಿದ್ದರೆ ಅದು ಜಮಾನಿನಂತೆ ಹುಟ್ಟುವಳಿ ಬರುವ ಸೊತ್ತಾಗಿದ್ದರೆ ಅದಕ್ಕೋಸ್ಕರ

ಜೀವನಾಂಶವನ್ನು ಕಡಮೆಮಾಡುವರು. ಒಡವೆ ಬಟ್ಟೆ ಮುಂತಾದವಿದ್ದರೆ ಅವನ್ನು ಮಾರಿಕೊಂಡು ತಿನ್ನಬಹುದೆಂದು ನ್ಯಾಯವಾಗಿ ಕೊಡತಕ್ಕ ಜೀವನಾಂಶವನ್ನು ಕಡಮೆಮಾಡುವದಿಲ್ಲ. ಜೀವನಾಂಶವನ್ನು ಕೊಡುವದಕ್ಕೆ ಮುಂಚೆ ಸಾಲಗಳನ್ನು ತೀರಿಸತಕ್ಕದ್ದು ಕರ್ತವ್ಯವಾದುದರಿಂದ ಸಾಲಕೊಕ್ಕರ ಆಸ್ತಿಯನ್ನೆಲ್ಲಾ ಮಾರಿದಾಗ್ಯೂ ಹಾಗೆ ಮಾರಿದ ಆಸ್ತಿಯನ್ನು ಜೀವನಾಂಶದ ಭಾರಕ್ಕೆ ಗುರಿಪಡಿಸಿಕೊಳ್ಳುವದಕ್ಕಾಗುವದಿಲ್ಲ. ಮೃತಪಟ್ಟ ವಾರಸುದಾರನ ಹೆಂಡತಿಗೆ ಜೀವನಾಂಶದಂತೆಯೇ ವಾಸವಾಗಿರುವದಕ್ಕೆ ಮನೆಯನ್ನು ಕೊಡುವದೂ ಅವಶ್ಯಕವು. ಆಕೆಗೆ ಸರಿಯಾದ ಸ್ಥಳವನ್ನು ಸರಿಮಾಡಿಕೊಡವೆ ಕುಟುಂಬದ ಮನೆಯನ್ನು ಮಾರಿಕೊಂಡರೆ ಅವಳಿರುವವರೆಗೂ ಮನೆಯನ್ನು ಬಿಡಿಸಿಕೊಳ್ಳುವದಕ್ಕೆ ಅದನ್ನು ಕ್ರಯಕ್ಕೆ ಕೊಂಡುಕೊಂಡವನಿಗೆ ಹಕ್ಕಿರುವದಿಲ್ಲ.

ಜೀವನಾಂಶಕ್ಕೆ ದಾವಾ ಮಾಡಲು ಲಿಮಿಟೇಷನ್—ಜೀವನಾಂಶದ ಹಕ್ಕನ್ನು ಸ್ಥಾಪಿಸಿಕೊಳ್ಳಬೇಕಾದರೆ ಯಾವಾಗ ಇಂಥಾ ಹಕ್ಕಿಲ್ಲವೆಂದು ಜೀವನಾಂಶವನ್ನು ಕೊಡಬೇಕಾಗಿರುವವರು ಹೇಳುವರೋ ಅಂದಿನಿಂದ ೧೨ ವರ್ಷಗಳೊಳಗಾಗಿ ದಾವಾ ಮಾಡಬೇಕು. ಕೇಳಿ ಕಂಠೋಕ್ತವಾಗಿ ಇಲ್ಲವೆಂದು ಹೇಳಿಸಿಕೊಳ್ಳಬೇಕಾದ ಅವಶ್ಯಕವಿಲ್ಲ. ಕೊಡಬೇಕಾದವರು ಇವರಿಗೆ ಖಂಡಿತವಾಗಿ ಕೊಡುವದಿಲ್ಲವೆಂದು ಧೃಢವಾಗಿ ತಮ್ಮ ನಡತೆಯಿಂದ ತೋರಿಸಿದರೆ ಅಂದರೆ ಅನ್ನ ಬಟ್ಟೆ ಹಾಕದೆ ಮನೆಯಿಂದ ಹೊರಕ್ಕೆ ಹೊರಡಿಸಿ ಪುನಃ ಬರದಂತೆ ಅಡ್ಡಿ ಮಾಡುವದೇ ಮುಂತಾದ ಮಾರ್ಗಗಳಲ್ಲಿ ನಡೆದರೆ ಇಲ್ಲವೆಂದು ಹೇಳಿದಂತೆಯೇ ಭಾವಿಸಬೇಕು. ದಾವಾವಿಗೆ ಹಿಂದಿನಕಾಲದ ಜೀವನಾಂಶದ ಹಣವನ್ನು ಪಡೆದುಕೊಳ್ಳಬೇಕಾಗಿದ್ದರೆ ಅದಕ್ಕೂ ೧೨ ವರ್ಷಗಳೊಳಗಾಗಿ ದಾವಾ ತರಬೇಕು. ಕೋರ್ಟಿನವರು ೧೨ ವರ್ಷಕ್ಕೆ ತಕ್ಕದ್ದಕ್ಕಿಂತ ಹೆಚ್ಚಾಗಿ ಜೀವನಾಂಶದ ಹಣವನ್ನು ಕೊಡಿಸುವದಿಲ್ಲ. ಮತ್ತು ಇದೇ ವಿಷಯದಲ್ಲಿ ವ್ಯಾ॥ ನಿ॥ ಕಾರರು ಪಟ್ಟಿರುವ ಅಭಿಪ್ರಾಯ—ಈ ಕೆಳಗೆ ವಿವರಿಸಿದೆ.

ಕೋರ್ಟಿನ ಫೈಸಲ್ ದಾಖಲೆ— ಗಂಡನನ್ನು ನಿಷ್ಕಾರಣವಾಗಿ ಬಿಟ್ಟು ಬೇರೇ ಇರುವವಳಿಗೂ, ವ್ಯಭಿಚಾರಿಣಿಯಾದ ಹೆಂಡತಿ ವಿಧವೆ ಮತ್ತು ಖಾಯಂ ಸೂಳೆಗೂ ಸಹ ಜೀವನಾಂಶವು ಸಲ್ಲದು. ಹೆಂಡತಿ ಅಥವಾ ವಿಧವೆಯರು ಜೀವನಾಂಶದ ಡಿಕ್ರಿಯನ್ನು ಪಡೆದುಕೊಂಡನಂತರ, ಅಥವ ಜೀವನಾಂಶದ ಪತ್ರವನ್ನು ಬರೆಸಿಕೊಂಡನಂತರ ವ್ಯಭಿಚಾರಿಣಿಯಾದರೆ, ಜೀವನಾಂಶದ ಹಕ್ಕನ್ನು ಕಳೆದುಕೊಳ್ಳುವಳು. ಗಂಡನು ಬೈದನು, ಹೊಡೆದನು,

ಎರಡನೇ ಆವೃತ್ತಿ ಮದುವೆಯಾದವನು, ಸೂಳೆಯನ್ನು ಇಟ್ಟುಕೊಂಡಿರುವನು ಎಂಬಂಥ ಕಾರಣಗಳಮೇಲೆ ಗಂಡನಿಂದ ಜೀವನಾಂಶವನ್ನು ಹೊಂದಲು ಹೆಂಡತಿಗೆ ಹಕ್ಕಿಲ್ಲ. ೪ ಅ ೩೭೪ ವಿಧವೆಯು ಅವಳ ಗಂಡನ ಸಹೋದರನಮೇಲೆ ಜೀವನಾಂಶಕ್ಕೆ ದಾವಾಮಾಡಿದಳು ಇವಳಿಗೆ ಪ್ರತ್ಯೇಕವಾಗಿ ಜೀವನಾಂಶವನ್ನು ಕೊಡುವಷ್ಟು ಆಸ್ತಿಯು ಅವನಲ್ಲಿರಲಿಲ್ಲವೆಂದೂ, ಅವನ ಮೃತ ಸಹೋದರನ ಸ್ವಾರ್ಜಿತದ ಆಸ್ತಿ ಆವುದೂ ಅವನಿಗೆ ಬಾರಲಿಲ್ಲವೆಂದೂ ಸಹ ರುಜುವಾತು ಬಂದಿತು. ಆದುದರಿಂದ ಇವಳಿಗೆ ಪ್ರತ್ಯೇಕ ಜೀವನಾಂಶವನ್ನು ಹೊಂದಲು ಹಕ್ಕಿಲ್ಲವೆಂತಲೂ, ಅವಳು ತನ್ನ ಭಾವನ ಮನೆಯಲ್ಲಿ ವಾಸಮಾಡಲಿಕ್ಕೆ ಇಷ್ಟಪಟ್ಟಲ್ಲಿ, ಅವಳಿಗೆ ಭಾವನು ಅನ್ನಬಟ್ಟೆಯನ್ನು ಕೊಡಲು ಬದ್ಧನಾಗಿರುತ್ತಾನೆಂತಲೂ ತೀರ್ಮಾನಯಿತು. ಪ್ರೈ. ಚೀಕೋ. ೨. ಲ ವಾ ೧೨೭. ಗಂಡನು ಹೆಂಡತಿಗೆ ಸಹಿಸಲಸಾಧ್ಯವಾದ ಹಿಂಸೆಯನ್ನುಮಾಡಿದರೂ, ಗಂಡನು ಜಾತಿಭ್ರಷ್ಟನಾದರೂ, ಹೆಂಡತಿಗೆ ಪ್ರತ್ಯೇಕವಾಗಿ ಜೀವನಾಂಶವನ್ನು ಕೊಡಲು ಬದ್ಧನಾಗುತ್ತಾನೆ.

ಜೀವನಾಂಶದ ಸ್ವತ್ತಿನಮೇಲೆ ಇರುವ ಉತ್ತರಾಧಿಕಾರ—ಜೀವನಾಂಶಕ್ಕೆ ಅರ್ಹರಾದವರು ಯಾವ ಆಸ್ತಿಯಿಂದ ಜೀವನಾಂಶವನ್ನು ಹೊಂದಬೇಕೋ, ಅಂಥ ಆಸ್ತಿಯನ್ನು ಆಸ್ತಿಯ ಮಾಲೀಕರು ದಾನವಾಗಾದರೂ ವಿಲ್ಲು ಮೂಲಕವಾಗಾದರೂ ಪರಾಧೀನ ಮಾಡಿಬಿಟ್ಟರೆ, ಆಸ್ತಿ ತೆಗೆದುಕೊಂಡವರ ವಶದಲ್ಲಿಯೂ ಅದು ಆ ಜೀವನಾಂಶಕ್ಕೆ ಗುರಿಯಾಗಿಯೇ ಇರುವುದು. ಜೀವನಾಂಶದ ಹಕ್ಕಿಗೆ ಮೋಸ ಮಾಡಬೇಕೆಂಬ ಉದ್ದೇಶದಿಂದ ಆಸ್ತಿಯ ಮಾಲೀಕನು ಸರಿಯಾದ ಪ್ರತಿಫಲಕ್ಕೆ ಕ್ರಯ ಮೊದಲಾದ ವ್ಯವಹಾರಗಳ ಮೂಲಕ ಪರಾಧೀನ ಮಾಡಿದ್ದರೂ, ಅಂಥ ಮೋಸದ ಉದ್ದೇಶವನ್ನು ತಿಳಿದುಕೊಂಡು ಆ ಪ್ರಕಾರ ಆ ಆಸ್ತಿಯನ್ನು ಮತ್ತೊಬ್ಬನು ತೆಗೆದುಕೊಂಡಲ್ಲಿ, ಜೀವನಾಂಶದ ಜವಾಬ್ದಾರಿಯು ಆ ಆಸ್ತಿಯ ಮೇಲೆ ಇದ್ದೇ ಇರುವುದು. ಆದರೆ ಈ ತಿಳುವಳಿಕೆಯನ್ನು ರುಜುವಾತು ಮಾಡುವುದು ಬಹಳ ಕಷ್ಟ. ಆದುದರಿಂದ ಗಂಡ ಸತ್ತಕೂಡಲೆ ವಿಧವೆಯು ಕೋರ್ಟುಮೂಲಕ ಸ್ಥಿರಸ್ವತ್ತು ಈಡುಮಾಡಲ್ಪಟ್ಟ ಜೀವನಾಂಶದ ಡಿಕ್ರಿಯನ್ನು ಹೊಂದುವುದೂ, ಅಥವ ಅನ್ಯೋನ್ಯತಃ ಸ್ಥಿರಸ್ವತ್ತು ಈಡುಮಾಡಲ್ಪಟ್ಟ ಜೀವನಾಂಶದ ಪತ್ರವನ್ನು ಬರಸಿಕೊಳ್ಳುವುದೂ ಉತ್ತಮವಾದ ಕೆಲಸವಾಗಿರುವುದು.

ಜೀವನಾಂಶವನ್ನು ಕೊಡಿಸುವಾಗ, ಬಡ್ಡಿ ಇತ್ಯಾದಿ ಉತ್ಪತ್ತಿಯುಂಟಾಗದಿರುವ ನಗಗಳೇ ಮೊದಲಾದ ಸ್ತ್ರೀಧನವನ್ನು ಲಕ್ಷ್ಯಕ್ಕೆ ತೆಗೆದು

ಕೊಳ್ಳುವುದಿಲ್ಲ — ಜೀವನಾಂಶವನ್ನು ಕೇಳುವ ವಿಧವೆಯಲ್ಲಿ ಅವಳ ಸ್ತ್ರೀಧನದ ಬಾಬತು ಹೆಚ್ಚು ಬೆಲೆಬಾಳುವ ನಗಗಳಿವೆ ಎಂಬ ಕಾರಣದ ಮೇಲೆ ಅವಳಿಗೆ ಜೀವನಾಂಶವನ್ನು ಕೊಡುವ ಭಾರದಿಂದ ತಪ್ಪಿಸಿಕೊಳ್ಳಲಾಗುವದಿಲ್ಲ. ಮನೆತನದ ಸ್ಥಿತಿ, ಘನತೆ, ಮನೆಯ ಆಸ್ತಿ, ಜೀವನಾಂಶವನ್ನು ಕೇಳುವವರ ಘನತೆ, ಅವಶ್ಯಕತೆ ಮೊದಲಾದ ಸಂಗತಿಗಳನ್ನು ಆಲೋಚಸಿ ಕೋರ್ಟಿನವರು ಜೀವನಾಂಶವನ್ನು ಗೊತ್ತುಮಾಡುವರು. ವಿಧವೆಗೆ ಅವಳ ಗಂಡನ ಹಿಸ್ಸೆಯ ಆಸ್ತಿಯ ಉತ್ಪತ್ತಿಗಿಂತ ಹೆಚ್ಚಾದ ಜೀವನಾಂಶವನ್ನು ಕೋರ್ಟಿನವರು ಕೊಡಿಸುವುದಿಲ್ಲ. ಇಷ್ಟೇ ಜೀವನಾಂಶವನ್ನು ಕೊಡಬೇಕೆಂದು ಡಿಕ್ರಿ ಕೊಟ್ಟನಂತರ, ಜೀವನಾಂಶವನ್ನು ಕೊಡತಕ್ಕವನು ಹೀನಸ್ಥಿತಿಗೆ ಬಂದರೆ, ಇವನ ಪ್ರಾರ್ಥನೆಯಮೇಲೆ ಕೋರ್ಟಿನವರು ಡಿಕ್ರಿಯಲ್ಲಿ ಕೊಡಿಸಿರುವ ಜೀವನಾಂಶವನ್ನು ಕಡಮೆ ಮಾಡುವರು. ಆದರೆ ತನ್ನ ತಪ್ಪಿನಿಂದ ಆಸ್ತಿಯನ್ನು ಕಳೆದುಕೊಂಡರೆ, ಜೀವನಾಂಶವನ್ನು ಕಡಮೆಮಾಡುವುದಿಲ್ಲ. ಜೀವನಾಂಶಕ್ಕೆ ಹಕ್ಕುದಾರರಾಗಿರುವವರು ಜೀವನಾಂಶ ಕೊಡಬೇಕಾದವರನ್ನು ತಗಾದೆ ಮಾಡಿ, ಅವರಿಂದ ಜೀವನಾಂಶವನ್ನು ಹೊಂದದಿದ್ದರೆ, ಹಿಂದಣ ಬಾಕೀ ಜೀವನಾಂಶವನ್ನು ಹೊಂದಲು ಅರ್ಹರಾಗುತ್ತಾರೆ. ಹಾಗೆ ತಗಾದೆಯನ್ನು ಮಾಡದೆಯೂ, ಜೀವನಾಂಶವನ್ನು ಹೊಂದಲು ಅಪೇಕ್ಷೆ, ಅಥವ ಅವಶ್ಯಕತೆ ಇದೆ ಎಂಬುವುದನ್ನು ತೋರಿಸದೆಯೂ ಇದ್ದು, ಬಳಿಕ ಹಿಂದಣ ಜೀವನಾಂಶಕ್ಕೆ ದಾವಾತಂದರೆ ಅದನ್ನು ಕೋರ್ಟಿನವರು ಕೊಡಿಸುವುದಿಲ್ಲ.

ಜೀವನಾಂಶದ ಪತ್ರ—೧ನೇ ವಿಧ,

ಸಕ ...ರಲ್ಲು... ವಾಸುದೇವರಾಯನು ಸುಬ್ಬಮ್ಮನವರಿಗೆ ಬರೆದುಕೊಟ್ಟ ಜೀವನಾಂಶದ ಪತ್ರವೇನೆಂದರೆ— ನಿಮ್ಮ ಯಜಮಾನರು ಮೃತಿಯಾದ ಭೀಮಯ್ಯನವರು ಖಾಸಾ ಅಣ್ಣಂದಿರಾಗಿ ನಾವಿಬ್ಬರೂ ಅವಿಭಕ್ತರಾಗಿದ್ದುದು ಸರಿಯಷ್ಟೆ. ನಿಮ್ಮ ಜೀವನಾಂಶಕ್ಕೋಸ್ಕರ ನೀವು ನನ್ನನ್ನು ಈಗ ತಗಾದೆ ಮಾಡುವುದರಿಂದ ನಾನು ಒಪ್ಪಿಕೊಂಡಿರುವುದೇನೆಂದರೆ— ನಿಮ್ಮ ಜೀವಮಾನದವರೆಗೂ ಸಾಲೀಯಾನಾ ೫೦ ರೂ. ನಂತೆ ನಿಮಗೆ ಜೀವನಾಂಶವನ್ನು ಕೊಡಲು ಒಪ್ಪಿರುತ್ತೇನೆ. ಇದರಿಂದಲೇ ನೀವು ನಿಮ್ಮ ಅನ್ನ ಬಟೆ ವಾಸ ಮೊದಲಾದ ಅನುಕೂಲ್ಯಗಳನ್ನು ಮಾಡಿಕೊಳ್ಳಬೇಕು. ಇದುಹೊರತು ನನ್ನಿಂದ ನಿಮಗೆ ಮತ್ತೇನೂ ಸಲ್ಲತಕ್ಕುದಿಲ್ಲ. ಈ ಲಾಗಾಯಿತು ವರ್ಷೇವರ್ಷೆ ಈ ಪತ್ರದ ಕಾಲಾವಧಿಯಲ್ಲಿ ನಿಮಗೆ ಸದರಿ ಮೊಬಲಗನು

ಕೊಡುತ್ತಾ ಬರುತ್ತೇನೆ. ಸದರಿ ಜೀವನಾಂಶದ ಖಾತರೀಬಗ್ಗೆ ಕೆಳಗೆ ಷೆಡ್ಯೂಲಿನಲ್ಲಿ ನಮೂದಾಗುವ ನನ್ನ ಬಾಬತು ಜಮೀನನ್ನು ನಿಮಗೆ ಈಡುಮಾಡಿ ಕೊಟ್ಟಿರುತ್ತೇನೆ ಎಂದು ನನ್ನ ಖುದ್ದುರಾಜಿಯಿಂದ ಬರೆದುಕೊಟ್ಟ ಜೀವನಾಂಶದ ಪತ್ರ.

(ಚಕ್ಕುಬಂದಿ.)

ಬರೆದುಕೊಟ್ಟವನ ರುಜು, ಸಾಕ್ಷಿಗಳ ರುಜು, ಲೇಖಕನ ರುಜುವು.

ಜೀವನಾಂಶದ ಪತ್ರ...೨ನೇ ವಿಧ.

(ಪ್ರಾರಂಭದ ವಕ್ಕಣೆಯು ಹಿಂದಣ ನಮೂನೆಯಂತೆ.)

....ಮಾಡುವುದರಿಂದ, ನಿಮ್ಮ ಜೀವನಾಂಶಕ್ಕಾಗಿ ಕೆಳಗೆ ಷೆಡ್ಯೂಲಿನಲ್ಲಿ ವಿವರಿಸುವ ಸುಮಾರು ೧,೦೦೦ ರೂಪಾಯಿ ಕ್ರಯಬಾಳುವ ಸಾಲಿಯಾನಾ ೨೫ ರೂಪಾಯಿ ಉತ್ಪತ್ತಿಯಾಗತಕ್ಕ ಹೊಲವನ್ನು ನಿಮ್ಮ ಸ್ವಾಧೀನ ಮಾಡಿರುತ್ತೇನೆ. ನಿಮ್ಮ ಜೀವಮಾನಪರ್ಯಂತ ಈ ಸ್ವತ್ತಿನ ಉತ್ಪತ್ತಿಯಿಂದ ನೀವು ಜೀವನಮಾಡಿಕೊಂಡು ಹೋಗುವುದು. ಆದರೆ ಇವನ್ನು ಯಾವ ವಿಧವಾಗಿಯಾದರೂ ಪರಭಾರೆ ಮಾಡಲು ನಿಮಗೆ ಹಕ್ಕಿಲ್ಲ. ನಿಮ್ಮ ಜೀವಮಾನಾನಂತರ ಇದು ನನಗಾಗಲಿ ನನ್ನ ವಾರಸುದಾರರಿಗಾಗಲಿ ಸೇರಬೇಕು. ಎಂದು ನಾನು ಮನಃಪೂರ್ವಕವಾಗಿ ಬರೆದುಕೊಟ್ಟ ಜೀವನಾಂಶದ ಪತ್ರ.

ಷೆಡ್ಯೂಲ್—ಚಕ್ಕುಬಂದಿ; ಬರೆದುಕೊಟ್ಟವನ, ಸಾಕ್ಷಿಗಳ, ಲೇಖಕನ ರುಜುಗಳು ೧ನೇ ನಮೂನೆಯಂತೆ.

ಟಿಪ್ಪಣಿ.

ಸ್ಟಾಂಪು— ವರ್ಷೆವರ್ಷೆ ಅಥವ ತಿಂಗಳು ತಿಂಗಳಿಗೆ ಅಥವ ಇತರ ಗೊತ್ತಾದ ಕಾಲಗಳಲ್ಲಿ ಖಿಸ್ತುವಾರಾಗಿ ಮೊಬಲಗನ್ನು ಕೊಡಲು ಬರೆದು ಕೊಡುವ ಪತ್ರಕ್ಕೆ ಈ ಮೇರೆ ಸ್ಟಾಂಪು ಹಾಕಬೇಕು—

೧. ಎಷ್ಟುಕಾಲ ಕೊಡುತ್ತಾ ಬರಬೇಕೊ ಆ ಕಾಲವು ನಿರ್ಧರಿಸಲ್ಪಡುವುದಾದರೆ ಆ ಕಾಲದವರೆಗೆ ಎಷ್ಟು ಕಿಸ್ತುಗಳು ಕೊಡಬೇಕಾಗುವದೋ ಆ ಕಿಸ್ತುಗಳ ಒಟ್ಟು ಮೊಬಲಗಿನ ಮೇಲೆ ಮೈಸಾಲದ ಪತ್ರದಂತೆ ಸ್ಟಾಂಪು ಹಾಕಬೇಕು, (ಮಸಲ—ವರ್ಷ ೧ಕ್ಕೆ ೨೫ ರೂ. ನಂತೆ ೬ ವರ್ಷ ಕೊಡುತ್ತೇನೆಂದು ಬರೆದುಕೊಡುವ ಪತ್ರಕ್ಕೆ ಆ ಕಾಲದವರೆಗೂ ಕೊಡಬೇಕಾಗುವ ಒಟ್ಟು ನೊಗಲಗು [೨೫+೬=] ೧೫೦ ರೂ. ಆಗುವದರಿಂದ ಇದಕ್ಕೆ ೧ ರೂ. ಸ್ಟಾಂಪು ಹಾಕಬೇಕು.

೨. ಪತ್ರ ಹುಟ್ಟಿದಾಗ ಇರುವ ಮನುಷ್ಯನು ಬದುಕಿರುವ ತನಕ ಖಿಸ್ತುಗಳನ್ನು ಕೊಡುತ್ತೇನೆಂದು ಬರೆದುಕೊಡುವ ಜೀವನಾಂಶದ ಪತ್ರದಂತಹ ಪತ್ರಕ್ಕೆ ೧೨ ವರ್ಷಕ್ಕೆ ಕೊಡಬೇಕಾಗಿರುವದು ಒಟ್ಟು ಎಷ್ಟಾಗುತ್ತದೋ ಅದರಮೇಲ ಮೇಲಿನಂತೆ ಲೆಕ್ಕಿಸಿ ಸ್ಟಾಂಪು ಕೊಡಬೇಕು. (ಮಸಲ—ಮೇಲೆ ಕಂಡ ನಮೂನೆಯ ಜೀವನಾಂಶದ ಪತ್ರಕ್ಕೆ (೨೫+೧೨=) ೩೦೦ ರೂ. ಗೆ ತಕ್ಕ ೧—೮—೦ ಸ್ಟಾಂಪು ಅವಶ್ಯ.]

ಸಾಲಗಳು--ಸಾಲಗಳಲ್ಲಿ ಅನೇಕ ವಿಧಗಳುಂಟು. ಸ್ವಂತ ಜವಾಬ್ದಾರಿ ಮೇಲೆ ಪಡೆಯುವ ಕೈಸಾಲ ಮೈಸಾಲಗಳೆಂತಲೂ ಸ್ವತ್ತನ್ನು ಆಧಾರ, ಭೋಗ್ಯ, ಅಡವು, ಪರಾಧೀನ ಮುಂತಾದ ಸಾಲಗಳೆಂತಲೂ ಸಂಸೃಷ್ಟ ಕುಟುಂಬದ ಸಾಲವೆಂತಲೂ ಜೂಜುಗಾರಿಕೆ ಹಾದರ ಮುಂತಾದುದಕ್ಕೆ ಪಡೆದ ಸಾಲವೆಂತಲೂ ಸ್ವಂತ ವ್ಯಾಪಾರದ ಸಾಲವೆಂತಲೂ ಪಾಲಿನ ವ್ಯಾಪಾರದ ಸಾಲವೆಂತಲೂ ಛತ್ರ, ದೇವಸ್ಥಾನ, ಕೆರೆ, ಕುಂಟೆ, ತೋಪು, ವಿದ್ಯಾರ್ಥಿವೇತನ ಮುಂತಾದ ಧರ್ಮ ಕಾರ್ಯಕ್ಕೆ ಮಾಡಿದ ಸಾಲವೆಂತಲೂ ಹೀಗೆ ಸಾಲಗಳು ಅನೇಕ ವಿಧವಾಗಿರುವದು. ಇಂತಹ ಸಾಲಗಳಿಗೆ ಯಾರ್ಯಾರು ಮತ್ತು ಯಾವ ಯಾವ ಸ್ವತ್ತುಗಳು ಎಷ್ಟು ಮಟ್ಟಿಗೆ ಜವಾಬದಾರರಾಗಿರುವರೋ ಅದು ಸಕಲರಿಗೂ ತಿಳಿದು ಇರಬೇಕಾದುದು ಅವಶ್ಯಕವಾದುದು ಸಾಲಗಳಲ್ಲಿ ಪತ್ರಗಳು ಬರೆಯುವಾಗ ಯಾವ ಯಾವ ಒಡಂಬಡಿಕೆಗಳನ್ನು ಮಾಡಿಕೊಳ್ಳುತ್ತಾರೋ ಆ ಒಡಂಬಡಿಕೆಗಳಿಗೆ ಸಾಲ ಕೊಟ್ಟವನು ಮತ್ತು ತೆಗೆದುಕೊಂಡವನೂ ಸಹ ಬದ್ಧನಾಗಿರಬೇಕು.

ಸಾಲಗಳನ್ನು ಮಾಡಿದವನೂ ಅವನ ಆಸ್ತಿಯೂ ಅವನ್ನು ತೀರಿಸಲಿಕ್ಕೆ ಗುರಿಯಾಗುವ ಅಂಶವನ್ನು ಪ್ರತ್ಯೇಕವಾಗಿ ಹೇಳಲೇ ಕೆಲಸವಿಲ್ಲ. ಮೈನರಲ್ಲದವನು ಎಂಥಾ ಸಾಲಗಳನ್ನು ಯಾತಕ್ಕೋಸ್ಕರ ಮಾಡಿಕೊಂಡಾಗ್ಯೂ ಕಾಲಾವಧಿ ಮೀರಿ ಹೋಗದೆ ಇರುವ ಪಕ್ಷದಲ್ಲಿ ಅವನ್ನು ಅವನು ಕೊಟ್ಟೇತೀರಬೇಕು. ಆದರೆ ಕೆಲವು ಸಮಯಗಳಲ್ಲಿ ಒಬ್ಬರು ಮಾಡಿದ ಸಾಲಗಳನ್ನು ಮತ್ತೊಬ್ಬರು ತೀರಿಸಬೇಕಾಗಿ ಬರುವದು. ಇಂಥಾ ಸಂದರ್ಭಗಳು ಯಾವವೆಂದರೆ.—ಒಬ್ಬನ ಕೆಲಸಕ್ಕಾಗಿ ಸರಿಯಾಗಿ ಅಧಿಕಾರವನ್ನು ಹೊಂದಿರುವ ಮತ್ತೊಬ್ಬನು ನ್ಯಾಯವಾದ ಸಾಲಗಳನ್ನು ಮಾಡಿದ್ದರೆ ಯಜಮಾನನು ಈ ಸಾಲಗಳನ್ನು ತೀರಿಸಲು ಬದ್ಧನಾಗುವನು ಸಮಷ್ಟಿ ಕುಟುಂಬದಲ್ಲಿ ಕುಟುಂಬದ ಕೆಲಸಗಳನ್ನು ನಡಿಸಲು ಕಾರ್ಯಕರ್ತನಾದವನಾಗಲಿ ಮತ್ತೊಬ್ಬನಾಗಲಿ ಸಾಲವನ್ನು ಮಾಡಿದರೆ ಅದನ್ನು ಕೊಡುವದಕ್ಕೆ ಕುಟುಂಬದವರೆಲ್ಲರೂ ಬದ್ಧರು. ಕುಟುಂಬದ ಆಸ್ತಿಯಿಂದ ಅದನ್ನು ಬರ

ಮಾಡಿಸಿಕೊಳ್ಳಬಹುದು. ಗಂಡನು ಊರಲ್ಲಿಲ್ಲದೆ ಇರುವದರಿಂದಲೋ ಅಥವಾ ಇತರ ಕಾರಣಗಳಿಂದಲೋ ಮನೆಗೆ ಅಗತ್ಯವಾದ ಖರ್ಚುಗಳಿಗೋಸ್ಕರ ಕಿರಿಕಿರಿಯುಂಟಾದಾಗ ಹೆಂಡತಿಯು ಸ್ವತಂತ್ರಿಸಿ ಸಾಲವನ್ನು ಮಾಡಬಹುದು. ಅಂಥಾ ಸಾಲಗಳನ್ನು ಗಂಡನು ತೀರಿಸಬೇಕು. ಇಂಥಾ ಸಂದರ್ಭಗಳಲ್ಲಿಯೇ ಶಿಷ್ಯ ಸೇವಕ ಮುಂತಾದ ಯಾರು ತಮ್ಮ ಯಜಮಾನನ ಗೃಹಕೃತ್ಯಕ್ಕೋಸ್ಕರ ಸಾಲವನ್ನು ಮಾಡಿದರೂ, ಆ ಸಾಲವನ್ನು ಗುರುವೂ ಯಜಮಾನನೂ ಕೊಡಬೇಕಾಗುವದು. ಇಂಥವುಗಳಲ್ಲದೆ ಇತರ ಸಂದರ್ಭಗಳಲ್ಲಿ, ಒಬ್ಬರು ಮಾಡಿದ ಸಾಲಗಳನ್ನು ಮತ್ತೊಬ್ಬರು ಕೊಡಬೇಕೆಂಬ ನಿರ್ಬಂಧವಿಲ್ಲ. ಸಾಧಾರಣವಾಗಿ, ಮಗನು ಮಾಡಿಕೊಳ್ಳುವ ಸಾಲಗಳಿಗೆ ತಂದೆಯು ಜವಾಬ್ದಾರನಾಗುವದಿಲ್ಲ; ಹೆಂಗಸು ಮಾಡಿದ ಸಾಲಗಳಿಗೆ, ಆಕೆಯ ಗಂಡನೂ ಮಗನೂ ಗುರಿಯಾಗುವದಿಲ್ಲ. ಕುಟುಂಬಕ್ಕೆ ಸೇರಿದವರಲ್ಲಿ ಒಬ್ಬನು ತನ್ನ ಸ್ವಂತಕ್ಕಾಗಿ ಮಾಡಿಕೊಂಡ ಸಾಲವು ಕುಟುಂಬದ ಆಸ್ತಿಯಮೇಲಾಗಲಿ, ಅಥವಾ ಇತರ ಭಾಗಹಾರಿಗಳ ಮೇಲಾಗಲಿ, ಬೀಳುವದಿಲ್ಲ.

ಸಾಲಕ್ಕೆ ಈಡಾದ ಸ್ವತ್ತಿನ ಜವಾಬ್ದಾರಿ— ಸಾಧಾರಣವಾಗಿ ಒಬ್ಬ ಮನುಷ್ಯನಿಗೆ ಮತ್ತೊಬ್ಬನು ಸಾಲವಾಗಿ ಹಣವನ್ನು ಕೊಡಬೇಕಾದರೆ, ಅವನ ಆಸ್ತಿಯನ್ನು ನೋಡಿ, ಅದರಿಂದ ತನ್ನ ಸಾಲದ ಹಣವು ತನಗೆ ಪುನಃ ಬರುವದೆಂಬ ನಿಶ್ಚಯದೊಡನೆಯೂ, ಆ ಮನುಷ್ಯನ ಹಿತಬಾರಿಯೆಂಬ ವಿಶ್ವಾಸ್ಯತೆಯನ್ನು ನೋಡಿಕೊಂಡು ಕೊಡುತ್ತಾನೆ ಸಾಲ ತೆಗೆದುಕೊಂಡವನು ಜೀವಂತನಾಗಿರುವವರಿಗೂ, ಈ ಎರಡು ವಿಧವಾದ ಭರವಸೆಯೂ ಹಣ ಕೊಟ್ಟವನಿಗೆ ಇರುವದು. ಆದರೆ ಸಾಲಗಾರನು ಸತ್ತತರುವಾಯ, ಅವನ ಹಿತಬಾರಿಯ ಬಲವು ತಪ್ಪಿಹೋಗಿ ಆಸ್ತಿಯೊಂದೇ ಆಧಾರವಾಗಿ ಉಳಿಯುವದು. ಆದ್ದರಿಂದ ಈ ಸಾಲಕ್ಕೆ ಗುರಿಯಾದ ಆಸ್ತಿಯನ್ನು ಯಾರು ಪಡೆಯುವರೋ, ಆ ಸಾಲವನ್ನು ತೀರಿಸಿಕೊಡತಕ್ಕ ಭಾಗವೂ ಅವರನ್ನೇ ಹೊಂದಿರುವುದು. ಇದು ಸರಿಯೇ; ಯಾಕೆಂದರೆ, ಮೃತನಾದವನು ತನ್ನ ಆಸ್ತಿಯನ್ನು ಮಾರಿ ಸಾಲವನ್ನು ತೀರಿಸಿಕೊಳ್ಳಬಹುದಾಗಿತ್ತು; ಹಾಗೆ ಮಾಡಿದ್ದರೆ, ಅವನ ವಾರಸ್ದಾರರಿಗೆ ಬರುವ ಆಸ್ತಿಯು ಕಡಮೆಯಾಗುತ್ತಿತ್ತಲ್ಲವೆ? ಆದರೆ ಈ ವಾರಸ್ದಾರರು ತಮಗೆ ಸೇರಿದ ಆಸ್ತಿಗಿಂತ ಹೆಚ್ಚಾದ ಸಾಲಗಳನ್ನು ತೀರಿಸಕೆಲಸವಿಲ್ಲ. ವಾರಸ್ದಾರರಾಗಿದ್ದು ಆಸ್ತಿಯಾವದನ್ನೂ ಪಡೆಯದಿದ್ದರೆ, ಗಂಡಹೆಂಡರುಕೂಡ ಒಬ್ಬರ ಸಾಲವನ್ನು ಮತ್ತೊಬ್ಬರು ಕೊಡಕೆಲಸವಿಲ್ಲ. ಮೃತನಾದವನ ಆಸ್ತಿಯೆಲ್ಲಾ ಅವನಿಗೆ ಯಾರೂ ವಾರಸ್ದಾರರಿಲ್ಲದ್ದರಿಂದ, ಸರ್ಕಾರಕ್ಕೆ ಸೇರಿಹೋದರೂ,

ಸರ್ಕಾರದವರೂಕೂಡ ಅವನ ಸಾಲಗಳನ್ನು ಕೊಟ್ಟುಬಿಟ್ಟು ಉಳಿಯು ವದನ್ನೇ ತೆಗೆದುಕೊಳ್ಳಬೇಕು. ವಾರಸ್ದಾರರೆಂಬ ಹಕ್ಕಿಲ್ಲದೆ ಯಾರಾದರೂ ಮೃತನಾದವನ ಆಸ್ತಿಯನ್ನು ಆಕ್ರಮಿಸಿಕೊಂಡರೆ, ಸಾಲ ಕೊಟ್ಟಿರುವವರು ಆ ಆಸ್ತಿ ಎಷ್ಟು ಬಾಳುವದೋ ಅಷ್ಟು ಹಣವನ್ನು ಅವರಿಂದ ಬರಮಾಡಿಕೊಳ್ಳಬಹುದು.

ಸತ್ತವನ ಸಾಲ—ಸತ್ತುಹೋದವನ ಸಾಲಗಾರರು ಅವನ ಆಸ್ತಿಯು ಮತ್ತೊಬ್ಬರ ವಶಕ್ಕೆ ಬಂತೆಂಬ ಕಾರಣದಿಂದ, ಅಂಥವರಮೇಲೆ ಫಿರ್ಯಾದು ಮಾಡಿದರೆ, ಅವರು ತಮಗೆ ಆಸ್ತಿಯೇನೂ ಸೇರಲಿಲ್ಲವೆಂದಾಗಲಿ, ಸೇರಿರುವದು ಸಾಲಕ್ಕೆ ಸಾಲದೆಂದಾಗಲಿ ಅಥವಾ ಆವಶ್ಯಕವಾದ ಖರ್ಚುಗಳಿಗೆ ಅಂದರೆ ಶ್ರಾದ್ಧಮಾಡೋಣ, ಇತರ ಸಾಲಗಳನ್ನು ಕೊಡುವಣವೇ ಮೊದಲಾದವುಗಳಿಗೆ ಲಭಿಸಿದ ಆಸ್ತಿಯು ಆಗಿಹೋಯಿತೆಂದಾಗಲಿ, ದೃಢಪಡಿಸಿದರೆ ಈ ಹೊಸಫಿರ್ಯಾದಿನ ಸಾಲಕ್ಕೆ ಅವರು ಜಾವಾಬ್ದಾರರಾಗುವದಿಲ್ಲ. ಆದರೆ ಲಭಿಸಿದ ಆಸ್ತಿಯನ್ನು ತಮ್ಮ ಸ್ವಂತಕ್ಕೆ ಎಷ್ಟುಮಟ್ಟಿಗೆ ಉಪಯೋಗಿಸಿಕೊಂಡಿರುವರೋ, ಅಷ್ಟುಮಟ್ಟಿಗೆ ವಾರಸ್ದಾರರು ಆ ಆಸ್ತಿಗೆ ಸಂಬಂಧಪಟ್ಟ ಸಾಲಗಳಿಗೂ ಸ್ವತಃ ಜವಾಬ್ದಾರರಾಗುವರು. ಆಸ್ತಿಯು ಸಾಲಗಳಿಗೆ ಗುರಿಯಾಗುವದನ್ನು ತಪ್ಪಿಸಬೇಕೆಂಬ ಉದ್ದೇಶದಿಂದ ಯಾರಾದರೂ ಕ್ರಯಭೋಗ್ಯ ಮುಂತಾದ ಮಾರ್ಗಗಳಲ್ಲಿ ಅದನ್ನು ಪಡೆದುಕೊಂಡರೆ, ಸಾಲ ಕೊಟ್ಟಿರುವವರು ಆ ಆಸ್ತಿಯಿಂದಲೇ ತಮ್ಮ ಸಾಲಗಳನ್ನು ಬರಮಾಡಿಸಿಕೊಳ್ಳಬಹುದು. ಆದರೆ, ಮೃತಿಹೊಂದಿದವನ ಆಸ್ತಿಯನ್ನು ನ್ಯಾಯವಾದ ಮಾರ್ಗದಲ್ಲಿ ಇತರರಿಗೆ ವಿನಿಯೋಗಮಾಡಿಬಿಟ್ಟತರುವಾಯ ಆ ಸೊತ್ತಿನಗೋಜಿಗೆ ಸಾಲ ಕೊಟ್ಟಿರುವಾತನು ಹೋಗುವದಕ್ಕಿಲ್ಲ. ಆದರೆ ಯಾವಸೊತ್ತಾದರೂ ಸಾಲಕ್ಕೆ ಭೋಗ್ಯ, ಆಧಾರ, ಜಪ್ತಿ ಮುಂತಾದ ವಿಧಗಳಲ್ಲಿ ಈಡಾಗಿದ್ದರೆ, ವಾರಸ್ದಾರನು ಯಾವ ಮಾರ್ಗದಲ್ಲಿಯೂ ಆ ಸೊತ್ತಿಗಿರುವ ಸಾಲದ ಭಾರವನ್ನು ತಪ್ಪಿಸಲಾರನು.

ಮಗನ ಸ್ವಂತ ಸಾಲ— ಸಮಷ್ಟಿ ಕುಟುಂಬದ ಆಸ್ತಿಯಲ್ಲಿ ಅಣ್ಣತಮ್ಮಂದರು ಮುಂತಾದ ವಾರಸ್ದಾರರೆಲ್ಲರಿಗೂ ಬಾಧ್ಯತೆಯುಂಟೆಂದು ಮೊದಲೇ ಹೇಳಿದೆಯಷ್ಟೆ. ಮೇಲೆ ಹೇಳಿರುವಪ್ರಕಾರ ಒಟ್ಟು ಕುಟುಂಬದಲ್ಲಿ ಯಾರಾದರೂ ಭಾಗಹಾರಿಗಳು ಸತ್ತರೆ ಅವರಿಗೆ ಆಸ್ತಿಗಿದ್ದ ಹಕ್ಕು ಯಾವತ್ತೂ ಇತರರದಾಗುವದೇಹೊರತು ಸತ್ತವರದಾಗಿಯೇ ಏನೂ ಉಳಿಯುವದಿಲ್ಲ. ಆದ್ದರಿಂದ ತಂದೆ ಮಕ್ಕಳು ಒಟ್ಟಿಗಿದ್ದು ಮಗನೊಬ್ಬನು ಸ್ವಂತಕ್ಕೆ ಸಾಲಮಾಡಿ ಸತ್ತುಹೋದ ತರುವಾಯ, ಕುಟುಂಬದ ಆಸ್ತಿಯಲ್ಲಿ ಅವನಿಗಿದ್ದ ಹಕ್ಕಿನಿಂದ ಸಾಲಗಾರನು ತನಗೆ ಬರತಕ್ಕದ್ದನ್ನು ಬರಮಾಡಿ

ಸಿಕೊಳ್ಳುವದಕ್ಕಿಲ್ಲ. ಸಾಲಮಾಡಿಕೊಂಡ ಮಗನು ತಾನು ಸಾಯುವದಕ್ಕೆ
ಮುಂಚೆ ತನ್ನ ಹಕ್ಕನ್ನು ಸಾಲಕ್ಕೋಸ್ಕರ ಕ್ರಯ ಭೋಗ್ಯಾದಿಗಳನ್ನು
ಮಾಡಿಕೊಟ್ಟಿದ್ದರೆ, ಅವನ ಸಾಲದ ಬಾಧ್ಯತೆಯು ಆಗ ಕುಟುಂಬದ ಆಸ್ತಿ
ಗೆ ತಪ್ಪುವದಿಲ್ಲ. ಅದೇಪ್ರಕಾರ ಮಗನು ಬದುಕಿದ್ದಾಗಲೇ ಅವನ ಮೇಲೆ
ದಾವಾಮಾಡಿ ಸಾಲಗಾರನು ಫೈಸಲು ಪಡೆದು ಅವನ ಹಕ್ಕನ್ನು ಜಪ್ತೀ
ಮಾಡಿಸಿದ್ದರೆ, ತರುವಾಯ ಮಗನು ಸತ್ತುಹೋದರೂ, ಸಾಲಗಾರನು
ತನಗೆ ಬರತಕ್ಕ ಸಾಲವನ್ನು ಸತ್ತವನಿಗೆ ಸೇರುತ್ತಿದ್ದ ಆಸ್ತಿಯಿಂದ ಬರ
ಮಾಡಿಸಿಕೊಳ್ಳಬಹುದು. ಒಟ್ಟಿಗಿರುವವರಲ್ಲಿ ಅಣ್ಣತಮ್ಮಂದರೇ ಮುಂತಾ
ಗಿ ಸಮಷ್ಟಿ ಕುಟುಂಬದವರು ಯಾರು ಸಾಲಮಾಡಿ ಸತ್ತರೂ, ಮೇಲಿನಂ
ತೆಯೇ ನ್ಯಾಯವು ನಡೆಯುವದು. ವ್ಯ॥ ದೀ॥

ಸಾಲದ ಭಾರ—ಪಿತ್ರಾರ್ಜಿತವಾದ ಆಸ್ತಿಯಲ್ಲಿ ತಂದೆಗೆ ಎಷ್ಟುಮಟ್ಟಿ
ಗೆ ಬಾಧ್ಯತೆಯೋ. ಗಂಡುಮಕ್ಕಳಿಗೂ ಅಷ್ಟೇ ಎಂಬುದನ್ನು ಮೊದಲೇ
ತಿಳಿಸಿದೆಯಷ್ಟೆ. ಆದರೆ ಸಾಲಗಳ ವಿಷಯದಲ್ಲಿ ತಂದೆಗೆ ಈ ಸೊತ್ತಿನ
ಮೇಲೆ ಸರ್ವಸ್ವಾತಂತ್ರ್ಯವನ್ನುಂಟುಮಾಡಿದಾರೆ. ನಮ್ಮವರ ಧರ್ಮಶಾ
ಸ್ತ್ರಪ್ರಕಾರ ಋಣಕ್ಕೊಳಗಾಗುವದು ಮಹಾಪಾತಕವಾದುದರಿಂದ, ಅದನ್ನು
ತಪ್ಪಿಸಿಕೊಳ್ಳುವದು ಅತ್ಯವಶ್ಯಕವಾದ ಕೆಲಸವು. ಮನುಷ್ಯನಿಗೆ ಆಸ್ತಿ
ಇರುವದೂ, ಅವನಿಗೆ ಗಂಡುಮಕ್ಕಳಾಗುವದೂ— ಇವುಗಳ ಮುಖ್ಯಪ್ರ
ಯೋಜನವು ತನ್ನನ್ನು ಋಣಮುಕ್ತನನ್ನಾಗಿ ಮಾಡುವದೇ ಎಂಬ ಮತ
ಕ್ಕೆ ಅನುಸಾರವಾಗಿ, ಕುಟುಂಬದ ಆಸ್ತಿಯೆಲ್ಲಾ ಋಣಪರಿಹಾರಕ್ಕೆ ಗುರಿ
ಯಾಗುವದು. ಪೂರ್ವದ ಸ್ಮೃತಿವಚನಗಳ ಮೇರೆಗೆ ನೋಡಿದರೆ, ತಂ
ದೆಯು ಎಷ್ಟು ಸಾಲಗಳನ್ನು ಮಾಡಿದ್ದರೂ ಮಗನು ಅವನ್ನು ತೀರಿಸಲು
ಬದ್ಧನಾಗಿರುವನು. ಆದರೆ ಈಗಿನ ಕೋರ್ಟುಗಳ ಆಚರಣೆಯಪ್ರಕಾರ,
ಪಿತ್ರಾರ್ಜಿತವಾದ ಸೊತ್ತು ಮಗನಿಗೆ ಎಷ್ಟು ಬಂದಿರುವದೋ ಅದಕ್ಕಿಂತ
ಹೆಚ್ಚಾದ ಸಾಲಗಳನ್ನು ಅವನು ತೀರಿಸಬೇಕೆಂಬ ನಿರ್ಬಂಧವಿಲ್ಲ.

ವಿಭಾಗವಾದನಂತರ ಸಾಲ—ತಂದೆಯು ತಾನು ಜೀವಂತನಾಗಿರುವಾಗ
ತನ್ನ ಸಾಲಗಳಿಗೋಸ್ಕರ ಕುಟುಂಬದ ಸಮಷ್ಟಿ ಸೊತ್ತನ್ನು ಕ್ರಯವೋ
ಭೋಗ್ಯವೋ ಮಾಡಿ ತನ್ನಮಕ್ಕಳಿಗೆ ಅದರಲ್ಲಿರುವ ಹಕ್ಕೆಲ್ಲವನ್ನೂ ಇಲ್ಲ
ದಂತೆ ಮಾಡಿಬಿಡಹುದು. ಆದರೆ ಆತನು ಕಂಠೋಕ್ತವಾಗಿ ಕುಟುಂಬದ
ಸಂಪೂರ್ಣವಾದ ಆಸ್ತಿಯನ್ನು ಮಾರಬೇಕೆಂದು ಮಾರಿದಹೊರತು, ಮಕ್ಕ
ಳಿಗೆ ಆಸ್ತಿಯ ಹಕ್ಕು ತಪ್ಪಿಹೋಗುವದಿಲ್ಲ. ಇದಲ್ಲದೆ, ಆತನು ತನ್ನಹಕ್ಕ
ನ್ನುಮಾತ್ರ ಮಾರಿಕೊಂಡನೆಂದು ಸ್ಪಷ್ಟವಾಗಿ ಗೊತ್ತಾದಲ್ಲಿ, ಕೊಂಡ್ರ

ಕೊಂಡವನಿಗೆ ಮಾರಿದವನ ಭಾಗಕ್ಕಿಂತ ಹೆಚ್ಚಾದ ಸೊತ್ತು ಸೇರುವದಿಲ್ಲ. ತಂದೆಯು ಮಾಡಿದ ಸಾಲಕ್ಕೆ ಮಕ್ಕಳ ಸ್ವಾರ್ಜಿತವೆಂದಿಗೂ ಗುರಿಯಾಗಲಾರದು. ಮತ್ತು ತಂದೆ ಮಕ್ಕಳು ವಿಭಾಗ ಮಾಡಿಕೊಂಡು ಬೇರೆಬೇರೇ ಇರುವಾಗ ತಂದೆಯು ಸಾಲಮಾಡಿದರೆ ಮಗನು ಬೇರೆಯಾಗಿ ತನ್ನ ಭಾಗವೆಂದು ಅನುಭವಿಸಿಕೊಂಡು ಬರುವ ಕುಟುಂಬದ ಪಿತ್ರಾರ್ಜಿತವಾದ ಆಸ್ತಿಯನ್ನು ಸಾಲಕ್ಕಾಗಿ ಕೇಳಲು ತಂದೆಗಾಗಲಿ ಸಾಲ ಕೊಟ್ಟವನಿಗಾಗಲಿ ಅಧಿಕಾರವಿಲ್ಲ.

ತಂದೆ ಮಕ್ಕಳ ಸೊತ್ತಿನ ಮೇಲೆ ದಾವಾ—ಮಕ್ಕಳನ್ನು ಸ್ಪುಟವಾಗಿ ವಿವಾದಕ್ಕೊಳಗಾದವರನ್ನಾಗಿ ಮಾಡದೆ ತಂದೆಯ ಮೇಲೆ ಮಾತ್ರ ಮಾಡಿದ ದಾವಾಗಳಲ್ಲಿ ಮಕ್ಕಳ ಹಕ್ಕನ್ನೂ ಸೇರಿಸಿ ಪಿತ್ರಾರ್ಜಿತವಾದ ಸ್ವತ್ತನ್ನೆಲ್ಲ ಮೇಲೆ ತಿಳಿಸಿದ ಕಾರಣದಿಂದಲೇ ಮಾರಿಸಿಬಿಡಬಹುದು. ಆದರೆ ಸಾಲಗಾರನು ತಮಗೆ ಇಷ್ಟಬಂದಂತೆ ಈ ತಂದೆಯ ಭಾಗದ ಸೊತ್ತಿನಿಂದ ಮಾತ್ರವೇ ಆಗಲಿ ಅಥವ ಕುಟುಂಬದ ಸಂಪೂರ್ಣವಾದ ಆಸ್ತಿಯಿಂದಲಾಗಲಿ ತಮ್ಮ ಸಾಲವನ್ನು ಬರಮಾಡಿಸಿಕೊಳ್ಳಬಹುದಾದುದರಿಂದ ಯಾವ ಮೊಕದ್ದಮೆಯಲ್ಲಿ ಅವರು ಮಕ್ಕಳ ಹಕ್ಕನ್ನೂ ಸೇರಿಸಿ ದಾವಾ ಮಾಡಿರುವದಾಗಿ ಕಾಣಬರುವದಿಲ್ಲವೋ ಅಥವ ಸೊತ್ತು ಹರಾಜಾದಾಗ ತಂದೆಯ ಹಕ್ಕು ಮಾತ್ರ ಮಾರಲ್ಪಟ್ಟಿತೆಂದು ಯಾವಾಗ ಸ್ಪಷ್ಟವಾಗಿ ಕಾಣಬರುವದೋ ಅಂಥಾ ಸಂದರ್ಭಗಳಲ್ಲಿ ಮಕ್ಕಳಿಗೆ ಆಸ್ತಿಯಲ್ಲಿರುವ ಹಕ್ಕು ತಪ್ಪಿಹೋಗುವದಿಲ್ಲ ಕೋರ್ಟಿನವರ ಮೂಲಕವಾಗಿ ನಡೆಯುವ ಪ್ರತಿ ಹರಾಜಿನಲ್ಲಿಯೂ "ಸಾಲಕೊಡಬೇಕಾದವನ ಹಕ್ಕನ್ನೂ ಬಾಧ್ಯತೆಯನ್ನೂ ಮಾರುತೇವೆ" ಎಂದು ಕೋರ್ಟಿನವರು ಸಾರುತ್ತಾರೆ. ಇದರಿಂದಲೇ ತಂದೆಯ ಮೇಲೆ ಮಾತ್ರ ಫೈಸಲು ಹುಟ್ಟಿದಾಗ ಅವನ ಹಕ್ಕು ಮಾತ್ರವೇ ಹರಾಜಿನಲ್ಲಿ ಕೊಂಡುಕೊಂಡವನಿಗೆ ಸೇರಬೇಕೆಂದು ಊಹಿಸಕೂಡದು. ಎಷ್ಟು ಮಟ್ಟಿಗೆ ಆಸ್ತಿಯನ್ನು ಈ ಹರಾಜಿಗೆ ಗುರಿಪಡಿಸತಕ್ಕದ್ದೋ ಎಂಬುವದನ್ನು ದಾವಾ ಅರ್ಜಿ ಮೊದಲಾದ ನಡವಳಿಕೆಗಳನ್ನೆಲ್ಲ ನೋಡಿ ಸಂದರ್ಭಾನುಸಾರವಾಗಿ ವ್ಯವಸ್ಥೆ ಮಾಡಬೇಕಾಗಿರುವದು.

ನ್ಯಾಯವಾದ ಸಾಲ—ಹೀಗೆ ತಂದೆಯ ಸಾಲಕ್ಕೆ ಮಕ್ಕಳ ಭಾಗವೆಲ್ಲ ಗುರಿಯಾಗುವದು ನ್ಯಾಯವಾದ ಸಾಲಗಳಿಗೆ ಮಾತ್ರವೇ. ಜೂಜು ವ್ಯಭಿಚಾರ ಮುಂತಾದ ಕೆಟ್ಟ ಕೆಲಸಗಳಿಗೋಸ್ಕರ ತಂದೆಯು ಮಾಡಿದ ಸಾಲಗಳನ್ನು ತೀರಿಸಲು ಮಕ್ಕಳಿಗೆ ಆಸ್ತಿಯಲ್ಲಿರುವ ಭಾದ್ಯತೆಯನ್ನು ಗುರಿಪಡಿಸುವದಕ್ಕೆ ಆಗುವದಿಲ್ಲ. ಅಂಥಾ ಸಾಲಗಳನ್ನು ಕುಟುಂಬದ ಇತರ ಭಾಗ

ಸ್ತರು ತಮ್ಮ ಸ್ವಂತಕ್ಕೆ ಮಾಡಿಕೊಂಡ ಸಾಲಗಳನ್ನು ತೀರಿಸುವಂತೆಯೇ ತಂದೆಯು ತಾನೇ ತೀರಿಸಿಕೊಳ್ಳಬೇಕು. ತಂದೆಯು ಸಾಲದ ಹಣಕ್ಕೆ ದಾವಾ ಬಂದಾಗ ಮಕ್ಕಳು ಆ ಸಾಲವನ್ನು ಇಂಥಾ ಅನ್ಯಾಯ ಕಾರ್ಯಗಳಿಗೆ ತಮ್ಮ ತಂದೆಯು ಮಾಡಿದನೆಂದು ಹೇಳಿದರೆ ಈ ವಿಷಯವನ್ನು ಅವರೇ ರುಜುವಾತು ಮಾಡಬೇಕೇ ಹೊರತು ಅದು ನ್ಯಾಯವಾದ ಸಾಲವೆಂದು ಸಾಲ ಕೊಟ್ಟವರು ರುಜುವಾತು ಮಾಡಕೆಲಸವಿಲ್ಲ. ಮಕ್ಕಳನ್ನೂ ವಿವಾದ ಕ್ಕೊಳಗಾಗುವಂತೆ ಸೇರಿಸದೆ ತಂದೆಯ ಮೇಲೆ ಮಾತ್ರ ಒಬ್ಬನು ಫೈಸಲು ಪಡೆದುಕೊಂಡಿದ್ದರೆ ಮಕ್ಕಳು ತರುವಾಯ ಆ ಫೈಸಲಿನ ಸಾಲವು ಕೆಟ್ಟದ್ದೆಂದು ರುಜುವಾತು ಮಾಡಿಕೊಟ್ಟು ತಮ್ಮ ಹಕ್ಕನ್ನು ವ್ಯವಹಾರಮಾಡಿ ಕಾಪಾಡಿಕೊಳ್ಳಬಹುದು. ತಂದೆಯ ಮೇಲೆ ಮಾತ್ರ ಡಿಕ್ರಿಯಾಗಿ ಅದರ ಜಾರಿಯಲ್ಲಿ ಕುಟುಂಬದ ಪೂರಾ ಆಸ್ತಿಯನ್ನು ಯಾರಾದರೂ ಕೊಂಡು ಕೊಂಡು ಬಿಟ್ಟರೆ ಅವರಿಗೆ ಈ ಡಿಕ್ರಿಯ ಸಾಲವು ನ್ಯಾಯವಾದುದಲ್ಲವೆಂಬ ಸಂಗತಿಯು ಮೊದಲೇ ತಿಳಿದಿತ್ತೆಂದು ಮಗನು ರುಜುವಾತು ಮಾಡಿಕೊಡದಿದ್ದ ಸಂದರ್ಭದಲ್ಲಿ ಸಾಲವು ನಿಶ್ಚಯವಾಗಿ ಅನ್ಯಾಯವಾದುದಾದಾಗ್ಯೂ ಆಸ್ತಿಯು ಮಗನಿಗೆ ಹಿಂತಿರುಗಿ ಬರುವದಿಲ್ಲ. ಆದ್ದರಿಂದ ಮಕ್ಕಳು ಡಿಕ್ರಿಯಸಾಲವು ಅನ್ಯಾಯವಾಗಿರುವಪಕ್ಷದಲ್ಲಿ ತಮ್ಮ ಹಕ್ಕನ್ನು ಕಾಪಾಡಿಕೊಳ್ಳಬೇಕಾದರೆ ಆ ಡಿಕ್ರಿಯ ಜಾರಿಯು ನಡೆಯುತ್ತಿರುವಾಗ ತಮ್ಮ ಹಕ್ಕಿನ ವಿಷಯವಾಗಿ ಸಿವಿಲ್ ಪ್ರೊಸೀಜರ್ ಕೋಡಿನ ಪ್ರಕಾರ ಕೋರ್ಟಿಗೆ ತಕರಾರು ಅರ್ಜಿಯನ್ನು ಕೊಟ್ಟು ಫೈಸಲು ಪಡೆದುಕೊಳ್ಳಬೇಕಾದದ್ದು ಅವಶ್ಯವಾಗಿರುವದು.

ತಂದೆಯು ಸತ್ತನಂತರ ಮಕ್ಕಳು ಭಾಗಮಾಡಿಕೊಂಡರೆ ಸಾಲ— ಸಾಲಗಳನ್ನು ಮೊದಲು ತೀರಿಸುವದಕ್ಕೆ ಮಾರ್ಗವನ್ನು ಮಾಡಿ ಮಿಕ್ಕ ಆಸ್ತಿಯನ್ನು ಹಂಚಿಕೊಳ್ಳಬೇಕೆಂದು ಹೇಳಿದೆಯಷ್ಟೆ. ಆದರೆ ಇವರಿವರು ತಮ್ಮೊಳಗೆ ಆಸ್ತಿಯೊಡನೆ ಸಾಲಗಳನ್ನು ಹಂಚಿಕೊಂಡಾಗ್ಯೂ ಸಾಲಕೊಟ್ಟವರಿಗೆ ಇವರು ಎಲ್ಲರೂ ತಮ್ಮ ತಮ್ಮ ಭಾಗದ ಪಿತ್ರಾರ್ಜಿತವಾದ ಸೊತ್ತಿನಷ್ಟು ಮಟ್ಟಿಗೆ ಜವಾಬ್ದಾರರಾಗುವದು ತಪ್ಪುವದಿಲ್ಲ. ಮೇಲೆ ಮಗನಿಗೆ ತಂದೆಯ ಸಾಲಗಳ ವಿಷಯವಾಗಿ ಹೇಳಿರುವ ನ್ಯಾಯಗಳೆಲ್ಲಾ ತಾತನ ಸಾಲಗಳ ವಿಷಯವಾಗಿ ಮಮ್ಮಗನಿಗೂ ಮುತ್ತಾತನ ಸಾಲಗಳ ವಿಷಯದಲ್ಲಿ ಮರಿಮಕ್ಕಳಿಗೂ ಅನ್ವಯಿಸತಕ್ಕವುಗಳಾಗಿವೆ.

ಇದೇ ವಿಷಯದಲ್ಲಿ ನಿರ್ಣಯಕಾರರ ಅಭಿಪ್ರಾಯ— [ಸಾಲ] ಭೋಗ್ಯ ವಿನಾ ಮಿಕ್ಕ ಮೈಸಾಲ, ಆಧಾರ, ಗಿರವಿ ಮೊದಲಾದ ವ್ಯವಹಾರಗಳಲ್ಲಿ ಸಾಲವನ್ನು ತೀರಿಸಲು ಗೊತ್ತಾದ ವಾಯಿದೆಯೊಳಗೇನೇ ಋಣಿಯು ಸಾ

ಲವನ್ನು ತೀರಿಸಲಪೇಕ್ಷೆ ಪಟ್ಟರೆ ಸಾಲಾ ಕೊಟ್ಟವನು ಹಣವನ್ನು ವ್ಯವಸ್ಥೇಮಾಡಿಕೊಳ್ಳಲು ಬದ್ಧನಾಗಿರುವನು. ಹಾಗೆ ವ್ಯವಸ್ಥೆಮಾಡಿಕೊಳ್ಳಲು ತಪ್ಪಿದರೆ ತಪ್ಪಿದಂದಿನಿಂದಾಚೆನ ಬಡ್ಡಿಯು ಅವನಿಗೆ ಸಲ್ಲುವದಿಲ್ಲ. ಅಡಮಾನಗಳಲ್ಲಿ ಋಣಿಯೇ ಸಾಲಾ ಕೊಟ್ಟವನ ಮೇಲೆ ದಾವಾ ಮಾಡಿ ಕೋರ್ಟಿನ ಮೂಲಕ ಹಣವನ್ನು ಕೊಟ್ಟು ಸ್ವತ್ತನ್ನು ಅಡಮಾನದಿಂದ ಬಿಡಿಸಿಕೊಳ್ಳಬಹುದು. ಅಡಮಾನವಲ್ಲದ ಸಂದರ್ಭಗಳಲ್ಲಿ ಸಾಲದ ಹಣವನ್ನು ತೆಗೆದುಕೊಳ್ಳುವಂತೆ ಸಾಲಾ ಕೊಟ್ಟವನನ್ನು ನಿರ್ಬಂಧಿಸಲು ಅವನ ಮೇಲೆ ಋಣಿಯು ಇಂಗ್ಲೀಷು ಲಾ ಪ್ರಕಾರ ದಾವಾ ತರಬಹುದಾದರೂ ನಮ್ಮ ದೇಶಗಳಲ್ಲಿ ಅಂಥಾ ದಾವಾವನ್ನು ಹಿಡಿಯುವುದಿಲ್ಲವೆಂದು ತೋರುತದೆ. ಋಣಿಯು ಸಾಲದ ಹಣವನ್ನು ವಾಪಸ್ಸು ತೆಗೆದುಕೊಳ್ಳಲು ಸಾಲಾ ಕೊಟ್ಟವನಿಗೆ ನೋಟೀಸನ್ನು ಕೊಟ್ಟು ಮನಿ ಆರ್ಡರು ಮೂಲಕ ಹಣವನ್ನು ಕಳುಹಿಸಿದರೆ ಅವನ ಜವಾಬ್ದಾರಿಯು ತಪ್ಪಿ ಹೋಗುತ್ತದೆ. ಅಲ್ಲಿಂದಾಚೆಗೆ ಬಡ್ಡಿಯನ್ನು ಕೊಡಬೇಕಾದುದಿಲ್ಲ.

ಅಸಲು ಬಡ್ಡಿಯನ್ನು ಕೊಡಲು ವಾಯಿದೆಯು ಗೊತ್ತುಮಾಡಲ್ಪಡದೆ ಇದ್ದರೂ ನ್ಯಾಯವಾದ ಕಾಲದಲ್ಲಿ ಕೊಟ್ಟೇ ಕೊಡಬೇಕು ಕ. ಆ. ೬೬.

ವಾಯಿದೆಯಾದ ಬಳಿಕ ಋಣಿಯೇ ಸಾಲಗಾರನ ಬಳಿಗೆ ಹೋಗಿ ಸಾಲವನ್ನು ತೀರಿಸಬೇಕು. ಹಾಗೆ ತೀರಿಸದಿದ್ದರೆ ಕೋರ್ಟಿನ ಖರ್ಚಿಗೆ ಗುರಿಯಾಗುವನು. ಆದರೆ "ನಡೆದಷ್ಟು ದಿವಸದಲ್ಲಿ" ಅಥವಾ "ಕೇಳಿದಾಗ" ಅಸಲು ಬಡ್ಡಿಯನ್ನು ಕೊಡಬೇಕೆಂಬ ಷರತ್ತು ಇದ್ದರೆ ದಾವಾ ಮಾಡುವುದಕ್ಕಿಂತ ಮುಂಚೆಯೇ ತಗಾದೆ ನೋಟೀಸನ್ನು ಕೊಡಬೇಕು.

ಪತ್ರವನ್ನು ಬರೆದಾಗಲೇ ಪತ್ರದ ಹಣವು ಕೊಡಲ್ಪಟ್ಟಿತೆಂಬ ಷರತ್ತು ಪತ್ರದಲ್ಲಿದ್ದರೂ ಅದರಂತೆ ಹಣವು ಕೊಡಲ್ಪಡಲಿಲ್ಲ ಬೇರೆ ವಿಧವಾಗಿ ಕೊಡಲ್ಪಟ್ಟಿತು. (ಮುಸಲ—ಹಿಂದಣ ಸಾಲಕ್ಕಾಗಿ ಪತ್ರ ಹುಟ್ಟಿತು, ಅಥವಾ ಪತ್ರವನ್ನು ಬರೆದ ಕೆಲವು ದಿವಸದ ಮೇಲೆ ಹಣವು ಕೊಡಲ್ಪಟ್ಟಿತು) ಎಂಬದಾಗಿ ರುಜುವಾತನ್ನು ಕೊಟ್ಟರೆ ಪತ್ರಕ್ಕೆ ಪ್ರತಿಫಲವಿದ್ದಂತೆ ಕೋರ್ಟಿನವರು ತೀರ್ಮಾನಿಸುವರು. ೪. ಅ. ಲಾ. ಜ. ೪೪೧.

ಬಡ್ಡಿಯುಪಚಾರ— ಪತ್ರದ ಬಡ್ಡಿಯ ದರವು ಅತಿ ಹೆಚ್ಚಾಗಿದ್ದು, ಈ ಹೆಚ್ಚುದರವನ್ನು ಕೊಡಲು ಋಣಿಯು ಪೂರ್ವಾಪರದ ಆಲೋಚನೆ ಇಂದ, ಮನಃಪೂರ್ವಕವಾಗಿ ಒಪ್ಪಿಕೊಳ್ಳಲಿಲ್ಲವೆಂತಲೂ, ಅತಿದಾಕ್ಷಿಣ್ಯ; ಮೋಸ, ಅತಿನಿರ್ಬಂಧ. ಕಡಮೇ ತಿಳುವಳಿಕೆ, ಅಥವಾ ತತ್ಕಾಲದಲ್ಲಿ ಸಂಭವಿಸಿರುವ ಅಪಾಯವನ್ನು ತಪ್ಪಿಸಿಕೊಳ್ಳಬೇಕೆಂಬ ಕುತೂಹಲ, ಈ ಸಂದ

ರ್ಭಗಳಿಂದ ಅಷ್ಟು ಹೆಚ್ಚುಬಡ್ಡಿಯನ್ನು ಕೊಡಲು ಒಪ್ಪಿಕೊಂಡನೆಂತಲೂ ಕೋರ್ಟಿನವರಿಗೆ ತೋರಿಬಂದರೆ, ಪತ್ರದಲ್ಲಿ ಒಪ್ಪಲ್ಪಟ್ಟಿರುವ ಹೆಚ್ಚುಬಡ್ಡಿಯನ್ನು ಕಡಮೆ ಮಾಡುವರು.

ಸಾಲಾಪಮಾಡುವವರು ಲೋಕವ್ಯವಹಾರದಲ್ಲಿ ತಕ್ಕ ತಿಳುವಳಿಕೆಯಿಲ್ಲದ ಹೆಂಗಸರೂ, ಸಣ್ಣ ವಯಸ್ಸಿನವರೂ, ಮೂಢರೂ, ರೈತರೂ, ಕುಡುಕರೂ ದುಂದುತನದಿಂದ ಖರ್ಚುಮಾಡುವವರೂ ಆಗಿದ್ದರೂ ಅಥವಾ ಅವರು ಸಾಲಾಕೊಡುವವನಿಗೆ ಮೊದಲೇಸಾಲಗಾರರಾಗಿದ್ದರೂ ಸಹ ಬಡ್ಡಿಯ ದರವು ಸ್ವಲ್ಪ ಹೆಚ್ಚೆಂದು ಕೋರ್ಟಿನವರಿಗೆ ತೋರಿಬಂದರೆ, ದರವನ್ನು ಕಡಮೆಮಾಡುವರು. ಹಾಗಲ್ಲದೆ ಸಾಲಾತೆಗೆದುಕೊಳ್ಳುವವರು ಲೇವಾದೇವಿ ಮಾಡತಕ್ಕವರೂ ವ್ಯಾಪಾರಸ್ಥರೂ, ಕಂಟ್ರಾಕ್ಟುದಾರರೂ, ಬಂಡವಾಳದಿಂದ ಬಹಳ ಪ್ರಯೋಜನವನ್ನು ಮಾಡಿಕೊಳ್ಳುವವರೂ, ಚತುರರೂ ಆಗಿದ್ದರೆ, ಬಡ್ಡಿಯ ದರವು ಸ್ವಲ್ಪ ಹೆಚ್ಚಾಗಿದ್ದರೂ ಅದರಂತೆ ಕೋರ್ಟಿನವರು ಬಡ್ಡಿಯನ್ನು ಕೊಡಿಸುವರು.

ನಗಗಳನ್ನು ಗಿರಿವಿ ಇಡುವ ಸಾಲಗಳಿಗೆ ಬಡ್ಡಿಯ ದರವು ಸೇ॥ ಮಾ॥ ಅರ್ಧರೂಪಾಯಿಂದ ಮುಕ್ಕಾಲು ರೂಪಾಯಿನವರೆಗೂ, ಸ್ಥಿರಸ್ವತ್ತುಆಧಾರ ಮಾಡಲ್ಪಡುವ ಸಾಲಗಳಿಗೆ ಮುಕ್ಕಾಲು ರೂಪಾಯಿಂದ ಒಂದು ರೂಪಾಯಿನವರೆಗೂ, ಇತರ ಮೈಸಾಲಗಳಿಗೆ ಒಂದು ರೂಪಾಯಿಂದ ಒಂದೂವರೆರೂಪಾಯಿನವರೆಗೂ ಮಿತವಾದುದೆಂದು ಎಣಿಸಬೇಕು.

ಅಸಲನ್ನೂ, ಇಷ್ಟು ದರದಮೇಲೆ ಆಗುವ ಬಡ್ಡಿಯನ್ನೂ ಸಹ ಇಷ್ಟು ದಿವಸದಲ್ಲಿ ಕೊಡಬೇಕೆಂದು ಮಾತ್ರ ಪತ್ರದಲ್ಲಿ ಷರತ್ತಿದ್ದು, ವಾಯಿದೆ ಗತಿಸಿದಮೇಲೆ ಅಪೇರೀತಿಯಾಗಿ ಅಥವಾ ಬೇರೆ ದರದಮೇಲೆ ಬಡ್ಡಿಯನ್ನು ಕೊಡಬೇಕೆಂಬ ಷರತ್ತು ಇಲ್ಲದಿದ್ದರೆ, ವಾಯಿದೆಯೊಳಗೆ ಕೊಡಬೇಕಾದ ಬಡ್ಡಿಯ ದರವು ಮಿತವಾಗಿರುವಲ್ಲಿ, ಕೋರ್ಟಿನವರು ಮುಂದಕ್ಕೂ ಅದೇ ಪ್ರಕಾರ ಬಡ್ಡಿಯನ್ನು ಕೊಡಿಸುವರು: ಆ ದರವು ಅತಿ ಹೆಚ್ಚಾಗಿದ್ದರೆ. ವಾಯಿದೆಯ ಮುಂದಣ ಬಡ್ಡಿಯನ್ನು ಕಡಮೆಮಾಡುವರು.

ಅಸಲನ್ನಾಗಲಿ, ಒಪ್ಪಲ್ಪಡದ ಬಡ್ಡಿಯನ್ನಾಗಲಿ, ಕಂತನ್ನಾಗಲಿ, ಗೊತ್ತಾದ ವಾಯಿದೆಯೊಳಗೆ ಕೊಡದಿದ್ದರೆ, ಹೆಚ್ಚು ಬಡ್ಡಿಯನ್ನು ಅಥವಾ ಹೆಚ್ಚು ಮೊಬಲಗನ್ನು ಕೊಡಬೇಕೆಂಬ ಷರತ್ತು ಪತ್ರದಲ್ಲಿದ್ದು, ಆ ಷರತ್ತು ಶಿಕ್ಷಾರೂಪವಾದುದೆಂದು ಕೋರ್ಟಿನವರಿಗೆ ತೋರಿಬಂದರೆ, ಆ ಷರತ್ತಿನ ಬಡ್ಡಿಗಿಂತ ಅಥವಾ ಮೊಬಲಗ್ಗಿಂತ ಹೆಚ್ಚಾಗದ, ನ್ಯಾಯವಾದ ನಷ್ಟವನ್ನು ಸಾಲಾಕೊಟ್ಟವನಿಗೆ ಕೊಡಿಸುತ್ತಾರೆಯೇ ಹೊರತು, ಷರತ್ತಿನಂತೆಯೇ ಕೊ

ಡಿಸಬೇಕಾದುದಿಲ್ಲ. ಕಂ. ೭೪. "ವಾಯಿದೆಯೊಳಗೆ ಕೊಡಲು ತಪ್ಪಿದರೆ ತಪ್ಪಿದ ತಾರೀಖು ಲಾಗಾಯಿತು ಹೆಚ್ಚು ಬಡ್ಡಿಯನ್ನು ಕೊಡಬೇಕು" ಎಂಬ ಷರತ್ತು ಶೀಕ್ಷಾರೂಪವಾದುದಲ್ಲ. ಇಂಥ ಷರತ್ತಿನಲ್ಲಿ ೧ ನೇ ಪ್ಯಾರಾದ ಅವಗುಣಗಳಿಲ್ಲದಿದ್ದರೆ, ಷರತ್ತಿನಂತೆಯೇ ಬಡ್ಡಿಯನ್ನುಕೊಡಿಸುತ್ತಾರೆ. ಹಾಗಿಲ್ಲದೆ "ವಾಯಿದೆಗೆ ಸರಿಯಾಗಿ ಕೊಡಬೇಕು, ತಪ್ಪಿದಲ್ಲಿ ಪತ್ರದ ತಾರೀಖುಲಾಗಾಯಿತು ಹೆಚ್ಚು ಬಡ್ಡಿ ಕೊಡಬೇಕು" ಎಂಬ ಷರತ್ತು ಯಾವಾಗಲೂ ಶಿಕ್ಷಾರೂಪವಾದದು. ಈ ಷರತ್ತಿನಂತೆ ಹೆಚ್ಚು ಬಡ್ಡಿಯನ್ನು ಕೊಡಿಸುವುದಿಲ್ಲ. ವಾಯಿದೆಯೊಳಗೆ ಕೊಡಲು ತಪ್ಪಿದರೆ, ತಪ್ಪಿದ ತಾರೀಖುಲಾಗಾಯಿತು ಬಡ್ಡಿಗೆ ಬಡ್ಡಿಯನ್ನು ಮೊದಲಿನಂತೆ ಕೊಡಬೇಕೆಂಬ ಷರತ್ತು ಶೀಕ್ಷಾರೂಪವಾದುದಲ್ಲಿ, ಅದು ಮಿತವಾಗಿದ್ದಾಗ, ಅದರಂತೆ ಬಡ್ಡಿಯನ್ನು ಕೊಡಿಸುವರು. ಆದರೆ ಬಡ್ಡಿಗೆ ಬಡ್ಡಿಯನ್ನು ಹೆಚ್ಚುದರದಂತೆ ಕೊಡಬೇಕೆಂಬ ಷರತ್ತು ಯಾವಾಗ್ಲೂ ಶೀಕ್ಷಾರೂಪವಾದುದು.

ದಾವಾಮಾಡುವ ಕಾಲದಲ್ಲಿ ಅಸಲಿನಷ್ಟು ಬಡ್ಡಿಯು ಬಾಕಿ ಇದ್ದರೆ. ಧನದ್ವಿಗುಣ ಅಥವಾ ದಾಂದುಪ್ಪಟ್ ಎನ್ನುತ್ತಾರೆ. ಧನದ್ವಿಗುಣಕ್ಕಿಂತಲೂ ಹೆಚ್ಚಾಗಿ, ಎಂದರೆ ಅಸಲಿಗಿಂತಲೂ ಹೆಚ್ಚಾಗಿ ಉಳಿದಿರುವ ಬಡ್ಡಿಯನ್ನು ಕೋರ್ಟಿನವರು ಕೊಡಿಸುವುದಿಲ್ಲ. ಆದರೆ ಋಣಿಯು ಹಿಂದೂ ಅಲ್ಲದೆ ಮುಸಲ್ಮಾನ ವಗೈರೆ ಪರದೇಶದ ಮತಾನುಯಾಯಿಯಾಗಿದ್ದರೆ, ಈನಿಯಮವು ಸಂಬಂಧಿಸುವುದಿಲ್ಲ; ಎಂದರೆ ಅಸಲಿಗಿಂತ ಬಡ್ಡಿ ಎಷ್ಟು ಹೆಚ್ಚಾಗಿದ್ದರೂ ಅಂಥವನಿಂದ ಪೂರಾ ಬಡ್ಡಿಯನ್ನು ವಸೂಲ್ಮಾಡಿಕೊಳ್ಳಬಹುದು. ವ್ಯ. ನಿ.

ಸೊತ್ತಿನ ಪರಾಧೀನಕರಣ — ಮೇಲೆ ಸಮಷ್ಟಿಕುಟುಂಬದ ಭಾಗಹಾರಿಗಳಲ್ಲಿ ಯಾರೂ ಇಂಥಾ ಭಾಗವೇ ತಮ್ಮದೆಂದು ಕುಟುಂಬವು ಅವಿಭಕ್ತವಾಗಿರುವಾಗ ನಿಶ್ಚಯಿಸಿ ಹೇಳಲಾಗುವದಿಲ್ಲವೆಂದು ತಿಳಿಯಪಡಿಸಿದೆಯಷ್ಟೆ, ಆದ್ದರಿಂದ, ನ್ಯಾಯವಾಗಿ ನೋಡಿದರೆ, ಇಂಥಾ ಕುಟುಂಬದ ಆಸ್ತಿಯಲ್ಲಿ ಯಾವ ಭಾಗವನ್ನೂ ಸ್ವತಂತ್ರಿಸಿ ಪರಾಧೀನವಾಗಿ ಮಾಡುವದಕ್ಕೆ ಕುಟುಂಬದಲ್ಲಿ ಯಾರೊಬ್ಬರಿಗೂ ಅಧಿಕಾರವಿಲ್ಲ. ಪೂರ್ವಕಾಲದ ಸ್ಮೃತಿಗಳಲ್ಲಿ ಕಂಠೋಕ್ತವಾಗಿ ಹೀಗೆಯೇ ಹೇಳಿದೆ. ಆದರೆ ಈಚೆಗೆ ಉಂಟಾದ ಸ್ಮೃತಿವ್ಯಾಖ್ಯಾನಗಳಿಂದಲೂ, ಕೋರ್ಟಿನ ತೀರ್ಪುಗಳಿಂದಲೂ, ಕುಟುಂಬದ ಆಸ್ತಿಯನ್ನು ಅದಕ್ಕೆ ಹಕ್ಕುದಾರರಾದವರು ತಮ್ಮ ತಮ್ಮ ಬಾಧ್ಯತೆಯುಪ್ರಕಾರ ಪರಾಧೀನ ಮಾಡಬಹುದೆಂದು ವಿಧಾಯಕವಾಗಿದೆ. ಪರಾಧೀನಕರಣವೆಂದರೆ, ಕ್ರಯ, ದಾನ, ಭೋಗ್ಯ, ಆಧಾರ, ಪರಿವರ್ತನೆಯೆಂಬ ಮಾರ್ಗಗಳಿಂದ ಯಾವದಾದರೂ ಆಸ್ತಿಯವಿಷಯದಲ್ಲಿ ತನಗಿರುವ ಹಕ್ಕ

ನ್ನು, ಅಥವಾ ಸ್ವಾಧೀನವನ್ನು ಅಥವಾ ಇವೆರಡನ್ನೂ ಮತ್ತೊಬ್ಬನಿಗೆ ವಹಿಸಿಕೊಟ್ಟುಬಿಡುವದೆಂದರಿಯಬೇಕು. ಈವಿಧವಾದ ಸೊತ್ತಿನ ಪರಾಧೀನಕರಣವನ್ನು ಇನ್ನೂ ಸ್ವಲ್ಪ ವಿಸ್ತಾರವಾಗಿ ಈ ಪುಸ್ತಕದ ೨ನೇ ಭಾಗದಲ್ಲಿ ವಿವರಿಸಬೇಕಾಗುವದು. ಇಲ್ಲಿ ಪ್ರಕೃತೋಚಿತವಾದ ಅಂದರೆ ಹಿಂದೂ "ಲಾ" ವಿಗೆ ಸಂಬಂಧಪಡುವ ವಿಶೇಷಾಂಶಗಳನ್ನುಮಾತ್ರ ಸೂಚಿಸಿದೆ.

ತಂದೆಯ ಅಧಿಕಾರ—ಅವಿಭಕ್ತ ಕುಟುಂಬದಲ್ಲಿ ತಂದೆಗೆ ಮಾತ್ರ ಈ ವಿಷಯದಲ್ಲಿ ಬಹಳ ಅಧಿಕಾರವಿರುವದು. ಆಸ್ತಿಯ ಹಕ್ಕು ತಂದೆಗೂ ಗಂಡುಮಕ್ಕಳಿಗೂ ಒಂದೇ ಆದರೂ, ತಂದೆಯ ಸಾಲಗಳಿಗೆ ಕುಟುಂಬದ ಆಸ್ತಿಯೆಲ್ಲಾ ಗುರಿಯಾಗುವದರಿಂದ ತಂದೆಯು ಸಾಲಗಳನ್ನುಮಾಡಿ ಅವುಗಳದೆಸೆಯಿಂದ ಮಕ್ಕಳಿಗೆ ಪಿತ್ರಾರ್ಜಿತದ ಸೊತ್ತೇನೂ ಇಲ್ಲದಂತೆ ಮಾಡಿಬಿಡಬಹುದು. ಈ ಸಂದರ್ಭದಲ್ಲಿ ವಿನಾ, ಪಿತ್ರಾರ್ಜಿತದಸೊತ್ತನ್ನುಪರಾಧೀನ ಮಾಡಬೇಕಾದರೆ, ಅವನು ತನ್ನಮಕ್ಕಳ ಅನುಮತಿಯನ್ನು ಪಡೆಯಬೇಕು ಅವರೆಲ್ಲರೂ ಸಮ್ಮತಿಸದಿದ್ದರೆ, ಅಥವಾ ಅವರಲ್ಲಿ ಕೆಲವರು ಬಾಲ್ಯವಯಸ್ಕರಾದ ಮೈನರಾಗಿದ್ದರೆ, ಕುಟುಂಬದಲ್ಲಿ ಅಗತ್ಯವಾಗಿ ಆಗತಕ್ಕ ನ್ಯಾಯವಾದ ಖರ್ಚಿಗೆ ಕುಟುಂಬದ ಆಸ್ತಿಯ ಪರಾಧೀನಕರಣವು ಅವಶ್ಯಕವಾಗಿದ್ದ ಪಕ್ಷದಲ್ಲಿ ಮಾತ್ರವೇ ತಂದೆಗೆ ಅದರ ತಂಟೆಗೆ ಹೋಗುವ ಅಧಿಕಾರವಿರುತ್ತದೆ. ಹೀಗೆ ಆಸ್ತಿಯ ಪರಾಧೀನಕರಣಕ್ಕೆ ತಕ್ಕಯೋಗ್ಯತೆಯನ್ನು ಕೊಟ್ಟಿರುವ ಖರ್ಚು ಅಗತ್ಯವಾದದ್ದೋ, ಅಲ್ಲವೋ ಎಂಬುವದನ್ನು ನಿಶ್ಚಯಿಸಬೇಕಾಗಿದ್ದರೆ. ಕುಟುಂಬದ ಸೊತ್ತೆಲ್ಲಾ ತನ್ನದೇ ಆಗಿದ್ದು, ಖರ್ಚು ತಾನೇ ಮಾಡತಕ್ಕದ್ದಾಗಿರುವಾಗ, ಸಾಧಾರಣವಾಗಿ ಜಾಣನಾದ ಸೊತ್ತಿನ ಸ್ವಾಮಿಯು ಯಾವವಿಧವಾಗಿ ಈ ತನ್ನ ಸ್ವಂತ ಆಸ್ತಿಯನ್ನು ವಿನಿಯೋಗಮಾಡುವದು ಸರಿಯಾಗಿರುವದೆಂದು ತಿಳಿದು, ನಡಿಸುವನೊ ಆ ವಿಧದಲ್ಲೆಲ್ಲಾ ಕುಟುಂಬದ ಕಾರ್ಯಕರ್ತನಾಗಿರುವ ತಂದೆಯಾಗಲಿ ಅಥವಾ ಸರಿಯಾದ ಬಾಧ್ಯತೆಯುಳ್ಳ ಇತರರಾಗಲಿ ನಡಿಸಬಹುದೆಂದು ತಿಳಿದಿರಬೇಕು. ಇಂಥಾ ಸಂದರ್ಭಗಳಲ್ಲಿ ಕಾರ್ಯಕರ್ತನು ಕುಟುಂಬದಲ್ಲಿ ದೊಡ್ಡವರಾಗಿರುವ ಇತರರನ್ನು ಕೇಳಿ ಅವರ ಅನುಮತಿಯನ್ನೂ ಪಡೆಯುವದು ವಾಡಿಕೆಯಲ್ಲಿರುತ್ತದೆ. ಆದರೆ ನಿಷ್ಕಾರಣವಾಗಿ ಅವರು ಒಪ್ಪದೆ ಇದ್ದರೆ, ಯಜಮಾನನಾದವನಿಗೆ ಕಾರ್ಯವನ್ನು ನಡಿಸತಕ್ಕ ಸ್ವಾತಂತ್ರ್ಯವು ಅದರಿಂದ ತಪ್ಪಿಹೋಗುವದಿಲ್ಲ, ಯಾವಯಾವ ಖರ್ಚುಗಳು ಆವಶ್ಯಕಗಳೋ ಮತ್ತು ಯಾವಯಾವ ಸಂದರ್ಭಗಳಲ್ಲಿ ಕುಟುಂಬದ ಕೆಲಸಕ್ಕೋಸ್ಕರ ಕಾರ್ಯಕರ್ತನು ಕುಟುಂಬದ ಸೊತ್ತನ್ನು ಖರ್ಚುಮಾಡಬಹುದೋ ಆ ಸಂಗತಿಗಳನ್ನು ಹಿಂದೆ ಸೂಚಿಸಿದೆ

ಅವಿಭಕ್ತ ಕುಟುಂಬಕ್ಕೆ ಸೇರಿದವರು ಯಾರಾದರೂ ತಮಗೆ ಅಧಿಕಾರವಿಲ್ಲದೆ ಕುಟುಂಬದ ಆಸ್ತಿಯನ್ನು ಮಾರಿದರೂ ಅಥವಾ ಇತರವಿಧವಾಗಿ ಅದನ್ನು ಅನ್ಯಾಕ್ರಾಂತವನ್ನಾಗಿ ಮಾಡಿದರೂ, ಅಂಥಾ ಆಸ್ತಿಯಲ್ಲಿ ಯಾರಿಗೆ ನಿರಾತಂಕವಾದ ಹಕ್ಕಿರುವದೊ ಅವರುಮಾತ್ರವೇ ಈ ವಿಧವಾಗಿ ಆಸ್ತಿಯನ್ನು ಪರಾಧೀನಪಡಿಸುವ ಕಾರ್ಯಕ್ಕೆ ಅಡ್ಡಿಯನ್ನುಂಟುಮಾಡಬಹುದು. ಗಂಡುಮಕ್ಕಳಿಗೆ ತಮ್ಮ ತಂದೆಗಿರುವಂತೆಯೇ ಪಿತ್ರಾರ್ಜಿತದ ಆಸ್ತಿಯಲ್ಲಿ ನಿರಾತಂಕವಾದ ಹಕ್ಕುಂಟೆಂದು ಹಿಂದೆ ವಿವರಿಸಿದ ವಿಷಯಗಳಿಂದ ಚನ್ನಾಗಿ ತಿಳಿದಿದೆಯಷ್ಟೆ. ಆದರೆ ಮಗನು ಹುಟ್ಟುವದಕ್ಕೆ ಮುಂಚೆ ತಂದೆಯು ಆಸ್ತಿಯನ್ನು ವ್ಯಯಮಾಡಿಬಿಟ್ಟಿದ್ದರೆ, ಅದನ್ನು ಇವನು ತನಗೆ ತಿರುಗಿಸಿಕೊಳ್ಳುವದಕ್ಕಾಗುವದಿಲ್ಲ. ಆದರೆ ಈ ಹುಡುಗನು ತಾಯಿಯ ಗರ್ಭದಲ್ಲಿದ್ದಾಗ ಯಾವದನ್ನಾದರೂ ಇವನಿಗೆ ನಷ್ಟಕರವಾದ ಕಾರ್ಯವನ್ನು ತಂದೆಯು ನಡಿಸಿದ್ದರೆ, ಅದು ಆಮೇಲೆ ರದ್ದಾಗಬಹುದು ಆಸ್ತಿಯನ್ನು ಪರಾಧೀನಪಡಿಸಿ ಕೃತ್ಯವು ನಡಿಯುವಾಗ ತನಗೆ ಮೊದಲೇಹುಟ್ಟಿದ ಮಕ್ಕಳ ಅನುಮತಿಯನ್ನು ಪಡೆದುಕೊಳ್ಳದೆ ತಂದೆಯು ಸೊತ್ತು ಪರಾಕ್ರಾಂತವಾಗುವಂತೆ ಮಾಡಿದರೆ, ತರುವಾಯ ಆ ಮಕ್ಕಳು ತಂದೆಯ ನಡಬಳಿಕೆಯನ್ನು ಒಪ್ಪಿದರೆ ಸಾಕು. ಆ ಆಸ್ತಿಯ ಅನ್ಯಾಯಕ್ರಮಣವು ಊರ್ಜಿತವಾಗಿಯೇ ನಿಲ್ಲುವದು. ಆದರೆ ಮತ್ತೊಬ್ಬಹುಡುಗನು ಹುಟ್ಟಿದಮೇಲೆ, ಮೊದಲಿದ್ದ ಮಕ್ಕಳೆಲ್ಲರೂ ಹಿಂದೆ ನಡೆದ ಆಸ್ತಿಯ ಪರಾಧೀನಕರಣಕ್ಕೆ ಸಮ್ಮತಿಸಿದಾಗ್ಯೂ, ಈ ಹೊಸದಾಗಿ ಹುಟ್ಟಿದ ಹುಡುಗನು ಅದನ್ನು ತಿರಸ್ಕರಿಸಬಹುದು. ಅನಾವಶ್ಯಕವಾದ ಸಂದರ್ಭಗಳಲ್ಲಿ ತಂದೆಯು ಪಿತ್ರಾರ್ಜಿತವಾದ ಸೊತ್ತನ್ನು ಪರಾಧೀನ ಮಾಡಿದರೆ, ಅದನ್ನು ರದ್ದುಪಡಿಸಿಕೊಳ್ಳಲು ಆತನ ಔರಸಪುತ್ರನಿಗೆ ಎಷ್ಟುಮಟ್ಟಿನ ಅಧಿಕಾರವುಂಟೋ, ಆ ಕಾಲದಲ್ಲಿ ಆ ತಂದೆಗೆ ದತ್ತಾದ ಮಗನಿದ್ದರೆ, ಅವನಿಗೂ ಅಷ್ಟೇ ಅಧಿಕಾರವಿರುವುದು.

ಅನ್ಯಾಯವಾದ ಸಾಲದ ರುಜುವಾತು— ಕುಟುಂಬದ ಸೊತ್ತಿನಲ್ಲಿ ತಂದೆಯಾಗಲಿ ಅಥವಾ ಇತರ ಕಾರ್ಯಕರ್ತನಾಗಲಿ ತನ್ನ ಸ್ವಂತ ಹಕ್ಕಿಗೊಳಪಟ್ಟದ್ದಕ್ಕಿಂತ ಹೆಚ್ಚಾಗಿ ಮಾರಿಬಿಟ್ಟಿದ್ದು, ತರುವಾಯ ಆ ವಿಕ್ರಯವು ಅಕ್ರಮವಾದದ್ದೆಂದು ಇತರ ವಾರಸ್ದಾರರು ಆಕ್ಷೇಪಿಸಿದರೆ, ಪೂರಾ ಆಸ್ತಿಯನ್ನು ಮಾರಿಬಿಡಲು ತಕ್ಕ ಕಾರಣವಿತ್ತೆಂದು ಸೊತ್ತನ್ನು ಕೊಂಡುಕೊಂಡವನು ರುಜುವಾತು ಮಾಡುವದಕ್ಕೆ ಸಿದ್ಧನಾಗಿರಬೇಕು. ತಂದೆಯು ಕೊಡಬೇಕಾಗಿದ್ದ ಸಾಲಕ್ಕೆ ಸೊತ್ತನ್ನು ಮಾರಿದ್ದರೆ, ಆ ವಿಕ್ರಯವನ್ನು ಮಕ್ಕಳು ರದ್ದುಪಡಿಸುವದಕ್ಕೆ ಸಾಧಾರಣವಾಗಿ ಆಗುವದಿಲ್ಲ. ಮೇಲೆ

ಹೇಳಿರುವಂತೆ ಅನ್ಯಾಯುವಾದ ಸಾಲಕ್ಕೋಸ್ಕರ ಸೊತ್ತು ಮಾರಲ್ಪಟ್ಟಿದ್ದರೆ, ವಿಕ್ರಯುವನ್ನುರದ್ದು ಪಡಿಸಿಕೊಳ್ಳಬೇಕೆಂದು ಅಪೇಕ್ಷಿಸುವಾತನೇ, ಆ ಸಾಲ ಇಂಥಾ ಅನ್ಯಾಯುವಾದದ್ದೆಂದು ರುಜುವಾತು ಮಾಡಿಸಿಕೊಡಬೇಕು. ಆದರೆ ತಂದೆಯಲ್ಲದೆ ಇತರ ಭಾಗಹಾರಿಗಳು ತಮ್ಮ ಸಾಲಗಳಿಗೋಸ್ಕರ ಕುಟುಂಬದ ಆಸ್ತಿಯನ್ನು ಮಾರಿದ್ದರೂ, ಇಲ್ಲದೆ ಅವರಮೇಲೆ ಆದ ಡಿಕ್ರಿಗೋಸ್ಕರ ಕುಟುಂಬದ ಒಟ್ಟು ಆಸ್ತಿಯೆಲ್ಲಾಮಾರಲ್ಪಟ್ಟಿದ್ದರೂ ಅವರು ಮಾಡಿದ ಸಾಲಗಳು ಕುಟುಂಬಕ್ಕೆ ಅವಶ್ಯಕವಾದ ಖರ್ಚಿಗೋಸ್ಕರವಾದುದೆಂದು ಆ ಸೊತ್ತನ್ನು ಕೊಂಡುಕೊಂಡವನು ರುಜುವಾತು ಕೊಡಬೇಕಾಗಿ ಬರುತ್ತದೆ. ಸಾಲವನ್ನು ತೀರಿಸುವದಕ್ಕೋ ಅಥವಾ ಅವಶ್ಯಕವಾದ ಇತರ ಖರ್ಚುಗಳನ್ನು ಮಾಡುವದಕ್ಕೋ ಬೇರೆ ಮಾರ್ಗವಿರುವಾಗ ಬೇಕೆಂದು ಸುಮ್ಮನೆ ಕುಟುಂಬದ ಆಸ್ತಿಯನ್ನು ಅನ್ಯಾಕ್ರಾಂತವನ್ನಾಗಿ ಮಾಡಿದರೆ, ಅದು ಸಲ್ಲಲಾರದು.

ಸಾಲ ತೀರಿಸುವ ವಿಷಯುದಲ್ಲಿ ಮದ್ರಾಸ್ ಆರ್. ಪಿ. ಯವರ ಹಿಂದೂ ಲಾ ದಲ್ಲಿ ಕೊಟ್ಟಿರುವ ಕೋರ್ಟು ತೀರ್ಮಾನಗಳು.

ಧರ್ಮ ಸಾಸ್ತ್ರಗಳಲ್ಲಿ ಹೇಳಲ್ಪಟ್ಟ ಪ್ರಕಾರವೇ ಏಂದರೆ ತಂದೆ ತಾತಂದಿರ ಬಳಿಯಿಂದ ಎಷ್ಟುಮಾತ್ರವಾದರೂ ಆಸ್ತಿ ಬಾರದಿದ್ದರೂ ಅವರ ಸಾಲಗಳನ್ನು ತಮ್ಮ ಸ್ವಾರ್ಜಿತದಿಂದಾದರೂ ತೀರಿಸುವದಕ್ಕೆ ಮಕ್ಕಳೂ ಮುಂಮಕ್ಕಳೂ ಬದ್ಧರೆಂದು ಪೂರ್ವಕಾಲದಲ್ಲಿ ಕೆಲವು ತೀರ್ಮಾನಗಳು ಮಾಡಲ್ಪಟ್ಟವು. (೨ ಬೊಂ. ಹೈ, ೬೪) ಆದರೆ ತಂದೆ ತಾತಂದಿರ ಬಳಿಯಿಂದ ಎಷ್ಟು ಪಿತ್ರಾರ್ಜಿತ ಸ್ವತ್ವವು ಬರುವುದೋ ಅದರ ಒಟ್ಟಿನವರೆಗೆ ಅವರ ಸಾಲಗಳನ್ನು ತೀರಸುವದಕ್ಕೆ ಮಕ್ಕಳೂ ಮುಮ್ಮಕ್ಕಳೂ ಬದ್ಧರೆಂದು ಈಗ ತೀರ್ಮಾನಗಳು ಸ್ಥಿರಪಟ್ಟವೆ. (೨ ಮ. ಹೈ. ೩೩೬; ೪ ಮ. ಹೈ. ೧; ಇ. ಲಾ. ರಿ. ೮ ಮ. ೪೫ ೧೮೬೬ ಸಂ॥ ೭ ನೆಂ॥ ಬೊಂಬಯಿ ಗೌರ್ಮೆಂಟಿನವರ ನಿಬಂಧನೆಯುನ್ನು ಕೂಡ ನೋಡಬೇಕು.) ತಂದೆಯು ಅಲ್ಲದೆ ತಾತನ ಆಸ್ತಿ ಮಗನಿಗಾದರೂ ಮುಮ್ಮಗನಿಗಾದರೂ ಸೇರಿದ ಮೇಲೆ ಅದು ನಷ್ಟವಾಗಿ ಹೋದರೂ ಅಲ್ಲದೆ ಆತನು ಅದನ್ನು ವೆಚ್ಚಸಿದರೂ ಸದರಿ ತಂದೆಯು ಅಲ್ಲದೆ ತಾತನ ಸಾಲಗಳನ್ನು ತೀರಿಸುವ ಬಾಧ್ಯತೆ ತಪ್ಪಿಹೋಗಲಾರದು. (ಇ ಲಾ. ರಿ. ೮ ಬೊಂ. ೩೦೯.)

ಅಯೋಗ್ಯ ರುಣಗಳು.—ದ್ಯೂತವು, ಪಾನವು, ವ್ಯಭಿಚಾರವು ಮೊದಲಾದ ಅಯೋಗ್ಯಕಾರ್ಯಗಳ ನಿಮಿತ್ತವಾಗಿ ತಂದೆಯು ಸಾಲಗಳು ಮಾಡಲ್ಪಟ್ಟಿದ್ದ ಪಕ್ಷದಲ್ಲಿ ಅವುಗಳನ್ನು ತೀರಿಸುವುದಕ್ಕೆ ಕುಮಾರನು ಬದ್ಧನಲ್ಲವೆಂದೂ ಪ್ರತಿಫಲವಿಲ್ಲದ ವಾಗ್ದಾನಗಳಿಂದಾದರೂ ಕನ್ಯಾ ಶುಲ್ಕ ನಿಮಿತ್ತದಿಂದಾದರೂ ತಂದೆ ಬಾಕಿ ಬಿದ್ದಿದ್ದ ಪಕ್ಷದಲ್ಲಿ ಅಂತಹ ಬಾಕಿಗಳು ತೀರಿಸುವದಕ್ಕೆ ಕುಮಾರನು ಬದ್ಧನಲ್ಲವೆಂದೂ ಧರ್ಮಶಾಸ್ತ್ರಗಳಲ್ಲಿ ಹೇಳಲ್ಪಟ್ಟಿದೆ. (೨ ಬಾರೊ ೧೯೪) ತಂದೆ ಯಾರಿಗಾದರೂ ಜಾಮೀನಾಗಿ ನಿಲ್ಲುವುದರಿಂದ ಏರ್ಪಟ್ಟ ಬಾಕೀಗಳು ಕುಮಾರನು ತೀರಿಸಲಾವಶ್ಯಕವಿಲ್ಲವೆಂದು ಕೆಲವು ಸ್ಮೃತಿಗಳಲ್ಲಿ ಹೇಳಲ್ಪಟ್ಟಿದೆ. ಆದರೆ ಅಂತಹ ಬಾಕಿಗಳನ್ನು ತೀರಿಸುವುದಕ್ಕೆ ಕುಮಾರನು ಬದ್ಧನೇ ಸರಿಯೆಂದು ತೀರ್ಮಾನಗಳು ಮಾಡಲ್ಪಟ್ಟಿವೆ. (ಇ ಲಾ. ರಿ. ೧೧. ಮ. ೮೩) ತಂದೆಗೆ ವಿಧಿಸಲ್ಪಟ್ಟ ಜುಲ್ಮಾನೆಯಾದರೂ ಅಪಹರಿಸಲ್ಪಟ್ಟ ದ್ರವ್ಯ ನಿಮಿತ್ತಕವಾಗಿ ತಂದೆಯ ಮೇಲೆ ಹೊಂದಲ್ಪಟ್ಟ ಡಿಕ್ರೀಯಾದರೂ ಕುಮಾರನನ್ನು ಬಾಧಿಸಲಾರದೆಂದು ತೀರ್ಮಾನಗಳು ಮಾಡಲ್ಪಟ್ಟಿವೆ. (ಇ. ಲಾ. ರಿ. ೬ ಅ. ೨೩೪.) ತಂದೆಯ ಬಳಿಯಿಂದ ಮಕ್ಕಳಿಗೆ ಎಷ್ಟು ಪಿತ್ರಾರ್ಜಿತ ಸ್ವತ್ವವು ಬಂದಿದ್ದರೂ ಮೇಲೆ ಹೇಳಲ್ಪಟ್ಟ ಅಯೋಗ್ಯ ರುಣಗಳನ್ನು ತೀರಿಸುವುದಕ್ಕೆ ಅವರು ಬದ್ಧರಲ್ಲ. ತಂದೆಯ ಸ್ವಾರ್ಜಿತ ಸ್ವತ್ವವು ಮಾತ್ರವೇ ಅಂತಹ ಅಯೋಗ್ಯ ರುಣಗಳಿಗೆ ಒಳಪಟ್ಟಿರುವವು.

ರುಜುವಾತಿನ ಭಾರವು— ತಂದೆಯ ರುಣಗಳು ಅಯೋಗ್ಯಕಾರ್ಯಗಳಿಗಾಗಿ ಮಾಡಲ್ಪಟ್ಟವೆಂಬ ಕಾರಣದಿಂದ ತಮಗೆ ಸಂದ ಪಿತ್ರಾರ್ಜಿತ ಸ್ವತ್ವವನ್ನು ಅವು ಭಾಧಿಸಲಾರವೆಂದು ಮಕ್ಕಳು ವಾದಿಸಿದರೆ ಸದರಿ ರುಣಗಳ ವಿಷಯವಾಗಿ ಆ ಸಂಗತಿಯನ್ನು ಸ್ಪಷ್ಟವಾದ ರುಜುವಾತಿನಿಂದ ಅವರು ಸ್ಥಾಪಿಸಬೇಕು. ತಮ್ಮ ತಂದೆ ಪುಂಡನಾಗಾದರೂ ಜೂಜುಗಾರನಾಗಿಯಾದರೂ ದುಬಾರಿ ಖರ್ಚುದಾರನಾಗಿಯಾದರೂ ಇದ್ದನೆಂದು ಮಾತ್ರವೇ ರುಜುವಾತು ಸಾಲದು. (ಇ. ಲಾ. ರಿ. ೧೦ ಕ ೩೧೨, ಇ. ಲಾ. ರಿ. ೧೪ ಬೊಂ ೩೨೦.

ಅನಾವಶ್ಯಕವಾದ ಋಣಗಳು ಯಾ ಬೇಜರೂರು ರುಣಗಳು-ಮೇಲಣ ಪೇರಾದೊಳಗೆ ಹೇಳಿದಮೇರೆ ತಂದೆಯ ರುಣಗಳು ಅಯೋಗ್ಯ ರುಣಗಳಾಗಿದ್ದರೆಯೇ ಅವುಗಳನ್ನು ತೀರಿಸುವ ಭಾದ್ಯತೆ ಕುಮಾರರಿಗೆ ತಪ್ಪಿಹೋಗುವದಲ್ಲದೆ ಮತ್ತೆ ಯಾವ ಕಾರಣಗಳಿಂದಲೂ ತಪ್ಪಲಾರದು. ಅಯೋಗ್ಯ ರುಣಗಳಾಗದ ಪಕ್ಷದಲ್ಲಿ ಅವು ಕುಟುಂಬಕ್ಕೆ ಅನಾವಶ್ಯಕವಾದವುಗಳಾಗಿಯೂ ಬೇಜರೂರು ಖರ್ಚುಗಳ ನಿಮಿತ್ತವು ಮಾಡಲ್ಪಟ್ಟವುಗಳಾಗಿಯೂ ಇದ್ದರೂ ಅವುಗಳನ್ನು ತೀರಿಸುವ ಬಾಧ್ಯತೆ ಕುಮಾರರಿಗೆ ತಪ್ಪದು. (೬ ಮೂ.ಇ.

ಅ ೪೨೧) ಎಂದರೆ ಸಾಲಗಳನ್ನು ತೀರಿಸುವ ವಿಷಯದಲ್ಲಿ ತಂದೆಯ ಬಳಿಯಿಂದ ಮಕ್ಕಳಿಗೆ ಬಂದ ಯಾವದಾಸ್ತಿಯೂ ಒಳಪಟ್ಟಿರುವುದು. (ಇ. ಲಾ. ರಿ. ೩ ಮ- ೩೭೦, ೧೪ ಕ. ಹೈ. ೧೮೭ ಇ. ಲಾ ೫ ಕ. ೧೪೮, ಇ. ಲಾ. ರಿ. ೯ ಕ. ೩೮೯ ಇ. ಲಾ. ರಿ. ೪ ಮ. ೧). ತಂದೆಯ ಪಿತ್ರಾರ್ಜಿತ ಸ್ವತ್ವದಲ್ಲಿ ಆತನು ಬದುಕಿರುವಾಗಲೇ ಕುಮಾರರಿಗೆ ಸಮಾನವಾದ ಹಕ್ಕು ಉಂಟಾಗಿತ್ತು. ಆದುದರಿಂದ ಇವರ ಭಾಗಗಳನ್ನು ಮುಟ್ಟಕೂಡದೆಂದು ಹೇಳುವುದಕ್ಕೆ ಅವಕಾಶವಿಲ್ಲವು. ಪಿತ್ರಾರ್ಜಿತ ಸ್ವತ್ವದೊಳಗಣ ತಮ್ಮ ಭಾಗವೆಲ್ಲವನ್ನೂ ಬಿಟ್ಟುಕೊಂಡಾದರೂ ತಂದೆಯನ್ನು ಋಣಪಾತಕ ವಿಮುಕ್ತನನ್ನಾಗಿ ಮಾಡುವುದು ಕುಮಾರರಿಗೆ ವಿಧಿಯೆಂದು ಶಾಸ್ತ್ರಗಳು ಉದ್ಘೋಷಿಸುತ್ತಿರುವುವು.

ತಂದೆ ಜೀವಿಸಿರುವಾಗ ಮಕ್ಕಳ ಮೇಲೆ ದಾವೆ—ತಂದೆ ಸತ್ತು ಆತನ ಆಸ್ತಿ ತಮ್ಮ ಸ್ವಾಧೀನವಲ್ಲಿರುವಾಗಲೂ ಸನ್ಯಾಸಾಶ್ರಮವನ್ನವಲಂಬಿಸುವುದರಿಂದಾದರೂ ಇಪ್ಪತ್ತು ವರುಷಗಳ ಮುಂಚೆಯೇ ದೇಶಾಂತರಗತನಾಗಿರುವುದರಿಂದಾದರೂ ಅನಿವಾರ್ಯವಾದ ವ್ಯಾಧಿಯಿಂದ ಪೀಡಿತನಾಗಿರುವುದರಿಂದಾದರೂ ತಂದೆ ಮೃತಪ್ರಾಯನಾಗಿ ಆತನ ಆಸ್ತಿ ತಮ್ಮ ಸ್ವಾಧೀನದೊಳಕ್ಕೆ ಬಂದಿರುವಾಗಲೂ ಈ ಸಂದರ್ಭಗಳಲ್ಲಿ ಮಾತ್ರವೇ ತಂದೆಯ ಋಣಗಳ ವಿಷಯವಾಗಿ ಮಕ್ಕಳು ಜವಾಬ್ದಾರರಾಗುವರಲ್ಲದೆ ಆಸ್ತಿ ಸಲ್ಲುವುದಕ್ಕೆ ಮುಂಚೆ ಜವಾಬ್ದಾರರಾಗಲಾರರು. ಈ ಹೇಳಲ್ಪಟ್ಟ ಸಂದರ್ಭಗಳಲ್ಲಿ ಅಲ್ಲದೆ ಮತ್ತೆ ಯಾವಾಗಲೂ ತಂದೆ ಬದುಕಿರುವಾಗ ಆತನ ಸಾಲಗಳ ನಿಮಿತ್ತವಾಗಿ ಕುಮಾರರ ಮೇಲೆ ದಾವೇ ನಿಲ್ಲಲಾರದು. (೧೮೫೧ ಸಂ॥ ಮ. ತೀ. ೩೩.)

ಕುಟುಂಬದ ಆಸ್ತಿಯನ್ನು ತನ್ನ ಸಾಲಗಳ ನಿಮಿತ್ತವಾಗಿ ತಂದೆ ಅಡವಿಡಬಹುದು ಅಥವ ವಿಕ್ರಯಿಸಬಹುದು.—ಕುಟುಂಬದ ಯಾವದಾಸ್ತಿಯನ್ನೂ ತಂದೆ ತನ್ನ ಸಾಲಗಳ ನಿಮಿತ್ತವಾಗಿ ಅಡವಿಡಬಹುದು, ಮಾರಬಹುದು. ಆದರೆ ಋಣಗಳು ಕುಟುಂಬಕ್ಕೆ ಅನಾವಶ್ಯಕವಾದವುಗಳಾಗಿದ್ದರೂ ಬಾಧಕವಿಲ್ಲವು. ಆದರೆ ಅಯೋಗ್ಯವಾದ ಋಣಗಳ ವಿಷಯವಾಗಿ ತಂದೆ ತನ್ನ ಸ್ವಾರ್ಜಿತವನ್ನೂ ಪಿತ್ರಾರ್ಜಿತದಲ್ಲಿ ತನ್ನ ಭಾಗವನ್ನು ಮಾತ್ರವೇ ಮಾರಬಹುದು, ಅಲ್ಲದೆ ಅಡವು ಹಾಕಬಹುದು. ಮಕ್ಕಳ ಭಾಗದ ಮೇಲೆ ಆತನಿಗೆ ಸ್ವಾತಂತ್ರ್ಯವಿಲ್ಲವು. (೧೪ ಕ. ಹೈ. ೧೮೭, ೧೫ ಕ. ಹೈ. ೨೬೪, ಇ. ಲಾ. ರಿ. ೩ ಕ. ೧, ಇ. ಲಾ. ರಿ. ೪ ಮ. ೧, ೭೩, ಇ. ಲಾ. ರಿ. ೧ ಬೊಂ ೨೬೨, ಇ. ಲಾ. ರಿ. ೨ ಬೊಂ ೪೯೮, ಇ. ಲಾ. ರಿ. ೫ ಬೊಂ. ೬೨೨, ಇ. ಲಾ.

ರಿ. ೩ ಅ. ೬೨೫, ೧೨೫; ಇ. ಲಾ. ರಿ. ೬ ಬೊಂ ೫೨೦, ಇ, ಲಾ. ರಿ. ಲ ಕ. ೫೧೭, ಇ. ಲಾ. ರಿ. ೫ ಮ. ೬೧, ಇ. ಲಾ. ರಿ. ೭ ಬೊಂ. ೪೩ಲ, ಇ ಲಾ. ರಿ. ಲ ಬೊಂ. ೪ಲ೧, ಇ. ಲಾ. ರಿ. ೯ ಮ. ೩೪೩, ಇ. ಲಾ ರಿ ೧೧ ಕ. ೩೯೬.)

ಮೇಲೆ ಹೇಳಿದ ಮೇರೆ ತಂದೆ ತನ್ನ ಸಾಲಗಳ ನಿಮಿತ್ತವಾಗಿ ಕುಟುಂಬದ ಆಸ್ತಿಯನ್ನು ಅಡವಿಟ್ಟಾಗಲೂ ಮಾರಿದಾಗಲೂ ಮಕ್ಕಳು ಮೈನರುಗಳಾಗಿದ್ದರೆಯೇ ಸದರಿ ಅಡವು ಅಲ್ಲದೆ ಕ್ರಯವು ಸಲ್ಲುವುದಲ್ಲದೆ ಕುಮಾರರು ಯುಕ್ತವಯಸ್ಕರಾಗಿರುವಾಗ ಅವರ ಅನುಮತಿಯಿಲ್ಲದೆ ಅವು ಸಲ್ಲಲಾರವೆಂದು ಕಲಕತ್ತಾ ಹೈ ಕೋರ್ಟಿನವರು ಕೆಲವು ಕೇಸಿನಲ್ಲಿ ತೀರ್ಮಾನಿಸಿರುವರು. (ಇ. ಲಾ. ರಿ. ೬ ಕ. ೭೪೯, ೨೫೩. ಇದಕ್ಕೆ ವ್ಯತಿರೇಕವು, ಇ. ಲಾ. ರಿ. ೪ ಅ. ೩೦೯). ಹೀಗೆ ಕಲಕತ್ತಾ ಹೈ ಕೋರ್ಟಿನವರು ತೀರ್ಮಾನಮಾಡಿದರೂ ಸದರಿ ಅಡವಾದರೂ ವಿಕ್ರಯವಾದರೂ ಸಲ್ಲದಾಗ ಅದರ ನಿಮಿತ್ಯವಾಗಿ ಕೊಡಲ್ಪಟ್ಟ ಸ್ವತ್ವವು ಒಂದು ಋಣವಾಗಿ ಏರ್ಪಡುವುದಾದುದರಿಂದ ಅಂತಹ ಋಣವನ್ನು ತೀರಿಸುವ ಭಾರವನ್ನು ಯಾವದಾಸ್ತಿಯೂ ವಹಿಸುವುದು ಎಂದು ಅವರೇ ತೀರ್ಮಾನಿಸಿದರು, ಆದುದರಿಂದ ಮಕ್ಕಳ ಯುಕ್ತವಯಸ್ಸಂಬಂಧವಾದ ವಿವಕ್ಷತೆಯಿಂದ ವಿಶೇಷ ಪ್ರಯೋಜನವು ಕಾಣಬರುವುದಿಲ್ಲ. ಇ. ಲಾ. ರಿ. ೬ ಕ, ೧೩೫, ೧೩ಲ, ಇ. ಲಾ, ರಿ, ೯ ಕ ೪೯೫,)

ಅದುವರಗೆ ಏರ್ಪಟ್ಟಿರುವ ಋಣಗಳ ನಿಮಿತ್ತವಾಗಿ ಮೇಲ ಹೇಳಿದ ಮೇರೆ ಕುಟುಂಬದ ಆಸ್ತಿಯನ್ನು ತಂದೆ ಅಡವು ಹಾಕಬಹುದು, ಅಲ್ಲದೆ ವಿಕ್ರಯಿಸಬಹುದು. ಇ ಲಾ ರಿ ೬ ಕ ೧೩ಲ, ಇ ಲಾ ರಿ ೧೦ ಕ ೫೩ಲ, ಇ ಲಾ ರಿ ಲ ಅ ೨೭೯, ಇ ಲಾ ರಿ ೭ ಮ ೩೯). ಅದುವರೆಗೆ ಋಣವಿಲ್ಲದಾಗ ಕುಟುಂಬದ ಆಸ್ತಿಯನ್ನು ತಂದೆ ಅಡವಿಟ್ಟರೆ ಅಲ್ಲದೆ ವಿಕ್ರಯಿಸಿದರೆ, ಸದರಿ ಅಡವಾದರೂ ವಿಕ್ರಯವಾದರೂ ಸಲ್ಲದಿದ್ದರೂ ಅಡವು, ಅಲ್ಲದೆ, ವಿಕ್ರಯದ ಕಾರಣದಿಂದ ತಂದೆಯಿಂದ ಹೊಂದಲ್ಪಟ್ಟ ಸೊತ್ತು ಒಂದು ಋಣವಾಗಿ ಏರ್ಪಡುವುದರಿಂದ ಆ ಋಣ ನಿಮಿತ್ತವಾಗಿ ದಾವಾ ತಂದು ಸದರಿ ಅಡವಿಡಲ್ಪಟ್ಟ ಅಲ್ಲದೆ ಮಾರಲ್ಪಟ್ಟ ಆಸ್ತಿಯಿಂದ ತೀರಿಸಿಕೊಳ್ಳುವಂತೆ ಡಿಕ್ರೀ ಪಡೆಯಬಹುದು. ಇಂತೆಂದು ಕಲಕತ್ತಾ ಹೈ ಕೋರ್ಟಿನವರು ತೀರ್ಮಾನಿಸಿರುವರು. (ಇ ಲಾ ರಿ ೫ ಕ ಲ೫೫, ಇ ಲಾ ರಿ ಲ ಕ ೧೩೧ ವ್ಯತಿರೇಕವು ಇ ಲಾ ರಿ ಅ ೪೯೩.)

ತಂದೆಯಮೇಲೆ ಮಾತ್ರವೇದಾವೆ ಅಲ್ಲದೆ, ಡಿಕ್ರಿ ಅಮಲ್‌ಜಾರಿ.—ತಂದೆ ಅಯೋಗ್ಯವಲ್ಲದ ಸಾಲಗಳ ನಿಮಿತ್ತವಾಗಿ ಕುಟುಂಬದ ಆಸ್ತಿ ಅಡವಿಡಲ್ಪಟ್ಟಾಗ, ಸದರಿ ಅಡವಿಟ್ಟುಕೊಂಡವನು ತಂದೆಯಮೇಲೆ ಮಾತ್ರವೇ ದಾವೆ ತಂದು ಡಿಕ್ರಿ ಹೊಂದಿದರೂ, ಡಿಕ್ರಿ ಅಮಲ್ಜಾರಿ ಮಾಡುವಾಗ ಮಕ್ಕಳ

ಭಾಗಗಳು ಸಹ ಪಿತ್ರಾರ್ಜಿತ ಯಾ ಸತ್ಸ್ವತ್ವವನ್ನೂ ಜಪ್ತಿ ಮಾಡಿ ಹರಾಜು ಹಾಕಿಸಬಹುದು. (ಇ. ಲಾ. ರಿ. ೩ ಕ. ೧೪೯; ಇ. ಲಾ. ರಿ. ೪ ಮ. ೧; ಇ. ಲಾ. ರಿ. ೯ ಮ. ೩೫೩; ಇ. ಲಾ. ರಿ. ೫ ಮ. ೬೫೧; ಇ. ಲಾ. ರಿ. ೮. ಕ. ೫-೧೭! ಇ. ಲಾ. ರಿ. ೮ ಮ. ೩೮೮; ಇ. ಲಾ, ರಿ. ೬ ಬೊಂ. ೫೨೦; ಇ. ಲಾ. ರಿ. ೧೦ ಕ. ೬೬೬; ಇ. ಲಾ. ರಿ. ೮ ಅ. ೨೦೫; ಇ. ಲಾ. ರಿ. ೪ ಮ ೧೧೧). ಆದರೆ ಅಂತಹ ಸಂದರ್ಭದಲ್ಲಿ, ಸದರಿ ಅಡವನ್ನು ಬಿಡಿಸಿಕೊಳ್ಳುವದಕ್ಕೆ ಮಕ್ಕಳಿಗವಕಾಶ ಕೊಡದೆ, ಆಸ್ತಿಯನ್ನು ಹರಾಜು ಹಾಕಕೂಡದು. (ಇ. ಲಾ. ರಿ. ೪ ಮ ೧, ೬೯; ಇ. ಲಾ. ರಿ. ೮ ಕ. ೫೨೫; ಇ. ಲಾ. ರಿ. ಬೊಂ. ೪೮೧.)

ಹಾಗೆಯೇ, ಅಡವಿನಮೇಲಲ್ಲದೆ ನಗದು ಬಾಕಿ ನಿಮಿತ್ತವಾಗಿ ತಂದೆಯ ಮೇಲೆ ಡಿಕ್ರಿ ಹೊಂದಲ್ಪಟ್ಟಾಗ, ಡಿಕ್ರಿ ಅಮಲಿನಲ್ಲಿ ಮಕ್ಕಳನ್ನು ಪಾರ್ಟಿಗಳನ್ನಾಗಿ ಸೇರಿಸದೆಯೇ ಕುಟುಂಬದ ಆಸ್ತಿ ಹರಾಜುಹಾಕಲ್ಪಟ್ಟಲ್ಲಿ, ಅದರಿಂದ ಕುಮಾರರು ಬದ್ಧರಾಗುವರೆಂದು ತೀರ್ಮಾನ ಮಾಡಲ್ಪಟ್ಟಿದೆ. (೧೪ ಕ ಹೈ. ೧೮೭; ಇ. ಲಾ. ರಿ. ೫ ಕ. ೧೪೮; ಇ. ಲಾ. ರಿ. ೧೫ ಕ. ೭೧೭; ಇ. ಲಾ. ಲಾ. ರಿ. ೧೨ ಮ. ೧೪೨.)

ಕೋರ್ಟಿನವರು ಹಾಕುವ ಹರಾಜಿನಲ್ಲಿ "ಬಾಕೀದಾರನ ಯಾವತ್ತು ಹಕ್ಕೂ ಬಾಧ್ಯತೆಯೂ ವಿಕ್ರಯಿಸಲ್ಪಡುವುದು." ಎಂದು ಪ್ರಕಟಿಸಲ್ಪಡುವದು. ಇದನ್ನು ಹಿಡಿದು, ತಂದೆಯಪಾಲು ಹಕ್ಕುಮಾತ್ರವೇ ವಿಕ್ರಯಿಸಲ್ಪಡುವಂತೆ ಊಹಿಸಕೂಡದು. ತನ್ನ ಸಾಲಗಳನಿಮಿತ್ತವಾಗಿ ಕುಟುಂಬದ ಆಸ್ತಿಯನ್ನು ವಿನಿಯೋಗ ಮಾಡುವದಕ್ಕೆ ತಂದೆಗೆ ಎಷ್ಟು ಹಕ್ಕುಂಟೋ ಆಹಕ್ಕೆಲ್ಲವೂ ವಿಕ್ರಯಿಸಲ್ಪಡುವಂತೆ ಎಣಿಸಬೇಕು. (ಇ.ಲಾ. ರಿ. ೧೩ ಕ. ೨೧) ಆದರೆ, ದಾವಾ ಅರ್ಜಿಯಿಂದಾದರೂ, ಡಿಕ್ರಿ ಅಮಲ್‌ಜಾರಿಯಿಂದಾದರೂ, ಹರಾಜಿನ ಸರಿಟಿಫಿಕೆಟ್ಟಿನಿಂದಾದರೂ, ಹರಾಜಿನಿಂದ ಬಂದ ಒಟ್ಟು ಹಣದಿಂದಾದರೂ, ಬಾಕೀದಾರನಪಾಲು ಹಕ್ಕುಮಾತ್ರವೇ ಎಂದರೆ ತಂದೆಯಪಾಲು ಹಕ್ಕುಮಾತ್ರವೇ ಹರಾಜಿಗೆ ತರಲ್ಪಟ್ಟಂತೆ ಸ್ಪಷ್ಟವಾಗಿ ಕಂಡುಬಂದರೆ, ಅಂತಹ ಸಂದರ್ಭದಲ್ಲಿ ಕುಮಾರರ ಹಕ್ಕಿಗೆ ಬಾಧಕವುಂಟಾಗಲಾರದು. (ಇ. ಲಾ; ರಿ. ೧೪ ಕ. ೫೭೨; ಇ. ಲಾ. ರಿ. ೧೧ ಬೊಂ. ೪೨; ಇ. ಲಾ. ರಿ. ೧೦ ಮ, ೨೪೧; ಇ. ಲಾ. ರಿ. ೩ ಕ. ೧೯೮; ಇ. ಲಾ. ರಿ. ೧೦ ಕ. ೬೯೮). ಎಲ್ಲರಹಕ್ಕುಗಳೂ ವಿಕ್ರಯಕ್ಕೆ ತರಲ್ಪಟ್ಟಂತೆ ಜಡ್ಜ್‌ಮೆಂಟಿನಿಂದ ಏರ್ಪಟ್ಟರೆ, ಡಿಕ್ರೀ ಅಮಲ್ಜಾರಿಯಲ್ಲಿ ಯಾವುದಾದರೂ ಕೆಲವು ಲೋಪಗಳು ಕಂಡುಬಂದ ಮಾತ್ರದಿಂದ ಕೋರ್ಟಿನವರು ಕ್ರಯವನ್ನು ರದ್ದುಮಾಡಲಾರರು (೧೪. ಮೂ. ಇ. ಅ, ೬೦೫; ಇ. ಲಾ. ರಿ. ೧೦ ಕ. ೯೮೫; ಇ. ಲಾ. ರಿ. ೧೧ ಬೊಂ. ೩೬೧. ಇ. ಲಾ. ರಿ. ೧೪ ಕ. ೪೦೧; ಇ. ಲಾ. ರಿ. ೧೬ ಕ. ೪೦.)

ಕುಮಾರರಿಂದ ತಕರಾರು ಅರ್ಜಿ.—ತಂದೆಯಮೇಲೆ ಮಾತ್ರವೇ ಡಿಕ್ರಿ ಹೊಂದಲ್ಪಟ್ಟು ಕುಟುಂಬದ ಆಸ್ತಿಯೆಲ್ಲವೂ ಹರಾಜು ಹಾಕಿಸಲ್ಪಟ್ಟಾಗ ಸದರಿ ಡಿಕ್ರೀಗೆ ಸಂಬಂಧಿಸಲ್ಪಟ್ಟ ಸಾಲಗಳು 154 ನೆಯ ಪ್ಯಾರಾದಲ್ಲಿ ಹೇಳಲ್ಪಟ್ಟ ಮೇರೆ ಅಯೋಗ್ಯಕಾರ್ಯಗಳ ನಿಮಿತ್ತವಾಗಿ ಮಾಡಲ್ಪಟ್ಟವಾಗಿದ್ದರೆ ಆ ವಿಷಯವನ್ನು ಮಕ್ಕಳು ಸ್ಪಷ್ಟವಾಗಿ ರುಜುಮಾಡಿ ಪಿತ್ರಾರ್ಜಿತದ ಸೊತ್ತಿನಲ್ಲಿ ತಮ್ಮ ಪಾಲು ಭಾಗಗಳನ್ನು ಕಾಪಾಡಿಕೊಳ್ಳಬಹುದು. ಸದರಿ ಹರಾಜಿನ ಆಸ್ತಿಯನ್ನು ವಾದಿಯೇ ಕೊಂಡುಕೊಂಡಪಕ್ಷದಲ್ಲಿ, ಆತನಮೇಲೆ ವ್ಯವಹಾರವನ್ನು ನಡೆಯಿಸಿ ಕುಮಾರರು ತಮ್ಮ ಭಾಗಗಳನ್ನು ತೆಗದುಕೊಳ್ಳಬಹುದು. (ಇ. ಲಾ. ರಿ. ೫ ಕ. ೮೫೮; ಇ. ಲಾ. ರಿ. ೮ ಕ. ೫೨೨) ಆದರೆ ವಾದಿಯಲ್ಲದೆ ಮತ್ತೆ ಯಾರಾದರೂ ಹರಾಜಿನ ಆಸ್ತಿಯನ್ನು ಕೊಂಡುಕೊಂಡಿದ್ದರೆ ಡಿಕ್ರೀಗೆ ಸಂಬಂಧಿಸಿದ ಸಾಲಗಳು ಅಯೋಗ್ಯವಾದವುಗಳೆಂದು ರುಜುಮಾಡುವುದೇ ಅಲ್ಲದೆ ಈ ವಿಷಯವನ್ನು ಕ್ರಯಕ್ಕೆ ಪೂರ್ವದಲ್ಲಿಯೇ ಕ್ರಯದಾರನು ತಿಳಿದಿದ್ದಂತೆ ಕುಮಾರರು ಸ್ಪಷ್ಟವಾಗಿ ರುಜುವು ಮಾಡಬೇಕು ಹಾಗೆ ರುಜುವು ಮಾಡದಿದ್ದರೆ ಮಕ್ಕಳ ಪಾಲಿನ ಭಾಗಗಳು ಅವರಿಗೆ ಬರಲಾರವು. ಹೀಗೆ ಕೆಲವು ಕೇಸುಗಳಲ್ಲಿ ಪ್ರಿವೀ ಕೌನ್ಸಿಲಿನವರು ತೀರ್ಮಾನಿಸಿದರು. (೧೪ ಕ ಹೈ ೧೮೭, ೨೨ ಸ ೫೬, ಇ ಲಾ ರಿ ೫ ಕ ೧೪೮, ಇ ಲಾ ರಿ ೧೨ ಬೊಂ ೬೨೫, ಇ ಲಾ ರಿ ೮ ಬೊಂ ೪೮೧.) ಡಿಕ್ರೀ ಸಾಲಗಳು ತಂದೆಯಿಂದ ಅಯೋಗ್ಯವಾದ ಕಾರ್ಯಗಳಿಗಾಗಿ ಮಾಡಲ್ಪಟ್ಟಂತೆ ದಾವಾ ಅರ್ಜಿಯಲ್ಲಿ ಕಾಣಿಸುವಾಗ ಸದರಿ ಡಿಕ್ರೀ ಪಡೆದು ನಡೆಯಿಸಲ್ಪಟ್ಟ ಹರಾಜಿನಲ್ಲಿ ಆಸ್ತಿಯನ್ನು ಕೊಂಡವನು ಅಂತಹ ಅಯೋಗ್ಯ ವಿಷಯವನ್ನು ತಿಳಿದಿದ್ದುಕೊಂಡಂತೆಯೇ ಭಾವಿಸಲ್ಪಡುವನು. ಆದುದರಿಂದ ಅಂತಹ ಸಂದರ್ಭದಲ್ಲಿ ಯಾವ ರುಜುವಾತಿನಿಂದಲೂ ನಿಮಿತ್ತವಿಲ್ಲದೆಯೇ ಕುಮಾರರು ತಮ್ಮ ಭಾಗಗಳನ್ನು ತೆಗೆದುಕೊಳ್ಳಬಹುದು. (ಇ ಲಾ ರಿ ೬ ಅ ೨೩೪.) ಮತ್ತೆ ಕೆಲವು ಕೇಸುಗಳಲ್ಲಿ ಡಿಕ್ರೀಯನ್ನು ಹಿಡಿದು ನಡೆಯಿಸಲ್ಪಟ್ಟ ಹರಾಜಿನ ಕ್ರಯದಾರನು ಡಿಕ್ರೀ ಸಾಲಗಳು ಅಯೋಗ್ಯವಾದವುಗಳೆಂದು ಏನೂ ತಿಳಿಯದೆ ಆಸ್ತಿಯನ್ನು ಕೊಂಡು ಕೊಂಡಿದ್ದರೂ ಆತನ ಮೇಲೆ ದಾವಾ ತಂದು ಕುಮಾರರು ತಮ್ಮ ಹಂಚಿಗೆಯ ಭಾಗಗಳನ್ನು ತೆಗೆದುಕೊಳ್ಳಬಹುದು. ಎಂದು ಪ್ರಿವೀ ಕೌನ್ಸಿಲಿನವರು ಅಭಿಪ್ರಾಯಪಟ್ಟಿರುವಂತೆ ಕಾಣಬರುವುದು. (ಇ ಲಾ ರಿ ೧೩ ಕ ೨೧, ಇ ಲಾ ರಿ ೧೫ ಕ ೭೧೭, ಇ ಲಾ ರಿ ೧೭ ಮ ೧೪೨, ಇ ಲಾ ರಿ ೧೭ ಕ ೫೮೪.) ಈ ವಿಷಯವು ಸಾಮಾನ್ಯವಾಗಿ ಸಂದಿಗ್ಧವಾಗಿಯೇ ಇದೆ. ಆದುದರಿಂದ ತಂದೆಯ ಮೇಲೆ ಹೊಂದಲ್ಪಟ್ಟ ಡಿಕ್ರೀಗೆ ಸಂಬಂಧಿಸಿದ ಸಾಲಗಳು ಅಯೋಗ್ಯವಾಗಿರುವಾಗ ಪಿತ್ರಾರ್ಜಿತದ ಸೊತ್ತಿ

ನಲ್ಲಿ ತಮ್ಮ ಪಾಲು ಭಾಗಗಳನ್ನು ಕಾಪಾಡಿಕೊಳ್ಳಬೇಕೆಂದು ಕುಮಾರರು ಬಯುಸಿದರೆ ಆ ಡಿಕ್ರೀ ಜಾರಿಯಲ್ಲಿ ಜಪ್ತು ಇಸ್ತಿಹಾರಾದರೂ ಹರಾಜಿನ ಇಸ್ತಿಹಾರಾದರೂ ಹುಟ್ಟಿರುವಾಗಲೇ ಎಂದರೆ ಹರಾಜಿಗೆ ಮೊದಲೆ ತಮ್ಮ ಹಕ್ಕಿನ ವಿಷಯವಾಗಿ ಸಿವಿಲ್ ಪ್ರೊಸಿಜರು ಕೋಡು ೨೭೮ ಸೆಕ್ಷನ್ ಮೇರೆ ಕೋರ್ಟಿನಲ್ಲಿ ತಕರಾರು ಅರ್ಜಿ ದಾಖಲು ಮಾಡುವುದು ಅತ್ಯಂತಾವಶ್ಯಕವು ಇಷ್ಟೇ ಅಲ್ಲದೆ ಹರಾಜಿನಲ್ಲಿ ಆಸ್ತಿಯನ್ನು ಕೊಂಡುಕೊಳ್ಳಲೆಣಿಸಿದವರೆಲ್ಲರಿಗೂ ಮಕ್ಕಳು ತಮ್ಮ ಹಕ್ಕಿನ ವಿಷಯವಾಗಿ ನೋಟೀಸನ್ನು ಜಾರೀ ಮಾಡಬೇಕು.

ಡಿಕ್ರೀ ವ್ಯವಹಾರವು ನಡೆಯುವುದಕ್ಕೆ ಮೊದಲು ತಂದೆಸಾಯುವಿಕೆ—ಸಾಲಗಳಿಗಾಗಿ ತಂದೆಯ ಮೇಲೆ ಮಾತ್ರವೇ ಡಿಕ್ರಿ ಹೊಂದಲ್ಪಟ್ಟು ವ್ಯವಹಾರ ನಡೆಯಿಸಿ ಸೊತ್ತನ್ನು ಜಪ್ತು ಮಾಡುವುದಕ್ಕೆ ಮೊದಲು ತಂದೆ ಸತ್ತುಹೋದಪಕ್ಷದಲ್ಲಿ ಕುಮಾರರ ಸ್ವಾಧೀನದೊಳಕ್ಕೆ ಸೇರಿದ ಪಿತ್ರಾರ್ಜಿತದ ಸೊತ್ತಿನ ಮೇಲೆ ಸದರೀ ಡಿಕ್ರೀ ಹಿಡಿದು ವ್ಯವಹಾರ ನಡೆಯಿಸಲು ಅವಕಾಶವಿಲ್ಲವು. ತಂದೆಯ ಸ್ವಾರ್ಜಿತ ಸ್ವತ್ವವನ್ನು ಒಳಪಡಿಸಬೇಕೆಂದು ಬಯುಸಿದ ಪಕ್ಷದಲ್ಲಿ ತಂದೆ ಸತ್ತು ಹೋದ ೬ ಸಂ॥ ವಳಗಾಗಿ ಪುನಃ ಕುಮಾರರ ಮೇಲೆ ದಾವಾ ತರಬೇಕು. (ಇ ಲಾ ರಿ ೧೩ ಮ ೨೬೫, ಇ ಲಾ ರಿ ೩ ಮ ೪೨, ಇ ಲಾ ರಿ ೫ ಮ ೨೩೨.) ಸದರಿ ಡಿಕ್ರೀಗೆ ಸಂಬಂಧಿಸಿದ ಸಾಲಗಳು ಅಯೋಗ್ಯವಾದವುಗಳಾಗಿದ್ದರೆ ಮಕ್ಕಳಿಗೆ ಸೇರಿದ ಪಿತ್ರಾರ್ಜಿತದಲ್ಲಿ ತಂದೆ ಪಾಲು ಭಾಗವು ಕೂಡ ಸಾಲಗಾರರಿಗೆ ಸಲ್ಲಲಾರದು ತಂದೆಯು ಜೀವಿತಕಾಲದಲ್ಲಿಯೇ ಡಿಕ್ರೀ ವ್ಯವಹಾರ ನಡೆಯಿಸಿ ಆತನ ಭಾಗವನ್ನು ಜಪ್ತು ಮಾಡಿಸಿದ್ದರೆ ಸಲ್ಲುವುದು. (ಇ ಲಾ ರಿ ೫ ಕ ೧೪೮,)

ತಂದೆಯ ಆಸ್ತಿಗಳನ್ನೂ ಸಾಲಗಳನ್ನೂ ಮಕ್ಕಳು ವಿಭಾಗಿಸಿಕೊಳ್ಳುವಿಕೆ. ತಂದೆ ಸತ್ತು ಹೋದ ಮೇಲೆ ಆಸ್ತಿಯನ್ನು ವಿಭಾಗಮಾಡಿಕೊಂಡರೆ, ತಂದೆ ಮಾಡಿದ ಸಾಲಗಳನ್ನು ತೀರಿಸುವದಕ್ಕೆ ತಕ್ಕ ಏರ್ಪಾಟು ಮಾಡಿ ಮಿಕ್ಕ ಆಸ್ತಿಯನ್ನು ಮಾತ್ರವೇ ಅವರು ವಿಭಾಗ ಮಾಡಿಕೊಳ್ಳಬೇಕು. (೩ ಮ ಹೈ ೧೭೩, ೧೯೧) ಹಾಗೆ ಏರ್ಪಾಟು ಮಾಡದೆ ಆಸ್ತಿಯನ್ನೂ ಸಾಲಗಳನ್ನೂ ಸೇರಿಸಿ ಮಕ್ಕಳೆಲ್ಲರೂ ವಿಭಾಗಮಾಡಿಕೊಂಡ ಪಕ್ಷದಲ್ಲಿ ಅಂತಹ ವಿಭಾಗಕ್ಕೆ ಸಾಲಗಾರರು ಸಮ್ಮತಿಸಿದರೆಯೇ ಹೊರತು ಇಲ್ಲದ ಪಕ್ಷದಲ್ಲಿ ಎಲ್ಲರ ಭಾಗಗಳೂ ಎಲ್ಲಾ ಸಾಲಗಳಿಗೂ ಜವಾಬುದಾರಿಯನ್ನು ವಹಿಸಿರುವುವು

ತಂದೆ ಮಕ್ಕಳು ವಿಭಾಗಮಾಡಿಕೊಂಡ ಮೇಲೆ ತಂದೆ ಮಾಡಿದ ಸಾಲಗಳು—ತಂದೆಯೂ ಮಕ್ಕಳೂ ಆಸ್ತಿಯನ್ನು ವಿಭಾಗಮಾಡಿಕೊಂಡು ಬೇ

ಯಾದ ಮೇಲೆ ತಂದೆ ಸಾಲಗಳು ಮಾಡಿದರೆ ಅವು ಆತನ ಸ್ವಾಧೀನದಲ್ಲಿರುವ ಆಸ್ತಿಯಿಂದಲೇ ತೀರಬೇಕಲ್ಲದೆ ಮಕ್ಕಳ ಅನುಭವದಲ್ಲಿರುವ ಆಸ್ತಿಯನ್ನು ಭಾಧಿಸಲಾರವು. ವಿಭಾಗಾನಂತರದಲ್ಲಿ ತಂದೆಗೆ ಮತ್ತೊಬ್ಬ ಮಗನು ಹುಟ್ಟಿದಪಕ್ಷದಲ್ಲಿ ಆತನಿಗೆ ಸಲ್ಲುವ ಆಸ್ತಿ ಮಾತ್ರವೇ ಈ ಹೇಳಲ್ಪಟ್ಟ ಸಾಲಗಳಿಗೆ ಒಳಪಟ್ಟಿರುವುದು. ಇವುಗಳನ್ನು ತೀರಿಸುವದಕ್ಕೆ ಸದರಿ ಆಸ್ತಿ ಸಾಲದಪಕ್ಷದಲ್ಲಿ, ವಿಭಾಗಿಸಿಕೊಂಡಿರುವ ಮಕ್ಕಳು ತಮ್ಮ ಅನುಭವದೊಳಗಣ ಆಸ್ತಿಯಿಂದ ತೀರಿಸಬೇಕೆಂದು ಜೀಮೂತವಾಹನನು ಹೇಳುವನು. ಆದರೆ ಈಕಾಲದಲ್ಲಿ ಕೋರ್ಟಿನವರು ಈ ಅಭಿಪ್ರಾಯವನ್ನು ಬಹುಶಃ ಅಂಗೀಕರಿಸರು.

ತಂದೆಯ ಸಾಲಗಳ ನಿಮಿತ್ತವಾಗಿ ಕುಮಾರರು ತಮ್ಮ ಸ್ವಾರ್ಜಿತವನ್ನು ಕೊಡುವುದಕ್ಕೆ ಬದ್ಧರಲ್ಲವು.

ಮಗನು, ಮೊಮ್ಮಗನು, ಮರಿಮಗನು.— ತಂದೆ ಮಾಡಿದ ಸಾಲಗಳನ್ನು ಮಗನು ತೀರಿಸುವ ವಿಷಯದಲ್ಲಿ ಮೇಲೆ ತಿಳಿಸಲ್ಪಟ್ಟ ವಿಧಿಗಳೆಲ್ಲವೂ ಅಜ್ಜನ ಸಾಲಗಳ ವಿಷಯವಾಗಿ ಮೊಮ್ಮಗನಿಗೂ, ಮುತ್ತಜ್ಜನ ಸಾಲಗಳ ವಿಷಯವಾಗಿ ಮರಿಮಗನಿಗೂ, ಅನ್ವಯಿಸುವುವು. ಮಗನು ಮೊಮ್ಮಗನು-ಮರಿಮಗನು ಈಮೂವರಲ್ಲದೆ ಸಮಷ್ಟಿ ಕುಟುಂಬದಲ್ಲಿ ಯಾವಭಾಗಸ್ಥನೂ ಮತ್ತೊಬ್ಬ ಭಾಗಸ್ಥನು ಮಾಡಿದ ಸಾಲಗಳನ್ನು ತೀರಿಸುವದಕ್ಕೆ ಬದ್ಧನಲ್ಲವು.

ಸಮಷ್ಟಿ ಕುಟುಂಬದಲ್ಲಿ ತಂದೆಯಲ್ಲದೆ ಇತರ ಭಾಗಸ್ಥರ ಸಾಲಗಳು— ಸಮಷ್ಟಿ ಕುಟುಂಬದಲ್ಲಿ ತಂದೆಯಲ್ಲದೆ ಮತ್ತೆ ಯಾವ ಭಾಗಸ್ಥನಾದರೂ ಎಂದರೆ ಮಗನು, ಅಣ್ಣನು, ತಮ್ಮನು, ಮುಂತಾದವರು ಸಾಲಗಳು ಮಾಡಿದ್ದರೆ ಅಂತಹ ಸಾಲಗಳ ನಿಮಿತ್ತವಾಗಿ ಅವರು ಸಮಷ್ಟಿಯಾಸ್ತಿಯಲ್ಲಿ ತಮ್ಮ ಪಾಲು ಹಕ್ಕನ್ನು ಅಡವಿಡಬಹುದು. ಅಲ್ಲದೆ ಮಾರಬಹುದು. ಇಷ್ಟೇ ಅಲ್ಲದೆ ಸಮಷ್ಟಿಕುಟುಂಬದೊಳಗಣ ಭಾಗಸ್ಥನು ತನ್ನ ಪಾಲು ಹಕ್ಕನ್ನು ಅಡವಿಟ್ಟಾದರೂ ಮಾರಿಹಾಕಿಯಾದರೂ ಹಣ ತೆಗದುಕೊಳ್ಳಬಹುದು. ಸಮಷ್ಟಿ ಕುಟುಂಬದಲ್ಲಿ ಒಬ್ಬಭಾಗಸ್ಥನು ಸತ್ತುಹೋಗುವಾಗ ಆತನ ಹಕ್ಕೆಲ್ಲವೂ ಮಿಕ್ಕ ಭಾಗಸ್ಥರ ಹಕ್ಕಿನಲ್ಲಿ ಸೇರಿಹೋಗುವದು. ಆದುದರಿಂದ ಸತ್ತುಹೋದ ಭಾಗಸ್ಥನ ಮೇಲೆ ಆತನ ಸಾಲಗಾರರು ಡಿಕ್ರೀ ಹೊಂದಿದ್ದರೂ ಪ್ರಯೋಜನವಿಲ್ಲವು. ಆತನ ಜೀವಿತಕಾಲದಲ್ಲಿ ಆತನ ಪಾಲು ಭಾಗವನ್ನು ಜಪ್ತುಮಾಡಿದ್ದರೆಯೇ ವಿನಿಯೋಗಿಸುವುದು. (೧೧ ಬೊಂ. ಹೈ. ೭೬, ಇ. ಲಾ. ರಿ. ೨ ಬೊಂ. ೪೭೯, ಇ ಲಾ ರಿ ೮ ಅ ೪೭೫, ಇ ಲಾ ರಿ ೧೧ ಅ ೩೦೨, ೩ ಕ ಹೈ ೩೪-೩೩, ಇ ಲಾ ರಿ ೭ ಕ ೫೨ ೫೪, ೧ ಮದರಾಸು ಲಾರಿಪೋರ್ಟರ್

೬೩, ೪ ಅ ಹೈ ೧೩೭, ಇ ಲಾ ರಿ ೩ ಕ ೧೯೮, ಇ ಲಾ ರಿ ೫ ಕ ೧೪೮, ಇ ಲಾ ರಿ ೭ ಅ ೭೩೧, ಇ ಲಾ ರಿ ೪ ಮ ೩೦೨.) ಸತ್ತುಹೋದವನ ಸ್ವಾರ್ಜಿತದ ಮೇಲೆ ನಿರಭ್ಯಂತರವಾಗಿ ಡಿಕ್ರೀಯನ್ನು ಜಾರಿಗೆ ತರಬಹುದು.

ಆಸ್ತಿಯನ್ನು ಹೊಂದಿದ ವಾರಸುದಾರರ ಜವಾಬುದಾರಿ—ಒಬ್ಬ ಆಸ್ತಿಗಾರನ ಸಾಲಗಳನ್ನು ತೀರಿಸುವ ವಿಷಯವಾಗಿ ಮೇಲೆ ಹೇಳಿದ ಮೇರೆಗೆ ಆತನ ಮಗನು ಮೊಮ್ಮಗನು ಮರಿಮಗನು ಇವರು ಮಾತ್ರವೇ ಬದ್ಧರಲ್ಲದೆ ಆತನ ಹೆಂಡತಿ, ತಾಯಿ, ತಂದೆ, ಅಣ್ಣನು, ತಮ್ಮನು, ಚಿಕ್ಕಪ್ಪನು ದೊಡ್ಡಪ್ಪನು, ಮುಂತಾದವರು ಬದ್ಧರಲ್ಲವು. (ಇ ಲಾ ರಿ ೧ ಮ ೩೫೩, ಇ ಲಾ ರಿ ೧೦ ಮ ೩೧೬ ೧೮೫೫ ಸಂ॥ ಮ ತೀ ೧೮೩) ಆದರೆ ಇವರಲ್ಲಿ ಯಾರಾದರೂ ಸದರಿ ಆಸ್ತಿದಾರನಿಗೆ ವಾರಸರಾಗಿ ಆತನ ಆಸ್ತಿಯನ್ನು ಹೊಂದಿದ್ದರೆ ಆಯಾಸ್ತಿ ಸಾಕಾದಮಟ್ಟಿಗೂ ಆತನ ಸಾಲಗಳನ್ನು ತೀರಿಸುವದಕ್ಕೆ ಬದ್ಧರಾಗಿರುವರು. (ಇ ಲಾ ರಿ ೩ ಮ ೩೫೯, ೭ ಮ ೫೮೬.) ವಾರಸುದಾರರಾಗಿದ್ದರೂ ಸತ್ತುಹೋದವನ ಆಸ್ತಿ ಎಷ್ಟುಮಾತ್ರವೂ ಹೊಂದದಿದ್ದರೆ ಆತನ ಸಾಲಗಳ ವಿಷಯಕವಾಗಿ ಎಷ್ಟುಮಾತ್ರವೂ ಜವಾಬುದಾರಿ ಇರಲಾರದು. ಮತ್ತು ಸತ್ತುಹೋದವನ ಆಸ್ತಿಯನ್ನು ಇತರರ ಸ್ವಾಧೀನಕ್ಕೆ ಹೋಗಲೀಸದೆ ತಕ್ಕ ಶ್ರದ್ಧೆಯಿಂದ ಅದನ್ನು ತಮ್ಮ ಸ್ವಾಧೀನದೊಳಕ್ಕೆ ತಂದುಕೊಂಡು ಸಾಲಗಾರರಿಗೆ ನಷ್ಟಬಾರದಂತೆ ಮಾಡುವುದಕ್ಕೆ ವಾರಸುದಾರರಾದವರು ಬದ್ಧರಲ್ಲವು. ಒಂದು ಕೇಸಿನಲ್ಲಿ ಒಬ್ಬ ವಿತಂತುವಿನ ಅಶ್ರದ್ಧೆಯಿಂದ ಆಕೆಯ ಗಂಡನಾಸ್ತಿಯನ್ನು ಆಕೆಯ ಸಹೋದರನೂ ತಂತೆಯೂ ಅಪಹರಿಸಿದರು. ಆಕೆಯ ಗಂಡನ ಸಾಲಗಾರರಿಗೆ ಇವರೇ ಜವಾಬುದಾರರಲ್ಲದೆ ವಿತಂತುವಲ್ಲವೆಂದು ತೀರ್ಮಾನಿಸಲ್ಪಟ್ಟಿತು. (೨ ಡಬ್ಲಿಯು ಮೆಕ್ ನಾಟನ್ ೨೮೬.)

ವಾರಸುದಾರರಲ್ಲದವರು ಸತ್ತುಹೋದವನ ಆಸ್ತಿಯನ್ನು ಅಕ್ರಮವಾಗಿ ಸ್ವಾಧೀನಪಡಿಸಿಕೊಂಡಿದ್ದ ಪಕ್ಷದಲ್ಲಿ ಸದರಿ ಆಸ್ತಿಯ ಕಿಮ್ಮತ್ತಿನವರೆಗೂ ಅವರು ಸಾಲಗಾರರಿಗೆ ಜವಾಬುದಾರರಾಗಿರುವರು. ಅವರ ಮೇಲೆ ಸತ್ತುಹೋದವನ ಸಾಲಗಾರರು ದಾವಾ ತಂದಾಗ ತಮಗೆಷ್ಟುಮಾತ್ರವೂ ಆಸ್ತಿ ಸೇರಲಿಲ್ಲವೆಂದಾದರೂ ಸೇರಿದ ಆಸ್ತಿಯೆಲ್ಲವೂ ಆವಶ್ಯಕವಾದ ಖರ್ಚುಗಳ ನಿಮಿತ್ತವಾಗಿ ಎಂದರೆ ಸತ್ತುಹೋದವನ ಶ್ರಾದ್ಧಾದಿ ಕರ್ಮಗಳ ಗಳಿಗೆ ಅಲ್ಲದೆ ಆತನ ಇತರ ಋಣಗಳ ಗಳಿಗೆ ವ್ಯಯವಾಯಿತೆಂದಾದರೂ ರುಜುವಾತು ಮಾಡಿದ ಪಕ್ಷದಲ್ಲಿ ಅವರ ಜವಾಬುದಾರಿ ತಪ್ಪಿಹೋಗುವುದು. ಆದರೆ ಸದರಿ ಆಸ್ತಿಯನ್ನು ಅವರ ಸ್ವಂತ ವೆಚ್ಚಗಳ ಗಳಿಗೆ ವಿನಿಯೋಗಿಸಿಕೊಂಡ ಪಕ್ಷದಲ್ಲಿ ಜವಾಬುದಾರಿ ತಪ್ಪಲಾರದು.

ಪರಾಧೀನಗಳು—ಸಾಲಗಾರರಿಗೆ ಸಲ್ಲದಂತೆ ಮಾಡಬೇಕೆಂಬ ದುರುದ್ದೇಶದಿಂದ ಯಾರಾದರೂ ತಮ್ಮ ಆಸ್ತಿಯನ್ನು ಕ್ಕಕುಲಿತೆಯಾಗಿ ಬಹಳ ಪ್ರತಿಫಲಕ್ಕಾದರೂ ಪ್ರತಿಫಲವಲ್ಲದೆಯಾದರೂ ಪರಾಧೀನಮಾಡಿದಪಕ್ಷದಲ್ಲಿ ಅಂತಹ ಪರಾಧೀನವು ಸಲ್ಲಲಾರದು, ಸದರಿ ಆಸ್ತಿಯ ಮೇಲೆ ಸಾಲಗಾರರು ತಮ್ಮ ಡಿಕ್ರೀಗಳನ್ನು ನೆರವೇರಿಸಿಕೊಳ್ಳಬಹುದು. ಆದರೆ ಮೋಸದ ಯೋಚನೆ ಲೇಶವಾದರೂ ಇಲ್ಲದೆ ಸರಿಯಾದ ಪ್ರತಿಫಲವನ್ನು ಹೊಂದಿಯಾದರೂ ಪ್ರತಿಫಲವನ್ನು ಹೊಂದದಿದ್ದರೂ ಕ್ರಮವಾದ ಸಂದರ್ಭದಲ್ಲಿ ದಾನರೂಪಕವಾಗಿಯಾದರೂ ಮಾಡಲ್ಪಟ್ಟ ಪರಾಧೀನಗಳು ಸಲ್ಲದೆ ತಪ್ಪವು. (೪ ಮ ಹೈ ೮೪, ೩ ಲಾ ರಿ ೬ ಅ ೫೬೦, ೨೧ ಸ ೧೫೫.)

ಒಬ್ಬ ಆಸ್ತಿದಾರನ ವಾರಸುದಾರನು ಕಕ್ಕುಲಿತೆಯಿಂದಲ್ಲದೆ ತಕ್ಕ ಪ್ರತಿಫಲವನ್ನು ಹೊಂದಿ ಆತನ ಆಸ್ತಿಯನ್ನು ಮಾಂದ ಪಕ್ಷದಲ್ಲಿ ಇಲ್ಲದೆ ಇತರವಾದ ನ್ಯಾಯ ಮಾರ್ಗಗಳಲ್ಲಿ ಪರಾಧೀನಮಾಡಿದ್ದಪಕ್ಷದಲ್ಲಿ ಸತ್ತುಹೋದ ಆಸ್ತಿದಾರನ ಸಾಲಗಾರರಿಗೆ ಸದರಿ ಆಸ್ತಿಯ ಮೇಲೆ ಹಕ್ಕು ಇರಲಾರದು. (೨ ಶ ೨೯೬, ೯ ಬೊಂ ಲೈ ೧೧೬, ೧೨ ಬೊಂ. ಕ್ಯ. ೩೮.) ಹಾಗೆ ಪರಾಧೀನ ಮಾಡಿದ ವಾರಸುದಾರನು ಸದರಿ ಆಸ್ತಿಯ ಕಿಮ್ಮತ್ತಿನವರೆಗೂ ಸ್ವತಃ ಜವಾಬುದಾರನಾಗಿರುವನು.

ಹೆಂಡತಿ, ಸೇವಕನು, ಶಿಷ್ಯನು, ಮುಂತಾದವರು ಮಾಡಿದಸಾಲಗಳು-ಇಷ್ಟರವರೆಗೆ ಈ ಪ್ರಕರಣದಲ್ಲಿ ಋಣಸ್ಥನ ಆಸ್ತಿಯನ್ನು ಹೊಂದಿದಂತಹವನಿಗೆ ಆತನ ಸಾಲಗಳನ್ನು ತೀರಿಸುವ ವಿಷಯವಾಗಿ ಉಂಟಾಗಿರುವ ಬಾಧ್ಯತೆಯನ್ನು ತಿಳಿಸಿದ್ದೆವು. ಕೆಲವು ಸಂದರ್ಭಗಳಲ್ಲಿ ಆಸ್ತಿ ಹೊಂದುವುದರೊಡನೆ ನಿಮಿತ್ತವಿಲ್ಲದೆಯೇ ಒಬ್ಬರು ಮಾಡಿದ ಸಾಲಗಳನ್ನು ಮತ್ತೊಬ್ಬ ತೀರಿಸುವುದಕ್ಕೆ ಬದ್ಧರಾಗಿರುವರು. ಅದು ಹೇಗೆಂದರೆ.—

(೧) ಸಮಷ್ಟಿಕುಟುಂಬಗಳಲ್ಲಿ ಕುಟುಂಬದ ಖರ್ಚುಗಳ ನಿಮಿತ್ತವಾಗಿ ಮೇನೇಜಿಂಗು ಮೆಂಬರು ಮಾಡಿದ ಸಾಲಗಳಿಗೆ ಕುಟುಂಬದ ಸ್ವತ್ತವೆಲ್ಲವೂ ಜವಾಬುದಾರಿಯಾಗಿರುವದು. ಮತ್ತು ಕುಟುಂಬದಲ್ಲಿ ಭಾಗಸ್ಥರೆಲ್ಲರೂ ಜವಾಬುದಾರರಾಗಿರುವರು.

(೨) ಆವಶ್ಯಕವಾದ ಗೃಹಕೃತ್ಯಗಳ ನಿಮಿತ್ತವಾಗಿ ಹೆಂಡತಿಮಾಡಿದ ಸಾಲಗಳನ್ನುಗಂಡನು ತೀರಿಸಬೇಕು. (೧ ಡಬ್ಲ್ಯು ಮೆಕ‘ನಾಟೆನ್ ೨೮೬.)

(೩) ಶಿಷ್ಯನು ಸೇವಕನು ಮೊದಲಾದವರು ಗೃಹಕೃತ್ಯಗಳಿಗಾಗಿ ಸಾಲ ಮಾಡಿದರೆ, ತೀರಿಸುವುದಕ್ಕೆ ಎಜಮಾನನು ಬದ್ಧನಾಗಿರುವನು.

(೪) ಅಧಿಕಾರವನ್ನು ಅತಿಕ್ರಮಿಸದೆ ಏಜಂಟುಮಾಡಿದ ನ್ಯಾಯ

ವಾದ ಸಾಲಗಳನ್ನು ತೀರಿಸುವದಕ್ಕೆ ಎಜಮಾನನು ಬದ್ಧನಾಗಿರುವನು.

(೫) ಸಮುಷ್ಟಿಕುಟುಂಬದವರು ಜಾಯಿಂಟಾಗಿ ವ್ಯಾಪಾರ ಮಾಡಿದಲ್ಲಿ ಸದರಿ ವ್ಯಾಪಾರದ ನಿಮಿತ್ತವಾಗಿ, ಅವರಲ್ಲಿ ಒಬ್ಬನುಮಾತ್ರವೇ ಸಾಲಗಳು ಮಾಡಿದರೂ, ತೀರಿಸುವದಕ್ಕೆ ಎಲ್ಲರೂ ಬದ್ಧರಾಗುವರು. (ಇ. ಲಾ. ರಿ. ೧ ಕ. ೪೭೫.) ಸಮುಷ್ಟಿ ಕುಟುಂಬದ ಮೇನೇಜರಾಗಿರುವವನು ಸಮುಷ್ಟಿ ಕುಟುಂಬದ ಜಾಯಿಂಟು ವ್ಯಾಪಾರಕ್ಕಾಗಿ ಕುಟುಂಬದ ಆಸ್ತಿಯನ್ನು ಅಡವಿಟ್ಟದ್ದು ಆ ಅಡವನ್ನು ಹಿಡಿದು ಆತನಮೇಲೆ ಮಾತ್ರವೇ ದಾವೆ ತರಲ್ಪಟ್ಟು ಆಸ್ತಿ ಹರಾಜು ಹಾಕಲ್ಪಟ್ಟಪಕ್ಷದಲ್ಲಿ, ಮಿಕ್ಕಭಾಗಸ್ಥರು ಪ್ರತಿವಾದಿಗಳಾಗಿ ಸೇರಿಸಲ್ಪಡಲಿಲ್ಲವೆಂಬ ಕಾರಣದಿಂದ ಕ್ರಯವು ರದ್ದುಪಡಿಸಲ್ಪಡಲಾರದು. (ಇ. ಲಾ. ರಿ. ೧೫ ಕ. ೭೦.) ಆಧಾರದಮೇಲೆ ಅಲ್ಲದೆ ನಗದು ಬಾಕೀಗಾಗಿ ಸಮುಷ್ಟಿಕುಟುಂಬದ ಮೇನೇಜರುಮೇಲೆ ಮಾತ್ರವೇ ದಾವೆ ತಂದು ಡಿಕ್ರೀಹೊಂದಲ್ಪಟ್ಟ ಪಕ್ಷದಲ್ಲಿ, ಸದರಿ ಬಾಕಿ ಕುಟುಂಬನಿಮಿತ್ತವಾಗಿ ಮಾಡಲ್ಪಟ್ಟಿರುವದಾದರೂ, ಕುಟುಂಬದ ಸ್ವತ್ವದಲ್ಲಿ ಮೇನೇಜರಿನ ಭಾಗವನ್ನು ಮಾತ್ರವೇ ಆ ಡಿಕ್ರಿ ಬಾಧಿಸುವದಲ್ಲದೆ ಮಿಕ್ಕ ಭಾಗಗಳನ್ನು ಬಾಧಿಸಲಾರದು. ಹೀಗೆಂದು ಬೊಂಬಾಯಿ ಹೈಕೋರ್ಟಿನವರು ತೀರ್ಮಾನ ಮಾಡಿರುವರು. (ಇ.ಲಾ.ರಿ. ೬ ಬೊಂ. ೫೬೪; ಇ.ಲಾ.ರಿ. ೧೧ ಬೊಂ.೭೦೦.)

ಪುತ್ರಸಂತತಿ ಇಲ್ಲದಾಸ್ತಿದಾರನು.— ಪುತ್ರಸಂತತಿ- ಎಂದರೆ— ಪುತ್ರಪೌತ್ರ ಪ್ರಪೌತ್ರಸಂತತಿ ಇಲ್ಲದ ಆಸ್ತಿದಾರನು, ಅಣ್ಣತಮ್ಮಂದಿರು ಮುಂತಾದವರಿಗೆ ಜಾಯಿಂಟಲ್ಲದ ತನ್ನಾಸ್ತಿಯನ್ನು, ಅದು ಚರಾಸ್ತಿಯಾದರೂ ಸ್ಥಿರಾಸ್ತಿಯಾದರೂ ಸರಿಯೆ, ಸ್ವಾರ್ಜಿತವಾದರೂ ಪಿತ್ರಾರ್ಜಿತವಾದರೂ ಸರಿಯೆ, ಆತನ ಇಚ್ಛೆಬಂದಂತೆ ನಿರಾತಂಕವಾಗಿ ಪರಾಧೀನ ಮಾಡಬಹುದು (೨ ಮೂ ಇ ಅ. ೫೪; ೬ ಮೂ. ಇ. ಅ. ೩೦೯; ೩ ಬೊಂ. ಹೈ. ೭; ೪ ಅ, ಹೈ. ೩೧; ೧ ಮ. ಹೈ. ೫೧.)

ತಂದೆಯ ಸ್ವಾರ್ಜಿತ ಸ್ವತ್ವದ ಮೇಲೆ ಆತನ ಸ್ವಾತಂತ್ರ್ಯವು—ಪುತ್ರಸಂತತಿಯುಂಟಾಗಿರುವ ಆಸ್ತಿದಾರನು ತನ್ನ ಸ್ವಾರ್ಜಿತಸ್ವತ್ವವನ್ನು ಮಾತ್ರವೇ ಪರಾಧೀನ ಮಾಡಬಹುದು. ಸ್ವಾರ್ಜಿತವಾದರೂಕೂಡ ಸ್ಥಿರಾಸ್ತಿಯನ್ನು ಪರಾಧೀನ ಮಾಡುವದಕ್ಕೆ ತಂದೆಗೆ ಸಂಪೂರ್ಣ ಸ್ವಾತಂತ್ರ್ಯವಿಲ್ಲವೆಂದು ಪೂರ್ವಕಾಲದಲ್ಲಿ ಕೆಲವು ಕೇಸುಗಳಲ್ಲಿ ತೀರ್ಮಾನಗಳು ಮಾಡಲ್ಪಟ್ಟುವು (೧೮೬೦ ಸಂ॥ ಮ. ತೀ. ೨೨೭; ೧೮೬೨ ಸಂ॥ ಮ, ತೀ. ೪೧; ೧೮೫೩ ಸಂ॥ ಮ. ತೀ. ೬೧; ೩ ಮ. ಹೈ. ೫೫; ೧ ಅ. ಹೈ. ೧೫೩; ೧೨ ಮೂ. ಇ, ಅ. ೩೮). ಆದರೆ ಈಗ ಚರವಾದರೂ ಸರಿಯೆ ಸ್ಥಿರವಾದರೂ

ಸರಿಯೆ ಸ್ವಾರ್ಜಿತ ಸ್ವತ್ವವನ್ನು ಕುಮಾರರ ಇಷ್ಟದೊಡನೆ ನಿಮಿತ್ತವಿಲ್ಲದೆ ತನ್ನ ಇಚ್ಛಾನುಸಾರವಾಗಿ ಪರಾಧೀನ ಮಾಡುವುದಕ್ಕೆ ತಂದೆಗೆ ಸಂಪೂರ್ಣ ಸ್ವಾತಂತ್ರ್ಯವುಂಟೆಂದು ಎಲ್ಲಾ ಹೈಕೋರ್ಟುಗಳವರೂ ಪ್ರೀವೀಕೌನ್ಸಿಲ ತೀರ್ಮಾನಮಾಡಿರುವರು, (೧೨ ಕ. ಹೈ. ೪೩೦; ೧೦ ಸ. ೨೮೭; ೯ ಮೂ. ಇ. ಅ. ೯೭, ೧೨೧; ೩ ಬೊಂ. ಹೈ. ೩೧೮; ಇ. ಲಾ. ರಿ. ೧ ಅ. ೩೯೪; ಇ. ಲಾ. ರಿ, ೧೦ ಮು. ೨೫೧; ಇ. ಲಾ. ರಿ. ೧೦ ಬೊ. ೫೨೮; ೬ ಮೂ. ಇ. ಅ. ೭೬; ೪ ಮೂ. ಇ, ಅ, ೧೦೩; ೬ ಸ ೭೧. ೩೩; ೭ ಸ. ೫೭; ೮ ಸ. ೧೫. ೧೧ ಸ. ೪೩೬)

ವಿಭಾಗಾನಂತರದಲ್ಲಿ ತಂದೆಯು ಸ್ವತ್ವದಮೇಲೆ ಆತನಸ್ವಾತಂತ್ರ್ಯವು— ತಂದೆಯೂ ಮಕ್ಕಳೂ ವಿಭಾಗಮಾಡಿಕೊಂಡು ಬೇರೆಯಾಗಿರುವಾಗ, ತಂದೆಯು ಪಾಲುಭಾಗವೂ ವಿಭಾಗಾನಂತರದಲ್ಲಿ ಆತನು ಸಂಪಾದಿಸಿದ ಆಸ್ತಿಯೂ ಆತನ ಇಷ್ಟಪ್ರಕಾರವಾಗಿ ಪರಾಧೀನಮಾಡಬಹುದು ೧೮೬೨ ಸ॥ ಮು. ತೀ. ೧

ಪಿತ್ರಾರ್ಜಿತದಮೇಲೆ ತಂದೆಗೆ ಸ್ವಾತಂತ್ರ್ಯವಿಲ್ಲವು- ಸಮಷ್ಟಿಕುಟುಂಬದ ಪಿತ್ರಾರ್ಜಿತಸ್ವತ್ವವನ್ನುತನ್ನ ಇಷ್ಟಬಂದಂತೆ ಪರಾಧೀನ ಮಾಡುವುದಕ್ಕೆ ತಂದೆಗೆ ಸ್ವಾತಂತ್ರ್ಯವಿಲ್ಲವು. ಚರರೂಪಕವಾದ ಪಿತ್ರಾರ್ಜಿತದ ಸ್ವತ್ವದ ಮೇಲೆ ಮಾತ್ರವು ತಂದೆಗೆ ಸಂಪೂರ್ಣ ಸ್ವಾತಂತ್ರ್ಯವುಂಟೆಂದೂ ಅದರವಿಷಯವಾಗಿ ತಂದೆ ನಡೆಯಿಸಿದ ಪರಾಧೀನಗಳನ್ನು ಆಕ್ಷೇಪಿಸುವದಕ್ಕೆ ಕುಮಾರರಿಗೆ ಹಕ್ಕಿಲ್ಲವೆಂದೂ, ಕೆಲವರು ಹೇಳಿದರು. ಹಿಂದಣಕಾಲದ ಕೆಲವುತೀರ್ಮಾನಗಳಲ್ಲಿಯೂ ಇದೇ ಅಭಿಪ್ರಾಯವೇ ತಿಳಿಯಪಡಿಸಲ್ಪಟ್ಟಿತು. (೩ ಮು ಹೈ. ೮೫೫; ಇ. ಲಾ. ರಿ. ೪ ಮು. ೮೭; ೮ ಮು. ಹೈ, ೬೦; ೪ ಅ, ಹೈ. ೬೩; ೧೨ ಮೂ. ಇ. ಅ. ೩೪; ಇ. ಲಾ. ರಿ. ೧ ಮು. ೨೫೨).

ವಿಧ್ಯುಕ್ತಕಾರ್ಯಗಳ ನಿಮಿತ್ತವಾಗಿ ಚರರೂಪಕ ಪಿತ್ರಾರ್ಜಿತದಮೇಲೆ ಸ್ವಾತಂತ್ರ್ಯವು.— ಕುಟುಂಬ ವ್ಯಯಗಳು, ವಿಧ್ಯುಕಗಳಾದ ಪ್ರೀತಿಪೂರ್ವಕ ದಾನಗಳು, ಮತ್ತೆ ಕೆಲವು ವಿಧಾಯಕಗಳಾದ ಕಾರ್ಯಗಳು— ಇವುಗಳ ನಿಮಿತ್ತವಾಗಿ ಮಾತ್ರವೇ ಚರರೂಪಕವಾದ ಪಿತ್ರಾರ್ಜಿತದಮೇಲೆ ತಂದೆಗೆ ಸ್ವಾತಂತ್ರ್ಯವುಂಟೆಂದು ಮಿತಾಕ್ಷರದಿಂದ ಕಾಣಬರುವುದು. ಈಚಿನ ತೀರ್ಮಾನಗಳು ಈ ಅಭಿಪ್ರಾಯವನ್ನೇ ಅನುಸರಿಸಿವೆ. ಎಂದರೆ, ಮೇಲೆ ಉದಾಹರಿಸಲ್ಪಟ್ಟ ಕಾರ್ಯಗಳ ನಿಮಿತ್ತವಲ್ಲದೆ ಇತರ ಸಂದರ್ಭಗಳಲ್ಲಿ ಚರರೂಪಕ ಪಿತ್ರಾರ್ಜಿತದ ಮೇಲೆಕೂಡ ತಂದೆಗೆ ಅಧಿಕಾರವಿಲ್ಲ, ಆದುದರಿಂದ ಅದನ್ನು ತನ್ನ ಇಚ್ಛಾನುಸಾರವಾಗಿ ಪರಾಧೀನ ಮಾಡುವದಕ್ಕಾದರೂ, ಕುಮಾರರು ಕುಮಾರಿಯರು ಮುಂತಾದವರಿಗೆ ತನ್ನ ಇಚ್ಛೆಬಂದಂತೆ ಹಂಚಿಡುವುದಕ್ಕಾದರೂ, ಆತನು ಸ್ವತಂತ್ರನಲ್ಲ. (ಇ. ಲಾ. ರಿ. ೧ ಬೊಂ. ೫೬೧; ಇ. ಲಾ. ರಿ. ೧೦. ಬೊಂ. ೫೪೫; ಇ. ಲಾ. ರಿ ೭ ಮು. ೩೫೭.)

ಮಿಕ್ಕ ವಿಷಯಗಳಲ್ಲಿ ತಂದೆಗೂ ಮಕ್ಕಳಿಗೂ ಪಿತ್ರಾರ್ಜಿತದೊಳಗಣಹಕ್ಕು ಸಮಾನವು.— ಮೇಲೆ ಹೇಳಲ್ಪಟ್ಟ ವಿಧ್ಯುಕ್ತಕಾರ್ಯಗಳ ನಿಮಿತ್ತವಾಗಿ ಚರ ರೂಪಕ ಪಿತ್ರಾರ್ಜಿತದ ಮೇಲೆಯೂ, ತಾನಾದರೂ ತನ್ನ ತಂದೆ, ತಾತ, ಮುತ್ತಾತಂದಿರಾರೂ ಮಾಡಿರುವ ಸಾಲಗಳಿಗಾಗಿ ಸರ್ವ ಪಿತ್ರಾರ್ಜಿತದ ಮೇಲೆಯೂ, ಅಲ್ಲದೆ ಮಿಕ್ಕ ವಿಷಯಗಳಲ್ಲಿ ಪಿತ್ರಾರ್ಜಿತ ಸ್ವತ್ವದ ಮೇಲೆ ಮಕ್ಕಳಿಗಿಂತಲೂ ತಂದೆಗೆ ಅಧಿಕ ಸ್ವಾತಂತ್ರ್ಯವಿಲ್ಲವು. ಸಮಷ್ಟಿ ಕುಟುಂಬದಲ್ಲಿ ತಂದೆಯೂ ಮಕ್ಕಳೂ ಸಮಾನಭಾಗಸ್ಥರಾದುದರಿಂದ ತಂದೆ ಮೇನೇಜರಾಗಿ ಮಾತ್ರವೇ ಭಾವಿಸಲ್ಪಡುವನು. (೨ ಮ. ಹೈ. ೪೧೩; ೪ ಮ. ಹೈ. ೬೧; ೬ ಸ. ೨೫೬; ೭ ಅ. ಹೈ. ೨೭೯; ೧ ಅ ೭೭.) ಆದುದರಿಂದ, ಆವಶ್ಯಕವಾದ ವಿಧ್ಯುಕ್ತಕಾರ್ಯಗಳು ಇಲ್ಲದಾಗ ಸಾಧಾರಣವಾಗಿ ಆತನು ಪಿತ್ರಾರ್ಜಿತದ ಸ್ವತ್ವಗಳನ್ನು ಮಕ್ಕಳ ಅನುಮತಿಯಿಲ್ಲದೆ ಪರಾಧೀನಮಾಡಕೂಡದು. ತಂದೆ ಮಾಡಿರುವ ಪಿತ್ರಾರ್ಜಿತದ ಪರಾಧೀನಗಳನ್ನು ಕುಮಾರರು ಆಕ್ಷೇಪಿಸಿದ ಪಕ್ಷದಲ್ಲಿ, ರುಜುವಾತಿನ ಭಾರವನ್ನು ಸಾಮಾನ್ಯವಾಗಿ ಆತನ ಪ್ರತಿಕಕ್ಷಿಯು ವಹಿಸುವರು. ಎಂದರೆ, ಸದರಿ ಪರಾಧೀನಗಳು ಆವಶ್ಯಕವಾದ ಕಾರ್ಯಗಳ ನಿಮಿತ್ತವಾಗಿ ಮಾಡಲ್ಪಟ್ಟಂತೆ ಇವರು ಸ್ಥಾಪಿಸಬೇಕು. (ಇ. ಲಾ. ರಿ. ೫ ಮ. ೩೩೭; ಇ. ಲಾ. ರಿ. ೮ ಮ. ೭೫; ಇ. ಲಾ. ರಿ. ೧೩ ಮ. ೫೧; ೨ ಬಂ. ಸ. ತೀ. ೭೫; ೬ ಬಂ. ನ. ತೀ. ೭೧; ೪ ಸ. ೧೫: ಇ. ಲಾ. ರಿ. ೨ ಅ. ೬೩೫; ೩ ಕ. ಹೈ. ೨೧; ೧೧ ಸ. ೩೮೩; ೧೬೬೦ ಸಂ|| ಮ. ತೀ ೨೨೭.)

ತಂದೆ ಮಾಡಿದ ಪರಾಧೀನಗಳಿಗೆ ಕುಮಾರರ ಸಮ್ಮತಿ. ಆಕ್ಷೇಪದ ಹಕ್ಕು —ತಂದೆಯಿಂದ ಅಕ್ರಮವಾಗಿ ಮಾಡಲ್ಪಟ್ಟ ಪಿತ್ರಾರ್ಜಿತದ ಪರಾಧೀನಗಳನ್ನು ಕುಮಾರರು ಆಕ್ಷೇಪಿಸಿ ರದ್ದುಮಾಡಲಾಪ ಹಕ್ಕು, ಅಂತಹ ಪರಾಧೀನಗಳು ಮಾಡಲ್ಪಟ್ಟಾಗ ಜನ್ಮಿಸಿರುವ, ಅಲ್ಲದೆ ಗರ್ಭಗತರಾಗಿರುವ, ಕುಮಾರರಿಗೆ ಮಾತ್ರವೇವುಂಟು. ಆದುದರಿಂದ ಪರಾಧೀನಗಳು ಮಾಡಲ್ಪಟ್ಟ ಕಾಲದಲ್ಲಿ ಪುತ್ರಸಂತತಿ ಇಲ್ಲದಾಗಲೂ; ಇದ್ದವರು ಸದರಿ ಪರಾಧೀನಗಳಿಗೆ ಅನುಮತಿಸಿರುವಾಗಲೂ, ಆಮೇರ ಗರ್ಭಗತನಾಗಿ ಜನ್ಮಿಸಿದ ಕುಮಾರನು ಸದರಿ ಪರಾಧೀನಗಳನ್ನು ಆಕ್ಷೇಪಿಸುವುದಕ್ಕೆ ಹಕ್ಕುಂಟಾಗಿರನು. (೫ ಅ. ಹೈ. ೧೧೩; ೮ ಸ ೧೬, ೨೧; ೧೫ ಕ. ಹೈ. ೧೮೭; ೨೨ ಸ. ೫೬). ಪರಾಧೀನಗಳು ಮಾಡಲ್ಪಟ್ಟ ಕಾಲದಲ್ಲಿ ಕುಮಾರರ ಸಮ್ಮತಿಯಿಲ್ಲದಿದ್ದರೂ; ಆಬಳಿಕ ಅವರು ಸಮ್ಮತಿಸಿದಪಕ್ಷದಲ್ಲಿ ಸಾಕಾಗಿದೆ. ಆದರೆ, ಅಷ್ಟರಲ್ಲಿ ಮತ್ತೊಬ್ಬ ಮಗನು ಹುಟ್ಟಿದಪಕ್ಷದಲ್ಲಿ, ಸದರಿ ಸಮ್ಮತಿಯಿಂದ ಈತನು ಬದ್ಧನಾಗಲಾರನು. ಎಂದರೆ, ಆರಂಭದಲ್ಲಿ ಕುಮಾರರ ಸಮ್ಮತಿಯಿಲ್ಲದೆ ತಂದೆಯಿಂದ ಅನಾವಶ್ಯಕವಾಗಿಯೂ ಅಕ್ರಮವಾಗಿಯೂ ಮಾಡಲ್ಪಟ್ಟ ಪಿತ್ರಾರ್ಜಿತದ

ಪರಾಧೀನಗಳನ್ನು ಸದರಿ ಕುಮಾರರು ಸಮ್ಮತಿಸುವುದರೊಳಗೆ ಜ ಹೊಸಮಗನು ಆಕ್ಷೇಪಿಸಿ ರದ್ದುಪಡಿಸಬಹುದು. (೧೧ ಸ. ೪೮೦.)

ಹುಟ್ಟಿರುವ, ಹುಟ್ಟಹೋಗುವ, ಮಕ್ಕಳ ಸಂರಕ್ಷಣಕ್ಕಾಗಿ ಬೇಕಾಗಿರುವುದರಿಂದ ಪಿತ್ರಾರ್ಜಿತವನ್ನು ಯಾರಿಗೂ ತಂದೆ ದಾನಮಾಡಕೂಡದೆಂದೂ ಮಾರಕೂಡದೆಂದೂ ಮಿತಾಕ್ಷರದಲ್ಲಿ ಒಂದುಕಡೆ ಹೇಳಲ್ಪಟ್ಟಿದೆ. ಇದನ್ನು ಹಿಡಿದು, ಪುತ್ರಸಂತತಿಯುಂಟಾಗುವುದಕ್ಕೆ ಸಾಧ್ಯವಾಗಿರುವವರಿಗೂ ಪಿತ್ರಾರ್ಜಿತ ಸ್ವತ್ವವನ್ನು ತಂದೆ ಪರಾಧೀನಮಾಡಕೂಡದೆಂದೂ, ಹಾಗೆ ಪರಾಧೀನ ಮಾಡುವುದರಿಂದ ತಮ್ಮ ಸಂರಕ್ಷಣೆಗೆ ಲೋಪವುಂಟಾದಲ್ಲಿ ಆಮೇಲೆ ಗರ್ಭಗತರಾಗಿ ಜನ್ಮಿಸಿದ ಮಕ್ಕಳುಕೂಡ ಸದರಿ ಪರಾಧೀನಗಳನ್ನು ಆಕ್ಷೇಪಿಸಿ ರದ್ದುಮಾಡಬಹುದೆಂದೂ, ಒಂದು ಕೇಸಿನಲ್ಲಿ ಮದರಾಸು ಸದರುಕೋರ್ಟಿನವರಿಗೆ ಕೋರ್ಟುಪಂಡಿತರು ಅಭಿಪ್ರಾಯವಿತ್ತರು. (೧೮೫೧ ಸಂ॥ ಮ. ತೀ ೩.) ಆದರೆ, ಮೇಲೆ ತಿಳಿಸಲ್ಪಟ್ಟ ಮಿತಾಕ್ಷರ ವಾಕ್ಯವನ್ನು ನೀತಿಮಾರ್ಗ ಸೂಚಕಮಾತ್ರವನ್ನಾಗಿ ಭಾವಿಸಿ, ತಂದೆ ಮಾಡಿದ ಪಿತ್ರಾರ್ಜಿತ ಪರಾಧೀನಗಳನ್ನು ಆಕ್ಷೇಪಿಸಿ ರದ್ದುಮಾಡುವ ಹಕ್ಕು ಮಗನಿಗೆ ಉಂಟಾಗಿರುವುದಕ್ಕಾಗಿ, ಸದರಿ ಪರಾಧೀನಗಳು ನಡೆಯಿಸಲ್ಪಡುವಾಗ ಈತನು ಹುಟ್ಟಿ ಅಥವಾ ಗರ್ಭಗತನಾಗಿ ಇರಬೇಕೆಂದೂ, ಆಮೇಲೆ ಗರ್ಭಗತನಾಗಿ ಹುಟ್ಟಿದಪುತ್ರನು ಆಕ್ಷೇಪಾಧಿಕಾರಿಯಲ್ಲವೆಂದೂ, ಮದರಾಸು ಹೈಕೋರ್ಟಿನವರು ತೀರ್ಮಾನಿಸಿದರು. (ಇ. ಲಾ. ರಿ. ೪ ಮ. ಹೈ. ೩೦೭; ಮತ್ತು; ಇ. ಲಾ. ರಿ. ೮ ಮ. ೮೯.)

ತಂದೆಯಿಂದ ನಡೆಯಿಸಲ್ಪಟ್ಟ ಪಿತ್ರಾರ್ಜಿತದ ಪರಾಧೀನಗಳ ವಿಷಯವಾಗಿ ಮಗನಿಗೆ ಎಷ್ಟು ಹಕ್ಕುಂಟೋ, ಮಗನಿಲ್ಲದಾಗ ಮುಮ್ಮಗನಿಗೂ, ಮುಮ್ಮಗನಿಲ್ಲದಾಗ ಮರಿಮಗನಿಗೂ ಅಷ್ಟೇ ಹಕ್ಕುಂಟು.

ಸ್ವೀಕಾರಪುತ್ರನಿಗಿರುವ ಆಕ್ಷೇಪಣದ ಹಕ್ಕು—ತಂದೆ ಮಾಡಿದ ಪಿತ್ರಾರ್ಜಿತ ಪರಾಧೀನಗಳನ್ನು ಆಕ್ಷೇಪಿಸಿ ರದ್ದುಮಾಡುವ ವಿಷಯದಲ್ಲಿ, ಔರಸಪುತ್ರನಿಗೆ (ಹೆತ್ತಮಗನಿಗೆ) ಎಂತಹ ಹಕ್ಕುಂಟೋ ದತ್ತಪುತ್ರನಿಗೂ ಅದೇ ಹಕ್ಕುಂಟು. ಸ್ವೀಕಾರಾಧಿಕಾರವು ಕೊಡಲ್ಪಟ್ಟ ಹೆಂಡತಿ ಬಸುರಿಯೊಡನೆ ಸಮಾನೆಯೆಂದೂ, ಹೆಂಡತಿಗೆ ಸ್ವೀಕಾರಾಧಿಕಾರವನ್ನು ಕೊಟ್ಟದ್ದು ಸ್ವೀಕಾರವನ್ನು ನಡೆಯಿಸುವಷ್ಟರೊಳಗೆ ತಂದೆಮಾಡಿದ ಪರಾಧೀನಗಳನ್ನು ಸ್ವೀಕಾರಪುತ್ರನು ಆಕ್ಷೇಪಿಸಬಹುದೆಂದೂ, ಹಿಂದೆ ಕೆಲವು ಕೇಸುಗಳಲ್ಲಿ ಅಭಿಪ್ರಾಯಗಳು ತಿಳಿಸಲ್ಪಟ್ಟುವು. (೩ ಬಂ. ಸ. ತೀ. ೩೬೭; ೬ ಮೂ. ಇ. ಅ. ೩೦೦; ೧೮೬೨ ಸಂ॥ ಮ. ತೀ. ೧೦೭.(ಆದರೆ, ಈಗ ಆ ಅಭಿಪ್ರಾಯಗಳಿಗೆ ಭಿನ್ನವಾಗಿ, ಎಂದರೆಸ್ವೀಕಾರಾನಂತರದಲ್ಲಿ ನಡೆಯಿಸಲ್ಪಟ್ಟ ಪಿತ್ರಾರ್ಜಿತ ಪರಾಧೀನಗಳ ವಿಷಯವಾಗಿ ಮಾತ್ರವೇ ಸ್ವೀಕಾರಪುತ್ರನಿಗೆ ಆಕ್ಷೇಪಿಸುವ ಹಕ್ಕುಂ

ಟೆಂದೂ, ಸ್ವೀಕಾರಕ್ಕೆ ಮೊದಲು ನಡೆಯಿಸಲ್ಪಟ್ಟ ಪರಾಧೀನಗಳನ್ನು ಆಕ್ಷೇಪಿಸುವುದಕ್ಕೆ ಆತನಿಗೆ ಹಕ್ಕಿಲ್ಲವೆಂದೂ, ತೀರ್ಮಾನಿಸಲ್ಪಟ್ಟಿದೆ. (೧೧ ಸ. ೪೩೬; ಇ. ಲಾ. ರಿ. ೫ ಬೊ. ೬೩೦.)

ಅಂಗೀಕಾರವು— ಪಿತ್ರಾರ್ಜಿತವನ್ನು ಪರಾಧೀನಮಾಡುವ ವಿಷಯವಾಗಿ ತಂದೆಗೆ ಸಂಪೂರ್ಣಸ್ವಾತಂತ್ರ್ಯವಿಲ್ಲದಿದ್ದರೂ, ತತ್ಕಾಲದಲ್ಲಾದರೂ ಆಮೇಲಾದರೂ ಮಕ್ಕಳು ಅಂಗೀಕರಿಸಿದರೆ, ತಂದೆ ಮಾಡಿದ ಪರಾಧೀನಗಳು ಸಲ್ಲುತ್ತಿವೆ. (೧೮೬೦ ಸಂ॥ ಮು॥ ತೀ. ೨೫೮; ೧೮೬೧ ಸಂ॥ ಮು. ತೀ. ೩೭. ೧೪೬. ಇ. ಲಾ. ರಿ. ೧೨ ಕ. ೩೮೯.) ಸಮಷ್ಟಿಯಾದಾಸ್ತಿಯು ವ್ಯಾಪಾರದಲ್ಲಿ ಉಪಯೋಗಪಡಿಸಲ್ಪಟ್ಟಿರುವಾಗ, ಮೇನೇಜರಾಗಿರುವವನಿಗೆ ಸದರಿ ಆಸ್ತಿಯನ್ನು ವಿನಿಯೋಗಪಡಿಸುವ ವಿಷಯದಲ್ಲಿ ಸ್ವಾತಂತ್ರ್ಯವುಂಟು. ಆದುದರಿಂದ, ಆತನು ಮಾಡಿದ ಪರಾಧೀನಗಳಿಗೆ ಮಿಕ್ಕಭಾಗಸ್ಥರು ಅಂಗೀಕಾರವಿರುವಂತೆಯೇ ಭಾವಿಸಬೇಕು. (ಇ. ಲಾ. ರಿ. ೯ ಕ. ೭೯೨; ಇ. ಲಾ. ರಿ. ೫ ಬೊಂ. ೩೪; ಇ. ಲಾ. ರಿ. ೧೪ ಬೊಂ. ೧೯೪.) ಎಂತಹ ಪರಾಧೀನಗಳಾದರೂ ಆಮೇಲೆ ಅಂಗೀಕಾರಗಳನ್ನು ಪಡೆದಮೇಲೆ, ಸಲ್ಲದೆ ತಪ್ಪವು. ಪಿತ್ರಾರ್ಜಿತ ಸ್ವತ್ವವನ್ನು ವಿಕ್ರಯಿಸಿ ವಿಕ್ರಯ ಧನದಿಂದ ಆತನು ಮತ್ತೊಂದಾಸ್ತಿಯನ್ನು ಕೊಂಡಿರುವಾಗ ಸದರಿ ಆಸ್ತಿಯನ್ನು ಮಕ್ಕಳು ಸ್ವಾಧೀನಮಾಡಿಕೊಂಡು ಇದ್ದ ಪಕ್ಷದಲ್ಲಿ ತಂದೆ ಮಾಡಿದ ಪಿತ್ರಾರ್ಜಿತದ ಪರಾಧೀನವನ್ನು ಅವರು ಅಗೀಕರಿಸಿದಂತೆಯೇ ಭಾವಿಸಲ್ಪಡುವುದು. (೨ ಬೊಂ. ಹೈ. ೩೧೮; ೯ ಸ. ೫೧೧.) ಪರಾಧೀನಗಳಿಗೆ ಅಂಗೀಕಾರವನ್ನು ಕೊಡುವವಿಷಯದಲ್ಲಿ, ಸೊತ್ತಿನಲ್ಲಿ ಹಕ್ಕುಳ್ಳ ಭಾಗಸ್ಥರೆಲ್ಲರೂ ಸೇರಬೇಕು. ಕೆಲವರು ಮಾತ್ರವೆ ಅಂಗೀಕರಿಸಿದಪಕ್ಷದಲ್ಲಿ, ಅವರ ಭಾಗಗಳವರೆಗೇ ಅಂಗೀಕಾರವುಸಲ್ಲುವುದು. ಮಗನ ಅನುಮತಿಯೊಡನೆ ಪಿತ್ರಾರ್ಜಿತ ಸ್ವತ್ವವನ್ನು ತಂದೆ ಪರಾಧೀನಮಾಡಿದಪಕ್ಷದಲ್ಲಿ ಸದರಿ ಪರಾಧೀನಕ್ಕೆ ಅನಂತರದಲ್ಲಿ ಹುಟ್ಟಿದ ಮುಮ್ಮಗನು ಅದರಿಂದ ಬದ್ಧನಾಗುವನು. ಆದರೆ ಪರಾಧೀನಕಾಲದಲ್ಲಿಯೇ ಹುಟ್ಟಿದ್ದು ಹಕ್ಕುದಾರನಾಗಿ ಏರ್ಪಟ್ಟ ಮುಮ್ಮೊಗನು ಬದ್ಧನಾಗಲಾರನು. (೯ ಸ. ೩೩೭)

ಆವಶ್ಯಕವಾದ ಕಾರ್ಯಗಳು— ಸಮಷ್ಟಿ ಕುಟುಂಬಕ್ಕೆ ಮೇನೇಜರಾಗಿರುವ ತಂದೆಯಿದ್ಯುಕ್ತಗಳಾಗಿ ಆವಶ್ಯಕಗಳಾದ ಕಾರ್ಯಗಳ ನಿಮಿತ್ತವು ಪಿತರಾರ್ಜಿತದ ಸ್ವತ್ವಗಳನ್ನು ಪರಾಧೀನ ಮಾಡುವದಕ್ಕೆ ಅಧಿಕಾರ ಉಂಟಾಗಿರುವನೆಂದು ಮೇಲೆ ಹೇಳಿದೆವು. ಮಕ್ಕಳೆಲ್ಲರೂ ಮೈನರುಗಳಾಗಿದ್ದು ಅಂಗೀಕರಿಸುವ ಸ್ಥಿತಿಯಲ್ಲಿ ಇಲ್ಲವಾಗ ಮಾತ್ರವೇ ಈ ಹೇಳಲ್ಪಟ್ಟಧಿಕಾರವು ಉಂಟೆಂದು ಮಿತಾಕ್ಷರವು ಅಭಿಪ್ರಾಯ ಪಡುವುದು. ಮಕ್ಕಳು ಯುಕ್ತವಯಸ್ಕರಾಗಿರುವಾಗ ಅವರ ಅಂಗೀಕಾರವನ್ನು ಹೊಂದುವುದು

ಮುಖ್ಯವೆಂದು ಒಂದು ಕೇಸಿನಲ್ಲಿ ಕಲಕತ್ತಾ ಹೈಕೋರ್ಟನವರು ತೀರ್ಮಾನಿಸಿದರು. (೧೩ ಸ ೩೦) ಆದರೆ ಮತ್ತೆ ಕೆಲವು ಕೇಸುಗಳು ವ್ಯತಿರೇಕಾಭಿಪ್ರಾಯವನ್ನು ಸ್ಥಾಪಿಸಿವೆ. (೧೪ ಸ ೮೦, ೧ ಸ. ೯೬, ೫ ಲಾ ರಿ ೪ ಮ ೧೮,) ಕುಟುಂಬಕ್ಕೆ ಮೇನೇಜರು (ಕಾರ್ಯನಿರ್ವಾಹಕನು) ಆಗಿರುವವನು ಯುಕ್ತವಯಸ್ಕರಾಗಿರುವ ಭಾಗಸ್ಥರ ಅಂಗೀಕಾರವನ್ನು ಹೊಂದಿಯೇ ಸಾಧಾರಣವಾಗಿ ಪಿತ್ರಾರ್ಜಿತದ ಪರಾಧೀನಗಳನ್ನು ಮಾಡುವುದು ಸಲುವಳಿಯಲ್ಲಿದೆ. ಹೀಗಿದ್ದರೂ ಅತನು ಸ್ವತಂತ್ರಿಸಿ ಆವಶ್ಯಕಕಾರ್ಯಗಳಿಗಾಗಿ ಪರಾಧೀನಗಳನ್ನು ಮಾಡಿದರೆ ಅವು ತಪ್ಪದೆ ಸಲ್ಲುವುವು. ಕುಟುಂಬದಲ್ಲಿ ಯುಕ್ತವಯಸ್ಕರಾಗಿರುವ ಭಾಗಸ್ಥರು ತಮ್ಮ ಅಂಗೀಕಾರವನ್ನು ಕೊಡದೆ ಇದ್ದಷ್ಟುಮಾತ್ರದಿಂದ ಮೆನೇಜರಿನ ಸ್ವಾತಂತ್ರ್ಯವು ತಪ್ಪಿಹೋಗಲಾರದು. (೬ ಮೂ ೫ ಅ ೩೯೩; **೧೮೫೯ ಸಂ॥** ಬಂ ಸ ತೀ ೧೬೮೩, ೧ ಮ ಹೈ ೩೯೮, ೨೧ ಸ ೧೯೬; ೫ ಲಾ ರಿ ೧೧ ಬೊಂ ೬೦೫.)

ಮೇನೇಜರಿಗಿರುವ ಸ್ವಾತಂತ್ರ್ಯವು.—ಜಾಗರೂಕತೆಯುಳ್ಳ ಆಸ್ತಿದಾರನು ತನ್ನ ಸ್ವಂತಾಸ್ತಿಯನ್ನು ಯಾವ ವಿಧವಾಗಿ ವಿನಿಯೋಗಿಸುವದಕ್ಕೆ ಸ್ವಾತಂತ್ರ್ಯವುಂಟಾಗಿರುವದೋ ಹಾಗೆಯೇ ಕುಟುಂಬದ್ರವ್ಯವನ್ನು ಆವಶ್ಯಕ ಕಾರ್ಯನಿಮಿತ್ತವಾಗಿ ವಿನಿಯೋಗಪಡಿಸುವುದಕ್ಕೆ ಮೇನೇಜರು ಸ್ವಾತಂತ್ರ್ಯವುಳ್ಳವನಾಗಿರುವನು. (೬ ಮೂ. ೫. ಅ. ೩೯೩.) ಮೇನೇಜರಿನಿಂದ ಮಾಡಲ್ಪಟ್ಟಿರುವ ಕುಟುಂಬದ್ರವ್ಯ ಪರಾಧೀನವು ಕುಟುಂಬಕ್ಕೆ ಆವಶ್ಯಕವೋ ಅನಾವಶ್ಯಕವೋ ಲಾಭಕರವೋ ಅಲ್ಲವೋ ಈ ವಿಷಯವನ್ನು ಆಯಾ ಸಂಗತಿ ಸಂದರ್ಭಗಳನ್ನು ಹಿಡಿದು ನಿರ್ಣಯಿಸಬೇಕು.

ಕುಟುಂಬದ ಆಸ್ತಿಯನ್ನು ಆಧಾರಮಾಡುವುದಕ್ಕೂ ವಿಕ್ರಯಿಸುವದಕ್ಕೂಕೂಡ ಮೇನೇಜರಿಗೆ ಸ್ವಾತಂತ್ರ್ಯವಿದ್ದರೂ ಸಾಧ್ಯವಾದ ಪಕ್ಷದಲ್ಲಿ ಆಸ್ತಿಯನ್ನು ವಿಕ್ರಯಿಸದೆ ಆಧಾರಮಾಡಿಯೇ ಆವಶ್ಯಕವನ್ನು ತೀರಿಸಬೇಕು. ಆದರೆ ಅಧಿಕವಾದ ಬಡ್ಡಿ ಮೊದಲಾದ ಸಂದರ್ಭಗಳಲ್ಲಿ ಆಧಾರಕ್ಕಿಂತಲೂ ವಿಕ್ರಯವೇ ಮೇಲಾಗಿರುವದು. (೩ ಕ ಹೈ ೪೨೩; ೧೨ ಸ ೩೩೭, ೧೩ ಸ ೩೦; ೧೮ ಕ ೩೧೧.) ಆದುದರಿಂದ ಆಧಾರದ ಅಲ್ಲದೆ ವಿಕ್ರಯದ ಆವಶ್ಯಕವನ್ನು ಆಯಾ ಸಂದರ್ಭಗಳನ್ನು ಹಿಡಿದು ನೋಡಬೇಕಾಗಿರುವದು. (೧ ಸ ೯೬ ೬ ಮ ಹೈ ೩೨೧, ೫ ಲಾ ರಿ ೨ ಬೊಂ ೬೬೬, ೩ ಅ ಹೈ. ೪; ೧೧ ಸ ೪೪೬ ೧೪ ಸ ೭೨;) ಸಾಲಗಳನ್ನು ತೀರಿಸುವದಕ್ಕೂ ಕುಟುಂಬಕ್ಕೆ ಆವಶ್ಯಕವಾದ ವೆಚ್ಚಗಳನ್ನು ನಡೆಯಿಸುವುದಕ್ಕೂ ಬೇರೇ ಮಾರ್ಗಗಳಿರುವಾಗ ಸುಮ್ಮನೆ ಅನಾವಶ್ಯಕವಾಗಿ ಮಾಡಲ್ಪಟ್ಟ ಪಿತ್ರಾರ್ಜಿತದ ಪರಾಧೀನವು ಸಲ್ಲಲಾರದು. (೧೮೫೮ ಸಂ॥ ಬಂ ಸ ತೀ ೮೦೨.)

ಸಾಲ ಕೊಡುವವನು ವಿಚಾರಿಸತಕ್ಕ ಅಂಶಗಳು.- ಪರಾಧೀನವನ್ನು ಕುರಿತು ಆಮೇಲೆ ತಕರಾರುಂಟಾದಾಗ ಸದರಿ ಪರಾಧೀನವನ್ನು ಮಾಡುವುದಕ್ಕೆ ತಕ್ಕ ಆವಶ್ಯಕಪತ್ತೆಂದು ಸ್ವತ್ವವನ್ನು ತೆಗೆದುಕೊಂಡವನು ರುಜುವು ಮಾಡಬೇಕು. ಇಲ್ಲದಿದ್ದರೆ ಪರಾಧೀನವು ಸಲ್ಲಬಾರದು. ಸದರಿ ಆವಶ್ಯಕವು ಮೇನೇಜರಿನ ದುರ್ವ್ಯಯದಿಂದ ಉಂಟಾಗಿದ್ದರೂ ಬಾಧಕವಿಲ್ಲವು. ಆದರೆ ಸ್ವತ್ತು ಕೊಟ್ಟವನ ದುಷ್ಪ್ರವರ್ತನದಿಂದಲ್ಲಸೆ ಪ್ರೋತ್ಸಾಹದಿಂದ ಇರಕೂಡದು. ಮೇನೇಜರು ಬಳಿಯಿಂದ ಕುಟುಂಬದ ಸೊತ್ತನ್ನು ಕೊಂಡುಕೊಳ್ಳುವ, ಅಡವಿಟ್ಟು ಕೊಳ್ಳುವ ಅಲ್ಲದೆ ಗುತ್ತಿಗೆಗೆ ತೆಗೆದುಕೊಳ್ಳುವ ಮನುಷ್ಯನು ಆ ವಿಧವಾಗಿ ಆಸ್ತಿಯನ್ನು ಪರಾಧೀನಪಡಿಸಲು ಎಂತಹ ಆವಶ್ಯಕತೆ ಇರುವುದೋ ಚೆನ್ನಾಗಿವಿಚಾರಿಸಿ ಸದರಿ ಪರಾಧೀನವು ಕುಟುಂಬದ ಲಾಭನಿಮಿತ್ತವಾಗಿ ಮಾಡಲ ಡುವಂತೆ ನಿಶ್ಚಯಪಡಿಸಿಕೊಳ್ಳಬೇಕು, (೯ ಸ. ೧೯೨; ೧೮೫೯ ಸಂ॥ ಬಂ. ಸ. ತೀ. ೧೬೪೩.) ಅಂತಹ ಆವಶ್ಯಕತೆಯನ್ನುಂಟುಮಾಡಿದ ಕಾರಣಗಳೊಡನೆ ನಿಮಿತ್ತವಿಲ್ಲವು. (೧೬ ಸ. ೨೨೧; ೮ ಕ. ಹೈ. ೩೮; ೧೪ ಸ. ೭೨.) ಮೇನೇಜರಿನ ಮೇಲೆ ಡಿಕ್ರಿಹೊಂದಲ್ಪಟ್ಟು ಇರುವಾಗಲೂ, ಸದರಿ ಡಿಕ್ರಿಗಾಗಿ ಸಲ್ಲಿಸಲು ಹಣಕೊಟ್ಟು ಆಸ್ತಿಯನ್ನು ಸ್ವಾಧೀನಪಡಿಸಿಕೊಳ್ಳುವವನು, ಆ ಡಿಕ್ರಿ ಎಂತಹ ಸಾಲಗಳಿಗಾಗಿ ಹೊಂದಲ್ಪಟ್ಟಿತ್ತೋ, ಅವು ಕ್ರಮವಾದ ಸಾಲಗಳು ಅಹುದೋ ಅಲ್ಲವೋ- ಈ ವಿಷಯವನ್ನು ವಿಚಾರಿಸದಿದ್ದರೂ ರಕ್ಷಿಸಲ್ಪಡುವುದು. ಆದರೆ ಆ ಡಿಕ್ರಿಯುಂದ ಅಲ್ಲದೆ ಅದಕ್ಕೆ ಸಂಬಂಧಿಸಿದ ಅಮುಲ್ದಾರಿಗಳಿಂದ ಸದರಿ ಸಾಲಗಳು ಅಯೋಗ್ಯವಾದವುಗಳಾಗಿಯಾದರೂ ಎಲ್ಲಾಭಾಗಸ್ಥರಿಗೂ ಸಂಬಂಧಿಸದವುಗಳಾಗಾದರೂ ಕಾಣಬಂದರೆ ಈ ಹೇಳಲ್ಪಟ್ಟ ರಕ್ಷಣೆಯಿರಲಾರದು. (೧೪ ಕ. ಹೈ. ೧೮೭; ೩ ಲಾ. ರಿ. ೧೫ ಕ. ೩೧೨; ೫ ಅ. ಹೈ. ೮೯; ೨೩ ಸ. ೨೬೦; ೨೪ ಸ ೨೩೧, ೨೮೧, ೩೬೪; ೨. ೧೪೮, ೧೮೫, ೩೧೧; ೩ ಲಾ. ರಿ. ೨ ಕ; ೨೧೩; ೩. ಲಾ. ರಿ. ೪ ಮು. ೯೬.)

ತಕ್ಕ ಜಾಗರೂಕತೆಯಿಂದ ವಿಚಾರಿಸಿದಮೇಲೆ ಆವಶ್ಯಕವಿದ್ದಂತೆ ನಂಬಿ ಎಂತಹ ದುರುದ್ದೇಶವಾದರೂ ಇಲ್ಲದೆ, ಹಣಕೊಟ್ಟು ಆಸ್ತಿಯನ್ನು ಸ್ವಾಧೀನಮಾಡಿಕೊಂಡವನು, ಆ ಹಣವು ಕ್ರಮವಾಗಿ ವಿನಿಯೋಗಿಸಲ್ಪಡುವಂತೆ ಭದ್ರಪಡಿಸಲು ಬದ್ಧನಲ್ಲವು. (೨೧ ಸ. ೧೯೬; ೩ ಲಾ. ರಿ. ೨ ಮು. ೩೩೯; ೧೮೬೧ ಸಂ॥ ಮು. ತೀ. ೧.)

ರುಜುವಾತಿನ ಭಾರವು...ಪಿತ್ರಾರ್ಜಿತದ ಪರಾಧೀನಗಳನ್ನು ರದ್ದುಮಾಡಬೇಕೆಂದು ಎತ್ತಿಸಲ್ಪಟ್ಟಾಗ, ಸದರಿ ಪರಾಧೀನವು ಕ್ರಮವೆಂದು ಅಲ್ಲದೆ ಅಕ್ರಮವೆಂದು ರುಜುವುಮಾಡುವ ಭಾರವು, ಆಯಾಸಂದರ್ಭಗಳನ್ನು ಹಿಡಿದು ಸೊತ್ತು ತೆಗೆದುಕೊಂಡವನ ಮೇಲಾದರೂ, ರದ್ದು ಮಾಡಬೇಕೆಂದು

ಬಯಸುವವನ ಮೇಲಾದರೂ ನಿಂತಿರುವುದು. (೬ ಮೂ. ಇ. ಅ. ೪೧೮-೪೨೦ ; ೧ ಮ. ಹೈ. ೩೯೮ ; ಇ. ಲಾ. ರಿ. ೨ ಮ ೪೦೭; ೬ ಮ. ಸೆ. ೩೭೧; ೧೦ ಮೂ. ಇ. ಅ. ೪೫೪; ೩ ಅ, ಹೈ. ೮ ; ೧೮ ಸ. ೭೭ ; ಇ. ಲಾ. ರಿ. ೫ ಕ. ೩೭೩; ಇ. ಲಾ. ರಿ ೬ ಅ. ೪೧೭; ಇ. ಲಾ, ರಿ, ೮ ಅ. ೨೭೯; ಇ. ಲಾ. ರಿ. ೫ ಮ. ೩೩೭; ಇ. ಲಾ. ರಿ. ೮ ಮ ೭೫.) ೧೮೮೨ ೦|| ೪ ನಂ|| ಟ್ರಾನ್ಸಫರು ಆಫ್ ಪ್ರಾಪರ್ಟಿ ಆಕ್ಟ್ ೩೮ ಸೆಕ್ಷನ್ನೋಡಬೇಕು.

ಪಿತ್ರಾರ್ಜಿತ ಋಣಗಳ ನಿಮಿತ್ತವಾಗಿ ತಾನು ಅದುವರೆಗೆ ಮಾಡಿರುವ ಅಯೋಗ್ಯವಲ್ಲದ ಋಣಗಳ ನಿಮಿತ್ತವಲ್ಲದೆ, ನಗದು ತೆಗೆದುಕೊಂಡು ಪಿತ್ರಾರ್ಜಿತಸ್ವತ್ವವನ್ನು ತಂದೆ ಪರಾಧೀನಮಾಡಿದರೆ, ಸದರಿ ಪರಾಧೀನಕ್ಕೆ ತಕ್ಕ ಆವಶ್ಯಕತೆ ಇತ್ತೆಂದೂ, ಸದರಿಸೊತ್ತು ಕುಟುಂಬೋಪಯೋಗ ನಿಮಿತ್ತವೆನಿಸಿ ಆವಶ್ಯಕವಾಗಿತ್ತೆಂದೂ, ಸೊತ್ತು ತೆಗೆದುಕೊಂಡವನು ತಕರಾರುಂಟಾದಾಗ ರುಜುವಾತು ಮಾಡಬೇಕು. (ಇ. ಲಾ. ರಿ. ೧೬ ಮ. ೭೬.) ತಂದೆಯುಲ್ಲದೆ ಇತರಭಾಗಸ್ಥನು ತಾನು ಮಾಡಿರುವ ಋಣಗಳನಿಮಿತ್ತವಾಗಿ ಕುಟುಂಬದ ಆಸ್ತಿಯುಲ್ಲಿ ತನ್ನಭಾಗವನ್ನು ಮಾತ್ರವೇಅಲ್ಲದೆ ಇತರಭಾಗಗಳನ್ನು ಕೂಡ ಸೇರಿಸಿ ಮಾರಿದರೆ, ಅಥವಾ ಆತನಮೇಲೆ ಹೊಂದಲ್ಪಟ್ಟ ಡಿಕ್ರೀಗಳಿಗೆ ಕುಟುಂಬದ ಆಸ್ತಿಯೆಲ್ಲವೂ ಹರಾಜು ಹಾಕಲ್ಪಟ್ಟರೆ, ಸೊತ್ತನ್ನು ಪಡೆದವರು ಸದರಿ ಸಾಲಗಳು ಕುಟುಂಬಕ್ಕಾವಶ್ಯಕವಾದ ಖರ್ಚುಗಳಿಗಾಗಿ ಮಾಡಲ್ಪಟ್ಟಂತೆ ರುಜುವುಮಾಡಬೇಕು. (೬ ಮ. ಹೈ. ೩೭೧; ೮ ಮ. ಹೈ. ೧೫೭; ೨ ಅ. ಹೈ. ೫೦; ಇ. ಲಾ ರಿ. ೧ ಮ. ೩೫೪, ೩೫೮ ; ಇ. ಲಾ. ರಿ. ೫ ಕ, ೧೪೪ ; ಇ. ಲಾ. ರಿ ೪ ಮ. ೭೩)

ಎಲ್ಲಾಭಾಗಸ್ಥರನ್ನೂ ಪ್ರತಿವಾದಿಗಳನ್ನಾಗಿ ಸೇರಿಸಬೇಕು,—ತಂದೆಯುಲ್ಲದೆ ಇತರಭಾಗಸ್ಥನು ಮಾಡಿರುವ ಸಾಲಗಳಿಗೆ, ಅವು ಕುಟುಂಬನಿಮಿತ್ತಕವಾಗಿ ಮಾಡಲ್ಪಟ್ಟವೆಂಬಕಾರಣದಿಂದ ಕುಟುಂಬದ ಯಾವದಾಸ್ತಿಯನ್ನೂ ಒಳಪಡಿಸಬೇಕೆಂದು ಅಪೇಕ್ಷಿಸಿದರೆ, ಎಲ್ಲಾಭಾಗಸ್ಥರನ್ನೂ ಪ್ರತಿವಾದಿಗಳನ್ನಾಗಿ ಸೇರಿಸಿ ದಾವಾತರಬೇಕು. ಹಾಗೆ ಸೇರಿಸದೆ ಒಬ್ಬನಮೇಲೆಯೇ ದಾವಾತಂದಪಕ್ಷದಲ್ಲಿ ಮಿಕ್ಕವರ ಭಾಗಗಳಮೇಲೆ ಡಿಕ್ರಿ ಅಮಲ್ಜಾರಿ ನಡೆಯದು. (ಇ. ಲಾ. ರಿ. ೩ ಕ. ೧೯೮; ಇ. ಲಾ. ರಿ. ೫ ಮ. ೧೨, ೧೨೫; ಇ. ಲಾ. ರಿ. ೭ ಮ. ೧೩೬; ಇ. ಲಾ. ರಿ. ೮ ಮ. ೨೦೮; ಇ. ಲಾ. ರಿ. ೧೦ ಮ. ೩೧೬ ; ಇ. ಲಾ. ರಿ. ೧೧ ಕ ೨೯೩; ಇ ಲಾ. ರಿ ೬ ಬೊಂ. ೫೬೪; ಇ. ಲಾ. ರಿ. ೭ ಬೊಂ ೯೧.) ಸಮಷ್ಟಿಯಾಸ್ತಿ ಕುಟುಂಬದ ಮೇನೇಜರು ಹೆಸರಿನಲ್ಲಿಮಾತ್ರವೇಯಿದ್ದು ಆತನೊಬ್ಬನಮೇಲೆಯೇ ಡಿಕ್ರೀಹೊಂದಲ್ಪಟ್ಟು ಅದು ಹರಾಜು ಹಾಕಿಸಲ್ಪಟ್ಟ ಪಕ್ಷದಲ್ಲಿ ಸದರಿ ಆಸ್ತಿಯಲ್ಲಿ ಎಲ್ಲಾಭಾಗಸ ರ ಹಕು ಗಳೂ ಹರಾಜು

ಹಾಕಲ್ಪಟ್ಟಂತೆ ಎಣಿಸಲ್ಪಡುವುದು. (ಇ. ಲಾ. ರಿ. ಕ. ೯೯೬, ೧೦೦೧; ಇ. ಲಾ. ರಿ. ೫ ಮು. ೨೦೧, ೩೦೫.)

ಮೇಲಣ ನಿಬಂಧನೆಗಳ ನಿರುಪಯೋಗವು.— ಪಿತ್ರಾರ್ಜಿತದ ಸ್ವತ್ವವನ್ನು ತಂದೆ ಹಾಳುಮಾಡದಿರುವಂತೆ ಮೇಲೆ ಹೇಳಲ್ಪಟ್ಟಮೇರೆ ಧರ್ಮಶಾಸ್ತ್ರಗಳಲ್ಲಿ ಕಟ್ಟಳೆಗಳೇರ್ಪಡಿಸಲ್ಪಟ್ಟಿದ್ದರೂ, ಈ ಧರ್ಮಶಾಸ್ತ್ರಗಳೇ ವಿಧಿಸುವ ಮತ್ತೊಂದು ನ್ಯಾಯದಿಂದಲೂ, ಅದಕ್ಕೆ ಈ ಕಾಲದಲ್ಲಿ ಕೋರ್ಟಿನವರು ಉಂಟುಮಾಡಿರುವ ವ್ಯಾಪ್ತಿಯಿಂದಲೂ ಸದರಿಕಟ್ಟಳೆಗಳೆಲ್ಲವೂ ಕೊಂಚಹೆಚ್ಚುಕಡಿಮೆಯಾಗಿ ನಿಷ್ಪ್ರಯೋಜನಕರಗಳಾಗುತ್ತಿರುವುವು. ಅದು ಹೇಗೆಂದರೆ- ಪಿತ್ರಾರ್ಜಿತದ ಸ್ವತ್ವದ ಮೇಲೆ ತಂದೆಗೆ ಅಧಿಕವಾದ ಸ್ವಾತಂತ್ರ್ಯವಿಲ್ಲವು. ಅದನ್ನು ಆತನು ಅನಾವಶ್ಯಕವಾಗಿ ವಿಕ್ರಯಿಸಕೂಡದು, ಅಡವಿಡಕೂಡದು. ಆದರೆ ತಂದೆ ಮಾಡಿರುವ ಋಣಗಳನ್ನು ಎಲ್ಲಾ ಪಿತ್ರಾರ್ಜಿತದ ಒಟ್ಟನವರೆಗೂ ತೀರಿಸಲು ಕುಮಾರರು ಬದ್ಧರಾಗಿರುವುದರಿಂದ ತಂದೆ ಇಚ್ಛೆಬಂದಂತೆ ಅನಾವಶ್ಯಕವಾಗಿ ಸಾಲಗಳನ್ನು ಮಾಡಿ ಸತ್ತುಹೋದರೆ ಕುಮಾರರಿಗೆ ಸೇರತಕ್ಕ ಪಿತ್ರಾರ್ಜಿತವೆಲ್ಲವೂ ಸಾಲಗಳಕೆಳಗೇಹೋಗಬಹುದು. ಒಂದು ಸಂದರ್ಭದಲ್ಲಿ ಮಾತ್ರವೆ ಎಂದರೆ, ತಂದೆಯಸಾಲಗಳು ಅಯೋಗ್ಯಕಾರ್ಯಗಳ ನಿಮಿತ್ತವಾಗಿ ಮಾಡಲ್ಪಟ್ಟಿದ್ದರೆಯೇ ಮಕ್ಕಳಿಗೆ ಪಿತ್ರಾರ್ಜಿತವು ದಕ್ಕಬಹುದು. ತಂದೆಯಸಾಲಗಳು ಅಯೋಗ್ಯಕಾರ್ಯಗಳಿಗಾಗಿ ಮಾಡಲ್ಪಡದಿದ್ದು, ಅವು ಅನಾವಶ್ಯಕವಾದ ದುಬಾರಾಖರ್ಚುಗಳಿಗಾಗಿ ಮಾಡಲ್ಪಟ್ಟಿದ್ದರೂ ಅವುಗಳಿಗಾಗಿ ಪಿತ್ರಾರ್ಜಿತವನ್ನು ಕೊಡದೆ ತಪ್ಪದು. [ಪ್ಯಾರಾ ೧೫೫.] ಇಷ್ಟೇ ಅಲ್ಲದೆ, ದುಬಾರಾಖರ್ಚುಗಳಿಗಾಗಿ ತಂದೆಮೊದಲು ಇಚ್ಛೆಬಂದಂತೆ ಸಾಲಗಳನ್ನು ಮಾಡಿ, ಆಮೇಲೆ ಸದರಿ ಸಾಲಗಳ ನಿಮಿತ್ತವಾಗಿ ಯಾವತ್ಪಿತ್ರಾರ್ಜಿತವನ್ನೂ ಆತನೇ ಪರಾಧೀನ ಮಾಡಬಹುದು. [ಪ್ಯಾರಾ ೧೫೭.]

ತಂದೆಯಲ್ಲದೆ ಇತರ ಭಾಗಸ್ಥರ ಪರಾಧೀನ ಸ್ವಾತಂತ್ರ್ಯವು—ಸಮುಷ್ಟಿ ಕುಟುಂಬದಲ್ಲಿ ತಂದೆಯಲ್ಲದೆ ಇತರ ಭಾಗಸ್ಥನು ಸಮುಷ್ಟಿಯಾಸ್ತಿಯಲ್ಲಿ ತನ್ನ ಹಕ್ಕನ್ನು ಪರಾಧೀನ ಮಾಡಬಹುದೇ ಕೂಡದೇ- ಎಂಬ ವಿಷಯವು ಬಹುಕಾಲವು ಸಂದಿಗ್ಧವಾಗಿದ್ದು ಈಗ ಕೆಲವುಮಟ್ಟಿಗೆ ಸಿದ್ಧಾಂತವಾಗಿದೆ. ಮಿತಾಕ್ಷರ ಧರ್ಮಶಾಸ್ತ್ರವನ್ನು ಹಿಡಿದು ನ್ಯಾಯವಾಗಿ ನೋಡಿದರೆ, ಇಂತಹ ಪರಾಧೀನ ಮಾಡುವ ಸ್ವಾತಂತ್ರ್ಯವು ಇಲ್ಲದಂತೆಯೇ ಕಾಣಬರುವುದು. ಹೀಗಿದ್ದರೂ ಸಮುಷ್ಟಿ ಕುಟುಂಬದ ಭಾಗಸ್ಥನು ಮಾಡಿರುವ ಸ್ವಂತ ಸಾಲಗಳಿಗಾಗಿ ಸಮುಷ್ಟಿಯಾಸ್ತಿಯಲ್ಲಿ ಆತನ ಹಕ್ಕನ್ನು ಸಾಲಗಾರರು ಆತನ ಜೀವಿತಕಾಲದಲ್ಲಿ ಜಪ್ತುಮಾಡಿಸಿ ಮಾರಿಸಬಹುದೆಂದು ಮೊತ್ತಮೊದಲು ನ್ಯಾಯಸ್ಥಾ

ನಗಳಗಲ್ಲಿ ತೀರ್ಮಾನಿಸಲ್ಪಡುವುದರಿಂದ, ಸದರಿ ಪರಾಧೀನಮಾಡುವ ಸ್ವಾತಂತ್ರ್ಯವು ಕ್ರಮವಾಗಿ ಬೆಳದು ಸ್ಥಿರವಾಯಿತು. (೧೮೫೫ ಸಂ॥ ಮ. ತೀ. ೨೩೪; ೧೮೬೦ ಸಂ॥ ಮ. ೨೪೭; ೧ ಮ. ಹೈ. ೪೭೧; ೧೦ ಬೊಂ. ಹೈ, ೧೩೯; ೧೧ ಬೊಂ ಹೈ. ೭೨ ೭೬; ೪ ಅ. ಹೈ. ೧೩೭; ಇ. ಲಾ. ರಿ. ೩ ಕ. ೧೯೮; ಇ. ಲಾ. ರಿ. ೧ ಮ. ೩೫೮; ಇ. ಲಾ. ರಿ. ೫ ಕ. ೧೪೮; ಇ. ಲಾ. ರಿ. ೪ ಕ. ೭೨೩, ೮೦೯; ಇ. ಲಾ. ರಿ. ೧ ಅ. ೪೨೯; ಇ. ಲಾ. ರಿ. ೨ ಅ. ೮೯೮.) ಹಿಂದೆ ೧೬೪ ನೆಯ ಪ್ಯಾರಾನೋಡಬೇಕು.

ಮದರಾಸು, ಬೊಂಬೈ ತೀರ್ಮಾನಗಳು— ಮದರಾಸು ಬೊಂಬಯಿ ಹೈಕೋರ್ಟುಗಳವರ ತೀರ್ಮಾನಗಳಿಂದ ಈಗ ಸ್ಥಿರಪಟ್ಟಿರುವಪ್ರಕಾರ ಸಮಷ್ಟಿಕುಟುಂಬದಲ್ಲಿ ತಂದೆಯಲ್ಲದೆ ಇತರ ಭಾಗಸ್ಥನು ಸಮಷ್ಟಿಯಾಸ್ತಿಯಲ್ಲಿ ತನಗುಂಟಾಗಿರುವ ಹಕ್ಕನ್ನು ನಿರಾತಂಕವಾಗಿ ವಿಕ್ರಯಿಸಬಹುದು, ಮತ್ತೆ ಯಾವವಿಧವಾಗಿಯಾದರೂ ಪ್ರತಿಫಲಯುಕ್ತವಾದ ಪರಾಧೀನವನ್ನು ಮಾಡಬಹುದು. (೧ ಮ. ೪೦೬; ೫ ಮ. ಹೈ. ೧೬೬; ೧೦ ಬೊಂ. ಹೈ. ೧೩೯, ೧೬೨.) ಆದರೆ ದಾನರೂಪಕವಾಗಿ, ಅಲ್ಲದೆ ಉಯಿಲು ಮೂಲಕವಾಗಿ ಪರಾಧೀನಮಾಡುವ ಸ್ವಾತಂತ್ರ್ಯವಿಲ್ಲವು. (೮ ಮ. ಹೈ. ೬: ಇ. ಲಾ. ರಿ. ೭ ಮ ೩೫೭; ಇ. ಲಾ ರಿ. ೯ ಮ ೨೭೩; ಇ. ಲಾ ರಿ. ೧೧ ಮ. ೨೪೬; ೩ ಬೊಂ. ಹೈ. ೬೬; ೬ ಬೊಂ. ಹೈ. ೨೪೯; ೧೧ ಬೊಂ, ಹೈ. ೭೬; ೧೨ ಬೊಂ. ಹೈ. ೨೨೯; ಇ. ಲಾ. ರಿ. ೫ ಬೊಂ. ೪೮.)

ಟ್ರಾನ್ಸಫರುದಾರನಿಗೆ ಉಂಟಾಗುವ ಹಕ್ಕು— ಸಮಷ್ಟಿಕುಟುಂಬದ ಭಾಗಸ್ಥನಿಗೆ ಎಂತಹ ಸ್ವಾತಂತ್ರ್ಯವುಂಟೋ ಅದೆಲ್ಲವೂ, ಆತನ ಹಕ್ಕನ್ನು ಕೋರ್ಟಿನ ಹರಾಜಿನಲ್ಲಿಕೊಡುವನಿಗೂ ಆತನಿಂದಲೇ ಅಡವಾಗಿ ಅಲ್ಲದೆ ವಿಕ್ರಯವಾಗಿ ಟ್ರಾನ್ಸಫರ್ ಹೊಂದಿದವನಿಗೂ, ಉಂಟಾಗುವುದು. (೧ ಮ. ಹೈ. ೪೭೧.) ಎಂದರೆ ಸದರಿ ಕ್ರಯದಾರನು, ಅಲ್ಲದೆ ಟ್ರಾನ್ಸಫರುದಾರನು ಸಮಷ್ಟಿಯಾಸ್ತಿಯ ವಿಭಾಗವನ್ನು ಬಯಸಬಹುದು. (೨ ಮ. ಹೈ. ೪೧೩.) ಆದುದರಿಂದ ಆತನು ಕುಟುಂಬದ ಭಾಗಸ್ಥರನೆಲ್ಲರನ್ನೂ ಸೇರಿಸಿ ವಿಭಾಗಕ್ಕಾಗಿ ದಾವೆ ತರಬೇಕು. (೧೧ ಬೊಂ. ಹೈ. ೭೨, ೭೬; ೨೨ ಸ. ೧೧೬; ಇ. ಲಾ. ರಿ. ೪ ಕ. ೭೨೩; ಇ. ಲಾ. ರಿ. ೬ ಬೊಂ ೫೬೪; ಇ, ಲಾ ರಿ. ೧೩ ಮ. ೨೭೫) ಸಮಷ್ಟಿಯಾಸ್ತಿಯಲ್ಲಿ ಯಾನಭಾಗಸ್ತನಿಗೂ ಪ್ರತ್ಯೇಕವಾಗಿ ಹಕ್ಕು ಇಲ್ಲದುದರಿಂದ, ವಿಭಾಗಕ್ಕೆ ಪೂರ್ವದಲ್ಲಿ ಸದರಿ ಆಸ್ತಿಯಲ್ಲಿ ಫಲಾನೀಭಾಗವು ತನ್ನನುಭವಕ್ಕೊಳಪಟ್ಟಿರಬೇಕೆಂದು ಕ್ರಯದಾರನು ಅಲ್ಲದೆ ಟ್ರಾನ್ಸಫರ್‌ದಾರನು ಅಪೇಕ್ಷಿಸಲು ಅವಕಾಶವಿಲ್ಲವು (೨೨ ಸ ೨೧೪; ಇ, ಲಾ. ರಿ. ೨ ಬೊಂ. ೬೭೬; ೧೪ ಮೂ. ಇ. ಅ. ೫೦; ೫ ಮ. ಹೈ. ೧೬೬; ೧೦ ಬೊಂ. ಹೈ, ೧೫೬)

ಆದರೆ, ಸಮುಷ್ಟಿಯಾಸ್ತಿಯಲ್ಲಿ ಕೊಂಚಭಾಗವು ಒಬ್ಬಭಾಗಸ್ಥನ ಪ್ರತ್ಯೇಕಾನುಭವದಲ್ಲಿರಲು ಅದನ್ನು ಯಾರಾದರೂ ಟ್ರಾನ್ಸಫರು ಹೊಂದಿ ಅನುಭವಿಸುತ್ತಿದ್ದಪಕ್ಷದಲ್ಲಿ, ಅಂತಹ ಟ್ರಾನ್ಸಫರ್ದಾರನ ಅನುಭವವನ್ನು ಇತರ ಭಾಗಸ್ಥರು ಬಿಡಿಸಲಾರರು. ಆತನು ಆಮೇರೆ ಅನುಭವಿಸುವುದು ಇವರಿಗೆ ಇಷ್ಟವಿಲ್ಲದಿದ್ದರೆ, ಯಾವದಾಸ್ತಿಯನ್ನೂ ಸೇರಿಸಿ ವಿಭಾಗಿಸಿಕೊಳ್ಳುವುದಕ್ಕಾಗಿ ಇವರು ದಾವೆತರಬೇಕು. (೧೨ ಬೊಂ. ಹೈ, ೧೩೮; ಇ. ಲಾ. ರಿ. ೧ ಬೊಂ. ೯೫; ಇ ಲಾ. ರಿ. ೨ ಬೊಂ. ೬೭೬; ಇ. ಲಾ. ರಿ. ೧೦ ಬೊಂ. ೬೭೩.) ೧೮೮೨ ಸಂ|| ೪ ನಂ|| ಟ್ರಾನ್ಸಫರ್ ಆಫ್ ಪ್ರಾಪರ್ಟಿ ಆಕ್ಟು ೪೪ ಸೆ|| ಪ್ರಕಾರವಾಗಿ ಸಮುಷ್ಟಿಗೃಹದಲ್ಲಿ ಒಬ್ಬಭಾಗಸ್ಥನ ಹಕ್ಕನ್ನು ಟ್ರಾನ್ಸಫರು ಹೊಂದಿದವನು ಸದರಿ ಗೃಹವನ್ನು ಮಿಕ್ಕ ಭಾಗಸ್ಥರೊಡನೆ ಅನುಭವಿಸತಕ್ಕ ಹಕ್ಕನ್ನು ಹೊಂದಿರಲಾರನು.

ಸಮುಷ್ಟಿ ಭಾಗಸ್ಥನ ಹಕ್ಕನ್ನು ಟ್ರಾನ್ಸಫರು ಹೊಂದಿದವನಿಗೆ ಸೇರಲುಳ್ಳ ಭಾಗವು, ಆತನು ವಿಭಾಗಕ್ಕಾಗಿ ದಾವೆತಂದ ಕಾಲವನ್ನು ಹಿಡಿದು ಲೆಕ್ಕಿಸಬೇಕಲ್ಲದೆ ಟ್ರಾನ್ಸಫರು ಕಾಲವನ್ನುಹಿಡಿದು ಲೆಕ್ಕಿಸಕೂಡದು. ಇದು ಹೇಗೆಂದರೆ— ಒಂದು ಸಮುಷ್ಟಿ ಕುಟುಂಬದಲ್ಲಿ ತಂದೆಯೂ ಇಬ್ಬರುಮಕ್ಕಳೂ ಇದ್ದರು. ಒಬ್ಬಮಗನು ತನ್ನ ಹಕ್ಕನ್ನು ಟ್ರಾನ್ಸಫರ್ ಮಾಡಿದನು, ಟ್ರಾನ್ಸಫರ್‌ದಾರನು ವಿಭಾಗಕಾಗಿ ದಾವೆತರುವಷ್ಟರೊಳಗೆ ಮತ್ತೆ ಮೂರುಮಂದಿ ಮಕ್ಕಳು ಹುಟ್ಟಿ ತಂದೆ ಸತ್ತುಹೋದನು. ಈ ಸಂದರ್ಭದಲ್ಲಿ ಟ್ರಾನ್ಸಫರ್ದಾರನಿಗೆ ೫-ರಲ್ಲಿ ಒಂದಂಶವು ಮಾತ್ರವೇ ಬರುವುದಲ್ಲದೆ ಟ್ರಾನ್ಸಫರ್ ಕಾಲದಲ್ಲಿನಂತೆ ೩-ರಲ್ಲಿ ಒಂದಂಶವು ಬರಲಾರದು. (ಇ. ಲಾ, ರಿ. ೧೫ ಮು. ೪೦೮.)

ಅಲಹಾಬಾದು, ಕಲ್ಕತ್ತಾ ಹೈಕೋರ್ಟು ತೀರ್ಮಾನಗಳು—ಸಮುಷ್ಟಿ ಕುಟುಂಬದ ಭಾಗಸ್ಥನ ಸ್ವಾತಂತ್ರ್ಯವನ್ನು ಕುರಿತು ಅಲಹಾಬಾದು ಹೈಕೋರ್ಟಿನವರೂ| ಮಿತಾಕ್ಷರ ಧರ್ಮಶಾಸ್ತ್ರವನ್ನನುಸರಿಸುವವರ ಮಧ್ಯೆ ಉಂಟಾದ ಕೇಸುಗಳೊಳಗೆ ಕಲ್ಕತ್ತಾ ಹೈಕೋರ್ಟಿನವರೂ, ಮದರಾಸ್, ಬೊಂಬಯಿ ,ತೀರ್ಮಾನಗಳಿಗೆ ವ್ಯತಿರೇಕವಾಗಿ ತೀರ್ಮಾನಿಸಿರುವರು. ಅವರ ತೀರ್ಮಾನಗಳ ಮೇಲೆ ಸಮುಷ್ಟಿಕುಟುಂಬದ ಭಾಗಸ್ಥನು ಆತನಿಗೆ ಸಮುಷ್ಟಿ ಸ್ವತ್ವದಲ್ಲಿರುವ ಹಕ್ಕನ್ನು, ತನ್ನ ಸ್ವಪ್ರಯೋಜನಕ್ಕಾಗಿ ಪ್ರತಿಫಲವನ್ನು ಪಡೆದು ಅಡವು ಮೊದಲಾದ ವಿಧಗಳಿಂದಾದರೂ ದಾನರೂಪವಾಗಿಯಾದರೂ ಉಯಿಲು ಮೂಲಕವಾಗಿಯಾದರೂ ಪರಾಧೀನವನ್ನು ಮಾಡುವುದಕ್ಕೆ ಸ್ವತಂತ್ರನಲ್ಲವೆಂದೂ, ಅಂತಹ ಪರಾಧೀನಗಳನ್ನು ಮಿಕ್ಕ

ಭಾಗಸ್ಥರು ದಾವೆ ತಂದು ರದ್ದುಮಾಡಬಹುದೆಂದೂ ಸ್ಥಿರಪಟ್ಟದೆ. (೩ ಬಂ ಸ. ತೀ. ೨೩೨; ೬ ಬಂ. ಸ. ತೀ. ೧೭೬; ೭ ಬಂ. ಸ. ತೀ. ೧೮೫; ೫ ಬಂ ಸ ತೀ ೧೬೩; ೪ ಬಂ ಸ ತೀ ೧೫೮; ೩ ಸ ೨೧೦, ೭ ಅ ಹೈ ೨೭೭; ಇ ಲಾ ರಿ ೨ ಅ. ೨೬೭; ಇ ಲಾ ರಿ ೫ ಅ ೩೮೪; ೩ ಕ ಹೈ ೩೧; ೪ ಕ ಹೈ ೧೫; ೮ ಕ ಹೈ ೩೫೯; ಇ ಲಾ ರಿ ೧ ಕ ೨೦೬; ೨೨ ಸ ೫೫೨; ಇ ಲಾ ರಿ ೧೬ ಕ ೧೩೭; ಇ ಲಾ ರಿ ೧೮ ಕ ೧೫೭) ಆದರೆ ಟ್ರಾನ್ಸ್‌ಫರುದಾರನು ಟ್ರಾನ್ಸ್‌ಫರುಮಾಡಿದ ಭಾಗಸ್ಥನ ಜೀವಿತಕಾಲದಲ್ಲಿಯೇ ದಾವೆ ತಂದರೆ ಈತನಿಗುಂಟಾಗಿರುವ ವಿಭಾಗದ ಹಕ್ಕನ್ನು ಕೋರ್ಟಿನವರು ಉಪಯೋಗಗೊಳಿಸಿ ಈತನ ಪಾಲು ಭಾಗವು ಟ್ರಾನ್ಸ್‌ಫರುದಾರನಿಗೆ ಸಲ್ಲುವಂತೆ ತೀರ್ಮಾನಿಸುವರು. (೧೨ ಕ ಹೈ ೯೦; ಇ ಲಾ ರಿ ೩ ಕ ೧೯೯, ಇ ಲಾ ರಿ ೧೮ ಕ ೧೫೭.

ಪರಾಧೀನವನ್ನು ಸ್ಥಿರಪಡಿಸುವಾಗ ಟ್ರಾನ್ಸ್‌ಫರುದಾರನಿಗೆ ಹಣ ಕೊಡಿಸಿಬಿಡುವಿಕೆ.—ಸಮುಷ್ಟಿ ಕುಟುಂಬದ ಭಾಗಸ್ಥನು ಮಾಡಿರುವ ಅಕ್ರಮ ಪರಾಧೀನವನ್ನು ರದ್ದುಮಾಡಲು ಬಯಸುವವರು ಅಂತಹ ಪರಾಧೀನದಿಂದ ಹೊಂದಲ್ಪಟ್ಟ ಹಣದಲ್ಲಿ ಕೆಲವು ಮಟ್ಟಿಗೆ ಕುಟುಂಬಕ್ಕಾವಶ್ಯಕವಾದ ಕಾರ್ಯಗಳಿಗಾಗಿ ಉಪಯೋಗಪಡಿಸಲ್ಪಟ್ಟ ಪಕ್ಷದಲ್ಲಿ ಆ ಹಣವನ್ನು ವರ್ಗದಾರನಿಗೆ ಕೊಡಲು ಸಿದ್ಧವಾಗಿರಬೇಕು. ಇನ್ನೂ ಕೆಲವು ಕಾಲದ ವರೆಗೂ ತಡೆದು ತೀರಿಸತಕ್ಕ ಕುಟುಂಬದ ಋಣಗಳಿಗಾಗಿ ಉಪಯೋಗಿಸಲ್ಪಟ್ಟರೂ ಹಾಗೆ ಉಪಯೋಗಿಸಲ್ಪಟ್ಟ ಹಣವನ್ನು ಕೊಟ್ಟುಬಿಡಬೇಕು. ಸದರಿ ಪರಾಧೀನ ಸ್ವತ್ತಿನಲ್ಲಿ ಎಷ್ಟುಮಾತ್ರವಾದರೂ ಕುಟುಂಬಕ್ಕಾಗಿ ಉಪಯೋಗಿಸಲ್ಪಡದಿದ್ದರೆ ವರ್ಗದಾರನಿಗೆ ಹಣ ಕೊಡದೆಯೇ ಪರಾಧೀನವನ್ನು ರದ್ದು ಪಡಿಸಿಕೊಳ್ಳಬಹುದು. (ಕ ಹೈ ಸಪ್ಲಿಮೆಂಟಲ್ ವಾಲ್ಯೂಂ ೧೦೧೮, ೮ ಕ ಹೈ ೩೫೮, ಇ ಲಾ ರಿ ೬ ಅ ೪೧೭; ೨ ಬೊಂ. ಹೈ ೩೧೮). ಪರಾಧೀನ ಸ್ವತ್ತಿನಲ್ಲಿ ಕೆಲವು ಮಟ್ಟಿಗೆ ಕುಟುಂಬಕ್ಕಾಗಿ ಉಪಯೋಗಿಸಲ್ಪಟ್ಟ ಸಂದರ್ಭದಲ್ಲಿ ಸದರಿ ಹಣವನ್ನು ವಾದಿಗಳು ಪ್ರತಿವಾದಿಗೆ ಕೊಡುವ ಷರತ್ತಿನ ಮೇಲೆ ಪರಾಧೀನವು ರದ್ದುಪಡಿಸಲ್ಪಟ್ಟು ಡಿಕ್ರಿ ಕೊಡಲ್ಪಡುವುದು. (೪ ಕ ಹೈ ೧೧೮-೧೨೫; ೧೫ ಕ ಹೈ ೩೫೦.)

ಪರಾಧೀನದ ಬಾಬತು ಹಣವು ಕುಟುಂಬಕ್ಕಾಗಿ ಉಪಯೋಗಿಸಲ್ಪಟ್ಟಿತೆಂದು ರುಜುವಾತು ಮಾಡುವ ಭಾರವು ವರ್ಗದಾರನದಾಗಿರುತ್ತದೆ (ಕ ಹೈ ಸಪ್ಲಿಮೆಂಟಲ್ 'ವಾಲ್ಯೂಂ ೧೦೧೮, ೨ ಬೊಂ ಹೈ ೩೧೮)

ಸಮುಷ್ಟಿ ಕುಟುಂಬದ ಭಾಗಸ್ಥನು ಸಮುಷ್ಟಿಯಾಸ್ತಿಯನ್ನು ಪರಾಧೀನಪಡಿಸಿ ಹಣವನ್ನು ತನ್ನ ಸ್ವಂತ ಸಾಲಗಳನ್ನು ತೀರಿಸುವುದಕ್ಕಾಗಿ ಅಲ್ಲದೆ ಸ್ವಂತ ವೆಚ್ಚಗಳಿಗಾಗಿ ವಿನಿಯೋಗಿಸಿಕೊಂಡಲ್ಲಿ ಅಂತಹ ಪರಾಧೀನ

ವನ್ನು ರದ್ದುಪಡಿಸಲೆಳಸುವ ಮಿಕ್ಕ ಭಾಗಸ್ಥರು ಸದರಿ ಹಣ ಕೊಡಲು ಬದ್ಧರಲ್ಲವು. (೪ ಕ ಹೈ ೧೫). ಆದರೆ ಇವರು ಬಹಳಕಾಲದವರೆಗೂ ಸದರಿ ಪರಾಧೀನವನ್ನು ಆಕ್ಷೇಪಿಸದೆ ಸುಮ್ಮನಿದ್ದರೆ ವರ್ಗದಾರನಿಗೆ ಹಣ ಕೊಡಿ ದೆ ಪರಾಧೀನವನ್ನು ಕೋರ್ಟಿನವರು ರದ್ದುಪಡಿಸಲಾರರು. (ಕ ೧೧ ಹೈ ಅಪೆಂಡಿಕ್ಸ ೨೯.)

ಟ್ರಾನ್ಸ್ಫರು ಸೊತ್ತಿನಲ್ಲಿ ಮಾಡಲ್ಪಟ್ಟ ವೃದ್ಧಿ ವಗೈರೆ— ಟ್ರಾನ್ಸ್ಫರು ರದ್ದುಪಡಿಸುವಷ್ಟರೊಳಗೆ ಸೊತ್ತಿನಲ್ಲಿ ಟ್ರಾನ್ಸ್ಫರುದಾರನು ಮರಮ್ಮತು ಅಲ್ಲದೆ ವೃದ್ಧಿ ಉಂಟುಮಾಡಿದ್ದರೆ ಸದರಿ ಮರಮ್ಮತು ಅಲ್ಲದೆ ವೃದ್ಧಿಯ ಕಿಮ್ಮತು ಆತನಿಗೆ ಕೊಡಿಸಲ್ಪಡುವುದು. ಆದರೆ ಅಕ್ರಮವೆಂದೂ ಸಲ್ಲದೆಂದೂ ಮೊದಲೇ ತಿಳಿದಿದ್ದು ಟ್ರಾನ್ಸ್ಫರು ಹೊಂದಿದವನಿಗೆ ಮರಮ್ಮತು ಅಲ್ಲದೆ ವೃದ್ಧಿಯ ಕಿಮ್ಮತು ಕೊಡಿಸಲ್ಪಡಲಾರದು. (ಇ ಲಾ ರಿ ೫ ಬೊಂ ೪೫೦.)

ಅವಿಭಾಜ್ಯ ಜಮೀಂದಾರಿ ಪರಿಪಾಲಕನಿಗಿರುವ ಪರಾಧೀನ ಸ್ವಾತಂತ್ರ್ಯವು—ಮಿತಾಕ್ಷರ ಧರ್ಮಶಾಸ್ತ್ರಪ್ರಕಾರವಾಗಿ ಒಂದವಿಭಾಜ್ಯವಾದ ಜಮೀಂದಾರಿ ಸಮಷ್ಟಿ ಸ್ವತ್ವವಾಗಿರಬಹುದೆಂದೂ ಕುಟುಂಬದಲ್ಲಿ ದೊಡ್ಡಮಗನು ಮಾತ್ರವೇ ರಾಜ್ಯಾಧಿಕಾರಕ್ಕೆ ಹಕ್ಕುಂಟಾದವನಾಗಿ ಮಿಕ್ಕವರು ಜೀವನಾಂಶಕ್ಕೆ ಹಕ್ಕುಂಟಾದವರಾಗಿರುವರೆಂದೂ ದೊಡ್ಡವನು ಪುತ್ರಹೀನನಾಗಿ ಸತ್ತುಹೋದರೆ ಸದರಿ ಜಮೀಂದಾರಿ ಆಸ್ತಿ ಆತನ ಹೆಂಡತಿಗೆ ಸಲ್ಲದೆ ತಮ್ಮಂದಿರಲ್ಲಿ ಜ್ಯೇಷ್ಠನಿಗೆ ಸಲ್ಲುವುದೆಂದೂ ೧೪೩ ನೇ ಪೇರಾದೊಳಗೆ ಹೇಳಿದ್ದೆವು. ಹೀಗೆ ಹೇಳಿ ಇರುವುದರಿಂದ ಸಾಧಾರಣ ಸಮಷ್ಟಿ ಕುಟುಂಬಗಳೊಳಗಣ ತಂದೆ ಅಲ್ಲದೆ ಮೇನೇಜರು ವಿಷಯವಾಗಿ ಸಲ್ಲುತ್ತಿರುವ ಪರಾಧೀನ ನಿರ್ಬಂಧಗಳು ಅವಿಭಾಜ್ಯ ಜಮೀಂದಾರಿಯ ಪರಿಪಾಲಕರಿಗೆ ಕೂಡ ಸಲ್ಲುವುವೆಂದು ಎಣಿಸಕೂಡದು. ಇತರ ಜಮೀಂದಾರಿಯ ಸೊತ್ತನ್ನು ಕುಟುಂಬಕ್ಕೆ ಅವಶ್ಯಕವಾದ ಖರ್ಚುಗಳಿಗಾಗಿ ಮಾತ್ರವೇ ಜಮೀಂದಾರನು ಪರಾಧೀನಮಾಡಬಹುದೆಂದೂ ಕುಟುಂಬಕ್ಕಾವಶ್ಯಕವಿಲ್ಲದ ಪರಾಧೀನಗಳು ಸದರೀ ಜಮೀಂದಾರನ ಜೀವಿತಕಾಲದವರೆಗೆಯೇ ಸಲ್ಲುವುದಲ್ಲದೆ ಆತನ ನಂತರದ ವಾರಸನ್ನು ಭಾದಿಸುವುದಿಲ್ಲವೆಂದೂ ಮೊನ್ನೆ ಮೊನ್ನೆವರೆಗೂ ಮದರಾಸು ಹೈಕೋರ್ಟಿನವರಿಂದಲೂ ಅಲಹಾಬಾದು ಹೈಕೋರ್ಟಿನವರಿಂದಲೂ ಹಲವು ತೀರ್ಮಾನಗಳಿಂದ ಸಿದ್ಧಾಂತಪಡಿಸಲ್ಪಟ್ಟಿತ್ತು. ಆದರೆ ಈಚೀಚಗೆ ಈ ತೀರ್ಮಾನಗಳು ರದ್ದಾಗಿ ಸಿದ್ಧಾಂತವು ತಲೆಕೆಳಗಾಯಿತು.

ಸಾಮಾನ್ಯವಾಗಿ ಸಮಷ್ಟಿ ಕುಟುಂಬಗಳಿಗೆ ಸಲ್ಲುತ್ತಿರುವ ಮಿತಾಕ್ಷರ ನ್ಯಾಯವು ಅವಿಭಾಜ್ಯಗಳಾದ ಜಮೀಂದಾರಿಗಳಿಗೆ ಸಲ್ಲಲಾರದೆಂದೂ ಜಮೀಂ

ದಾರೀ ಸೊತ್ತಿನಲ್ಲಿ ಮಕ್ಕಳೆಲ್ಲರಿಗೂ ತಂದೆಯೊಡನೆ ಕೂಡ ಸಮುಷ್ಟಿ ಹಕ್ಕುಂಟಾಗದೆ ದೊಡ್ಡ ಮಗನಿಗೆ ಮಾತ್ರವೇ ವಾರಸು ಹಕ್ಕುಂಟಾಗುವಂತಹ ಪದ್ಧತಿಯುನ್ನು ಮಿತಾಕ್ಷರ ನ್ಯಾಯವಾಗಿ ಭಾವಿಸಲು ಅವಕಾಶವಿಲ್ಲವೆಂದೂ ಮಿತಾಕ್ಷರ ನ್ಯಾಯಪ್ರಕಾರವಾಗಿ ತಂದೆಯೊಡನೆಕೂಡ ಮಕ್ಕಳಿಗುಂಟಾಗುವ ಸಮುಷ್ಟಿ ಹಕ್ಕನ್ನೂ ತತ್ಸಂಬಂಧವಾದ ಪರಾಧೀನಾಕ್ಷೇಪಣೆಯ ಹಕ್ಕೂ ವಿಭಾಗವನ್ನು ಬಯಸಲುಳ್ಳ ಸ್ವಾತಂತ್ರ್ಯದೊಡನೆ ಸೇರಿರುವುದೆಂದೂ ವಿಭಾಗ ಸ್ವಾತಂತ್ರ್ಯವಿಲ್ಲದಾಗ ಮಿತಾಕ್ಷರನ್ಯಾಯಪ್ರಕಾರವಾಗಿ ಸಲ್ಲುತ್ತಿರುವ ಸಮುಷ್ಟಿ ಹಕ್ಕು ತತ್ಸಂಬಂಧವಾದ ಪರಾಧೀನಾಕ್ಷೇಪಣೆಯ ಹಕ್ಕೂ ಇರಲಾರದೆಂದೂ ಆದುದರಿಂದ ಅವಿಭಾಜ್ಯ ಜಮೀಂದಾರೀ ಪರಿಪಾಲಕನು ಕುಟುಂಬಾವಶ್ಯಕತೆಯಿಂದ ನಿಮಿತ್ತವಿಲ್ಲದೆಯೇ ಜಮೀಂದಾರೀ ಸ್ವತ್ವವನ್ನು ಪರಾಧೀನಪಡಿಸಲು ಸಂಪೂರ್ಣ ಸ್ವಾತಂತ್ರ್ಯ ಉಂಟಾಗಿರುವನೆಂದೂ ಅಂತಹ ಪರಾಧೀನಗಳನ್ನು ರದ್ದುಪಡಿಸುವುದಕ್ಕಾದರೂ ಆಕ್ಷೇಪಿಸುವದಕ್ಕಾದರೂ ಆತನ ನಂತರ ವಾರಸರು ಎಷ್ಟುಮಾತ್ರವಾದರೂ ಹಕ್ಕುಂಟಾಗಿರರೆಂದೂ ಅವಿಭಕ್ತ ಜಮೀಂದಾರೀ ಪರಿಪಾಲಕನು ಮಾಡುವ ಪರಾಧೀನಗಳು ಆತನ ಜೀವಿತಕಾಲದವರೆಗೆ ಮಾತ್ರವೇ ಸಲ್ಲುವವೆಂಬ ವಾದವು ನಿಲ್ಲುವುದಕ್ಕಾಗಿ ಸದರೀ ಜಮೀಂದಾರಿ ಸನ್ನದಿನ ಷರತ್ತುಗಳಿಂದಾದರೂ ಸದರಿ ಜಮೀಂದಾರೀ ಕುಟುಂಬದಲ್ಲಿ ಚಿರಕಾಲದಿಂದ ಸ್ಥಿರಪಟ್ಟಿರುವ ಆಚಾರದಿಂದಾದರೂ ಜಮೀಂದಾರನಿಗೆ ಪರಾಧೀನ ಸ್ವಾತಂತ್ರ್ಯವು ಇಲ್ಲದಂತೆ ಸ್ಪಷ್ಟವಾಗಿ ರುಜುವಾತಾಗಬೇಕೆಂದೂ ಹೀಗೆ ಕಲಕತ್ತಾ ಹೈಕೋರ್ಟಿನವರಿಂದಲೂ ಪ್ರಿವೀ ಕೌನ್ಸಿಲವರಿಂದಲೂ ತೀರ್ಮಾನಗಳು ಕೊಡಲ್ಪಟ್ಟವು. (೧೩ ಕ ಹೈ ೪೪೫, ೪೫೮, ೪೬೦, ಇ ಲಾ ರಿ ೫ ಕ ೧೧೩; ೫ ಮೂ ಇ ಅ ೮೨; ಇ ಲಾ ರಿ ೭ ಕ ೪೬೧, ಇ ಲಾ ರಿ ೧೦ ಅ ೨೭೨.)

ಅಲಹಾಬಾದು ಹೈಕೋರ್ಟಿನವರ ತೀರ್ಮಾನದ ಮೇಲೆ ಮಾಡಲ್ಪಟ್ಟ ಒಂದು ಅಪೀಲಿನಲ್ಲಿ ಪ್ರಿವೀ ಕೌನ್ಸಿಲವರು ಒಬ್ಬ ಅವಿಭಾಜ್ಯ ಜಮೀಂದಾರೀ ಪರಿಪಾಲಕನ ಹೆಂಡತಿಯ ಹೆಸರಿನ ಮೇಲೆ ಮಾಡಿರುವ ಹದಿನೇಳು ಮೇಲಾದ ಜಮೀಂದಾರಿ ಗ್ರಾಮಗಳ ಶಾಶ್ವತಪರಾಧೀನವನ್ನು ಖಾಯಂ ಮಾಡಿ ಸದರಿ ಪರಾಧೀನವನ್ನು ಆಕ್ಷೇಪಿಸಿದ ಮಗನಿಗೆ ವಿರೋಧವಾಗಿ ತೀರ್ಮಾನಿಸಿದರು. (ಇ ಲಾ ರಿ ೧೦ ಅ ೨೭೨ ಪ್ರಿವೀ ಕೌನ್ಸಿಲ್) ಈ ಪ್ರಿವೀ ಕೌನ್ಸಿಲವರ ತೀರ್ಮಾನವನ್ನು ವಿಧಿಯಿಲ್ಲದೆ ಆದರಿಸುತ್ತ ಮದರಾಸು ಹೈಕೋರ್ಟಿನವರು ಶಿವಗಂಗೆ ಜಮೀಂದಾರಿಯ ವಿಷಯಕವಾಗಿ ಅನಾವಶ್ಯಕವಾಗಿಯೂ ಅಕ್ರಮವಾಗಿಯೂ ಹಿಂದಣ ಜಮೀಂದಾರರು ೨೦ ಸಂವತ್ಸರಗಳ ಕಾಲಕ್ಕೆ ಕೊಟ್ಟಿದ್ದ "ಗಣಿಗಳನ್ನಗೆಯುವ ಗುತ್ತಿಗೆಯನ್ನು"

ಕಾರ್ಯಂ ಮಾಡಿದರು. (ಇ ಲಾ ರಿ ೧೪ ಮ ೧೯೩) ಆದರೆ ಅಮ್ಮನಾಯಕನೂರು ಜಮೀಂದಾರಿಯು ವಿಷಯದಲ್ಲಿ ಮದರಾಸು ಹೈ ಕೋರ್ಟಿನವರ ತೀರ್ಮಾನವನ್ನು ನೋಡಬೇಕು. (ಇ. ಲಾ. ರಿ. ೧೮; ಮ. ೨೨೮.)

ಈಗ ಸಿದ್ಧಾಂತವಾಗಿರುವ ಮೇರೆ ಅವಿಭಾಜ್ಯ ಜಮೀಂದಾರೀ ಪರಿಪಾಲಕನಿಗೆ ಸದರಿ ಜಮೀಂದಾರೀ ಸೊತ್ತನ್ನು ಪರಾಧೀನ ಪಡಿಸುವ ವಿಷಯದಲ್ಲಿ ಸಂಪೂರ್ಣ ಸ್ವಾತಂತ್ರ್ಯವಿರುವದೆಂದು ಎಣಿಸಬೇಕಾಗಿದೆ.

ವಿಭಾಗ ಯೋಗ್ಯಗಳಾದ ಜಮೀಂದಾರಿಗಳ ವಿಷಯವಾಗಿ ಸಾಧಾರಣ ಸಮಷ್ಟಿ ಕುಟುಂಬಗಳಲ್ಲಿ ಹೇಗೋ ಹಾಗೆ ಪರಾಧೀನ ನಿರ್ಬಂಧಗಳು ಸಲ್ಲುವುವು.

ಈವರೆಗೂ ಮಿತಾಕ್ಷರ ಧರ್ಮಶಾಸ್ತ್ರಪ್ರಕಾರವಾಗಿ ಪಿತ್ರಾರ್ಜಿತ ಸ್ವತ್ವ ವಿಷಯಕವಾಗಿ ಸಮಷ್ಟಿ ಕುಟುಂಬದ ತಂದೆಗೂ ಇತರ ಭಾಗಸ್ಥರಿಗೂ ಇರುವ ಪರಾಧೀನ ಸ್ವಾತಂತ್ರ್ಯವು ವಿವರಿಸಲ್ಪಟ್ಟಿತು. ಇದನ್ನು ದಾಯಭಾಗ ಪ್ರಕಾರವಾಗಿ ಎಂತಹ ಸ್ವಾತಂತ್ರ್ಯವಿರುವುದೋ ವಿಚಾರಿಸುವೆವು.

ದಾಯಭಾಗವು-ತಂದೆಗಿರುವ ಪರಾಧೀನ ಸ್ವಾತಂತ್ರ್ಯವು—ದಾಯಭಾಗಪ್ರಕಾರವಾಗಿ ತಂದೆಯ ಪಿತ್ರಾರ್ಜಿತ ಸ್ವತ್ವದಲ್ಲಿ ಮಕ್ಕಳಿಗೆ ಜೀವನಾಂಶ ಹಕ್ಕುಮಾತ್ರವೇ ಇರುವುದಲ್ಲದೆ, ಭಾಗವನ್ನು ಬಯಸುವ ಹಕ್ಕಾದರೂ ಸದರಿ ಸೊತ್ತನ್ನು ಅಕ್ರಮವಾಗಿ ವೆಚ್ಚಿಸದಂತೆ ತಡೆವಹಕ್ಕಾದರೂ ಇಲ್ಲವೆಂದು ೧೩೮ನೆಯ ಪ್ಯಾರಾದಲ್ಲಿ ಹೇಳಿದ್ದೆವು. ಬಂಗಾಳಾಸಂಪ್ರದಾಯಪ್ರಕಾರವಾಗಿ ಸಮಷ್ಟಿ ಕುಟುಂಬದ ತಂದೆ ತನ್ನ ಯಾವತ್ತು ಸ್ಥಿರಚರ ಸ್ವಾರ್ಜಿತ ಪಿತ್ರಾರ್ಜಿತಸ್ವತ್ವವನ್ನು ತನ್ನ ಇಚ್ಛೆಬಂದಂತೆ ಕ್ರಯವಾಗಿ, ಅದವಾಗಿ ದಾನರೂಪಕವಾಗಿ, ಅಲ್ಲದೆ ಉಯಿಲುಮೂಲಕವಾಗಿ ಪರಾಧೀನಮಾಡುವುದಕ್ಕೆ ಸ್ವತಂತ್ರನೆಂದೂ, ಅಂತಹಪರಾಧೀನಗಳು ಪಾಪಕರಗಳಾದರೂ ಸಲ್ಲದೆ ತಪ್ಪಲಾರವೆಂದೂ, ಹಲವು ಕೇಸುಗಳಲ್ಲಿ ತೀರ್ಮಾನಿಸಲ್ಪಟ್ಟಿದೆ. ಯಾವದಾಸ್ತಿಯನ್ನು ದೊಡ್ಡಮಗನಿಗೆ ಮಾತ್ರವಾದರೂ ಚಿಕ್ಕಮಗನಿಗೆ ಮಾತ್ರವಾದರೂ ಕೊಟ್ಟುಬಿಟ್ಟರೂ ಸಲ್ಲುವುದೆಂದು ತೀರ್ಮಾನಿಸಲ್ಪಟ್ಟದೆ. (೧ ಬಂ. ಸ. ತೀ. ೨; ೨ ಸ್ಟ್ರೇಜ್‌ಂಥೊರೆಗಳವರ ಹಿಂದೂಲಾ, ೪೪೭; ಎಫ್. ಮೆಕ್ನಾಟನ್ ೩೫೬, ೩೪೦; ೨ ಬಂ. ಸ. ತೀ ೮೨; ಎಫ್. ಮೆಕ್ನಾಟನ್ ೨೨೭, ೨೬೫; ೪ ಬಂ. ಸ. ತೀ ೩೨೨; ಕಲಕತ್ತಾ ಸುಪ್ರೀಂಕೋರ್ಟು ತೀರ್ಮಾನಗಳು- ಮಾರ್ಟನ್ ೯೦; ೬ ಬಂ. ಸ. ತೀ. ೭೩; ೧೮೫೯ ಸಂ॥ ಬಂ. ಸ. ತೀ. ೨೫೦; ಇ. ಲಾ. ರಿ. ೫ ಕ. ೧೧೩; ಇ. ಲಾ. ರಿ. ೩ ಕ. ೮೬೧; ಇ. ಲಾ. ರಿ. ೧೭ ಕ. ೮೮೬; ೩ ಬಂ. ಸ. ತೀ. ೨೩೪, ೩೯೭). ಈ ಹೇಳಲ್ಪಟ್ಟಮೇರೆ ಬಂಗಾಳಾಸಂಪ್ರದಾಯಪ್ರಕಾರವಾಗಿ

ತಂದೆಗೆ ಸಂಪೂರ್ಣ ಪರಾಧೀನ ಸ್ವಾತಂತ್ರ್ಯವಿದ್ದರೂ, ಮಕ್ಕಳೆಲ್ಲರಿಗೂ ತನ್ನಾಸ್ತಿಯನ್ನು ಇಚ್ಛೆಬಂದಂತೆ ಅಸಮಾನವಿಭಾಗಗಳನ್ನಾಗಿ ಹಂಚಿಡುವುದಕ್ಕೆ ಆತನು ಸ್ವತಂತ್ರನಲ್ಲವೆಂದೂ, ಅಸಮಾನವಿಭಾಗವು ಸಲ್ಲಲಾರದೆಂದೂ ಕಾಣಬರುತ್ತಿದೆ, (೨ ಬಂ. ಸ. ತೀ. ೨೦೨; ಎಫ್. ಮೆಕ್ನಾಟನ್ ೨೮೩, ೨೯೪.)

ಕುಮಾರರಿಗೆ ಇರುವ ಪರಾಧೀನ ಸ್ವಾತಂತ್ರ್ಯವು.— ಬಂಗಾಳಾದೇಶದಲ್ಲಿ ತಂದೆ ಬದುಕಿರುವಾಗ ಕುಟುಂಬದ ಸ್ವತ್ವದಲ್ಲಿ ಮಗನಿಗೆ ಎಂತಹ ಹಕ್ಕೂ ಇಲ್ಲವು. ಆದುದರಿಂದ, ಆತನು ಮಾಡುವ ಪರಾಧೀನಗಳು ಸಲ್ಲಲಾರವು. ಇಷ್ಟೇ ಅಲ್ಲದೆ, ತಂದೆ ಸತ್ತು ಆಸ್ತಿಯಲ್ಲಿ ಮಗನಿಗೆ ಹಕ್ಕುಂಟಾದ ಮೇಲೆಯೂಕೂಡ ಆತನು ಹಿಂದೆ ಪರಾಧೀನಪಡಿಸಿದ ಸ್ವತ್ವವನ್ನು ಟ್ರಾನ್ಸಫರುದಾರ ಸ್ವಾಧೀನವಾಗಿಸದೆ, ಪರಾಧೀನವನ್ನು ರದ್ದುಮಾಡಿಸಿಕೊಳ್ಳಬಹುದು. ಟ್ರಾನ್ಸಫರುದಾರನ ಬಳಿಯಲ್ಲಿ ತೆಗೆದುಕೊಂಡ ಹಣವನ್ನಾದರೋ ಕೊಟ್ಟುಬಿಡಬೇಕು. (೨ ಮಾರ್ಲೀ ಡೈಜಿಸ್ಟ್ ೧೫೨.)

ಇತರ ಭಾಗಸ್ಥರಿಗಿರುವ ಸ್ವಾತಂತ್ರ್ಯವು.- ಬಂಗಾಳಾಸಂಪ್ರದಾಯ ಪ್ರಕಾರವಾಗಿ ತಂದೆ ಸತ್ತುಹೋಗಿ ಮಕ್ಕಳು ಮುಂತಾದವರು ಆಸ್ತಿಗೆ ಭಾಗಸ್ಥರಾಗಿ ಏರ್ಪಟ್ಟಾಗ, ಇವರು ಸಮುಷ್ಟಿಯಾಗಿ ಜೀವಿಸುತ್ತಿದ್ದರೂ ಪ್ರತ್ಯೇಕವಾಗಿ ಹಕ್ಕುಗಳುಂಟಾಗಿರುವಂತೆಯೇ ಭಾವಿಸಲ್ಪಡುವರು. ಆದುದರಿಂದ, ಇವರು ತಮ್ಮ ಪಾಲು ಭಾಗವನ್ನು ಇಚ್ಛೆಬಂದಂತೆ ಪರಾಧೀನಪಡಿಸುವುದಕ್ಕೆ ಸ್ವಾತಂತ್ರ್ಯವುಂಟಾಗಿರುವರು. ತಮ್ಮ ಪಾಲು ಹಕ್ಕನ್ನು ಮೀರಿದ ಭಾಗಗಳನ್ನು ಪರಾಧೀನ ಮಾಡಕೂಡದು. (೧ ಬಂ. ಸ. ತೀ. ೪೪, ೪೬. ೧೧೫; ೩ ಬಂ. ಸ. ತೀ. ೧೯೬; ೫ ಬಂ. ಸ. ತೀ. ೩೩೮; ೨ ಡಬ್ಲ್ಯು ಮೆಕ್ನಾಟನ್ ೨೯೧, ೨೯೭, ೨೮೬, ೩೦೬, ೩೧೩; ೧೭ ಸ, ೪೨೦; ೨೧ ಸ. ೧೭.)

ಪರಾಧೀನ ವಿಷಯವಾಗಿ ಭಾಗಸ್ಥರೊಡನೆ ಒಡಂಬಡಿಕೆ.- ಸಮುಷ್ಟಿಕುಟುಂಬದ ಭಾಗಸ್ಥನು ಸಮುಷ್ಟಿಯಾಸ್ತಿಯಲ್ಲಿ ತನ್ನ ಭಾಗವನ್ನು ಮತ್ತೊಬ್ಬ ಭಾಗಸ್ಥನಿಗಲ್ಲದೆ ಯಾರಿಗೂ ವಿಕ್ರಯಿಸದೆ ಇರುವಂತೆ ಒಡಂಬಡಿಕೆ ಮಾಡಿಕೊಂಡಿದ್ದಪಕ್ಷದಲ್ಲಿ ಅದು ಸಲ್ಲುವುದೆಂದೂ, ಸದರಿ ಒಡಂಬಡಿಕೆಯಪ್ರಕಾರವಾಗಿ ನಡೆದುಕೊಳ್ಳುವಂತೆ ಕೋರ್ಟುಮೂಲಕವಾಗಿ ಅಪ್ಪಣೆ ಪಡೆಯಬಹುದೆಂದೂ, ತದ್ಭಿನ್ನವಾಗಿ ನಡೆಯಿಸಲ್ಪಟ್ಟ ಪರಾಧೀನವನ್ನು ರದ್ದುಮಾಡಿಸಬೇಕೆಂದೂ, ಅಲಹಾಬಾದು ಹೈಕೋರ್ಟಿನವರು ತೀರ್ಮಾನಮಾಡಿರುವರು (ಇ. ಲಾ. ರಿ. ೧ ಅ. ೬೧೮; ಇ. ಲಾ. ರಿ. ೨ ಅ. ೮೨೬.) ಆದರೆ ಸಮುಷ್ಟಿಕುಟುಂಬದ ಭಾಗಸ್ಥರು ತಮ್ಮಲ್ಲಿ ತಾವು ಮಾಡಿಕೊಂಡಿರುವ ಒಡಂಬಡಿಕೆ, ಅದರ ಸಂಗತಿಯನ್ನು ಎಷ್ಟುಮಾತ್ರವನ್ನಾದರೂ ಅರಿಯದೆ ಪರಾಧೀನವನ್ನು

ಹೊಂದಿದವನಿಗೆ ವಿರೋಧಕರವಾಗಿ ಚಲಾಯಿಸಲಾಪುದೆಂದು ಹೇಳುವುದು ಸಂದೇಹಾಸ್ಪದವಾಗಿದೆ. (ಇ.ಲಾ.ರಿ.೮ ಮ. ೩೮೧; ಇ.ಲಾ.ರಿ. ೪ ಅ. ೫೧೮.)

ಪರಾಧೀನಗಳ ವಿಷಯಗಳಾಗಿ ಮಿತಾಕ್ಷರ ದಾಯಭಾಗಗಳಪ್ರಕಾರವಾಗಿ ತಂದೆಗೂ ಇತರ ಭಾಗಸ್ಥರಿಗೂ ಸ್ವಾತಂತ್ರ್ಯವನ್ನು ಈವರೆಗೂ ವಿವರಿಸಿದೆವು. ಇನ್ನು ದಾನಗಳು ಕ್ರಯಗಳು ಅಡವುಗಳು ಮೊದಲಾದವುಗಳನ್ನು ಕುರಿತು ಎಲ್ಲಾ ಕಡೆಯಲ್ಲಿಯೂ ಸಲ್ಲುತ್ತಿರುವ ಕೆಲವಂಶಗಳು ಈ ಪ್ರಕರಣದಲ್ಲಿ ತಿಳಿಸಲ್ಪಡುವುವು.

ದಾನದಲ್ಲಿ ಷರತ್ತುಗಳು—ಒಬ್ಬ ಆಸ್ತಿದಾರನು ತನ್ನ ಆಸ್ತಿಯನ್ನು ದಾನಮಾಡುವಾಗ ದಾನವನ್ನು ಹೊಂದುವವನು ತನ್ನನ್ನು ಸಂರಕ್ಷಿಸಬೇಕೆಂದಾದರೂ ತನ್ನ ಮರಣಾನಂತರದಲ್ಲಿ ಅಪರಕ್ರಿಯೆಗಳನ್ನು ನಡೆಯಿಸಬೇಕೆಂದಾದರೂ ತನ್ನಿಂದ ಆತನಿಗೆ ಬರಬೇಕಾಗಿರುವ ಬಾಕೀಗಳನ್ನು ಬಿಟ್ಟುಕೊಳ್ಳಬೇಕೆಂದಾದರೂ ವ್ಯಾಧಿ ವಾಸಿಯಾಗಿ ತಾನು ಬದುಕಿದ ಪಕ್ಷದಲ್ಲಿ ಸದರಿ ಸೊತ್ತು ಮರಳಿ ತನಗೇ ಸೇರಬೇಕೆಂದಾದರೂ ಇಂತಹ ಷರತ್ತುಗಳನ್ನು ಏರ್ಪಡಿಸಬಹುದು. (೬ ಮ ಹೈ ೨೭೦, ೩ ಬಂ. ಸ. ತೀ. ೩೭೭, ೧೮೫೩ ಸಂ॥ ಬಂ. ಸ. ತೀ, ೧೦೩, ಇ. ಲಾ. ರಿ. ೧೪ ಕ ೨೯೨, ೯ ಮೂ. ಇ. ಅ. ೧೨೩, ೧೩೫; ೪ ಕ. ಹೈ. ೧೯೨) ಅಂತಹ ಷರತ್ತುಗಳ ಪ್ರಕಾರವಾಗಿ ನಡೆಯಿಸಲ್ಪಡದಿದ್ದರೆ ದಾನವು ಸಲ್ಲಲಾರದು. ದಾನಮಾಡುವಂತಹ ಕಾಲದಲ್ಲಿಯೇ ಷರತ್ತುಗಳನ್ನು ಏರ್ಪಡಿಸಿಕೊಳ್ಳಬೇಕೇ ಹೊರತು ದಾನವು ಸಂಪೂರ್ತಿಯಾದ ಮೇಲೆ ಏರ್ಪಡಿಸುವುದಕ್ಕೆ ಅವಕಾಶವಿಲ್ಲವು. (ಇ. ಲಾ ರಿ. ೬ ಅ. ೩೨೩.) ಮತ್ತು 'ಲಾ' ಗೆ ವಿರೋಧವಾದ ಷರತ್ತುಗಳು ಎಂದರೆ ದಾನದ ಆಸ್ತಿಯನ್ನು ಅನುಭವಿಸದೆ ಹಾಳು ಹಾಕಬೇಕೆಂದಾದರೂ ಆದಾಯವು ಎಂದಿಗೂ ಕೂಡಿಡಬೇಕೆಂದಾದರೂ ಸದರಿ ಆಸ್ತಿಯನ್ನು ಅಡವಿಡಕೂಡದೆಂದಾದರೂ ವಿಕ್ರಯಿಸಕೂಡದೆಂದಾದರೂ ಸಾಲಗಳಿಗೆ ಅಲ್ಲದೆ ಮನೋವರ್ತಿಯ ಕೆಳಗೆ ಕೊಡಕೂಡದೆಂದಾದರೂ ವಿಭಾಗಿಸಿಕೊಳ್ಳಕೂಡದೆಂದಾದರೂ ಇಂತಹ ಷರತ್ತುಗಳು ಸಲ್ಲಲಾರವು. ಅಂತಹ ಸಂದರ್ಭದಲ್ಲಿ ಇತರ ವಿಷಯಗಳೊಳಗೆ ಕ್ರಮವಾದುದಾಗಿದ್ದ ಪಕ್ಷದಲ್ಲಿ ದಾನವು ನಿಂತು ಷರತ್ತುಗಳು ರದ್ದಾಗುವುವು. (೯ ಮ. ಹೈ. ೩೯೫; ೬ ಮ ಹೈ. ೩೫೬, ೧೩ ಕ. ಹೈ. ೪೯೫, ೪೫೭, ಇ. ಲಾ. ರಿ. ೪ ಮ. ೨೦೦, ಇ ಲಾ ರಿ. ೧೯ ಕ. ೨೨೨, ಇ. ಲಾ. ರಿ. ೯ ಅ. ೫೧೮, ಇ. ಲಾ. ರಿ. ೭ ಮ. ೩೧೫, ಇ ಲಾ ರಿ ೭ ಅ ೫೧೬, ಇ ಲಾ ರಿ ೧೩ ಬೊಂ ೩೬೩, ೯ ಕ ಹೈ ೧೦೩, ೯ ಕ. ಹೈ. ೩೩, ೧೮ ಸ. ೩೫೯). ಅಂತಹ ಸಲ್ಲಕೂಡದ ಷರತ್ತುಗಳೇ ಪ್ರತಿಫಲವಾಗಿ ಎಂದರೆ ಅವನಿಗೆ ಒಳಪಟ್ಟೇ ದಾನಮಾಡಲ್ಪಟ್ಟ ಸಮಯದ

ಲ್ಲಿ ದಾನವು ರದ್ದಾಗಿ ಭಾವಿಸಲ್ಪಡುವ್ವನು. (ಇ ಲಾ ರಿ ೬ ಅ ೩೧೩; ಟ್ರಾನ್ಸ್ಫರು ಆಫ್ ಪ್ರಾಪರ್ಟಿ ಆಕ್ಟು ಸೆ ೨೫ ೧೮.)

ದಾನವನ್ನು ಹೊಂದುವವನು ಹುಟ್ಟಿ, ಅಥವ ಗರ್ಭಗತನಾಗಿರಬೇಕು ದಾನವು ಸಂಪೂರ್ತಿಯಾಗುವುದಕ್ಕೆ ಆಸ್ತಿದಾರನು ತನ್ನ ಸೊತ್ತನ್ನು ಮತ್ತೊಬ್ಬರಿಗೆ ಉಚಿತವಾಗಿ ಕೊಡುವುದೂ ಈತನು ಅದದ್ನು ಅಂಗೀಕರಿಸಿ ಪರಿಗ್ರಹಿಸುವುದೂ ಮುಖ್ಯವು. ಆದುದರಿಂದ ದಾನವನ್ನು ಹೊಂದುವವನು ಸದರಿ ದಾನವು ಮಾಡಲ್ಪಟ್ಟ ಕಾಲದಲ್ಲಾದರೂ ಉಯಿಲಿ (ಮರಣಶಾಸನವು) ನಿಂದ ದಾನವು ಮಾಡಲ್ಪಟ್ಟ ಪಕ್ಷದಲ್ಲಿ ದಾತಾರನ ಮರಣಕಾಲದಲ್ಲಿಯಾದರೂ ಜನ್ಮಿಸಿ ಅಥವಾ, ಗರ್ಭಗತನಾಗಿ ಇರಬೇಕು. ಆಮೇಲೆ ಗರ್ಭಗತನಾಗುವವನಿಗೆ ದಾನವು ಸಲ್ಲಲಾರದು. (೯ ಕ ಹೈ ೩೯೯; ಇ ಲಾ ರಿ. ೨ ಕ ೭೬೫; ಇ ಲಾ ರಿ ೫ ಕ ೪೫೫; ಇ ಲಾ ರಿ ೧೫ ಬೊಂ ೪೪೩). ಸ್ವೀಕಾರಪುತ್ರನ ವಿಷಯುವಾಗಿ ಮಾತ್ರವು ಈ ವಿಧಿ ಸಲ್ಲದು. ಎಂದರೆ ದಾನಕಾಲಕ್ಕೆ ಅನಂತರದಲ್ಲಿ ಸ್ವೀಕರಿಸಲ್ಪಟ್ಟರೂ ಸ್ವೀಕಾರಪುತ್ರನಿಗೆ ಮಾಡಲ್ಪಡುವಂತಹ ದಾನವು ಸಲ್ಲುವುದು. (೪ ಕ ಹೈ ೧೦೩; ೯ ಕ ಹೈ ೩೭೭; ೩೯೭, ೪೦೦ ೪೦೪.)

ಹಲವು ಮಂದಿಗೆ ಜಾಯಿಂಟು ದಾನವು—ಯಾವುದಾದರೂ ಆಸ್ತಿ ಹಲವರಿಗೆ ಜಾಯಿಂಟಾಗಿ ದಾನಮಾಡಲ್ಪಟ್ಟಾಗ ಅವರಲ್ಲಿ ಕೆಲವರು ದಾನಮಾಡಲ್ಪಟ್ಟ ಕಾಲದಲ್ಲಿ ಅಲ್ಲದೆ ಆಸ್ತಿದಾರನ ಮರಣ ಕಾಲದಲ್ಲಿ ಹುಟ್ಟಲಿಲ್ಲವೆಂಬ ಕಾರಣದಿಂದಾದರೂ ಮತ್ತೆ ಯಾವ ಕಾರಣದಿಂದಾದರೂ ಅವರ ವಿಷಯುಕವಾಗಿದಾನವು ಸಲ್ಲದೆ ಹೋದರೂ ಮಿಕ್ಕವರ ವಿಷಯುಕವಾಗಿ ಅದು ರದ್ದಾಗಲಾರದು ಅಂತಹ ಸಂದರ್ಭದಲ್ಲಿ ದಾನದ ಆಸ್ತಿ ಯಾವತ್ತೂ ಈ ಮಿಕ್ಕವರಿಗೇ ಸಲ್ಲುವುದು. (ಇ ಲಾ ರಿ. ೬ ಅ ೫೭೩, ಇ ಲಾ ರಿ ೧೨ ಕ ೬೬೩, ಇ ಲಾ ರಿ ೧೨ ಮ ೩೯೩, ಇ ಲಾ ರಿ ೧೫ ಬೊಂ ೫೬೨.)

ದಾನ ಕೊಡಲ್ಪಡುವವನು ದಾತಾರನ ಬಳಿಯಿಂದ ದಾನವನ್ನು ಅಂಗೀಕರಿಸಿ ತೆಗೆದುಕೊಳ್ಳುವುದು ಆವಶ್ಯಕವಿಲ್ಲವು. ಆತನು ಎಲ್ಲಿದ್ದರೂ ನಿಶ್ಚಯವಾಗಿ ಅಂಗೀಕರಿಸುವನೆಂಬ ನಂಬಿಕೆಯಿಂದ ದಾನಮಾಡಲ್ಪಟ್ಟ ಪಕ್ಷದಲ್ಲಿ ಅದು ತಪ್ಪದೆ ಸಲ್ಲುವುದು. (೪ ಕ ಹೈ ೨೯೧)

ದಾನದಾಸ್ತಿಯುನ್ನು ಸ್ವಾಧೀನಪಡಿಸುವಿಕೆ—ದಾನವು ಸಂಪೂರ್ತಿಯಾಗಿ ಸಲ್ಲುವುದಕ್ಕೆ ದಾನವನ್ನು ಹೊಂದುವವನಸ್ವಾಧೀನದೊಳಕ್ಕೆ ದಾನ ಕಾಲದಲ್ಲಿ ಸ್ವತ್ತು ಸೇರಬೇಕು. ಚರಾಸ್ತಿ ದಾನವು ಸಲ್ಲುವುದಕ್ಕಾಗಿ ಅದನ್ನು ಸ್ವಾಧೀನಪಡಿಸಬೇಕು. ಸ್ಥಿರಾಸ್ತಿ ದಾನವು ಮಾಡಲ್ಪಟ್ಟಾಗ ಅದನ್ನು ಆ

ಯಾ ಸಂದರ್ಭಗಳಲ್ಲಿ ಸಾಧ್ಯವಾಗುವಂತೆ ಸ್ವಾಧೀನಪಡಿಸಬೇಕು ಇತರರಿಂದ ಗುತ್ತಿಗೆಗೆ ತೆಗೆದುಕೊಳ್ಳಲ್ಪಟ್ಟಿರುವ ಸ್ಥಿರಾಸ್ತಿ ದಾನಮಾಡಲ್ಪಟ್ಟಾಗ ಅದರ ಕಡೆಯ ಬಾಡಿಗೆ ದಾನ ತೆಗೆದುಕೊಂಡವನಿಗೆ ಸೇರುವಂತೆ ಏರ್ಪಾಟು ಮಾಡಿದ ಪಕ್ಷದಲ್ಲಿ ಆಸ್ತಿ ಸ್ವಾಧೀನಪಡಿಸಲ್ಪಟ್ಟಂತೆಯೇ ಭಾವಿಸಲ್ಪಡುವುದು. (೫ ಬೊಂ ಹೈ ೭೩; ೬ ಮ ಹೈ ೧೯೮; ೪ ಬೊಂ ಹೈ ೩೧, ಇ ಲಾ ರಿ ೮ ಅ ೪೦, ಇ ಲಾ ರಿ ೯ ಮ ೨೬೭, ಇ ಲಾ ರಿ ೭ ಮ ೨೩, ಇ ಲಾ ರಿ ೧೨ ಬೊಂ ೫೨೩, ಇ ಲಾ ರಿ ೭ ಬೊಂ ೪೫೨, ೨೨೯, ೪ ಮ ಹೈ ೮೬೦) ದಾನ ಮಾಡಲ್ಪಟ್ಟ ಸ್ಥಿರಾಸ್ತಿಯನ್ನು ದಾತಾರನು ತನ್ನ ಸ್ವಾಧೀನದಲ್ಲಿಯೇ ಇಟ್ಟುಕೊಂಡು ಅದನ್ನು ತಾನು ಗುತ್ತಿಗೆಗೆ ಅಲ್ಲದೆ ಬಾಡಿಗೆಗೆ ತೆಗೆದುಕೊಂಡಂತೆ ದಾನವನ್ನು ಹೊಂದಿದವನಿಗೆ ಗುತ್ತಿಗೆ ಚೀಟಿ ಬರೆದುಕೊಟ್ಟ ಪಕ್ಷದಲ್ಲಿ ಸದರಿ ಆಸ್ತಿ ಸ್ವಾಧೀನಪಡಿಸಲ್ಪಟ್ಟಂತೆಯೇ ಎಣಿಸಲ್ಪಡುವುದು. (೩ ಬಂ ಸ ತೀ ೨೩೮) ಮಯಿನರಿಗಾದರೂ ಹುಚ್ಚನಿಗಾದರೂ ದಾನಮಾಡಿದ ಆಸ್ತಿಯನ್ನು ಆತನ ತರಫಿನಲ್ಲಿ ದಾತಾರನು ತನ್ನ ಬಳಿಯಲ್ಲಿಯೇ ಇರಸಿಕೊಳ್ಳಬಹುದು. (೨ ಡಬ್ಲಿಯುಮೆಕ್‌ನಾಟನ್ ೨೮೩) ದಾನದ ಸೊತ್ತನ್ನು ದಾನ ಹೊಂದಿದವನಿಗೆ ಸೇರಗೊಳಿಸದೆ ಇತರರು ಅಕ್ರಮವಾಗಿ ಸ್ವಾಧೀನಪಡಿಸಿಕೊಂಡು ಅಡ್ಡಿ ಮಾಡುತ್ತಿದ್ದ ಪಕ್ಷದಲ್ಲಿ ಸದರಿ ಸೊತ್ತು ಸ್ವಾಧೀನಪಡಿಸಲ್ಪಟ್ಟಂತೆಯೇ ಭಾವಿಸಲ್ಪಟ್ಟು ದಾನವು ಸಲ್ಲುವುದು. ಆದುದರಿಂದ ಅಂತಹ ಸ್ವತ್ವದ ವಿಷಯಕವಾಗಿ ದಾನವನ್ನು ಹೊಂದಿದವನು ದಾವಾ ತರಬಹುದು. (ಇ ಲಾ ರಿ ೧೧ ಕ ೧೨೦)

ಮುಂದೆ ಬರಲುಳ್ಳ ಅಲ್ಲದೆ ಸಂಪಾದಿಸಲುಳ್ಳ ಆಸ್ತಿಯನ್ನು ದಾನ ಮಾಡಿದ ಪಕ್ಷದಲ್ಲಿ ಅಂತಹ ದಾನವು ಸಲ್ಲಲಾರದು. (ಟ್ರಾನ್ಸ್ಫರು ಆಫ್ ಪ್ರಾಪರ್ಟೀ ಆಕ್ಟು ಸೆ೧೨೨,)

ಮೋಸದ ದಾನಗಳು—ಕ್ರಮವಾಗಿ ಸಂಪೂರ್ತಿ ಹೊಂದಿದ ದಾನದಿಂದ ದಾತಾರನೂ ಆತನ ವಾರಸರೂ ಮಾತ್ರವೇ ಅಲ್ಲದೆ ಆತನ ಸಾಲಗಾರರು ಕೂಡ ಬದ್ಧರಾಗಿರುವರು. ಆದರೆ ಸಾಲಗಾರರನ್ನು ಮೋಸಮಾಡಬೇಕೆಂಬ ಉದ್ದೇಶದಿಂದ ನಾಮಕಾರ್ಥವು ದಾನಮಾಡಿ ಆಸ್ತಿಯನ್ನು ಮತ್ತೊಬ್ಬರ ಹೆಸರಿನಲ್ಲಿ ಭದ್ರಪಡಿಸಿಕೊಂಡ ಪಕ್ಷದಲ್ಲಿ ಸದರಿ ದಾನವು ಸಲ್ಲಲಾರದು. (೧೮೫೪ ಸಂ॥ ಮ ತೀ ೬೧, ೧ ಮ ಹೈ ೩೯೩, ೮ ಮ ಹೈ ೭೪, ಇ ಲಾ ರಿ ೨ ಅ ೭೬೧, ಇ ಲಾ ರಿ ೬ ಅ ೫೬೦.) ದಾತಾರನನ್ನು ಮೋಸಮಾಡಿ ಹೊಂದಲ್ಪಟ್ಟ ದಾನಗಳು ಸಲ್ಲಲಾರವು. ಇ ಲಾ ರಿ ೧೫ ಬೊಂ ೫೩೯)

ಪ್ರತಿಫಲಯುಕ್ತವಾದ ಟ್ರಾನ್ಸ್ಫರುಗಳ ವಿಷಯಕವಾಗಿ ಆಸ್ತಿಯನ್ನು ಸ್ವಾಧೀನಪಡಿಸುವಿಕೆ—ವಿಕ್ರಯವು ಅಡಮಾನವು ವಗೈರೆ ಪ್ರತಿಫಲ

ಗಳಿಂದ ಯುಕ್ತವಾದ ಟ್ರಾನ್ಸುಫರುಗಳು ಸಲ್ಲುವುದಕ್ಕಾಗಿ, ಟ್ರಾನ್ಸುಫರು ದಾರನಿಗೆ ಸ್ವತ್ವವನ್ನು ಸ್ವಾಧೀನಮಾಡುವುದು ಆವಶ್ಯಕವೋ, ಅಲ್ಲವೋ— ಎಂಬ ವಿಷಯವನ್ನು ಕುರಿತು ಮದ್ರಾಸು ಕಲ್ಕತ್ತ ಹೈಕೋರ್ಟುಗಳವರೂ ಬೊಂಬಯಿ ಹೈಕೋರ್ಟಿನವರೂ ಕೆಲವುಮಟ್ಟಿಗೆ ಭಿನ್ನಾಭಿಪ್ರಾಯವುಳ್ಳವ ರಾಗಿರುವರು. ಪ್ರತಿಫಲಯುಕ್ತವಾದ ಟ್ರಾನ್ಸುಫರುಗಳ ವಿಷಯದಲ್ಲಿ ಸೊತ್ತನ್ನು ಸ್ವಾಧೀನಪಡಿಸುವುದು ಆವಶ್ಯಕವಲ್ಲವೆಂದೂ, ಸೊತ್ತನ್ನು ಸ್ವಾಧೀನಪಡಿಸದೆ ಮಾಡಿರುವ ಒಂದು ಟ್ರಾನ್ಸಫರನ್ನು, ಆಮೇಲೆ ಮತ್ತೊಬ್ಬರಿಗೆ ಸ್ವತ್ವ ಸ್ವಾಧೀನದೊಡನೆ ಮಾಡಲ್ಪಟ್ಟ ಟ್ರಾನ್ಸಫರುದಾರನು ಎರಡನೆಯ ಟ್ರಾನ್ಸಫರುದಾರನನ್ನು ತೊಲಗಿಸುವುದಕ್ಕಾಗಿ ದಾವಾ ತರಬಹುದೆಂದೂ ಇಷ್ಟೇ ಅಲ್ಲದೆ, ಸ್ವತ್ವವನ್ನು ಸ್ವಾಧೀನದಲ್ಲಿ ಇಟ್ಟುಕೊಳ್ಳದವನಾದರೂ ಅದಕ್ಕೆ ಹಕ್ಕುದಾರನಾಗಿ ಏರ್ಪಟ್ಟಿರುವವನು ಮಾಡುವಂತಹ ಟ್ರಾನ್ಸಫರು ಸಲ್ಲುವುದೆಂದೂ- ಇಂತು ಕಲ್ಕತ್ತಾ ಹೈಕೋರ್ಟಿನವರ ತೀರ್ಮಾನಗಳಿಂದಲೂ ಸ್ಥಿರಪಟ್ಟಿದೆ. (೧೮೬೦ ಸಂ|| ಮ. ತೀ. ೨೭೭ ; ೩ ಮ. ಹೈ. ೩೮; ಇ.ಲಾ. ರಿ. ೫ ಮ ೬; ಇ. ಲಾ. ರ. ೬ ಮ ೪೦೪; ಇ. ಲಾ. ರಿ. ಆ ಕ. ೫೮೭, ೬೧೦; ೭ ಮೂ. ಇ. ಅ. ೩೦೩; ೨ ಮ ಹೈ. ೧೦೭; ೪ ಮ. ಹೈ. ೪೩೪; ಇ. ಲಾ. ರಿ. ೫ ಕ. ೨೬೫; ೩ ಮ. ಹೈ. ೪೦, ೯೬; ೧೩ ಮೂ. ಇ. ಅ. ೧೧೩; ಇ.ಲಾ.ರಿ. ೧೧ ಕ. ೧೨೧; ಇ ಲಾ. ರಿ. ೧೫ ಕ. ೬೭೪; ೧೮೫೮ ಸಂ|| ಬಂ. ಸ. ತೀ. ೬೦೧; ೩ ಕ. ಹೈ. ೨೦೭; ೧೧ ಸ. ೧೩೪; ೨೨. ಸ. ೯೯; ೧೪ ಕ. ಹೈ. ೪೦೭; ೨೩ ಸ. ೧೩೧, ೧೬೩; ಇ. ಲಾ. ರಿ. ೧೩ ಕ. ೨೯೭)

ಬೊಂಬಯಿ ತೀರ್ಮಾನಗಳು.—ಬೊಂಬಯಿ ಹೈಕೋರ್ಟಿನವರ ತೀರ್ಮಾನಗಳಿಂದ ಸ್ಥಿರಪಟ್ಟಿರುವಮೇರೆ ಎಂತಹ ಟ್ರಾನ್ಸಫರಾದರೂ ಆಸ್ತಿಯ ಸ್ವಾಧೀನದೊಡನೆ ಸೇರದಿದ್ದರೆ, ಅದರಸಂಗತಿಯನ್ನು ಎಷ್ಟುಮಾತ್ರವೂ ಅರಿಯದೆ ಆಮೇಲೆ ಆ ಆಸ್ತಿಯನ್ನು ಬೆಲೆಗೆ ಕೊಂಡುಕೊಂಡವನನ್ನು ಅಲ್ಲದೆ ಅಡವಿಟ್ಟುಕೊಂಡವನನ್ನು ಬಾಧಿಸಲಾರದು. (೭ ಬೊಂ ಹೈ. ೯; ೧೦ ಬೊಂ. ಹೈ. ೯೯●; ಇ. ಲಾ. ರಿ. ೨ ಬೊಂ ೨೯೯ ; ೬ ಬೊಂ. ೧೬೫; ಇ. ಲಾ. ರಿ. ೪ ಬೊಂ. ೯೫೯, ೯೬೧; ಇ. ಲಾ, ರಿ. ೬ ಬೊಂ. ೪೯೦) ಆದರೆ, ಎರಡನೆಯ ಟ್ರಾನ್ಸಫರುದಾರನು ಮೊದಲ ಟ್ರಾನ್ಸಫರಸಂಗತಿ ಮೊದಲೇ ತಿಳಿದವನಾಗಿರುವಾಗಲೂ, ಪ್ರತಿಫಲಕ್ಕಲ್ಲದೆ ದಾನರೂಪಕವಾಗಿ ಆಸ್ತಿಯನ್ನು ಹೊಂದಿರುವಾಗಲೂ, ಎರಡನೆಯ ಟ್ರಾನ್ಸಫರು ನಡೆಯದ ಮೊದಲೇ ಮೊದಲನೆಯ ಟ್ರಾನ್ಸಫರು ರಿಜಸ್ಟರಾಗಿರುವಾಗಲೂ, ಎರಡನೆಯ ಟ್ರಾನ್ಸಫರು ಕೋರ್ಟು ಹರಾಜಿನಿಂದ ಉಂಟಾದ್ದಾಗಿರುವಾಗಲೂ, ಈ ಸಂದರ್ಭಗಳಲ್ಲಿ ಆಸ್ತಿ ಸ್ವಾಧೀನವಿಲ್ಲದಿದ್ದರೂ ಮೊದಲನೆಯ ಟ್ರಾನ್ಸಫರೇ ಸಲ್ಲುವುದು.

(ಇ. ಲಾ. ರಿ ೬ ಬೊಂ. ೧೬೮, ೫೧೫; ಇ. ಲಾ. ರಿ. ೯ ಬೊಂ. ೪೨೬; ೭ ಬೊಂ ಹೈ. ೬೯ ; ೪ ಬೊಂ. ಹೈ. ೫೦; ೧೧ ಬೊಂ. ಹೈ. ೩೭.) ಎರಡನೆಯ ಟ್ರಾನ್ಸ ಫರು ಕೋರ್ಟು ಹರಾಜಿನಿಂದ ಉಂಟಾದ್ದಾಗಿರುವಾಗ, ಪ್ರತಿವಾದಿಗಿರುವ ಹಕ್ಕುಮಾತ್ರವೇ ಸದರಿ ಹರಾಜಿನಲ್ಲಿ ವಿಕ್ರಯಿಸಲ್ಪಡುವುದರಿಂದ ಅದುವರಿಗೆ ಆತನಿಂದ ಮಾಡಲ್ಪಟ್ಟಿರುವ ಅಸ್ವಾಧೀನದ ಟ್ರಾನ್ಸಫರು ಬಾಧಿಸಲ್ಪಡಲಾರ ದು. (೯ ಬೊಂ. ಹೈ. ೩೦೮; ಇ. ಲಾ. ರಿ. ೬ ಬೊ. ೯೩.) ಆಸ್ತಿ ಸ್ವಾಧೀನ ಗೊಳಿಸಲಿಲ್ಲವೆಂಬ ಕಾರಣದಿಂದ ತಾನುಮಾಡಿರುವ ಟ್ರಾನ್ಸಫರು ಸಲ್ಲದೆಂದು ವಾದಿಸುವುದಕ್ಕೆ ಆಸ್ತಿದಾರನು ಹಕ್ಕುಂಟಾಗಿರನು. (೭ ಬೊಂ. ಹೈ. ೪೫ ; ಇ. ಲಾ. ರಿ. ೬ ಬೊಂ. ೧೬೮.) ಕೋರ್ಟು ಹರಾಜಿನಲ್ಲಿ ಆಸ್ತಿಯನ್ನು ಕೊಂ ಡವನು ಸದರಿ ಆಸ್ತಿಯನ್ನು ಸ್ವಾಧೀನಪಡಿಸಿಕೊಳ್ಳದೆಯೇ ವಿಕ್ರಯಿಸಿದರೂ ಅಂತಹ ವಿಕ್ರಯವು ಸಲ್ಲುವುದು. (ಇ. ಲಾ. ರಿ. ೬ ಬೊಂ. ೧೬೮)

ಎರಡನೆಯ ಟ್ರಾನ್ಸಫರು ಇಲ್ಲದಪಕ್ಷದಲ್ಲಿ ಈ ವಿವರಿಸಲ್ಪಟ್ಟ ನಿರ್ಬಂ ಧಗಳಿಲ್ಲವು. ಇತರರು ಅಕ್ರಮವಾಗಿ ಆಕ್ರಮಿಸಿಕೊಂಡಿರುವದರಿಂದ ಆಸ್ತಿ ಯನ್ನು ಸ್ವಾಧೀನದಲ್ಲಿ ಇಟ್ಟುಕೊಳ್ಳದಿರುವ ಆಸ್ತಿದಾರನು ಅದನ್ನು ಯಾ ರಿಗಾದರೂ ಟ್ರಾನ್ಸಫರು ಮಾಡಿದವನಾದರೆ ಈ ಟ್ರಾನ್ಸಫರುದಾರನು ದಾವೆ ತಂದು ಸದರಿ ಆಕ್ರಮಿಸಿಕೊಂಡವರನ್ನು ತೊಲಗಿಸಿ ಆಸ್ತಿ ಸ್ವಾಧೀ ನಮಾಡಿಕೊಳ್ಳಬಹುದು. (೯ ಬೊಂ. ಹೈ. ೨೭೫, ಇ ಲಾ. ರಿ. ೯ ಬೊಂ. ೩೨೮)

ರಿಜಸ್ಟ್ರೇಷನ್ ಆಕ್ಟು ೫೦ನೆಯ ಸೆಕ್ಷನ್.—೧೮೭೭ ಸಂ॥ ೩ ನೆಂ॥ ರಿಜಿ ಸ್ಟ್ರೇಷನ್ ಆಕ್ಟು ಪ್ರಕಾರವಾಗಿ ಕೆಲವು ಕೆಲವು ದಸ್ತಾವೇಜುಗಳ ವಿಷಯದಲ್ಲಿ ರಿಜಸ್ಟರು ಮಾಡಿಸುವದು ವಿಧಾಯಕವಾಗಿಲ್ಲದಿದ್ದರೂ ಒಂದೇ ಆಸ್ತಿ ವಿಷ ಯಕವಾಗಿ ಮೊದಲು ಸಾಧಾರಣ ದಸ್ತಾವೇಜು ಆಮೇಲೆ ರಿಜಸ್ಟರು ದಸ್ತಾ ವೇಜೂ ಹುಟ್ಟಿದ್ದಪಕ್ಷದಲ್ಲಿ ರಿಜಸ್ಟರು ದಸ್ತಾವೇಜೇ ಸಲ್ಲುವುದೆಂದು ಸದ ರಿ ಆಕ್ಟಿನ ೫೦ನೆಯ ಸೆಕ್ಷನಿನಿಂದ ಕಾಣಬರುವುದು. ಮೊದಲ ದಸ್ತಾವೇಜಿನ ಸಂಗತಿ ತಿಳಿದಿದ್ದೇ ಆಮೇಲೆ ರಿಜಸ್ಟರು ದಸ್ತಾವೇಜು ಹೊಂದಿದವನಿಗೂ ಮೊದಲ ಸಾಧಾರಣ ದಸ್ತಾವೇಜಿನ ಮೇಲೆ ಆಸ್ತಿ ಸ್ವಾಧೀನಪಡಿಸಲ್ಪಟ್ಟಿ ರುವಾಗ ಆಮೇಲೆ ರಿಜಸ್ಟರು ದಸ್ತಾವೇಜು ಹೊಂದಿದವನಿಗೂ ಮೇಲೆ ತಿಳಿಸಲ್ಪಟ್ಟ ೫೦ನೆಯ ಸೆಕ್ಷನಿನಿಂದ ಲಾಭವುಂಟಾಗದೆಂದು ಎಲ್ಲಾ ಕೋರ್ಟು ಗಳವರೂ ತೀರ್ಮಾನಮಾಡಿರುವರು. (ಇ. ಲಾ. ರಿ. ೪ ಅ. ೫೪೦; ಇ. ಲಾ. ರಿ. ೫ ಕ. ೩೩೬; ಇ. ಲಾ. ರಿ. ೧೦ ಕ. ೨೫೦; ಇ. ಲಾ. ರಿ. ೧೩ ಕ. ೭೦ ! ಇ. ಲಾ. ರಿ. ೬ ಬೊಂ. ೫೧೫; ಇ. ಲಾ ರಿ. ೧೨ ಬೊಂ. ೫೬೯ ! ಇ ಲಾ. ರಿ. ೯ ಬೊ. ೪೨೭; ಇ. ಲಾ. ರಿ ೧೦ ಬೊಂ. ರಿಬೊಂ. ೧೨೦೫೮ .;. ೧ ೩೦

೫೬೯; ಇ. ಲಾ. ರಿ. ೮ ಕ. ೫೯೭; ಇ. ಲಾ. ರಿ ೧೦ ಕ. ೧೦೭೩; ಇ. ಲಾ.-ರಿ. ೧೬ ಕ. ೨೨; ಇ. ಲಾ. ರಿ. ೧೬ ಮ. ೧೪೯.)

ಟ್ರಾನ್ಸಫರ್ ಆಫ್ ಪ್ರಾಪರ್ಟ್ಬೀ ಆಕ್ಟು.—ಹಿಂದೂ ಧರ್ಮಶಾಸ್ತ್ರಗಳ ಪ್ರಕಾರವಾಗಿ ದಾನಗಳು, ಅಡವುಗಳು, ವಿಕ್ರಯಗಳು, ಮುಂತಾದ ಪರಾಧೀನಗಳು ಬರಹಮೂಲಕವಾಗಿಯೇ ನಡೆಯಿಸಬೇಕಾದಂತೆ ನಿರ್ಬಂಧವು ಕಾಣಿಸುವದಿಲ್ಲ. ಆದರೆ ಈಗ ೧೮೮೨ ಸಂ॥ ೪ ನೆಂ॥ ಟ್ರಾನ್ಸ್ಫರು ಪ್ರಾಪರ್ಟಿ ಆಕ್ಟ್ಯ ಪ್ರಕಾರವಾಗಿ ಕೆಲವು ನಿರ್ಬಂಧಗಳು ಹುಟ್ಟಿವೆ. ಈ ಆಕ್ಟು ಬೊಂಬಯಿ ಪಂಜಾಬು ಬರ್ಮಾ ದೇಶಗಳಲ್ಲಿ ಸಲುವಳಿಯಲ್ಲಿಲ್ಲವು. ಮಿಕ್ಕೆಡೆಗಳಲ್ಲಿ ಅದರಲ್ಲಿ ಹೇಳಲ್ಪಟ್ಟಿರುವ ಮೇರೆಯೇ ಪರಾಧೀನಗಳು ನಡೆಯಬೇಕು.

ಕ್ರಯವು, ಅಡವು, ಗುತ್ತಿಗೆ.—ಯಾವುದಾದರೂ ಸ್ಥಿರಾಸ್ತಿ ವಿಕ್ರಯಿಸಲ್ಪಟ್ಟಾಗ ಸದರಿ ಆಸ್ತಿಯ ಬೆಲೆಯಾದರೂ ಯಾವುದಾದರೂ ಸ್ಥಿರಾಸ್ತಿ ಅಡವಿಡಲ್ಪಟ್ಟಾಗ ಸದರಿ ಅಡವಿನ ಹಣದ ಸಮಷ್ಟಿಯಾದರೂ ೧೦೦ ರೂಪಾಯಿಗಳು ಅಲ್ಲದೆ ಜಾಸ್ತಿಯಾಗಿದ್ದ ಪಕ್ಷದಲ್ಲಿ ರಿಜಸ್ಟರು ದಸ್ತಾವೇಜಿನಿಂದಲೇ ಸದರಿ ವಿಕ್ರಯವು ಅಲ್ಲದೆ ಆಡವು ನಡೆಯಿಸಲ್ಪಡಬೇಕು. ೧೦೦ ರೂಪಾಯಿಗಳ ಕಿಮ್ಮತು, ಅಲ್ಲದೆ, ಸಮಷ್ಟಿಗೂ ಒಳಪಟ್ಟಿದ್ದ ಪಕ್ಷದಲ್ಲಿ ರಿಜಸ್ಟರು ದಸ್ತಾವೇಜಿನಿಂದಾದರೂ, ಆಸ್ತಿಯನ್ನು ಸ್ವಾಧೀನಪಡಿಸುವುದರಿಂದಾದರೂ, ಸದರಿ ವಿಕ್ರಯವು, ಅಲ್ಲದೆ ಅಡವು ನಡೆಯಿಸಲ್ಪಡಬಹುದು. (ಸೆ. ೫೪. ೫೯.) ಒಂದು ಸಂವತ್ಸರದ ಗಡು ಮೀರಿದರೆ, ಅಲ್ಲದೆ, ಸಂವತ್ಸರಕ್ಕೆ ಇಷ್ಟು ಹಣವೆಂದು ಏರ್ಪಡಿಸಿಕೊಂಡ ಸ್ಥಿರಾಸ್ತಿಯ ಗುತ್ತಿಗೆ ಕರಾರುಗಳು ರಿಜಸ್ಟರು ದಸ್ತಾವೇಜಿನಿಂದಲೇ ನಡೆಯಬೇಕು. ಮಿಕ್ಕ ವಿಷಯಗಳಲ್ಲಿ ಸಾಧಾರಣದಸ್ತಾವೇಜಿನಿಂದಾದರೂ ಬಾಯಿಮಾತುಗಳಿಂದಾದರೂ ಗುತ್ತಿಗೆಕರಾರುಗಳು ನಡೆಯಬಹುದು. (ಸೆ. ೧೦೭.)

ದಾನವು.—ಸ್ಥಿರಾಸ್ತಿಯ ದಾನವು ದಾತಾರನ ನಿಕೃಷ್ಟಪಕ್ಷವಾಗಿ ಇಬ್ಬರು ಸಾಕ್ಷಿಗಳ ಕೈಬರಹಗಳಿಂದ ಕೂಡಿದ ರಿಜಸ್ಟರು ದಾನಪತ್ರದಿಂದಲೇ ನಡೆಯಬೇಕು, ಚರಾಸ್ತಿಯ ದಾನವು ಅಂತಹ ರಿಜಸ್ಟರು ದಾನಪತ್ರದಿಂದಾದರೂ ಸ್ವತ್ವವನ್ನು ಸ್ವಾಧೀನ ಪಡಿಸುವುದರಿಂದಾದರೂ ನಡೆಯಬಹುದು. (ಸೆ ೧೨೨) ರಿಜಸ್ಟರು ದಸ್ತಾವೇಜಿನಿಂದ ದಾನವು ನಡೆದ ವೇಳೆಯಲ್ಲಿ ಸ್ಥಿರಾಸ್ತಿಯಾದರೂ ಚರಾಸ್ತಿಯಾದರೂ ಸರಿಯೆ ಸ್ವಾಧೀನಪಡಿಸುವುದಾವಶ್ಯಕವಲ್ಲವು. (ಇ. ಲಾ. ರಿ. ೧೪ ಕ. ೪೪೬.)

ಉಯಿಲುಗಳು.

ಉಯಿಲೆಂದರೇನು ?—ಉಯಿಲೆಂದರೆ ಮರಣಶಾಸನವು. ಎಂದರೆ ಒಬ್ಬ ಆಸ್ತುದಾರನು ತನ್ನ ಜೀವಿತಕಾಲದಲ್ಲಿಯೇ ತನ್ನ ಸ್ವತ್ವವನ್ನು ದಾನಮಾಡಿ ಸ್ವಾಧೀನಪಡಿಸದೆ ತನ್ನ ಮರಣಾನಂತರದಲ್ಲಿ ಇಂತಹವರು ಇಂತಹವರು ತನ್ನ ಸಂಬಂಧವಾದ ಇಂತಹ ಇಂತಹ ಸೊತ್ತುಗಳನ್ನು ಸ್ವಾಧೀನಪಡಿಸಿಕೊಂಡು ಅನುಭವಿಸುವಂತೆ ಇಷ್ಟವನ್ನು ವಿವರಿಸುವ ಪತ್ರಿಕೆ. ಆಸ್ತಿವಿಷಯಕವಾಗಿ ಉಯಿಲು ರೂಪಕವಾಗಿ ಏರ್ಪಾಟುಮಾಡುವ ಪದ್ಧತಿ ಹಿಂದೂ ಧರ್ಮಶಾಸ್ತ್ರಗಳಲ್ಲಿ ವಿಶೇಷವಾಗಿ ಕಾಣಬರುವದಿಲ್ಲ. ಎಲ್ಲಾ ಸಂದರ್ಭಗಳಲ್ಲಿಯೂ ಆಸ್ತಿಗೆ ವಾರಸುದಾರರು ಏರ್ಪಟ್ಟಿರುವ ಕಾರಣದಿಂದಲೂ, ಸಮಷ್ಟಿ ಕುಟುಂಬದೊಳಗಣ ಕಟ್ಟಳೆಗಳಿಂದ ಇಷ್ಟವಿದ್ದಂತೆ ಆಸ್ತಿಯನ್ನು ಕೊಟ್ಟುಬಿಡುವ ಸ್ವಾತಂತ್ರ್ಯವು ಪೂರ್ವಕಾಲದಲ್ಲಿ ಬಹಳ ಕಡಿಮೆಯಾಗಿದ್ದುದರಿಂದಲೂ ಉಯಿಲುಗಳಿಗೆ ಅಷ್ಟಾಗಿ ಅವಕಾಶವಿರಲಾರದು. ಈಚೀಚಿಗೆ ಈ ಸ್ವಾತಂತ್ರ್ಯವು ಹೆಚ್ಚಿ ಆಸ್ತಿ ಪರಾಧೀನಗಳು ಸಾಮಾನ್ಯವಾಗುತ್ತ ಬರಲು ಉಯಿಲುಗಳು ಕೂಡ ಪ್ರಬಲವಾಯಿತು.

ಈಗ ಎಲ್ಲಾ ಪ್ರೆಸಿಡೆನ್ಸಿಗಳಲ್ಲಿಯೂ ಉಯಿಲುಗಳು ಅಂಗೀಕರಿಸಲ್ಪಡುತ್ತಿವೆ.—ಸುಮಾರು ನೂರು ಸಂವತ್ಸರಗಳ ಹಿಂದೆಯೇ ಬಂಗಾಳಾ ಪ್ರೆಸಿಡೆನ್ಸಿಯೊಳಗಣ ಕೋರ್ಟುಗಳ ಕಡೆಯಿಂದ ಹಿಂದುಗಳಲ್ಲಿ ಉಯಿಲುಗಳು ಅಂಗೀಕಾರವು ಪ್ರಾರಂಭವಾಯಿತು. (೨ ಮಾರ್ಲೀ ಡೈಜೆಸ್ಟ್, ೨೨೦; ೧ ಬಂ. ಸ. ತೀ. ೨; ಎಫ್. ಮೆಕ್. ೩೫೭; ೨ ಬಂ. ಸ. ತೀ. ೨೩;) ದಕ್ಷಿಣಹಿಂದೂಸ್ಥಾನದಲ್ಲಿಯೂ ಬೊಂಬಯಿ ಪ್ರೆಸಿಡೆನ್ಸಿಯಲ್ಲಿಯೂ ಬಹಳಕಾಲದವರೆಗೂ ಉಯಿಲುಗಳು ಅಂಗೀಕರಿಸಲ್ಪಡಲಿಲ್ಲವು, (೨. ಮ. ತೀ. ೪೯; ೧೮೫೦ ಸಂ॥ ಮ ತೀ ೫೦; ೨ ಬಾರೊ. ೭೭೧, ೧೨೪) ೧೮೨೯ ಸಂ॥ ೫ನೆಂ॥ ಮದರಾಸು ರೆಗ್ಯುಲೇಷನ್ ಕೂಡ ಹಿಂದೂಗಳಲ್ಲಿ ಉಯಿಲುಗಳು ಸಲ್ಲಲಾರವೆಂದೇ ಪ್ರಕಟಿಸಿತು. ಆದರೆ, ಈಚೀಚಿಗೆ ಸದರು ಕೋರ್ಟು ಹೈಕೋರ್ಟುಗಳವರ ತೀರ್ಮಾನಗಳಿಂದಲೂ ಪ್ರಿವಿ ಕೌನ್ಸಿಲಿನವರ ತೀರ್ಮಾನಗಳಿಂದಲೂ ಕೂಡ ಹಿಂದೂಗಳಲ್ಲಿ ಉಯಿಲುಗಳು ಸಲ್ಲುವುವೆಂದು ಸ್ಥಾಪಿಸಲ್ಪಟ್ಟವು. (೧೮೫೧ ಸಂ॥ ಮ. ತೀ. ೨೨೬; ೬ ಮೂ. ಇ. ಅ. ೩೦೯, ೩೭೪; ೧೦ ಮೂ. ಇ ಅ. ೩೦೮; ೧ ಮ. ಹೈ. ೩೨೬, ೩೨೯; ಇ. ಲಾ. ರಿ. ೫ ಕ. ೭೩೮; ೨ ಬೊಂ. ಹೈ ೮.) ಈಗ ಎಲ್ಲಾ ಪ್ರೆಸಿಡೆನ್ಸಿಗಳಲ್ಲಿಯೂ ಹಿಂದೂಜನರೊಳಗೆ ಉಯಿಲುಗಳು ನಿರಾತಂಕವಾಗಿ ಸಲ್ಲುತ್ತಿವೆ.

ಉಯಿಲು ಮಾಡುವಂತಹ ಸ್ವಾತಂತ್ರ್ಯವು-ಮಿತಾಕ್ಷರವು—ಮಿತಾಕ್ಷರಪ್ರಕಾರವಾಗಿ ಒಬ್ಬ ಆಸ್ತಿದಾರನು ತಾನು ಬದುಕಿರುವಾಗ ದಾನರೂಪಕವಾಗಿ ಕೊಟ್ಟುಬಿಡುವುದಕ್ಕೆ ಯಾವಯಾವ ಸ್ವತ್ವಗಳ ಮೇಲೆ ಸ್ವಾತಂತ್ರ್ಯವುಂಟಾಗಿರುವನೋ, ಸದರಿ ಸೊತ್ತುಗಳನ್ನು ಉಯಿಲು ಮೂಲಕವಾಗಿ ಕೊಟ್ಟುಬಿಡುವುದಕ್ಕೆ ಕೂಡ ಆತನಿಗೆ ಸ್ವಾತಂತ್ರ್ಯವುಂಟು. (೧ ಮ. ಹೈ. ೩೨೬, ೩೩೯.) ಆದುದರಿಂದ, ಸ್ವಾರ್ಜಿತ ಸ್ವತ್ವವನ್ನಾದರೂ ಸಮಷ್ಟಿ ಕುಟುಂಬಕ್ಕೆ ಸೇರದೆ ತನ್ನ ಪ್ರತ್ಯೇಕಸ್ವತ್ವವನ್ನಾದರೂ ಸದರಿ ಸ್ವತ್ವದ ಖಾವಂದು ತನ್ನ ಇಷ್ಟಪ್ರಕಾರವಾಗಿ ಉಯಿಲುಮೂಲಕವಾಗಿ ಕೊಟ್ಟುಬಿಡಬಹುದು. ಮತ್ತು ಪುತ್ರಸಂತತಿ ಎಂದರೆ ಪುತ್ರ ಪೌತ್ರ ಪ್ರಪೌತ್ರಸಂತತಿ ಆದರೂ ಅಣ್ಣತಮ್ಮಂದಿರು ಮುಂತಾದ ಸಮಷ್ಟಿ ಹಕ್ಕುದಾರರಾದರೂ ಇಲ್ಲದೆ ಆಸ್ತಿದಾರನು ತಾನು ಬರಿಸಬೇಕಾದ ಜೀವನಾಂಶಗಳಿಗೆ ತಕ್ಕ ಏರ್ಪಾಟುಗಳು ಮಾಡಿ ತನ್ನ ಪಿತ್ರಾರ್ಜಿತ ಸ್ವತ್ವವನ್ನು ಕೂಡ ಮನಸ್ಸು ಬಂದಂತೆ ಉಯಿಲುಮೂಲಕವಾಗಿ ಕೊಟ್ಟುಬಿಡಬಹುದು (೬ ಮೂ. ಇ. ಅ. ೩೦೯, ೩೪೪; ೧೦ ಮೂ. ಇ. ಅ. ೩೦೮; ೧೨ ಮೂ. ಇ. ಅ. ೩೮; ೩ ಬೊಂ. ಹೈ. ೬; ಇ. ಲಾ. ರಿ. ೧೨ ಮ. ೧೨೬) ಆದರೆ ಸಮಷ್ಟಿ ಕುಟುಂಬದ ಭಾಗಸ್ಥನು ಪಿತ್ರಾರ್ಜಿತ ಸ್ವತ್ವದಲ್ಲಿ ತನ್ನ ಪಾಲು ಭಾಗವನ್ನು ಉಯಿಲುಮೂಲಕವಾಗಿ ಕೊಟ್ಟುಬಿಡುವುದಕ್ಕೆ ಸ್ವತಂತ್ರನಲ್ಲವು. ಜೀವಿತಕಾಲದಲ್ಲಿ ದಾನರೂಪಕವಾಗಿ ತನ್ನ ಭಾಗವನ್ನು ಪರಾಧೀನಮಾಡುವಂತಹ ಸ್ವಾತಂತ್ರ್ಯವು ಸಮಷ್ಟಿ ಕುಟುಂಬದ ಭಾಗಸ್ಥನಿಗೆ ಉಂಟಾಗಿದ್ದರೂ ಆತನ ಮರಣಸಮಯದಲ್ಲಿ ಮಿಕ್ಕ ಭಾಗಸ್ಥರ ಸಮಷ್ಟಿ ಹಕ್ಕು ಪ್ರಬಲವಾಗುವುದರಿಂದ ತನ್ನ ಮರಣಾನಂತರದಲ್ಲಿ ತನ್ನ ಪಾಲು ಭಾಗವು ಫಲಾನಿಯುಮರಿಗೆ ಸೇರಬೇಕೆಂದು ಉಯಿಲುಮಾಡತಕ್ಕ ಸ್ವಾತಂತ್ರ್ಯವು ಆತನಿಗೆ ತಪ್ಪಿಹೋಗುವುದು. (೮ ಮ. ಹೈ. ೬ ೧೩; ೩ ಬೊಂ. ಹೈ. ೬, ೬೬; ೧೧ ಬೊಂ. ಹೈ. ೬೬; ಇ. ಲಾ. ರಿ. ಬೊಂ. ೪೮; ಇ. ಲಾ. ರಿ. ೧೦ ಬೊಂ. ೧೦೫)
ಆದುದರಿಂದ ಸಮಷ್ಟಿ ಕುಟುಂಬದ ಭಾಗಸ್ಥನ ಕಡೆಯಿಂದ ಆತನ ಕಡೆಯ ಭಾಗವನ್ನು ಉಯಿಲುಮೂಲಕವಾಗಿ ಹೊಂದಿದವನು ಅದರಿಂದ ಎಂತಹ ಪ್ರಯೋಜನವನ್ನಾದರೂ ಹೊಂದಲಾರನು.

ದಾಯಭಾಗವು.— ದಾಯಭಾಗ ಸಂಪ್ರದಾಯಪ್ರಕಾರವಾಗಿ ಸಮಷ್ಟಿ ಕುಟುಂಬದ ತಂದೆ ತನ್ನ ಯಾವತ್ತು ಸ್ಥಿರಚರ ಪಿತ್ರಾರ್ಜಿತದ ಸ್ವತ್ವವನ್ನು ಮನಸ್ಸು ಬಂದಂತೆ ಉಯಿಲು ಮಾಡಬಹುದೆಂದು ೧೮೮ನೆಯ ಪ್ಯಾರಾದಲ್ಲಿ ತಿಳಿಸಿದ್ದೆವು. ಮತ್ತು ಸದರಿ ಸಂಪ್ರದಾಯಪ್ರಕಾರವಾಗಿ, ಸಮಷ್ಟಿ ಕುಟುಂಬದ ಭಾಗಸ್ಥರು ಯಾವದಾಸ್ತಿಗೂ ಸಮಷ್ಟಿ ಹಕ್ಕುಂಟಾಗಿರದೆ ಪ್ರತ್ಯೇಕ

ಹಕ್ಕುಗಳುಂಟಾಗಿರುವುದರಿಂದ, ಅವರು ತಮ್ಮ ಪಾಲಿನ ಭಾಗಗಳನ್ನು ಉಯಿಲುಮಾಡುವ ಸ್ವಾತಂತ್ರ್ಯವುಂಟಾಗಿರುವರು. (೬ ಮೂ. ಇ. ಅ. ೩೪೪; ೪ ಕ. ಹೈ. ೧೪೫; ೯ ಕ. ಹೈ. ೩೯೬). ಹಿಂದೆ ೧೯೦ ನೆಯ ಪ್ಯಾರಾನೋಡಬೇಕು

ಸ್ತ್ರೀಯರು ಮೈನರ್ಗಳು—ತಮಗೆ ಸಂಪೂರ್ಣಾಧಿಕಾರವುಳ್ಳ ಸ್ತ್ರೀಧನವು ವಗೈರೆ ಸ್ವತ್ವವನ್ನು ಸ್ತ್ರೀಯರು ಉಯಿಲುಮೂಲಕವಾಗಿ ಕೊಟ್ಟುಬಿಡಬಹುದು. (ಇ. ಲಾ. ರಿ. ಮ. ೩೩೩.) ಆದರೆ ಪುರುಷರ ಬಳಿಯಿಂದ ಸ್ತ್ರೀಯರಿಗೆ ವಾರಸುಹಕ್ಕಿನಿಂದ ಬಂದಸೊತ್ತನ್ನು ಅವರು ಉಯಿಲು ಮಾಡಕೂಡದು. (ಇ. ಲಾ. ರಿ. ೧೦ ಬೊಂ. ೩೭೨; ೩ ಸ. ೪೯; ೧ ಬಾರೊ. ೫೫,೬೭) ಇಬ್ಬರು ಮೂರುಮಂದಿ ವಿತಂತುಗಳಿಗೆ ಸಮಷ್ಟಿಯಾಗಿ ಬಂದಿರುವಸೊತ್ತನ್ನು ಅವರಲ್ಲಿ ಯಾರಾದರೂ ಉಯಿಲು ಮೂಲಕವಾಗಿ ಕೊಟ್ಟುಬಿಡುವುದಕ್ಕೆ ಸ್ವತಂತ್ರರಾಗಲಾರರು. (ಇ. ಲಾ. ರಿ. ೭ ಮ. ೯೩) ಮೈನರುಗಳಾಗಿರುವವರು ತಮ್ಮ ಆಸ್ತಿಯನ್ನು ಉಯಿಲುಮೂಲಕವಾಗಿ ಪರಾಧೀನ ಮಾಡುವುದಕ್ಕೆ ಸ್ವತಂತ್ರರಲ್ಲವು. (ಎಫ್. ಮೆಕ್. ಉ೦; ೨ ಮಾರ್ಲೀಡೈಜೆಸ್ಟ್, ೧೯೮.)

ಆಸ್ತಿ ಸ್ವಾಧೀನಪಡಿಸುವಿಕೆ.—ಉಯಿಲು ಮೂಲಕವಾಗಿ ಆಸ್ತಿಕೊಡಲ್ಪಟ್ಟಾಗ, ಅದು ಉಯಿಲುದಾರನ ಮರಣಾನಂತರದಲ್ಲಿ ಆವರವರಿಗೆ ಸ್ವಾಧೀನಪಡಿಸಲ್ಪಡಬೇಕೇ ಅಲ್ಲದೆ, ಆತನ ಜೀವಿತಕಾದಲ್ಲಿಯೇ ಸ್ವಾಧೀನಪಡಿಸಬೇಕಾದ ಆವಶ್ಯಕವಿಲ್ಲವು.

ಮೈನರುಗಳು ವಗೈರೇರಿಗೆ ಉಯಿಲು ಮಾಡುವಿಕೆ.—ಮೈನರುಗಳು, ಹುಚ್ಚರು ಕುಷ್ಠರೋಗಿಗಳು.—ಇಂತಹವರಿಗೆ ಉಯಿಲಿನಿಂದ ಆಸ್ತಿ ಕೊಡಲ್ಪಟ್ಟರೂ ಸಲ್ಲುವುದು.

ಸಾಲಗಳು, ಜೀವನಾಂಶಗಳು - ಇವುಗಳಿಗಾಗಿ ಏರ್ಪಾಟು —ಒಬ್ಬ ಆಸ್ತಿದಾರನು ತಾನು ತೀರಿಸಬೇಕಾದ ಸಾಲಗಳ ನಿಮಿತ್ತವಾಗಿಯಾದರೂ, ತಾನು ಕೊಡಬೇಕಾದ ಜೀವನಾಂಶಗಳ ವಿಷಯವಾಗಿಯಾದರೂ, ಏರ್ಪಾಟುಮಾಡದೆ ತನ್ನ ಯಾವದಾಸ್ತಿಯನ್ನೂ ಉಯಿಲುಮೂಲಕವಾಗಿ ಇತರರಿಗೆ ಕೊಟ್ಟುಬಿಟ್ಟಪಕ್ಷದಲ್ಲಿ, ಇವರಿಗೆ ಸದರಿ ಸಾಲಗಳಿಗೆ ಅಲ್ಲದೆ ಜೀವನಾಂಶಗಳಿಗೆ ನ್ಯಾಯವಾಗಿ ಕೊಡಬೇಕಾದ್ದು ಹೋಗಲು ಮಿಕ್ಕಸೊತ್ತಿನಲ್ಲಿ ಮಾತ್ರವೇ ಹಕ್ಕುಂಟಾಗುವುದು. (೩ ಮದ್ರಾಸು ಲಾ ಜರ್ನಲ್ ೧೭೪.)

ಆಸ್ತಿದಾರನು, ತನ್ನ ಸಾಲಗಳಿಗಾಗಿಯಾದರೂ ತಾನು ಬರಿಸಬೇಕಾದ ಜೀವನಾಂಶಗಳಿಗಾಗಿಯಾದರೂ ಎಂತಹ ಏರ್ಪಾಟನ್ನೂ ಮಾಡದೆ ಯಾವದಾಸ್ತಿಯನ್ನೂ ಉಯಿಲುಮಾಡಿ, ಅದರಲ್ಲಿ ಸದರಿಸಾಲಗಾರರಿಗೂ ಜೀವನಾಂಶವನ್ನು ಹೊಂದಬೇಕಾದವರಿಗೂ ಕೊಂಚಸೊತ್ತನ್ನು ಕೊಟ್ಟುಹೋದಪಕ್ಷದಲ್ಲಿ

ಇವರು ಉಯಿಲುಪ್ರಕಾರವಾಗಿ ಸೊತ್ತು ತೆಗೆದುಕೊಂಡು ಸುಮ್ಮನಿರಬೇಕು ಇಲ್ಲದಿದ್ದರೆ ತಮ್ಮ ಸಾಲಗಳನ್ನು ಜೀವನಾಂಶಗಳನ್ನೂ ಬರಮಾಡಿಕೊಂಡು ಉಯಿಲುಗಳಿಂದ ಕೊಡಲ್ಪಟ್ಟ ದಾನಗಳನ್ನು ಬಿಟ್ಟುಕೊಳ್ಳಬೇಕು. (ಇ. ಲಾ. ರಿ. ೧೪ ಬೊಂ. ೪೩೮.)

ಉಯಿಲಿನಲ್ಲಿ ಆಸ್ತಿವಿಷಯವಾದ ಏರ್ಪಾಟುಗಳು, ಷರತ್ತುಗಳು—ಉಯಿಲು ಮೂಲಕವಾಗಿ ಆಸ್ತಿಯನ್ನು ದಾನ ಮಾಡುವಾಗ, ಸದರಿ ಆಸ್ತಿಯನ್ನು ಮೊಟ್ಟಮೊದಲು ಒಬ್ಬನು ಆತನ ಜೀವಿತಕಾಲದಲ್ಲಿ ಅನುಭವಿಸಬೇಕೆಂದೂ, ಆಮೇಲೆ ಸದರಿ ಯಾವದಾಸ್ತಿಯನ್ನಾದರೂ ಕೆಲವುಮಟ್ಟಿಗಾದರೂ ಇನ್ನೊಬ್ಬರನುಭವಿಸಬೇಕೆಂದೂ, ಹೀಗೆ ಏರ್ಪಾಟು ಮಾಡಬಹುದು. ಹಾಗೆ ಏರ್ಪಾಟು ಮಾಡಲ್ಪಟ್ಟಾಗ ಮೊದಲನೆಯ ಹಕ್ಕುದಾರನು ಸದರಿ ಸೊತ್ತನ್ನು ನ್ಯಾಯವಾದ ಮಾರ್ಗದಲ್ಲಿ ಅನುಭವಿಸತಕ್ಕದಲ್ಲದೆ, ವಿಕ್ರಯ ದಾನಾದಿ ಮಾರ್ಗಗಳಿಂದ ಪರಾಧೀನಮಾಡಕೂಡದು. ಮಾಡಿದಪಕ್ಷದಲ್ಲಿ ಸದರಿ ವಿಕ್ರಯ ದಾನಾದಿಗಳು ರದ್ದಾಗಿ ಎಣಿಸಲ್ಪಡುವುವು.

ಉಯಿಲಿನಿಂದ ಕೊಡಲ್ಪಟ್ಟ ಆಸ್ತಿಯಲ್ಲಿ ಒಬ್ಬರಾದಮೇಲೆ ಒಬ್ಬರಿಗೆ ಹಕ್ಕುಗಳು ಉಂಟಾಗಿಸಲ್ಪಟ್ಟಪಕ್ಷದಲ್ಲಿ, ಹೀಗೆ ಹೀಗೆ ಹಕ್ಕುಂಟಾಗಿಸಲ್ಪಟ್ಟವರು, ಉಯಿಲುದಾರನ ಮರಣಕಾಲದಲ್ಲಿ ಹುಟ್ಟಿ, ಆದರೆ ಗರ್ಭಗತರಾಗಿರಬೇಕು. ಆಮೇಲೆ ಗರ್ಭಗತರಾಗುದವರಿಗೆ ಉಯಿಲಿನಿಂದ ಯಾವುದಾದರೂಸೊತ್ತು ಕೊಡಲ್ಪಟ್ಟಪಕ್ಷದಲ್ಲಿ, ಅದು ಸಲ್ಲಲಾರದು. (೭ ಮೂ. ಇ. ೮೫; ಇ. ಲಾ. ರಿ. ೪ ಕ. ೨೩; ಇ. ಲಾ. ರಿ. ೧೦ ಕ. ೯೫೨; ಇ. ಲಾ. ರಿ. ೧೬ ಕ. ೨೧, ೩೭೩; ಇ. ಲಾ. ರಿ. ೬ ಬೊಂ. ೩೮; ೪ ಕ. ಹೈ. ೧೮೮, ೯ ಕ. ಹೈ. ೩೯೭; “ಟಾಗೋರು ಉಯಿಲು ಕೇಸು.”)

ಸ್ವೀಕಾರಪುತ್ರನ ವಿಷಯದಲ್ಲಿ ಮಾತ್ರವು ಮೇಲಣ ಪ್ಯಾರಾದೊಳಗೆ ಹೇಳಲ್ಪಟ್ಟ ವಿಧಿ ಸಲ್ಲದು. ಎಂದರೆ—ಸ್ವೀಕಾರಾಧಿಕಾರವು ಕೊಡಲ್ಪಟ್ಟಿರುವ ಸ್ತ್ರೀ, ಗರ್ಭಿಣಿಯಾಗಿ ಭಾವಿಸಲ್ಪಡುವಳಾದುದರಿಂದ, ಸದರಿ ಅಧಿಕಾರವನ್ನು ಹಿಡಿದು ಉಯಿಲುದಾರನ ಮರಣಾನಂತರದಲ್ಲಿ ಸ್ವೀಕರಿಸಲ್ಪಡುವ ಪುತ್ರನಿಗೆ ಉಯಿಲಿನಿಂದ ಕೊಡಲ್ಪಟ್ಟಿರುವ ದಾನವು ಸಲ್ಲುವುದು. (೪ ಕ. ಹೈ. ೧೦೫, ೧೬೬; ೯ ಕ. ಹೈ. ೩೨೨, ೯೯೨, ೪೦೫.)

ಉದಾಹರಣಗಳು—ಈ ಕೆಳಗಿನ ಉದಾಹರಣಗಳನ್ನು ಗಮನಿಸಿ ಅವುಗಳಲ್ಲಿರುವ ಅಂಶಗಳನ್ನು ಚೆನ್ನಾಗಿ ತಿಳಿದುಕೊಳ್ಳಬೇಕು.

(೧) ‘ಏ’ ಎಂಬುವನು ಬರೆದ ಉಯಿಲಿನಲ್ಲಿ ತನ್ನ ಯಾವದಾಸ್ತಿಯ

ನ್ನೂ 'ಬಿ' ಎಂಬುವನು ಆತನ ಜೀವಿತಕಾಲದಲ್ಲಿ ಅನುಭವಿಸಬೇಕೆಂದೂ ಆಮೇಲೆ ಸದರಿ ಆಸ್ತಿ 'ಸಿ' ಎಂಬುವನಿಗೆ ಸೇರಬೇಕೆಂದೂ ಏರ್ಪಾಟು ಮಾಡಲ್ಪಟ್ಟಿದೆ. 'ಏ' ಎಂಬುವನ ಮರಣಕಾಲದಲ್ಲಿ 'ಬಿ' 'ಸಿ' ಗಳು ಜನ್ಮಿಸಿ, ಅಲ್ಲದೆ ಗರ್ಭಗತರಾಗಿದ್ದಪಕ್ಷದಲ್ಲಿ ಈ ಏರ್ಪಾಟಿಗೆ ಆಕ್ಷೇಪವಿಲ್ಲವು. [ಉಯಿಲುದಾರನ ಮರಣಕಾಲದಲ್ಲಿ ಜನ್ಮಿಸಿ ಅಲ್ಲದೆ ಗರ್ಭಗತರಾಗಿರುವದೇ ಮುಖ್ಯವಲ್ಲದೆ ಉಯಿಲುಬರೆದ ಕಾಲದಲ್ಲಿ ಜನ್ಮಿಸಿ ಅಲ್ಲದೆ ಗರ್ಭಗತರಾಗಿರುವುದು ಆವಶ್ಯಕವಲ್ಲವು.]

(೨) ಒಬ್ಬ ಆಸ್ತಿದಾರನು ತನ್ನ ಹೆಂಡತಿಗೆ ಸ್ವೀಕಾರಾಧಿಕಾರವನ್ನು ಕೊಟ್ಟು ತನ್ನ ಆಸ್ತಿಯೆಲ್ಲವನ್ನೂ ತನ್ನ ವಿಭಕ್ತಸೋದರನು ಅನುಭವಿಸಬೇಕೆಂದೂ ತನ್ನ ಹೆಂಡತಿ ಸ್ವೀಕಾರವನ್ನು ಮಾಡಿಕೊಂಡಪಕ್ಷದಲ್ಲಿ ಸ್ವೀಕಾರಪುತ್ರನಿಗೆ ಸದರಿ ಆಸ್ತಿ ಸೇರಬೇಕೆಂದೂ ಏರ್ಪಾಟುಮಾಡಿದನು. ಈ ಏರ್ಪಾಟು ಸಲ್ಲುವುದು.

(೩) ಒಬ್ಬ ಆಸ್ತಿದಾರನು ಬರೆದ ಉಯಿಲಿನಲ್ಲಿ ತನ್ನ ಯಾವದಾಸ್ತಿಯನ್ನೂ 'ಬಿ' ಎಂಬುವನು ಆತನ ಜೀವಿತಕಾಲದವರೆಗೂ ಅನುಭವಿಸಬೇಕೆಂದೂ 'ಸಿ' ಎಂಬ ತನ್ನ ಮಗಳಿಗೆ ಮಗನುಂಟಾದ ಪಕ್ಷದಲ್ಲಿ ಆ ಪುತ್ರನಿಗೆ 'ಬಿ' ಅನಂತರದಲ್ಲಿ ಸದರಿ ಆಸ್ತಿ ಸೇರಬೇಕೆಂದೂ ಏರ್ಪಾಟು ಮಾಡಲ್ಪಟ್ಟಿದೆ. ಆಸ್ತಿದಾರನ ಮರಣಕಾಲದಲ್ಲಿ 'ಸಿ' ಎಂಬಾಕೆಗೆ ಮಗನುಂಟಾಗಿರಲಿಲ್ಲ, ಗರ್ಭಗತನಾಗಿಯೂ ಇರಲಿಲ್ಲ. ಆ ಮೇಲೆ 'ಸಿ' ಗೆ ಮಗನು ಹುಟ್ಟಿದರೂ ಆತನಿಗೆ ಸದರಿ ಉಯಿಲಿನಿಂದ ಹಕ್ಕುಂಟಾಗಲಾರದು. (ಇ.ಲಾ.ರಿ.ಲಕ.೪೩೭)

(೪) ಒಬ್ಬ ಆಸ್ತಿದಾರನು ತನ್ನ ಯಾವದಾಸ್ತಿಯನ್ನೂ ಉಯಿಲಿನಿಂದ 'ಏ, 'ಬಿ, 'ಸಿ, 'ಡಿ, 'ಈ, ಎಂಬವರುಗಳಿಗೆ ೫ ಮಂದಿಗೆ ಹಂಚಿಟ್ಟು ಅವರಲ್ಲಿ ಯಾರಾದರೂ ಪುತ್ರಹೀನನಾಗಿ ಸತ್ತುಹೋದಪಕ್ಷದಲ್ಲಿ ಆತನ ಪಾಲು ಭಾಗವು ಮಿಕ್ಕ ನಾಲ್ಕುಮಂದಿಗೆ ಸಲ್ಲಬೇಕೆಂದು ಷರತ್ತುಮಾಡಿದನು "ಏ", "ಬೀ", "ಸೀ", "ಡೀ", "ಈ"—ಗಳು ಅಯಿದುಮಂದಿಯೂ ಆಸ್ತಿದಾರನ ಮರಣಕಾಲದಲ್ಲಿ ಹುಟ್ಟಿದ್ದರು. ಆಮೇಲೆ "ಏ" ಎಂಬವನು ಪುತ್ರಹೀನನಾಗಿ ಸತ್ತನು. ಆಗ ಆತನ ಪಾಲು ಭಾಗವು ನಾಲ್ಕು ಮಂದಿಗೆ ಸೇರುವುದಲ್ಲದೆ ಆತನ ಹೆಂಡತಿ, ಮಗಳು, ಮುಂತಾದವರಿಗೆ ಸೇರಲಾರವೆಂದು ಪ್ರಿವೀ ಕೌನ್ಸಿಲಿನವರು ತೀರ್ಮಾನಮಾಡಿದರು. (೬ ಮೂ. ಇ. ಅ. ೫೦೬; ೯ ಮೂ. ಇ. ಅ. ೧೨೩.)

(೫) ಮೊದಲು "ಏ" ಎಂಬವನಿಗೆ, ಆಮೇಲೆ "ಬೀ" ಎಂಬವನಿಗೆ, ಆಮೇಲೆ "ಸೀ" ಎಂಬವನಿಗೆ, ಆಮೇಲೆ "ಸೀ" ಎಂಬವನ ಜ್ಯೇಷ್ಠಕುಮಾರನಿಗೆ—ಈ ಪ್ರಕಾರವಾಗಿ ಆಸ್ತಿ ಸೇರಬೇಕಾದ್ದೆಂದು ಉಯಿ

ಲಿನಲ್ಲಿ ಏರ್ಪಾಟು ಮಾಡಲ್ಪಟ್ಟಿದ್ದಪಕ್ಷದಲ್ಲಿ ಅದು ಸಲ್ಲದೆ, ಮೇಲಿನವರಲ್ಲಿ ಯಾರುಯಾರು ಉಯಿಲುದಾರನ ಮರಣಕಾಲದಲ್ಲಿ ಹುಟ್ಟಿ, ಅಲ್ಲದೆ ಗರ್ಭ ಗತರಾಗಿರುವರೋ ಅವರಿಗೆ ಮಾತ್ರವೇ ಆಸ್ತಿಯಲ್ಲಿ ಹಕ್ಕುಂಟಾಗುವುದು.

ಒಬ್ಬ ಆಸ್ತಿದಾರನು ತನ್ನ ಆಸ್ತಿಯನ್ನು 'ಎ' 'ಬಿ' 'ಸಿ' 'ಡಿ' ಗಳಿಗೆ ಉಯಿಲುಮೂಲಕವಾಗಿ ಹಂಚಿಟ್ಟು ಅವರಲ್ಲಿ ಯಾರಾದರೂ ಪುತ್ರಹೀನರಾಗಿ ಸತ್ತುಹೋದ ಪಕ್ಷದಲ್ಲಿ ಆತನ ಪಾಲು ಭಾಗವು ಮಿಕ್ಕವರಿಗೆ ಸಲ್ಲಬೇಕಾದ್ದೆಂದೂ ಮತ್ತು ಅವರ ಕುಮಾರರಲ್ಲಿಯಾದರೂ ಮುಮ್ಮಕ್ಕಳಲ್ಲಾದರೂ ಯಾರಾದರೂ ಪುತ್ರಹೀನರಾಗಿ ಸತ್ತುಹೋದ ಪಕ್ಷದಲ್ಲಿ ಅವರ ಪಾಲು ಆಸ್ತಿ ಅವರ ಹೆಂಡತಿಗಾದರೂ ಹೆಣ್ಣುಮಕ್ಕಳಿಗಾದರೂ ಸೇರದೆ ಮಿಕ್ಕ ಭಾಗಗಳವರಿಗೆ ಸೇರಬೇಕೆಂದೂ ಈ ಪ್ರಕಾರವಾಗಿ ಷರತ್ತುಗಳನ್ನು ಏರ್ಪಾಟುಮಾಡಿದ ಪಕ್ಷದಲ್ಲಿ ಸದರಿ ಆಸ್ತಿದಾರನ ಮರಣಕಾಲದಲ್ಲಿ ಜನ್ಮಿಸಿರುವ 'ಎ' 'ಬಿ' 'ಸಿ' 'ಡಿ' ಗಳ ವಿಷಯವಾಗಿ ಏರ್ಪಡಿಸಿದ ಷರತ್ತುಗಳು ಮಾತ್ರವೇ ಸಲ್ಲುವುವು. ಧರ್ಮಶಾಸ್ತ್ರಗಳಲ್ಲಿ ನಿಯಮಿಸಲ್ಪಟ್ಟಿರುವ ವಾರಸು ಪರಂಪರೆಯನ್ನು ಯಾವಾಗಲೂ ಬದಲಿಸುವ ಷರತ್ತುಗಳು ಸಲ್ಲಲಾರವು. (೪ ಕ ಹೈ ೧೭೧, ೨೧೨, ೯ ಕ ಹೈ ೩೯೬—"ಟಾಗೋರು ಉಯಿಲು ಕೇಸು" ಇ ಲಾ ರಿ ೬ ಕ ೪೨೧; ಇ ಲಾ ರಿ ೧೦ ಕ ೯೫೨; ಇ ಲಾ ರಿ ೭ ಕ ೩೬೯; ಇ ಲಾ ರಿ ೧೧ ಕ ೬೮೪; ಇ ಲಾ ರಿ ೧೬ ಕ ೩೮೩)

(೭) ಮೇಲಣ ಉದಾಹರಣದಲ್ಲಿ ತಿಳಿಸಲ್ಪಟ್ಟವುಗಳಲ್ಲದೆ ಮತ್ತೆ ಯಾವುದಾದರೂ 'ಲಾ' ಗೆ ವಿರುದ್ಧವಾದ ಷರತ್ತುಗಳು ಉಯಿಲಿನಲ್ಲಿ ಮುಖ್ಯವಾದವುಗಳಾಗಿ ಸೇರಿಸಲ್ಪಟ್ಟರೆ ಅಂತಹ ಉಯಿಲು ಸಲ್ಲಲಾರದು. ಹೇಗೆಂದರೆ ಉಯಿಲಿನಿಂದ ಕೊಡಲ್ಪಟ್ಟ ಆಸ್ತಿ ಸ್ತ್ರೀಯರಿಗಾದರೂ ಸ್ವೀಕಾರ ಪುತ್ರರಿಗಾದರೂ ಸಲ್ಲಕೂಡದೆಂದೂ ಸದರಿ ಆಸ್ತಿಯನ್ನು ಅಡವಿಡಕೂಡದೆಂದೂ ವಿಕ್ರಯ ಮಾಡಕೂಡದೆಂದೂ ಸಾಲಗಳ ಕೆಳಗಾದರೂ ಜೀವನಾಂಶಗಳ ಕೆಳಗಾದರೂ ಹೋಗೊಳಿಸಕೂಡದೆಂದೂ ಸದರಿ ಆಸ್ತಿಯ ಆದಾಯದೊಡನೆ ಸರ್ವಕಾಲದಲ್ಲಿಯೂ ವೃದ್ಧಿಪಡಿಸುತ್ತಿರಬೇಕಲ್ಲದೆ ಖರ್ಚುಮಾಡಕೂಡದೆಂದೂ ಸದರಿ ಆಸ್ತಿಯನ್ನು ಅನುಭವಿಸದೆ ಹಾಳುಗೊಳಿಸಕೂಡದೆಂದೂ ಇಂತಹ ಷರತ್ತುಗಳು ಸೇರಿಸಲ್ಪಟ್ಟಿದ್ದರೆ ಉಯಿಲು ಸಲ್ಲಲಾರದು. (ಇ ಲಾ ರಿ ೧೦ ಕ ೯೫೨; ಇ ಲಾ ರಿ ೯ ಮ ೪೯೯; ೨ ಕ ಹೈ ೧೧, ೩೫; ೪ ಕ ಹೈ ೨೩೧, ೨೬೫; ಇ ಲಾ ರಿ ೭ ಕ ೨೬೯; ಇ ಲಾ ರಿ ೧೧ ಕ ೬೮೪; ಇ ಲಾ ರಿ ೧೪ ಕ ೨೨೨; ೮ ಕ ಹೈ ೪೦೦; ಇ ಲಾ ರಿ ೮ ಕ ೩೭೮; ೧೪ ಕ ೧೭೫; ಇ ಲಾ ರಿ ೫ ಕ ೪೩೮; ಇ ಲಾ ರಿ ೧ ಕ ೧೦೪

ಇ ಲಾ ರಿ ೬ ಕ ೧೦೬; ೮ ಮೂ ಇ ಅ ೬೬, ೭೬) ೧೮೮೨ ಸಂ॥ ೪ ನಂ॥ ಟ್ರಾನ್ಸಫರ್ ಆಫ್ ಪ್ರಾಪರ್ಟೀ ಆಕ್ಟು ೧೦, ೧೧ ಸೆಕ್ಷನ್‌ಗಳನ್ನೂ ನೋಡಬೇಕು.

(೮) ಮೈನರುಗಳಿಗೆ ಉಯಿಲುಮೂಲಕವಾಗಿ ಆಸ್ತಿ ಕೊಟ್ಟಾಗ, ಸದರಿ ಆಸ್ತಿಯನ್ನು ಅವರು ಇಂತಹ ಪ್ರಕಾರದಿಂದ ಅನುಭವಿಸಬೇಕೆಂದಾದರೂ ಇಷ್ಟುಮಾತ್ರವೇ ವೆಚ್ಚಮಾಡಿಕೊಳ್ಳಬಹುದೆಂದಾದರೂ ಏರ್ಪಾಟು ಮಾಡಿದ ಪಕ್ಷದಲ್ಲಿ ಅಂತಹ ಏರ್ಪಾಟು ಅವರ ಮೈನಾರ್ಟೀ ಕಳೆವವರೆಗೆ ನಡೆವುದು. ಅಷ್ಟೇ ಅಲ್ಲದೆ ಯುಕ್ತವಯಸ್ಸು ಬಂದ ಮೇಲೆ ಸಲ್ಲಲಾರದು. (ಇ. ಲಾ. ರಿ. ೧ ಕ. ೧೦೪; ೮ ಕ. ಹೈ. ೪೦೦; ಇ. ಲಾ. ರಿ. ೮ ಕ ೩೭೮.)

ಉಯಿಲು ರದ್ದಾದರೆ ಆಸ್ತಿ ವಾರಸರಿಗೆ ಸೇರುವುದು — ಉಯಿಲಿನಿಂದ ಆಸ್ತಿ ಕೊಡಲ್ಪಟ್ಟವನು ಉಯಿಲುದಾರನ ಮರಣಕಾಲದಲ್ಲಿ ಜನ್ಮಿಸಿ ಅಲ್ಲದೆ ಗರ್ಭಗತನಾಗಿ ಇಲ್ಲದ ಕಾರಣದಿಂದಾದರೂ ಉಯಿಲಿನಲ್ಲಿ ಅಕ್ರಮವಾದ ಷರತ್ತುಗಳು ಸೇರಿಸಲ್ಪಟ್ಟಿರುವುದರಿಂದಾದರೂ ಉಯಿಲಿನ ಏರ್ಪಾಡು ಏನೂ ಅರ್ಥವಾಗದೆ ಜಾರಿಗೆ ತರಲವಕಾಶವಿಲ್ಲದೆ ಇರುವುದರಿಂದಾದರೂ ಮತ್ತೆ ಯಾವ ಕಾರಣದಿಂದಾದರೂ ಉಯಿಲು ಎಲ್ಲವೂ ಅಲ್ಲದೆ ಅವರಲ್ಲಿ ಕೊಂಚಪಾಲೂ ರದ್ದಾಗಿ ಹೋದಪಕ್ಷದಲ್ಲಿ ಸದರಿ ಉಯಿಲಿಗೆ ಅಲ್ಲದೆ ಅದರಲ್ಲಿ ರದ್ದಾದ ಭಾಗಕ್ಕೆ ಸಂಬಂದಿಸಿದ ಆಸ್ತಿ ಉಯಿಲುದಾರನ ವಾರಸರಿಗೆ ಸಲ್ಲುವುದು (೨ ಕ ಹೈ ೩೮; ೫ ಕ ಹೈ ೧೯೮; ೯ ಕ ಹೈ ೫೦೭; ಇ ಲಾ ರಿ ೩ ಕ ೫೫೩) ಸದರಿ ಆಸ್ತಿ, ಉಯಿಲುದಾರನ ವಾರಸರಿಗೆ ಸೇರಕೂಡದೆಂದು ಉಯಿಲಿನಲ್ಲಿ ಬರೆಯಲ್ಪಟ್ಟಿದ್ದರೂ ಕೂಡ, ಮೇಲೆ ತಿಳಿಸಲ್ಪಟ್ಟ ಸಂದರ್ಭಗಳಲ್ಲಿ ವಾರಸರಿಗೆ ಸೇರದೆ ತಪ್ಪಲಾರದು. (೪ ಕ ಹೈ ೧೮೭; ೯ ಕ ಹೈ ೫೦೨; ೧೫ ಕ ಹೈ ೧೭೫; ಇ ಲಾ ರಿ ೨ ಬೊಂ ೪೮೮.)

ಉಯಿಲಿನಿಂದ ಆಸ್ತಿ ಕೊಡಲ್ಪಡುವವನು ಉಯಿಲುದಾರನಿಗಿಂತಲೂ ಮೊದಲೇ ಸತ್ತುಹೋದ ಪಕ್ಷದಲ್ಲಿ ಸದರಿ ಆಸ್ತಿ ಉಯಿಲುದಾರನಿಗೇ ಸಲ್ಲುವುದು.

ಉಯಿಲು ಬರಹಮೂಲಕವಾಗಿಯೇ ಇರಬೇಕಾದ್ದಾವಶ್ಯಕವಿಲ್ಲ, — ಉಯಿಲು ಬಾಯಿಮಾತು ಮೂಲಕವಾಗಿಯಾದರೂ ಬರಹ ಮೂಲಕವಾಗಿಯಾದರವ ಇರಬಹುದು ಬರಹ ಮೂಲಕವಾಗಿದ್ದ ಪಕ್ಷದಲ್ಲಿ ತಗಾದೆಯುಂಟಾದಾಗ ರುಜುವಾತು ಮಾಡುವುದಕ್ಕೆ ಸುಲಭವಾಗಿರುವುದು (೧೨ ಮೂ ಇ ಅ ೨; ಇ ಲಾ ರಿ ೧೧ ಬೊಂ ೮೯) ಬರಹ ಮೂಲಕವಾಕ

ರುವಾಗ ಹೀಗೆಯೇ ಬರೆಯಬೇಕೆಂದಾದರೂ ಸ್ಟಾಂಪು ಕಾಗದದ ಮೇಲೆ ಬರೆಯಬೇಕೆಂದಾದರೂ ರಿಜಿಸ್ಟರು ಮಾಡಿಸಬೇಕೆಂದಾದರೂ ಸಾಕ್ಷಿ ಕೈಬರಹಗಳಿರಬೇಕೆಂದಾದರೂ ನಿರ್ಬಂಧವಿಲ್ಲವು. ಸಾಕ್ಷಿ ಕೈಬರಹಗಳು ರಿಜಿಸ್ಟ್ರೇಷನು ಮೊದಲಾದವುಗಳು ರುಜುವಾತು ವಿಷಯದಲ್ಲಿ ಉಪಯೋಗಿಸತಕ್ಕವುಗಳೇ ಅಲ್ಲದೆ ಉಯಿಲು ಸಲ್ಲುವುದಕ್ಕೆ ಅನಾವಶ್ಯಕವು. ಒಬ್ಬನು ತನ್ನ ಆಸ್ತಿ ವಿಷಯಕವಾಗಿ ಫಲಾನಿ ವಿಧವಾಗಿ ನಡೆಯಿಸಬೇಕೆಂದು ತನ್ನ ಅವಸಾನ ಕಾಲದಲ್ಲಿ ಬಾಯಿ ಮಾತು ಮಾತ್ರವೇ ಹೇಳಿ ಸತ್ತು ಹೋದರೂ ಅಂತಹ ಮಾತೇ ಉಯಿಲಾಗಿ ಭಾವಿಸಲ್ಪಡುವುದು. ನಡೆಯಿಸತಕ್ಕ ಪದ್ಧತಿಗಳನ್ನೆಲ್ಲವನ್ನೂ ಬರೆಯಿಸಿ ಆ ಕಾಗದದ ಮೇಲೆ ಕೈಬರಹ ಮಾಡುವುದಕ್ಕೆ ಮೊದಲೇ ಆಸ್ತಿದಾರನು ಸತ್ತುಹೋದ ಪಕ್ಷದಲ್ಲಿ ಆ ಕಾಗದವೇ ಉಯಿಲಾಗಿ ಭಾವಿಸಲ್ಪಡುವುದು. (೩ ಸ ೧೩೮; ೯ ಲಾ ರಿ ೩ ಬೊಂ ೭.) ಅಂತಹ ಉಯಿಲನ್ನು ಕೋರ್ಟಿನವರು ನಂಬುವರೇ ಇಲ್ಲವೇ ಎಂಬ ವಿಷಯವು ಸಾಕ್ಷ್ಯವನ್ನು ಹಿಡಿದಿರುವುದು. ತನ್ನ ಮರಣಾನಂತರದಲ್ಲಿ ತನ್ನಾಸ್ತಿ ವಿಷಯಕವಾಗಿ ನಡೆಯಿಸಬೇಕಾದ ಪದ್ಧತಿಗಳನ್ನು ಸರ್ಕಾರದವರಿಗೆ ಅರ್ಜೀಮೂಲಕವಾಗಿ ತಿಳಿಯಪಡಿಸಿ ಮೃತಪಟ್ಟ ಒಬ್ಬ ಆಸ್ತಿದಾರನ ಸ್ವತ್ವ ವಿಷಯದಲ್ಲಿ ಸದರಿ ಅರ್ಜಿಯೇ ಆತನ ಉಯಿಲಾಗಿ ಭಾವಿಸಬೇಕೆಂದು ತೀರ್ಮಾನಿಸಲ್ಪಟ್ಟಿತು. (೧೪ ಕ. ಹೈ. ೨೨೬; ೨೬ ಸ ೫೫; ೯ ಲಾ ರಿ ೭ ಅ ೧೬೩; ೯ ಲಾ ರಿ ೧೮ ಕ ೧.)

ಹಿಂದೂ ಉಯಿಲುಗಳ ಆಕ್ಟು.—ಮದರಾಸು, ಬೊಂಬಯಿ ಈ ಎರಡು ಪಟ್ಟಣಗಳಲ್ಲಿಯೂ ಬಂಗಾಳಾರಾಜ್ಯದಲ್ಲಿಯೂ ಇರುವ ಹಿಂದೂಗಳಲ್ಲಿ ನಡೆಯಿಸಲ್ಪಡುವ ಉಯಿಲುಗಳನ್ನು ಮತ್ತು ಸದರಿ ಪ್ರದೇಶಗಳಲ್ಲಿ ಸ್ಥಿರಾಸ್ತಿಗೆ ಸಂಬಂಧಿಸಿದ ಉಯಿಲುಗಳನ್ನೂ ಬರಹಮೂಲಕವಾಗಿದ್ದು ಸಾಕ್ಷಿ ಕೈಬರಹಗಳೊಡನೆ ಕೂಡಿ ಇರಬೇಕೆಂದು ೧೮೭೧ ಸಂ॥ ೨೧ ನಂ॥ ಹಿಂದೂ ಉಯಿಲುಗಳ ಶಾಸನದಲ್ಲಿ ಹೇಳಲ್ಪಟ್ಟದೆ. (೧೮೮೧ ಸಂ॥ ೫ ನಂ॥ ಶಾಸನವನ್ನೂ, ೧೮೬೦ ಸಂ॥ ೨೭ ನಂ॥ ಶಾಸನವನ್ನೂ ನೋಡಬೇಕು.)

ಧರ್ಮಕಾರ್ಯಗಳು ವಿಗ್ರಹಗಳು ವಗೈರೆ—ಧರ್ಮಕಾರ್ಯಗಳು ಮತಸಂಬಂಧವಾದ ಕಾರ್ಯಗಳು, ಭಗವತ್ಸಂಬಂಧವಾದ ಕಾರ್ಯಗಳು ದೇವತಾವಿಗ್ರಹಗಳು ಇವುಗಳ ನಿಮಿತ್ತವಾಗಿ ಕೊಡಲ್ಪಡುವ ದಾನಗಳು ತಪ್ಪದೆ ಸಲ್ಲುವುದೆಂದೂ ಅಂತಹ ದಾನಗಳಿಗಾಗಿ ಪಿತ್ರಾರ್ಜಿತಸ್ವತ್ವವನ್ನು ಕೊಟ್ಟರೂ

ಆಕ್ಷೇಪವಿಲ್ಲವೆಂದೂ ಅವುಗಳ ವಿಷಯದಲ್ಲಿ ದಾನಕಾಲದಲ್ಲಿಯೇ ಸ್ವತ್ವವನ್ನು ಸ್ವಾಧೀನಮಾಡಬೇಕೆಂಬ ನಿರ್ಬಂಧವಿಲ್ಲದುದರಿಂದ ಅವುಗಳನ್ನು

ನೆರವೇರಿಸುವುದಕ್ಕೆ ವಾರಸರು ಒದ್ಧಗಾಗಿರುವರೆಂದೂ ಹಿಂದೂ ಧರ್ಮಶಾಸ್ತ್ರಗಳಲ್ಲಿ ಹೇಳಲ್ಪಟ್ಟಿದೆ. ತೀರ್ಮಾನಗಳು ಕೂಡ ಹಾಗೆಯೇ ಏರ್ಪಟ್ಟಿವೆ. (೫ ಬಂ ಸ ತೀ ೨೪ ; ಇ ಲಾ ರಿ ೮ ಅ ೭೬ ; ೩ ಬಾರೊ ೩೧೯ ; ೧ ಬಾರೊ ೩೯೪, ೪೦೫) ಹಿಂದೂಗಳಲ್ಲಿ ಉಯಿಲುಗಳು ಪ್ರಬಲವಾದವೋಲೆ ಧರ್ಮಕಾರ್ಯಗಳು ವಗೈರಾಗಳ ನಿಮಿತ್ತವಾಗಿ ಉಯಿಲುಮೂಲಕವಾಗಿ ಸೊತ್ತುಗಳನ್ನು ಕೊಟ್ಟುಹೋಗುವುದು ಸಾಧಾರಣವಾಗಿ ಕೋರ್ಟಿನಲ್ಲಿ ಅಂಗೀಕರಿಸಲ್ಪಡುತ್ತ ಬಂತು (ಎಫ್‌ ಮೆಕಾ ಟೆ೬ ೩೩೫, ೨ ಮೂ ಇ ಅ ೩೯೦; ೮ ಮೂ ಇ ಅ ೬೬; ೧೪ ಮೂ ಇ ಅ ೨೪೯.)

ಜೀವನಾಂಶದಹಕ್ಕು—ಸಮಷ್ಟಿ ಕುಟುಂಬದಲ್ಲಿ ಕೆಲವರು ಪುರುಷರು ಸಮಷ್ಟಿಯಾಸ್ತಿಗೆ ಭಾಗಸ್ಥರಾಗಿ ಇರುವರೆಂದೂ ಕೆಲವರು ಜೀವನಾಂಶಕ್ಕೆ ಮಾತ್ರವೇ ಹಕ್ಕುಂಟಾಗಿರುವರೆಂದೂ ಸ್ತ್ರೀಯರು ಕೂಡ ಮಿತಾಕ್ಷರ ಧರ್ಮಶಾಸ್ತ್ರಪ್ರಕಾರವಾಗಿ ಜೀವನಾಂಶಕ್ಕೆ ಮಾತ್ರವೇ ಹಕ್ಕುಂಟಾಗಿರುವರೆಂದೂ ಹಿಂದೆ ಹೇಳಿದ್ದೆವು. ಈ ಪ್ರಕರಣದಲ್ಲಿ ಜೀವನಾಂಶದ ಹಕ್ಕಿನ ಸ್ವಭಾವವು ಆ ಹಕ್ಕು ಯಾವ ಯಾವ ಸಂದರ್ಭಗಳಲ್ಲಿ ಯಾರಾರಿಗುಂಟಾಗಿರುವುದೋ ಇಲ್ಲದೆ ತಪ್ಪಿಹೋಗುವುದೋ ಎಂಬೀ ವಿಷಯವೂ ಜೀವನಾಂಶದ ಸ್ವತ್ವ ಪರಿಮಾಣವು ಮೊದಲಾದ ವಿಷಯಗಳೂ ವಿವರಣಗೊಳಿಸಲ್ಪಡುವುದು.

ಸಮಷ್ಟಿ ಕುಟುಂಬದ ಭಾಗಸ್ಥರು - ಭಾಗಾನರ್ಹರು—ಕುಟುಂಬವು ಸಮಷ್ಟಿಯಾಗಿರುವವರೆಗೂ ಆಸ್ತಿಯಲ್ಲಿ ಭಾಗಸ್ಥರಾಗಿರುವವರ ಅವರ ಹೆಂಡತಿಯರ ಅವರ ಮಕ್ಕಳ ಜೀವನಾಂಶವನ್ನು ಎಂದರೆ ಅವರ ಅನ್ನವಸ್ತ್ರಗಳು ವಿವಾಹಾದಿ ಕಾರ್ಯಗಳು ಮುಂತಾದವುಗಳಿಗಾಗಿ ಆಗಬೇಕಾದ ವೆಚ್ಚಗಳನ್ನು ಸಮಷ್ಟಿಸೊತ್ತಿನಿಂದ ಯಜಮಾನನು ನಡೆಯಿಸಬೇಕು ಕುಷ್ಟರೋಗವು ಜನ್ಮಾರಭ್ಯವಾಗಿ ಬಂದ ಹುಚ್ಚು ಕಿವುಡು ಮೂಗತನ ಕುರುಡು ಇಂತಹ ಕಾರಣಗಳಿಂದ ಸಮಷ್ಟಿಯಾಸ್ತಿಗೆ ಭಾಗಸ್ಥರಾಗಲಾರದ ಪುರುಷರ, ಅವರ ಹೆಂಡತಿಯರ, ಅವರ ಮಕ್ಕಳ ಜೀವನಾಂಶವನ್ನು ಕೂಡ ಸಮಷ್ಟಿ ಸೊತ್ತು ಭರಿಸಬೇಕು,

ವಿತಂತುವು—ಸಮಷ್ಟಿಕುಟುಂಬದ ಭಾಗಸ್ಥನು ಸತ್ತುಹೋದಪಕ್ಷದಲ್ಲಿ ಸಮಷ್ಟಿ ಸೊತ್ತಿನಿಂದ ಜೀವನಾಂಶಕ್ಕೂ ಕುಟುಂಬಗೃಹದಲ್ಲಿ ನಿವಾಸಕ್ಕೂ ಆತನ ವಿಧವೆ ಹಕ್ಕುಂಟಾಗಿರುವಳು. ಸದರಿ ಸಮಷ್ಟಿಸೊತ್ತು ಯಾರ ಅಧೀನದಲ್ಲಿರುವುದೋ ಅವರು ಆಕೆಯ ಜೀವನಾಂಶವನ್ನು ಕೊಡುವುದಕ್ಕೆ ಜವಾಬುದಾರರಾಗಿರುವರು. ಹೆಂಡತಿ ಪ್ರೈನೆರೆಯದ ಮೊದಲು ಗಂಡನು ಸತ್ತುಹೋದರೂ ಆಕೆಗೆ ಜೀವನಾಂಶ ಕೊಡದೆ ತಪ್ಪದು,

ಜೀವನಾಂಶವನ್ನು ಹೊಂದುವುದಕ್ಕಾಗಿ ಗಂಡನ ಕುಟುಂಬಗೃಹದಲ್ಲಿಯೇ ಆತನ ವಿಧವೆ ವಾಸವಾಗಿರಬೇಕೆಂದು ನಿರ್ಬಂಧವಿಲ್ಲವು. (೧೨ ಕ ಹೈ ೨೩೮ ೫ ಮ ಹೈ ೧೫೦, ೩ ಲಾ ರಿ ೩ ಬೊಂ ೩೭೨, ೩ ಲಾ ರಿ ೬ ಮ ೮೫; ೩ ಲಾ ರಿ ೧೪ ಬೊಂ ೪೯೦) ಆದರೆ ಸಮಷ್ಟಿಯಾಸ್ತಿ ಅತಿ ಸ್ವಲ್ಪವಾಗಿಯೂ ಆದಾಯವಿಲ್ಲದುದಾಗಿಯೂ ಇರುವುದರಿಂದ ಪ್ರತ್ಯೇಕವಾಗಿ ಜೀವನಾಂಶ ಕೊಡಲು ಸಾಧ್ಯವಾಗದೆ ಇರುವಲ್ಲಿ ಗಂಡನ ಮನೆಯನ್ನು ಬಿಟ್ಟು ಹೋದ ವಿಧವೆಗೆ ಕೋರ್ಟಿನವರು ಪ್ರತ್ಯೇಕವಾಗಿ ಜೀವನಾಂಶವನು ಕೊಡಿಸಲಾರರು ಕೊಡಿಸಿದರೂ ಅಧಿಕವಾಗಿ ಕೊಡಿಸಲಾರರು. (೩ ಲಾ ರಿ ೩ ಬೊಂ ೪೪; ೩ ಲಾ ರಿ ೮ ಬೊಂ ೨೬೧; ೧೮೬೯ ಸಂ|| ಮ ತೀ ೫೯.) ಗಂಡನ ಮನೆಯಲ್ಲಿಯೇ ವಿಧವೆ ವಕ್ಕಲಿರುವ ಷರತ್ತಿನೊಡನೆ ಜೀವನಾಂಶವನ್ನೇರ್ಪಡಿಸಿ ಆತನು ಉಯಿಲುಮಾಡಿಹೋದರೆ ಆಕೆ ಆ ಮನೆಯನ್ನು ಬಿಟ್ಟುಹೋಗಿ ಜೀವನಾಂಶವನ್ನು ಬಯಸಕೂಡದು. (೧೮೫೯ ಸಂ|| ಬಂ ಸ ತೀ ೪೫೭; ಎಫ್ ಮೆಕ್ ೬೨; ೧೨ ಕ ಹೈ ೨೪೭; ೩ ಲಾ ರಿ ೧೩ ಬೊಂ ೨೧೮; ೩ ಲಾ ರಿ ೧೫ ಬೊಂ ೨೩೬). ಗಂಡನ ಮನೆಯಲ್ಲಿಯೇ ವಿಧವೆ ವಾಸವಾಗಿರುವಾಗ ಆಕೆಗೆ ಏರ್ಪಡಿಸಿದ ಸ್ಥಳದಲ್ಲಿ ವಾಸವಾಗಿರಬೇಕಲ್ಲದೆ ಇಂತಹ ಭಾಗವನ್ನಾದರೂ ಮನೆಯನ್ನಾದರೂ ಕೊಡಬೇಕೆಂದು ಆಕೆ ಬಯಸಕೂಡದು, (೪ ಅ ಹೈ ೧೫೩)

ವ್ಯಭಿಚಾರಿಣಿಯಾಗಿ ಸಂಚರಿಸುತ್ತಿರುವ ವಿಧವೆಗೆ ಜೀವನಾಂಶದ ಹಕ್ಕಿಲ್ಲವು. (೧ ಮ ಹೈ ೩೭೩, ೨ ಮ ಹೈ ೩೩೭, ೫ ಮ ಹೈ ೧೬೦, ೪ ಮ ಹೈ ೧೮೫, ೧೩ ಕ ಹೈ ೭೨ ೮೮, ೯ ಬೊಂ ೧೦೮) ಜೀವನಾಂಶ ವಿಷಯಕವಾಗಿ ವಿಧವೆ ಕೋರ್ಟಿನ ಮೂಲಕವಾಗಿ ತೀರ್ಮಾನವನ್ನು ಹೊಂದಿದ ಮೇಲೆ ಆಕೆ ವ್ಯಭಿಚಾರಿಣಿಯಾಗಿ ಸಂಚರಿಸಿದರೆ ಸದರಿ ತೀರ್ಮಾನವನ್ನು ರದ್ದುಮಾಡಬಹುದು, ಅಲ್ಲದೆ ಡಿಕ್ರೀ ಅಮಲು ನಡಿಸದೆ ತಕರಾರು ಇಡಬಹುದು. (೩ ಲಾ ರಿ ಬೊಂ ೧೦೪) ಆದರೆ ಅತ್ಯಲ್ಪವಾಗಿ ಹೊಟ್ಟೆ ಹೊರಕೊಳ್ಳಲು ಮಾತ್ರವೇ ಆಕೆಗೆ ಜೀವನಾಂಶವೇರ್ಪಡಿಸಿದ್ದ ಪಕ್ಷದಲ್ಲಿ ಅದನ್ನು ಕೋರ್ಟಿನವರು ರದ್ದುಮಾಡಲಾರರು. (೩ ಲಾ ರಿ ೧ ಬೊಂ ೫೫೯; ೩ ಲಾ ರಿ ೧೭ ಕ ೬೩೪;)

ಪಿತ್ರಾರ್ಜಿತ ಸೊತ್ತಾದರೂ ಸ್ವಾರ್ಜಿತ ಸೊತ್ತಾದರೂ ಇಲ್ಲದವನವಿಧವೆ.—ಎಷ್ಟುಮಾತ್ರವೂ ಪಿತ್ರಾರ್ಜಿತ ಸೊತ್ತಾದರೂ ಸ್ವಾರ್ಜಿತ ಸೊತ್ತಾದರೂ ಇಲ್ಲದೆ ಸತ್ತುಹೋದವನ ವಿಧವೆಗೂ, ಆಕೆಯ ಮಾವಂದಿರು ಭಾವಂದಿರು ಮೈದುನಂದಿರು ಮುಂತಾದವರು ಜೀವನಾಂಶ ಕೊಡುವುದಕ್ಕೆ ಬದ್ಧರಲ್ಲವು. (೧೮೫೮ ಸಂ|| ಮ. ತೀ ೨೨೩; ೧೮೫೯ ಸಂ|| ಮ. ತೀ. ೫,

೨೬೫, ೨೭೨; ಇ. ಲಾ. ರಿ. ೧೧ ಮ. ೯೯೧; ೨ ಡಬ್ಲ್ಯು. ನೊಕ್. ೧೧೯; ೯ ಬೊಂ, ಹೈ. ೨೮೩; ೨೪ ಸ. ೨೩೪; ೭ ಅ. ಹೈ. ೨೬; ೨ ಕ. ಹೈ ೧೫; ಇ. ಲಾ. ರಿ. ೬ ಕ, ೩೬; ಇ. ಲಾ. ರಿ. ೨ ಬೊಂ. ೫೭೩, ೬೩೨; ಇ. ಲಾ. ರಿ. ೭ ಬೊಂ ೧೨೭; ಇ. ಲಾ. ರಿ. ೮ ಬೊಂ. ೧೫; ಇ. ಲಾ. ರಿ. ೧೧ ಬೊಂ. ೧೯೯) ಒಂದು ಕೇಸಿನಲ್ಲಿ ಅಲಹಾಬಾದು ಹೈಕೋರ್ಟಿನವರು, ಮಾವಂದಿರ ಸ್ವಾರ್ಜಿತ ಸ್ವತ್ವದಿಂದ ಜೀವನಾಂಶವನ್ನು ಬಯಸುವುದಕ್ಕೆ ಸೊಸೆಗೆ ಹಕ್ಕಿಲ್ಲದಿದ್ದರೂ ಆಕೆಗೆ ಅನ್ನವಸ್ತ್ರಗಳನ್ನು ಕೊಟ್ಟು ಸಂರಕ್ಷಿಸುವುದು ಮಾವಂದಿರಿಗೆ ಧರ್ಮವಾಗಿರುವುದರಿಂದ, ಆತನ ಸ್ವಾರ್ಜಿತ ಸ್ವತ್ವವು ಮಿಕ್ಕ ಕುಮಾರರಿಗೆ ಸೇರಿದಾಗ, ಅದರೊಳಗಿನಿಂದ ಆಕೆಗೆ ಜೀವನಾಂಶ ಕೊಡಲು ಅವರು ಬದ್ಧರಾಗಿರುವರೆಂದು ತೀರ್ಮಾನಿಸಿದರು. (ಇ. ಲಾ ರಿ. ೧೧ ಅ. ೨೯೪; ಇ.ಲಾ. ರಿ. ೧೭ ಕ. ೩೭೩. ಆದರೆ, ಇ. ಲಾ. ರಿ. ೧೧ ಮ. ೯೧ ನೋಡಬೇಕು.)

ತಾಯಿತಂದೆಗಳು, ಮಕ್ಕಳು, ಹೆಣ್ಣುಮಕ್ಕಳು.— ಪಿತ್ರಾರ್ಜಿತ ಸ್ವತ್ವವು ಇದ್ದರೂ ಇಲ್ಲದಿದ್ದರೂ, ತನ್ನ ಶಕ್ತ್ಯನುಸಾರವಾಗಿ, ಮುದುಕರಾದ ತಾಯಿತಂದೆಗಳನ್ನು, ಹೆಂಡತಿಯನ್ನು, ಯುಕ್ತವಯಸ್ಸುಬಾರದ ಗಂಡು ಮಕ್ಕಳನ್ನು, ಮದುವೆಯಾಗದ ಹೆಣ್ಣುಮಕ್ಕಳನ್ನು, ಇವರನ್ನು ರಕ್ಷಿಸುವುದು ಪ್ರತಿಮನುಷ್ಯನಿಗೂ ವಿಧಾಯಕವಾಗಿದೆ. (೨ ಕ. ಹೈ ೧೫; ೧೮೫೫ ಸಂ॥ ಮ. ತೀ. ೨೩೮; ಇ ಲಾ. ರಿ. ೧೧ ಮ. ೯೧; ಇ. ಲಾ. ರಿ. ೨ ಬೊಂ. ೫೯೭) ಯುಕ್ತವಯಸ್ಸುಬಂದ ಮಕ್ಕಳನ್ನು ಸಂರಕ್ಷಿಸುವುದಕ್ಕೆ ತಂದೆ ಬದ್ಧನಲ್ಲವು. ಆದರೆ ಪಿತ್ರಾರ್ಜಿತಸೊತ್ತಿನಲ್ಲಿ ಅವರು ಭಾಗಸ್ಥರಾಗಿರುವುದರಿಂದ ಅವರ ಪೋಷಣೆಗೆ ಅವಶ್ಯಕವಾದ ಖರ್ಚುಗಳನ್ನು ಕುಟುಂಬದ ಸ್ವತ್ವವು ಭರಿಸಬೇಕಾಗಿರುವುದು. ಮತ್ತು ಅವಿಭಾಜ್ಯವಾದ ಜಮೀಂದಾರಿ ವಗೈರೆ ವಿಷಯಗಳಲ್ಲಿ ಆಸ್ತಿಯೆಲ್ಲವೂ ಒಬ್ಬನ ಸ್ವಾಧೀನದಲ್ಲಿಯೇ ಇರುವಾಗ ಮಿಕ್ಕವರು ಜೀವನಾಂಶಕ್ಕೆ ಹಕ್ಕುಂಟಾದವರಾಗಿರುವರು. (೧೨ ಬೊಂ ಹೈ ೯೪; ಇ ಲಾ ರಿ ೨ ಬೊಂ ೩೪೬; ೧೨ ಮೂ ಇ ಅ. ೨೦೩, ೪೯೫.) ಹೆಣ್ಣುಮಗುವಿಗೆ ಮದುವೆಯಾದಮೇಲೆ ಆಕೆಯ ಸಂರಕ್ಷಣದ ಬಾಧ್ಯತೆ ಗಂಡನಿಗೆ ಸಂದಿರುವುದರಿಂದಲೂ, ಮೈನೆರೆವವರೆಗೂ ಹುಡುಗಿ ತೌರುಮನೆಯಲ್ಲಿಯೇ ಇರುವುದು ಆಚಾರವಾಗಿರುವುದರಿಂದಲೂ, ಅಷ್ಟರವರೆಗೂ ಜೀವನಾಂಶವನ್ನು ಕೊಡಬೇಕೆಂದು ತಂದೆತಾಯಿಗಳು ಬಯಸಿದಪಕ್ಷದಲ್ಲಿ, ಗಂಡನು ಕೊಡಬೇಕಾಗಿರುವುದು. (೧೮೫೮ ಸಂ॥ ಮ ತೀ ೧೫೪.)

ಸಹೋದರಿಯರು— ಒಡಹುಟ್ಟಿದ ಹುಡುಗಿಯರಿಗೆ ಮದುವೆ ಮಾಡುವುದೂ, ಅದುವರಿಗೆ ಅವರಿಗೆ ಅನ್ನ ವಸ್ತ್ರಗಳಿತ್ತು ಕಾಪಾಡುವುದೂ, ಸಹೋದರನಿಗೆ ವಿಧಾಯಕವೆಂದು ಧರ್ಮಶಾಸ್ತ್ರಗಳಲ್ಲಿ ಹೇಳಲ್ಪಟ್ಟಿದೆ. (೨ ಡಬ್ಲ್

ಯು ಮೆಕ್‌, ೧೧೮; ವೆ, ಬು, ೨೮೫, ೪೩೭) ಆದರೆ, ಪಿತ್ರಾರ್ಜಿತದಸೊತ್ತು ಸುತರಾಂ ಇಲ್ಲದಪಕ್ಷದಲ್ಲಿ, ಒಡಹುಟ್ಟಿದ ಹುಡುಗಿಯರಿಗೆ ಜೀವನಾಂಶ ಕೊಡೆಂದು ಸಹೋದರರನ್ನು ಕೋರ್ಟಿನವರು ಬಲಾತ್ಕಾರಗೊಳಿಸುವಂತೆ ತೋರದು. ಮದವೆಯಾದಮೇಲೆಯೂ ಒಡಹುಟ್ಟಿದ ಹುಡುಗಿಯರಿಗೆ ಗಂಡನ ಮನೆಯಲ್ಲಿ ಗತಿಯಿಲ್ಲದಿದ್ದರೆ ತೌರುಮನೆಯಲ್ಲಿಯೇ ಸಂರಕ್ಷಣೆ ನಡೆಯಬೇಕೆಂದೂ ಧರ್ಮಶಾಸ್ತ್ರಗಳಲ್ಲಿ ಹೇಳಲ್ಪಟ್ಟಿದೆ.

ಸವತಿತಾಯಿ ಸವತಿತಾಯಮಕ್ಕಳು.—ಜೀವನಾಂಶವಿಷಯದಲ್ಲಿ ಸವತಿ ತಾಯನ್ನೂ ಸವತಿ ತಾಯಿಗೆ ಹುಟ್ಟಿದ ಒಡಹುಟ್ಟಿದವರನ್ನೂ, ಹೆತ್ತತಾಯಿಯೊಡನೆಯೂ ಹೆತ್ತತಾಯಿಗೆ ಹುಟ್ಟಿದ ಒಡಹುಟ್ಟಿದವರೊಡನೆಯೂ, ಸಮಾನರನ್ನಾಗಿ ಭಾವಿಸಬೇಕೆಂದು ಧರ್ಮಶಾ ್ತ್ರಗಳಲ್ಲಿ ಹೇಳಲ್ಪಟ್ಟಿದೆ. (೨ ಡಬ್ಲಿಯು ಮೆಕ್. ೧೧೩, ೧೧೮; ವೆ ಬು ೩೪, ೨೮೫, ೪೩೭.) ಆದರೆ ಪಿತ್ರಾರ್ಜಿತ ಸ್ವತ್ವವಿಲ್ಲದಿರಲು ಸವತಿ ತಾಯನ್ನು ಕಾಪಾಡುವುದಕ್ಕೆ ಕುಮಾರನು ಬದ್ಧನಲ್ಲವೆಂದು ತೀರ್ಮಾನಿಸಲ್ಪಟ್ಟಿದೆ (ಇ, ಲಾ, ರಿ, ೯ ಬೊಂ, ೨೭೯.)

ಅತ್ತೆಯರು – ಅತ್ತೆಯರಿಗೆ- ಎಂದರೆ ಹೆಂಡತಿಯ ತಾಯಿಗೆ ಬೇರೆ ಗತಿ ಇಲ್ಲದಪಕ್ಷದಲ್ಲಿ ಅಳಿಯನೇ ಅನ್ನವಸ್ತ್ರಗಳನ್ನಿತ್ತು ಕಾಪಾಡಬೇಕೆಂದು ಧರ್ಮಶಾಸ್ತ್ರಗಳಲ್ಲಿ ಹೇಳಲ್ಪಟ್ಟಿದೆ. ಆದರೆ ಕೋರ್ಟಿನವರು ಈವಿಧಿಯನ್ನು ಹಿಡಿದು ಅಳಿಯನನ್ನು ನಿರ್ಬಂಧಿಸಲಾರರು.

ವ್ಯಭಿಚಾರಸಂಬಂಧವು ಉಂಟಾಗಿರುವಷ್ಟು ಮಾತ್ರದಿಂದಲೇ ಯಾವ ಸ್ತ್ರೀಗಾದರೂ ಜೀವನಾಂಶ ಕೊಡಬೇಕೆಂಬ ವಿಧಿ ಏರ್ಪಡಲಾರದು, ಆದರೆ ಸ್ಥಿರವಾಗಿಟ್ಟುಕೊಂಡಿರುವ ಸೂಳೆಗೆ ಜೀವನಾಂಶವನ್ನು ಕೊಡಬೇಕು. (೧೦ ಬೊಂ, ಹೈ, ೩೮೧; ೧೨ ಬೊಂ, ಹೈ, ೨೯೯; ೮ ಮ, ಹೈ, ೧೧೮) ಮತ್ತು, ಅಂತಹ ಸೂಳೆಗೆ ಹುಟ್ಟಿದ ಸಂತಾನವನ್ನು ಕೂಡ ಸಂರಕ್ಷಿಸುವುದು ವಿಧಾಯಕವು, (೨ ಮ, ಹೈ, ೨೯೩; ೧೨ ಮೂ, ಇ, ಅ, ೨೦೩; ೨ ಕ. ಹೈ, ೧೫; ೭ ಮೂ, ಇ, ಅ. ೧೮; ಇ, ಲಾ, ರಿ, ೧ ಬೊಂ, ೯೭, ಇ, ಲಾ, ರಿ, ೧ ಮ, ೩೦೬ ಇ, ಲಾ, ರಿ, ೮ ಮ, ೩೨೫; ಇ, ಲಾ, ರಿ, ೬ ಅ, ೩೨೯.)

ಸೂಳೆಯನ್ನಿಟ್ಟುಕೊಂಡವನು ಸತ್ತುಹೋದಪಕ್ಷದಲ್ಲಿ, ಆತನ ಆಸ್ತಿ ಯಾರಸ್ವಾಧೀನದಲ್ಲಿರುವುದೋ ಅವರು ಅವಳಿಗೆ ಜೀವನಾಂಶ ಕೊಡುವವಿಷಯದಲ್ಲಿ ಬದ್ಧರಾಗಿರುವರು. ಆದರೆ ಅವಳು ವ್ಯಭಿಚಾರವೃತ್ತಿಯಲ್ಲಿ ಸಂಚರಿಸುತ್ತಿದ್ದಪಕ್ಷದಲ್ಲಿ ಜೀವನಾಂಶಕ್ಕೆ ಹಕ್ಕುಂಟಾಗಿರದು (ಇ, ಲಾ, ರಿ, ೧೨ ಬೊಂ, ೨೬)

ಹೆಂಡತಿ—ವಿವಾಹಬಂಧವೇರ್ಪಟ್ಟದ್ದು ಮೊದಲು, ಹೆಂಡತಿಯ ಸಂರ

ಕ್ಷಣ ಗಂಡನಿಗೆ ಸೇರುವುದು, ಆದುದರಿಂದ ಆಕೆ ರಜಸ್ವಲೆಯಾಗುವುದಕ್ಕೆ ಮುಂಚೆ ತೌರುಮನೆಯಲ್ಲಿರುವಾಗ ಆಕೆಯ ಸಂರಕ್ಷಣ ನಿಮಿತ್ತಕವಾಗಿ ಬೇಕಾದ ದ್ರವ್ಯವನ್ನು ಕೊಡೆಂದು ಆಕೆಯ ತಾಯ್ತಂದೆಗಳು ಬಡತನದಿಂದಾದರೂ ಮತ್ತೆ ಯಾವಕಾರಣದಿಂದಾದರೂ ಗಂಡನನ್ನು ಬಯಸಿದಪಕ್ಷದಲ್ಲಿ ಕೊಡುವುದಕ್ಕೆ ಗಂಡನು ಬದ್ಧನಾಗಿರುವನು. (೧೮೫೪ ಸಂ॥ ಮ. ತೀ. ೧೫೪.) ರಜಸ್ವಲಾನಂತರದಲ್ಲಿ ಗಂಡನಮನೆಯಿಂದ ಆತನೊಡನೆ ಸಂಸಾರ ಮಾಡಿಕೊಂಡಿರುವುದು ಹೆಂಡತಿಗೆ ವಿಧಾಯಕವು. ಆದುದರಿಂದ ತಕ್ಕ ಕಾರಣವಿಲ್ಲದೆ ಗಂಡನನ್ನು ಬಿಟ್ಟುಬಿಟ್ಟು, ತೌರುಮನೆಯಲ್ಲಾದರೂ ಮತ್ತೊಂದೆಡೆಯಲ್ಲಾದರೂ ಆಕೆ ಪ್ರತ್ಯೇಕವಾಗಿ ವಾಸಮಾಡುತ್ತಿದ್ದಪಕ್ಷದಲ್ಲಿ ಜೀವನಾಂಶಕ್ಕೆ ಹಕ್ಕುಂಟಾಗಿರಳು. (ಇ ಲಾ ರಿ ೨ ಬೊಂ ೬೩೪ ಹಿಂದೆ ೪೧ ನೆಯ ಪ್ಯಾರಾನೋಡಬೇಕು. ಗಂಡನು ಬಯ್ದನೆಂದಾದರೂ, ಹೊಡದನೆಂದಾದರೂ ಸಿಟ್ಟುಮಾಡಿಕೊಂಡನೆಂದಾದರೂ ಎರಡನೆಯಮದುವೆ ಮಾಡಿಕೊಂಡನೆಂದಾದರೂ ಸೂಳೆಯನ್ನಿಟ್ಟುಕೊಂಡನೆಂದಾದರೂ ಈ ಕಾರಣಗಳನ್ನು ಹಿಡಿದು ಆತನನ್ನು ಬಿಟ್ಟು ಬೇರೆ ವಾಸವಾಗಿದ್ದರೂ, ಹೆಂಡತಿಗೆ ಜೀವನಾಂಶವು ಕೊಡಿಸಲ್ಪಡಲಾರದು. (ಇ ಲಾ ರಿ ೪ ಅ ೩೭೪; ೧ ಮ ಹೈ ೩೭೫; ಹಿಂದೆ ೩೯ನೆಯ ಪ್ಯಾರಾನೋಡಬೇಕು.) ಮತ್ತು ವ್ಯಭಿಚಾರವೃತ್ತಿಯಲ್ಲಿ ಸಂಚರಿಸುವ ಹೆಂಡತಿಗೆ ಜೀವನಾಂಶದ ಹಕ್ಕಿಲ್ಲವು. (೧ ಮ ಹೈ ೩೭೦.) ಆದರೆ ಆಮೇಲೆ ವ್ಯಭಿಚಾರವೃತ್ತಿ ಬಿಟ್ಟಿದ್ದರೆ, ಆಕೆಯಮೇಲೆ ಗಂಡನು ದಯೆಗೆಯ್ದು ಹೊಟ್ಟೆಪಾಡಿಗೆ ಗತಿತೋರಿಸಬೇಕೆಂದು ಧರ್ಮಶಾಸ್ತ್ರಗಳಲ್ಲಿ ಹೇಳಲ್ಪಟ್ಟಿದೆ. ಅಂತಹ ಸಂದರ್ಭದಲ್ಲಿ ಹೆಂಡತಿಯನ್ನು ಏನೂ ಇಲ್ಲದೆ ನಿರಾಧಾರವಾಗಿ ಬಿಡಕೂಡದೆಂದು ಕೆಲವು ತೀರ್ಮಾನಗಳಿಂದಕೂಡ ಕಾಣಬರುವುದು. (೭ ಬಂ ಸ ತೇ ೧೮೪; ೨ ಮ ಹೈ ೩೩೭; ೧ ಬೊಂ ಹೈ ೫೬೦; ಇ ಲಾ ರಿ ೭ ಬೊಂ ಲ೪; ಇ, ಲಾ ರಿ ೧೭ ಕ ೬೭೯.)

ಮೇಜಸ್ಟ್ರೇಟರ ಮೂಲಕವಾಗಿ ಹೆಂಡತಿ ಜೀವನಾಂಶವನ್ನು ಪಡೆವುದು. ಯಾರಾದರೂ ತನ್ನ ಹೆಂಡತಿಯನ್ನೂ ವಯಸ್ಸುಬಾರದ ಮಕ್ಕಳನ್ನೂ ಸಂರಕ್ಷಿಸದೆ ಬಿಟ್ಟಪಕ್ಷದಲ್ಲಿ ಆತನ ಹೆಂಡತಿ ಜೀವನಾಂಶಕ್ಕಾಗಿ ಸಿವಿಲ್‌ಕೋರ್ಟಿನಲ್ಲಿ ದಾವಾತರುವುದಕ್ಕೆ ಬದಲಾಗಿ ೧ ನೆಯ ಕ್ಲಾಸು ಮೇಜಸ್ಟ್ರೇಟರ ಬಳಿಯಲ್ಲಿ ಪಿಟಿಷನ್ (ಅರ್ಜಿ) ದಾಖಲುಮಾಡಿದಪಕ್ಷದಲ್ಲಿ ಅವರು ವಿಚಾರಮಾಡಿ ಗಂಡನ ಸ್ಥಿತಿಗಳನ್ನನುಸರಿಸಿ ತಿಂಗಳು ೧ಕ್ಕೆ ರೂ. ೫೦ ಮೀರದಂತೆ ಜೀವನಾಂಶ ಕೊಡುವಂತೆ ಹುಕುಂ ಮಾಡಲಾಪರು. ಅಂತಹ ಹುಕುಂ ಮೇರೆ ಗಂಡನು ಜೀವನಾಂಶ ಕೊಡದಿದ್ದರೆ ಆತನನ್ನು ಖೈದು ಶಿಕ್ಷೆಗೆ ಒಳಪಡಿಸಿ ಹಣ ಕೊಡಿಸುವರು. ಕೋರ್ಟು ಖರ್ಚುಗಳಿಗೆ ಕೈಯಲ್ಲಿ ಹಣವಿಲ್ಲದೆ

ಕಷ್ಟಪಡುತ್ತಿರುವ ಹೆಂಡತಿಯರು ಸುಲಭವಾಗಿ ಜೀವನಾಂಶವನ್ನು ಹೊಂದುವುದಕ್ಕೆ ಇದೇ ಒಳ್ಳೆಯುಪಾಯವು. ವ್ಯಭಿಚಾರವೃತ್ತಿಯಲ್ಲಿ ಸಂಚರಿಸುತ್ತಿರುವ ಹೆಂಡತಿಗೂ ನಿಷ್ಕಾರಣವಾಗಿ ಗಂಡನನ್ನು ಬಿಟ್ಟಿರುವ ಹೆಂಡತಿಗೂ ಗಂಡನ ಬಳಿ ಇರುವುದನ್ನು ನಿಷ್ಕಾರಣವಾಗಿ ನಿರಾಕರಿಸುವ ಹೆಂಡತಿಗೂ ಮೇಜಿಸ್ಟ್ರೇಟರು ಜೀವನಾಂಶ ಕೊಡಿಸಲಾರರು. ಮತ್ತು ಜೀವನಾಂಶಕ್ಕಾಗಿ ಮೇಜಿಸ್ಟ್ರೇಟರವರು ಉತ್ತರುವು ಮಾಡಿದ ಮೇಲೆ ಹೆಂಡತಿ ವ್ಯಭಿಚಾರಿಣಿಯಾಗಿ ಸಂಚರಿಸುತ್ತಿದ್ದಂತೆ ರುಜುಮಾಡಲ್ಪಟ್ಟರೆ ಸದರಿ ಉತ್ತರು ರದ್ದುಮಾಡಲ್ಪಡುವುದು. (ಕ್ರಿಮಿನಲ್ ಪ್ರೊಸೀಡರು ಕೋಡ್ದು ಸೆ|| ೪೮೮—೪೯೦.

ಮೇಜಿಸ್ಟ್ರೇಟರವರು ಎಂತಹ ವುತ್ತರುವು ಮಾಡಿದರೂ ಸಿವಿಲ್ ಕೋರ್ಟಿನಲ್ಲಿ ಕ್ರಮವಾಗಿ ದಾವಾತಂದು ಜೀವನಾಂಶವನು ಸ್ಥಾಪಿಸಿಕೊಳ್ಳುವುದಕ್ಕಾದರೂ ರದ್ದುಮಾಡುವುದಕ್ಕಾದರೂ ಯಾವ ಅಭ್ಯಂತರವೂ ಇರಲಾರದು.

ಇಟ್ಟುಕೊಂಡ ಸೂಳೆ ಕೂಡ ಮೇಲೆ ಹೇಳಿದ ಮೇರೆ ಮೇಜಿಸ್ಟ್ರೇಟರ ಬಳಿಯಲ್ಲಿ ಅರ್ಜಿ ಕೊಟ್ಟು ಮಕ್ಕಳಿಗಾಗಿ ಜೀವನಾಂಶವನ್ನು ಪಡೆಯಬಹುದು.

ಹೆಂಡತಿಗೆ ಜೀವನಾಧಾರವಿಲ್ಲದೆ ಯಾವದಾಸ್ತಿಯನ್ನೂ ದಾನಮಾಡುವಿಕೆ ಅಲ್ಲದೆ ಉಯಿಲುಮಾಡುವಿಕೆ.—ಹೆಂಡತಿಗೆ ಜೀವನಾಧಾರವಿಲ್ಲದ ಯಾವದಾಸ್ತಿಯನ್ನೂ ಗಂಡನು ತನ್ನ ಇಷ್ಟ ಬಂದವರಿಗೆ ದಾನರೂಪಕವಾಗಿಯೋ ಅಲ್ಲದೆ ಉಯಿಲು ಮೂಲಕವಾಗಿಯೋ ಕೊಟ್ಟು ಬಿಟ್ಟರೆ ಆಕೆಯು ಜೀವನಾಂಶದ ಹಕ್ಕಿಗೆ ಒಳಪಟ್ಟೇ ಸದರಿ ಆಸ್ತಿ ಅವರಿಗೆ ಸೇರುವುದು. (೭ ಕ ಹೈ ೨೨೫; ೭ ಮೂ ಇ ಅ ೬೬; ಇ ಲಾ ರಿ ೫ ಬೊಂ ೯೯; ಇ ಲಾ ರಿ ೨ ಅ ೩೧೫; ೧೭೬೦ ಸಂ|| ಬಂ ಸ ತೀ ೪೭೯; ಇ ಲಾ ರಿ ೭ ಬೊಂ ೯೭; ಇ ಲಾ ೧೨ ಮ ೨೬೭; ಇ ಲಾ ರಿ ೧೦ ಕ ೬೩೭; ಎಫ್ ಮೆಕ್ ೯೨.)

ಕುಟುಂಬದಾಸ್ತಿಯ ವಿಕ್ರಯವನ್ನು ಜೀವನಾಂಶದ ಹಕ್ಕು ಯಾವಾಗ ಬಾಧಿಸುವುದು.—ಜೀವನಾಂಶದ ಭಾರವು ಕುಟುಂಬದಾಸ್ತಿಗೆ ಸೇರಿರುವುದಾಹರೂ ಡಿಕ್ರೀಯಿಂದಾದರೂ ಒಡಂಬಡಿಕೆಯಿಂದಾದರೂ ಕುಟುಂಬದ ಆಸ್ತಿಯೊಡನೆ ಅದು ಸೇರಿಸಲ್ಪಡದೆ ಇದ್ದ ಪಕ್ಷದಲ್ಲಿ ಸದರಿ ಆಸ್ತಿಯನ್ನು ವಿಕ್ರಯವು ಅಡವು ಮುಂತಾದ ಮಾರ್ಗಗಳಿಂದ ಪರಾಧೀನಮಾಡುವುದಕ್ಕೆ ಆಕ್ಷೇಪವಿರಲಾರದು ಆದುದರಿಂದ ಅಂತಹ ಸಂದರ್ಭದಲ್ಲಿ ಪರಾಧೀನವನ್ನು ಹೊಂದಿದವನ ಸ್ವಾಧೀನದಲ್ಲಿ ಸದರಿ ಆಸ್ತಿ ಜೀವನಾಂಶದ ಹಕ್ಕಿಗೆ ಒಳಪಟ್ಟಿರಲಾರದು. (೮ ಕ ಹೈ ೨೨೫; ಇ ಲಾ ರಿ ೧ ಕ ೩೬೫; ೧೨ ಬೊಂ

ಹೈ ೬೯; ಇ ಲಾ ರಿ ೨ ಬೊಂ ೮೯೪, ೫೨೪; ಇ ಲಾ ರಿ ೧೨ ಮ ೨೮೫; ಇ ಲಾ ರಿ ೩೧ ಕ ೧೦೨; ಇ ಲಾ ರಿ ೪ ಅ ೨೯೬.) ಡಿಕ್ರೀ ಮುಂತಾದವುಗಳಿಂದ ಜೀವನಾಂಶದ ಹಕ್ಕು ಕುಟುಂಬದಾಸ್ತಿಯೊಡನೆ ಜೊತೆಗೊಳಿಸಲ್ಪಟ್ಟರುವಾಗ ಸದರಿ ಆಸ್ತಿಯನ್ನು ಕ್ರಯಕ್ಕೆ ತೆಗೆದುಕೊಳ್ಳುವವನು ಜೀವನಾಂಶದ ಹಕ್ಕಿಗೆ ಒಳಪಟ್ಟೇ ತೆಗೆದುಕೊಳ್ಳುವನು. (೬ ಸ ೨೫೩; ಇ ಲಾ ರಿ ೨ ಅ ೧೬೨; ೪ ಬೊಂ ಹೈ ೭೩.)

ಜೀವನಾಂಶವನ್ನು ಕೊಡುವದಕ್ಕೆ ಮೊದಲು ಸಾಲಗಳನ್ನು ತೀರಿಸುವುದು ಮುಖ್ಯವಾಗಿರುವುದರಿಂದ ಅವಕ್ಕಾಗಿ ಯಾವದಾಸ್ತಿಯನ್ನು ವಿಕ್ರಯಿಸಿದರೂ ಅದು ಜೀವನಾಂಶಗಳಿಗೆ ಒಳಪಟ್ಟಿರದು. (ಇ ಲಾ ರಿ ೨ ಮ ೧೩೬; ಇ ಲಾ ರಿ ೧ ಕ ೩೬೫ ೮೭೦; ಇ ಲಾ ರಿ ೨ ಬೊಂ ೪೯೮; ಇ ಲಾ ರಿ ೮ ಅ ೨೯೬; ಇ ಲಾ ರಿ ೫ ಅ ೩೬೭.)

ಜೀವನಾಂಶವನ್ನು ಭಂಗಪಡಿಸುವುದಕ್ಕಾಗಿ ವಿಕ್ರಯವೇ ಮುಂತಾದ್ದು.—ಜೀವನಾಂಶಗಳ ಭಾರವನ್ನು ತಪ್ಪಿಸಬೇಕೆಂಬ ಉದ್ದೇಶದಿಂದ ಕುಟುಂಬದ ಆಸ್ತಿ ವಿಕ್ರಯಿಸಲ್ಪಟ್ಟಾಗ ಅಂತಹ ಉದ್ದೇಶವನ್ನು ತಿಳಿದಿದ್ದು ಯಾರಾದರೂ ಅದನ್ನು ತೆಗೆದುಕೊಂಡ ಪಕ್ಷದಲ್ಲಿ ಸದರಿ ಜೀವನಾಂಶಗಳ ಭಾರಕ್ಕೆ ಒಳಪಟ್ಟೇ ಅದು ಅವರಿಗೆ ಸೇರುವುದು. ಮೇಲೆ ಹೇಳಲ್ಪಟ್ಟ ಉದ್ದೇಶವನ್ನರಿಯದೆ ಕೊಂಡವನು, ಜೀವನಾಂಶಗಳೊಡನೆ ನಿಬಿತ್ತವಿಲ್ಲದೆ ಸದರಿ ಆಸ್ತಿಯನ್ನು ಹೊಂದುವನು. (ಇ ಲಾ ರಿ ೨ ಬೊಂ ೪೯೪, ೫೨೮ ಇ ಲಾ ರಿ ೩ ಮ ೧೭೪; ಇ ಲಾ ರಿ ೬ ಮ ೮೩.) ಮೇಲೆ ಹೇಳಲ್ಪಟ್ಟ ಉದ್ದೇಶವನ್ನು ತಿಳಿದಿದ್ದರೂ ತಿಳಿಯದಿದ್ದರೂ ಸರಿಯೆ ಕುಟುಂಬದ ಆಸ್ತಿಯನ್ನು ದಾನವಾಗಿ ಹೊಂದಿದವನು ಅದರಿಂದ ನಡೆಯಿಸಲ್ಪಡತಕ್ಕ ಜೀವನಾಂಶಗಳ ಭಾರದೊಡನೆಯೇ ಅದನ್ನು ತೆಗದುಕೊಳ್ಳುವನು. (೭ ಕ ಹೈ ೨೮೮.) ೧೮೮೨ನೆಯ ಸಂ॥ ೪ ನೆಂ॥ ಟ್ರಾನ್ಸುಫರ್ ಆಫ್ ಪ್ರಾಪರ್ಟಿ ಆಕ್ಟು ೩೯ ಸೆ॥ ನೋಡಬೇಕು.

ವಿ ಭಾ ಗ ವು.

ವಿಭಾಗವು.—ಸಮುಷ್ಟಿ ಕುಟುಂಬದ ಭಾಗಸ್ಥರು ಸಮುಷ್ಟಿಯಾಸ್ತಿಯಲ್ಲಿ ತಮ್ಮತಮ್ಮ ಪಾಲು ಭಾಗಗಳನ್ನು ಹಂಚಿಕೊಂಡು ಬೇರೆಬೇರೆಯಾಗಬಹುದೆಂದು ಹಿಂದೆ ಹೇಳಿದ್ದೇವಷ್ಟೆ. ಅಂತಹ ಬೇರೆ ಬೀಳುವಿಕೆ ವಿಭಾಗವೆನಿಸಲ್ಪಡುವುದು ಈ ಪ್ರಕರಣದಲ್ಲಿ ಯಾವ ಯಾವ ಸೊತ್ತುಗಳು ವಿ

ಭಾಗಯೋಗ್ಯಗಳೋ ಯಾವಯಾವ ಸೊತ್ತುಗಳು ವಿಭಾಗಯೋಗ್ಯಗಳಲ್ಲವೋ, ಯಾರಾರಿಗೆ ವಿಭಾಗದ ಹಕ್ಕುಂಟೋ, ಯಾವ ವಿಧವಾಗಿ ವಿಭಾಗವನ್ನು ನಡೆಯಿಸಿಕೊಳ್ಳಬಹುದೋ, ಯಾವಯಾವಂಶಗಳು ವಿಭಾಗವನ್ನು ಸ್ಥಾಪಿಸುವುದಕ್ಕೆ ಸಾಕಾಗಿರುವುದೋ ಇವೇ ಮುಂತಾದ ವಿಷಯಗಳು ವಿವರಿಸಲ್ಪಡುವುದು.

ಯಾವ ಸೊತ್ತುಗಳು ದಿಭಾಗಯೋಗ್ಯಗಳು?—ಪಿತ್ರಾರ್ಜಿತ ಸ್ವತ್ವವು ಎಂದರೆ ತಂದೆ, ತಾತ, ಮುತ್ತಾತ ಇವರ ಬಳಿಯಿಂದ ವಾರಸು ಹಕ್ಕಿನಿಂದ ಅಲ್ಲದೆ ಉಯಿಲಿನಿಂದ ಅಲ್ಲದೆ ದಾನರೂಪಕವಾಗಿ ಬಂದ ಸೊತ್ತು ಮತ್ತು ಸಮಷ್ಟಿ ಭಾಗಸ್ಥರ ಜಾಯಿಂಟು ಹಕ್ಕುಂಟಾಗಿರುವ ಇತರ ವಿಧವಾದ ಸೊತ್ತು ಇವು ಮಾತ್ರವೇ ವಿಭಾಗ ಯೋಗ್ಯಗಳು. ಮಿತಾಕ್ಷರ ಧರ್ಮಶಾಸ್ತ್ರಪ್ರಕಾರವು ಪಿತ್ರಾರ್ಜಿತದಲ್ಲಿ ಮೂರು ತರಗಳವರೆಗೂ ಇರುವ ಪುತ್ರಸಂತತಿಯುವರಿಗೆ ಹಕ್ಕು ವ್ಯಾಪಿಸುವುದೆಂದು ಇದುವರೆಗೇ ಹೇಳಿದ್ದೆವು. (೧೩೯ ನೆಯ ಪೇರಾ)

ಯಾವ ಸೊತ್ತುಗಳು ಅವಿಭಾಜ್ಯಗಳು ? ಸ್ವಾರ್ಜಿತವು.—ಸ್ವಾರ್ಜಿತದ ಸೊತ್ತುಗಳು ಎಂದರೆ ಒಬ್ಬನು ತನ್ನ ಸ್ವಪ್ರಯೋಜಕತ್ವದಿಂದ ಸಂಪಾದಿಸಿದ ಅಲ್ಲದೆ ತಂದೆ, ತಾತ, ಮುತ್ತಾತಂದಿರಿಂದಲ್ಲದೆ ತಾಯಿ ತಾಯತಾಯಿ ತಾಯತಂದೆ, ಅಣ್ಣತಮ್ಮಂದಿರು, ಚಿಕ್ಕಪ್ಪ ದೊಡ್ಡಪ್ಪಂದಿರು, ಇವರ ಮಕ್ಕಳು, ಈ ಮೊದಲಾದವರ ಬಳಿಯಿಂದ ಹೊಂದಿದ ಸೊತ್ತುಗಳು ವಿಭಾಗಯೋಗ್ಯಗಳಲ್ಲವು. ಅವುಗಳಲ್ಲಿ ಪುತ್ರಸಂತತಿಯುವರಿಗೆ ಎಂತಹ ಹಕ್ಕೂ ಉಂಟಾಗಲಾರದು. (೧೩೯ ನೆಯ ಪೇರಾ ನೋಡಬೇಕು.)

ಪುರಾತನ ಜಮೀಂದಾರಿ.—ರಾಜ್ಯವಾಗಿ ಭಾವಿಸಲ್ಪಟ್ಟು ಜೇಷ್ಟಪುತ್ರನು ಮಾತ್ರವೇ ಪಾಲಿಸುವಂತಹ ಬಳಿಕೆ ಏರ್ಪಟ್ಟಿರುವ ಪುರಾತನ ಜಮೀಂದಾರಿ ಆಸ್ತಿ ವಿಭಾಗ ಯೋಗ್ಯವಲ್ಲವು. ಮತ್ತು ಅಂತಹ ಅವಿಭಾಜ್ಯ ಜಮೀಂದಾರಿ ಆಸ್ತಿಯಿಂದ ಜಮೀಂದಾರನು ಮಾಡುವಂತಹ ಆದಾಯವೂ, ಸದರಿ ಆದಾಯದಿಂದ ಆತನು ಸಂಪಾದಿಸುವ ಆಸ್ತಿಯೂ ಆತನ ಸ್ವಾಧೀನದಲ್ಲಿರುವವರೆಗೂ ಅವಿಭಾಜ್ಯವಾಗಿಯೇ ಭಾವಿಸಲ್ಪಡುವುದು. ಆದರೆ ಆತನ ನಂತರ ಪಾಲಕನ ಸ್ವಾಧೀನದಲ್ಲಿ ಸದರಿ ಆದಾಯವು ವಗೈರೆಗಳು ಪಿತ್ರಾರ್ಜಿತವಾಗಿ ಭಾವಿಸಲ್ಪಟ್ಟು ವಿಭಾಗ ಯೋಗ್ಯಗಳಾಗುವುವು (೫ ವಗ್ರೈ ೩೧; ೭ ಮೂ ಇ ಅ ೪೭೬.)

ಸರಕಾರದವರಿಂದ ಕೊಡಲ್ಪಟ್ಟ ಆಸ್ತಿ.—ಪಟೇಲರು, ಶಾನುಭಾಗರು ಮಣೆಗಾರರು, ಮೊದಲಾದ ಸರ್ಕಾರಿ ನೌಕರರಿಗೆ ಅವರ ಉದ್ಯೋಗಸಂ

ಬಂಧವಾಗಿ ಏರ್ಪಡಿಸಲ್ಪಟ್ಟಿರುವ ಇನಾಮು ಭೂಮಿಗಳು ಮುಂತಾದವುಗಳು ವಿಭಾಗ ಯೋಗ್ಯಗಳಲ್ಲವೆಂದು ಮದರಾಸು ಕಲಕತ್ತಾ ಹೈಕೋರ್ಟುಗಳಲ್ಲಿ ತೀರ್ಮಾನವಾಡಲ್ಪಟ್ಟಿದೆ. (೬ ಬಂ ಸ ತೀ ೧೬೯; ೬ ಮೂ ಇ ಅ ೧೨೫; ೨ ಮ ತೀ ೮೫; ಇ ಲಾ ರಿ ೭ ಮ ೨೩೬; ಆದರೆ ಬೊಂಬಯಿ ಪ್ರಸಿಡೆನ್ಸಿಯಲ್ಲಿ ಪಾಟೇಲು, ದೇಶಮುಖಿ, ದೇಶಪಾಂಡ್ಯ, ಮುಂತಾದ ಗ್ರಾಮಾಧಿಕಾರಿಗಳಿಗೆ ಸರ್ಕಾರದವರಿಂದ ಏರ್ಪಡಿಸಲ್ಪಟ್ಟಿರುವ ಇನಾಮು ಭೂಮಿಗಳು ಮುಂತಾದವು ವಿಭಾಗ ಯೋಗ್ಯಗಳಾಗಿ ಕೆಲವು ಕೇಸುಗಳಲ್ಲಿ ತೀರ್ಮಾನಿಸಲ್ಪಟ್ಟಿವು. (೧೦ ಬೊಂ ಹೈ ೨೨೮; ಇ ಲಾ ರಿ ೪ ಬೊಂ ೪೯೪; ಇ ಲಾ ರಿ ೧೦ ಬೊಂ ೩೨೨, ೫೯೮.)

ಬಿರುದುಗಳ ನಿಮಿತ್ತವಾಗಿ ಏರ್ಪಡಿಸಲ್ಪಟ್ಟ ಆಸ್ತಿ.—ಬಿರುದುಗಳು ಮುಂತಾದ ರಾಜಸನ್ಮಾನ ಗೌರವಗಳನ್ನು ಕಾಪಾಡುವುದಕ್ಕಾಗಿ ಸರಕಾರದವರಿಂದಾದರೂ ಸರಕಾರದವರ ಮೂಲಕವಾಗಿಯಾದರೂ ಏರ್ಪಾಟುಮಾಡಲ್ಪಟ್ಟಿರುವ ಆಸ್ತಿ ವಿಭಾಗ ಯೋಗ್ಯವಲ್ಲವು. (೬ ಮೂ ಇ ಅ ೪೨೬; ಇ ಲಾ ರಿ ೭ ಮ ೧೯೧.)

ಮಗನು, ಮುಮ್ಮಗನು, ಮರಿಮುಮ್ಮಗನು, ಇವರಿಗಿರುವ ವಿಭಾಗದ ಹಕ್ಕು ಮಿತಾಕ್ಷರ ಸಂಪ್ರದಾಯವು.—ಮಿತಾಕ್ಷರ ಧರ್ಮಶಾಸ್ತ್ರದ ಪ್ರಕಾರವಾಗಿ ತಂದೆಯು ಸ್ಥಿರ ಚರ ಪಿತ್ರಾರ್ಜಿತ ಸ್ವತ್ತುಗಳಲ್ಲಿ ಕುಮಾರರಿಗೆ ಹಕ್ಕು ಏರ್ಪಡುವುದರಿಂದ ಸದರಿ ಸ್ವತ್ತುಗಳನ್ನು ವಿಭಾಗಿಸಬೇಕೆಂದು ಬಯಸುವುದಕ್ಕೆ ಅವರು ಸ್ವತಂತ್ರರಾಗಿರುವರು. ಕೊಡದೆಂದು ಅಕ್ಷೇಪಿಸುವುದಕ್ಕೆ ತಂದೆಗೆ ಹಕ್ಕಿಲ್ಲವು. ಕುಮಾರನಿಲ್ಲದಾಗ ಮುಮ್ಮಗನೂ ಮುಮ್ಮಗನಿಲ್ಲದಾಗ ಮರಿಮಗನೂ, ಪಿತ್ರಾರ್ಜಿತ ಸ್ವತ್ತುವಿಷಯವಾಗಿ ವಿಭಾಗವನ್ನು ಬಯಸಬಹುದು. (೧ ಮ ಹೈ ೭೭, ೧೨ ಕ ಹೈ ೩೭೩; ಇ ಲಾ ರಿ ೧ಅ ೧೫೯ ಇ ಲಾ ರಿ ೫ ಅ ೪೩೦; ವೆ ಬು ೩೬೫, ೩೭೦. ೩೭೩; ೧೦ ಬೊಂ ಹೈ ೪೬೩ ಇ ಲಾ ರಿ ೧೦ ಬೊಂ ೫೨೯, ೫೭೮; ಇ ಲಾ ರಿ ೧೨ ಬೊಂ ೨೮೦, ೨೯೪। ತಂದೆಯು ಸ್ವಾರ್ಜಿತ ಸೊತ್ತುವಿಷಯುಕವಾಗಿ ವಿಭಾಗವನ್ನು ಬಯಸುವುದಕ್ಕೆ ಕುಮಾರನು ಮುಂತಾದವರಿಗೆ ಹಕ್ಕಿಲ್ಲವು.

ಕುಮಾರರಿಗೆ ಇಷ್ಟವಿದ್ದರೂ ಇಲ್ಲವಿಲ್ಲದಿದ್ದರೂ ಸರಿಯೆ ಪಿತ್ರಾರ್ಜಿತಸೊತ್ತು ವಿಭಾಗವಿಷಯುಕವಾಗಿ ಅವರನ್ನು ತಂದೆ ಬಲವಂತಮಾಡಬಹುದು, ಅವರು ಸಮ್ಮತಿಸದೆಹೋದರೂ ಆತನು ವಿಭಾಗ ಮಾಡಿಬಿಡಬಹುದು. (ಇ. ಲಾ ರಿ ೨ ಮ ೩೧೭; ೩೨೧.)

ವಿಭಾಗವಿಷಯವಾದ ಹಕ್ಕು ಮಗನು ಮುಮ್ಮಗನು ಮರಿಮಗನು—ಇವರವರೆಗೆ ಮಾತ್ರವೇ ವ್ಯಾಪಿಸುವುದು. ಮೂರುತರಗಳು ದಾಂಟಿದವನಾ

ದುವರಿಂದ ಮರಿಮಗನ ಮಗನಿಗೆ ಸದರಿ ಹಕ್ಕಿಲ್ಲವು. (ಹಿಂದೆ ೧೩೫, ೧೩೩, ೧೩೭ ಪ್ಯಾರಾಗಳನ್ನು ನೋಡಬೇಕು.) ಮತ್ತು ಮಗನು ಬದುಕಿರುವಾಗ ಮುಮ್ಮಗನಾದರೂ, ಮುಮ್ಮಗನು ಬದುಕಿರುವಾಗ ಮರಿಮಗನಾದರೂ, ಆತನ ತಂದೆಯಿಷ್ಟಕ್ಕೆ ವಿರೋಧವಾಗಿ ವಿಭಾಗವನ್ನು ಬಯಸುವುದಕ್ಕೆ ಅಲ್ಲದೆ ವಿಭಾಗ ನಿಮಿತ್ತವಾಗಿ ತಂದೆಯನ್ನು ಬಲವಂತಮಾಡುವುದಕ್ಕೆ ಹಕ್ಕುಂಟಾಗಿರಲಾರನು. (ಇ ಲಾ ರಿ ೬ ಅ. ೫೭೮; ಇ ಲಾ ರಿ ೧೬ ಬೊಂ ೨೯; ಆದರೆ ಇ ಲಾ ರಿ ೫ ಅ ೪೩೦.)

ದಾಯಭಾವು.— ಬಂಗಾಳಾದೇಶದಲ್ಲಿ ತಂದೆ ಬದುಕಿರುವಾಗ ಆತನ ಸ್ವಾರ್ಜಿತ ಪಿತ್ರಾರ್ಜಿತ ಸೊತ್ತುಗಳಲ್ಲಿ ಕುಮಾರರಿಗೆ ಯಾವವಿಧವಾದ ಹಕ್ಕೂ ವುಂಟಾಗಲಾರದು. ಆದುದರಿಂದ ಆತನ ಜೀವಿತಕಾಲದಲ್ಲಿ ವಿಭಾಗವನ್ನು ಬಯಸುವುದಕ್ಕೆ ಕುಮಾರರಿಗೆ ಹಕ್ಕಿಲ್ಲವು. ಆದರೆ ತಂದೆ ಸತ್ತಮೇಲೆ ಮಕ್ಕಳು ಚಿಕ್ಕಪ್ಪ ದೊಡ್ಡಪ್ಪಂದಿರನ್ನು ವಿಭಾಗಕ್ಕಾಗಿ ನಿರ್ಬಂಧಿಸಬಹುದು. (೧೩೮ ನೆಯ ಪೇರಾ ನೋಡು)

ದಾಸೀಪುತ್ರರ ಹಕ್ಕು—ಬ್ರಹ್ಮ ಕ್ಷತ್ರಿಯ ವೈಶ್ಯ ಜಾತಿಗಳಲ್ಲಿ ದಾಸೀಪುತ್ರರಿಗೆ (ಸೂಳೆಯ ಮಕ್ಕಳಿಗೆ) ವಿಭಾಗವನ್ನು ಬಯಸುವಂತಹ ಹಕ್ಕಾದರೂ ವಿಭಾಗಕಾಲದಲ್ಲಿ ಭಾಗವನ್ನೂ ಹೊಂದುವ ಹಕ್ಕಾದರೂ ಇಲ್ಲವು. (೭ ಮೂ ಇ ಅ ೧೮; ೨ ಮ ಹೈ ೩೭೯; ೧೩ ಮೂ ಇ ಅ ೮೯೭.) ಶೂದ್ರರಲ್ಲಿಯೂ ದಾಸೀಪುತ್ರರಿಗೆ ತಂದೆಯನ್ನಾದರೂ ತಂದೆ ಸತ್ತುಹೋದರೆ ಚಿಕ್ಕಪ್ಪ ದೊಡ್ಡಪ್ಪಂದಿರನ್ನಾದರೂ ಅವರ ಮಕ್ಕಳನ್ನಾದರೂ ವಿಭಾಗ ನಿಮಿತ್ತವಾಗಿ ನಿರ್ಬಂಧಿಸತಕ್ಕ ಹಕ್ಕಿಲ್ಲವು. ಆದರೆ ಔರಸ ಸೋದರರನ್ನು ವಿಭಾಗ ನಿಮಿತ್ತವಾಗಿ ಅವರು ಬಲವಂತ ಮಾಡಬಹುದು. (ಇ ಲಾ ರಿ ೪ ಬೊಂ ೮೪, ೮೫; ಇ ಲಾ ರಿ ೧೧ ಕ ೭೧೪; ಇ ಲಾ ರಿ ೧೨ ಮ ೪೦೧; ಇ ಲಾ ರಿ ೭ ಮ ೪೦೭; ಇ ಲಾ ರಿ ೮ ಮ ೫೫೭)

ತಂದೆ ಸಮ್ಮತಿಸಿ ವಿಭಾಗ ಮಾಡುವಾಗ, ದಾಸೀಪುತ್ರರಿಗೆ ಔರಸಪುತ್ರರೊಡನೆ ಸಮಾನವಾಗಿರುವವರೆಗೂ ಆತನ ಯಿಷ್ಟಬಂದಷ್ಟು ಭಾಗವನ್ನು ಕೊಡಬಹುದು. ತಂದೆ ಸತ್ತುಹೋದಮೇಲೆ ನಡೆಯುವ ವಿಭಾಗದಲ್ಲಿ ಔರಸಪುತ್ರನಿಗೆ ಕೊಡತಕ್ಕ ಭಾಗದಲ್ಲಿ ಸಮಭಾಗವು ದಾಸೀಪುತ್ರನಿಗೆಕೂಡ ಬೇಕೆಂದೂ ಮಿತಾಕ್ಷರದಲ್ಲಿ ಹೇಳಲ್ಪಟ್ಟದೆ. ಔರಸಪುತ್ರರೊಡನಲ್ಲದೆ ಇತರರೊಡನೆ ವಿಭಾಗವು ನಡೆದಾಗ, ದಾಸೀಪುತ್ರನು ಮಿಕ್ಕ ಭಾಗಸ್ಥರೊಡನೆ ಸಮಾನಭಾಗವನ್ನು ಹೊಂದುವನೆಂದು ದಾಯಭಾಗ ದಾಯಕ್ರಮಸಂಗ್ರಹ ಗ್ರಂಥಗಳಲ್ಲಿ ಹೇಳಲ್ಪಟ್ಟದೆ ಈ ವಿಷಯವು ಮುಂದಣ ಪ್ರಕರಣದಲ್ಲಿ ಸವಿಸ್ತಾರವಾಗಿ ವಿವರಿಸಲ್ಪಡುವುದು

ಜಾತಿಭ್ರಷ್ಟನ ಹಕ್ಕು.—ಜಾತಿಭ್ರಷ್ಟನು ಮೃತಪ್ರಾಯನಾಗಿ ಭಾವಿಸಲ್ಪಡುವುದರಿಂದ, ಆತನಿಗೆ ವಿಭಾಗದ ಹಕ್ಕು ತಪ್ಪಿಹೋಗುವುದೆಂತು ಹಿಂದೂ ಧರ್ಮಶಾಸ್ತ್ರಗಳಲ್ಲಿ ಹೇಳಲ್ಪಟ್ಟಿದೆ. ಆದರೆ, ಜಾತಿಭ್ರಷ್ಟತೆಯಿಂದ ಆಸ್ತಿ ಹಕ್ಕುಗಳು ನಶಿಸಲಾರವೆಂದು ೧೮೫೦ ಸಂ॥ ೨೧ ನಂ॥ ನಿಬಂಧನೆ ಯೇರ್ಪಾಟು ಮಾಡಲ್ಪಟ್ಟಿರುವುದರಿಂದ, ಜಾತಿಭ್ರಷ್ಟನು ವಿಭಾಗವನ್ನು ಬಯಸಬಹುದು.

ವಿಭಾಗಾನಂತರದಲ್ಲಿ ಹುಟ್ಟಿದ ಮಗನ ಹಕ್ಕು.—ತಂದೆಯೂ ಮಗನು ವಿಭಾಗವನ್ನು ಮಾಡಿಕೊಳ್ಳುವ ಕಾಲದಲ್ಲಿ, ತಾಯಿ ಗರ್ಭಿಣಿಯಾಗಿದ್ದಪಕ್ಷದಲ್ಲಿ ಆಕೆ ಹೆರುವವರೆಗೂ ವಿಭಾಗವನ್ನು ಮಾಡಿಕೊಳ್ಳದೆ ನಿಲ್ಲಿಸಬೇಕೆಂದೂ ಗರ್ಭಿಣಿಯೆಂದರಿಯದೆ ವಿಭಾಗ ಮಾಡಿಕೊಂಡಮೇಲೆ ಮಗನು ಹುಟ್ಟಿದರೆ ಮೊದಲ ವಿಭಾಗವನ್ನು ರದ್ದುಮಾಡಿ ಮರಳಿ ವಿಭಾಗವನ್ನು ಮಾಡಿಕೊಳ್ಳಬೇಕೆಂದೂ ಮಿತಾಕ್ಷರ ದಾಯಭಾಗೆ ವೀರ ಮಿತ್ರೋದಯಾದಿ ಗ್ರಂಥಗಳಲ್ಲಿ ಹೇಳಲ್ಪಟ್ಟಿದೆ. ತೀರ್ಮಾನಗಳೂ ಅದೇ ಮೇರೆ ಇದೆ. (೪ ಮ ಹೈ ೩೦೭; ೨ ಕ ಹೈ ೧೨೮—೧೨೧.)

ತಂದೆಗೂ ಕುಮಾರರಿಗೂ ವಿಭಾಗವು ನಡೆದಮೇಲೆ ಗರ್ಭಗತನಾಗಿ ಜನ್ಮಿಸುವ ಪುತ್ರನು, ತಂದೆಯಪಾಲು ಭಾಗದಲ್ಲಿ ಮಾತ್ರವೇ ಹಕ್ಕುಂಟಾಗಿರುವನು (೩ ಲಾ ರಿ ೪ ಅ ೪೨೭.) ತಂದೆಯಪಾಲಿಗೆ ಎಷ್ಟು ಮಾತ್ರವೂ ಇರಿಸಿಕೊಳ್ಳಲ್ಪಡದೆ ಯಾವದಾಸ್ತಿಯೂ ಕುಮಾರರಿಗೆ ಹಂಚಿಡಲ್ಪಟ್ಟಪಕ್ಷದಲ್ಲಿ ಇವರೆಲ್ಲರೂ ತಮ್ಮತಮ್ಮ ಭಾಗಗಳಿಂದ ಕೊಂಚಕೊಂಚ ಹೊರತೆಗೆದು ಹೊಸದಾಗಿ ಹುಟ್ಟಿದವರಿಗೆ ಭಾಗವನ್ನು ಏರ್ಪಾಟು ಮಾಡಬೇಕೆಂದು ಹೇಳಲ್ಪಟ್ಟಿದೆ (೧ ಡಬ್ಲ್ಯುಯು ಮಕ' ೪೭.)

ಮೈನರುಗಳ ಹಕ್ಕು— ಮೈನರುಗಳಿಂದಾದರೂ ಮೈನರು ತರಫಿನಲ್ಲಾದರೂ ವಿಭಾಗಕ್ಕಾಗಿ ದಾವಾ ತರಲ್ಪಡಕೂಡದು ಆದರೆ ಸಮಷ್ಟಿಯಾಸ್ತಿಯಲ್ಲಿ ಅವರಿಗಿರುವ ಭಾಗಕ್ಕೆ ಅಪಾಯ ಸಂಭವಿಸುವಹಾಗಿದ್ದಪಕ್ಷದಲ್ಲಿ ಸದರಿ ಮೈನರುಗಳ ಶ್ರೇಯಸ್ಸು ಬಯಸುವವರು ಅವರಿಗೆ ಗಾರ್ಡಿಯನ್‌ಗಳಾಗಿ ಏರ್ಪಟ್ಟು ದಾವಾತಂದು ಅವರ ಭಾಗಗಳನ್ನು ಭದ್ರಪಡಿಸಬಹುದು. (೧ ಮ ಶೈ ೧೦೫; ೩ ಮ ಹೈ ೬೯, ೯೪; ೫ ಮ ಹೈ ೧೯೩; ೩ ಲಾ ರಿ ೮ ಕ ೫೩೭; ೩ ಲಾ ರಿ ೧೨ ಮ ೪೦೧.)


ಸಮಷ್ಟಿ ಕುಟುಂಬದಲ್ಲಿ ಒಬ್ಬ ಭಾಗಸ್ಥನು ಮೈನರಾಗಿದ್ದುದರಿಂದ ಮಿಕ್ಕವರು ವಿಭಾಗವನ್ನು ಬಯಸುವುದಕ್ಕಾದರೂ ನಡೆಯಿಸಿಕೊಳ್ಳುವುದಕ್ಕಾದರೂ ಅಭ್ಯಂತರವಿಲ್ಲವು. (೭ ಮ ಹೈ ೧೮೨.) ಆದರೆ ಅಂತಹ ವಿಭಾಗದಲ್ಲಿ ಸದರಿ ಮೈನರು ಕಡೆಯಭಾಗವನ್ನು ಕ್ರಮವಾಗಿ ಏರ್ಪಾಟುಮಾಡಿ

ಆತನಿಗೆ ಯುಕ್ತವಯಸ್ಸು ಬರುವವರೆಗೂ ಅದನ್ನು ಭದ್ರಪಾಗಿ ಕಾಪಾಡಬೇಕು. (೮ ಕ ಹೈ ೩೬೩) ಸದರಿ ಭಾಗವನ್ನು ಏಪ್ಪಡಿಸುವುದರಲ್ಲಿ ಅನ್ಯಾಯವಾದರೂ ದಗೆಯಾದರೂ ನಡೆದಂತೆ ಕಂಡುಬಂದಾಗಲೂ, ಅದು ನ್ಯಾಯವಾಗಿ ಏರ್ಪಡಿಸಲ್ಪಟ್ಟಿತೋ ಇಲ್ಲವೋ ಈ ವಿಷಯವನ್ನು ತಿಳಿದುಕೊಳ್ಳುವುದಕ್ಕೆ ಆವಶ್ಯಕವಾದ ಲೆಕ್ಕಗಳು ವಗೈರೆ ಇಲ್ಲದೆ ನಡೆಯಿಸಲ್ಪಟ್ಟಾಗಲೂ ಸದರಿ ವೈನರು ಯುಕ್ತವಯಸ್ಸು ಬಂದಮೇಲೆ ದಾವಾತಂದು ವಿಭಾಗವನ್ನು ರದ್ದುಮಾಡಬಹುದು. (೨ ಮಹೈ ೧೮೨; ೪ ಬೊಂಬಾಯಿಹೈ ೧೫೯; ೮ ಕಹೈ ೩೬೩, ೨೩ ಸ ೬೮.)

ದೇಶಾಂತರ ಗತನಾದ ಭಾಗಸ್ಥನ ಹಕ್ಕು— ಸಮುಷ್ಟಿಕುಟುಂಬದ ಭಾಗಸ್ಥರಲ್ಲಿ ಒಬ್ಬನು ದೇಶಾಂತರಗತನಾಗಿದ್ದ ಪಕ್ಷದಲ್ಲಿ ಆತನಪಾಲುಭಾಗವನ್ನು ನ್ಯಾಯವಾಗಿ ಏರ್ಪಡಿಸಿ ಭದ್ರಪಡಿಸಿ, ಮಿಕ್ಕವರು ವಿಭಾಗವನ್ನು ಮಾಡಿಕೊಳ್ಳಬಹುದು (೧ ಸ್ಟ್ರೇಂ. ೨೦೬; ೨ ಸ್ಟ್ರೇಂ. ೩೪೧.) ದೇಶಾಂತರಗತನಾದ ಭಾಗಸ್ಥನ ಹಕ್ಕು ಆತನ ಸಂತತಿಯುವರಲ್ಲಿ ಏಳುತರಗಳವರೆಗೂ ಸಲ್ಲದೆಂದು ಧರ್ಮಶಾಸ್ತ್ರಗಳಲ್ಲಿ ಹೇಳಲ್ಪಟ್ಟಿದೆ. ಆದರೆ ಈಗ ೧೮೭೭ ಸಂ॥ ೧೫ ನಂ॥ ಲಿಮಿಟೇಷನ್ ಆಕ್ಟು ಪ್ರಕಾರವಾಗಿ ೧೨ ಸಂ॥ ಗಳೊಳಗೆ ದಾವಾ ತೆಗೆದುಕೊಂಡುಬರಬೇಕು. (೨ ನೆಯ ಪಟ್ಟೆ ೧೨೩, ೧೨೭, ೧೪೪.) ಹಾಗೆಯೇ ಒಬ್ಬಭಾಗಸ್ಥನಿಗೆ ಭಾಗಕೊಡ ಯಾವದಾಸ್ತಿಯನ್ನೂ ಮಿಕ್ಕಭಾಗಸ್ಥರೇ ಹಂಚಿಕೊಂಡಪಕ್ಷದಲ್ಲಿ ಹಾಗೆ ತಳ್ಳಿಹಾಕಲ್ಪಟ್ಟ ಭಾಗಸ್ಥನು ಸದರಿ ವಿಭಾಗದ ಸಂಗತಿ ಆತನಿಗೆ ತಿಳಿದದ್ದುಮೊದಲು ೧೨ ಸಂ॥ ಗಳೊಳಗೆ ತನ್ನಭಾಗಕ್ಕಾಗಿ ದಾವ ತರಬೇಕು (ಆರ್ಟಿಕಲ್ ೧೨೭; ೩ ಲಾ ರಿ ೩ ಕ ೨೨೮.)

ವ್ಯಾಧಿಗ್ರಸ್ತರ ಹಕ್ಕು.— ಕುಷ್ಠರೋಗಿಗಳು, ನಪುಂಸಕರು, ಹುಚ್ಚರು ಹುಟ್ಟಿದ್ದುಮೊದಲು ಅನಿವಾರ್ಯವಾದ ಕುರುಡುತನವಾದರೂ ಮೂಗತನವಾದರೂ ಕಿವುಡಾದರೂ ಉಂಟಾಗಿರುವವರು, ಕಾಲುಕೈಯಿಲ್ಲದ ವಿಕಲಾಂಗರು, ಸನ್ಯಾಸಾಶ್ರಮವನ್ನವಲಂಬಿಸಿದ ಲೋಕವ್ಯವಹಾರವನ್ನು ವಿಸರ್ಜಿಸಿದವರು- ಇಂತಹವರು ಜೀವಿಸಿದ್ದರೂ ಮೃತತುಲ್ಯರಾಗಿ ಭಾವಿಸಲ್ಪಡುವುದರಿಂದ ವಿಭಾಗದ ಹಕ್ಕುಂಟಾಗಿರರು. ಇತರರು ವಿಭಾಗ ಮಾಡಿಕೊಂಡರೆ, ಇವರಿಗೆ ಭಾಗ ಕೊಡಲ್ಪಡತಕ್ಕ ಕೆಲಸವಿಲ್ಲ, ಅವರ ಜೀವನಾಂಶವನ್ನು ಮಾತ್ರ ಏರ್ಪಾಟು ಮಾಡಬೇಕು. (೩ ಲಾ ರಿ ೮ ಕ. ೧೪೯) ಮೇಲೆ ಹೇಳಲ್ಪಟ್ಟ ವ್ಯಾಧಿಗ್ರಸ್ತರಿಗೆ ವಿಭಾಗದ ಹಕ್ಕಿಲ್ಲದಿದ್ದರೂ ಅವರಿಗೆ ಮಕ್ಕಳಾದರೂ ಮೊಮ್ಮಕ್ಕಳಾದರೂ ಮರಿಮಕ್ಕಳಾದರೂ ವ್ಯಾಧಿಗ್ರಸ್ತರಾದವರಿದ್ದ ಪಕ್ಷದಲ್ಲಿ, ಇವರು ವಿಭಾಗದ ಹಕ್ಕುಂಟಾಗಿರುವರು. ಆದರೆ ಮೂರುತಂಗಳು ದಾಟಿದವರಾಗಿರಕೂಡದು. ಇದು

ಹೇಗೆಂದರೆ:— ಇಲ್ಲಿ ಕಾಣಿಸಲ್ಪಟ್ಟಿರುವ ವಂಶವೃಕ್ಷದಲ್ಲಿ 'ಈ' ಎಂಬವನು



ವ್ಯಾಧಿಗ್ರಸ್ತನಾದರೆ ಆತನುಸತ್ತು ಹೋದವನಾಗಿ ಭಾವಿಸಲ್ಪಡುವನು ಆದುದರಿಂದ 'ಎಫ್' ಎಂಬವನು 'ಸೀ' ಎಂಬವನೊಡನೆ ವಿಭಾಗವನ್ನು ಬಯಸಬಹುದು. ಆದರೆ 'ಈ' ಎಂಬವನು ಸತ್ತು ಹೋಗಿದ್ದು, 'ಎಫ್' ಎಂಬವನು ವ್ಯಾಧಿಗ್ರಸ್ತನಾಗಿದ್ದಪಕ್ಷದಲ್ಲಿ 'ಜೀ' ಎಂಬವನುಮೂರುತರಗಳು ದಾಂಟಿದವನಾಗಿರುವುದರಿಂದ ವಿಭಾಗದ ಪಕ್ಕುಂಟಾಗಿರನು. (೧೩ ಮೂ. ಇ. ಅ. ೫೧೯; ೨ ಕ. ಹೈ. ೧೧೫.)

ವ್ಯಾಧಿಗ್ರಸ್ತರ ದತ್ತಪುತ್ರರಿಗೆ ಮೇಲೆ ಹೇಳಲ್ಪಟ್ಟ ರೀತಿಯಾಗಿ ಹಕ್ಕಿಲ್ಲವು. (೧೮೫೭ ಸಂ|| ಮ. ತೀ. ೨೭೦. ಇಂದ ೫೪ ನೆಯ ಪ್ಯಾರಾನೋಡು.)

ಭಾಗಸ್ಥರಲ್ಲಿ ಯಾರಾದರೂ ವಿಭಾಗಾನಂತರದಲ್ಲಿ ವ್ಯಾಧಿಗ್ರಸ್ತರಾದಪಕ್ಷದಲ್ಲಿ ಅವರ ಭಾಗಗಳಿಗೆ ಬಾಧಕವುಂಟಾಗಲಾರದು. (೧೮೫೭ ಸಂ|| ಮ. ತೀ. ೨೧೦.)

ಸ್ತ್ರೀಯರಿಗಿರುವ ಹಕ್ಕು.—ಪೂರ್ವಕಾಲದಲ್ಲಿ ಪುರುಷರು ವಿಭಾಗಮಾಡಿಕೊಳ್ಳುವಾಗ ತಾಯಿ, ಅಜ್ಜಿ, ಮಗಳು, ಹೆಂಡತಿ ಮುಂತಾದ ಸ್ತ್ರೀಯರಿಗೂಕೂಡ ಕೊಂಚಭಾಗ ಕೊಡುವ ಆಚಾರವಿತ್ತೆಂದು ಧರ್ಮಶಾಸ್ತ್ರಗಳಿಂದ ತಿಳಿಯಬರುವುದು. ಆದರೆ ಈಗ ಅಂತಹ ಆಚಾರವು ನಾಶವಾಯಿತು. ಆಸ್ತಿದಾರನಿಗೆ ಪುತ್ರಸಂತತಿ ಇರುವಾಗ ಎಲ್ಲಾ ಸಂಪ್ರದಾಯಗಳ ಪ್ರಕಾರವೂ ಸಮಷ್ಟಿಕುಟುಂಬಗಳ ಸ್ತ್ರೀಯರಿಗೆ ಜೀವನಾಂಶದ ಹಕ್ಕುಮಾತ್ರವೇವುಂಟಾಗಿರುವದಲ್ಲದೆ ವಿಭಾಗದ ಹಕ್ಕು ಉಂಟಾಗಿರದು. (೨ ಡಬ್ಲಿಯು ಮೆಕ್ ೬೫; ಎಫ್ ಮೆಕ್ ೪೫, ೫೭; ೧೮೫೩ ಸಂ|| ಮ ತೀ ೬೧; ಇ ಲಾ ರಿ ೬ ಮ ೧೩೦; ಇ ಲಾ ರಿ ೮ ಮ ೧೨೩; ೯ ಸ ೬೧; ೧೨ ಕ ಹೈ ೯೦, ೩೭೩; ಇ ಲಾ ರಿ ೫ ಕ ೮೪೫; ಇ ಲಾ ರಿ ೮ ಕ ೧೭; ಇ ಲಾ ರಿ ೧೨ ಕ ೧೬೫. ಆದರೆ ೨ ಬಾರೋ ೪೮೪; ಇ ಲಾ ರಿ ೨ ಬೊಂ ೪೯೪, ೫೦೪ ನೋಡು.)

ವಿಭಾಗದ ಡಿಕ್ರೀ—ವಿಭಾಗಕ್ಕಾಗಿ ದಾವಾತರಲ್ಪಟ್ಟಾಗ ಡಿಕ್ರೀಯಾಗದೆ ಮುಂಚೆ ಭಾಗಸ್ಥರಲ್ಲಿ ಯಾರಾದರೂ ಸತ್ತುಹೋದರೆ, ಆತನು ಅವಿಭಕ್ತನಾಗಿ ಸತ್ತುಹೋದಂತೆಯೇ ಭಾವಿಸಲ್ಪಡುವನು. ವಿಭಾಗಕ್ಕಾಗಿ ಕೋರ್ಟಿನ

ವರು ಡಿಕ್ರೀಕೊಟ್ಟಕ್ಷಣ ಮೊದಲುಗೊಂಡು ಸಮಷ್ಟಿಭಾಗಸ್ಥರು ವಿಭಕ್ತರಾಗಿ ಭಾವಿಸಲ್ಪಡುವರೆಂದು ಮದ್ರಾಸ್ ಕಲ್ಕತ್ತ ಹೈಕೋರ್ಟುಗಳವರು ತೀರ್ಮಾನ ಮಾಡಿರುವರು. (ಇ ಲಾ ರಿ ೪ ಕ ೪೩೪; ಇ ಲಾ ರಿ ೨ ಮ ೮೩) ಆದರೆ ವಿಭಾಗದ ಡಿಕ್ರಿ ಅಪೀಲಿನಲ್ಲಿರುವ ವರೆಗೂ ಕುಟುಂಬದ ಸಮಷ್ಟಿದಶೆ ತಪ್ಪಲಾರದೆಂದೂ ಭಾಗಸ್ಥರಲ್ಲಿ ಯಾರಾದರೂ ಆವೊಳಗೆ ಮೃತರಾದರೆ ಮಿಕ್ಕವರ ಭಾಗಗಳು ಹೆಚ್ಚುವುದೆಂದೂ ಬೊಂಬಯಿ ಹೈಕೋರ್ಟಿನವರು ತೀರ್ಮಾನಿಸಿರುವರು. (ಇ ಲಾ ರಿ ೬ ಬೊಂ ೧೧೩.)

ವಿಭಾಗಕ್ಕಾಗಿ ಹೊಂದಲ್ಪಡುವ ಡಿಕ್ರಿ ಸಾಧಾರಣವಾಗಿ ನಗದಿ ಯಾವತ್ತುವಿಷಯವಾಗಿ ಹೊಂದಲ್ಪಡುವ ಡಿಕ್ರಿಗಳ ಹಾಗಿರುವುದಲ್ಲ. ಏಕಂದರೆ— ವಿಭಾಗದ ಡಿಕ್ರಿಯನ್ನು ಹಿಡಿದು ವಾದಿಗಳಾದರೂ ಪ್ರತಿವಾದಿಗಳಾದರೂ ಅಮಲು ನಡೆಯಿಸಿ ತಮ್ಮತಮ್ಮ ಭಾಗಗಳನ್ನು ಬೇರೆಮಾಡಿಕೊಳ್ಳಬಹುದು. (ಇ ಲಾ ರಿ ೩ ಕ ೫೫೧; ಇ ಲಾ ರಿ ೯ ಕ ೫೬೮.)

ವಾರಸುಹಕ್ಕು.

ಅಯಿದು ಭಾಗಗಳು— ಸಮಷ್ಟಿಕುಟುಂಬದ ಭಾಗಸ್ಥರಿಗಿರುವ ಸಮಷ್ಟಿಹಕ್ಕಿನ ಸ್ವಭಾವವನ್ನೂ, ವಿಸ್ತೃತಿಯನ್ನೂ, ಆದರೊಡನೆ ಸಂಬಂಧಿಸಿರುವ ವಿಭಾಗದ ಹಕ್ಕನ್ನೂ, ಇದುವರೆಗೆ ೫, ೧೧ ಪ್ರಕರಣಗಳಲ್ಲಿ ವಿವರಿಸಿದೆವು. ಈ ಪ್ರಕರಣದಲ್ಲಿ (೧) ವಾರಸು ಹಕ್ಕಿನಸ್ವಭಾವವು. (೨) ವಾರಸುದಾರರ ಸಂಬಂಧವು. (೩) ವಾರಸುದಾರರ ಕ್ರಮವು. (೪) ವಾರಸು ಹಕ್ಕು ವಿಷಯಕವಾದ ಅನರ್ಹತೆ. (೫) ಸ್ತ್ರೀವಾರಸರಿಗೆ ಸಂಬಂಧಿಸಿದ ವಿಶೇಷನಿಬಂಧನೆಗಳು—ಈ ಅಂಶಗಳು ವಿವರಿಸಲ್ಪಡುವುದು.

೧. ವಾರಸುಹಕ್ಕಿನ ಸ್ವಭಾವವು.

ವಾರಸು ಹಕ್ಕೆಂದರೆ ಏನು?—ಸಮಷ್ಟಿಕುಟುಂಬದಿಂದ ವಿಭಾಗಮಾಡಿಕೊಂಡು, ಆಮೇಲೆ ಯಾರೊಡನೆಯೂ ಸಮಷ್ಟಿಯಾಗಿರದೆ ಅಲ್ಲದೆ ಮಿಕ್ಕ ಭಾಗಸ್ಥರೆಲ್ಲರೂ ಸಮಷ್ಟಿಕುಟುಂಬದಲ್ಲಿ ಸತ್ತುಹೋಗುವುದರಿಂದ ಯಾವದಾಸ್ತಿಗೂ ಒಬ್ಬನೇ ಹಕ್ಕುದಾರನಾಗಿ ನಿಂತು, ಅಲ್ಲದೆ ಇತರರಿಗೆ ಸಮಷ್ಟಿಹಕ್ಕಿಲ್ಲದ ಸ್ವಾರ್ಜಿತ ಸ್ವತ್ವವು ಉಂಟಾಗಿದ್ದು, ತನ್ನ ಆಸ್ತಿ ವಿಷಯವಾಗಿ ಉಯಿಲೆಂದರೆ ಮರಣಶಾಸನವನ್ನೇರ್ಪಡಿಸದೆ, ಒಬ್ಬ ಆಸ್ತಿದಾರನು ಸತ್ತುಹೋದರೆ, ಆತನ ಆಸ್ತಿ ಧರ್ಮಶಾಸ್ತ್ರಪ್ರಕಾರವಾಗಿ ಯಾರ್ಯಾರಿಗೆ ಸಲ್ಲಬೇ

ಕೋ, ಈ ವಿಷಯುವನ್ನು ನಿರ್ಣಯಿಸುವ ಹಕ್ಕು ವಾರಸುಹಕ್ಕೆಂದು ಹೇಳಲ್ಪಡುವುದು. ಸಮುಷ್ಟಿಭಾಗಸ್ಥರಲ್ಲೊಬ್ಬನು ಸತ್ತುಹೋದರೆ, ಆತನ ಭಾಗದ ವಿಷಯುವಾಗಿ ೫ ನೆಯ ಪ್ರಕರಣದಲ್ಲಿ ಹೇಳಲ್ಪಟ್ಟಮೇರೆ ಸಮುಷ್ಟಿ ಹಕ್ಕು ಸಲ್ಲುವುದಲ್ಲದೆ ಈ ಪ್ರಕರಣದಲ್ಲಿ ವಿವರಿಸಲ್ಪಡುವಂತಹ ವಾರಸು ಹಕ್ಕು ವ್ಯಾಪಿಸಲಾರದು.

ದಾಯಭಾಗಪ್ರಕಾರವಾಗಿ ಸಮುಷ್ಟಿಕುಟುಂಬದ ಭಾಗಸ್ಥರು ಸಮುಷ್ಟಿಯಾಸ್ತಿಯಲ್ಲಿ ಪ್ರತ್ಯೇಕ ಭಾಗಗಳಿಗೆ ಹಕ್ಕುಂಟಾಗಿರುವಂತೆಯೇ ಭಾವಿಸಲ್ಪಡುವರಾದುದರಿಂದ ಅವರಲ್ಲಿ ಒಬ್ಬನು ತನ್ನ ಪಾಲು ಭಾಗವನ್ನು ಉಯಿಲುಮೂಲಕವಾಗಿ ಯಾರಿಗೂ ಕೊಟ್ಟುಬಿಡದೆ ಸತ್ತು ಹೋದರೆ ಅದರ ವಿಷಯಕವಾಗಿ ವಾರಸು ಹಕ್ಕು ವ್ಯಾಪಿಸುವುದು. ಎಂದರೆ ಮಿತಾಕ್ಷರದಲ್ಲಿ ಹೇಗೋ ಹಾಗೆ ಮಿಕ್ಕವರ ಭಾಗಗಳು ಹೆಚ್ಚದೆ ಸತ್ತುಹೋದವನ ಪುತ್ರ ಪೌತ್ರ ಪ್ರಪೌತ್ರರಿಗಾದರೂ ಇವರಿಲ್ಲದಿದ್ದರೆ ಆತನ ಹೆಂಡತಿ ಮೊದಲಾದ ವಾರಸರಿಗಾದರೂ ಆತನ ಪಾಲು ಭಾಗವು ಸಲ್ಲುವುದು.

ಆಸ್ತಿ ಅನಾಮತ್ತಾಗಿ ನಿಂತು ಇರಲಾರದು.—ಆಸ್ತಿದಾರನ ಮರಣಕಾಲದಲ್ಲಿ ಶಾಸ್ತ್ರಪ್ರಕಾರವಾಗಿ ಯಾರು ಆತನಿಗೆ ಸಮೀಪ ವಾರಸುಗಳಾಗಿರುವರೋ ಅವರಿಗೆ ಆತನ ಯಾವದಾಸ್ತಿಯೂ ತಕ್ಷಣವೇ ತಪ್ಪದೆ ಸಲ್ಲುವುದು. ಮುಂದೆ ಯೆಂದಿಗೋ ಅವರಿಗಿಂತಲೂ ಸಮೀಪ ವಾರಸುದಾರರು ಹುಟ್ಟುವರೆಂಬ ನಿರೀಕ್ಷೆಯಿಂದ ಸದರಿಯಾಸ್ತಿ ಅನಾಮತ್ತಾಗಿ ನಿಂತಿರಲಾರದು. ಹಾಗೆ ಸಂಪೂರ್ಣ ಸ್ವಾತಂತ್ರ್ಯವುಳ್ಳ ಪುರುಷ ವಾರಸುದಾರರಿಗೆ ಆಸ್ತಿ ಸೇರಿದ ಮೇಲೆ ಅವರಿಗಿಂತಲೂ ಸಮೀಪ ವಾರಸರು ಹುಟ್ಟಿದರೂ ಇವರಿಗೆ ಯಾವ ವಿಧವಾದ ಹಕ್ಕೂ ಉಂಟಾಗಲಾರದು. (ಬಂ ಸ ತೀ ೨೨೮ ೧ ಸ ೩೫೩; ೨ ಕ ಹೈ ೧೦೩; ಆದರೆ, ೩ ಲಾ ರಿ ೯ ಮ ೬೪.) ಗರ್ಭಗತನಾದ ಶಿಶುವಿನ ವಿಷಯುದಲ್ಲಿಯೂ ದತ್ತಪುತ್ರನ ವಿಷಯದಲ್ಲಿಯೂ ಮಾತ್ರವೇ ಈ ನಿಬಂಧನೆ ಸಲ್ಲಲಾರದು ಹೇಗೆಂದರೆ—

(೧) ಒಬ್ಬ ಆಸ್ತಿದಾರನ ಮರಣಕಾಲದಲ್ಲಿ ಆತನಿಗೆ ಒಬ್ಬ ಹುಟ್ಟು ಕುರುಡು ಮಗನೂ ವಿಭಕ್ತಸೋದರಮಗನೂ ಅಲ್ಲದೆ ಮುಮ್ಮಗನು, ಮರಿಮಗನು, ಹೆಂಡತಿ, ಮಗಳು, ದೌಹಿತ್ರನು ಮೊದಲಾದ ಸಮೀಪ ವಾರಸರು ಯಾರೂ ಇಲ್ಲದ ಪಕ್ಷದಲ್ಲಿ ಸದರಿ ಹುಟ್ಟು ಕುರುಡನಾದ ಮಗನು ವಾರಸು ಹಕ್ಕುಂಟಾಗಿರನಾದುದರಿಂದ ಆಸ್ತಿಯೆಲ್ಲವೂ ವಿಭಕ್ತಸೋದರನ ಮಗನಿಗೆ ಸಲ್ಲುವುದು. ಸದರಿ ಹುಟ್ಟುಕುರುಡಾದ ಮಗನಿಗೆ ವ್ಯಾಧಿಗ್ರಸ್ತನಾಗದ ಮಗನು ಹುಟ್ಟುವನೇನೋ ಎಂಬ ನಿರೀಕ್ಷಣೆಯಿಂದ ಆಸ್ತಿ

ಅನಾಮುತ್ತಾಗಿ ನಿಂತಿರಲಾರದು. ವಿಭಕ್ತಸೋದರನ ಕುಮಾರನಿಗೆ ಆಸ್ತಿ ಸೇರಿದ ಮೇಲೆ ಸದರಿ ಹುಟ್ಟು ಕುರುಡನ ಹೆಂಡತಿಗೆ ಗರ್ಭವುಂಟಾಗಿ ಪುತ್ರನು ಹುಟ್ಟಿದರೂ ಹಾಗೆ ಹುಟ್ಟಿದವನಿಗೆ ಸದರಿ ವಿಭಕ್ತಸೋದರನ ಸ್ವಾಧೀನದೊಳಗಿನಿಂದ ತನ್ನ ಅಜ್ಜಂದಿರಾಸ್ತಿಯನ್ನು ಬರಮಾಡಿಸಿಕೊಳ್ಳುವ ಹಕ್ಕು ಉಂಟಾಗಲಾರದು.

(೨) ಮೇಲಣ ಉದಾಹರಣದಲ್ಲಿ ಆಸ್ತಿದಾರನ ಮರಣಕಾಲದಲ್ಲಿ ಆತನ ಕುರುಡು ಮಗನ ಹೆಂಡತಿ ಗರ್ಭಿಣಿಯಾಗಿದ್ದು ಬಳಿಕ ಮಗನು ಹುಟ್ಟಿದ ಪಕ್ಷದಲ್ಲಿ ಆಸ್ತಿಗೆ ಈತನೇ ಹಕ್ಕುದಾರನಾಗುವನು. (೯ ಕ ಹೈ ೩೯೭ ೫ ಬಂ ಸ ತೀ ೩೧೫.)

(೩) ಆಸ್ತಿದಾರನ ಮರಣಾನಂತರದಲ್ಲಿ ಸ್ವೀಕರಿಸಲ್ಪಡುವ ದತ್ತಪುತ್ರನಿಗೆ ಆಸ್ತಿ ಸೇರುವಂತಹ ವಿಷಯವಾಗಿ ಹಿಂದೆ ೧೦೩ನೆ ಪೇರಾ ನೋಡಿ.

ಸ್ತ್ರೀಯರ ವಾರಸು ಹಕ್ಕು ಅಸಂಪೂರ್ಣವು.—ವಾರಸು ಹಕ್ಕಿನಿಂದ ಪುರುಷನಿಗೆ ಆಸ್ತಿ ಬಂದಾಗ ಅದರಲ್ಲಿ ಆತನಿಗೆ ಸಂಪೂರ್ಣವಾದ ಹಕ್ಕು ಏರ್ಪಡುವುದು, ಆದುದರಿಂದ ಆತನ ನಂತರದಲ್ಲಿ ಸದರಿಯಾಸ್ತಿಗೆ ಆತನ ವಾರಸರೇ ಹಕ್ಕುದಾರರಾಗುವರಲ್ಲದೆ ಮೊದಲ ಆಸ್ತಿದಾರನ ವಾರಸರು ಹಕ್ಕುದಾರರಾಗಲಾರರು.

ವಾರಸು ಹಕ್ಕಿನಿಂದ ಪುರುಷರ ಆಸ್ತಿ ಒಂದು ಸ್ತ್ರೀಗೆ ಬಂದಾಗ ಅದರಲ್ಲಿ ಆಕೆಗೆ ಸಂಪೂರ್ಣ ಸ್ವಾತಂತ್ರ್ಯವುಂಟಾಗದೆ ಯಾವಜ್ಜೀವವೂ ಅನುಭವಿಸುವಂತಹ ಹಕ್ಕು ಮಾತ್ರವೇ ಉಂಟಾಗುವುದು. ಆದುದರಿಂದ ಆಕೆಯ ನಂತರದಲ್ಲಿ ಸದರಿಯಾಸ್ತಿ ಆಕೆಯ ವಾರಸರಿಗೆ ಸಲ್ಲದೆ ಮೊದಲನೆಯಾಸ್ತಿದಾರನ ವಾರಸರಿಗೇ ಸಲ್ಲುವುದು. ಈ ವಿಷಯವು ಈ ಪ್ರಕರಣದ ಕಡೆಯಲ್ಲಿ ವಿರಳವಾಗಿ ತಿಳಿಸಲ್ಪಡುವುದು.

ವಾರಸುದಾರರ ಸಂಬಂಧವು.

ಮೂರುತೆರನಾದ ವಾರಸರು.—ಪ್ರತಿಪುರುಷರಿಗೂ ಸಪಿಂಡರು ಸಮಾನೋದಕರು ಬಂಧುಗಳು, ಎಂದು ಮೂರುತೆರನಾದ ವಾರಸರು ಇರುವರು ಮಿತಾಕ್ಷರ ಧರ್ಮಶಾಸ್ತ್ರಪ್ರಕಾರವಾಗಿ ಸಾಮಿಪ್ಯತೆ ಎಂದರೆ ರಕ್ತಸಂಬಂಧವನ್ನು ಹಿಡಿದೂ ದಾಯಭಾಗಪ್ರಕಾರವಾಗಿ ಪಿಂಡಪ್ರದಾನಾದಿ ಕರ್ಮವನ್ನು ಹಿಡಿದು ಈ ವಾರಸರೇರ್ಪಡುವರು. (೩ ಲಾ ರಿ ೭ ಬೊಂ ೪೭೫ ;

ಇ ಲಾ ರಿ ೫ ಬೊಂ ೧೧೦; ೮ ಬೊಂ ಹೈ ೮೬೨; ಇ ಲಾ ರಿ ೬ ಕ ೧೯೯; ಇ ಲಾ ರಿ ೯ ಕ ೩೧೮; ೨ ಕ ಹೈ ೩೩.)

ಸಮೀಪ ಸಪಿಂಡರು, ದೂರ ಸಪಿಂಡರು (ಸಕುಲ್ಯರು) ಸಮಾನೋದಕರು.—ಪ್ರತಿಮನುಷ್ಯನೂ, (೧) ತಂದೆ, (೨) ಅಜ್ಜನು, (೩) ಮುತ್ತಜ್ಜನು—ಇವರಿಗೆ ಪಿಂಡಪ್ರದಾನವನ್ನು ಮಾಡುವುದಕ್ಕೂ— (೪) ಮುತ್ತಜ್ಜನ ತಂದೆ, (೫) ಮುತ್ತಜ್ಜನಜ್ಜನು, (೬) ಮುತ್ತಜ್ಜನ ಮುತ್ತಜ್ಜನು ಇವರಿಗೆ ಲೇಪಪ್ರದಾನ (ಎಂದರೆ ತಂದೆ ವಗೈರೆಗಳಿಗೆ ಪಿಂಡಪ್ರದಾನವನ್ನು ಮಾಡುವಾಗ ಕೈಗಳಲ್ಲಿ ಅಂಟಿಕೊಂಡ ಅಗಳುಗಳ ದಾನ) ವನ್ನು ಮಾಡುವುದಕ್ಕೂ—ಮುತ್ತಜ್ಜನ ಮುತ್ತಜ್ಜನು ಮೊದಲು ಏಳು ತರಗಳವರಿಗೆ ಉದಕದಾನವನ್ನು ಮಾಡುವುದಕ್ಕೂ— ಬದ್ಧನೆಂದು ಧರ್ಮಶಾಸ್ತ್ರಗಳು ಹೇಳುತ್ತಿವೆ. ಇದನ್ನು ಹಿಡಿದು ಪ್ರತಿಮನುಷ್ಯನೂ (೧) ಮಗನು (೨) ಮೊಮ್ಮಗನು, (೩) ಮರಿಮಗನು, ಇವರಿಂದ ಪಿಂಡಪ್ರದಾನವನ್ನು ಪಡೆಯುವುದಕ್ಕೂ (೪) ಮರಿಮಗನ ಮಗನು, (೫) ಮರಿಮಗನ ಮೊಮ್ಮಗನು, (೬) ಮರಿಮೊಮ್ಮಗನ ಮರಿಮಗನು— ಇವರಿಂದ ಲೇಪಪ್ರದಾನವನ್ನು ಹೊಂದುವುದಕ್ಕೂ—ಮರಿಮಗನ ಮರಿಮನು ಮೊದಲು ಕೆಳಗಣ ಯೇಳು ತರಗಳವರಿಂದ ಉದಕದಾನವನ್ನು ಮಾತ್ರವೇ ಹೊಂದುವುದಕ್ಕೂ ಅರ್ಹನಾಗಿರುವನೆಂದು ಏರ್ಪಡುವುದು. ಈ ಹೇಳಲ್ಪಟ್ಟ ದಾನ ಪರಿಗ್ರಹಗಳೇ ಸಪಿಂಡ ಸಮಾನೋದಕ ಸಂಬಂಧಗಳಿಗೆ ಮೂಲಗಳಾಗಿವೆ. ಎಂತೆಂದರೆ.—

ಪಿಂಡಪ್ರದಾನವನ್ನು ಕೊಡುವವರೂ ಗ್ರಹಿಸುವರೂ ಒಬ್ಬರೊಬ್ಬರಿಗೆ ಸಮೀಪ ಸಪಿಂಡರೆಂದು ಹೇಳಲ್ಪಡುವರು. ಲೇಪಪ್ರದಾನವನ್ನು ಕೊಡುವವರೂ ಗ್ರಹಿಸುವವರೂ ಒಬ್ಬರೊಬ್ಬರಿಗೆ ದೂರಸಪಿಂಡರೆಂದು ಹೇಳಲ್ಪಡುವರು. ಇವರು ದಾಯಭಾಗ ಧರ್ಮಶಾಸ್ತ್ರದಲ್ಲಿ ಸಕುಲ್ಯರೆಂದು ಕರೆಯಲ್ಪಡುವರು. ಉದಕದಾನವನ್ನು ಮಾತ್ರವೇ ಕೊಡುವವರೂ ಗ್ರಹಿಸುವವರೂ ಒಬ್ಬರೊಬ್ಬರಿಗೆ ಸಮಾನೋದಕರೆಂದು ಹೇಳಲ್ಪಡುವರು.

ಹೀಗೆ ಈ ಹೇಳಲ್ಪಟ್ಟ ಪಿಂಡಪ್ರದಾನಗಳನ್ನು ಕೊಡುವುದರಿಂದಲೂ ಗ್ರಹಿಸುವುದರಿಂದಲೂ ಮಾತ್ರವೇ ಅಲ್ಲದೆ ಒಬ್ಬನು ಪಿಂಡಪ್ರದಾನ ಮಾಡತಕ್ಕ ಹಿರಿಯರಲ್ಲಿ ಎಲ್ಲರೂ ಆದರೂ ಕೆಲವರಾದರೂ, ಮತ್ತೊಬ್ಬನು ಪಿಂಡಪ್ರದಾನವನ್ನು ಮಾಡತಕ್ಕ ಹಿರಿಯರಾಗಿ ಏರ್ಪಟ್ಟಾಗ, ಅವರಿಬ್ಬರಿಗೂ ಸಪಿಂಡ ಸಂಬಂಧವು ಉಂಟಾಗುವುದು. ಈವಿಷಯವು ಇದರಹಿಂದೆ ಇರುವ ಪ್ಯಾರಾದಿಂದ ಸ್ಪಷ್ಟವಾಗುವದು. (೫ ಕ ಹೈ ೩೯; ೨ ಕ ಹೈ ೩೪.)


ಸಪಿಂಡರ ವಂಶಾವಳಿ— ಇದಾದ ಮೇಲಿರುವ ಪೇಜಿನಕೆಳಗೆ ತೋರಿಸಲ್ಪಟ್ಟ ವಂಶಾವಳಿಯೊಳಗಣವರಲ್ಲರೂ ಆಸ್ತಿದಾರನಿಗೆ ಸಮೀಪ ಸಪಿಂಡರಾಗಿರುವರು. ಅದೆಂತೆಂದರೆ:—

ಮಗನು, ಮುಮ್ಮಗನು, ಮರಿಮಗನು, ಇವರು ಮೂರುಮಂದಿಯೂ ಆಸ್ತಿದಾರನಿಗೆ ಪಿಂಡಪ್ರದಾನವನ್ನು ಮಾಡುವರಾದುದರಿಂದಲೂ, ತಂದೆ, ಅಜ್ಜನು, ಮುತ್ತಜ್ಜನು. ಇವರು ಮೂರುಮಂದಿಯೂ ಆಸ್ತಿದಾರನಿಂದ ಪಿಂಡಪ್ರದಾನವನ್ನು ಗ್ರಹಿಸುವರಾದುದರಿಂದಲೂ ಈ ಆರುಮಂದಿಯೂ ಆಸ್ತಿದಾರನಿಗೆ ಸಮೀಪ ಸಪಿಂಡರಾಗುವರು.

ಆಸ್ತಿದಾರನು ಪಿಂಡಪ್ರದಾನವನ್ನುಮಾಡತಕ್ಕ ತಂದೆ ಅಜ್ಜನು ಮುತ್ತಜ್ಜನು ಇವರಲ್ಲಿ ಮೂರುಮಂದಿಗಾದರೂ ಇಬ್ಬರಿಗಾದರೂ ಒಬ್ಬರಿಗಾದರೂ ಅಣ್ಣತಮ್ಮಂದಿರು, ಚಿಕ್ಕಪ್ಪ ದೊಡ್ಡಪ್ಪಂದಿರು, ಚಿಕ್ಕಜ್ಜ ದೊಡ್ಡಜ್ಜಂದಿರು, ಇವರಮಕ್ಕಳು ಮುಮ್ಮಕ್ಕಳು. ಇವರುಕೂಡಪಿಂಡಪ್ರದಾನವನ್ನುಮಾಡುವರಾದುದರಿಂದ ಇವರೆಲ್ಲರೂ ಆಸ್ತಿದಾರನಿಗೆ ಸಮೀಪಸಪಿಂಡವಾಗುತ್ತಿರುವರು.

ಮರಿಮಗನ ಕೆಳಗಣ ಮೂರುತರಗಳವರು, ಮುತ್ತಜ್ಜನ ಮೇಲೆ ಮೂರುತರಗಳವರು, ಅಣ್ಣತಮ್ಮಂದಿರ ಮುಮ್ಮಕ್ಕಳ ಕೆಳಗಣ ಮೂರುತರಗಳವರು, ಚಿಕ್ಕಪ್ಪ ದೊಡ್ಡಪ್ಪಂದಿರ ಮುಮ್ಮಕ್ಕಳ ಕೆಳಗಣ ಮೂರುತರಗಳವರು, ಚಿಕ್ಕಜ್ಜ ದೊಡ್ಡಜ್ಜಂದಿರ ಕೆಳಗಣ ಮೂರುತರಗಳವರು- ಇವರಿಗೂ ಆಸ್ತಿದಾರನಿಗೂ ಲೇಪಮಾತ್ರದ ದಾನಗ್ರಹಣಸಂಬಂಧವುಂಟಾಗಿರುವುದರಿಂದ ಅವರೆಲ್ಲರೂ ಆಸ್ತಿದಾರನಿಗೆ ದೂರಸಪಿಂಡರು (ಸಕುಲ್ಯರು) ಆಗುವರು, ಇವರನ್ನು ಮುಂದಿನಪೇಜಿನಲ್ಲಿ ವಿವರಿಸಿದೆ.

ಸಪಿಂಡರು.



ಸ್ತ್ರೀಸಪಿಂಡರು.—ತಂದೆ, ಅಜ್ಜನು, ಮುತ್ತಜ್ಜನು, ಇವರಿಗೆ ಸಲ್ಲಿಸಲ್ಪಡುವ ಪಿಂಡಪ್ರದಾನಗಳನ್ನು ಅವರ ಹೆಂಡತಿಯರು ಕೂಡ ಅನುಭವಿಸುವರಾದುದರಿಂದ ಪ್ರತಿಪುರುಷನಿಗೂ, ತಾಯಿ, ಅಜ್ಜನ ಹೆಂಡತಿ, ಮುತ್ತಜ್ಜನ ಹೆಂಡತಿ, ಇವರು ಕೂಡ ಸಪಿಂಡರಾಗುವರು. (ಇ ಲಾ ರಿ ೨ ಬೊಂ ೪೨೦, ೪೮೦, ೮೮೫.) ಮತ್ತು ಗಂಡನ ಶರೀರದಲ್ಲಿ ಅರ್ಧಭಾಗವಾಗಿ ಭಾವಿಸಲ್ಪಡುವ ಕಾರಣದಿಂದಲೂ ಪುತ್ರಹೀನನಾಗಿ ಸತ್ತುಹೋದ ಗಂಡನಿಗೆ ಅಪರಕ್ರಿಯೆಗಳನ್ನು ನಡೆಯಿಸುವ ಕಾರಣದಿಂದಲೂ ಹೆಂಡತಿ ಗಂಡನ ಸಪಿಂಡಳಾಗುವಳು.

ಮುತ್ತಜ್ಜನ ತಂದೆ, ಮುತ್ತಜ್ಜನಜ್ಜನು, ಮುತ್ತಜ್ಜನ ಮುತ್ತಜ್ಜನು ಇವರ ಹೆಂಡತಿಯರು ಮಿತಾಕ್ಷರಪ್ರಕಾರವಾಗಿ ದೂರಸಪಿಂಡರಾಗುವರು.


ಬೊಂಬಯಿ ಪ್ರೆಸಿಡೆನ್ಸಿಯಲ್ಲಿ ಪ್ರಮಾಣವಾಗಿ ಸಲ್ಲುತ್ತಿರುವ ಮಯೂಖ ಗ್ರಂಥಪ್ರಕಾರವಾಗಿ ಮಗಳು, ಅಕ್ಕ, ತಂಗಿ, ಅಣ್ಣತಮ್ಮಂದಿರ ಹೆಂಡತಿಯರು—ಇವರು ಕೂಡ ಸಗೋತ್ರ ಸಪಿಂಡರಾಗಿ ಭಾವಿಸಲ್ಪಡುವರು.

ಮಿತಾಕ್ಷರ ದಾಯಭಾಗ ಸಿದ್ಧಾಂತಗಳು.—ಸಪಿಂಡರು, ಸಮಾನೋದಕರು, ಬಂಧುಗಳು—ಈ ತರಗತಿಗಳ ವಾರಸರು ದಾಯಭಾಗಪ್ರಕಾರವಾಗಿ ಪಿಂಡಪ್ರದಾನಾದಿ ಕರ್ಮವನ್ನು ಹಿಡಿದೂ, ಮಿತಾಕ್ಷರ ಪ್ರಕಾರವಾಗಿ ಸಾಮೀಪ್ಯತೆ ಎಂದರೆ ರಕ್ತಸಂಬಂಧವನ್ನು ಹಿಡಿದೂ ಹೀಗೆ ಬೇರೆಬೇರೆ ಪದ್ಧತಿಗಳ ಪ್ರಕಾರವಾಗಿ ಯೇರ್ಪಾಡಾದರೂ ಸಪಿಂಡರು ಸಮಾನೋದಕರು ಈ ಎರಡು ತರಗತಿಗಳ ವಿವರದಲ್ಲಿ ಎರಡು ಸಿದ್ಧಾಂತಗಳಿಗೂ ಭೇದವಿಲ್ಲವು. ಹೆಸರುಗಳಲ್ಲಿ ಮಾತ್ರವೇ ಕೊಂಚ ಭೇದವು ಕಾಣಬರುವುದು. ಮಿತಾಕ್ಷರದಲ್ಲಿ ಆರುತರಗಳವರೆಗೂ ಇರುವ ವಾರಸರು ಸಪಿಂಡರೆಂದು ಕರೆಯಲ್ಪಡುತ್ತ ಅದರಲ್ಲಿ ಮೊದಲ ಮೂರುತರಗಳವರು ಸಮೀಪ ಸಪಿಂಡರೆಂದೂ ನಾಲ್ಕಯಿದಾರು ತರಗತಿಗಳವರು ದೂರ ಸಪಿಂಡರೆಂದೂ ಹೇಳಲ್ಪಟ್ಟಿರುವರು. ದಾಯಭಾಗದಲ್ಲಿ ಮೊದಲ ಮೂರುತರಗತಿಗಳವರಿಗೆ ಮಾತ್ರವೇ ಸಪಿಂಡರೆಂದು ಹೆಸರುಂಟು. ನಾಲ್ಕಯಿದಾರು ತರಗತಿಗಳವರು ಸಕುಲ್ಯರೆಂದು ಹೇಳಲ್ಪಡುವರು. ಆ ಮೇಲಣ ಏಳುತರಗತಿಗಳವರು ಸಮಾನೋದಕರೆಂದೇ ಮಿತಾಕ್ಷರದಲ್ಲಿಯೂ ದಾಯಭಾಗದಲ್ಲಿಯೂ ಕೂಡ ಕರೆಯಲ್ಪಡುವರು.

ಬಂಧುಗಳ ವಿವರದಲ್ಲಿ ಮಾತ್ರವೇ ಎರಡು ಸಿದ್ಧಾಂತಗಳಿಗೂ ಭೇದವು ಕಾಣಬರುತ್ತಿದೆ. ಆದುದರಿಂದ ದಾಯಭಾಗ ಸಿದ್ಧಾಂತ ರೀತಿಯಾಗಿ ಏರ್ಪಡುವಂತಹ ಬಂಧು ವರ್ಗವನ್ನು ಮೊದಲು ವಿವರಿಸಿ ಆ ಮೇಲೆ ಮಿತಾಕ್ಷರವು ಸಮ್ಮತಿಸುವ ಬಂಧುಗಳನ್ನು ನಿರೂಪಿಸುವೆವು.


ದಾಯಭಾಗಪ್ರಕಾರವಾಗಿ ಬಂಧುಗಳ ವಿವರಣೆ.—ಮೇಲೆ ಹೇಳಲ್ಪಟ್ಟ ಸಪಿಂಡರೂ ಸಮಾನೋದಕರೂ ಆಸ್ತಿದಾರನಿಗೆ ಸಗೋತ್ರರಾಗಿರುವರು. ಆದರೆ ಭಿನ್ನಗೋತ್ರರು ಕೂಡ ಸಪಿಂಡರಾಗಿರಬಹುದು. ಇವರ ಸಪಿಂಡತ್ವವು ಪಾರ್ವಣಶ್ರಾದ್ಧದಿಂದ ಉಂಟಾಗುವುದು. ಅದು ಹೇಗಂದರೆ.—ಪಾರ್ವಣಶ್ರಾದ್ಧವನ್ನು ನಡೆಯಿಸುವಾಗ ತಂದೆ, ಅಜ್ಜನು, ಮುತ್ತಜ್ಜನು, ಇವರಿಗೆ ಮಾತ್ರವೇ ಅಲ್ಲದೆ ತಾಯತಂದೆ, ತಾಯಿಅಜ್ಜನು ತಾಯಮುತ್ತಜ್ಜನು ಇವರಿಗೆ ಕೂಡ ಪಿಂಡಪ್ರದಾನವು ಮಾಡಲ್ಪಡುವುದು. ಆದುದರಿಂದ ಇವರು ಭಿನ್ನ ಗೋತ್ರರಾದರೂ ಸಪಿಂಡರಾಗುವರು. ಮತ್ತು ಅಂತಹ ಪಿಂಡಪ್ರದಾನವನ್ನು ಒಬ್ಬನಿಂದ ಹೊಂದುವ ಹಿರಿಯರಲ್ಲಿ ಎಲ್ಲರೂ ಆದರೂ ಕೆಲವರಾದರೂ ಭಿನ್ನಗೋತ್ರನಾದ ಮತ್ತೊಬ್ಬನಿಂದ ಪಿಂಡಪ್ರದಾನವನ್ನು ಹೊಂದುವ ಹಿರಿಯರಾಗಿದ್ದ ಪಕ್ಷದಲ್ಲಿ ಅವರಿಬ್ಬರೂ ಭಿನ್ನಗೋತ್ರರಾದರೂ ಸಪಿಂಡರಾಗುವರು.

ಪಿತೃಬಂಧುಗಳು.


ಮುತ್ತಜ್ಜನು
ಚಿಕ್ಕಜ್ಜದೊಡ್ಡಜ್ಜಂದಿರು
ಅಜ್ಜನು
ಅಜ್ಜನಕ್ಕತಂಗಿಯರು
ಮಗನು
ಮಗಳು
ಮಗನು *
ಮುಮ್ಮಗಳು
ಮಗಫು *
ಮಗನು *
ಚಿಕ್ಕಪ್ಪ ದೊಡ್ಡಪ್ಪಂದಿರು
ತಂದೆ
ಸೋದರತ್ತೆ
ಮಗನು
ಮಗಳು
ಮಗನು *
ಮುಮ್ಮಗಳು
ಮಗನು *
ಮಗನು *
ಅಣ್ಣತಮ್ಮಂದಿರು
ಅಕ್ಕತಂಗಿಯರು
ಮಗನು *
ಆಸ್ತಿದಾರನು
ಮಗನು
ಮಗಳು
ಮುಮ್ಮಗಳು
ಮಗನು *
ಮಗನು *
ಮಗನು
ಮಗಳು
ಮಗನು *
ಮುಮ್ಮಗನು
ಮುಮ್ಮಗಳು
ಮರಿಮಗಳು
ಮಗನು *
ಮಗನು *

ಪಿತೃಬಂಧುಗಳು—ಭಿನ್ನಗೋತ್ರ ಸಪಿಂಡರಿಗೆ ಬಂಧುಗಳೆಂದು ಹೆಸರು. ಇವರು ದಾಯಭಾಗಪ್ರಕಾರವಾಗಿ ಪಿತೃಬಂಧುಗಳು, ಮಾತೃಬಂಧುಗಳು, ಎಂದು ಎರಡು ತೆರಗಳವರು ಪಿತೃಬಂಧುಗಳ ವಂಶಾವಳಿ ೨೫೬ ನೆಯ ಪೇಜಿನಲ್ಲಿ ಕಾಣಿಸಲ್ಪಟ್ಟಿದೆ. ಅದರಲ್ಲಿ * ನಕ್ಷತ್ರದ ಗುರ್ತುಗಳಿರುವವರೆಲ್ಲರೂ ಆಸ್ತಿದಾರನಿಗೆ ಭಿನ್ನಗೋತ್ರಸಪಿಂಡರಾಗಿ ಪಿತೃಬಂಧುಗಳಾಗುವರು. ಏತಕ್ಕೆಂದರೆ—ಆಸ್ತಿದಾರನಾದರೂ ಆಸ್ತಿದಾರನ ಪಿತೃವರ್ಗದಲ್ಲಿ ಸೇರಿದ ತಂದೆ ಅಜ್ಜನು ಮುತ್ತಜ್ಜಂದಿರಲ್ಲಿ ಇಬ್ಬರಾದರೂ ಒಬ್ಬನಾದರೂ ಸದರಿ ನಕ್ಷತ್ರದ ಗುರ್ತಿನವರ ಮಾತೃವರ್ಗದಲ್ಲಿ ಸೇರಿದ ಹಿರಿಯರಾಗಿ ಅವರಿಂದ ಪಿಂಡಪ್ರದಾನವನ್ನು ಗ್ರಹಿಸುತ್ತಿರುವರು.

ಮಾತೃಬಂಧುಗಳು.



☞ ಪಿತೃಬಂಧುಗಳ ಮತ್ತು ಮಾತೃಬಂಧುಗಳ ವಂಶಾವಳಿಗಳಲ್ಲಿ ಕಾಣಿಸಲ್ಪಡುತ್ತಿರುವ ಬಂಧುಗಳಲ್ಲಿ ಎಲ್ಲರೂ ದಾಯಭಾಗ ದಾಯಕ್ರಮ ಸಂ

ಗ್ರಹ ಗ್ರಂಥಗಳಲ್ಲಿ ನಿರೂಪಿಸಲ್ಪಡದೆ ಕೆಲವರು ಮಾತ್ರವೇ ನಿರೂಪಿಸಲ್ಪ ಟ್ಟಿರುವರು. ಹಾಗಿದ್ದರೂ ನಿರೂಪಿಸಲ್ಪಟ್ಟವರು ಉದಾಹರಣಕ್ಕಾಗಿ ಹೇಳ ಲ್ಪಟ್ಟರೆಂದೂ ಇತರರು ಕೂಡ ಭಿನ್ನಗೋತ್ರ ಸಪಿಂಡರಾಗಿರುವಪಕ್ಷದಲ್ಲಿ ಬಂಧುವರ್ಗದೊಳಗೆ ಸೇರುವರೆಂದೂ ತೀರ್ಮಾನಗಳು ಕೊಡಲ್ಪಟ್ಟವೆ (೧೦ ಮೂ ಇ ಅ ೪೪೮; ೨ ಕ ಹೈ ೨೮; ೫ ಕ ಹೈ ೧೫.)

ಮೇಲೆ ಹೇಳಲ್ಪಟ್ಟ ಮೂರು ತರಗತಿಗಳ ಬಂಧುಗಳಲ್ಲಿ ಆತ್ಮಬಂಧು ಗಳು, ತಂದೆಯ ಸೋದರತ್ತೆಯ ಮಕ್ಕಳು, ತಾಯಿಯ ಸೋದರತ್ತೆಯ ಮಕ್ಕಳು, ಇವರುಮಾತ್ರವೇ ದಾಯಭಾಗ ಸಿದ್ಧಾಂತಪ್ರಕಾರವಾಗಿ ಕೂಡ ಬಂಧುಗಳಾಗಿರುವರು. ಮಿಕ್ಕವರು ಎಂದರೆ—ತಂದೆಯ ಮತ್ತು ತಾಯಿಯ ಚಿಕ್ಕಮ್ಮ ದೊಡ್ಡಮ್ಮನ ಮಕ್ಕಳೂ ಸೋದರಮಾವನ ಮಕ್ಕಳೂ ದಾಯ ಭಾಗಪ್ರಕಾರವಾಗಿ ಬಂಧುಗಳಲ್ಲವು. ಏಕೆಂದರೆ, ಇವರು ಆಸ್ತಿದಾರನಿಗಾದ ರೂ ಆತನ ಪಿತೃಮಾತೃ ಪರಂಪರೆಯವರಿಗಾದರೂ ಪಿಂಡಪ್ರದಾನವನ್ನು ಮಾಡುವಂತಹ ಯೋಗ್ಯತೆ ಎಷ್ಟುಮಾತ್ರವೂ ಉಂಟಾಗಿರಲಾರರು.

ಮಿತಾಕ್ಷರದಲ್ಲಿ ನಿರೂಪಿಸಲ್ಪಟ್ಟ ಮೂರುತರಗತಿಗಳ ಬಂಧುಗಳೂ ಉದಾಹರಣ ನಿಮಿತ್ತವಾಗಿ ಹೇಳಲ್ಪಟ್ಟರೆಂದೂ ನಿರೂಪಿಸಲ್ಪಡವಿದ್ದರೂ ಅ ಕ್ಕತಂಗಿಯರ ಕುಮಾರರು ಮೊದಲಾದವರು ಕೂಡ ಕೆಲವರು ಮಿತಾಕ್ಷರ ಸಿದ್ಧಾಂತಪ್ರಕಾರವಾಗಿ ಬಂಧುಗಳಾಗುವರೆಂದೂ ಪ್ರೀವೀಕೌನ್ಸಿಲರವರಿಂ ದಲೂ ಹೈಕೋರ್ಟಿನವರಿಂದಲೂ ತೀರ್ಮಾನಿಸಲ್ಪಟ್ಟಿತು. (೧೦ ಮೂ ಇ ಅ ೪೪೮; ೨ ಕ ಹೈ ೨೮; ೫ ಕ ಹೈ ೧೫; ೬ ಮ ಹೈ ೨೭೮)

ಬೊಂಬಯಿ ಪ್ರೆಸಿಡೆನ್ಸಿಯಲ್ಲಿ ಪ್ರಮಾಣವಾಗಿ ಸಲ್ಲುತ್ತಿರುವ ಮ ಯೂಖಗ್ರಂಥದ ಮೇರೆ ಅಕ್ಕತಂಗಿಯರು, ಅಕ್ಕತಂಗಿಯರ ಕುವರಿಯರು ಅಣ್ಣತಮ್ಮಂದಿರ ಕುವರಿಯರು ಮಗಳ ಕುವರಿಯರು ಈ ಮುಂತಾದ ಸ್ತ್ರೀ ವರ್ಗದವರನೇಕರು ಬಂಧುಗಳಾಗಿ ಅಂಗೀಕರಿಸಲ್ಪಡುವರು. ವೆಂ. ಹಿಂ. ಲಾ.

ವಾರಸುದಾರರ ಕ್ರಮವು.

ಮಿತಾಕ್ಷರ ದಾಯಭಾಗ ಸಿದ್ಧಾಂತಗಳಿಗೆ ಭೇದವು.—ವಾರಸುದಾರರ ನ್ನು ನಿರ್ಣಯಿಸುವುದರಲ್ಲಿ ಮಿತಾಕ್ಷರ ದಾಯಭಾಗ ಸಿದ್ಧಾಂತಗಳು ಬೇರೆ ಬೇರೆ ಪದ್ಧತಿಗಳನ್ನು ಅನುಸರಿಸುವಂತೆ ಹೇಳಿದ್ದೆವು. ಮಿತಾಕ್ಷರಲ್ಲಿದ

ಸಾಮಿಪ್ಯತೆ (ಎಂದರೆ ರಕ್ತಸಂಬಂಧವು) ಪ್ರಧಾನವಾಗಿ ಭಾವಿಸಲ್ಪಟ್ಟು ಆ ವಿಷಯವಾಗಿ ಉಂಟಾಗಿರುವ ಹೆಚ್ಚು ಕಡಿಮೆಗಳಮೇರೆ ವಾರಸುದಾರರ ಕ್ರಮವು ಏರ್ಪಡಿಸಲ್ಪಟ್ಟಿದೆ. ದಾಯಭಾಗದಲ್ಲಿ ಸತ್ತುಹೋದವನಿಗೆ ಪಿಂಡಪ್ರದಾನಕ್ರಿಯೆ ನಡೆಯಿಸುವ ಯೋಗ್ಯತೆಯೇ ಪ್ರದಾನವಾಗಿ ಭಾವಿಸಲ್ಪಟ್ಟು ಆ ವಿಷಯವಾಗಿ ಉಂಟಾಗಿರುವ ಆಧಿಕ್ಯವನ್ನು ಹಿಡಿದು ವಾರಸುದಾರರ ಕ್ರಮವು ಏರ್ಪಡಿಸಲ್ಪಟ್ಟಿದೆ. ಇದರಿಂದಲೇ ವಾರಸುದಾರರ ಕ್ರಮದಲ್ಲಿ ಮಿತಾಕ್ಷರ ದಾಯಭಾಗ ಸಿದ್ಧಾಂತಗಳಿಗೆ ಭೇದವು ಕಾಣಿಸುತ್ತಿದೆ.

ದಾಯಭಾಗ ಪ್ರಕಾರವಾಗಿ, ಪಿಂಡಪ್ರದಾನವನ್ನು ಹೊಂದುವವರಿಗಿಂತ ಕೊಡುವವರು ಸಮೀಪವಾರಸರಾಗಿ ಭಾವಿಸಲ್ಪಡುವರು. ಮತ್ತು ಉದಕದಾನಕ್ಕಿಂತಲೂ ಲೇಪದಾನವೂ ಲೇಪದಾನಕ್ಕಿಂತಲೂ ಪಿಂಡದಾನವೂ ಹೆಚ್ಚಾಗಿ ಭಾವಿಸಲ್ಪಡುವುದರಿಂದ ಸಮಾನೋದಕರಿಗಿಂತಲೂ ಸಕುಲ್ಯರೂ ಸಕುಲ್ಯರಿಗಿಂತಲೂ ಸಪಿಂಡರೂ ಸಮೀಪವಾರಸರಾಗಿ ಭಾವಿಸಲ್ಪಡುವರು. ಮತ್ತು ಪಿತೃವರ್ಗದವರಲ್ಲಿ ಒಬ್ಬರಿಗಾದರೂ ಹೆಚ್ಚು ಮಂದಿಗಾದರೂ ಪಿಂಡಪ್ರದಾನಮಾಡುವರು ಮಾತೃವರ್ಗದವರಿಗೆ ಪಿಂಡಪ್ರದಾನಮಾಡುವವರಿಗಿಂತಲೂ ಪಿತೃಮಾತೃವರ್ಗಗಳೆರಡಕ್ಕೂ ಪಿಂಡಪ್ರದಾನಮಾಡುವರು ಅವರಲ್ಲೊಂದು ತರಗತಿಗೆ ಮಾತ್ರವೇ ಪಿಂಡಪ್ರದಾನಮಾಡುವವರಿಗಿಂತಲೂ ಅಧಿಕವಾಗಿ ಭಾವಿಸಲ್ಪಡುವರು. ಇಂತಹ ವಿಧಿಗಳನ್ನು ಹಿಡಿದು ದಾಯಭಾಗದಲ್ಲಿ ವಾರಸುದಾರರ ಕ್ರಮವು ಏರ್ಪಡಿಸಲ್ಪಟ್ಟಿರುವುದರಿಂದ ಭಿನ್ನಗೋತ್ರರಾದರೂ ಪಿಂಡಪ್ರದಾನ ಯೋಗ್ಯತೆಯುಂಟಾಗಿರುವರಾದುದರಿಂದ ಬಂಧುವರ್ಗದವರೆಲ್ಲರೂ ಲೇಪಪ್ರದಾನಗಳನ್ನು ಮಾಡುವ ಸಕುಲ್ಯರಿಗಿಂತಲೂ ಉದಕದಾನಗಳನ್ನು ಮಾಡುವ ಸಮಾನೋದಕರಿಗಿಂತಲೂ ಮುಂಚೆ ವಾರಸುದಾರರಾಗುವರು. ಮಿತಾಕ್ಷರದಲ್ಲಿ ಪಿಂಡಪ್ರದಾನ ಯೋಗ್ಯತೆ ಅನುಸರಿಸಲ್ಪಡದೆ ಇರುವುದರಿಂದ ಬಂಧುವರ್ಗದವರು ಭಿನ್ನಗೋತ್ರರೆಂಬ ಕಾರಣವನ್ನು ಹಿಡಿದು ಸಗೋತ್ರರಾದ ಸಕುಲ್ಯ ಸಮಾನೋದಕರಾದಮೇಲೆ ವಾರಸರಾಗುವರು.

ಪುತ್ರ ಪೌತ್ರ ಪ್ರಪೌತ್ರರು.— ಪುತ್ರ ಪೌತ್ರ ಪ್ರಪೌತ್ರರು (ಎಂದರೆ ಮಗನು, ಮಮ್ಮಗನು, ಮರಿಮಗನು) - ಸತ್ತುಹೋದವನ ಆಸ್ತಿಗೆ ಎಲ್ಲರಿಗಿಂತಲೂ ಮೊದಲು ಅವನ ಪುತ್ರ ಪೌತ್ರ ಪ್ರಪೌತ್ರರು ವಾರಸುದಾರರಾಗಿರುವರು. ದಾಯಭಾಗ ಸಂಪ್ರದಾಯ ಪ್ರಕಾರವಾಗಿ ಸಮಷ್ಟಿಕುಟುಂಬದ ಭಾಗಸ್ಥರು ಪ್ರತ್ಯೇಕಭಾಗಗಳಿಗೆ ಹಕ್ಕುಂಟಾಗಿರುವಂತೆಯೇ ಭಾವಿಸಲ್ಪಡುವರಾದುದರಿಂದ ಅವರಿಗೆ ವಾರಸು ಹಕ್ಕು ಸಲ್ಲುವುದೇ ಹೊರತು

ಮಿತಾಕ್ಷರದಲ್ಲಿ ಹಾಗೆ ಸಮುಷ್ಟಿ ಹಕ್ಕು ಸಲ್ಲದು. ಮಿತಾಕ್ಷರ ಪ್ರಕಾರವಾಗಿ ಸಮುಷ್ಟಿ ಕುಟುಂಬದಲ್ಲಿ ಸಮುಷ್ಟಿ ಹಕ್ಕು ಸಲ್ಲುವುದಲ್ಲದೆ ವಾರಸು ಹಕ್ಕು ಸಲ್ಲದು. ಎಂದರೆ, ಒಬ್ಬ ಭಾಗಸ್ಥನು ಸತ್ತುಹೋದಾಗ ಮಿಕ್ಕವರ ಭಾಗಗಳು ಹೆಚ್ಚುವುವು.

ತಂದೆಯೂ ಮಕ್ಕಳೂ ವಿಭಾಗಮಾಡಿಕೊಂಡಮೇಲೆ ಮತ್ತೆ ಕೆಲವರು ಮಕ್ಕಳು ಹುಟ್ಟಿದರೆ ಇವರು ಮಿತಾಕ್ಷರದ ಮೇರೆ ತಂದೆಯೊಡನೆ ಸಮುಷ್ಟಿ ಭಾಗಸ್ಥರಾಗುವರು. ಆದುದರಿಂದ ಆತನ ಯಾವದಾಸ್ತಿಯೂ ಇವರಿಗೇ ಸಲ್ಲುವುದು. ಹಾಗೆ ಸಮುಷ್ಟಿಯಾಗಿರುವ ಪುತ್ರ, ಪೌತ್ರ, ಪ್ರಪೌತ್ರರೊಬ್ಬರೂ ಇಲ್ಲದಿದ್ದರೆ ಮಿತಾಕ್ಷರ ಸಂಪ್ರದಾಯದ ಮೇರೆ ತಂದೆಯ ಆಸ್ತಿಗೆ ವಿಭಕ್ತರಾದ ಪುತ್ರ, ಪೌತ್ರ, ಪ್ರಪೌತ್ರರು ವಾರಸರಾಗುವರು. ವಿಭಕ್ತರಾದರೂ ಸರಿಯೆ, ಅವಿಭಕ್ತರಾದರೂ ಸರಿಯೆ, ಪುತ್ರ ಪೌತ್ರ ಪ್ರಪೌತ್ರರಿರುವವರೆಗೂ ಆಸ್ತಿದಾರನ ಹೆಂಡತಿಗೆ ಜೀವನಾಂಶದ ಹಕ್ಕು ಮಾತ್ರವೇ ಉಂಟಾಗಿರುವುದಲ್ಲದೆ ವಾರಸು ಹಕ್ಕು ಉಂಟಾಗಿರುವುದಿಲ್ಲ.

ದಾಸೀಪುತ್ರನ ಹಕ್ಕು ವಿಷಯಕವಾಗಿ ಮೇಲೆ ಉದಾಹರಿಸಲ್ಪಟ್ಟ ಧರ್ಮಶಾಸ್ತ್ರ ವಾಕ್ಯದಲ್ಲಿ ಆಸ್ತಿದಾರನ ಮಗನೂ, ಮಗಳೂ, ಮಗಳ ಮಗನೂ ಮಾತ್ರವೇ ಹೇಳಲ್ಪಟ್ಟು ಆಸ್ತಿದಾರನ ಹೆಂಡತಿಯ ಮಾತು ಸ್ಪಷ್ಟವಾಗಿ ಹೇಳಲ್ಪಡದೆ ಇದೆ. ಈ ಕಾರಣದಿಂದ ದಾಸೀಪುತ್ರನು ಇರುವಾಗ ಆಸ್ತಿದಾರನ ಹೆಂಡತಿಗೆ ಜೀವನಾಂಶದ ಹಕ್ಕು ಮಾತ್ರವೇ ಉಂಟಾಗಿರುವುದೆಂದು ಅರ್ಥಮಾಡಿ ಆ ಪ್ರಕಾರವಾಗಿ ಎರಡು ಕೇಸುಗಳಲ್ಲಿ ಬೊಂಬಯಿ ಹೈಕೋರ್ಟಿನವರು ತೀರ್ಮಾನಿಸಿದರು. (ಇ ಲಾ ರಿ ೧ ಬೊಂ, ೯೭, ೧೦೪; ಇ ಲಾ ರಿ ೪ ಬೊಂ ೩೭, ೫೨.) ಆದರೆ ಈಚೀಚೆಗೆ ಮತ್ತೊಂದು ಕೇಸಿನಲ್ಲಿ ಆಸ್ತಿದಾರನ ದೌಹಿತ್ರರ (ಎಂದರೆ ಮಗಳ ಕುಮಾರರ) ವರೆಗೆ ಯಾವ ವಾರಸುಗಳಿದ್ದರೂ ಔರಸಪುತ್ರರಿಗೆ ಸಲ್ಲತಕ್ಕ ಭಾಗದಲ್ಲಿ ಅರ್ಧ ಮಾತ್ರವೇ ದಾಸೀಪುತ್ರನಿಗೆ ಸಂದು ಮಿಕ್ಕ ಅರ್ಧವು ಸದರಿ ಇತರ ವಾರಸರಿಗೆ ಸಲ್ಲುವುದೆಂದೇ ಅರ್ಥ ಮಾಡಿ ಬೊಂಬಯಿ ಹೈ ಕೋರ್ಟಿನವರು ತೀರ್ಮಾನಿಸಿರುವರು. (ಇ ಲಾ ರಿ ೧೪ ಬೊಂ ೨೮೨.)

ವಿಭಾಗ ಯೋಗ್ಯವಲ್ಲದ ಜಮೀಂದಾರೀ ವಿಷಯದಲ್ಲಿ ಜಮೀಂದಾರನ ದಾಸೀಪುತ್ರನಿಗಿಂತಲೂ ಮುಂಚೆ ವಿತಂತು ವಾರಸುದಾರಳಾಗುವಳೆಂದು ಮದರಾಸು ಹೈಕೋರ್ಟಿನವರು ತೀರ್ಮಾನಿಸಿರುವರು. (ಇ ಲಾ ರಿ ೧೦ ಮ ೩೩೪)

ಶೂದ್ರರಲ್ಲಿ ದಾಸೀಪುತ್ರ ಸಮುಷ್ಟಿ ಹಕ್ಕು — ದಾಸೀಪುತ್ರನಿಗೆ ಔರಸಪುತ್ರನೊಡನೆ ಸಮುಷ್ಟಿ ಹಕ್ಕುಂಟಾದ ಮೇಲೆ ಔರಸಪುತ್ರನು ಪುತ್ರಸಂತತಿ

ಇಲ್ಲದೆ ಮೃತನಾದ ಪಕ್ಷದಲ್ಲಿ ಯಾವದಾಸ್ತಿಯೂ ದಾಸೀಪುತ್ರನಿಗೇ ಸೇರುವುದಲ್ಲದೆ ಹಿಂದಣ ಆಸ್ತಿದಾರನ ಹೆಂಡತಿ ಮಗಳು ಮುಂತಾದವರಿಗೆ ಎಷ್ಟುಮಾತ್ರವೂ ಸೇರಲಾರದು. ಉದಾಹರಣವು.—

ಬೊಂಬಯಿ ದೇಶದಲ್ಲಿ ಒಬ್ಬ ಶೂದ್ರನು ಸತ್ತುಹೋದಾಗ ಆತನಿಗೆ ಔರಸಪುತ್ರನು, ದಾಸೀಪುತ್ರನು ಇಬ್ಬರು ಹೆಂಡತಿಯರು ಮಗಳು—ಇವರಯಿದು ಮಂದಿಯೂ ಇದ್ದರು. ಯಾವದಾಸ್ತಿಗೂ ಔರಸಪುತ್ರನೂ ದಾಸೀಪುತ್ರನೂ ಜಾಯಿಂಟಾಗಿ ಹಕ್ಕುದಾರರಾಗಿ ಸಮುಷ್ಟಿಕುಟುಂಬವು ಏರ್ಪಡುವುದರಿಂದ ಹೆಂಡತಿಯರ ಜೀವನಾಂಶ ವಿಷಯಕವಾದ ಭಾರವನ್ನು, ಮಗಳ ವಿವಾಹಾದಿ ಕಾರ್ಯಗಳ ವಿಷಯಕವಾದ ಭಾರವನ್ನು ಸದರಿ ಆಸ್ತಿ ವಹಿಸಿತ್ತು. ಆ ಮೇಲೆ ಔರಸಪುತ್ರನು ಪುತ್ರಸಂತತಿಯಿಲ್ಲದೆ ಸತ್ತನು. ಆಗ ಯಾವದಾಸ್ತಿಯೂ ದಾಸೀಪುತ್ರನಿಗೆ ಸೇರಿ ಮೊದಲಿನಂತೆಯೇ ಹೆಂಡತಿಯ ಕುಮಾರಿಯರ ಜೀವನಾಂಶಾದಿ ಭಾರವನ್ನು ವಹಿಸಿರುವುದೆಂದು ಬೊಂಬಯಿ ಹೈ ಕೋರ್ಟಿನವರು ತೀರ್ಮಾನಿಸಿದರು. (ಇ ಲಾ ರಿ ೪ ಬೊಂ ೩೭, ೪೨; ಇ ಲಾ ರಿ ೧೧ ಕ ೭೦೨.) ತಂದೆಯ ಜೀವಿತಕಾಲದಲ್ಲಿಯೇ ಔರಸಪುತ್ರನು ನಿಸ್ಸಂತಾನನಾಗಿ ಸತ್ತುಹೋಗಿದ್ದಪಕ್ಷದಲ್ಲಿ ದಾಸೀಪುತ್ರನಿಗೆ ಯಾವದಾಸ್ತಿಯಲ್ಲಿ ಅರ್ಧಭಾಗವು ಮಾತ್ರವೇ ಸಂದು, ಮಿಕ್ಕರ್ಧವು ಆಸ್ತಿದಾರನ ಹೆಂಡತಿಗೆ ಸಂದಿರುವುದು.

ಹೆಂಡತಿ.—ಪುತ್ರ ಪೌತ್ರ ಪ್ರಪೌತ್ರರಾರೂ ಇಲ್ಲದಿದ್ದರೆ ಸತ್ತುಹೋದವನ ಹೆಂಡತಿ ವಾರಸದಾರಳಾಗುವಳು. (ಇ ಲಾ ರಿ ೨ ಮ ೧೮೨; ಇ ಲಾ ರಿ ೩ ಬೊಂ ೫೪; ೨ ಸ ೪೯.) ಹೆಂಡತಿಯಲ್ಲಿ ಸಂತಾನರೂಪಕವಾಗಿ ಗಂಡನು ಸತ್ತುಹೋದರೂ ಆತನ ಹೆಂಡತಿ ಬದುಕಿದ್ದರೆ ಗಂಡನ ಶರೀರದಲ್ಲಿ ಅರ್ಧಭಾಗವಿರುವಂತೆಯೇ ಧರ್ಮಶಾಸ್ತ್ರಗಳೊರೆವುವು. ಈ ಕಾರಣದಿಂದಲೂ ಪುತ್ರಹೀನನಾಗಿ ಸತ್ತುಹೋದ ಗಂಡನಿಗೆ ಅಪರಕರ್ಮ ನಡೆಯಿಸುವ ಕಾರಣದಿಂದಲೂ ಗಂಡನ ಸಪಿಂಡಳಾಗಿ ಭಾವಿಸಲ್ಪಟ್ಟ ಹೆಂಡತಿ ಪುತ್ರಸಂತತಿಗೆ ಮೇಲೆ ವಾರಸಾಗಿ ಏರ್ಪಟ್ಟಿರುವಳು. (೯ ಮೂ. ಇ. ಅ. ೬೧೦ ಇ. ಲಾ. ರಿ. ೧ ಮ. ೨೬೮.)

ಅನೇಕಪತ್ನಿಯರು— ಆಸ್ತಿದಾರನಿಗೆ ಇಬ್ಬರು ಮೂರುಮಂದಿ ಹೆಂಡತಿಯರಿರುವಾಗ ಯಾವದಾಸ್ತಿಯೂ ಅವರಿಗೆ ಒಟ್ಟಾಗಿ ಸೇರುವುದು. ಅವಿಭಾಜ್ಯವಾದ ಜಮೀಂದಾರಿ ವಿಷಯದಲ್ಲಿ ಜ್ಯೇಷ್ಠಭಾರ್ಯೆ ಪರಿಪಾಲನಕರ್ತ್ರಿ ವಾಗಿದ್ದು ಮಿಕ್ಕ ಹೆಂಡತಿಯರು ಜೀವನಾಂಶಕ್ಕೆ ಮಾತ್ರವೇ ಹಕ್ಕುದಾರರಾಗಿರುವರು. (೧ ಮ. ತೀ. ೪೫೩; ೨ ಮ. ತೀ. ೪೦.)

ಅಸಂಪೂರ್ಣ ಸ್ವಾತಂತ್ರ್ಯವು—ಹೆಂಡತಿ ಮುಂತಾದ ಸ್ತ್ರೀವಾರಸರಿಗೆ ವಾರಸು ಹಕ್ಕಿನಿಂದ ಪುರುಷರ ಆಸ್ತಿಬಂದಾಗ, ಅದರ ವಿಷಯಕವಾಗಿ

ಅವರಿಗೆ ಸಂಪೂರ್ಣ ಸ್ವಾತಂತ್ರ್ಯವುಂಟಾಗದೆ ಯಾವಜ್ಜೀವವೂ ಅನುಭವಿಸುವುದಕ್ಕೂ ಆವಶ್ಯಕವಾದ ಕಾರ್ಯಗಳ ನಿಮಿತ್ತವಾಗಿ ವ್ಯಯವಿಡುವುದಕ್ಕೂ ಮಾತ್ರವೇ ಹಕ್ಕುಂಟಾಗುವುದು. ಯಾರಾದರೂ ತನ್ನ ಪಾಲು ಭಾಗವನ್ನು ತನ್ನ ಜೀವಿತಕಾಲದವರೆಗೂ ಪರಾಧೀನ ಮಾಡಬಹುದು ಮತ್ತು ಹೀಗೆ ಪರಾಧೀನ ಹೊಂದಿದವನು ಮಿಕ್ಕಹೆಂಡತಿಯರ ಮೇಲೆ ವಿಭಾಗ ನಿಮಿತ್ತವಾಗಿ ದಾವಾತರಬಹುದು. ಸದರಿ ಪರಾಧೀನವು ಯಾವ ಹೆಂಡತಿಯಿಂದ ಮಾಡಲ್ಪಟ್ಟಿತೋ ಆಕೆಯ ಜೀವಿತಕಾಲಕ್ಕೆ ಮೇಲೆ ಸಲ್ಲಲಾರದು (ಇ. ಲಾ. ರಿ. ೯ ಕ. ೫೮೦; ಇ. ಲಾ. ರಿ. ೧೧ ಮು. ೩೦೪.)

ವ್ಯಭಿಚಾರದೋಷವು—ಗಂಡನು ಬದುಕಿರುವಾಗ ವ್ಯಭಿಚಾರಿಣಿಯಾಗಿ ಸಂಚರಿಸಿದ ಹೆಂಡತಿಗೆ ವಾರಸುಹಕ್ಕಿನಿಂದ ಗಂಡನ ಆಸ್ತಿ ಬರಲಾರದು (೧೩ ಕ. ಹೈ. ೧.) ವ್ಯಭಿಚಾರಕಾರಣದಿಂದ ಗಂಡನಿಂದ ಬಿಡಲ್ಪಟ್ಟ ಹೆಂಡತಿಯ ವಿಷಯವಾಗಿ ಮಾತ್ರವೇ ಈ ವಿಧಿ ಸಲ್ಲುವುದಲ್ಲದೆ ಗಂಡನು ಸಮ್ಮತಿಪಟ್ಟು ಇಟ್ಟುಕೊಂಡ ಹೆಂಡತಿಗೆ ಸಲ್ಲಲಾರದೆಂದು ಹೇಳತಕ್ಕದ್ದಾಗಿದೆ.

ಗಂಡನು ಸತ್ತುಹೋದಮೇಲೆ ಹೆಂಡತಿ ವ್ಯಭಿಚಾರಿಣಿಯಾಗಿ ಸಂಚರಿಸಿದರೆ, ಆತನ ಆತ್ಮೋಜ್ಜೀವನಕ್ಕೆ ಬೇಕಾದ ವೈದಿಕಕರ್ಮಗಳನ್ನು ನಡೆಯಿಸುವುದಕ್ಕೆ ಆಕೆ ಯೋಗ್ಯಳಾಗಿರುವುದಿಲ್ಲವಾದುದರಿಂದ ವಾರಸುಹಕ್ಕಿನಿಂದ ಆಕೆಗೆ ಬಂದಿರುವ ಗಂಡನ ಆಸ್ತಿತಪ್ಪಿಹೋಗುವುದು ಎಂದು ಪೂರ್ವಕಾಲದಲ್ಲಿ ಕೆಲವರು ಅಭಿಪ್ರಾಯಪಟ್ಟರು. ಆದರೆ, ಈಚೆಗೆ ಈವಿಷಯವು ಚೆನ್ನಾಗಿ ಚರ್ಚಿಸಲ್ಪಟ್ಟು ಗಂಡನು ಸತ್ತುಹೋದಮೇಲೆ ಆತನ ಹೆಂಡತಿ ವ್ಯಭಿಚಾರಿಣಿಯಾಗಿ ಸಂಚರಿಸಿದರೂ, ಆಕೆಗೆ ಬಂದಿರುವ ಗಂಡನ ಆಸ್ತಿಹೋಗಲಾರದೆಂದು ಹೈಕೋರ್ಟಿನವರಿಂದಲೂ ಪ್ರೀವೀ ಕೌನ್ಸಿಲನವರಿಂದಲೂ ಕೂಡ ತೀರ್ಮಾನಿಸಲ್ಪಟ್ಟಿದೆ. (೧೩ ಕ. ಹೈ. ೧; ಇ. ಲಾ. ರಿ. ೫ ಕ. ೭೭೬; ೪ ಬೊಂ. ಹೈ. ೨೫; ಇ. ಲಾ. ೨ ಅ. ೧೫೦, ೧೭೧; ೧೮೫೮ ಸಂ|| ಬಂ. ಸ. ತೀ. ೧೮೯೧)

ಪುನರ್ವಿವಾಹ—ಆಸ್ತಿದಾರನು ಸತ್ತುಹೋದಮೇಲೆ ಆತನ ಆಸ್ತಿಗೆ ವಾರಸುದಾರಳಾಗಿ ಏರ್ಪಟ್ಟ ಹೆಂಡತಿ, ಮರಳಿ ಮದುವೆ ಮಾಡಿಕೊಂಡರೆ, ಆಕೆ ಸತ್ತುಹೋದಂತೆ ಭಾವಿಸಲ್ಪಡುವಳು. ಆದುದರಿಂದ ಗಂಡನ ಆಸ್ತಿಯಲ್ಲಿ ಆಕೆಗೆ ಉಂಟಾಗಿರುವ ಎಲ್ಲಾಹಕ್ಕುಗಳನ್ನೂ ನಾಶಗೊಳಿಸಿ, ಆಕೆಗೆ ಅನಂತರದಲ್ಲಿ ಬರುವ ವಾರಸರಿಗೆ ಸದರಿ ಆಸ್ತಿ ಸಲ್ಲುವುದು. ಮರಳಿ ವಿವಾಹವನ್ನು ಮಾಡಿಕೊಳ್ಳಬಹುದೆಂದು ಗಂಡನು ಅಪ್ಪಣೆಯಿತ್ತು ಸತ್ತುಹೋದಪಕ್ಷದಲ್ಲಿ ಸದರಿ ಆಸ್ತಿಯಲ್ಲಿ ಆಕೆಯ ಹಕ್ಕುಗಳು ನಿಲ್ಲುವುವು. (೧೮೫೬ ಸಂ|| ೧೫ ನಂ|| ಹಿಂದೂ ವಿಧವಾವಿವಾಹ ನಿಬಂಧನೆ, ಸೆ. ೨; ಇ.

ಲಾ. ರಿ. ೧೯ ಕ. ೨೮೯, ೨೯೨; ೧೩ ಕ. ಹೈ. ೭೫; ೧ ಬಾರೊ. ೪೩೧; ಇ. ಲಾ. ರಿ. ೧ ಮ. ೨೦೬; ಇ. ಲಾ. ರಿ. ೭ ಮ. ೩೬೧. ಆದರೆ, ಇ. ಲಾ. ರಿ. ೧೧ ಅ. ೩೩೦.)

ಮಗಳು—ಮಗಳು ಸತ್ತುಹೋದ ಆಸ್ತಿದಾರನಿಗೆ ಪುತ್ರ ಪ್ರಪೌತ್ರರಾದರೂ ಹೆಂಡತಿಯಾದರೂ ಇಲ್ಲದಿದ್ದರೆ, ಮಗಳು ವಾರಸುದಾರಳಾಗುವಳು. ಮತ್ತು ಆಸ್ತಿದಾರನ ಹೆಂಡತಿ ವಾರಸುದಾರಳಾಗಿ ಏರ್ಪಟ್ಟರೂ, ಆಕೆಗೆ ತನ್ನ ಜೀವಿತಕಾಲವೆಲ್ಲವೂ ಆಸ್ತಿಯನ್ನು ಅನುಭವಿಸುವ ಹಕ್ಕು ಮಾತ್ರವೇ ಉಂಟಾಗಿರುವುದಾದುದರಿಂದ, ಆಕೆ ಸತ್ತುಹೋದಾಗ ಮರಳಿ ಹಿಂದಣ ಆಸ್ತಿದಾರನಿಗೆ ಯಾರು ಸಮೀಪ ವಾರಸರಾಗಿರುವರೋ ಅವರಿಗೇ ಆಸ್ತಿ ಸಲ್ಲುವುದು. ಆದುದರಿಂದ ಹೆಂಡತಿಗೆ ಅನಂತರದಲ್ಲಿ ಮಗಳು ವಾರಸುದಾರಳಾಗುವಳು. ಸಪಿಂಡಿವರ್ಗದಲ್ಲಿ ಸೇರದವಳಾದರೂ, ಹೀಗೆ ಹೆಂಡತಿಗೆ ಅನಂತರದಲ್ಲಿ ಅನೇಕ ಸಪಿಂಡರಿಗೆ ಮುಂಚೆ ಮಗಳು ವಾರಸುದಾರಳಾಗಿ ಸೇರಿಸಲ್ಪಟ್ಟಿರುವುದಕ್ಕೆ ಎರಡು ಕಾರಣಗಳು ಗ್ರಹಿಸಲ್ಪಡತಕ್ಕವುಗಳಾಗಿವೆ. ೧. ತಂದೆಯೊಡನಿರುವ ಸಮೀಪ ರಕ್ತಸಂಬಂಧವು. ೨. ಪಿಂಡಪ್ರದಾನ ಯೋಗ್ಯತೆಯುಳ್ಳ ಮಗನನ್ನು (ಪೌತ್ರನನ್ನು) ಉಂಟುಮಾಡುವ ವಿಷಯವು.

ವ್ಯಭಿಚಾರದೋಷವು—ವಾರಸುಹಕ್ಕು ವಿಷಯದಲ್ಲಿ ಹೆಂಡತಿಯೇ ಮಗಳಿಗೆ ಕೂಡ ವ್ಯಭಿಚಾರದೋಷದ ಬಾಧಕವುಂಟೆಂದು ಕಲ್ಕತ್ತಾ ಹೈಕೋರ್ಟ್‌ನವರು ತೀರ್ಮಾನ ಮಾಡಿರುವರು. ಎಂದರೆ- ವ್ಯಭಿಚಾರಿಣಿಯಾದ ಕುಮಾರಿಗೆ ವಾರಸುಹಕ್ಕಿನಿಂದ ಆಸ್ತಿ ಬರಲಾರದಾದರೂ. ಆಸ್ತಿಗೆ ಹಕ್ಕುಂಟಾದ ಮೇಲೆ ಮಗಳು ವ್ಯಭಿಚಾರಿಣಿಯಾಗಿ ಸಂಚರಿಸಿದಪಕ್ಷದಲ್ಲಿ. ಸದರಿ ಆಸ್ತಿಗೆ ಹಕ್ಕು ತಪ್ಪಲಾರದು. (೧೩ ಕ. ಹೈ. ೪೮; ಇ. ಲಾ. ರಿ. ಕ. ೫೫೦.)

ಹಲವರು ಹೆಣ್ಣುಮಕ್ಕಳು— ಸತ್ತುಹೋದ ಆಸ್ತಿದಾರನಿಗ ಒಬ್ಬಳು ಹೆಂಡತಿಯಿಂದಾದರೂ ಹಲವರು ಹೆಂಡತಿಯರಿಂದಾದರೂ ಹಲವರು ಹೆಣ್ಣುಮಕ್ಕಳಿರುವಾಗ ಅವರೆಲ್ಲರಲ್ಲಿಯೂ ಮದುವೆಯಾಗದ ಹೆಣ್ಣುಮಕ್ಕಳೇ ಎಲ್ಲಾ ಸಂಪ್ರದಾಯಗಳ ಪ್ರಕಾರವಾಗಿಯೂ ಮೊದಲು ವಾರಸುದಾರರಾಗುವರು. ವಿವಾಹವಾಗದ ಹೆಣ್ಣುಮಕ್ಕಳು ಇಲ್ಲದಾಗಲೂ, ಅವರೆಲ್ಲರೂ ಸತ್ತುಹೋದಮೇಲೆಯೂ, ಯಾವ ಹೆಣ್ಣುಮಕ್ಕಳು ವಾರಸರಾಗುವರು ? ಎಂಬ ವಿಷಯವನ್ನು ಕುರಿತು ಆಯಾ ಸಂಪ್ರದಾಯಗಳಿಗೆ ಕೊಂಚ ಭೇದವು ಕಾಣಬರುತ್ತಿದೆ.

ದಾಯಭಾಗ ಸಂಪ್ರದಾಯಪ್ರಕಾರವು—(೧.) ವಿವಾಹವಾಗದ ಹೆಣ್ಣುಮಕ್ಕಳು ಮೊದಲು ವಾರಸರಾಗುವರು. (೨) ಇವರಿಲ್ಲದಾಗಲೂ ಇವರೆಲ್ಲ

ರೂ ಸತ್ತುಹೋದಮೇಲೆಯೂ, ಪುತ್ರಸಂತತಿಯುಂಟಾಗಿರುವ ಹೆಣ್ಣು ಮ
ಕ್ಕಳೂವುಂಟಾಗತಕ್ಕ ಹೆಣ್ಣುಮಕ್ಕಳೂ ಸೇರಿ ವಾರಸರಾಗುವರು. (ಇ. ಲಾ
ರಿ. ೧೮ ಕ. ೩೩೭.) ಪುತ್ರಸಂತತಿ ಇಲ್ಲದ ವಿಧವೆ ಹೆಣ್ಣುಮಕ್ಕಳೂ ಬಂಜೆ
ಯರಾಗಿರುವ ಹೆಣ್ಣುಮಕ್ಕಳೂ, ಸ್ತ್ರೀ ಸಂತಾನಮಾತ್ರವೇವುಂಟಾಗಿರುವ
ಹೆಣ್ಣುಮಕ್ಕಳೂ. ಇವರು ಯಾವಸಂದರ್ಭದಲ್ಲಿಯೂ ವಾರಸರಾಗಲಾ
ರೆಂದು ತೀರ್ಮಾನಗಳು ಮಾಡಲ್ಪಟ್ಟವೆ. (೨ ಡಬ್ಲಿಯು ಮೆಕ್. ೩೯,
೪೪, ೪೬, ೪೯, ೫೮; ೩ ಬಂ. ಸ. ತೀ. ೩೬೨; ೨ ಸ. ೧೭೬.)

ಮಿತಾಕ್ಷರ ಸಂಪ್ರದಾಯಪ್ರಕಾರವಾಗಿ (೧.) ವಿವಾಹವಾಗದ ಹೆಣ್ಣು
ಮಕ್ಕಳು ಮೊದಲು ವಾರಸರಾಗುವರು. (೨.) ಇವರು ಇಲ್ಲದಾಗಲೂ ಇವ
ರೆಲ್ಲರೂ ಸತ್ತುಹೋದಮೇಲೆಯೂ, ಮದಿವೆಯಾದ ಹೆಣ್ಣುಮಕ್ಕಳಲ್ಲಿ ಬಡ
ವರಾಗಿರುವವರೆಲ್ಲರೂ ವಾರಸರಾಗುವರು. ಇವರು ವಿಧವೆಯರಾಗಿದ್ದರೂ
ಮುತ್ತಯಿದೆಯರಾಗಿದ್ದರೂ ಸರಿಯೆ ಸಮಾನವಾದ ಹಕ್ಕುಂಟಾದವರಾಗಿ
ರುವರು. (೩.) ಇವರು ಇಲ್ಲದಾಗಲೂ ಇವರ ಅನಂತರದಲ್ಲಿಯೂ ಮದಿ
ವೆಯಾದ ಹೆಣ್ಣುಮಕ್ಕಳಲ್ಲಿ ಭಾಗ್ಯವತಿಯಾಗಿರುವವರು ವಾರಸರಾಗುವರು.
ಇವರಿಗೆ ಕೂಡ ವಿಧವೆಯರು ಮುತ್ತಯಿದೆಯರು ಎಂಬ ಭೇದವಿಲ್ಲವು. ಈ
ಸಂಪ್ರದಾಯಪ್ರಕಾರವಾಗಿ ಹೆಣ್ಣುಮಕ್ಕಳ ವಾರಸು ಹಕ್ಕು ಅವರಿಗೆ ಪುತ್ರ
ಸಂತತಿಯುಂಟಾಗಿರುವುದನ್ನು ಹಿಡಿದು ಇರುವುದಿಲ್ಲ. ಕಾಶೀರಾಜ್ಯದಲ್ಲಿಯೂ
ಬೊಂಬಯಿ ಮದರಾಸು ಪ್ರಸಿಡೆನ್ಸಿಗಳಲ್ಲಿಯೂ ಈ ಮಿತಾಕ್ಷರ ಸಿದ್ಧಾಂ
ತವು ಸಲ್ಲುವುದು. (ಇ. ಲಾ. ರಿ. ೧೪ ಬೊಂ. ೪, ೧೨; ೨ ಬೊಂ. ಹೈ
೫; ೬ ಬೊಂ. ಹೈ. ೧೯೩; ಇ. ಲಾ. ರಿ. ೩ ಮ. ೨೬೫; ಇ. ಲಾ. ರಿ
೪ ಅ ೨೪೩; ಇ. ಲಾ. ರಿ ೨ ಅ. ೫೬೧; ಇ. ಲಾ. ರಿ. ೫ ಕ. ೫೯೭;
೨ ಸ. ೧೭೬.)

ಸಮಾನವಾದ ಹಕ್ಕು— ಮೇಲಣ ಪ್ಯಾರಾದಲ್ಲಿ ಹೇಳಲ್ಪಟ್ಟ ಪದ್ಧತಿ
ಯ ಹೆಣ್ಣು ಮಕ್ಕಳಿಗಾದರೂ ವಾರಸು ಹಕ್ಕಿನಿಂದ ತಂದೆಯ ಆಸ್ತಿಬಂದಾ
ಗ ಅವರೆಲ್ಲರೂ ಸದರಿಯಾಸ್ತಿಗೆ ಜಾಯಿಂಟಾಗಿ ಸಮಾನ ಹಕ್ಕುದಾರ
ರಾಗುವರು.

ಬೊಂಬಯಿ ಪ್ರಸಿಡೆನ್ಸಿಯಲ್ಲಿ ಮಾತ್ರವು ಹೆಣ್ಣು ಮಕ್ಕಳಿಗೆ ವಾರಸು
ಹಕ್ಕಿನಿಂದ ಆಸ್ತಿ ಬಂದಾಗ ಅದರಲ್ಲಿ ಅವರು ಪುರುಷರಂತೆಯೇ ಸಂಪೂ
ರ್ಣಸ್ವಾತಂತ್ರ್ಯವುಂಟಾಗಿರುವರು. ಆದುದರಿಂದ ಅವರಿಗೆ ಪುತ್ರಸಂತತಿ
ಇಲ್ಲದಾಗ ಅವರು ಅದನ್ನು ಪರಾಧೀನಮಾಡುವುದಕ್ಕೆ ಅಭ್ಯಂತರವಿರಲಾ
ರದು. (ಇ. ಲಾ. ರಿ. ೬ ಬೊಂ. ೮೫.)

ದೌಹಿತ್ರನು.—ದೌಹಿತ್ರನು (ಎಂದರೆ ಮಗಳ ಮಗನು) ಸತ್ತುಹೋದ ಆಸ್ತಿದಾರನಿಗೆ, ಪುತ್ರ ಪೌತ್ರ ಪ್ರಪೌತ್ರರಾದರೂ, ಹೆಂಡತಿಯಾದರೂ ಹೆಣ್ಣುಮಕ್ಕಳಾದರೂ ಇಲ್ಲದಾಗಲೂ ಹೆಣ್ಣುಮಕ್ಕಳಿಗೆ ಆಸ್ತಿಬಂದು ಅವರೆಲ್ಲರೂ ಸತ್ತುಹೋದ ಮೇಲೆಯೂ ದೌಹಿತ್ರನು (ಮಗಳ ಮಗನು) ವಾರಸನಾಗುವನು. ದೌಹಿತ್ರನು ಭಿನ್ನಗೋತ್ರನಾಗುವುದರಿಂದ ಬಂಧುವರ್ಗದಲ್ಲಿ ಸೇರಿದವನಾದರೂ, ಮಾತಾಮಹನಿಗೆ (ತಾಯಿತಂದೆಗೆ) ಆತನು ಮಾಡತಕ್ಕ ಪಿಂಡಪ್ರದಾನದಿಂದಲೂ ಪುತ್ರಹೀನನಾದವನು ತನ್ನ ಮಗಳ ಮಗನನ್ನು ತನ್ನ ಪುತ್ರನನ್ನಾಗಿ ನಿಯಮಿಸಿಕೊಳ್ಳುವಂತಹ ಆಚಾರವು ಪೂರ್ವಕಾಲದಲ್ಲಿ ಇದ್ದುದರಿಂದಲೂ ಸಗೋತ್ರ ಸಪಿಂಡರನೇಕರಿಗಿಂತಲೂ ಮುಂಚೆ ದೌಹಿತ್ರನು ವಾರಸುದಾರನಾಗುವುದು ಸಂಭವಿಸಿತೆಂದು ಹೇಳಲು ತಕ್ಕುದಾಗಿದೆ. ಹೆಣ್ಣುಮಕ್ಕಳಿಗೆ ಅನಂತರದಲ್ಲಿ ದೌಹಿತ್ರನು ವಾರಸುದಾರನಾಗುವ ವಿಷಯದಲ್ಲಿ ಮಿಥಿಲಸಂಪ್ರದಾಯಪ್ರಕಾರವಾಗಿ ಪೂರ್ವಕಾಲದೊಳಗೆ ಸಂಶಯವಿದ್ದಾಗ್ಯೂ ಈಗ ಸಂಶಯವು ತೀರಿ ಮಿಕ್ಕ ಪ್ರದೇಶಗಳಲ್ಲಿ ಹೇಗೋ ಹಾಗೆಯೇ ತೀರ್ಮಾನಿಸಲ್ಪಟ್ಟಿದೆ (೬ ಬಂ. ಸ. ತೀ. ೧೪೦.)

ಮಗಳ ದತ್ತಪುತ್ರನು ಕೂಡ ಔರಸಪುತ್ರನಂತೆಯೇ ವಾರಸು ಹಕ್ಕುಳ್ಳವನಾಗಿರುವನು.

ದೌಹಿತ್ರನಿಗೆ ಸಮಾನ ಭಾಗವು.—ಸತ್ತುಹೋದ ಆಸ್ತಿದಾರನಿಗೆ ಹೆಂಡತಿಯಾದರೂ ಯಾವತರಗತಿಗೆ ಸೇರಿದವಳಾದರೂ ಸರಿಯೆ ಒಬ್ಬ ಮಗಳಾದರೂ ಬದುಕಿರುವವರೆಗೂ ದೌಹಿತ್ರನಿಗೆ ವಾರಸು ಹಕ್ಕುಂಟಾಗದು. ಆಸ್ತಿದಾರನ ಹೆಂಡತಿಯೂ ಎಲ್ಲಾ ತರಗತಿಗಳ ಹೆಣ್ಣುಮಕ್ಕಳೂ ಸತ್ತುಹೋದಮೇಲೆಯೇ ದೌಹಿತ್ರನು ವಾರಸುದಾರನಾಗುವನು. (೧೫ ಕ ಹೈ ೧೦; ೧೮೬೧ ನಂ‖ಮು ತೀ ೧೩೭; ೧ ಡಬ್ಲಯು ಮೆಕ್ ೨೪, ೨ ಡಬ್ಲಿಯು ಮೆಕ್ ೫೭ ೧ ಅ ಹೈ ೨೦೦; ೩ ಲಾ ರಿ ೧ ಅ ೬೦೮; ೫ ಬೊಂ ಹೈ ೧೩೯; ೩ ಲಾ ರಿ ೮ ಅ ೩೬೫;) ಮತ್ತು ದೌಹಿತ್ರರ ವಾರಸು ಹಕ್ಕು ಅವರಿಗೆ ತಮ್ಮ ತಾಯಿಯರೊಡನೆ ಇರುವ ಸಂಬಂಧದಿಂದುಂಟಾಗದೆ ಮಾತಾಮಹನೊಡನೆ (ತಾಯಿತಂದೆಯೊಡನೆ) ಇರುವ ಸಂಬಂಧದಿಂದ ಉಂಟಾಗುವುದಾದುದರಿಂದ ಹಲವುಮಂದಿ ಹೆಣ್ಣುಮಕ್ಕಳಿಂದ ಅನೇಕ ದೌಹಿತ್ರರಿರುವಾಗ ಅವರೆಲ್ಲರಿಗೂ ಆಸ್ತಿ ಸಮಾನ ಭಾಗವಾಗಿ ಸೇರುವುದಲ್ಲದೆ ತಾಯಿಯರ ಸಂಖ್ಯೆಯಮೇರೆ ಸೇರಲಾರದು. ಎಂದರೆ ಒಬ್ಬ ಮಗಳಿಂದ ಇಬ್ಬರು ದೌಹಿತ್ರರೂ ಇನ್ನೊಬ್ಬ ಮಗಳಿಂದ ಇಬ್ಬರು ದೌಹಿತ್ರರೂ, ಮತ್ತೊಬ್ಬ ಮಗಳಿಂದ ಮೂವರು ದೌಹಿತ್ರರೂ ಬೇರೆಯೊಬ್ಬ ಮಗಳಿಂದ ನಾಲ್ವರು ದೌಹಿತ್ರರೂ ಇದ್ದ ಪಕ್ಷದಲ್ಲಿ ಆಸ್ತಿ ಒಂಭತ್ತು ಭಾಗಗಳಾಗಿ ವಿಭಾಗಿಸಲ್ಪಟ್ಟು ಸದರಿ ದೌಹಿತ್ರ

ರಿಗೆ ಒಂದೊಂದು ಭಾಗವು ಸೇರುವುದು. (೩ ಬಂ. ಸ. ತೀ. ೧೦೦.)

ಅವಿಭಾಜ್ಯವಾದ ಜಮೀನ್ದಾರೀಗೆ ದೌಹಿತ್ರರು ವಾರಸುದಾರರಾಗಿ ಏರ್ಪಟ್ಟ ಸಮಯದಲ್ಲಿ ಅವರೆಲ್ಲರಲ್ಲಿಯೂ ಹಿರಿಯನು ರಾಜ್ಯಾಧಿಕಾರಕ್ಕೆ ಕ್ಕುದಾರನಾಗಿ ಇರುವನಲ್ಲದೆ ಸದರಿ ಜಮೀನ್ದಾರೀ ಸೊತ್ತನ್ನು ಕಡೆ ಲ್ಲಿ ಅನುಭವಿಸುತ್ತಿದ್ದ ಮಗಳ ಮಗನು ಹಕ್ಕುದಾರನಾಗಲಾರನು. (ಮ. ಹೈ. ೩೧೦; ಇ. ಲಾ. ರಿ. ೩ ಮ. ೨೯೦.)

ದೌಹಿತ್ರನಿಗೆ ಸಂಪೂರ್ಣವಾದ ಹಕ್ಕು.—ದೌಹಿತ್ರನಿಗಿಂತಲೂ ಸಮೀ ಪ ವಾರಸರಾದ ಹೆಂಡತಿ, ಮಗಳು ಇವರು ಸತ್ತುಹೋದ ಕಾಲದಲ್ಲಿ ಮೂ ಲಪುರುಷನೇ ಸತ್ತುಹೋದಂತೆ ಭಾವಿಸಲ್ಪಟ್ಟು ಆತನ ಆಸ್ತಿ ದೌಹಿತ್ರರಿ ಸಮಭಾಗಗಳಾಗಿ ಸಲ್ಲುವುದು. ಆದುದರಿಂದ ದೌಹಿತ್ರರಿಗೆ ವಾರಸು ಕ್ಕು ಉಂಟಾಗುವುದಕ್ಕೆ ಮೊದಲೇ ಅವರಲ್ಲೊಬ್ಬನು ಸತ್ತುಹೋದಪಕ್ಷ ಲ್ಲಿ ಆಸ್ತಿಯೆಲ್ಲವೂ ಮಿಕ್ಕ ದೌಹಿತ್ರರಿಗೇ ಸಲ್ಲುವುದಲ್ಲದೆ ಸತ್ತುಹೋ ದೌಹಿತ್ರನ ಕುಮಾರರಿಗೆ ಎಷ್ಟುಮಾತ್ರವೂ ಸಲ್ಲಲಾರದು. ದೌಹಿತ್ರರಿ ವಾರಸು ಹಕ್ಕು ಉಂಟಾದ ಮೇಲೆ ಅವರಲ್ಲೊಬ್ಬನು ಸತ್ತುಹೋದ ಪಕ್ಷ ಲ್ಲಿ ಆಸ್ತಿಯಲ್ಲಿ ಆತನ ಪಾಲು ಭಾಗವು ಆತನ ಕುಮಾರರು ಮೊದಲಾ ವಾರಸರಿಗೇ ಸಲ್ಲುವುದಲ್ಲದೆ ಮಿಕ್ಕ ದೌಹಿತ್ರರಿಗೆ ಸಲ್ಲಬಾರದು. (ಇ. ಲ ರಿ. ೧೭ ಕ. ೩೩; ಇ. ಲಾ. ರಿ. ೭ ಮ. ೪೫೮.) ಹೆಂಡತಿಯಂತೆಯೂ ಮ ಳಂತೆಯೂ, ಅಲ್ಲದೆ ದೌಹಿತ್ರನು ಸಂಪೂರ್ಣ ಸ್ವಾತಂತ್ರ್ಯವುಳ್ಳ ವಾರಸ ದಾರನಾದುದರಿಂದ ಆತನಿಗೆ ಅನಂತರದಲ್ಲಿ ಆತನ ವಾರಸರಿಗೇ ಆಸ್ತಿ ಸಲ್ ವುದಲ್ಲದೆ ಹೆಂಡತಿಯನಂತರದಲ್ಲಿಯೂ ಮಗಳ ಅನಂತರದಲ್ಲಿಯೂ ಹೇಗೆ ಹಾಗೆ ಅಸಲು ಆಸ್ತಿದಾರನ ವಾರಸರಿಗೆ ಸಲ್ಲಲಾರದು. (ಇ. ಲಾ. ೫ ಅ. ೧೩೪.)

ತಾಯಿತಂದೆಗಳು.—ದೌಹಿತ್ರನಿಲ್ಲದೇ ಹೋದರೆ, ಆಸ್ತಿದಾರನ ತಾಯಿ ತಂದೆಗಳು ವಾರಸರಾಗುವರಲ್ಲದೆ ದೌಹಿತ್ರನ ಮಗನು ವಾರಸನಾಗಲಾರನ ಮಿತಾಕ್ಷರ ಸಂಪ್ರದಾಯ ಪ್ರಕಾರವಾಗಿ ಮೊದಲು ತಾಯಿಯೂ, ಆ ಮೆ ಲೆ ತಂದೆಯೂ, ವಾರಸರಾಗುವರು. ಮದರಾಸು ಬೊಂಬಯಿ ಪ್ರೆಸಿಡೆ ಸಿಗಳಲ್ಲಿಯೂ ಮಿಥಿಲ ಕಾಶೀರಾಜ್ಯಗಳಲ್ಲಿಯೂ ಈ ಪದ್ಧತಿ ಸಲ್ಲುತ್ತಿ (೨ ಡಬ್ಲ್ಯು ಮೆಕ್. ೫೫; ಪೆ. ಬು. ೧೧೦, ೪೪೮; ಇ.ಲಾ.ರಿ.೧೪ ಬೊ ೮೦೫.) ಗುಜರಾತುದೇಶದಲ್ಲಿ ಮಯೂಖ ಗ್ರಂಥಾಭಿಪ್ರಾಯವನ್ನನುಸ ಸಿ ಮೊದಲು ತಂದೆಯೂ ಆಮೇಲೆ ತಾಯಿಯೂ ವಾರಸರಾಗುವರು. (ಲಾ. ರಿ. ೬ ಬೊಂ. ೫೮೧.) ಬಂಗಾಳಾ ಸಂಪ್ರದಾಯ ಪ್ರಕಾರವಾಗಿ ಕೂ ಮೊದಲು ತಂದೆಯೂ ಆ ಮೇಲೆ ತಾಯಿಯೂ ವಾರಸರಾಗುವರು. (೨ ಡ ಬ್ಲ್ಯು ಮೆಕ್. ೫೪; ೭ ಬಂ ಸ. ತೀ. ೧೦೮.)

ಅಸಂಪೂರ್ಣ ಸ್ವಾತಂತ್ರ್ಯವು.—ವಾರಸು ಹಕ್ಕಿನಿಂದ ಮಗನ ಆಸ್ತಿ ತಾಯಿಗೆ ಬಂದಾಗ ಅದರಲ್ಲಿ ಆಕೆಗೆ ಸಂಪೂರ್ಣ ಸ್ವಾತಂತ್ರ್ಯ ಉಂಟಾಗದೆ ಹೆಂಡತಿ, ಮಗಳು, ಮೊದಲಾದ ಸ್ತ್ರೀವಾರಸುದಾರರಿಗಂತೆ ಯಾವಜ್ಜೀವವೂ ಅನುಭವಿಸುವುದಕ್ಕೆ ಮಾತ್ರವೇ ಹಕ್ಕುಂಟಾಗಿರುವುದು. (೨ ಮ ಹೈ ೪೦೨; ೮ ಮ ಹೈ ೯೧; ೮ ಮೂ ಇ ಅ ೫೦೦.)

ಹೆಂಡತಿಯ ವಿಷಯದಲ್ಲಿ ಹೇಗೋ ಹಾಗೆಯೇ ತಾಯ ವಿಷಯದಲ್ಲಿ ಕೂಡ ವಾರಸು ಹಕ್ಕನ್ನು ವ್ಯಭಿಚಾರದೋಷವು ಬಾಧಿಸುವುದೆಂದು ಕಲಕತ್ತಾ ಹೈಕೋರ್ಟಿನವರು ತೀರ್ಮಾನಮಾಡಿರುವರು. ಎಂದರೆ ವ್ಯಭಿಚಾರಿಣಿಯಾಗಿದ್ದ ತಾಯಿಗೆ ಕುಮಾರನ ಆಸ್ತಿಯಲ್ಲಿ ವಾರಸು ಹಕ್ಕು ಉಂಟಾಗಿರಲಾರದು ಆದರೆ ಆಸ್ತಿಗೆ ಹಕ್ಕುಂಟಾದ ಮೇಲೆ ವ್ಯಭಿಚಾರಿಣಿಯಾಗಿ ಸಂಚರಿಸಿದರೆ ಬಾಧಕವಿಲ್ಲವು. (ಇ. ಲಾ. ರಿ. ೪ ಕ ೫೫೦) ಬೊಂಬಯಿ, ಮದರಾಸು, ಅಲಹಾಬಾದು ಹೈಕೋರ್ಟುಗಳವರ ಅಭಿಪ್ರಾಯಗಳ ಪ್ರಕಾರವಾಗಿ ವ್ಯಭಿಚಾರದೋಷವು ಹೆಂಡತಿಯ ವಾರಸು ಹಕ್ಕನ್ನು ಮಾತ್ರವೇ ಬಾಧಿಸುವುದಲ್ಲದೆ ಮಗಳು ತಾಯಿ ಮುಂತಾದ ಸ್ತ್ರೀವಾರಸರ ಹಕ್ಕನ್ನು ಬಾಧಿಸಲಾರದು. (ಇ. ಲಾ. ರಿ, ೪ ಬೊಂ. ೧೨೪; ೨ ಅ. ಹೈ. ೩೬೩; ಇ. ಲಾ. ರಿ. ೧ ಅ. ೪೬; ಇ. ಲಾ. ರಿ. ೫ ಮ. ೧೪೯.)

ಪುನರ್ವಿವಾಹವು.—೧೮೫೬ ಸಂ|| ೧೫ ನೆಂ|| ಶಾಸನದ ಮೇರೆ ತಾಯಿ ಪುನರ್ವಿವಾಹ ಮಾಡಿಕೊಂಡರೂ ಆಕೆಗೆ ತನ್ನ ಮಗನ ಆಸ್ತಿಯಲ್ಲಿ ವಾರಸು ಹಕ್ಕು ನಾಶವಾಗಲಾರದು. (ಸೆ. ೫ ೨ ಕ. ಹೈ. ೧೯೯.)

ಉದಾಹರಣವು.—

'ಎ' ಎಂಬ ವಿಧವೆ ಮದಿವೆಯಾದಮೇಲೆ, ಆಕೆಯ ಮೊದಲ ಗಂಡನಿಂದ ಉಂಟಾದ 'ಬೀ' ಎಂಬ ಮಗನು ಪುತ್ರಸಂತತಿಯಾದರೂ, ಮಗಳಾದರೂ ದೌಹಿತ್ರನಾದರೂ ಇಲ್ಲದೆ ಸತ್ತನು. 'ಬಿ' ಎಂಬವನ ಆಸ್ತಿಗೆ 'ಎ' ವಾರಸುದಾರಳಾಗಿರುವುದಕ್ಕೆ ಆಕ್ಷೇಪವಿಲ್ಲವು.

ಮಲತಾಯಿ.—ದಾಯಭಾಗಪ್ರಕಾರವಾಗಿಯೂ ಮಿತಾಕ್ಷರ ಪ್ರಕಾರವಾಗಿಯೂ ಕೂಡ ಮಲೆತಾಯಿಗೆ ವಾರಸು ಹಕ್ಕಿಲ್ಲವು. (೫ ಬಂ. ಸ. ತೀ. ೩೧೫; ೬ ಬಂ. ಸ. ತೀ. ೫೩; ೧೮೫೨ ಸಂ|| ಬಂ. ಸ. ತೀ. ೫೬೩; ಇ. ಲಾ. ರಿ. ೪ ಬೊಂ. ೨೦೮; ಕ. ಹೈ. ಸಪ್ಲಿಮೆಂಟಲ್ ವಾಲ್ಯೂಂ ೬೭; ಇ. ಲಾ. ರಿ. ೫ ಮ, ೨೯, ೩೨; ಇ. ಲಾ. ರಿ. ೮ ಮ. ೧೦೭;

ಬೊಂಬಯಿ ಪ್ರೆಸಿಡೆನ್ಸಿಯಲ್ಲಿ ಮಾತ್ರವೇ ಮಲತಾಯಿಗೆ ವಾರಸು ಹಕ್ಕು ಉಂಟೆಂದು ತೀರ್ಮಾನಿಸಲ್ಪಟ್ಟಿದೆ. ಆದರೆ ಫಲಾನಿಯವರಾದ ಮೇಲೆ ಆಕೆ ವಾರಸುದಾರಳಾಗುವಳೆಂದು ನಿರ್ಧಾರಣೆ ಮಾಡಲ್ಪಡಲಿಲ್ಲ, ಅಲ್ಲಿ

ಕೂಡ ತಾಯೆಂಬ ಕಾರಣದಿಂದ ಆಕೆ ವಾರಸುದಾರಳಾಗಲಾರದೆ [ಸಗೋತ್ರಸಪಿಂಡನ ಹೆಂಡತಿಯಾದ ಕಾರಣದಿಂದ ವಾರಸುದಾರಳಾಗುವಳು.] ಇ. ಲಾ. ರಿ ೪ ಬೊ. ೧೮೮; ಆದರೆ ಇ. ಲಾ. ರಿ. ೧೧ ಬೊಂ. ೪೭

ಅಣ್ಣತಮ್ಮಂದಿರು ಏಕೋದರರು-ಭಿನ್ನೋದರರು-ಅಣ್ಣತಮ್ಮಂದಿರು ತಾಯಿತಂದೆಗಳಿಗೆ ಅನಂತರದಲ್ಲಿ ಅಣ್ಣತಮ್ಮಂದಿರು ವಾರಸದಾರರಾಗಿರುವರು. ಇವರಲ್ಲಿ ಏಕೋದರರಾದವರೂ (ಎಂದರೆ- ಒಂದು ತಾಯಿಮಕ್ಕಳು) ಭಿನ್ನೋದರರಾದವರೂ (ಮಲತಾಯಿಮಕ್ಕಳು) ಇದ್ದಪಕ್ಷದಲ್ಲಿ ಏಕೋದರರು ಮಾತ್ರವೇವಾರಸರಾಗುವರು. ಸವತಿಯಣ್ಣತಮ್ಮಂದಿರಿಗೆ ಆಸ್ತಿಯಲ್ಲಿ ಯಾವಭಾಗವೂ ಬರಲಾರದು. ಏಕೋದರರಾದ ಅಣ್ಣತಮ್ಮಂದಿರೊಬ್ಬರೂ ಇಲ್ಲದಪಕ್ಷದಲ್ಲಿ ಆಸ್ತಿಗೆ ಸವತಿಯಣ್ಣತಮ್ಮಂದಿರು ವಾರಸರಾಗುವರು. ಗುಜರಾತು ದೇಶದಲ್ಲಿಯೂ ಬೊಂಬಯಿಪಟ್ಟಣದಲ್ಲಿಯೂ ಮಾತ್ರವೇ ಅಲ್ಲಿ ಮುಖ್ಯಪ್ರಮಾಣವಾಗಿ ಸಲ್ಲುತ್ತಿರುವ ಮಯೂಖಗ್ರಂಥಪ್ರಕಾರವಾಗಿ ಏಕೋದರರಾದ ಅಣ್ಣತಮ್ಮಂದಿರೊಬ್ಬರೂ ಇಲ್ಲದೆ ಹೋದರೂ ಅವರಮಕ್ಕಳಿದ್ದಪಕ್ಷದಲ್ಲಿ ಯಾವದಾಸ್ತಿಯೂ ಇವರಿಗೇಸಲ್ಲುವುದಲ್ಲದೆ ಮಲತಾಯಿಮಕ್ಕಳಿಗೆ ಸಲ್ಲಲಾರದು. (೧೨ ಮೂ. ಇ. ಅ. ೫೨೩; ೩ ಕ. ಹೈ. ೧೩, ೧೦ ಬೊಂ. ಹೈ. ೬೫.)

ಅಣ್ಣತಮ್ಮಂದಿರಲ್ಲಿ ಕೆಲವರು ವಿಭಕ್ತರಾಗಿಯೂ ಕೆಲವರು ಸಮುಷ್ಟಿಯಾಗಿಯೂ ಇದ್ದು, ಸಮುಷ್ಟಿಯಾಗಿದ್ದವರಲ್ಲಿ ಒಬ್ಬನು ಸತ್ತುಹೋದರೆ ಆತನ ಆಸ್ತಿಯೆಲ್ಲವೂ ಸಮುಷ್ಟಿಯಾಗಿರುವ ಸೋದರರಿಗೇಸಲ್ಲುವುದಲ್ಲದೆ, ವಿಭಕ್ತಸೋದರರಿಗೆ ಸಲ್ಲಲಾರದು. (೩ ಕ. ಹೈ. ೭.)

ಮೃತಿಪಟ್ಟ ಆಸ್ತಿದಾರನೂ ಆತನ ಮಲತಾಯಿಮಗನೂ ಸಮುಷ್ಟಿಯಾಗಿದ್ದು ಸ್ವಂತಸೋದರನು ವಿಭಕ್ತನಾಗಿದ್ದಪಕ್ಷದಲ್ಲಿ, ದಾಯಭಾಗಪ್ರಕಾರವಾಗಿ ಇವರಿಬ್ಬರೂ ಸಮಾನಭಾಗಸ್ಥರಾಗುವರು. (ಇ ಲಾ ರಿ. ೧ ಕ. ೨೭.) ಈ ಸಂದರ್ಭದಲ್ಲಿ ಮಿತಾಕ್ಷರಪ್ರಕಾರವಾಗಿ ಯಾವದಾಸ್ತಿಗೂ ಮಲತಾಯಿಮಗನೇ ಹಕ್ಕುದಾರನಾಗುವನು.

ಏಕೋದರ ಭಿನ್ನೋದರ ಭೇದವು ಅಣ್ಣತಮ್ಮಂದಿರಿಗೂ ಅವರ ಪುತ್ರಸಂತತಿಗೂ ಮಾತ್ರವೇಸಲ್ಲುವುದಲ್ಲದೆ, ಚಿಕ್ಕಪ್ಪ ದೊಡ್ಡಪ್ಪ ಮುಂತಾದ ಮೇಲಣ ದರ್ಜೆಗೆ ಸೇರಿದ ವಾರಸರಿಗೆ ಸಲ್ಲುವುದಿಲ್ಲ. (ಇ. ಲಾ. ರಿ. ೬ ಬೊಂ. ೩೯೮.)

ಅಣ್ಣತಮ್ಮಂದಿರ ಕುಮಾರರು—ಅಣ್ಣತಮ್ಮಂದಿರ ಕುಮಾರರು ಸ್ವಂತ ಅಣ್ಣತಮ್ಮಂದಿರಾದರೂ ಮಲತಾಯಿಮಕ್ಕಳಾದರೂ ಯಾರೂಯಿಲ್ಲದಪಕ್ಷದಲ್ಲಿ ಅಣ್ಣತಮ್ಮಂದಿರ ಕುಮಾರರು ವಾರಸರಾಗುವರು. ಆಸ್ತಿದಾರನು ಸತ್ತುಹೋದಕಾಲದಲ್ಲಿ ಆತನ ಸ್ವಂತ ಅಲ್ಲದೆ ಮಲತಾಯಿಮಕ್ಕಳಲ್ಲಿ ಒಬ್ಬ

ನಾದರೂ ಜೀವಿಸಿದ್ದರೆ, ಆಸ್ತಿಯಾವತ್ತೂ ಆತನಿಗೇಸಲ್ಲುವುದಲ್ಲದೆ, ಅದಕ್ಕೆ ಪೂರ್ವದಲ್ಲಿ ಸತ್ತುಹೋದ ಅಣ್ಣತಮ್ಮಂದಿರ ಕುಮಾರರಿಗೆ ಸಲ್ಲಲಾರದು. (೩ ಬಂ. ಸ. ತೀ ೧೦೭, ೨೮೯; ೨೩ ಸ ೨೭೨) ಗುಜರಾತುದೇಶದಲ್ಲಿಯೂ ಬೊಂಬಯಿ ಪಟ್ಟಣದಲ್ಲಿಯೂ ಮಾತ್ರವೇ ಅಲ್ಲಿ ಪ್ರಮಾಣವಾಗಿ ಅಂಗೀಕರಿಸಲ್ಪಡುತ್ತಿರುವ ಮಯೂಖಗ್ರಂಥದ ಮೇರೆ, ಸ್ವಂತ ಅಣ್ಣತಮ್ಮಂದಿರ ಮಕ್ಕಳಿದ್ದಪಕ್ಷದಲ್ಲಿ ಇವರೇ ಆಸ್ತಿಗೆ ವಾರಸರಾಗುವರಲ್ಲದೆ ಮಲತಾಯಿ ಮಕ್ಕಳು ವಾರಸರಾಗಲಾರರು. (೧೨ ಮೂ. ಇ. ಅ. ೫೨೩; ೩ ಕ. ಹೈ. ೧೩ ಬೊಂ. ಹೈ, ೬೫.) ಮತ್ತು ಸದರಿ ಮಯೂಖಗ್ರಂಥದಮೇರೆ, ಆಸ್ತಿದಾರನ ಮರಣಕಾಲದಲ್ಲಿ, ಅಣ್ಣತಮ್ಮಂದಿರು ಕೆಲವರೂ, ಅದಕ್ಕೆ ಮೊದಲು ಸತ್ತುಹೋದ ಸೋದರನ ಮಗವೂ ಬದುಕಿದ್ದಪಕ್ಷದಲ್ಲಿ. ಈತನು ಅಣ್ಣತಮ್ಮಂದಿರೊಡನೆ ಸಮಭಾಗಕ್ಕೆ ಹಕ್ಕುದಾರನಾಗಿರುವನು.

ಆಸ್ತಿದಾರನು ಸತ್ತುಹೋದಕಾಲದಲ್ಲಿ ಬದುಕಿದ್ದು ಆಸ್ತಿಗೆ ವಾರಸುದಾರರಾಗಿ ಏರ್ಪಟ್ಟ ಅಣ್ಣತಮ್ಮಂದಿರಲ್ಲಿ ಒಬ್ಬನು ಆಸ್ತಿಯನ್ನು ವಿಭಾಗಮಾಡಿಕೊಳುವುದಕ್ಕೆ ಮುಂಚೆ ಸತ್ತುಹೋದಪಕ್ಷದಲ್ಲಿ ಆತನಪಾಲು ಭಾಗವು ಆತನ ಕುಮಾರರು ವಗೈರೆ ವಾರಸರಿಗೆ ಸಲ್ಲುವುದಲ್ಲದೆ, ಮಿಕ್ಕಅಣ್ಣತಮ್ಮಂದಿರಿಗೆ ಸಲ್ಲಲಾರದು. (೨ ಸ. ೧೨೩.)

ಸ್ವಂತ ಅಣ್ಣತಮ್ಮಂದಿರ ಕುಮಾರರು ಮಲತಾಯಿ ಮಕ್ಕಳ ಕುಮಾರರು—ಸತ್ತುಹೋದ ಆಸ್ತಿದಾರನ ಸ್ವಂತ ಅಣ್ಣತಮ್ಮಂದಿರ ಕುಮಾರರೂ ಸವತಿಯಣ್ಣತಮ್ಮಂದಿರ (ಮಲತಾಯಿಮಕ್ಕಳ) ಕುಮಾರರೂಕೂಡ ಇದ್ದಪಕ್ಷದಲ್ಲಿ, ಸ್ವಂತ ಅಣ್ಣತಮ್ಮಂದಿರ ಕುಮಾರರಲ್ಲಿ ಕೆಲವರು ಸತ್ತುಹೋದ ಆಸ್ತಿದಾರನೊಡನೆ ಸಮುಷ್ಟಿಯಾಗಿದ್ದು ಕೆಲವರು ವಿಭಕ್ತರಾಗಿದ್ದಪಕ್ಷದಲ್ಲಿ ಆಸ್ತಿ ಯಾವತ್ತೂ ಸಮುಷ್ಟಿಯಾಗಿದ್ದವರಿಗೇ ಸಲ್ಲುವದು. ಮಲತಾಯಿ ಮಕ್ಕಳ ಕುಮಾರರು ಆಸ್ತಿದಾರನೊಡನೆ ಸಮುಷ್ಟಿಯಾಗಿದ್ದು, ಸ್ವಂತ ಅಣ್ಣತಮ್ಮಂದಿರ ಕುಮಾರರು ವಿಭಕ್ತರಾಗಿದ್ದಪಕ್ಷದಲ್ಲಿ, ದಾಯಭಾಗಪ್ರಕಾರವಾಗಿ ಇವರಿಬ್ಬರೂ ಸಮಾನಭಾಗಸ್ಥರಾಗುವರು. [೩ ಸ. ೪೩; ೬ ಸ, ೯೩; ೩ ಕ. ಹೈ. ೭; ಇ. ಲಾ. ರಿ. ೧ ಕ, ೨೭.]

ಸಮಭಾಗಗಳು—ಅಣ್ಣತಮ್ಮಂದಿರ ಕುಮಾರರು ದೌಹಿತ್ರರ ಹಾಗೆಯೇ ಸಮಭಾಗಕ್ಕೆ ಹಕ್ಕುದಾರರಾಗುವರಲ್ಲದೆ ತಂದೆಯರ ಸಂಖ್ಯೆಯನ್ನು ಹಿಡಿದು ಭಾಗಗಳನ್ನು ಹೊಂದಲಾರರು. ಇದು ಹೇಗೆಂದರೆ— ಒಬ್ಬ ಆಸ್ತಿದಾರನ ಮರಣಕಾಲದಲ್ಲಿ ಆತನಿಗೆ "ಏ" ಎಂಬ ಅಣ್ಣನ ಕುಮಾರರಿಬ್ಬರೂ, "ಬಿ" ಎಂಬ ಅಣ್ಣನ ಕುಮಾರರು ಮೂರುಮಂದಿಯೂ ವಾರಸರಾಗಿ ಏರ್ಪಟ್ಟರು. ಈ ೫ ಮಂದಿಯೂ ಅವರ ಚಿಕ್ಕಪ್ಪನ ಆಸ್ತಿಯನ್ನು

ಸಮಭಾಗವಾಗಿ ಹೊಂದುವರು. (೧೫ ಸ. ೭೦ ; ೬ ಸ. ೯೩; ೯ ಸ. ೪೬೩.)

ಅಣ್ಣತಮ್ಮಂದಿರ ಮುಮ್ಮಕ್ಕಳು—ದಾಯಭಾಗಪ್ರಕಾರವಾಗಿ, ಅಣ್ಣತಮ್ಮಂದಿರ ಕುಮಾರರ ಅನಂತರದಲ್ಲಿ ಅಣ್ಣತಮ್ಮಂದಿರ ಮುಮ್ಮಕ್ಕಳು ವಾರಸರಾಗುವರು. (ಇ. ಲಾ. ರಿ. ೯ ಕ. ೫೬೩) ಮಿತಾಕ್ಷರ ಪ್ರಕಾರವಾಗಿ ಕೂಡ ಅಣ್ಣತಮ್ಮಂದಿರ ಕುಮಾರರಾದಮೇಲೆ ಅಣ್ಣತಮ್ಮಂದಿರ ಮುಮ್ಮಕ್ಕಳು ವಾರಸರಾಗುವರೆಂದು ಮಿಥಿಲದೇಶದಿಂದ ಬಂದ ಒಂದು ಕೇಸಿನಲ್ಲಿ ಬಂಗಾಳಾ ಸದರು ಕೋರ್ಟಿನವರು ತೀರ್ಮಾನಿಸಿದರು. (೧೮೫೫ ಸಂ॥ ಬಂ. ಸ ತೀ. ೩೮೨.) ಆದರೆ ಮದರಾಸು ಹೈಕೋರ್ಟಿನವರು ಈ ವಿಷಯವನ್ನು ಚೆನ್ನಾಗಿ ಚರ್ಚಿಸಿ, ಮಿತಾಕ್ಷರಪ್ರಕಾರವಾಗಿ ಅಣ್ಣತಮ್ಮಂದಿರ ಕುಮಾರರಾದಮೇಲೆ ಅಣ್ಣತಮ್ಮಂದಿರ ಮುಮ್ಮಕ್ಕಳು ವಾರಸರಲ್ಲವು ಎಂದು ತೀರ್ಮಾನ ಮಾಡಿರುವರು. (ಇ. ಲಾ. ರಿ. ೯ ಮ. ೨೯೧.)

ಮಿತಾಕ್ಷರ ದಾಯಭಾಗಗಳು ಬಿಟ್ಟುಹೋಗುವಿಕೆ— ವಾರಸರ ಕ್ರಮದಲ್ಲಿ ಅಣ್ಣತಮ್ಮಂದಿರ ಕುಮಾರರಾದಮೇಲೆ ಮಿತಾಕ್ಷರ ದಾಯಭಾಗಗಳಿಗೆ ಮುಖ್ಯವಾದ ಭೇದವೇರ್ಪಡುವುದು. ದಾಯಭಾಗದಲ್ಲಿ ಪಿಂಡಪ್ರದಾನ ಯೋಗ್ಯತೆಯನ್ನು ಹಿಡಿದು ವಾರಸು ಹಕ್ಕು ನಿರ್ಣಯಿಸಲ್ಪಡುವುದರಿಂದ, ಸಗೋತ್ರ ಸಪಿಂಡರೊಡನೆ ಕಲಿತು ಭಿನ್ನಗೋತ್ರ ಸಪಿಂಡರು (ಎಂದರೆ-ಬಂಧುಗಳು) ವಾರಸರಾಗಿಬಂದು ಆಮೇಲೆ ಸಕುಲ್ಯಸಮಾನೋದಕರು ವಾರಸರಾಗುವರು. ಮಿತಾಕ್ಷರದಲ್ಲಿ ಸಾಮೀಪ್ಯತೆಯನ್ನು (ಎಂದರೆ ರಕ್ತಸಂಬಂಧವನ್ನು) ಹಿಡಿದು ವಾರಸುಹಕ್ಕು ನಿರ್ಣಯಿಸಲ್ಪಡುವುದರಿಂದ, ಸಗೋತ್ರರೆಲ್ಲರೂ ಎಂದರೆ-ಸಪಿಂಡ ಸಕುಲ್ಯಸಮಾನೋದಕರೆಲ್ಲರೂ ಕಳೆದಮೇಲೆ ಹೊರತು ಭಿನ್ನಗೋತ್ರಜ್ಞಾತಿಗಳು (ಬಂಧುಗಳು) ವಾರಸರಾಗೇರ್ಪಡಲಾರರು. ಮಿತಾಕ್ಷರ ದಾಯಭಾಗಗಳ ಸಿದ್ಧಾಂತಪ್ರಕಾರವಾಗಿ ವಾರಸು ಕ್ರಮಗಳನ್ನು ತಿಳಿಸುವಪಟ್ಟಿಗಳು, ೩೧೧, ೩೧೩- ಪ್ಯಾರಾಗಳಲ್ಲಿ ವಿವರಿಸಲ್ಪಟ್ಟಿವೆ.

ಬಂಧುವರ್ಗದವರು— ದಾಯಭಾಗದಲ್ಲಿಯೂ ಮಿತಾಕ್ಷರದಲ್ಲಿಯೂ ಸ್ಪಷ್ಟವಾಗಿ ಹೇಳಲ್ಪಟ್ಟಿರುವ ಬಂಧುಗಳಲ್ಲದೆ, ಇನ್ನೂ ಅನೇಕರು ಬಂಧುವರ್ಗದಲ್ಲಿ ಸೇರುವಂತೆ ಹಿಂದೆ ವಿವರಿಸಿರುವೆವು. (೨೮೬- ನೆಯ ಪ್ಯಾರಾದೊಳಗಣ ವಂಶಾವಳಿ ಕೆಳಗಣ ರಿಮಾರ್ಕು; ೨೮೩- ನೆಯಪ್ಯಾರಾ.) ಇವರಲ್ಲಿ ಅಕ್ಕತಂಗಿಯರೂ, ಅವರ ಕುಮಾರರೂ, ಹಲವು ಕೇಸುಗಳಲ್ಲಿ ತೊಂದರೆಗಳಲ್ಲಿಬಿದ್ದು ಕಟ್ಟಕಡೆಗೆ ಈ ಕೆಳಗೆ ವಿವರಿಸಲ್ಪಟ್ಟಮೇರೆ ವಾರಸರಾಗಿ ನಿಂತಿರುವರು.

ಅಕ್ಕತಂಗಿಯರು—ಬಂಗಾಳಾ ಸಂಪ್ರದಾಯಪ್ರಕಾರವಾಗಿ, ಅಕ್ಕತಂ


ಗಿಯರಿಗೆ ವಾರಸುಹಕ್ಕಿಲ್ಲವು. ದಾಯಭಾಗದಲ್ಲಿ ಅವರು ಬಂಧುಗಳಾಗಿ ಹೇಳಲ್ಪಟ್ಟಿರಲಿಲ್ಲವು ಮಯಷ್ಟೆ, ಅವರಿಗೆ ಪಿಂಡಪ್ರದಾನ ವಿಷಯಕವಾದ ಯೋಗ್ಯತೆಕೂಡ ಏಷ್ಟುಮಾತ್ರವೂ ಇಲ್ಲವು. (೭ ಬಂ. ಸ. ತೀ. ೧೯೩; ೨ ಸ. ೧೮೦; ೫ ಸ. ೨೦೫; ೫ ಕ. ಹೈ ಪ್ಪೆಂಅಡಿಕ್ಸು, ೮೭; ೧೮೬ ಸಂ॥ ಬಂ. ಸ. ತೀ. ii ೩೪೨.) ಕಾಶೀಸಂಪ್ರದಾಯಪ್ರಕಾರವಾಗಿ ಕೂಡ ಅಕ್ಕತಂಗಿಯರು ವಾರಸರಲ್ಲವು. ಇ. ಲಾ. ರಿ. ೫ ಅ. ೩೧೧.) ಅಕ್ಕತಂಗಿಯರು ಭಿನ್ನಗೋತ್ರಕ್ಕೆ ಸೇರಿದವರಾದರೂ ಅಣ್ಣತಮ್ಮಂದಿರೊಡನೆ ಶರೀರಸಂಬಂಧ ಉಂಟಾಗಿದ್ದವರಾದ್ದರಿಂದ ಮಿತಾಕ್ಷರ ಸಿದ್ಧಾಂತಪ್ರಕಾರವಾಗಿ ಬಂಧುವರ್ಗದಲ್ಲಿ ಸೇರುವರೆಂದು ನಿರ್ಧಾರಣೆಮಾಡಿ, ಅವರಿಗೆ ವಾರಸುಹಕ್ಕು ಉಂಟೆಂದು ಮದರಾಸು ಹೈಕೋರ್ಟಿನವರು ತೀರ್ಮಾನಿಸಿರುವರು. (೮ ಮ. ಹೈ. ೮೮; ಇ. ಲಾ. ರಿ. ೫ ಮ. ೨೪೧.) ಮದರಾಸು ಪ್ರಸಿಡೆನ್ಸಿಯಲ್ಲಿ ಮಲತಾಯಿಯ ಹೆಣ್ಣುಮಕ್ಕಳಿಗೆ ವಾರಸು ಹಕ್ಕಿಲ್ಲವು. (ಇ ಲಾ. ರಿ ೫ ಮ. ೨೯.) ಬೊಂಬಯಿ ಪ್ರಸಿಡೆನ್ಸಿಯಲ್ಲಿ ಅಕ್ಕತಂಗಿಯರ ವಾರಸುಹಕ್ಕು ಸಂಪೂರ್ಣವಾಗಿ ಸ್ಥಿರಪಟ್ಟಿದೆ. ಅಣ್ಣತಮ್ಮಂದಿರೊಡನೆ ಒಂದೇಕುಟುಂಬದಲ್ಲಿ ಜನ್ಮಿಸಿದವರಾದುದರಿಂದ ಅಕ್ಕತಂಗಿಯರು ಸಗೋತ್ರಸಪಿಂಡರಾಗುವರೆಂದೂ, ಭಿನ್ನಗೋತ್ರರನ್ನು ವಿವಾಹ ಮಾಡಿಕೊಂಡಕಾರಣದಿಂದ ಸಗೋತ್ರತೆ ನಾಶವಾಗಲಾರದೆಂದೂ, ಮಯೂಖಗ್ರಂಥವು ಹೇಳುವುದು. ಈ ಗ್ರಂಥಪ್ರಕಾರವಾಗಿ, ತಂದೆತಾಯಿ ಬಳಿಕ ಅಕ್ಕತಂಗಿಯರು ವಾರಸರಾಗುವರು. (ವೆ. ಬು. ೧೩೧, ೪೬೩; ಇ. ಲಾ. ರಿ. ೨ ಬೊಂ ೮೮೫.) ಮತ್ತು ಸ್ವಂತ ಅಕ್ಕತಂಗಿಯರು ಇಲ್ಲದಪಕ್ಷದಲ್ಲಿ ಮಲತಾಯಿಗೆ ಹುಟ್ಟಿದ ಅಕ್ಕತಂಗಿಯರು ವಾರಸರಾಗುವರು. (ವೆ. ಬು. ೮೬೯–೭೦; ೧ ಬೊಂ ಹೈ ೧೨೮; ೯ ಮೂ. ಇ. ಅ. ೫೧೬; ಇ. ಲಾ. ರಿ. ೩ ಬೊಂ. ೩೫೩, ೩೬೯; ಇ. ಲಾ. ರಿ. ೪ ಬೊಂ. ೧೮೪, ೧೯೮.)

ಅಕ್ಕತಂಗಿಯರ ಕುಮಾರರು—ದಾಯಭಾಗದಲ್ಲಿ ಅಕ್ಕತಂಗಿಯಕುಮಾರರು ಬಂಧುವರ್ಗದಲ್ಲಿ ಸ್ಪಷ್ಟವಾಗಿ ಹೇಳಲ್ಪಟ್ಟಿರುವುದರಿಂದ, ಬಂಗಾಳಾದೇಶದಲ್ಲಿ ಅವರ ಹಕ್ಕು ಮೊದಲಿನಿಂದಲೂ ಸ್ಥಿರಪಟ್ಟಿದೆ. (೭ ಬಂ. ಸ. ತೀ. ೨೩೮; ೧ ಬಂ. ಸ. ತೀ. ೪೩; ೫ ಬಂ. ಸ. ತೀ. ೪೬, ೫೫, ೩೧೫; ೯ ಸ. ೮೬೩; ೧೫ ಸ. ೪೩೩; ೨೦ ಸ ೭೬೮.) ಮತ್ತು ಬಂಗಾಳಾಸಂಪ್ರದಾಯಪ್ರಕಾರವಾಗಿ, ಸ್ವಂತ ಅಕ್ಕತಂಗಿಯರಿಗೂ ಮಲತಾಯಿಗೆ ಹುಟ್ಟಿದ ಅಕ್ಕತಂಗಿಯರಿಗೂ ವಾರಸುಹಕ್ಕು ವಿಷಯದಲ್ಲಿ ಭೇದವಿಲ್ಲದುದರಿಂದ ಎರಡು ವಿಧಗಳವರೂ ಸೇರಿ ವಾರಸರಾಗುವರು. [೨ ಡಬ್ಲಿಯು ಮೆಕ್. ೮೬; ಇ. ಲಾ. ರಿ ೧೧ ಕ ೬೯.] ಮಿತಾಕ್ಷರದಲ್ಲಿ ಅಕ್ಕತಂಗಿಯರಮಗನು ಬಂಧುವರ್ಗ

ದೊಳಗೆ ಸ್ಪಷ್ಟವಾಗಿ ಹೇಳಲ್ಪಡಲಿಲ್ಲವು. ಹಿಂದಣಕಾಲದಲ್ಲಿ ಆತನಿಗೆ ವಾರಸುಹಕ್ಕು ಇಲ್ಲವೆಂದೇ ತೀರ್ಮಾನಿಸಲ್ಪಟ್ಟಿತು. (೧೧ ಮೂ ಇ ಅ ೩೮೬) ಆದರೆ, ಆತನ ವಾರಸು ಹಕ್ಕು ಈಗ ಸ್ಥಿರವಟ್ಟಿದೆ. (೬ ಮ. ಹೈ. ೨೭೮) ಮತ್ತು ಅಕ್ಕತಂಗಿಯರಿಗಿಂತಲೂ ಮೊದಲು ಅವರಮಗನು ವಾರಸದಾಗುವನೆಂದು ಕೂಡ ಸ್ಥಿರವಟ್ಟಿದೆ. (ಇ ಲಾ ರಿ ೫ ಮ ೨೪೧.) ಬೊಂಬಯಿದೇಶದಲ್ಲಿ ಅಕ್ಕತಂಗಿಯರ ಕುಮಾರರ ವಾರಸುಹಕ್ಕು ಮೊದಲಿನಿಂದಲೂ ಸ್ಥಿರಪಟ್ಟಿದೆ. ಸ್ವಂತ ಅಕ್ಕತಂಗಿಯರ ಕುಮಾರರು ಇಲ್ಲದಪಕ್ಷದಲ್ಲಿ ಮಲತಾಯಿಗೆ ಹುಟ್ಟಿದಕ್ಕತಂಗಿಯಕುಮಾರರು ವಾರಸರಾಗುವರು. (ವೆ. ಬು ೪೯೩, ೪೯೫)

ಮಿತಾಕ್ಷರಪ್ರಕಾರವಾಗಿ ಸಪಿಂಡ ವಾರಸರ ಕ್ರಮವನ್ನು ತಿಳಿಸುವವಂಶಾವಳಿ.

[ಇದರಲ್ಲಿ § ಈ ಗುರ್ತಿರುವವರು ಸ್ತ್ರೀಯರು.]



ಮಿತಾಕ್ಷರಪ್ರಕಾರವಾಗಿ.— ಮಿತಾಕ್ಷರಪ್ರಕಾರವಾಗಿ ವಾರಸುದಾರರ ಕ್ರಮವು ಈಕೆಳಗೆ ಉದಾಹರಿಸಲ್ಪಟ್ಟಿದೆ. ಸಮಾನೋದಕರವರೆಗೂ ಇರುವ ೫೭ ವಾರಸುದಾರರ ಕ್ರಮವು, ಪಕ್ಕದ ಪೇಜಿನಲ್ಲಿರುವ ವಂಶಾವಳಿಯಿಂದ ಸ್ಪಷ್ಟವಾಗಿ ತಿಳಿಯಬಹುದು. ಅಣ್ಣತಮ್ಮಂದಿರ ಕುಮಾರರಿಗೆ ಅನಂತರ ದಲ್ಲಿ ಅಣ್ಣತಮ್ಮಂದಿರ ಮೊಮ್ಮಕ್ಕಳು ವಾರಸಲಾಗಲಾರರೆಂದು ಮದರಾಸು ಹೈಕೋರ್ಟಿನವರು ತೀರ್ಮಾನಮಾಡಿರುವುದರಿಂದ, ಅಣ್ಣತಮ್ಮಂದಿರ ಕುಮಾರರಾದಮೇಲೆ ಮುತ್ತಜ್ಜನ ಹೆಂಡತಿ ಮೊದಲಾದವರು ವಾರಸರಾಗಿ ಏರ್ಪಟ್ಟಿರುವರು. ಮೊದಲ ಮೂರುತರಗಳ ಸಪಿಂಡರ ವಾರಸುಕ್ರಮ ವನ್ನನುಸರಿಸಿ ಆಮೇಲೆ ಬರುವವರ ಕ್ರಮವು ಏರ್ಪಡಿಸಲ್ಪಟ್ಟಿದೆ. ಬಂಧು ವರ್ಗದ ವಾರಸುಗಳಕ್ರಮವು, ಮೇಯಿನು ಥೊರೆಯವರ ಹಿಂದೂಲಾ ಗ್ರಂಥದಲ್ಲಿ ೫೩೫ ನೆಯ ಪ್ಯಾರಾದಲ್ಲಿ ತಿಳಿಸಲ್ಪಟ್ಟ ಪದ್ಧತಿಯನ್ನನುಸರಿಸಿದೆ.

ಸಪಿಂಡರು.— ಮಿತ್ರಾಕ್ಷರಪ್ರಕಾರವಾಗಿ ವಾರಸರಕ್ರಮವು.

೧. ಮಗನು.
೨. ಮೊಮ್ಮಗನು.
೩. ಮರಿಮಗನು.
೪. ಹೆಂಡತಿ.
೫. ಮಗಳು.
೬. ದೌಹಿತ್ರನು.
೭. ತಾಯಿ.
೮. ತಂದೆ.
೯. ಅಣ್ಣತಮ್ಮಂದಿರು.
೧೦. ಅಣ್ಣತಮ್ಮಂದಿರಕುಮಾರರು
೧೧. ತಂದೆಯ ತಾಯಿ.
೧೨. ತಂದೆಯತಂದೆ (ಅಜ್ಜನು.)
೧೩. ತಂದೆಯ ಅಣ್ಣತಮ್ಮಂದಿರು ಚಿಕ್ಕಪ್ಪದೊಡ್ಡಪ್ಪಂದಿರು.
೧೪. ,, ಇವರ ಕುಮಾರರು
೧೫. ತಾತನ ತಾಯಿ
೧೬. ತಾತನ ತಂದೆ (ಮುತ್ತಜ್ಜ)
೧೭. ಚಿಕ್ಕತಾತ-ದೊಡ್ಡತಾತಂದಿರು
೧೮. ,, ಇವರ ಕುಮಾರರು
೧೯. ಮರಿಮಗನ ಮಗನು.
೨೦. ,, ಮೊಮ್ಮಗನು.
೨೧. ,, ಮರಿಮಗನು. (೪೨
೨೨. ಅಣ್ಣತಮ್ಮಂದಿರಮೊಮ್ಮಕ್ಕ
೨೩. ,, ಮರಿಮಕ್ಕಳು.
೨೪. ,, ಮರಿಮಕ್ಕಳ— ಕುಮಾರರು.
೨೫. ,, ಮರಿಮಕ್ಕಳ— ಮೊಮ್ಮಕ್ಕಳು.
೨೬. ಚಿಕ್ಕಪ್ಪ ದೊಡ್ಡಪ್ಪಂದಿರ — ಮೊಮ್ಮಕ್ಕಳು.
೨೭. ,, ಮರಿಮಕ್ಕಳು.
೨೮. ಮರ್ಮಕ್ಕಳಕುಮಾರರು
೨೯. ,, ಮರಿಮಕ್ಕಳ ಮೊ- ಮ್ಮಕ್ಕಳು.
೩೦. ಚಿಕ್ಕತಾತ ದೊಡ್ಡತಾತಂದರ ,, ಮೊಮ್ಮಗಳು.
೩೧. ,, ಮರಿಮಕ್ಕಳು.
೩೨. ,, ಮರ್ಮಕ್ಕಳಕುಮಾರರು.
೩೩. ,, ಮರಿಮಕ್ಕಳ ಮೊ— ಮ್ಮಕ್ಕಳು.

೩೪. ಮುತ್ತಜ್ಜನ ತಾಯಿ.
೩೫. ,, ತಂದೆ.
೩೬. ,, ಅಣ್ಣತಮ್ಮಂದಿರು.
೩೭. ,, , ಇವರಕುಮಾರರು
೩೮. ,, ತಂದೆಯ ತಾಯಿ.
೩೯. ,, ತಂದೆಯಿತಂದೆ ಎಂದರೆಮುತ್ತಜ್ಜನಜ್ಜನು
೪೦. ,, ಚಿಕ್ಕಪ್ಪ ದೊಡ್ಡಪ್ಪ.
೪೧. ,, ಇವರ ಕುಮಾರರು
೪೨. ,, ತಾತನ ತಾಯಿ.
೪೩. ,, ಮುತ್ತಜ್ಜನು.
೪೪. ,, ತಾತನಣ್ಣತಮ್ಮಂದರು
೪೫. ,, ,, ಕುಮಾರರು.
೪೬. ಮುತ್ತಜ್ಜನಣ್ಣತಮಂದಿರ— ,, ,, ಮುಮ್ಮಕ್ಕಳು
೪೭. ,, ,, ಮರಿಮಕ್ಕಳು.
೪೮. ,, ,, ,, ಕುಮಾರರು
೪೯. ,, ,, ಮರಿಮಕ್ಕಳ-ಮುಮ್ಮಕ್ಕಳು
೫೦. ಮುತ್ತಜ್ಜನ ಚಿಕ್ಕಪ್ಪ ದೊಡ್ಡಪ್ಪಂದರ ಮುಮ್ಮಕ್ಕಳು.
೫೧. ,, ಮರಿಮಕ್ಕಳು.
೫೨. ,, ಮರ್ಮಕ್ಕಳ ಕುಮಾರರು
೫೩. ,, ,, ಮುಮ್ಮಕ್ಕಳು,
೫೪. ಮುತ್ತಜ್ಜನಿಗಜ್ಜನ ಅಣ್ಣತಮ್ಮಂದಿರ ಮಕ್ಕಳು.
೫೫. ,, ಮರಿಮಕ್ಕಳು
೫೬. ,, ,,ಕುಮಾರರು
೫೭. ,, ಮರಿಮಕ್ಕಳ ಮುಮ್ಮಕ್ಕಳು.

ಸಮಾನೋದಕರು.

೫೮. ೨೧ ನಂ॥ ಕೆಳಗೆ ಏಳುತರಗಳವರೆಗೆ.
೫೯. ೨೫ ನಂ॥ ,,
೬೦. ೨೯ ನಂ॥ ,,
೬೧. ೩೩ ನಂ॥ ,,
೬೨. ೪೯ ನಂ॥ ,,
೬೩. ೫೩ ನಂ॥ ,,
೬೪. ೫೭ ನಂ॥ ,,
೬೫. ೮೩ ನಂ॥ ರಿನ ತಾಯಿ
೬೬. ೪೩ ನಂ॥ ರಿನ ತಂದೆ,
೬೭. ೪೩ ನಂ॥ ರಿನ ಚಿಕ್ಕಪ್ಪ ದೊಡ್ಡಪ್ಪಂದಿರು, ಅವರ ಪುತ್ರಸಂತತಿಯವರು, ೧೩ ತರಗಳವರೆಗೆ
೬೮. ೬೬ ನಂ॥ ರಿನ ತಾಯಿ.
೬೯. ೬೬ ನಂ॥ ರಿನ ತಂದೆ.
೭೦. ೬೬ ನಂ॥ ರಿನ ಚಿಕ್ಕಪ್ಪ ದೊಡ್ಡಪ್ಪಂದಿರು, ಅವರ ಪುತ್ರಸಂತತಿಯವರು, ೧೩ ತರಗಳವರೆಗೆ.

೭೧. ಹಾಗೆಯೇ ೧೩ ತರಗಳವರೆಗೆ ಸಮಾನೋದಕದವರು ವಾರಸರಾಗುವರು. ಆಮೇಲೆ ಬಂಧುಗಳು—

ಬಂಧುಗಳು.

೧ ಕುಮಾರನ ದೌಹಿತ್ರನು.
೨ ಮುಮ್ಮಗನ ದೌಹಿತ್ರನು.
೩ ತಂದೆಯ ದೌಹಿತ್ರನು, ಎಂದರೆ- ಅಕ್ಕತಂಗಿಯರ ಮಗನು.
೪ ಅಣ್ಣತಮ್ಮಂದಿರ ದೌಹಿತ್ರನು.
೫ ಅಣ್ಣತಮ್ಮಂದಿರ ಮಗನ ದೌಹಿತ್ರನು.
೬ ಅಜ್ಜನ ದೌಹಿತ್ರನು, ಎಂದರೆ— ಸೋದರತ್ತೆಯಮಗನು.
೭ ಚಿಕ್ಕಪ್ಪ ದೊಡ್ಡಪ್ಪಂದಿರ ದೌಹಿತ್ರನು.
೮ ಸೋದರಮಾವನು.
೯ ಸೋದರಮಾವನ ಮಗನು.
೧೦ ಚಿಕ್ಕತಾಯಿ ದೊಡ್ಡತಾಯಿಯರ ಮಗನು.
೧೧ ಮುತ್ತಜ್ಜನ ದೌಹಿತ್ರನು, ಎಂದರೆ— ತಂದೆಯ ಸೋದರತ್ತೆಯ (ಮಗನು.
೧೨ ಚಿಕ್ಕತಾತ ದೊಡ್ಡತಾತಂದಿರ ದೌಹಿತ್ರನು.
೧೩ ತಂದೆಯ ಸೋದರಮಾವನು,
೧೪ ತಂದೆಯ ಸೋದರಮಾವನ ಮಗನು.
೧೫ ತಂದೆಯ ಚಿಕ್ಕತಾಯಿ ದೊಡ್ಡತಾಯಿಯರ ಮಗನು.
೧೬ ತಾಯ ತಂದೆ.
೧೭ ತಾಯ ಚಿಕ್ಕಪ್ಪ ದೊಡ್ಡಪ್ಪಂದಿರು.
೧೮ ತಾಯ ಚಿಕ್ಕಪ್ಪ ದೊಡ್ಡಪ್ಪಂದಿರ ಕುಮಾರನು.
೧೯ ತಾಯ ಸೋದರತ್ತೆಯ ಮಗನು.
೨೦ ತಾಯ ಸೋದರಮಾವನು.
೨೧ ತಾಯ ಸೋದರಮಾವನ ಮಗನು.
೨೨ ತಾಯ ಚಿಕ್ಕಮ್ಮ ದೊಡ್ಡಮ್ಮಂದಿರ ಮಗನು.
೨೩ ತಾಯ ತಾತನು.
೨೪ ತಾಯ ಚಿಕ್ಕತಾತ ದೊಡ್ಡತಾತಂದಿರು.
೨೫ ತಾಯ ಚಿಕ್ಕತಾತ ದೊಡ್ಡತಾತಂದಿರ ಕುಮಾರನು.
೨೬ ತಾಯ ತಂದೆಯ ಸೋದರತ್ತೆಯ ಮಗನು.
೨೭ ತಾಯ ಮುತ್ತಜ್ಜನು.

೨೮ ಮಗನ ಮಗಳು (ಇ. ಲಾ, ರಿ, ೧೪ ಮ. ೧೪೯)
೨೯ ಅಕ್ಕ, ತಂಗಿಯರು (೮ ಮ. ಹೈ. ೮೮; ಇ. ಲಾ. ರಿ. ೫ ಮ. ೨೪೧.)
೩೦ ಸೋದರತ್ತೆ (ಇ. ಲಾ. ರಿ. ೧೩ ಮ. ೧೦.)

ಬೊಂಬಯಿದೇಶದ ವಿಶೇಷ ವಿಧಿಗಳು—ಬೊಂಬಯಿ ಪ್ರಸಿಡೆನ್ಸಿಯಲ್ಲಿ-ಮುಖ್ಯವಾಗಿ ಗುಜರಾತುದೇಶದಲ್ಲಿಯೂ ಬೊಂಬಯಿ ಪಟ್ಟಣದಲ್ಲಿಯೂ ಪ್ರಮಾಣವಾಗಿ ಸಲ್ಲುತ್ತಿರುವ ಮಯೂಖಗ್ರಂಥಪ್ರಕಾರವಾಗಿ, ಗೋತ್ರಜಸಪಿಂಡರ ಹೆಂಡತಿಯರುಕೂಡ ಸಪಿಂಡರಾಗಿ ಭಾವಿಸಲ್ಪಟ್ಟು, ಗಂಡಂದಿರು ಸತ್ತುಹೋಗಿದ್ದಪಕ್ಷದಲ್ಲಿ ಅವರ ಸ್ಥಾನಗಳಲ್ಲಿ ವಾರಸರಾಗಿ ಏರ್ಪಡುವರು. (ವೆ. ಬು. ೧೩೧; ೪೮೧; ೬ ಬೊಂ. ಹೈ. ೧೫೨; ಇ. ಲಾ. ರಿ. ೨ ಬೊಂ. ೩೮೮; ಇ. ಲಾ. ರಿ. ೫ ಬೊಂ. ೧೧೦; ಇ. ಲಾ. ರಿ. ೪ ಬೊಂ. ೨೧೯; ಇ. ಲಾ. ರಿ. ೯ ಬೊಂ. ೩೧.) ಹೀಗೆ ಆಸ್ತಿದಾರನ ಮಗನಹೆಂಡತಿ (ಸೊಸೆ) ಮುಮ್ಮಗನ ಹೆಂಡತಿ, ಮರಿಮಗನ ಹೆಂಡತಿ, ಪೌತ್ರನಹೆಂಡತಿ, ಅಣ್ಣತಮ್ಮಂದಿರ ಹೆಂಡತಿ, ಅಣ್ಣತಮ್ಮಂದಿರ ಕುಮಾರರ ಹೆಂಡತಿ, ಚಿಕ್ಕಪ್ಪ ದೊಡ್ಡಪ್ಪಂದಿರ ಹೆಂಡತಿ— ಈ ಮುಂತಾದ ವಿಧವೆಯರು ಅವರ ಗಂಡಂದಿರಿಗೆ ಅನಂತರದಲ್ಲಿ ಮಯೂಖಗ್ರಂಥಪ್ರಕಾರವಾಗಿ ವಾರಸರಾಗುವರು.

ಮತ್ತು ಒಂದು ಕುಟುಂಬದಲ್ಲಿ ಹುಟ್ಟಿದ ಕಾರಣದಿಂದ ಅದರೊಳಗಣ ಸ್ತ್ರೀಪುರುಷರಿಗೆ ಸಗೋತ್ರತೆ ಏರ್ಪಟ್ಟು ಸ್ತ್ರೀಯರು ಭಿನ್ನಗೋತ್ರರರನ್ನು ವಿವಾಹ ಮಾಡಿಕೊಂಡರೂ ಅವರ ಸಗೋತ್ರತೆ ಹೋಗಲಾರದೆಂದು ಮಯೂಖಗ್ರಂಥವು ಹೇಳುವುದು. ಈ ಅಭಿಪ್ರಾಯವನ್ನು ಅನುಸರಿಸಿ, ಅಕ್ಕತಂಗಿಯರು- ಅಕ್ಕತಂಗಿಯರ ಮಗಳು- ಅಣ್ಣತಮ್ಮಂದಿರ ಮಗಳು- ಮಗನಮಗಳು- ಮಗಳ ಮಗಳು. ಈ ಮೊದಲಾದ ಸ್ತ್ರೀವರ್ಗದವರನೇಕರು ವಾರಸರಾಗಿ ಏರ್ಪಟ್ಟಿರುವರು. (ವೆ. ಬು. ೧೩೭, ೪೯೬-೮) ಸೊದರತ್ತೆ ಸಗೋತ್ರ ಸಪಿಂಡಕ್ಕೆ ಸೇರಿದವಳಾಗಿ ಭಾವಿಸಲ್ಪಟ್ಟು ಸೋದರಮಾವನಿಗೆ ಮುಂಚೆ ವಾರಸಳಾಗಿರುವಳು. (೮ ಬೊಂ. ಹೈ. ೨೦೪.)

ದಾಯಭಾಗಪ್ರಕಾರವಾಗಿ ವಾರಸರ ಕ್ರಮವು— ದಾಯಭಾಗಪ್ರಕಾರವಾಗಿ ವಾರಸುದಾದರರ ಕ್ರಮವು ಈ ಕೆಳಗೆ ಉದಾಹರಿಸಲ್ಪಟ್ಟಿದೆ. ದಾಯಭಾಗಪ್ರಕಾರವಾಗಿ ಮೊದಲ ಮೂರುತರಗಳ ಸಗೋತ್ರಸಪಿಂಡರೊಡನೆ ಸೇರಿ ಭಿನ್ನಗೋತ್ರಸಪಿಂಡರಾದ ಬಂಧುಗಳೆಲ್ಲರೂ (ಎಂದರೆ ಪಿತೃಬಂಧುಗಳೂ ಮಾತೃಬಂಧುಗಳೂ) ವಾರಸರಾಗುವರು. ಆಮೇಲೆ, ಸಕುಲ್ಯರು (ಎಂದರೆ- ೪, ೫, ೬ ತರಗಳ ಸಗೋತ್ರಸಪಿಂಡರು)- ಅವರ ಅನಂತರದಲ್ಲಿ ಸಮಾನೋದಕರೂ- ವಾರಸರಾಗುವರು. ಈಕೆಳಗೆ ಸೂಚಿಸಲ್ಪಟ್ಟ ವಾರಸು

ಕ್ರಮವು ತೀರ್ಮಾನಗಳಿಗೆ ಅನುಗುಣವಾಗಿ ಏರ್ಪಡಿಸಲ್ಪಟ್ಟಿದೆ. (೧೫ ಕ. ಹೈ. ೩೫; ಇ. ಲಾ. ರಿ. ೪ ಕ. ೪೧೧; ಇ. ಲಾ. ರಿ. ೯ ಕ. ೫೬೩, ೫೬೭; ಇ. ಲಾ. ರಿ. ೧೫ ಕ. ೭೮೦.) ಬಂಗಾಳಾಸಂಪ್ರದಾಯಃಪ್ರಕಾರವಾಗಿ ಸಾಧಾರಣವಾಗಿ ಸ್ತ್ರೀಯರಿಗೆ ವಾರಸುಹಕ್ಕಿಲ್ಲವು. ಆದರೆ ಹೆಂಡತಿ- ಮಗಳು- ತಾಯಿ- ತಂದೆಯತಾಯಿ ಅಜ್ಜನ ತಾಯಿ. ಈ ಅಯಿದುಮಂದಿ ಮಾತ್ರವೇ ಅವರ ವಿಷಯವಾಗಿ ಸ್ಮೃತಿವಾಕ್ಯಗಳಿರ್ದುದರಿಂದ ವಾರಸರಾಗಿ ನಿಂತಿರುವರು.

ಸಪಿಂಡರು, ಬಂಧುಗಳು.

೧ ಕುಮಾರನು.
೨ ಮೊಮ್ಮಗನು.
೩ ಮರಿಮಗನು.
೪ ಹೆಂಡತಿ.
೫ ಮಗಳು.
೬ ದೌಹಿತ್ರನು.
೭ ತಂದೆ.
೮ ತಾಯಿ.
೯ ಅಣ್ಣತಮ್ಮಂದಿರು.
೧೦ ,, ರ ಕುಮಾರರು.
೧೧ ,, ರ ಮೊಮ್ಮಕ್ಕಳು.
೧೨ ಅಕ್ಕತಂಗಿಯರ ಕುಮಾರರು.
೧೩ ತಂದೆಯ ತಂದೆ- ಅಜ್ಜನು.
೧೪ ತಂದೆಯ ತಾಯಿ.
೧೫ ಚಿಕ್ಕಪ್ಪ ದೊಡ್ಡಪ್ಪಂದಿರು.
೧೬ ,, ರ ಕುಮಾರರು.
೧೭ ,, ರ ಮೊಮ್ಮಕ್ಕಳು.
೧೮ ಅಜ್ಜನ ದೌಹಿತ್ರನು.
೧೯ ತಾತನ ತಂದೆ- ಎಂದರೆ, ಮುತ್ತಜ್ಜನು.
೨೦ ಅಜ್ಜನ ತಾಯಿ.
೨೧ ಚಿಕ್ಕಜ್ಜ ದೊಡ್ಡಜ್ಜಂದಿರು.
೨೨ ,, ರ ಕುಮಾರರು.
೨೩ ,, ರ ಮೊಮ್ಮಕ್ಕಳು.
೨೪ ಮುತ್ತಜ್ಜನ ದೌಹಿತ್ರನು.
೨೫ ಮಗನ ದೌಹಿತ್ರನು.
೨೬ ಮೊಮ್ಮಗನ ದೌಹಿತ್ರನು.

೨೭ ಅಣ್ಣತಮ್ಮಂದಿರ ದೌಹಿತ್ರನು
೨೮ ಅಣ್ಣತಮ್ಮಂದಿರ ಕುಮಾರರ ದೌಹಿತ್ರನು
೨೯ ಚಿಕ್ಕಪ್ಪ ದೊಡ್ಡಪ್ಪಂದಿರ ದೌಹಿತ್ರನು
೩೦ ,, ಕುಮಾರರ ದೌಹಿತ್ರನು
೩೧ ಚಿಕ್ಕಜ್ಜ ದೊಡ್ಡಜ್ಜಂದಿರ ದೌಹಿತ್ರನು
೩೨ ,, ಕುಮಾರರ ದೌಹಿತ್ರನು
೩೩ ತಾಯ ತಂದೆ
೩೪ ಸೋದರಮಾವನು
೩೫ ,, ನ ಕುಮಾರನು
೩೬ ,, ನ ಮುಮ್ಮಗನು
೩೭ ಚಿಕ್ಕತಾಯಿ ದೊಡ್ಡತಾಯಿ ಕುಮಾರರು
೩೮ ತಾಯಿಯ ಅಜ್ಜನು
೩೯ ತಾಯಿಯ ಚಿಕ್ಕಪ್ಪ ದೊಡ್ಡಪ್ಪಂದಿರು
೪೦ ,, ರ ಕುಮಾರನು
೪೧ ,, ರ ಮುಮ್ಮಗನು
೪೨ ತಾಯಿಯಜ್ಜನ ದೌಹಿತ್ರನು
೪೩ ತಾಯಿಯ ಮುತ್ತಜ್ಜನು
೪೪ ತಾಯಿಯ ಚಿಕ್ಕಜ್ಜ ದೊಡ್ಡಜ್ಜಂದಿರು
೪೫ ,, ರ ಕುಮಾರನು
೪೬ ,, ರ ಮುಮ್ಮಗನು
೪೭ ತಾಯಿಮುತ್ತಜ್ಜನ ದೌಹಿತ್ರನು
೪೮ ಸೋದರಮಾವನ ದೌಹಿತ್ರನು
೪೯ ,, ಕುಮಾರನ ದೌಹಿತ್ರನು
೫೦ ತಾಯ ಚಿಕ್ಕಪ್ಪ ದೊಡ್ಡಪ್ಪಂದಿರ ದೌಹಿತ್ರನು
೫೧ ತಾಯ ಚಿಕ್ಕಪ್ಪ ದೊಡ್ಡಪ್ಪಂದಿರ ಕುಮಾರರ ದೌಹಿತ್ರನು
೫೨ ತಾಯ ಚಿಕ್ಕಜ್ಜ ದೊಡ್ಡಜ್ಜಂದಿರರ ದೌಹಿತ್ರನು
೫೩ ,, ಕುಮಾರರ ದೌಹಿತ್ರನು

ಸಕುಲ್ಯರು.

ೞ೪ ಮರಿಮಗನ ಕುಮಾರನು
೫೫ ,, ಮುಮ್ಮಗನು
೫೬ ,, ಮರಿಮಗನು
೫೭ ಅಣ್ಣತಮ್ಮಂದಿರ ಮರಿಮಗನು
೫೮ ,, ಮರಿಮಕ್ಕಳ ಕುಮಾರರು
೫೯ ,, ಮರಿಮಕ್ಕಳ ಮುಮ್ಮಕ್ಕಳು
೬೦ ಚಿಕ್ಕಪ್ಪ ದೊಡ್ಡಪ್ಪಂದಿರ ಮರಿಮಕ್ಕಳು
೬೧ ,, ಮರಿಮಕ್ಕಳ ಕುಮಾರರು
೬೨ ,, ಮರಿಮಕ್ಕಳ ಮುಮ್ಮಕ್ಕಳು
೬೩ ಚಿಕ್ಕಜ್ಜ ದೊಡ್ಡಜ್ಜಂದಿರ ಮರಿಮಕ್ಕಳು
೬೪ ,, ಮರಿಮಕ್ಕಳ ಕುಮಾರರು
೬೫ ,, ಮರಿಮಕ್ಕಳ ಮುಮ್ಮಕ್ಕಳು
೬೬ ಮುತ್ತಜ್ಜನ ತಂದೆ
೬೭ ,, ಅಣ್ಣತಮ್ಮಂದಿರು
೬೮ ,, ಅಣ್ಣತಮ್ಮಂದಿರ ಕುಮಾರರು
೬೯ ,, ಅಣ್ಣತಮ್ಮಂದಿರ ಮುಮ್ಮಕ್ಕಳು
೭೦ ,, ಅಕ್ಕತಂಗಿಯರ ಕುಮಾರರು
೭೧ ,, ತಂದೆಯ ತಂದೆ ಎಂದರೆ- ಮುತ್ತಜಜ್ಜನಜ್ಜನು
೭೨ ,, ಚಿಕ್ಕಪ್ಪ ದೊಡ್ಡಪ್ಪಂದಿರು
೭೩ ,, ಚಿಕ್ಕಪ್ಪ ದೊಡ್ಡಪ್ಪಂದಿರ ಕುಮಾರರು
೭೪ ,, ಚಿಕ್ಕಪ್ಪ ದೊಡ್ಡಪ್ಪಂದಿರ ಮುಮ್ಮಕ್ಕಳು
೭೫ ,, ಅಜ್ಜನ ದೌಹಿತ್ರನು.
೭೬ ,, ಮುತ್ತಜ್ಜನು
೭೭ ,, ಅಜ್ಜನ ಅಣ್ಣತಮ್ಮಂದಿರು
೭೮ ,, ಅಜ್ಜನ ಅಣ್ಣತಮ್ಮಂದಿರ ಕುಮಾರರು
೭೯ ,, ಅಜ್ಜನ ಅಣ್ಣತಮ್ಮಂದಿರ ಮುಮ್ಮಕ್ಕಳು
೮೦ ,, ಮುತ್ತಜ್ಜನ ದೌಹಿತ್ರನು
೮೧ ಮುತ್ತಜ್ಜನ ಅಣ್ಣತಮ್ಮಂದಿರ ದೌಹಿತ್ರನು.
೮೨ ,, ಅಣ್ಣತಮ್ಮಂದಿರ ಕುಮಾರನ ದೌಹಿತ್ರನು

೮೩ ,, ಚಿಕ್ಕಪ್ಪ ದೊಡ್ಡಪ್ಪಂದಿರ ದೌಹಿತ್ರನು
೮೪ ,, ಚಿಕ್ಕಪ್ಪ ದೊಡ್ಡಪ್ಪಂದಿರ ಕುಮಾರನ ದೌಹಿತ್ರನು
೮೫ ,, ಚಿಕ್ಕಜ್ಜ ದೊಡ್ಡಜ್ಜಂದಿರ ದೌಹಿತ್ರನು
೮೬ ,, ಚಿಕ್ಕಜ್ಜ ದೊಡ್ಡಜ್ಜಂದಿರ ಕುಮಾರನ ದೌಹಿತ್ರನು
೮೭ ,, ಅಣ್ಣತಮ್ಮಂದಿರ ಮರಿಮಕ್ಕಳು
೮೮ ,, ,, ಮರಿಮಕ್ಕಳ ಕುಮಾರರು
೮೯ ,, ,, ಮರಿಮಕ್ಕಳ ಮುಮ್ಮಕ್ಕಳು
೯೦ ,, ಚಿಕ್ಕಪ್ಪ ದೊಡ್ಡಪ್ಪಂದಿರ ಮರಿಮಕ್ಕಳು
೯೧ ,, ,, ಮರಿಮಕ್ಕಳ ಕುಮಾರರು
೯೨ ,, ,, ಮರಿಮಕ್ಕಳ ಮುಮ್ಮಕ್ಕಳು
೯೩ ,, ಅಜ್ಜನ ಅಣ್ಣತಮ್ಮಂದಿರ ಮರಿಮಕ್ಕಳು
೯೪ ,, ,, ಮರಿಮಕ್ಕಳ ಕುಮಾರರು
೯೫ ,, ,, ಮರಿಮುಮ್ಮಕ್ಕಳಮುಮ್ಮಕ್ಕಳು

ಸಮಾನೋದಕರು.

೯೬ ೫೬ ನಂ|| ಕೆಳಗೆ ಎಳುತರಗಳವರೆಗೆ.
೯೭ ೫೯ ನಂ|| ,,
೯೮ ೬೨ ನಂ|| ,,
೯೯ ೬೫ ನಂ|| ,,
೧೦೦ ೮೯ ನಂ|| ,,
೧೦೧ ೬೨ ನಂ|| ,,
೧೦೨ ೯೬ ನಂ|| ,,
೧೦೩ ೭೬ ನಂ|| ರಿನ ತಂದೆ
೧೦೪ ೭೬ ನಂ|| ರಿನ ಚಿಕ್ಕಪ್ಪ ದೊಡ್ಡಪ್ಪಂದಿರು, ಅದರ ಪುತ್ರಸಂತತಿ ಯುವದು, ೧೩ ತರಗಳವರೆಗೆ.
೧೦೫ ಹಾಗೆಯೇ ೧೩ ತರಗಳವರೆಗೆ ಸಮಾನೋದಕರುವಾರಸರಾಗುವರು.

ವಾರಸರಿಲ್ಲದೆಹೋದರೆ, ಆಸ್ತಿ ಸರ್ಕಾರದವರಿಗೆಸಲ್ಲುವುದು.—ಮೇಲೆ ಹೇಳಲ್ಪಟ್ಟ ಸಪಿಂಡರು, ಸಮಾನೋದಕರು, ಬಂಧುಗಳು—ಈವಾರಸರುಗಳಲ್ಲಿ ಯಾರೂ ಇಲ್ಲದಿದ್ದರೆ ಬ್ರಾಹ್ಮಣನ ಆಸ್ತಿ ಆತನ ಗುರುವಿಗೆ, ಗುರುವಿಲ್ಲದಿದ್ದರೆ ಶಿಷ್ಯನಿಗೆ ಶಿಷ್ಯನಿಲ್ಲದಿದ್ದರೆ ಸಹಪಾಠಿಗೆ, ಆತನೂ ಇಲ್ಲದಿದ್ದರೆ ಪಂಡಿತೋತ್ತಮನಾದ ಬ್ರಾಹ್ಮಣನಿಗೆ, ಈತನೂ ಇಲ್ಲದಿದ್ದರೆ ಯಾವ ಬ್ರಾಹ್ಮಣ

ನಿಗಾದರೂ ಸಲ್ಲುವುದೆಂದೂ; ಬ್ರಾಹ್ಮಣರಲ್ಲದ ಇತರ ಜಾತಿಯವರ ಆಸ್ತಿವಿಷಯದಲ್ಲಿ ಹಕ್ಕುದಾರರೂ ಇಲ್ಲದಿದ್ದರೆ ಅದು ಸರಕಾರದವರಿಗೆ ಸಲ್ಲುವುದೆಂದೂ; ಧರ್ಮಶಾಸ್ತ್ರಗಳಲ್ಲಿ ಹೇಳಲ್ಪಟ್ಟದೆ. ಆದರೆ ಗುರುಶಿಷ್ಯರು ಮುಂತಾದವರು ಯಾರೂ ಬ್ರಾಹ್ಮಣನ ಆಸ್ತಿಗೆ ಹಕ್ಕುದಾರರಾಗಿ ಏರ್ಪಟ್ಟ ಕೇಸುಗಳು ಈವರಿಗೂ ಕಾಣಿಸಲಿಲ್ಲವು. ಮತ್ತೂ ಬ್ರಾಹ್ಮಣರ ಆಸ್ತಿಯಾದರೂ ಸರಿಯೆ ವಾರಸುದಾರರಿಲ್ಲದೇಹೋದರೆ ಸರಕಾರದವರಿಗೆ ಸೇರುವುದೆಂದು ತೀರ್ಮಾನಿಸಲ್ಪಟ್ಟದೆ. (೮ ಮೂ. ಇ. ಅ. ೫೦೦) ಹಕ್ಕುದಾರರಾರೂ ಇಲ್ಲದಂತೆ ಸ್ಪಷ್ಟವಾಗಿ ರುಜುಮಾಡಿದ ಪಕ್ಷದಲ್ಲಿಯೇ ಆಸ್ತಿ ಸರಕಾರದವರಿಗೆ ಸೇರುವುದಲ್ಲದೆ ಇಲ್ಲದಿದ್ದರೆ ಸೇರದು. (೧೨ ಮೂ. ಇ. ಅ. ೪೪೮) ಸರಕಾರದವರಿಗೆ ಆಸ್ತಿ ಸೇರಿದಾಗ ಹಿಂದಣ ಹಕ್ಕುದಾರನಿಂದ ಅಡವು ಮೊದಲಾದ ಪರಾಧೀನಗಳಿಂದಲೂ ಆತನ ಸಾಲಗಳಿಂದಲೂ ಅವರು ಬದ್ಧರಾಗಿರುವರು. (೧೧ ಮೂ ಇ ಅ. ೬೧೯) ಮತ್ತು ಕಡೆಯವಾರಸು ವಿತಂತು ಮುಂತಾದ ಅಸಂಪೂರ್ಣ ಹಕ್ಕುದಾರಿಯಾಗಿದ್ದರೆ ತನ್ನ ಸ್ವಾತಂತ್ರ್ಯವನ್ನು ಮೀರಿ ಆಕೆ ಅನಾವಶ್ಯಕವಾಗಿ ಮಾಡಿರುವ ಪರಾಧೀನಗಳನ್ನು ಸರಕಾರದವರು ಅಪೇಕ್ಷಿಸಿ ರದ್ದುಮಾಡಬಹುದು. (೮ ಮೂ. ಇ. ಅ. ೫೬೯.)

ವಾರಸು ಹಕ್ಕುವಿಷಯವಾದ ಅನರ್ಹತೆಗಳು.

ವಾರಸು ಹಕ್ಕುವಿಷಯವಾದ ಅನರ್ಹತೆಗಳು—ಜಾತ್ಯನುಸಾರವಾಗಿ ಶಾಸ್ತ್ರೋಕ್ತ ಕರ್ಮಗಳನ್ನು ನಡೆಯಿಸುವುದಕ್ಕೆ ಆಸ್ತಿ ಯೇರ್ಪಟ್ಟಿತೆಂದೂ ಆಸ್ತಿಗೆ ವಾರಸರಾದವರು ಆಸ್ತಿದಾರನ ಆತ್ಮೋಜ್ಜೀವನಕ್ಕೆ ಆವಶ್ಯಕವಾದ ಕರ್ಮಗಳನ್ನು ನಡೆಯಿಸುವುದಕ್ಕೆ ಯೋಗ್ಯತೆಯುಂಟಾದವರಾಗಿರಬೇಕೆಂದೂ, ಅಂತಹ ಯೋಗ್ಯತೆಯಿಲ್ಲದವರು ದಾಯಾರ್ಹರಲ್ಲವೆಂದೂ, ಧರ್ಮಶಾಸ್ತ್ರಗಳು ಮೊರೆಯಿಡುವುವು. ದಾಯಾನರ್ಹತೆಯನ್ನುಂಟುಮಾಡುವ ದೋಷಗಳು ಬಹಳವಾಗಿ ಹೇಳಲ್ಪಟ್ಟವೆಯಾದರೂ, ಅವುಗಳಲ್ಲಿ ಕೆಲವನ್ನು ಎಂದರೆ, ಅಸತ್ಯ ಪ್ರವರ್ತನವು, ಮೋಸವು, ಅಶೌರ್ಯವು, ಲೋಭತ್ವವು, ಅನಾಚಾರವು ತಂದೆಯ ವಿಷಯದಲ್ಲಿ ಅವಿಧೇಯತೆ, ದ್ಯೂತವು, ಪಾನವು, ಈ ಮುಂತಾದವುಗಳಿಗೆ ಪ್ರಾಯಶ್ಚಿತ್ತಗಳೇರ್ಪಡಿಸಲ್ಪಟ್ಟಿರುವುದರಿಂದ, ಅವು ಈ ಕಾಲದಲ್ಲಿ ನ್ಯಾಯಸ್ಥಾನಗಳೊಳಗೆ ಬಳಸಲ್ಪಡಲಾರವು. (೧ ಸ್ಟೇಂ) ೧೫೯; ೩ ಅ. ಹೈ. ೨೬೨; ೧೭೪೮ ಸಂ|| ಬಂ. ಸ. ತೀ. ೩೦೦; ೧೭೫೮ ಸಂ|| ಮ. ತೀ. ೧೧೮. ಆದರೂ,೫ ಬಂ ಸ ತೀ. ೬೦; ೧೧ ಸ. ೫೩೦ ನೋಡು.) ಆದುದರಿಂದ ಪ್ರಾಯಶ್ಚಿತ್ತದಿಂದ ಬಿಟ್ಟುಹೋಗಲಾರದ ದೋಷಗಳು ಮಾತ್ರವೇ ಮುಖ್ಯವಾಗಿವೆ. ಅವು ಯಾವುವೆಂದರೆ-ಜಾತಿಭ್ರಷ್ಟತೆ-ನಪುಂಸಕತ್ವವು-ಹುಟ್ಟುವಾಗಲು ಅನಿವಾರ್ಯವಾದ ಕುರುಡತನವು, ಕಿವುಡು, ಅಲ್ಲದೆ ಮೂಗತನ

ವು-ಹುಚ್ಚು-ಅಂಗಹೀನತ್ವವು-ಅನಿವಾರ್ಯವಾದ ವ್ಯಾಧಿ. ಈ ಹೇಳಲ್ಪಟ್ಟ ದೋಷಗಳುಳ್ಳವರು ವಾರಸು ಹಕ್ಕಿನಿಂದ ಆಸ್ತಿಯನ್ನು ಹೊಂದಲಾರರೆಂದು ಮನುಸ್ಮೃತಿ ಯಾಜ್ಞವಲ್ಕ್ಯಸ್ಮೃತಿ ಮೊದಲಾದ ಧರ್ಮಶಾಸ್ತ್ರಗಳಲ್ಲಿ ಹೇಳಲ್ಪಟ್ಟದೆ.

ಜಾತಿಭ್ರಷ್ಟತೆ.— ಮತವನ್ನು ಬದಲಿಸಿಕೊಳ್ಳುವುದರಿಂದಾದರೂ ಬಹಿಷ್ಕಾರವೇ ಮುಂತಾದ ಯಾವಕಾರಣದಿಂದಾದರೂ ಜಾತಿಭ್ರಷ್ಟರಾದವರಿಗೆ ಆಸ್ತಿ ಹಕ್ಕುಗಳೂ ವಾರಸುಹಕ್ಕುಗಳೂ ನಾಶವಾಗಲಾರವೆಂದು, ಸರ್ಕಾರದವರು ೧೮೫೦ ಸಂ|| ೨೧ ನೆಯ ನಂ|| ನಿಬಂಧನೆಯನ್ನು ಏರ್ಪಡಿಸಿರುವರು. ಆದುದರಿಂದ, ಹಿಂದೂ ಪುರುಷರಾದರೂ, ಹಿಂದೂ ಸ್ತ್ರೀಯರಾದರೂ ಕ್ರೀಸ್ತು ಮುಂತಾದ ಅನ್ಯಮತಗಳಲ್ಲಿ ಸೇರಿದಷ್ಟುಮಾತ್ರದಿಂದ, ಅವರಿಗೆ ಇತರರ ಆಸ್ತಿಯಲ್ಲಿ ಉಂಟಾಗಿರುವ ವಾರಸು ಹಕ್ಕುಗಳು ನಾಶವಾಗಲಾರವು. (೨ ಅ. ಹೈ. ೪೪೬; ಇ. ಲಾ. ರಿ. ೧ ಬೊಂ. ೫೫೯.) ಇತರ ಕಾರಣಗಳಿಂದ ಸದರಿ ಹಕ್ಕುಗಳು ನಾಶವಾದರೆ, ಮೇಲೆಹೇಳಲ್ಪಟ್ಟ ನಿಬಂಧನೆ ರಕ್ಷಿಸಲಾರದು. ಉದಾಹರಣಗಳು—

ಒಬ್ಬ ಆಸ್ತಿದಾರನು ಸತ್ತುಹೋದಾಗ, ಆತನ ವಿಧವೆಯೂ ಅದಕ್ಕೆ ಮುಂಚೆ ಜಾತಿಭ್ರಷ್ಟನಾದ ಕುಮಾರನೂ ಇದ್ದರು. ಆಸ್ತಿಯಲ್ಲವೂ ಕುಮಾರನಿಗೆ ಸಲ್ಲುವುದು.

ಒಬ್ಬ ಆಸ್ತಿದಾರನು ಸತ್ತುಹೋದಾಗ ಆತನಿಗೆ ಪುತ್ರಸಂತತಿಯವರಾರೂ ಇರುದಿಲ್ಲವು. ಸ್ತ್ರೀಪುನರ್ವಿವಾಹದ ಪಾರ್ಟಿಯವರೊಡನೆ ಭೋಜನಮಾಡುವುದರಿಂದ ಕುಲದೊಳಗೆ ಬಹಿಷ್ಕಾರಮಾಡಲ್ಪಟ್ಟ ಆತನ ಹೆಂಡತಿಯೂ, ಕುಲದಲ್ಲಿರುವ ದೂರಜ್ಞಾತಿಗಳು ಕೆಲವರೂ, ಇದ್ದರೂ ಹೆಂಡತಿಯೇ ವಾರಸುದಾರಳಾಗುವಳು.

ಒಬ್ಬ ಆಸ್ತಿದಾರನು ಸತ್ತುಹೋದಾಗ, ಆತನಿಗೆ ಪುತ್ರಸಂತತಿಯವರಾರೂ ಇಲ್ಲದಾಗ ಬಹಿಷ್ಕಾರಮಾಡಲ್ಪಟ್ಟು ವ್ಯಭಿಚಾರಿಣಿಯಾಗಿ ಸಂಚರಿಸುತ್ತಿದ್ದ ವಿಧವೆಯೂ, ದೂರಜ್ಞಾತಿಗಳೂ ಮಾತ್ರವೇ ಇದ್ದರು. ಮುಂಡೆವಾರಸುದಾರಳಾಗಲಾರಳು. ಏಕೆಂದರೆ-೧೮೮೦ ಸಂ|| ೨೧ ನಂ|| ನಿಬಂಧನೆಯಿಂದ ಬಹಿಷ್ಕಾರದೋಷವು ಬಾಧಿಸದೆಹೋದರೂ, ವ್ಯಭಿಚಾರಕಾರಣದಿಂದ ವಾರಸು ಹಕ್ಕು ಬಿಟ್ಟುಹೋಗುವುದು (೫ ಕ. ಹೈ. ೭೬೬; ೧೩ ಕ. ಹೈ. ೧, ೨೫, ೭೫; ಇ. ಲಾ. ರಿ. ೫ ಕ. ೭೭೬)

ಅಲಹಾಬಾದು ದೇಶದಲ್ಲಿ, "ಏ'' ಎಂಬ ಒಬ್ಬ ತಂದೆಯೂ, "ಬಿ' ಎಂಬ ಕುಮಾರನೂ ಹಿಂದೂಮತವನ್ನು ಬಿಟ್ಟು ಮಹಮ್ಮದೀಯಮತವನ್ನು

ಅವಲಂಬಿಸಿದರು. ಆಮೇಲೆ ''ಏ'' ಸತ್ತನು. ''ಬಿ'' ಎಂಬವನು ಆತನ ಚಿಕ್ಕಪ್ಪನ ಆಸ್ತಿಗೆ ವಾರಸಾಗಿರಬಹುದೆಂದು ತೀರ್ಮಾನಿಸಲ್ಪಟ್ಟಿತು. (ಇ. ಲಾ. ರಿ. ೧೧ ಅ. ೧೦೦.)

ಮೈಸೂರು ಮುಂತಾದ ಕೆಲವು ಸ್ವತಂತ್ರರಾಜ್ಯಗಳಲ್ಲಿ ಮೇಲೆ ಹೇಳಲ್ಪಟ್ಟ ೧೮೫೦ ಸಂ॥ ೨೧ ನಂ॥ ಶಾಸನವು ಜಾರಿಗೆ ತರಲ್ಪಡಲಿಲ್ಲ. ಆದುದರಿಂದ ಅಂತಹ ಪ್ರದೇಶಗಳಲ್ಲಿ ಜಾತಿಭ್ರಷ್ಟತೆಯಿಂದ ವಾರಸು ಹಕ್ಕು ನಾಶವಾಗುವುದೆಂದೇ ಹೇಳಬೇಕಾಗಿದೆ.

ನಪುಂಸಕತ್ವವು ಕುರುಡು ಮೂಗತನವು ಕಿವುಡು.—ನಪುಂಸಕರಿಗೆ ವಾರಸು ಹಕ್ಕಿಲ್ಲವು. ಕುರುಡತನವು, ಮೂಗತನವು, ಕಿವುಡು-ಈ ದೋಷಗಳು ಹುಟ್ಟುವುದಕ್ಕೆ ಮೊದಲು ಉಂಟಾಗಿದ್ದು ನಿವಾರಿಸಲು ಶಕ್ಯವಾಗದೆಯಿದ್ದರೆಯೇ ದಾಯಾನರ್ಹತೆ ಸಿದ್ಧಿಸುವುದಲ್ಲದೆ, ಮಧ್ಯಕಾಲದಲ್ಲಿ ತಟಸ್ಥಿಸಿದವುಗಳಾಗಿರುವಾಗಲೂ ನಿವಾರಿಸುವುದಕ್ಕನುಕೂಲವಾಗಿರುವಾಗಲೂ ದಾಯಾನರ್ಹತೆ ಯುಂಟಾಗಲಾರದು. (೧೪ ಕ. ಹೈ. ೨೭೩; ಇ. ಲಾ. ರಿ. ೧ ಬೊಂ ೧೨೭ (ಕುರುಡು;) ೧ ಕ. ಹೈ. ೧೧೭; ೧೮೭೦ ಸಂ॥ ಬಂ. ನ. ತೀ ೬೬೧; ಇ. ಲಾ. ರಿ. ೬ ಅ. ೩೨೨ (ಮೂಗು, ಕಿವುಡು); ೪ ಬೊಂ. ಹೈ. ೧೩೫ (ಮೂಗು); ಇ. ಲಾ. ರಿ. ೧ ಬೊಂ. ೫೫೭; ಇ. ಲಾ. ರಿ. ೧೮ ಕ. ೩೮೭; ೧೧೧.)

ಹುಚ್ಚು.—ಹುಚ್ಚರು ವಾರಸುಗಳಾಗಿರುವುದಕ್ಕೆ ತಕ್ಕವರಲ್ಲ. ಹುಚ್ಚೆಂದರೆ-ಸಂಪೂರ್ಣವಾಗಿ ಮತಿಕೆಟ್ಟು, ದುರಾಗತಕೃತ್ಯಗಳನ್ನು ಮಾಡಿ ಇತರರಿಗೆ ಹಾನಿಮಾಡುವಂತಹ ಸ್ಥಿತಿಯೆಂದೆಣಿಸಕೂಡದು. ತಾನು ಮಾಡುವಂತಹ ಕಾರ್ಯವು ಸರಿಯಾಗಿರುವುದು ಸರಿಯಾಗಿಲ್ಲ-ಎಂದು ತಿಳಿದುಕೊಳ್ಳುವುದಕ್ಕೆ ಅನುಕೂಲವಲ್ಲದೆ ಜ್ಞಾನಶೂನ್ಯತೆ ಹುಚ್ಚಾಗಿ ಭಾವಿಸಲ್ಪಡುವುದು. (೧ ಮ ಹೈ. ೨೧೪; ಇ. ಲಾ. ರಿ. ೧೨ ಅ. ೫೩೦).

ಅಂಗಹೀನತ್ವವು.— ಕಾಲು ಕೈಗಳಿಲ್ಲದೆ ಕೆಲಸಕಾರ್ಯಗಳಿಗೆ ಶಕ್ತಿಯುಂಟಾಗಿರದ ವಿಕಲಾಂಗರು (ನಿರಿಂದ್ರಿಯರು) ದಾಯಾನರ್ಹರೆಂದು ಹೇಳಲ್ಪಟ್ಟಿದೆ. ಹುಟ್ಟಿದುದುಮೊದಲು ವಿಕಲಾಂಗರಾಗಿರದೆ, ಮಧ್ಯಕಾಲದಲ್ಲಿ ರೋಗದಿಂದಾದರೂ ಮತ್ತೆ ಯಾವಕಾರಣದಿಂದಾದರೂ ಕೈಕಾಲುಗಳುಕೆಟ್ಟು ಕದಲಲಾರದೆ ಇರುವ ಮೊಂಡರೂ ಹೆಳವರೂಕೂಡ ದಾಯಾನರ್ಹರೆಂದು ಹೇಳಬೇಕಾಗಿದೆ. (ಇ. ಲಾ. ರಿ. ೧ ಬೊಂ. ೧೮೫; ವೆ. ಬು. ೫೭೮; ಬೊಂ ಸಿ. ರಿ. ೧೫೧.)

ಅನಿವಾರ್ಯವಾದವ್ಯಾಧಿ —ಅನಿವಾರ್ಯವೆನಿಸಿದ ಕುಷ್ಠರೋಗವು ಮುಂ

ತಾದ ವ್ಯಾಧಿಗಳಿಂದ ಬಾಧೆಪಡುತ್ತಿರುವವರು ದಾಯಾನರ್ಹರೆಂದು ಹೇಳಲ್ಪಟ್ಟಿದೆ. ಈ ರೋಗಗಳು ಜನ್ಮಾದಿಯಾಗಿ ಉಂಟಾಗಿರಬೇಕೆಂಬುದು ಆವಶ್ಯಕವಲ್ಲವು ಮಧ್ಯಕಾಲದಲ್ಲಿ ಉಂಟಾದರೂ, ಅವು ಅತಿಕಠಿನವಾಗಿಯೂ ಅನಿವಾರ್ಯವಾಗಿಯೂ ಇದ್ದರೆ, ದಾಯಾನರ್ಹತೆ ಸಿದ್ಧಿಸುವುದು. ಶರೀರವೆಲ್ಲವೂ ಹರಡಿ ವ್ರಣಗಳಪಾಲಾಗಿ ನಿವಾರಿಸುವುದಕ್ಕೆ ಅಶಕ್ಯವಾಗಿದ್ದಪಕ್ಷದಲ್ಲಿಯೇ ಕುಷ್ಠರೋಗದಿಂದ ದಾಯಾನರ್ಹತೆ ಸಿದ್ಧಿಸುವುದು. (೧೮೬೦ ಸಂ|| ಮ. ತೀ ೨೩೯; ಇ. ಲಾ. ರಿ. ೫ ಬೊಂ. ೧೪೫; ಇ. ಲಾ. ರಿ. ೧ ಬೊಂ. ೫೫೪.) ಕ್ಷಯರೋಗವು, ರಾಜವ್ರಣವು, ಇವುಕೂಡ ಸುತರಾಂ ನಿವಾರಿಸಲಾಗದ ಸ್ಥಿತಿಯಲ್ಲಿದ್ದರೆ, ದಾಯಾನರ್ಹತೆಯನ್ನು ಉಂಟುಮಾಡುವುದೆಂದು ಹೇಳಬಹುದು. ೨ ಸ. ೧೨೫.)

ವ್ಯಭಿಚಾರವು.—ಸತ್ತುಹೋದ ಆಸ್ತಿದಾರನಿಗೆ ಪುತ್ರಸಂತತಿಯವರು ಯಾರೂ ಇಲ್ಲದೆ ಆತನ ಹೆಂಡತಿ ವಾರಸುದಾರಳಾಗಿರುವಿಕೆ ತಟಸ್ಥವಾದರೆ, ಅದಕ್ಕೆಮೊದಲೇ ಆಕೆಗೆ ವ್ಯಭಿಚಾರದೋಷವು ಏರ್ಪಟ್ಟಪಕ್ಷದಲ್ಲಿ, ವಾರಸು ಹಕ್ಕು ಉಂಟಾಗಿರದು. ಮಗಳು, ತಾಯಿ, ತಂದೆತಾಯಿ, ಅಜ್ಜನತಾಯಿ- ಈ ಮೊದಲಾದ ಸ್ತ್ರೀವಾರಸರ ವಾರಸು ಹಕ್ಕಿಗೆ ಬಂಗಾಳಾದೇಶದಲ್ಲಿ ಮಾತ್ರವೇ ವ್ಯಭಿಚಾರದೋಷದಿಂದ ಬಾಧಕವುಂಟಾಗಿದೆ ಹೊರತು, ಮಿಕ್ಕೆಡೆಗಳಲ್ಲಿ ಬಾಧಕವಿಲ್ಲವೆಂದು ಈವರಿಗೇ ತಿಳಿಸಿರುವೆವು.

ಪುನರ್ವಿವಾಹವು. —ಗಂಡನು ಸತ್ತುಹೋದಮೇಲೆ ಹೆಂಡತಿ ಮರಳಿ ಮದುವೆಮಾಡಿಕೊಂಡರೆ, ಗಂಡನ ಆಸ್ತಿಯಲ್ಲಿ ಆಕೆಗೆ ಉಂಟಾಗಿರುವ ಯಾವತ್ತು ಹಕ್ಕುಗಳೂ ನಾಶವಾಗಿ ಅನಂತರ ವಾರಸರು ಹಕ್ಕುದಾರರಾಗುವರು. (೧೮೫೬ ಸಂ|| ೧೫ ನಂ|| ನಿಬಂಧನೆ, ಸೆ. ೨.)

ಆಶ್ರಮವು.—ಸನ್ಯಾಸವು, ವಾನಪ್ರಸ್ಥವು ನಿತ್ಯ ಬ್ರಹ್ಮಚರ್ಯಾಶ್ರಮ ಯಾವುದನ್ನಾದರೂ ಪೂರ್ಣ ಸಂಪೂರ್ಣವಾಗಿ ವೈರಾಗ್ಯವನ್ನು ವಹಿಸಿ ಪ್ರಪಂಚ ವ್ಯವಹಾರಗಳನ್ನು ಸುತರಾಂ ಪರಿತ್ಯಾಗ ಮಾಡಿದವರಿಗೆ ವಾರಸು ಹಕ್ಕು ನಿಲ್ಲಲಾರದು. ಅಂತಹವರು ಸತ್ತುಹೋದವರಂತೆಯೇ ಭಾವಿಸಲ್ಪಟ್ಟು ಅವರ ಮೇಲಣ ವಾರಸುದಾರರು ಹಕ್ಕುದಾರರಾಗುವರು. ಸುಮ್ಮನೆ ವಿರಕ್ತಿಯಾಗಿರುವಷ್ಟು ಮಾತ್ರದಿಂದ ವಾರಸುಯೋಗ್ಯತೆ ತಪ್ಪಿಹೋಗುವುದೆಂದು ಭಾವಿಸಕೂಡದು. (೧ ಸ. ೨೦೯.)

ಔರಸತ್ವವು — ಯಾವ ವಾರಸರಾದರೂ ಅವರ ತಾಯಿತಂದೆಗಳಿಗೆ ಕ್ರಮವಾದ ಔರಸಪುತ್ರರು, ಅಲ್ಲದೆ ಔರಸಪುತ್ರಿಯರು ಅಲ್ಲವೆಂದು ಸ್ಪಷ್ಟವಾಗಿ ರುಜುವಾತುಂಟಾದರೆ ಅವರಿಗೆವಾರಸುಹಕ್ಕುಂಟಾಗಿರಲಾರದು. ೧೮೭೨

೧ ನಂ॥ ಎವಿಡೆನ್ಸ್ ಆಕ್ಟ್ ೧೧೨ ಸೆ॥ ಪ್ರಕಾರವಾಗಿ ಭಾರ್ಯಾಭರ್ತೃರು ಸೇರಿ ಒಕ್ಕಲು ಮಾಡುತ್ತಿರುವಾಗಾದರೂ, ಅವರು ಬೇರೆಯಾಗಿರುವಪಕ್ಷದಲ್ಲಿ ಬೇರೆಯಾದ ದಿನವೊದಲುಗೊಂಡು ೨೮೦ ದಿನಗಳೊಳಗಾಗಿ ಯಾದರೂ ಉಂಟಾದ ಸಂತಾನವು ಔರಸಸಂತಾನವಾಗಿ ಭಾವಿಸಲ್ಪಡುವುದು. ಆದರೆ ಗರ್ಭೋತ್ಪತ್ತಿಯಾಗತಕ್ಕ ಯಾವಕಾಲದಲ್ಲಿಯೂ ಸದರಿ ದಂಪತಿಗಳು ಕೂಡ ಇರಲಿಲ್ಲವೆಂದು ಸ್ಪಷ್ಟವಾಗಿ ರುಜುವಾತಾದರೆ ಔರಸತ್ವವು ಊಹಿಸಲ್ಪಡಲಾರದು.

— ಉದಾಹರಣಗಳು —

(೧) ಭಾರ್ಯಾಭರ್ತರಿಬ್ಬರೂ ಸೇರಿ ಒಕ್ಕಲು ಮಾಡುತ್ತಿರುವಲ್ಲಿ ಪುತ್ರನು ಹುಟ್ಟಿದನು. ಆದರೆ ಹುಟ್ಟುವುದಕ್ಕೆ ಮೊದಲು ಗಂಡನು ನಪುಂಸಕನೆಂದೂ ಆತನ ನಪುಂಸಕತ್ವವು ವಾಸಿಯಾಗಲಾರದೆಂದೂ ವಾಸಿಯಾಗಲಿಲ್ಲವೆಂದೂ ಆತನು ಸಂಭೋಗಕ್ಕೆ ಅನರ್ಹನೆಂದೂ ಆತನಿಂದ ಗರ್ಭೋತ್ಪತ್ತಿಯಾಗುವುದು ಅಸಂಭವವೆಂದೂ ಹೀಗೆ ಆತನನ್ನು ಹಲವುಬಾರಿ ಚೆನ್ನಾಗಿ ಪರೀಕ್ಷಿಸಿದ ಡಾಕ್ಟರುಗಳು ಮುಂತಾದವರ ಸಾಕ್ಷ್ಯವುಂಟು. ಸದರಿ ಪುತ್ರನು ಔರಸನಾಗಿ ಭಾವಿಸಲ್ಪಡಲಾರನು.

(೨) ಗಂಡನನ್ನು ಬಿಟ್ಟು ಹೆಂಡತಿ ತೌರುಮನೆಗೆ ಹೊರಟುಹೋದಳು. ಆಮೇಲೆ ಒಂದು ಸಂವತ್ಸರಕ್ಕೆ ಆಕೆಗೆ ಮಗನು ಅಲ್ಲದೆ ಮಗಳು ಹುಟ್ಟಿತು. ಭಾರ್ಯಾಭರ್ತೃರು ಬಿಟ್ಟು ಹೋದಮೇಲೆ ಅವರು ಮರಳಿಸೇರಿ ಸಂಭೋಗಿಸಲಿಲ್ಲವೆಂದು ರುಜುವಾತು ಕಾಣಿಸಿದರೆ ಸದರಿ ಮಗನಿಗೆ ಅಲ್ಲದೆ ಮಗಳಿಗೆ ಔರಸತ್ವವಿಲ್ಲವು

(೩) ಗಂಡನು ವಿದೇಶಗತನಾಗಿ ಕೆಲವು ಸಂವತ್ಸರಗಳು ಅಲ್ಲಲ್ಲಿ ಸಂಚರಿಸಿಬಂದು ಮರಳಿ ಹೆಂಡತಿಯೊಡನೆ ಸೇರಿದನು; ಹಾಗೆ ಸೇರಿದ ನಾಲ್ಕುತಿಂಗಳಿಗೆ ಅವರಿಗೆ ಸಂತಾನವುಂಟಾಯಿತು; ಇದು ಔರಸ ಸಂತಾನವಾಗಲಾರದು

(೪) ಗಂಡನು ಸತ್ತುಹೋಗುವಾಗ ಹೆಂಡತಿ ಬಸುರಿಯಾಗಿದ್ದು ಆಮೇಲೆ ಸಂತಾನವುಂಟಾದರೆ, ಈ ಸಂತಾನವು ಔರಸಸಂತಾನವಾಗಿ ಭಾವಿಸಲ್ಪಡುವುದು. ಮತ್ತು ವಾರಸುಹಕ್ಕು ಸಂಕ್ರಮಿಸಿದಕಾಲಕ್ಕೆ ಮೊದಲೇ ಜನ್ಮಿಸಿರುವ ಸ್ತ್ರೀಪುರುಷರಿಗೆ ಎಂತಹ ಹಕ್ಕುಗಳುಂಟಾಗಿರುವುವೋ, ಸದರಿ ಕಾಲದಲ್ಲಿ ಗರ್ಭಸ್ಥರಾಗಿದ್ದು ಆಮೇಲೆ ಜನ್ಮಿಸಿದವರಿಗೂ ಅದೇ ಹಕ್ಕುಗಳುಂಟಾಗಿರುವುವು. (೯ ಕ ಹೈ ೩೪೨ ; ೫ ಬಂ ಸ ತೀ ೩೧೫)

(೫) ಗಂಡನು ಸತ್ತುಹೋದಕಾಲದಲ್ಲಿ ಹೆಂಡತಿ ಗರ್ಭಿಣಿಯೆಂದು ಹೇಳಲ್ಪಟ್ಟಳು, ಆದರೆ ಗಂಡನು ಸತ್ತುಹೋದ ಒಂದು ಸಂವತ್ಸರಕ್ಕೆ ಅನಂತರದಲ್ಲಿ ಆಕೆಗೆ ಸಂತಾನವುಂಟಾಯಿತು. ಈ ಸಂತಾನವು ಔರಸ ಸಂತಾನವಾಗಿ

ಭಾವಿಸಲ್ಪಡಲಾರದು. ಕೆಲವರು ಗರ್ಭಿಣಿಸ್ತ್ರೀಯರು ೨-೩-೪ ಸಂವತ್ಸರಗಳವರೆಗೆಕೂಡ ತಮ್ಮ ಗರ್ಭವನ್ನು ಹೊರುವರೆಂದು ನಮ್ಮ ದೇಶದಲ್ಲಿ ಹೇಳುವರಾದರೂ ಈವಿಷಯವು ಕೋರ್ಟುಗಳಲ್ಲಿ ಬಹುಶಃ ಅಂಗೀಕರಿಸಲ್ಪಡಲಾರದು.

ಸ್ತ್ರೀವಾರಸರ ಆಸ್ತಿಯಲ್ಲಿ ಸಂಪೂರ್ಣಸ್ವಾತಂತ್ರ್ಯವಿಲ್ಲವು— ಒಬ್ಬನ ಮರಣಾನಂತರದಲ್ಲಿ ಆತನ ಆಸ್ತಿ ಆತನ ವಂಶದವರ ಅನುಭವದಲ್ಲಿಯೇ ಇರಬೇಕಲ್ಲದೆ ಇತರ ವಂಶಗಳವರಿಗೆ ಸೇರಿಹೋಗಕೂಡದೆಂಬ ಅಭಿಪ್ರಾಯವು ನಮ್ಮ ಹಿಂದೂಗಳಲ್ಲಿ ಚಿರಕಾಲದಿಂದ ನೆಲೆಗೊಂಡಿದೆ. ಈ ಅಭಿಪ್ರಾಯವನ್ನು ಹಿಡಿದು ಪುರುಷವಾರಸರಿಗೂ ಸ್ತ್ರೀವಾರಸರಿಗೂ ಕೆಲವು ಭೇದಗಳೇರ್ಪಟ್ಟು ಪುರುಷವಾರಸಿಗೆ ಆಸ್ತಿ ಬಂದಾಗ ಅದರಲ್ಲಿ ಆತನಿಗೆ ಸಂಪೂರ್ಣಸ್ವಾತಂತ್ರ್ಯ ಉಂಟಾಗಿರುವುದು. ಆದುದರಿಂದ ಸದರಿ ಆಸ್ತಿಯನ್ನು ಆತನಿಚ್ಛೆಬಂದಂತೆ ವೆಚ್ಚಿಸಬಹುದು, ಪರಾಧೀನ ಮಾಡಬಹುದು, ಮತ್ತು ಆತನ ಮರಣಾನಂತರದಲ್ಲಿ ಅದು ಆತನ ವಾರಸರಿಗೇ ಎಂದರೆ ಆತನ ಕುವರರು ಮುಂತಾದವರಿಗೇ ಹೊಂದುವುದಲ್ಲದೆ ಆ ಹಿಂದಣ ಆಸ್ತಿದಾರನ ವಾರಸರಿಗೆ ಸಲ್ಲಲಾರದು. ಸ್ತ್ರೀವಾರಸರಿಗೆ ಎಂದರೆ— ಹೆಂಡತಿ ಮುಂತಾದವರಿಗೆ ವಾರಸುಹಕ್ಕಿನಿಂದ ಪುರುಷರ ಆಸ್ತಿ ಬಂದಾಗ ಅದರಲ್ಲಿ ಅವರಿಗೆ ಸಂಪೂರ್ಣಸ್ವಾತಂತ್ರ್ಯವುಂಟಾಗದೆ ಯಾವಜ್ಜೀವವನ್ನನುಭವಿಸುವುದಕ್ಕೂ ಆವಶ್ಯಕ ಕಾರ್ಯಗಳಲ್ಲಿ ವ್ಯಯಗೊಳಿಸುವುದಕ್ಕೂ ಮಾತ್ರವೇ ಹಕ್ಕುಂಟಾಗಿರುವುದು. ಇಷ್ಟೇ ಅಲ್ಲದೇ ಅವರ ಮರಣಾನಂತರದಲ್ಲಿ ಆ ಹಿಂದಣ ಆಸ್ತಿದಾರನಿಗೆ ಯಾರು ಸಮೀಪವಾರಸರಾಗಿರುವರೋ ಅವರಿಗೇ ಸದರಿಯಾಸ್ತಿ ಸಲ್ಲುವುದಲ್ಲದೆ ಸದರಿ ಸ್ತ್ರೀಯರ ವಾರಸುದಾರರಿಗೆ ಸಲ್ಲಲಾರದು. ಬೊಂಬಾಯಿ ಪ್ರಸಿಡೆನ್ಸಿಯಲ್ಲಿ ಲ್ಲದೆ ಮಿಕ್ಕ ಎಲ್ಲಾ ಸಂಪ್ರದಾಯಗಳ ಮೇರೆಯೂ ಸಮಸ್ತ ಸ್ತ್ರೀವಾರಸರಿಗೂ ಎಂದರೆ- ಹೆಂಡತಿ ಮಗಳು ತಾಯಿ ತಂದೆಯತಾಯಿ ಅಜ್ಜನತಾಯಿ ಅಕ್ಕನು ತಂಗಿ ಮುಂತಾದ ಎಲ್ಲಾ ಸ್ತ್ರೀವಾರಸರಿಗೂ ಈ ಹೇಳಲ್ಪಟ್ಟ ಅಸಂಪೂರ್ಣಸ್ವಾತಂತ್ರ್ಯವೇರ್ಪಟ್ಟಿದೆ. (೧೧ ಮೂ ಇ ಅ ೧೩೯, ೧೭೩, ೪೮೭, ೫೦೯ ; ೮ ಮೂ ಇ ಅ ೫೨೯ ೫೫೦ ; ೧೩ ಕ ಹೈ ಸ. ೫೩ ೭೬ ; ೨ ಮೂ ಇ ಅ ೩೩೧ ; ೧ ಬೊಂ ಹೈ ೧೩೦ ೧೧೭ ೨ ಬೊಂ ಹೈ ೧೦, ೪ ಬೊಂ ಹೈ ೧೬೩ ; ೬ ಬೊಂ ಹೈ ೧ ೨೧೫; ಇ ಲಾ ರಿ ೩ ಬೊಂ ೩೫೩-೩೬೯ ; ಇ ಲಾ ರಿ ೪ ಬೊಂ ೧೮೭ ; ಇ ಲಾ ರಿ ೫ ಬೊಂ ೬೭೦; ಇ ಲಾ ರಿ ೧೬ ಬೊಂ ೨೨೯ ; ೩ ಬಂ ಸ ತೀ ೧೨೮ ; ೬ ಬಂ ಸ ತೀ ೭೭ ; ೪ ಬಂ ಸ ತೀ ೩೩೦ ; ೧೪ ಕ ಹೈ ೨೪೫; ಇ ಲಾ ರಿ ೪ ಕ ೭೪೪; ೩ ಮ ಹೈ ೩೧೨; ೬ ಮ ಹೈ ೩೧೦; ಇ ಲಾ ರಿ ೩ ಮ ೨೯೦; ೧ ಬಂ ಸ ತೀ ೧೬೨; ೪ ಬಂ ಸ ತೀ ೩೧೦; ೬ ಬಂ ಸ ತೀ ೪೩; ೭ ಬಂ ಸ ತೀ ೧೦೮; ೩ ಸ ೧೪೦; ೨ ಮ ಹೈ ೪೦೨; ೮ ಮ ಹೈ ೮೮ ; ಇ ಲಾ ರಿ

೧ ಮ ೧೭೪; ಇ ಲಾ ರಿ ೧ ಅ ೬೬೭.) ಸದರಿ ಆಸ್ತಿ ಸ್ಥಿರವಾದರೂ ಸರಿಯೆ ಚರವಾದರೂ ಸರಿಯೆ ಹಿಂದಣ ಆಸ್ತಿದಾರನ ಪಿತ್ರಾರ್ಜಿತವಾದರೂ ಸರಿಯೆ ಸ್ವಾರ್ಜಿತವಾದರೂ ಸರಿಯೆ ಅದರಲ್ಲಿ ಸ್ತ್ರೀವಾರಸರಿಗೆ ಅಸಂಪೂರ್ಣಸ್ವಾತಂತ್ರ್ಯವೇವುಂಟಾಗಿರುವುದೆಂದು ತೀರ್ಮಾನಗಳು ಮಾಡಲ್ಪಟ್ಟವೆ. (೧೧ ಮೂ ಇ ಅ ೧೩೯ ೪೮೩; ಇ ಲಾ ರಿ ೮ ಮ ೨೦೯ ೩೦೫.) ಜೈನಮತಸ್ಥರಲ್ಲಿ ಮಾತ್ರವು ಆಸ್ತಿದಾರನ ಸ್ವಾರ್ಜಿತದಮೇಲೆ ಸ್ತ್ರೀವಾರಸರಿಗೆ ಸಂಪೂರ್ಣ ಸ್ವಾತಂತ್ರ್ಯವಿರುವಂತೆಯೂ, ಪಿತ್ರಾರ್ಜಿತದಮೇಲೆಕೂಡ ಹೆಚ್ಚಾಗಿ ಸ್ವಾತಂತ್ರ್ಯವಿರುವಂತೆಯೂ ಕಾಣಬರುವುದು. (೬ ಅ. ಹೈ. ೩೮೨; ಇ. ಲಾ. ರಿ. ೧ ಅ. ೬೮೮.) ಮಿಥಿಲದೇಶದಲ್ಲಿಯೂ ಬೊಂಬಯಿ ದೇಶದಲ್ಲಿಯೂ ಸ್ತ್ರೀವಾರಸರಿಗೆ ಚರಾಸ್ತಿಯಮೇಲೆ ಹೆಚ್ಚು ಸ್ವಾತಂತ್ರ್ಯವಿರುವಂತೆ ಕಾಣಬರುವುದು. (ಇ. ಲಾ. ರಿ. ೧೦ ಕ. ೩೯೨; ೧ ಬೊಂ. ಹೈ. ೫೬, ೧೩೦; ೨ ಬೊಂ. ಹೈ. ೧೦; ೪ ಬೊಂ. ಹೈ. ೧೫೦, ೧೬೨; ೬ ಬೊಂ. ಹೈ. ೧, ೧೩; ಇ ಲಾ. ರಿ. ೫ ಬೊಂ ೬೭೦; ಇ. ಲಾ. ರಿ. ೭ ಬೊಂ. ೧೬೩; ಇ. ಲಾ. ರಿ. ೧೬ ಬೊಂ. ೨೨೯, ೨೩೩.)

ವಿಭಾಗಕಾಲದಲ್ಲಿ ಸಮಷ್ಟಿಯಾಸ್ತಿಯೊಳಗೆ ಕೊಂಚಭಾಗವು ಸ್ತ್ರೀಯರಿಗೆ ಕೊಡಲ್ಪಟ್ಟಪಕ್ಷದಲ್ಲಿ, ಅದರಲ್ಲಿ ಕೂಡ ಅವರಿಗೆ ಅಸಂಪೂರ್ಣ ಸ್ವಾತಂತ್ರ್ಯವೇವುಂಟಾಗಿರುವುದು. (೨ ಮೂರ್ಲಿ. ೧೯೮; ಎಫ್. ಮೆಕ್. ೬೭, ೩೩ ೫ ಕ. ಹೈ. ೫೦೮; ೧೧ ಮೂ. ಇ. ಅ. ೫೧೪; ಇ. ಲಾ. ರಿ. ೧೫ ಕ. ೨೯೨; ಇ. ಲಾ. ರಿ. ೧೬ ಕ. ೭೫೮.) ಆದರೆ ವಿಭಾಗ ಷರತ್ತುಗಳಿಂದ ಸಂಪೂರ್ಣಸ್ವಾತಂತ್ರ್ಯವು ಕೊಡಲ್ಪಡಬಹುದು. (೧೧ ಕ. ಹೈ. ೪೫೯; ೧ ಅ. ಹೈ. ೧೦.)

ಬೊಂಬಯಿಪ್ರಸಿಡೆನ್ಸಿಯಲ್ಲಿ ಕೆಲವರು ಸ್ತ್ರೀವಾರಸರಿಗೆ ಮಾತ್ರವೇ ಸಂಪೂರ್ಣಸ್ವಾತಂತ್ರ್ಯವು.— ಬೊಂಬಯಿ ಪ್ರಸಿಡೆನ್ಸಿಯಲ್ಲಿ ಮಗಳು, ಅಕ್ಕತಂಗಿಯರು ಮೊದಲಾದ ಕೆಲವರು ಸ್ತ್ರೀವಾರಸರಿಗೆ ಮಾತ್ರವೇ ಸಂಪೂರ್ಣಸ್ವಾತಂತ್ರ್ಯವು ಸ್ಥಿರಪಟ್ಟಿದೆ. ಅಲ್ಲಿ ಪ್ರಮಾಣವಾಗಿ ನಲ್ಲುತ್ತಿರುವ ಮಯೂಖಗ್ರಂಥವನ್ನು ಹಿಡಿದು ಈ ಸಂಬಂಧವಾದ ಮಿತಾಕ್ಷರ ವಚನಗಳಿಗೆ ಅಲ್ಲಿ ಮಾಡಲ್ಪಟ್ಟಿರುವ ಅರ್ಥವನ್ನು ಹಿಡಿದು, ಸ್ತ್ರೀವಾರಸರು ಎರಡು ತರಗತಿಗಳವರಾಗಿ ಏರ್ಪಡುವರು. (೧) ಭಿನ್ನಗೋತ್ರದಲ್ಲಿ ಜನ್ಮಿಸಿ ವಿವಾಹದಿಂದ ಆಸ್ತಿದಾರನ ಗೋತ್ರದಲ್ಲಿ ಸೇರಿದವರು ಎಂದರೆ- ಹೆಂಡತಿ, ತಾಯಿ, ತಂದೆಯ ತಾಯಿ, ಅಜ್ಜನತಾಯಿ, ಕುಮಾರನ ಹೆಂಡತಿ ಈ ಮುಂತಾದವರು. (೨) ಆಸ್ತಿದಾರನ ಗೋತ್ರದಲ್ಲಿ ಜನ್ಮಿಸಿ ವಿವಾಹದಿಂದ ಭಿನ್ನಗೋತ್ರದಲ್ಲಿ ಸೇರಿದವರು ಎಂದರೆ- ಮಗಳು, ಅಕ್ಕನು, ತಂಗಿ, ಮೊಮ್ಮಗಳು, ಅಣ್ಣನಮಗಳು, ಅಣ್ಣನ ಮೊಮ್ಮಗಳು, ಸೋದರತ್ತೆ ಈ ಮುಂತಾದವರು (ಇ. ಲಾ. ರಿ

೫ ಬೊಂ ೧೧೦, ೬೬೨, ೬೭೦.) ಮೊದಲತರಗತಿ ಸ್ತ್ರೀಯರು ಪುರುಷನ ಆಸ್ತಿಗೆ ವಾರಸರಾದಾಗ ಅದರಲ್ಲಿ ಅವರಿಗೆ ಸಂಪೂರ್ಣಸ್ವಾತಂತ್ರ್ಯವುಂಟಾಗದೆ ಅವರ ಮರಣಾನಂತರದಲ್ಲಿ ಅದು ಹಿಂದಣ ಆಸ್ತಿದಾರನ ವಾರಸರಿಗೇ ಸಲ್ಲುವುದು. (೧ ಬೊಂ. ಹೈ. ೧೩೦; ೨ ಬೊಂ. ಹೈ. ೧೦; ಇ. ಲಾ. ರಿ. ೪ ಬೊಂ. ೧೬೩; ೬ ಬೊಂ. ಹೈ. ೧; ಇ. ಲಾ. ರಿ. ೩ ಬೊಂ. ೩೫೩, ೩೬೯; ಇ. ಲಾ ರಿ. ೧೬ ಬೊಂ. ೨೨೯.) ಎರಡನೆಯ ತರಗತಿ ಸ್ತ್ರೀಯರು ಪುರುಷರ ಆಸ್ತಿಗೆ ವಾರಸರಾದಾಗ, ಅದರಲ್ಲಿ ಅವರಿಗೆ ಪುರುಷರಿಗೆ ಹೇಗೋ ಹಾಗೆಯೇ ಸಂಪೂರ್ಣಸ್ವಾತಂತ್ರ್ಯವುಂಟಾಗುವುದು. (ಇ. ಲಾ. ರಿ. ೫ ಬೊಂ. ೬೧೨; ಇ. ಲಾ. ರಿ. ೧೧ ಬೊಂ. ೩೧೨; ೧ ಬೊಂ. ಹೈ. ೧೩೦, ೨೦೯; ೮ ಬೊಂ. ಹೈ. ೨೪೪; ಇ ಲಾ. ರಿ. ೨ ಬೊಂ. ೧೭೧; ಇ. ಲಾ. ರಿ. ೪ ಬೊಂ. ೧೮೭; ಇ. ಲಾ. ರಿ. ೫ ಬೊಂ. ೬೭೨; ಇ. ಲಾ. ರಿ. ೬ ಬೊಂ. ೮೫; ಇ. ಲಾ. ರಿ. ೧೧ ಬೊಂ. ೨೮೫; ಇ. ಲಾ. ರಿ. ೧೭ ಬೊಂ. ೬೧೨; ೧ ಬೊಂ. ಹೈ. ೧೧೭, ೧೨೪; ೬ ಬೊಂ. ಹೈ. ೧; ೯ ಮ. ಇ. ಅ. ೫೧೬, ೫೩೮; ಇ. ಲಾ. ರಿ. ೫ ಬೊಂ. ೬೭೧; ಇ. ಲಾ. ರಿ. ೧೫ ಬೊಂ. ೨೦೬.) ಮತ್ತು ಅವರ ಮರಣಾನಂತರದಲ್ಲಿ ಸದರಿ ಆಸ್ತಿ ಆ ಹಿಂದಣ ಆಸ್ತಿದಾರನ ವಾರಸರಿಗೆ ಸಲ್ಲದೆ ಸದರಿ ಸ್ತ್ರೀಯರೇ ಪುರುಷರಾಗಿದ್ದಪಕ್ಷದಲ್ಲಿ ಅವರಿಗೆ ಯಾರು ವಾರಸರಾಗಿರುವರೋ ಅಂತಹವರಿಗೆ ಸಲ್ಲುವುದು. ಎಂದರೆ- ಕುಮಾರನು, ಮಗಳು, ದೌಹಿತ್ರನು ತಾಯಿತಂದೆಗಳು ಮುಂತಾದ ವಾರಸರಿಗೆ ಸಲ್ಲವುದು. (೮ ಬೊಂ. ಹೈ. ೨೪೪, ಇ. ಲಾ. ರಿ. ೧೨ ಬೊಂ. ೫೦೫; ಇ. ಲಾ. ರಿ. ೯ ಬೊಂ. ೫೦೧.)

ಸಂಪೂರ್ಣಸ್ವಾತಂತ್ರ್ಯವಿಲ್ಲದ ಸ್ತ್ರೀವಾರಸರ ಅನುಭವವು ಹಕ್ಕು— ಪರಾಧೀನದ ಹಕ್ಕು.— ಬೊಂಬಯಿ ದೇಶದಲ್ಲಿ ಹೆಂಡತಿ ಮುಂತಾದ ಸ್ತ್ರೀವಾರಸರಿಗೂ ಮಿಕ್ಕೆಡಗಳಲ್ಲಿ ಸಮಸ್ತ ಸ್ತ್ರೀವಾರಸರಿಗೂ ಪುರುಷರ ಕಡೆಯಿಂದ ಬಂದಾಸ್ತಿಯಲ್ಲಿ ಅವರಿಗೆ ಸಂಪೂರ್ಣ ಸ್ವಾತಂತ್ರ್ಯವಿಲ್ಲದಿದ್ದರೂ, ಅವರು ಅದನ್ನು ತಮ್ಮ ಯಾವಜ್ಜೀವವೂ ಸ್ವೇಚ್ಛೆಯಾಗಿ ಅನುಭವಿಸಬಹುದು. ಸದರಿ ಆಸ್ತಿಯ ವರಮಾನವು ಎಷ್ಟಾದರೂ ಸರಿಯೆ ಅದನ್ನು ಕೊಂಚವಾದರೂ ಮಿಗದಂತೆ ವೆಚ್ಚಿಸಿಕೊಳ್ಳಬಹುದು. ಅದನ್ನು ಕೂಡಿಡಬೇಕೆಂದಾದರೂ ಅದರವಿಷಯಕವಾಗಿ ಯಾರಿಗಾದರೂ ಲೆಕ್ಕ ಹೇಳಬೇಕೆಂದಾದರೂ ವಿಧಿಯಿಲ್ಲವು ಅಸಲು ಆಸ್ತಿಯನ್ನು ಬಡ್ಡಿ ಮುಂತಾದ ವಿಧಗಳಲ್ಲಿ ವೃದ್ಧಿಮಾಡಬೇಕೆಂದೂ ನಿರ್ಬಂಧವಿಲ್ಲವು ಅದನ್ನು ಹಾಳುಮಾಡದೆ, ತಮ್ಮ ಸ್ವಾಧೀನದೊಳಕ್ಕೆ ಅದು ಹೇಗೆಬಂತೋ ಅದೇವಿಧವಾಗಿ ತಮ್ಮನಂತರ ವಾರಸರಿಗೆ ಸೇರುವಂತೆ ಕಾಪಾಡಿದರೆ ಸಾಕಾಗಿದೆ. ಮತ್ತು ವರಮಾನವನ್ನು ಯಾವವಿಧವಾಗಿಯಾದರೂ ವೆಚ್ಚಿಸಬಹುದಲ್ಲದೆ, ಕೆಲವು ಕೆಲವು ಅತ್ಯಾವಶ್ಯಕವಾದ ಕಾರ್ಯಗಳ

ನಿಮಿತ್ತವಾಗಿ ಅಲ್ಲದೆ ಮಿಕ್ಕಯಾವಸಂದರ್ಭಗಳಲ್ಲಿಯೂ ಅಸಲು ಆಸ್ತಿಯನ್ನು ವೆಚ್ಚಿಸಕೂಡದು; ಅದನ್ನು ವಿಕ್ರಯಿಸಿಯಾದರೂ ಅಡವು ಮುಂತಾದ ಪರಾಧೀನಗಳಿಗೆ ಒಳಪಡಿಸಿಯಾದರೂ ಹಣತಂದು ವ್ಯಯಮಾಡಕೂಡದು. (ಇ ಲಾ. ರಿ, ೪ ಬೊಂ. ೪೬೨; ಇ. ಲಾ. ರಿ. ೮ ಮ. ೧೫೨, ಇ. ಲಾ. ರಿ. ೯ ಕ. ೨೪೪; ಇ. ಲಾ. ರಿ. ೮ ಬೊಂ. ೧೯೦; ೩ ಮ. ಹೈ. ೧೧೬; ೧೮೫೦ ಸಂ॥ ಮ. ತೀ. ೬೧; ೭ ಮೂ. ಇ. ಅ. ೮೩೩; ೬ ಕ ಹೈ. ೭೮೭; ೯ ಸ ೫೮೪; ೮ ಕ. ಹೈ. ೪೧.)

ಆಸ್ತಿಯ ವರಮಾನವನ್ನು ತಮ್ಮ ಇಷ್ಟಬಂದಂತೆ ಖರ್ಚುಮಾಡುವುದಕ್ಕೂ ತಮ್ಮ ಇಷ್ಟಬಂದವರಿಗೆ ದಾನಮಾಡುವುದಕ್ಕೂ ಸ್ತ್ರೀವಾರಸರು ಸ್ವತಂತ್ರತೆಯುಳ್ಳವರಾಗಿದ್ದರೂ, ಅವರ ಮರಣಕಾಲದಲ್ಲಿ ಖರ್ಚಾಗದೆ ಮಿಕ್ಕಿರುವ ಆದಾಯವು ಅಸಲು ಆಸ್ತಿಯೊಡನೆ ಸೇರುವುದು. ಆದುದರಿಂದ ಅದನ್ನು ಸದರಿ ಸ್ತ್ರೀವಾರಸರು ಉಯಿಲುಮೂಲಕವಾಗಿ ಕೊಡುವುದಕ್ಕೆ ಸ್ವತಂತ್ರಯರಲ್ಲವು. ಮತ್ತು ಅಸಲು ಸ್ವತ್ತಿನ ಆದಾಯವನ್ನು ಕೂಡಿಟ್ಟು ಕೆಲವಾಸ್ತಿ ಏರ್ಪಾಟು ಮಾಡಲ್ಪಟ್ಟಪಕ್ಷದಲ್ಲಿ ಅಲ್ಲದೆ ಅದರಿಂದ ಕೆಲವಾಸ್ತಿ ಸಂಪಾದಿಸಲ್ಪಟರೆ ಅದು ಅಸಲು ಆಸ್ತಿಗೆ ಸೇರಿದಂತೆಯೇ ಸಾಧಾರಣವಾಗಿ ಭಾವಿಸಲ್ಪಟ್ಟು ಅದರವಿಷಯವಾಗಿ ಸದರಿ ಸ್ತ್ರೀವಾರಸರಿಗೆ ಸಂಪೂರ್ಣಸ್ವಾತಂತ್ರ್ಯವು ತಪ್ಪಿಹೋಗುವದು. (೭ ಕ. ಹೈ. ೯೩; ಇ. ಲಾ. ರಿ. ೯ ಕ. ೭೫೮; ಇ. ಲಾ. ರಿ. ೫ ಕ. ೫೧೨; ಇ. ಲಾ. ರಿ. ೧೦ ಕ. ೩೩೮; ೫ ಅ. ಹೈ. ೧೯೭; ೨೦೧.) ಆದರೆ ಹಾಗೆ ಆದಾಯವನ್ನು ಕೂಡಿಟ್ಟು ಏರ್ಪಡಿಸಿಕೊಂಡ ಸ್ವತ್ತುಗಳು, ಸದರಿ ಸ್ತ್ರೀವಾರಸು ಮುಂದೆ ಮುಂದೆ ಸ್ವಾನುಭವ ನಿಮಿತ್ತವಾಗಿ ಉಪಯೋಗಿಸಿಕೊಳ್ಳಬೇಕೆಂಬ ಉದ್ದೇಶದಿಂದ ಏರ್ಪಡಿಸಿಕೊಂಡು ಅಸಲು ಆಸ್ತಿಯೊಡನೆ ಸೇರಿಸದೆ ಪ್ರತ್ಯೇಕವಾಗಿಟ್ಟುಕೊಂಡಪಕ್ಷದಲ್ಲಿ ಅದನ್ನು ಆಕೆ ಜೀವಿತಕಾಲದಲ್ಲಿ ಮರಳಿ ವೆಚ್ಚಿಸಬಹುದು. (೧೪ ಕ. ಹೈ ೧೫೯; ೨೫ ಸ. ೩೩೫; ಇ. ಲಾ, ರಿ. ೧೪ ಕ. ೩೮೭, ೪೬೧; ಇ. ಲಾ. ರಿ. ೧೬ ಕ. ೫೭೮; ಇ. ಲಾ. ರಿ. ೧೦ ಬೊಂ. ೮೭೪.)

ವರಮಾನವು ಸಾಕಾಗದಪಕ್ಷದಲ್ಲಿ ಕೆಲವು ಕೆಲವು ಮುಖ್ಯವಾದಕಾರ್ಯಗಳಿಗಾಗಿ ಅಸಲು ಆಸ್ತಿಯನ್ನು ಕೂಡ ಸ್ತ್ರೀವಾರಸರು ವೆಚ್ಚಿಸಬಹುದು. ಆ ಮುಖ್ಯವಾದ ಕಾರ್ಯಗಳಾವುವೆಂದರೆ—

ಅವಶ್ಯಕವಾದ ಕಾರ್ಯಗಳು ಶ್ರಾದ್ಧಾದಿಕರ್ಮಗಳು, ತೀರ್ಥಯಾತ್ರೆಗಳು ವಗೈರೆ—(೧) ಸದರಿ ಆಸ್ತಿ ಗಂಡನಿಂದ ಬಂದಿರುವಾಗ—ಆತನ ಅಪರಕ್ರಿಯೆಗಳು (ತಿಥಿ) ಮುಂತಾದ ಕರ್ಮಗಳನ್ನು ಅಸಲು ಆಸ್ತಿಯನ್ನು ವ್ಯಯಗೊಳಿಸಿಯಾದರೂ ನಡೆಯಿಸಿ ಆತನ ಆತ್ಮಕ್ಕೆ ಮುಕ್ತಿಯನ್ನುಂಟು

ಮಾಡಬೇಕು. ಮತ್ತು ಆತನಿಂದ ತಿಥಿ ಮೊದಲಾದ ಕರ್ಮಗಳನ್ನು ನಡೆಯಿಸಿಕೊಳ್ಳತಕ್ಕ ಆತನತಾಯಿ ಮುಂತಾದವರಿಗೆ ಕೂಡ ಕರ್ಮ ನಡೆಯಿಸಬೇಕು. (೧೧ ಕ. ಹೈ. ೪೧೮; ಇ. ಲಾ. ರಿ. ೮ ಕ. ೩೬.) ಗಂಡನಾತ್ಮಕ್ಕೆ ಮುಕ್ತಿ ಲಭಿಸಬೇಕೆಂಬ ಉದ್ದೇಶದಿಂದ ತೀರ್ಥಯಾತ್ರೆಗಳು, ಬ್ರಾಹ್ಮಣದಾನಗಳು, ದೇವಾಲಯಪ್ರತಿಷ್ಠೆಗಳು, ತಟಾಕಾದಿಪ್ರತಿಷ್ಠೆಗಳೂಕೂಡ ಮಾಡಬಹುದು. ಆದರೆ ಇವುಗಳ ನಿಮಿತ್ತವಾಗಿ ಆಸ್ತಿಯ ಯೋಗ್ಯತೆಯನ್ನನುಸರಿಸಿ ಖರ್ಚಮಾಡಬೇಕೇಹೊರತು, ಅಧಿಕವಾಗಿ ವೆಚ್ಚಿಸಕೂಡದು. ಆಸ್ತಿ ಸ್ವಲ್ಪವಾದ್ದಾಗಿರುವಾಗ ಈ ವಿಷಯಕವಾಗಿ ಎಷ್ಟುಮಾತ್ರವೂ ವೆಚ್ಚಿಸಕೂಡದು. (೧ ಸ. ೨೫೨; ೧೧ ಕ. ಹೈ. ೧೧೮, ೪೧೬: ಇ. ಲಾ. ರಿ. ೧೧ ಮ. ೨೮೮; ೨ ಮಾರ್ಟ್ಲಿ. ೧೯೯; ೨೧ ಸ. ೪೯; ೧ ಬಾರೋ ೩೯೪, ೪೦೫; ೨ ಬಾರೋ. ೫೧೦; ೧೮೫೦ ಸಂ|| ಮು. ತೀ. ೭೪.) ವಿಧವೆ ತನ್ನ ಸ್ವಂತ ಮುಕ್ತಿಗಾಗಿ ಮಾಡುವ ತೀರ್ಥಯಾತ್ರೆಗಳು ಮುಂತಾದವುಗಳಿಗೆ ಅಸಲು ನಸ್ತಿಯನ್ನು ವೆಚ್ಚಿಸಕೂಡದು (ಇ. ಲಾ, ರಿ ೪ ಅ ೪೮೨.) ಆಸ್ತಿಯ ವರಮಾನವನ್ನು ವೆಚ್ಚಿಸುವದಕ್ಕೆ ಆಕ್ಷೇಪವಿಲ್ಲ.

ಸಾಲಗಳು —ಆಸ್ತಿದಾರನು ಮಾಡಿರುವ ಸಾಲಗಳನ್ನು ತೀರಿಸುವದಕ್ಕೆ ಆವಶ್ಯಕವಾದರೆ, ಅಸಲು ಆಸ್ತಿಯನ್ನು ವಿಕ್ರಯಿಸಬಹುದು. ಅಯೋಗ್ಯಕಾರ್ಯಗಳ ನಿಮಿತ್ತವಾಗಿ ಮಾಡಲ್ಪಟ್ಟ ಸಾಲಗಳನ್ನು ತೀರಿಸಬೇಕಾದ ವಿಧಿ ಇಲ್ಲವು. ೮ ಪಾೂ ಇ. ಅ. ೩೧೯; ೯ ಸ. ೩೦೬: ೧೮೬೦ ಸಂ|| ಮು. ತೀ. ೧೫: ಇ ಲಾ ರಿ ೨ ಬೊಂ ೪೯೯) ಲಿಮಿಟೇಷನ್ (ಎಂದರೆ— ಕಾಲದೋಷವು) ತಗಲಿದ ಸಾಲಗಳನ್ನು ತೀರಿಸುವದಕ್ಕಾಗಿ ಅಸಲು ಆಸ್ತಿಯನ್ನು ಪರಾಧೀನಪಡಿಸಕೂಡದೆಂದು ಕೆಲವು ಕೇಸುಗಳಲ್ಲಿ ತೀರುಮಾನಿಸಲ್ಪಟ್ಟಿತು. (೬ ಬೊಂ ಹೈ ೨೭೦ ೧೪ ಸ ೧೪೭) ಆದರೆ ಈಚೇಚಿನ ತೀರ್ಮಾನಗಳಿಂದ ಲಿಮಿಟೇಷನ್ ತಗಲಿದ ಸಾಲಗಳನ್ನು ತೀರಿಸುವದಕ್ಕೆ ಕೂಡ ಅಸಲು ಆಸ್ತಿಯನ್ನು ಪರಾಧೀನಗೊಳಿಸಬಹುದೆಂದು ಸ್ಥಿರಪಟ್ಟಿದೆ. (ಇ ಲಾ ರಿ ೧೦ ಬೊಂ ೩೭೦, ೩೨೫; ಇ ಲಾ ರಿ ೧೩ ಮ ೧೮೯) ಅಂತಹ ಕಾಲದೋಷ ತಗಲಿದ ಸಾಲಗಳನ್ನು ತೀರಿಸುವದು ದಗಾ ಉದ್ದೇಶದಿಂದ ನಡೆಯಿಸಲ್ಪಡಕೂಡದು. (ಇ ಲಾ ರಿ ೧೧ ಬೊಂ ೬೬೬ ೧೮೮೨ ಸಂ|| ೪ ನಂ|| ನಿಬಂಧನೆ ೫೩ ಸೆ)

ಜೀವನಾಂಶಗಳು ಮದುವೆಗಳು ವಗೈರೆ— (೩) ಸ್ತ್ರೀವಾರಸರಿಗೆ ಬಂದಿರುವ ಆಸ್ತಿಯಿಂದ ನಡೆಯಬೇಕಾದ ಜೀವನಾಂಶಗಳ ನಿಮಿತ್ತವಾಗಿಯೂ ವಿವಾಹಾದಿ ಕಾರ್ಯಗಳ ನಿಮಿತ್ತವಾಗಿಯೂ, ಆವಶ್ಯಕವಾದಪಕ್ಷದಲ್ಲಿ, ಅಸಲು ಆಸ್ತಿಯನ್ನು ಪರಾಧೀನಪಡಿಸಬಹುದು (೧೬ ಸ. ೫೬; ಇ ಲಾ ರಿ

೫ ಬೊಂ ೪೫೦) ಆದರೆ ಎಂದಿಗೋ ಆವಶ್ಯಕವಾಗುವದೆಂದು ಮೊದಲೇ ಆಸ್ತಿಯನ್ನು ಪರಾಧೀನಪಡಿಸಿ ಹಣ ತಂದಿಟ್ಟುಕೊಳ್ಳಕೂಡದು. (೬ ಮದ ರಾಸು ಜೂರಿಸ್ಟ್, ೨೬೧)

ತಪ್ಪಲಾಗದ ಆವಶ್ಯಕತೆ— (೪) ಮೇಲೆ ಹೇಳಲ್ಪಟ್ಟವುಗಳಲ್ಲದೆ ಮತ್ತೆ ಯಾವದಾದರೂ ತಪ್ಪಲಾಗದ ಆವಶ್ಯಕತೆಯುಂಟಾದರೆ ಅದರ ನಿಮಿತ್ತವಾಗಿಕೂಡ ಸ್ತ್ರೀವಾರಸು ಅಸಲು ಆಸ್ತಿಯನ್ನು ಪರಾಧೀನಮಾಡಿ ವಿನಿಯೋಗಿಸಬಹುದು. ಸರ್ಕಾರ ಕಿಸ್ತುಬಾಕಿ ಯಾವದಾದರೂ ಡಿಕ್ರೀಕೆಳಗೆ ಸಲ್ಲಿಸತಕ್ಕ ದ್ರವ್ಯವು ಆಸ್ತಿವಿಷಯಕವಾಗಿ ತರಲ್ಪಟ್ಟ ದಾವೆಯಲ್ಲಿ ಪ್ರತಿವಾದಿಯಾಗಿದ್ದು ಅದನ್ನು ಕಾಪಾಡುವದರಿಂದ ತಗಲಿದ ಖರ್ಚುಗಳು ಇಂತಹವುಗಳು ಆವಶ್ಯಕವಾದ ವೆಚ್ಚಗಳೆಂದು ಎಣಿಸಲ್ಪಡುವವು. (೧೮೫೫ ಸಂ॥ ಬಂ ಸ ತೀ ೪೨೧; ೧೯ ಸ ೮೦; ೨ ಅ ಹೈ ೨೮; ಇ ಲಾ ರಿ ೧೧ ಬೊಂ ೬೮೯; ಇ ಲಾ ರಿ ೧೨ ಕ ೫೨; ಇ ಲಾ ರಿ ೪ ಅ ೮೪೨; ಇ ಲಾ ರಿ ೧೦ ಕ ೮೨೩) ತಪ್ಪಲಾಗದ ಅಗತ್ಯವಿತ್ತೋ ಇಲ್ಲವೋ ಎಂಬ ವಿಷಯವು ಆಯಾಸಂದರ್ಭಗಳನ್ನು ಹಿಡಿದು ತಿಳಿದುಕೊಳ್ಳಬೇಕಾಗಿದೆ. ಸರಕಾರ ಕಿಸ್ತುಬಾಕಿ ಮುಂತಾದುವು ಆವಶ್ಯಕಗಳು ಸ್ತ್ರೀವಾರಸಿನ ದುರ್ವ್ಯಯದಿಂದುಂಟಾಗಿದ್ದರೂ ಬಾಧಕವಿಲ್ಲವು. ಆಸ್ತಿಯನ್ನು ಹೊಂದಿದವನ ದುಷ್ಪ್ರವರ್ತನದಿಂದ ಅಲ್ಲದೆ, ಪ್ರೋತ್ಸಾಹದಿಂದ ಉಂಟಾಗಿರಕೂಡದು. (೬ ಮೂ ಇ ಅ ೪೨೩; ಇ ಲಾ. ರಿ ೬ ಕ ೮೪೩)

ಸ್ತ್ರೀವಾರಸಿನಿಂದ ವಿಕ್ರಯವು— ಮೇಲಣ ಪ್ಯಾರಾದಲ್ಲಿ ಹೇಳಲ್ಪಟ್ಟ ಆವಶ್ಯಕವಾದ ಕಾರ್ಯಗಳು ಸಂದರ್ಭಿಸಿದಾಗ ಅಸಲು ಆಸ್ತಿಯನ್ನು ವೆಚ್ಚಿಸದೆ ಸಾಲಮಾಡಿ, ಸದರಿ ಸಾಲವನ್ನು ತನ್ನ ವರಮಾನದಿಂದ ಕ್ರಮಕ್ರಮವಾಗಿ ತೀರಿಸುವದಕ್ಕಾದರೂ ಆಸ್ತಿಯಲ್ಲಿ ಯಾವಭಾಗವನ್ನಾದರೂ ವಿಕ್ರಯಿಸದೆ ಅಡವಿಟ್ಟು ಒಡವೆತಂದುಕೊಂಡು ಅದರಿಂದ ತನ್ನವರಮಾನವನ್ನು ತಗ್ಗಿಸಿಕೊಳ್ಳುವದಕ್ಕಾದರೂ ಸ್ತ್ರೀವಾರಸು ಬದ್ಧಳಲ್ಲವು. ಆಸ್ತಿಯಲ್ಲಿ ಕೊಂಚಭಾಗವನ್ನು ನಿರಭ್ಯಂತರವಾಗಿ ವಿಕ್ರಯಿಸಿ ಸದರಿ ಆವಶ್ಯಕವಾದ ಕಾರ್ಯಗಳನ್ನು ನಡೆಯಿಸಬಹುದು. ಸ್ತ್ರೀವಾರಸಿಗೆ ಯುಕ್ತವೆಂದು ತೋರಿದಂತೆ ಆಸ್ತಿಯನ್ನು ಅಡವಿಟ್ಟರೂ ಸರಿಯೇ ವಿಕ್ರಯಿಸಿದರೂ ಸರಿಯೆ ಸಲ್ಲುವುದು. ಸದರಿ ಸ್ತ್ರೀವಾರಸೂ ಆಕೆಯಿಂದ ಪರಾಧೀನ ಹೊಂದಿದವನೂ ಎಷ್ಟುಮಾತ್ರವಾದರೂ ದುರುದ್ದೇಶವಿಲ್ಲದೆ ಪ್ರವರ್ತಿಸಿದಪಕ್ಷದಲ್ಲಿ ವಿಕ್ರಯಕ್ಕಿಂತಲೂ ಅಡಮಾನವು ಲಾಭಕರವಾಗಿರಲಾಪುದೆಂಬ ಹೇತುವಿನಿಂದ ಅನಂತರ ವಾರಸರು ಆಕ್ಷೇಪಿಸುವುದಕ್ಕಾದರೂ ಒಡವೆ ಕೊಟ್ಟುಬಿಟ್ಟು ಕ್ರಯವನ್ನು ರದ್ದುಮಾಡುವದಕ್ಕಾದರೂ ಅವಕಾಶವಿಲ್ಲವು. (೯ ಸ ೨೮೪;

೩ ಕ ಹೈ ೩೭೫) ಆದರೆ ಅತ್ಯಲ್ಪಕ್ರಯಕ್ಕೆ ಅಧಿಕವಾದ ಆಸ್ತಿ ಅನ್ಯಾಯವಾಗಿ ವಿಕ್ರಯಿಸಲ್ಪಟ್ಟಪಕ್ಷದಲ್ಲಿ ಸ್ತ್ರೀವಾರಸು ಸತ್ತುಹೋದಮೇಲೆ ಅನಂತರ ವಾರಸುದಾರನು ಆಕ್ಷೇಪಿಸಬಹುದು. ಆಗ ಬಡ್ಡಿಯೊಡನೆ ಕ್ರಯಧನವನ್ನು ಸದರಿ ಅನಂತರ ವಾರಸುದಾರನಿಂದ ಕೊಡಿಸಿಬಿಟ್ಟು ಕೋರ್ಟಿನವರು ಕ್ರಯವನ್ನು ರದ್ದುಮಾಡಬಹುದು. (೯ ಸ ೧೮೯; ೧೧ ಕ ಹೈ ೪೧೬) ಎಷ್ಟೋ ಸ್ಪಷ್ಟವಾಗಿ ಅನ್ಯಾಯವು ಕಾಣಬಂದು, ವಿಕ್ರಯವನ್ನು ಹೊಂದಿದವನು ಸದರಿ ಅನ್ಯಾಯವನ್ನು ತಿಳಿದಿದ್ದವನೆಂದು ನಿಶ್ಚಯವಾಗಿ ಊಹಿಸುವದಕ್ಕೆ ಆಗದ ಸಂದರ್ಭಗಳಲ್ಲಿ ಈ ಪ್ರಕಾರವಾಗಿ ಕೋರ್ಟಿನವರು ನಡೆಯಿಸಲಾರರು. (೫ ಕ ಹೈ ೫೦೮; ೧೩ ಸ ೪೫೭) ಸ್ತ್ರೀವಾರಸಿಗೆ ಬಂದ ಆಸ್ತಿ ಅಡವಿಗೊಳಪಟ್ಟು ಇರುವಾಗ ಸದರಿ ಅಡಮಾನವನ್ನು ಬಿಡಿಸುವದಕ್ಕೆ ಸಾಕಾದಷ್ಟು ದ್ರವ್ಯವು ಆಕೆಯವಶದಲ್ಲಿದ್ದೂ ಅಸಲು ಆಸ್ತಿಯಲ್ಲಿ ಕೊಂಚಭಾಗವನ್ನು ಆಕೆ ವಿಕ್ರಯಿಸಿ ಅಡಮಾನವನ್ನು ಬಿಡಿಸಿದರೆ, ಆಕೆ ಸತ್ತುಹೋದಮೇಲೆ ಅನಂತರ ವಾರಸುದಾರನು ದಾವಾತಂದು ಸದರಿ ಕ್ರಯವನ್ನು ರದ್ದುಮಾಡಬಹುದು. ಆದರೆ ಕ್ರಯಧನವನ್ನು ಬಡ್ಡಿಯೊಡನೆಕೂಡ ಕೊಟ್ಟುಬಿಡುವದಕ್ಕೆ ಆತನು ಬದ್ಧನಾಗಿರುವನು (೧೪ ಕ ಹೈ ೨೨೬; ೩ ಲಾ ರಿ ೫ ಬೊಂ ೪೫೦)

ಸಾಲ ಕೊಡುವವನಿಗೆ ಸಂಬಂಧಿಸಿದ ವಿಷಯಗಳು— ಸಮಷ್ಟಿಕುಟುಂಬದ ಮೇನೇಜರಿಗೆ ಸಮಷ್ಟಿ ಸೊತ್ತುವಿಷಯಕವಾಗಿ ಎಂತಹ ಸ್ವಾತಂತ್ರ್ಯ ಇರುವದೋ ಅಂತಹ ಸ್ವಾತಂತ್ರ್ಯವೇ ಸ್ತ್ರೀವಾರಸಿಗೆ ಉಂಟೆಂದು ಹೇಳಬಹುದು. ಮತ್ತು ಮೇನೇಜರಿಗೆ ಸಾಲಕೊಟ್ಟು ಆಸ್ತಿಯನ್ನು ಸ್ವಾಧೀನಪಡಿಸಿಕೊಳ್ಳುವವನಿಗೆ ಯಾವ ಯಾವ ವಿಧಿಗಳು ಸಲ್ಲುವವೋ ಅವು ಸ್ತ್ರೀವಾರಸಿಗೆ ಸಾಲ ಕೊಡುವವನಿಗೂ ಸಲ್ಲುವವು, (೨ ಬೊಂ ಹೈ ೨೦೧; ೬ ಮೂ ಇ ಅ ೩೯೩; ೧೧ ಮೂ ಇ ಅ ೬೧೯.) ಆಸ್ತಿಯನ್ನು ತೆಗೆದುಕೊಂಡವನು ಪರಾಧೀನಕ್ಕೆ ತಕ್ಕ ಆವಶ್ಯಕತೆ ಇತ್ತೆಂದು ರುಜುವಾತು ಮಾಡುವದಕ್ಕೆ ಬದ್ಧನಾಗಿರುವನು. ಅವಶ್ಯಕವಿದ್ದಂತೆ ರುಜುವಾದಮೇಲೆ, ಸದರಿ ಪರಾಧೀನದಿಂದ ಹೊಂದಲ್ಪಟ್ಟ ದ್ರವ್ಯವನ್ನು ಸ್ತ್ರೀವಾರಸು ಕ್ರಮವಾಗಿ ವೆಚ್ಚಿಸಿದಳೆಂದು ರುಜುವಾತು ಮಾಡತಕ್ಕವಿಧಿಯಿಲ್ಲವು. (೬ ಮೂ ಇ ಅ ೪೯೩; ೮ ಮೂ ಇ ಅ ೫೨೯; ೫ ಕ ಹೈ ೫೦೮) ಮತ್ತು ತಕ್ಕಜಾಗರೂಕತೆಯಿಂದ ವಿಚಾರಿಸಿ, ನಿಶ್ಚಯವಾದ ಆವಶ್ಯಕತೆ ಆದ್ದಂತೆ ನಂಬಿ, ಎಂತಹ ದುರುದ್ದೇಶವೂ ಇಲ್ಲದೆ ಒಡವೆ ಕೊಟ್ಟು, ಆಸ್ತಿಯನ್ನು ಸ್ವಾಧೀನಪಡಿಸಿಕೊಂಡವನಿಗೆ ಸದರಿ ಆವಶ್ಯಕವಿಷಯವಾಗಿ ಹೇಳಲ್ಪಟ್ಟಸಂಗತಿಗಳು ಕಡೆಗೆ ಅಬದ್ಧವಾಗಿ ಏರ್ಪಟ್ಟರೂ ಬಾಧಕವಿಲ್ಲವು. (೬ ಮೂ ಇ ಅ ೩೯೩;

ಇ ಲಾ ರಿ ೬ ಕ ೮೯೩; (ಇ ಲಾ ರಿ ೨೧ ಕ ೧೮೮೦ ಸಂ॥ ೭ ನೇ॥ ಆಗಸ್ಟು ಸೆ ೮೩.) ಯಾವುದೋ ಅವಶ್ಯಕವಿರುವಂತೆ ದಸ್ತಾವೇಜಿನಲ್ಲಿ ಅರೆಯಲ್ಪಟ್ಟಷ್ಟು ಮಾತ್ರದಿಂದ ಸದರಿ ಅವಶ್ಯಕವು ನಿಜವಾಗಿ ಉಂಟಾಗಿತ್ತೆಂದಾದರೂ, ಅದರ ವಿಷಯವಾಗಿ ತಕ್ಕದರ್ಯಾಪ್ತಿ ಮಾಡಲ್ಪಟ್ಟಿತೆಂದಾದರೂ ಊಹಿಸಲ್ಪಡಲಾರದು. (೯ ಸಂ. ೨೮೫.)

ಅವಶ್ಯಕವಾದ ಕಾರ್ಯಗಳ ನಿಮಿತ್ತವಾಗಿ ಒಬ್ಬ ಸ್ತ್ರೀವಾರಸು ಸಾಲಗಳು ಮಾಡಿದಾಗ, ಸದರಿ ಸಾಲಗಳಿಗಾಗಿ ಆಸ್ತಿಯನ್ನು ಅಡವಿಡದೆ, ಆಕೆಪತ್ರವನ್ನು ಮಾತ್ರ ಬರೆದುಕೊಟ್ಟರೆ, ಅದರಿಂದ ಅನಂತರ ವಾರಸರು ಬದ್ಧರಾಗಲಾರರು-ಇಂತೆಂದು ಬೊಂಬಯಿ ಮದರಾಸು ಹೈಕೋರ್ಟುಗಳವರು ತೀರ್ಮಾನಿಸಿರುವರು. (ಇ ಲಾ ರಿ ೩ ಬೊಂ ೬೩೭; ಇ ಲಾ ರಿ ೭ ಮ ೩೭೫) ಅವಶ್ಯಕವಾದ ಕಾರ್ಯಗಳ ನಿಮಿತ್ತವಾಗಿ ಸಾಲಗಳು ಮಾಡಲ್ಪಟ್ಟಂತೆ ರುಜುವಾತು ಕಾಣಿಸಲ್ಪಟ್ಟರೆ, ಆಸ್ತಿ ಅಡಮಾನವಿಡದೆ ಹೋದರೂ ಸದರಿ ಸಾಲಗಳನ್ನು ತೀರಿಸುವುದಕ್ಕೆ ಅನಂತರ ವಾರಸರು ಬದ್ಧರಾಗಿರುವರೆಂದು ಕಲಕತ್ತಾ ಹೈಕೋರ್ಟಿನವರು ತೀರ್ಮಾನಮಾಡಿರುವರು. (ಇ ಲಾ ರಿ ೬ ಕ ೩೬.)

ಹಣ ಸಾಲಕೊಟ್ಟವನು ಸ್ತ್ರೀವಾರಸುಮೇಲೆ ತರುವದಾವೆಯಲ್ಲಿ ಹೊಂದಲ್ಪಡುವ ಡಿಕ್ರೀಯಿಂದ, ಅನಂತರ ವಾರಸರೂಕೂಡ ಬದ್ಧರಾಗಬೇಕೆಂದು ಅಪೇಕ್ಷಿಸಿದರೆ. ಸದರಿ ಹಣವು ಅವಶ್ಯಕ ಕಾರ್ಯಗಳ ನಿಮಿತ್ತವಾಗಿ ಕೊಡಲ್ಪಟ್ಟಿತೆಂದು ದಾವೆಯಲ್ಲಿ ಉದಾಹರಿಸಬೇಕು. ಅನಂತರ ವಾರಸರನ್ನು ಕೂಡ ಪ್ರತಿವಾದಿಗಳನ್ನಾಗಿ ಸೇರಿಸಬೇಕೆಂದು ಕೋರ್ಟಿನವರ ಅಭಿಪ್ರಾಯವಾಗಿ ತಿಳಿಯಬರುವುದು. (೧೧ ಮೂ ಇ ಅ ೨೬೭; ೧೫ ಕ ಹೈ ೧೬೦.) ಈ ಹೇಳಲ್ಪಟ್ಟ ಪ್ರಕಾರವು ದಾವೆಯಲ್ಲಿ ಉದಾಹರಿಸದೆ ಸ್ತ್ರೀವಾರಸುಮೇಲೆ ಒಂದು ಡಿಕ್ರೀಹೊಂದಲ್ಪಟ್ಟಾಗ ಆಕೆ ಯಾವಜ್ಜೀವದ ಅನುಭವವುಮಾತ್ರವೇ ಸದರಿ ಡಿಕ್ರೀಗೆ ಒಳಪಟ್ಟಿರುವುದು. (೧೧ ಮೂ ಇ ಅ ೨೪೧; ಇ ಲಾ ರಿ ೧ ಕ ೧೩೩; ೧೫ ಕ ಹೈ ೧೮೨; ೬ ಸ ೩೦೪; ಇ ಲಾ ರಿ ೧ ಮ ೩೫೮; ಇ ಲಾ ರಿ ೪ ಮ ೪೦೧; ಇ ಲಾ ರಿ ೧೬ ಕ ೫೧೧.)

ಸ್ತ್ರೀವಾರಸುಮಾಡುವ ಅನಾವಶ್ಯಕವಾದ ಪರಾಧೀನಗಳು.—ತಕ್ಕ ಅವಶ್ಯಕತೆಯಿಲ್ಲದಾಗ ಸ್ತ್ರೀವಾರಸು ಮಾಡತಕ್ಕ ಆಸ್ತಿಪರಾಧೀನಗಳು ಅನಂತರ ವಾರಸರನ್ನು ಬಾಧಿಸಲಾರವು ಆದರೆ, ಆಕೆಯ ಜೀವಿತಕಾಲದವರೆಗೂ ಅವು ಸಲ್ಲುವುದಕ್ಕೆ ಎಷ್ಟುಮಾತ್ರವೂ ಅಭ್ಯಂತರವಿಲ್ಲವು. (೧೮೫೬ ಸಂ॥ ಬಂಸ ತೀ ೫೯೬; ೧೯ ಸ ೭೦; ಕ ಹೈ ಸಪ್ಲಿಮೆಂಟ್ ವಾಲ್ಯೂಂ, ೮೮; ೧ ಮ ಹೈ ೬೨೬; ೨ ಮ ಹೈ ೩೯೩; ೩ ಮ ಹೈ ೧೧೬; ೬ ಬೊಂ ಹೈ ೨೨೦; ಇ

ಲಾ ರಿ ೧ ಬೊಂ ೫೭೭; ೩ ಲಾ ರಿ ೧ ಅ ೫೮೩; ೩ ಲಾ ರಿ ೮ ಕ ೨೦೪.) ಅನಂತರ ವಾರಸರು ಯಾರೂ ಇಲ್ಲದಿದ್ದರೂ, ಆಸ್ತಿಯನ್ನು ಅವಶ್ಯಕವಾಗಿ ಪರಾಧೀನ ಮಾಡುವಂತಹ ಸ್ವಾತಂತ್ರ್ಯವು ಸ್ತ್ರೀವಾರಸಿಗೆ ಉಂಟಾಗಲಾರದು. ಅಂತಹ ಸಂದರ್ಭದಲ್ಲಿ ಸರ್ಕಾರದವರು ಹಕ್ಕುದಾರರಾಗುವರಾದುದರಿಂದ, ಸದರಿ ಪರಾಧೀನಗಳನ್ನು ಅವರು ಅಪೇಕ್ಷಿಸಬಹುದು. (೮ ಮೂ. ೩. ಅ ೫೨೯.)

ಸ್ತ್ರೀವಾರಸು ತನ್ನ ಹಕ್ಕುಗಳನ್ನು ಬಿಟ್ಟುಕೊಳ್ಳುವಿಕೆ.—ಸ್ತ್ರೀವಾರಸಿಗೆ ಬಂದಿರುವ ಆಸ್ತಿವಿಷಯವಾದ ಯಾವತ್ತು ಹಕ್ಕುಗಳನ್ನು, ಆಕೆ ಇಚ್ಛೆ ಬಂದಾಗ ಬಿಟ್ಟುಕೊಂಡು ತತ್ಕಾಲದಲ್ಲಿ ಅನಂತರ ವಾರಸರಾಗಿರುವವರಿಗೆ ಆಸ್ತಿಯನ್ನು ಕೊಟ್ಟುಬಿಡಬಹುದು. ಹೀಗೆ ಮಾಡುವುದರಿಂದ ಕೆಲವರಿಗೆ ನಷ್ಟವುಂಟಾದರೂ ಆಕ್ಷೇಪವಿಲ್ಲವು. (೪ ಸ ೫೦೦ ಆದರೆ, ೬ ಅ ೧೧೬, ೭೮೮.) ಉದಾಹರಣವು.—

ಗಂಡನಿಗೆ ವಾರಸಾಗಿ ಏರ್ಪಟ್ಟು ಆತನ ಆಸ್ತಿಯನ್ನು ಅನುಭವಿಸುತ್ತಿದ್ದ ವಿತಂತು, ತತ್ಕಾಲದಲ್ಲಿ ಅನಂತರ ವಾರಸಾಗಿದ್ದ ದೌಹಿತ್ರನಿಗೆ ಯಾವದಾಸ್ತಿಯನ್ನೂ ಕೊಟ್ಟುಬಿಟ್ಟನು. ಆಮೇಲೆ ಕೆಲವುಕಾಲಕ್ಕೆ ಸದರಿ ವಿಧವೆ ಜೀವಿಸಿರುವಾಗಲೆ ದೌಹಿತ್ರ ಸತ್ತನು. ವಿಧವೆ ಸತ್ತುಹೋಗುವಾಗ ಆಕೆಯ ಮೈದುನನು ಸಮೀಪ ವಾರಸನಾಗಿದ್ದನು. ಈ ಸಂದರ್ಭದಲ್ಲಿ, ವಿತಂತು ತನ್ನ ಹಕ್ಕನ್ನು ಬಿಟ್ಟುಕೊಳ್ಳದೆಯೇ ಇದ್ದಪಕ್ಷದಲ್ಲಿ, ಮೈದುನನಿಗೆ ಆಸ್ತಿ ಬಂದಿರುವುದೆಂಬದು ನಿಶ್ಚಯವು. ಆದರೆ, ಆಕೆ ಯಾವಾಗ ತನ್ನ ಹಕ್ಕುಗಳನ್ನು ಬಿಟ್ಟುಕೊಂಡಳೋ, ಆಗಲೇ ದೌಹಿತ್ರನು ಸಂಪೂರ್ಣ ಸ್ವಾತಂತ್ರ್ಯವುಳ್ಳ ವಾರಸುದಾರನಾಗಿ ಏರ್ಪಟ್ಟುದರಿಂದ, ಆತನನಂತರದಲ್ಲಿ ಸದರಿ ಆಸ್ತಿ ಆತನ ಕುಮಾರರು ವಗೈರಾ ವಾರಸರಿಗೇ ಸಲ್ಲುವುದು.

ತತ್ಕಾಲದಲ್ಲಿ ಅನಂತರ ವಾರಸರಾಗಿರುವರು, ವೃದ್ಧರಾಗಿ ಅಲ್ಲದೆ ವ್ಯಾಧಿಗ್ರಸ್ತರಾಗಿ ಮರಣಾಸನ್ನವಾದವರಾಗಿರುವಾಗ, ಮೇಲೆ ಹೇಳಿದ ಮೇರೆ ಸ್ತ್ರೀವಾರಸು ತನ್ನ ಹಕ್ಕುಗಳನ್ನು ಬಿಟ್ಟುಕೊಂಡು, ಅವರಿಗೂ ಅವರ ವಾರಸರಿಗೂ ಆಸ್ತಿ ಸಲ್ಲುವಂತೆ ಮಾಡಬಹುದು.

ಅನಂತರ ವಾರಸರ ಸಮ್ಮತಿಯೊಡನೆ ಮಾಡಿದ ಪರಾಧೀನಗಳು.—ಸ್ತ್ರೀವಾರಸರು ನಡೆಯಿಸುವ ಆಸ್ತಿ ಪರಾಧೀನಗಳು ಅನಂತರ ವಾರಸರ ಸಮ್ಮತಿಯೊಡನೆ ನಡೆಯಿಸಲ್ಪಟ್ಟ ಪಕ್ಷದಲ್ಲಿ ಅವು ಅತ್ಯಾವಶ್ಯಕವಾಗಿದ್ದರೂ ಇಲ್ಲದಿದ್ದರೂ ಸರಿಯೆ ಸಲ್ಲುವುವು. (೯ ಸ ೩೫೦; ೩ ಲಾ ರಿ ೫ ಕ ೪೯.) ಅನಂತರ ವಾರಸರು ದಸ್ತಾವೇಜಿನಲ್ಲಿ ಕೈಬರಹಮಾಡುವುದು ಆವಶ್ಯಕವಲ್ಲವು,

ಆದರೆ ಕೈಬರಹ ಮಾಡಿದಪಕ್ಷದಲ್ಲಿ ಅವರು ಸಮ್ಮತಿಸಿದಂತೆ ರುಜುಮಾತು ಮಾಡುವುದಕ್ಕೆ ಅನುಕೂಲವಾಗಿರುವುದು. (೧೮೫೬ ಸಂ॥ ಬಂ ಸ ತೀ ೫೯೬; ೨೪ ಸ ೧೨೭.) ಅನಂತರ ವಾರಸು ಅಸಂಪೂರ್ಣ ಸ್ವಾತಂತ್ರ್ಯವುಳ್ಳ ಸ್ತ್ರೀವಾರಸಾಗಿದ್ದಪಕ್ಷದಲ್ಲಿ, ಆಕೆಯು ಸಮ್ಮತಿಯಿಂದ, ಆಕೆಯನಂತರ ಬರುವ ವಾರಸುದಾರನು ಬದ್ಧನಾಗಲಾರನು. (೧೪ ಮೂ ಇ ಅ ೧೬೯; ಇ ಲಾ ರಿ ೧೧ ಅ ೨೫೩.)

ಯಾರು ಸಮ್ಮತಿಸಬೇಕು—ಅನಂತರ ವಾರಸರ ಸಮ್ಮತಿಯೆಂದಾಗ-ತತ್ಕಾಲದಲ್ಲಿ ಸನ್ನಿಹಿತನಾಗಿರುವ ಅನಂತರ ವಾರಸನ ಸಮ್ಮತಿಸಾಕೇ-ಅಲ್ಲದೆ, ಸ್ತ್ರೀವಾರಸು ಸತ್ತುಹೋದಾಗ ಯಾರು ಬದುಕಿರುವರೋ ಅವರಲ್ಲಿ ಯಾರು ಸಮೀಪ ವಾರಸರಾಗಿರುವರೋ ತಿಳಿಯದುದರಿಂದ, ಎಲ್ಲಾ ಅನಂತರವಾರಸರೂ ಸಮ್ಮತಿಸಬೇಕೇ?-ಈ ವಿಷಯವಾಗಿ ಕೊಂಚಮಟ್ಟಿಗೆ ಸಿಕ್ಕಾಗಿದೆ. ಅನಂತರ ವಾರಸರಲ್ಲಿ ಸಮೀಪನಾಗಿರುವವನು ಪರಾಧೀನಕ್ಕೆ ಸಮ್ಮತಿಸಿದ್ದು ಆತನು ಸ್ತ್ರೀವಾರಸಿನ ಜೀವಿತಕಾಲದಲ್ಲಿಯೇ ಸತ್ತುಹೋದಪಕ್ಷದಲ್ಲಿ, ಆತನ ಸಮ್ಮತಿಯಿಂದ, ಮಿಕ್ಕ ಅನಂತರ ವಾರಸರು ಬದ್ಧರಾದರೂ ಆಗದಿದ್ದರೂ, ಆತನ ಕುಮಾರರು ಮುಂತಾದ ವಾರಸರು ಬದ್ಧರಾಗಿರುವರು. (೧೮೫೬ ಸಂ॥ ಬಂ ಸತೀ ೬೦೪ ; ಇ ಲಾ ರಿ ೫ ಕ ೪೪.)

ಸ್ತ್ರೀವಾರಸು ಸತ್ತುಹೋದಕಾಲದಲ್ಲಿ ಯಾರುಯಾರು ವಾರಸರಾಗಿ ಇರತಕ್ಕವರಾಗಿರುವರೋ ಅಂತಹವರೆಲ್ಲರೂ ಸಮ್ಮತಿಸುವುದು ಆವಶ್ಯಕವೆಂದೂ ಅನಂತರ ವಾರಸರಲ್ಲಿ ತತ್ಕಾಲದಲ್ಲಿ ಸಮೀಪನಾಗಿರುವವನು ಒಬ್ಬನುಮಾತ್ರವೇ ಸಮ್ಮತಿಸಿದರೆ ಸಾಲದೆಂದೂ ಬೊಂಬಯಿ ಹೈಕೋರ್ಟಿನವರ ಅಲಹಾಬಾದು ಹೈಕೋರ್ಟಿನವರ ಅಭಿಪ್ರಾಯವಾಗಿದೆ. ಒಂದು ಬೊಂಬಯಿ ಕೇಸಿನಲ್ಲಿ ಗಂಡನಾಸ್ತಿ ವಿಧವೆಯ ಅನುಭವದಲ್ಲಿತ್ತು. ಆಕೆಯಮಗಳೂ ಆಕೆಯ ಗಂಡನ ದೂರದ ಜ್ಞಾತಿಯೊಬ್ಬನೂ ಅನಂತರ ವಾರಸರಾಗಿದ್ದರು. ಬೊಂಬಯಿ ದೇಶದ ಪದ್ಧತಿಗಳ ಪ್ರಕಾರವಾಗಿ ಸಂಪೂರ್ಣ ಸ್ವಾತಂತ್ರ್ಯವಿರುವ ವಾರಸಳಾದ ಸದರಿ ಮಗಳ ಸಮ್ಮತಿಯಿಂದ ವಿಧವೆ ಆಸ್ತಿಯನ್ನು ಪರಾಧೀನ ಮಾಡಿದಳು. ಆಮೇಲೆ ಮೊದಲು ಮಗಳುಸತ್ತು, ಆಮೇಲೆ ವಿಧವೆ ಸತ್ತಳು. ಸದರಿ ಪರಾಧೀನವು ದೂರಜ್ಞಾತಿಯನ್ನು ಬಾಧಿಸದೆಂದು ತೀರ್ಮಾನಮಾಡಿ ಆಸ್ತಿಯನ್ನು ಆತನಿಗೆ ಕೊಡಿಸಿದರು. (ಇ ಲಾ ರಿ ೫ ಬೊಂ ೫೬೩ ; ೧೩ ಮೂ ಇ ಅ ೨೨೮; ಇ ಲಾ ರಿ ೩ ಅ ೩೬೦ ; ಇ ಲಾ ರಿ ೬ ಅ ೧೧೬, ೨೨೮; ಇ ಲಾ ರಿ ೧೦ ಅ ೪೦೭.)

ಕೆಲವು ಕಾಲದವರೆಗೆ ಕಲಕತ್ತಾ ಹೈಕೋರ್ಟಿನವರುಕೂಡ ಬೊಂಬಯಿ ಹೈಕೋರ್ಟಿನವರಂತೆಯೇ ಅಭಿಪ್ರಾಯ ವುಳ್ಳವರಾಗಿದ್ದರು. (ಇ ಲಾ ರಿ

೯ ಕ ೪೬೩; ಇ ಲಾ ರಿ ೧೦ ಕ ೨೦೫.) ಆದರೆ, ಈಚೀಚಗೆ ಪರಾಧೀನ ಕಾಲದಲ್ಲಿ ಸಮಿಾಪ ವಾರಸಾಗಿರುವಂತಹ ಅನಂತರ ವಾರಸೊಬ್ಬನ ಸಮ್ಮತಿಯೇ ಸಾಕೆಂದೂ, ಆತನು ಸ್ತ್ರೀವಾರಸಿನ ಜೀವಿತಕಾಲದಲ್ಲಿಯೇ ಸತ್ತುಹೋದರೂ ಪರಾಧೀನವು ರದ್ದಾಗಲಾರದೆಂದೂ, ಫುಲ್‌ಬೆಂಚ್ ತೀರ್ಮಾನವು ಕೊಡಲ್ಪಟ್ಟಿತು. (ಇ ಲಾ ರಿ ೧೦ ಕ ೧೧೦೨.) ಪರಾಧೀನಕಾಲದಲ್ಲಿ, ಒಂದೇ ತರಗತಿಗೆ ಸೇರಿದ ಸಮಿಾಪ ವಾರಸರು ಅನೇಕರಿದ್ದಪಕ್ಷದಲ್ಲಿ, ಎಂದ್ದರೆ, ದೌಹಿತ್ರರು, ಅಣ್ಣತಮ್ಮಂದಿರು, ಮುಂತಾದವರು ಇಬ್ಬರು ಮೂರುಮಂದಿ ಇದ್ದರೆ-ಅವರೆಲ್ಲರ ಸಮ್ಮತಿಯೂ ಆವಶ್ಯಕವೆಂದು ತೀರ್ಮಾನಿಸಲ್ಪಟ್ಟಿದೆ. (ಇ ಲಾ ರಿ ೧೭ ಕ ೮೯೬.)

ಅನಂತರ ವಾರಸಿನಿಂದ ದಾವೆಗಳು.—ತಕ್ಕ ಆವಶ್ಯಕತೆಯಿಲ್ಲದ ಸಂದರ್ಭಗಳಲ್ಲಿ ಸ್ತ್ರೀವಾರಸು, ದಾನವಿಕ್ರಯಾದಿ ಮಾರ್ಗಗಳಲ್ಲಿ ಆಸ್ತಿಯನ್ನು ಪರಾಧೀನ ಮಾಡಿದರೆ, ಸದರಿ ಪರಾಧೀನವು ನಡೆದ ೧೨ ಸಂವತ್ಸರಗಳೊಳಗಾಗಿ ಅನಂತರವಾರಸುದಾರನು ದಾವಾತಂದ ಅದು ಸದರಿ ಸ್ತ್ರೀವಾರಸು ಬದುಕಿರುವವರೆಗೇ ಸಲ್ಲುವುದೆಂದೂ, ಅನಂತರ ವಾರಸುದಾರರನ್ನು ಬಾಧಿಸಲಾರದೆಂದೂ ತಿರ್ಮಾನವನ್ನು ಪಡೆಯಬಹುದು. (೧೮೭೭ ಸಂ॥ ೧೫ ನಂ॥ ಕಮಿಟೀಷ ಆಕ್ಟು ೨ನೆಯ ಷೆಡ್ಯೂಲು, ಆರ್ಟಿಕಲ್ ೧೨೫, ೧೪೧; ಇ ಲಾ. ರಿ ಲ ಕ ೪೪೦; ಇ ಲಾ ರಿ ೯ ಕ ೯೩೪ ೧೮೭೭ ಸಂ॥ ಸ್ಪೆಸಿಫಿಕ್ ರಿಲೀಫ್‌ಆಕ್ಟು ಸೆ ೪೨ ಇ ಯಫ್ ಇ ಲಾ ರಿ ಲ ಅ ೭೦; ಇ ಲಾ ರಿ ೫ ಕ ೯೪೯; ಇ ಲಾ ರಿ ೧೦ ಮ ೯೦.) ಈ ಹೇಳಲ್ಪಟ್ಟ ಪ್ರಕಾರವಾಗಿ ದಾವಾ ತೆಗೆದುಕೊಂಡುಬಾರದೆ ಉಪೇಕ್ಷಿಸಿದರೆ, ಸದರಿ ಸ್ತ್ರೀವಾರಸು ಸತ್ತುಹೋಗಿ ಅನಂತರ ವಾರಸುದಾರನಿಗೆ ಹಕ್ಕುಂಟಾದಮೇಲೆ ೧೨ ಸಂ॥ ಗಳೊಳಗಾಗಿ ಆತನು ದಾವಾತಂದು ಪರಾಧೀನಮಾಡಲ್ಪಟ್ಟ ಆಸ್ತಿಯನ್ನು ಸ್ವಾಧೀನಮಾಡಿಕೊಳ್ಳಬಹುದು. ಆದರೆ ಆಲಸ್ಯಮಾಡುವುದರಿಂದ ರುಜುವಾತು ಮೊದಲಾದವುಗಳು ನಾಶವಾಗಬಹುದು. ಆದುದರಿಂದ ಸ್ತ್ರೀವಾರಸು ಬದುಕಿರುವಾಗಲೇ ದಾವಾತಂದು ತೀರ್ಮಾನಹೊಂದುವುದು ಅನೇಕ ಸಂದರ್ಭಗಳಲ್ಲಿ ಉತ್ತಮವಾಗಿರುವುದು. (ಕ ಹೈ ನಪ್ಲಿ॥ ವಾ॥ ೪ಲ; ೩ ಸ ೧ಲ೩; ೪ ಕ ಹೈ ೧; ೧೪ ಕ ವೈ ೨೨೬; ಇ ಲಾ ರಿ ೭ ಅ ೧೬೩; ಇ ಲಾ ರಿ ಲ ಅ ೩೬೫, ೬೪೬.)

ಸ್ತ್ರೀವಾರಸು ಜೀವಿಸಿರುವಾಗ ಅನಂತರ ವಾರಸುದಾರನು ದಾವಾತಂದು, ಆಕೆಯನಂತರದಲ್ಲಿ ಸದರಿ ಆಸ್ತಿ ತನಗೇ ಸೇರಬೇಕೆಂದು ತೀರ್ಮಾನ ಹೊಂದುವುದಕ್ಕೆ ಅವಕಾಶವಿಲ್ಲವು. ಏಕೆಂದರೆ ಆಕೆ ಸತ್ತುಹೋದಕಾಲದಲ್ಲಿ ಬದುಕಿದ್ದ ಪಕ್ಷದಲ್ಲಿಯೇ ಈತನು ವಾರಸುದಾರನಾಗುವನು. (೧೫ ಕ ಹೈ ಲ೩; ಇ ಲಾ ರಿ ಲ ಕ ೧೨.)

ಅನಂತರ ವಾರಸುಗಳಿಗೆ ಅಧಿಕವಾದ ನಷ್ಟವುಂಟಾಗುವಂತಹ ರೀತಿಯಲ್ಲಿ, ಸ್ತ್ರೀವಾರಸು ತನ್ನ ಆಸ್ತಿಯನ್ನು ಅನುಭವಿಸುತ್ತಿದ್ದರೆ, ತತ್ಕಾಲದ ಅನಂತರ ವಾರಸುದಾರನು ದಾವಾತಂದು ಹಾಗೆ ನಡೆಯಿಸದೆಯಿರುವಂತೆ ಕೋರ್ಟಿನವರ ಮೂಲಕವಾಗಿ ಆಕೆಗೆ ಇಂಜಂಗ್ಷನ್ ಕೊಡಿಸಬಹುದು. (೬ ಮೂ ಇ ಅ ೪೩೩; ೧ ಸ ೧೨೫; ೪ ಕ ಹೈ ೧.) ಆಸ್ತಿಯನು ಸಂಪೂರ್ಣವಾಗಿ ನಾಶಮಾಡುವಂತಹ ಸಂದರ್ಭದಲ್ಲಿ, ಅದನ್ನು ಆಕೆಯ ಸ್ವಾಧೀನದೊಳಗಿನಿಂದ ತಪ್ಪಿಸಿ ರಿಸೀವರನ್ನು ಏರ್ಪಡಿಸುವಂತೆ ಬಯಸಬಹುದು. (೧೮೫೪ ಸಂ॥ ಬಂ ಸ ತೀ ೩೫೧; ೧೮೫೮ ಸಂ॥ ಬಂ ಸತೀ ೧೧೦೩; ೧೪ ಮೂ ಇ ಅ ೧೯೮; ೧೦ ಕ ಹೈ ೧; ೨ ಅ ಹೈ ೭೨೪.) ರಿಸೀವರು ಏರ್ಪಡಿಸಲ್ಪಟ್ಟಾಗ, ಆಸ್ತಿಯ ವರಮಾನವೆಲ್ಲವೂ ಸ್ತ್ರೀವಾರಸಿಗೇ ಆಕೆ ಯಾವಜ್ಜೀವವೂ ಕೊಡಿಸಲ್ಪಡುವುದು. (೧೮೮೪ ಸಂ॥ ಬಂ ಸತೀ ೩೫೧; ೧೮೫೯ ಸಂ॥ ಬಂ ಸ ತೀ ೨೧೦, ೪೩೬, ೯೪೭; ೧ ಕ ಹೈ ೨೭; ೨೪ ಸ ೨೬ ಆದರೆ, ೩ ಕ ಹೈ ೩೬೨; ೨ ಸ ೭೪೪೪. ಆಸ್ತಿಯನ್ನು ಚೆನ್ನಾಗಿ ಮೇನೇಜುಮೆಂಟು ಮಾಡುವುದಕ್ಕೆ ಅನಂತರ ವಾರಸೇ ತಕ್ಕವನಾಗಿ ಏರ್ಪಟ್ಟಾಗ, ಆತನೇ ರಿಸೀವರಾಗಿ ನಿಯಮಿಸಲ್ಪಡಬಹುದು. (೧೮೫೯ ಸಂ॥ ಬಂ ಸ ತೀ ೩೧೦)

ಸ್ತ್ರೀವಾರಸಿಂದ ಆಸ್ತಿಯನ್ನುಹೊಂದಿ, ಯಾರಾದರೂ ಅಕ್ರಮವಾದ ವಿಧದಲ್ಲಿ ಅನುಭವಿಸುತ್ತ ಅದನ್ನು ನಾಶಮಾಡುತ್ತಿದ್ದರೆ, ಅವರಮೇಲೆಕೂಡ ಅನಂತರವಾರಸುದಾರನು ದಾವಾತೆಗೆದುಕೊಂಡು ಬರಬಹುದು. (ಕ ಹೈ ಸಪ್ಲಿ॥ ವಾ॥ ೪೮; ೩ ಮ ಹೈ ೧೧೯.

ಯಾರು ದಾವಾತರಬಹುದು. —ತತ್ಕಾಲದಲ್ಲಿ ಅನಂತರ ವಾರಸಾಗಿರುವವನುಮಾತ್ರವೇ ಮೇಲಣ ಪ್ಯಾರಾದಲ್ಲಿ ಹೇಳಲ್ಪಟ್ಟದಾವಾಗಳನ್ನುತರಬಹುದಲ್ಲದೆ, ದೂರದ ವಾರಸರಾದರೂ, ಅನಂತರ ವಾರಸಿನ ಸಮ್ಮತಿಹೊಂದಿ ಮತ್ತೆ ಯಾರಾದರೂ, ತೆಗೆದುಕೊಂಡು ಬರಕೂಡದು. (೯ ಸ ೭೬೩; ೨ ಅ ಹೈ ೩೧; ೧೮೫೯ ಸಂ॥ ಬಂ ಸ ತೀ ೬೨೦; ೯ ಸ ೭೬೩; ೧೦ ಸ ೩೦೧; ಇ ಲಾ ರಿ ೪ ಅ ೧೬; ಇ ಲಾ ರಿ ೬ ಅ ೪೨೮; ೧೩ ಮೂ ಇ ಅ ೨೦೯ ೨೦೪; ೧೭ ಮೂ ಇ ಅ ೧೭೬; ಇ ಲಾ ರಿ ೧ ಕ ೨೮೯; ಇ ಲಾ ರಿ ೫ ಅ ೫೩೨.)

ಅನಂತರ ವಾರಸು ಸಂಪೂರ್ಣ ಸ್ವಾತಂತ್ರ್ಯವಿಲ್ಲದ ಸ್ತ್ರೀಯಾಗಿದ್ದರೆ, ಆಕೆಯನಂತರ ವಾರಸುದಾರನು ಮೇಲೆಹೇಳಿದ ದಾವಾಗಳನ್ನು ತರಬಹುದು. (೧೪ ಮೂ ಇ ಅ ೧೭೬: ಇ ಲಾ ರಿ ೧೩ ಮ ೧೯೫.) ಮತ್ತು ಅನಂತರ ವಾರಸುದಾರನು ಸ್ತ್ರೀವಾರಸಿನೊಡನೆ ಷಿಕ್ಮಿಯಾಗಿಸೇರಿ ಪರಾಧೀನ ನಡೆಯಿಸಿದಾಗಲೂ ಹಾಗೆ ಷಿಕ್ಮಿಯಾಗಿಸೇರಿ ದಾವಾತಾರದೆ ಉಪೇಕ್ಷೆಮಾಡಿದಾಗಲೂ, ಆತನಿಗೆ ಮೇಲಣ ಅನಂತರ ವಾರಸುದಾರನು ದಾವಾ ತರಬಹುದು. (೧೮೫೯

ಸಂ॥ ಬಂ ಸ ತೀ ೮೯೧; ೨೪ ಸ ೮೬, ೩೯೯; ೧೪ ಮೂ ಇ ಅ ೧೩೬; ಇ
ಲಾ ರಿ ೬ ಅ ೪೩೧; ಇ ಲಾ ರಿ ೨ ಅ ೪೧; ಇ ಲಾ ರಿ ೯ ಅ ೪೪೧; ಇ ಲಾ
೧೧ ಮು ೧೦೬.)

ಲಿಂಗಾಯಿತರ ಪದ್ಧತಿ—ಇಟ್ಟುಕೊಂಡವಳ ಅಂಥ ಮಗನು ಲಿಂಗಾ ಯಿತನಾಗಿದ್ದರೆ, ಅವನ ಜನಕತಂದೆ ಮೊದಲಾದವರ ಆಸ್ತಿಗೆ ಅವನು ಹಕ್ಕು ದಾರನಾಗುವ ಪದ್ಧತಿಯು, ವಿವಾದದ ಕಕ್ಷಿಗಾರರ ಹತ್ತಿರದ ಬಂಧುಗಳಲ್ಲಿ ಪೂರ್ವಾಚಾರವಾಗಿ ಬಂದಿದ್ದರೆ, ಅವನಿಗೆ ಅಂಥ ಹಕ್ಕು ಸಲ್ಲುವುದು; ಇಲ್ಲ ದಿದ್ದರೆ ಸಲ್ಲುವುದಿಲ್ಲ. ವ್ಯ॥ ನಿ॥ ೬೮-೧೬.

ನಾಯಿಕಸಾನಿಯರು ಅಥವಾ ವ್ಯಭಿಚಾರಿಣಿಯರು—ಮೃತಳಾದ ನಾಯಿ ಕಸಾನಿಯ ಆಸ್ತಿಯಮೇಲೆ ನಾಯಿಕಸಾನಿಯ ಕಸಬಿನಲ್ಲಿರುವ ಅವಳ ಮಗ ಳಿಗೆ ಹಕ್ಕು ಬರುತ್ತದೆ. ಮಗಳು ಇಲ್ಲದೆ ಇದ್ದಲ್ಲಿ, ಮೃತಳ ಮಗನಿ ಹಕ್ಕು ಸಲ್ಲುತ್ತದೆ.

ನಾಯಿಕಸಾನಿಯರ ವಿಷಯದಲ್ಲಿ ಕೆಳಗೆ ವಿವರಿಸುವ—ಹೈಕೋರ್ಟು ತೀರ್ಮಾನಗಳು ಹುಟ್ಟಿವೆ.

ನಾಯಿಕಸಾನಿಯರ ವೃತ್ತಿಯು ಹಿಂದೂ ಲಾದಿಂದ ಅಂಗೀಕರಿಸಲ್ಪ ಟ್ಟಿದೆ. ಮತ್ತು ಹಿಂದೂ ಧರ್ಮಕ್ಕನುಸಾರವಾದುದು. ೧೧ ಮ ಹೈ ೫೬. ದೇವರ ಗುಡಿಯಲ್ಲಿ ಒಟ್ಟಾಗಿ ದೇವದಾಸಿಯ ಕೆಲಸವನ್ನು ಮಾಡು ತ್ತಿದ್ದ ಅಕ್ಕತಂಗಿಯರಪೈಕಿ ಒಬ್ಬಳು ಮೃತಪಟ್ಟರೆ, ಅವಳ ಭಾಗದ ದೇವ ದಾಸಿಯ ಹಕ್ಕು ಅವಳ ಮಗಳಿಗೆ ಬರುತ್ತದೆಯೇ ಹೊರತು ಕೂಡ ಇದ್ದ ಅವಳ ಸಹೋದರಿಗೆ ಬರುವುದಿಲ್ಲ. ೫ ಮ ಹೈ ರಿ ೧೬೧. ನಾಯಿಕಸಾನಿ ಯರು ವ್ಯಭಿಚಾರದಿಂದ ಜೀವಿಸತಕ್ಕವರಾಗಿದ್ದರೂ, ದೇವದಾಸಿಯ ಹಕ್ಕಿನ ವಿಷಯದಲ್ಲಿ ಅವರು ತರುವ ದಾವಾವು ಕೋರ್ಟಿನಿಂದ ಹಿಡಿಯಲ್ಪಡತಕ್ಕ ದಾಗಿದೆ. ೧ ಮ ೩೫೬. ಮೈಸೂರು ದೇಶದಲ್ಲಿ ಈಚೆಗೆ ಕೆಲವು ಹಕ್ಕುಗಳ ಅಗೌರವವಾದದ್ದೆಂದು ಎಣಿಸಿರುವರು.

ವ್ಯಭಿಚಾರ, ನಾಟ್ಯ, ಸಂಗೀತ ಇವುಗಳಿಂದ ಇಬ್ಬರು ನಾಯಿಕಸಾನಿ ಯರು ಒಟ್ಟಿಗೆ ಸಂಪಾದಿಸಿದ ಆಸ್ತಿಯನ್ನು ಹಿಸ್ಸೇಮಾಡಿಕೊಳ್ಳಲು ಹಕ್ಕುದಾ ರರಾಗಿರುವರು. ೪ ಮ ೩೩೦.

ನಾಯಿಕಸಾನಿಯರಿಗೆ ಸಂಬಂಧಪಟ್ಟ ವ್ಯಾಜ್ಯಗಳಲ್ಲಿ ನಾಯಿಕಸಾನಿಯ ರಲ್ಲಿ ವಾಡಿಕೆಯಾಗಿರುವ ಅವರ ಪೂರ್ವಾಚಾರವನ್ನೇ ಅನ್ವಯಿಸಬೇಕು. ನಾ ಯಿಕಸಾನಿಯರು ಅನೇಕರಾದ ಹೆಣ್ಣುಮಕ್ಕಳನ್ನು ದತ್ತುಸ್ವೀಕಾರವನ್ನು ಮಾ ಡಿಕೊಳ್ಳಬಹುದು. ೧೨ ಮ ೨೧೪.

ಮೃತಳಾದ ತನ್ನ ದತ್ತೂತಾಯಿಯ ಸ್ವತ್ತು ತನಗೆ ಸೇರಬೇಕೆಂ ಒಬ್ಬ ನಾಯಿಕಸಾನಿಯು ದಾವಾ ತಂದಳು. ಅವಳು ಮೈನರಾಗಿರುವಾ

ವ್ಯಭಿಚಾರಕ್ಕಾಗಿ ಅವಳನ್ನು ಅವಳ ದತ್ತೂ ತಾಯಿಯು ದತ್ತೂ ತೆಗೆದುಕೊಂಡಳೆಂಬ ಕಾರಣದಮೇಲೆ ಅವಳ ದಾವಾವು ಡಿಸ್‌ಮಿಸ್ ಮಾಡಲ್ಪಟ್ಟಿತು. ೨೧ ಮ ೨೨೯ ಳ ಬೊಂ ೫೮೫.

ನಾಯಿಕಸಾನಿ ಕುಲದವರ ವಾರಸುಹಕ್ಕು—ನಾಯಿಕಸಾನಿಯರ ಆಸ್ತಿ ವಿಷಯದಲ್ಲಿ ಮದ್ರಾಸ್ ಹೈಕೋರ್ಟಿನಲ್ಲಿ ಈ ಕೆಳಗೆ ಕಂಡಂತೆ ತೀರ್ಮಾನವಾಯಿತು.

ದ್ರವ್ಯವಂತಳಾದ ಒಬ್ಬ ನಾಯಿಕಸಾನಿಯು ಮೃತಿಹೊಂದಿದಳು. ಅವಳಚರಸ್ಥಿರ ಸ್ವತ್ತುಗಳೆಲ್ಲವೂ ನಾಯಿಕಸಾನಿಯ ಕುಲದಲ್ಲೇ ಇರುವ ಅವಳ ಸಹೋದರಿಯ ಮಗಳಿಗೆ ಸಲ್ಲತಕ್ಕುದೇ ಹೊರತು ಹುಟ್ಟಿದ ಕುಲದಲ್ಲಿಯೇ ಇರುವ ಅವಳ ಸಹೋದರನಿಗೆ ಸಲ್ಲತಕ್ಕದಲ್ಲವೆಂದು ಫೈಸಲಾಯಿತು. ೧೩ ಮ ೧೩೩.

ಹತ್ತರದಬಂಧುಗಳು ಜ್ಞಾತಿಗಳಲ್ಲಿ ಹ್ಯಾಗೆಯೊಹಾಗೆಯೆ ಇವರಲ್ಲಿಯೂ ಹತ್ತರದ ವರಸೆಯ ಬಂಧುಗಳಿರುವಾಗ, ದೂರದ ವರಸೆಯವರಿಗೇನೂ ಆಸ್ತಿಯ ಹಕ್ಕಿರುವದಿಲ್ಲ. ಒಂದೇವಿಧವಾದ ಸಂಬಂಧದವರು ಅನೇಕರಿದ್ದಪಕ್ಷದಲ್ಲಿ, ಅವರೆಲ್ಲರೂ, ಆಸ್ತಿಯನ್ನು ತಮ್ಮೊಳಗೆ ಭಾಗಮಾಡಿಕೊಳ್ಳಬೇಕು. ಮೇಲಿನ ಪುಟದಲ್ಲಿ ಹೇಳಿರುವ ಬಂಧುವರ್ಗಕ್ರಮದವಿಷಯದಲ್ಲಿ ಸ್ವಲ್ಪಮಟ್ಟಿಗೆ ಸಂದೇಹಿಸುವದಕ್ಕೆ ಕಾರಣವಿದ್ದರೂ, ಅದೇಕ್ರಮವನ್ನೇ ಕೋರ್ಟುಗಳಲ್ಲಿ ಅವಲಂಬಿಸಿ ಸೊತ್ತಿಗೆ ಯಾರು ಬಾಧ್ಯರೊ ಎಂಬುವದನ್ನು ಬಹುಶಃ ನಿರ್ಣಯಿಸುವರೆಂದು ತೋರುತ್ತದೆ.

ಜಾರ್ಡಿ ಮೇರ್ರವರು ಇಂಗ್ಲೀಷಿನಲ್ಲಿ ಬರೆದಿರುವ "ಹಿಂದೂಲಾ" ಗ್ರಂಥದಲ್ಲಿ, ಬಂಧುಗಳು ಕೆಳಗೆ ವಿವರಿಸುವ ಕ್ರಮದಲ್ಲಿ ಆಸ್ತಿಗೆ ಬಾಧ್ಯರಾಗುವರೆಂದು ಹೇಳಿದಾರೆ.

೧. ಮಗನ ದೌಹಿತ್ರ.
೨. ಮಮ್ಮಗನ ದೌಹಿತ್ರ.
೩. ತಂದೆಯ ದೌಹಿತ್ರ.
೪. ಅಣ್ಣತಮ್ಮಂದಿರ ದೌಹಿತ್ರ.
೫. ಅಣ್ಣತಮ್ಮಂದರ ಮಗನ ದೌಹಿತ್ರ.
೬. ತಾತನ ದೌಹಿತ್ರ.
೭. ತಂದೇ ಅಣ್ಣತಮಂದರ ದೌಹಿತ್ರ.
೮. ಸೋದರಮಾವ.
೯. ಸೋದರಮಾವನ ಮಗ.

೧೦. ತಾಯಿಯ ಅಕ್ಕತಂಗಿಯರ ಮಗ.
೧೧. ಮುತ್ತಾತನ ದೌಹಿತ್ರ.
೧೨. ತಾತನ ಅಣ್ಣತಮ್ಮಂದರ ದೌಹಿತ್ರ.
೧೩. ತಂದೆಯ ಸೋದರಮಾವ.
೧೪. ತಂದೆಯ ಸೋದರಮಾವನ ಮಗ.
೧೫. ತಾಯಿಯ ತಂದೆ.
೧೬. ತಾಯಿಯ ಚಿಕ್ಕಪ್ಪ ದೊಡ್ಡಪ್ಪ.
೧೭. ತಾಯಿಯ ಚಿಕ್ಕಪ್ಪ ದೊಡ್ಡಪ್ಪಂದಿರ ಮಗ.
೧೮. ತಾಯಿಯ ಸೋದರತ್ತೆಯ ಮಗ.
೧೯. ತಾಯಿಯ ಸೋದರಮಾವ.
೨೦. ತಾಯಿಯ ಸೋದರಮಾವನ ಮಗ.
೨೧. ತಾಯಿಯ ಚಿಕ್ಕಮ್ಮ ದೊಡ್ಡಮ್ಮನ ಮಗ.
೨೨. ತಾಯಿಯ ತಾತ.
೨೩. ತಾಯಿಯ ತಾತನ ಅಣ್ಣತಮ್ಮಂದಿರು.
೨೪. ಇವರ ಮಗ.
೨೫. ತಾಯಿಯ ತಂದೆಯ ಸೋದರತ್ತೆಯ ಮಗ.
೨೬. ತಾಯಿಯ ಮುತ್ತಾತ.
೨೭. ತಾಯಿಯ ಮುತ್ತಾತನ ಸಹೋದರರು.

ಬಂಧುಗಳು—ಇತರ ಮೃತನ ಸಪಿಂಡರು ಮತ್ತು ಸಮಾನೋದಕರು (ಕೆಲವರ ಹೇಳಿಕೆಯಂತೆ ಮೃತನ ಸಾಕುಲ್ಯರೂ) ಇವರಾರೂ ಇಲ್ಲದಿದ್ದರೆ. ಮೃತನ ಸ್ವತ್ತಿನ ವಾರಸುಹಕ್ಕು ಬಂಧುಗಳಿಗೆ ಹೋಗುತ್ತದೆ.ವ್ಯ|| ನಿ|| ೬೪.

ಸ್ತ್ರೀಧನವು.

ಸ್ತ್ರೀಧನವು—ಪುರುಷರಬಳಿಯಿಂದ ವಾರಸು ಹಕ್ಕಿನಿಂದ ಬಂದಿರುವ ಆಸ್ತಿಯಲ್ಲಿ ಸ್ತ್ರೀಯರಿಗೆ ಸಂಪೂರ್ಣ ಸ್ವಾತಂತ್ರ್ಯ ವಿಲ್ಲವೆಂದೂ, ಅವರ ಮರಣಾನಂತರದಲ್ಲಿ ಸದರಿಯಾಸ್ತಿ, ಹಿಂದಣ ಆಸ್ತಿದಾರನ ವಾರಸರಿಗೇ ಸಲ್ಲುವುದೆಂದೂ, ಇದುವರೆಗೆ ತಿಳಿಸಿದೆವು. ‘ಸ್ತ್ರೀವಾರಸಿಗೆ ವಾರಸು ಹಕ್ಕಿನಿಂದ ಬರಬೇಕಾದ ಆಸ್ತಿ, ಅವರಿಗೆ ಉಯಿಲುಮೂಲಕವಾಗಿಯಾದರೂ ದಾನರೂಪಕವಾಗಿಯಾದರೂ ಕೊಡಲ್ಪಟ್ಟರೂ, ಅದರಲ್ಲಿ ಅವರಿಗೆ ಸಂಪೂರ್ಣ ಸ್ವಾತಂ

ತ್ರ್ಯವುಂಟಾಗಲಾರದು. (೧೪·ಕ ಹೈ ೨೨೬; ಇ ಲಾ ರಿ ೧೧ ಬೊಂ ೬೯, ೫೭೩; ಇ ಲಾ ರಿ ೧೧ ಅ ೨೯೬; ಇ ಲಾ ರಿ ೧೪ ಮ ೨೭೪.) ಆದರೆ, ಮತ್ತೆ ಕೆಲವು ವಿಧಗಳಲ್ಲಿ ಸ್ತ್ರೀಯರಿಗೆ ಕೈಗೂಡುವ ಸೊತ್ತಿನಲ್ಲಿ ಅವರಿಗೆ ಅಧಿಕವಾದ ಸ್ವಾತಂತ್ರ್ಯವೇರ್ಪಟ್ಟು, ಅದು ಅವರ ಸ್ತ್ರೀಧನವೆಂದು ಹೇಳಲ್ಪಡುವುದು. ಈ ಪ್ರಕರಣದಲ್ಲಿ ಸ್ತ್ರೀಧನದ ಭೇದಗಳೂ, ಅದರ ವಿಷಯಕವಾಗಿ ಸ್ತ್ರೀಯರಿಗುಂಟಾಗಿರುವ ಸ್ವಾತಂತ್ರ್ಯವೂ, ಆಯಾ ತರಗತಿಗಳ ಸ್ತ್ರೀಧನಕ್ಕೆ ಏರ್ಪಟ್ಟಿರುವ ವಾರಸುದಾರರ ಕ್ರಮವೂ, ವಿವರಿಸಲ್ಪಡುವುದು.

ಆರುವಿಧಗಳು. ಶುಲ್ಕವು, ಅಧ್ಯಗ್ನಿಕವು, ಅಧ್ಯಾವಾಹನಿಕವು, ಅನ್ವಾಧೇಯಿಕವು, ಪ್ರೀತಿದತ್ತವು, ಅಧಿವೇದನಿಕವು,—ಧರ್ಮಶಾಸ್ತ್ರಗಳಲ್ಲಿ-ಶುಲ್ಕವು, ಅಧ್ಯಗ್ನಿಕವು, ಅಧ್ಯಾವಾಹನಿಕವು, ಅನ್ವಾಧೇಯಿಕವು, ಪ್ರೀತಿದತ್ತವು, ಅಧಿವೇದನಿಕವು-ಎಂದು ಆರುವಿಧಗಳಾದ ಸ್ತ್ರೀಧನಗಳು ವಿವರಿಸಲ್ಪಟ್ಟಿವೆ. ಶುಲ್ಕಕ್ಕೆಉತ್ಪತ್ತಿ ಆಸುರವಿವಾಹದಲ್ಲಿ ಉಂಟಾಯಿತು. ಕನ್ಯೆಯನ್ನು ಕೊಟ್ಟದ್ದಕ್ಕಾಗಿ ಆಕೆತಾಯ್ತಂದೆಗಳು ವರನಬಳಿಯಲ್ಲಿ ತೆಗೆದುಕೊಳ್ಳುವ ಸೊತ್ತಿಗೆ ಅಸಲು ಶುಲ್ಕವೆಂದು ಹೆಸರು. ಈಚೀಚೆಗೆ ಅಸುರವಿವಾಹಗಳು ಜನನಿಂದ್ಯಗಳಾಗಿ ಬ್ರಾಹ್ಮವಿವಾಹಗಳು ಪ್ರಬಲವಾಗಲು ಕನ್ಯೆಯ ತಾಯ್ತಂದೆಗಳು ತಮ್ಮ ಸ್ವೋಪಯೋಗಕ್ಕಾಗಿ ಶುಲ್ಕವನ್ನು ತೆಗೆದುಕೊಳ್ಳುವುದನ್ನು ಬಿಟ್ಟು, ಕನ್ಯೆಗೆ ಬೇಕಾದ ನಗಗಳು ವಸ್ತ್ರಗಳು ಗೃಹೋಪಕರಣಗಳು ಮುಂತಾದವುಗಳ ನಿಮಿತ್ತವಾಗಿ ಕೊಂಚ ಹಣವನ್ನು ಮೊದಲು ನಿಷ್ಕರ್ಷೆಮಾಡಿಕೊಂಡು ನಿಶ್ಚಿತಾರ್ಥಕಾಲದಲ್ಲಿ ಕನ್ಯೆಗೆ ಆಭರಣವಾಗಿ, ದ್ರವ್ಯವನ್ನು, ಅಲ್ಲದೆ ವಸ್ತುಗಳನ್ನು ತೆಗೆದುಕೊಳ್ಳುವ ಆಚಾರ ಏರ್ಪಟ್ಟಿತು. ಹಾಗೆ ತೆಗೆದುಕೊಳ್ಳಲ್ಪಡುವ ದ್ರವ್ಯವು, ನಗಗಳು, ಮುಂತಾದ ಸೊತ್ತು ಶುಲ್ಕವೆಂದು ಹೇಳಲ್ಪಡುವುದು. ವರನಿಂದಾದರೂ. ವರನ ಅಥವಾ ಕನ್ಯೆಯ ಬಂಧುಗಳಿಂದಾದರೂ, ಸ್ನೇಹಿತರಿಂದಾದರೂ, ಇತರರಿಂದಾದರೂ ವಿವಾಹದದಿನದಲ್ಲಿ ಅಗ್ನಿ ಸನ್ನಿಧಾನದಲ್ಲಿ ಕನ್ಯೆಗೆ ಕೊಡಲ್ಪಡುವ ಆಭರಣಗಳು ಮುಂತಾದ ಸೊತ್ತು ಅಧ್ಯಗ್ನಿಕಸ್ತ್ರೀಧನವೆಂದು ಹೇಳಲ್ಪಡುವುದು. (೧೬ ದ ೧೧೫.) ತೌರುಮನೆಬಿಟ್ಟು ಅತ್ತೆಮನೆಗೆ ಬರುವಾಗ ಕೊಡಲ್ಪಡುವ ದ್ರವ್ಯ ಮುಂತಾದವು ಅಧ್ಯಾವಾಹನಿಕಸ್ತ್ರೀಧನವೆನಿಸುವುದು. ವಿವಾಹನಂತರದಲ್ಲಿ ತೌರುಮನೆಕಡೆ ಬಂಧುಗಳಿಂದಾದರೂ ಅತ್ತೆಮನೆಕಡೆ ಬಂಧುಗಳಿಂದಾದರೂ ಕೊಡಲ್ಪಡುವ ಸೊತ್ತು ಅನ್ವಾಧೇಯಿಕಸ್ತ್ರೀಧನವು. ವಿವಾಹನಂತರದಲ್ಲಿ ಗಂಡನಿಂದ ಪ್ರೀತಿಪೂರ್ವಕವಾಗಿ ಕೊಡಲ್ಪಡುವ ಸೊತ್ತು ಪ್ರೀತಿದತ್ತವು. ಮತ್ತೊಂದು ಹೆಂಡತಿಯನ್ನು ಮದಿವೆಯಾಗುವಾಗ ಮೊದಲಹೆಂಡತಿಗೆ ತೃಪ್ತಿಯುಂಟುಮಾಡುವುದಕ್ಕಾಗಿ ಗಂಡನು ಕೊಡುವಸೊತ್ತು ಅಧಿವೇದನಿಕ ಸ್ತ್ರೀಧನವು.

ಯೌತಕವು ಅಯೌತಕವು.—ಸಮಸ್ತವಾದ ಸ್ತ್ರೀಧನವೂ ಯೌತಕವು ಅಯೌತಕವು ಎಂದು ಎರಡು ವಿಧಗಳು. ಒಂದು ಸ್ತ್ರೀಗೆ ಆಕೆಯು ಗಂಡನಿಂದಾದರೂ, ತೌರುಮನೆ ಅಲ್ಲದೆ ಅತ್ತೆಮನೆಕಡೆ ಬಂಧುಗಳಿಂದಾದರೂ, ಸ್ನೇಹಿತರಿಂದಾದರೂ ಇತರರಿಂದಾದರೂ, ವಿವಾಹಕಲದಲ್ಲಿ ಕೊಡಲ್ಪಡುವ ಸೊತ್ತು ಯೌತಕ ಸ್ತ್ರೀಧನವು. ಈಸೊತ್ತುಗಳು ಸಾಲಕ್ಕೆ ಈಡಾಗುವದಿಲ್ಲವು.

ಸೌದಾಯಿಕವು.— ವಿವಾಹಕ್ಕೆ ಪೂರ್ವದಲ್ಲಾದರೂ, ವಿವಾಹಕಾಲದಲ್ಲಾದರೂ, ವಿವಾಹವಾದಮೇಲಾದರೂ, ಒಂದುಸ್ತ್ರೀಗೆ ಆಕೆಯು ಗಂಡನು, ತಾಯಿ, ತಂದೆ, ಸೋದರರು, ತೌರುಮನೆ ಅಲ್ಲದೆ ಅತ್ತೆಮನೆಯು ಬಂಧುಗಳು, ಇವರಿಂದ ಕೊಡಲ್ಪಟ್ಟ ವಸ್ತ್ರಗಳು, ಆಭರಣಗಳು, ಭೂಸ್ಥಿತಿ, ಮುಂತಾದ ಸ್ತ್ರೀಧನವು ಸೌದಾಯಿಕವೆಂದು ಹೇಳಲ್ಪಡುವುದು. (೬ ಬಂ ಸ ತೀ ೭೭; ೫ ಮು ಹೈ ೧೧೧; ೧ ಅ ಹೈ ೬೬; ೧೦ ಸ ೧೪೯; ೬ ಅ ಹೈ ೨೭೯; ಇ ಲಾ ರಿ ೧ ಕ ೨೭೫; ೩ ಮು ಹೈ ೨೭೦.) ಈ ಹೇಳಲ್ಪಟ್ಟ ಸೊತ್ತುಗಳು ಉಯಿಲು ಮೂಲಕವಾಗಿ ಕೊಡಲ್ಪಟ್ಟರೂ ಸ್ತ್ರೀಧನಗಳಾಗಿಯೇ ಭಾವಿಸಲ್ಪಡುವುವು. (೨ ಮಾರ್ಲಿ ೬೫; ೧೧ ಕ ಹೈ ೨೯೫.) ಒಂದುಸ್ತ್ರೀಗೆ ಸೀದಾಕೊಡದೆ ಹಬ್ಬಹುಣ್ಣಿಮೆಗಳಲ್ಲಿ ಮಾತ್ರವೇ ಧರಿಸುವುದಕ್ಕಾಗಿ ಗಂಡನು ಮುಂತಾದವರಿಂದ ಕೊಡಲ್ಪಟ್ಟು ಮರಳಿ ತೆಗೆದುಕೊಳ್ಳಲ್ಪಡುತ್ತಿರುವ ನಗಗಳು ಮುಂತಾದ ಸೊತ್ತು ಆಕೆಯು ಸ್ತ್ರೀಧನ ವಾಗಲಾರದು.

ಜೀವನಾಂಶದ ಸೊತ್ತು.—ಜೀವನಾಂಶ ಮುಂತಾದ ನಿಮಿತ್ತವಾದ ಏರ್ಪಾಟನಿಂದ ಒಂದುಸ್ತ್ರೀಗೆ ಸಂಪೂರ್ಣ ಸ್ವಾತಂತ್ರ್ಯದೊಡನೆ ಕೊಡಲ್ಪಡುವ ಆಸ್ತಿ ಆಕೆಯು ಸ್ತ್ರೀಧನವಾಗಿ ಭಾವಿಸಲ್ಪಡುವುದು. (೨೪ ಸ ೧೬೮; ೩ ಕ ಹೈ ೧೨೧; ಇ ಲಾ ರಿ ೧ ಮು ೧೬೬) ಒಂದುಸ್ತ್ರೀಗೆ ಜೀವನಾಂಶ ನಿಮಿತ್ತವಾಗಿ ಬರಬೇಕಾದ ಬಾಕೀ ಹಣಕೂಡ ಸ್ತ್ರೀಧನವಾಗಿಯೇ ಭಾವಿಸಲ್ಪಡುವುದು. (೧೬ ಸ ೭೬.)

ಸೌದಾಯಿಕದಮೇಲೆ—ಗಂಡನಿಂದ ಕೊಡಲ್ಪಟ್ಟಿರುವ ಚರರೂಪಕವಾದ ಸ್ತ್ರೀಧನದಮೇಲೆಯೂ ಗಂಡನಲ್ಲದೆ ಇತರ ಬಂದುಗಳಿಂದ ಕೊಡಲ್ಪಟ್ಟಿರುವ ಸ್ಥಿರಚರರೂಪಕ ಸ್ತ್ರೀಧನದಮೇಲೆಯೂ, ಮತ್ತು ಈ ಹೇಳಲ್ಪಟ್ಟ ಸ್ತ್ರೀಧನಗಳೊಡನೆ ತಾನು ಸಂಪಾದಿಸಿರುವ ಸ್ಥಿರರೂಪಕ ಸ್ತ್ರೀಧನದಮೇಲೆಯೂ, ಸ್ತ್ರೀಗೆ ಸಂಪೂರ್ಣ ಸ್ವಾತಂತ್ರ್ಯವುಂಟು. ಅದನ್ನು ತನ್ನಮನಸ್ಸು ಬಂದಂತೆ ಆಕೆ ವೆಚ್ಚಿಸಿಕೊಳ್ಳಬಹುದು, ವಿಕ್ರಯಿಸಬಹುದು, ದಾನರೂಪಕವಾಗಿ ಅಥವಾ ಉಯಿಲುಮೂಲಕವಾಗಿ ಕೊಟ್ಟುಬಿಡಬಹುದು. (೧೯ ಸ ೨೯೨; ೧ ಮು ಹೈ ೮೫; ಇ ಲಾ ರಿ ೭ ಬೊಂ ೧೫೫; ಇ ಲಾ ರಿ ೫ ಅ ೩೧೦; ಇ ಲಾ ರಿ ೨ ಮು ೩೩೩.) ಈ ವಿಷಯವಾಗಿ ಹೆಂಡತಿಯನ್ನು ಆಜ್ಞೆಮಾಡುವುದಕ್ಕೆ

ಗಂಡನಿಗೆ ಎಷ್ಟುಮಾತ್ರವೂ ಹಕ್ಕಿಲ್ಲವು. ಆಕೆಯು ಸಂಪತ್ತಿಯನ್ನು ಹೊಂದಿದೆ ಸದರಿ ಸೊತ್ತನ್ನು ಗಂಡನು ಉಪಯೋಗಿಸಿಕೊಳ್ಳ ಕೂಡದು. ಉಪಯೋಗಿಸಿಕೊಂಡರೆ ಬಡ್ಡಿಯೊಡನೆಕೂಡ ಕೊಡುವುದಕ್ಕೆ ಬದ್ಧನಾಗಿರುವನು ಮಿತಿಮಿಾರಿದ ಕಷ್ಟಕಾಲವು ಸಂದರ್ಭಿಸಿದಾಗ-ಎಂದರೆ, ಕ್ಷಾಮವು, ವ್ಯಾಧಿ, ಸಾಲಗಾರರಿಂದ ಜಯಿಲು ಆಪತ್ತು ? ಬಿಟ್ಟುಬಿಡಲಾಗದ ವೈದಿಕಕರ್ಮವು, ಇಂತಹವು ಸಂದರ್ಭಿಸಿ, ಇತರ ಸಾಧನವು ಸುತರಾಂ ಕಾಣಬಾರದೆ ಇರುವಲ್ಲಿ ಹೆಂಡತಿಯ ಸೌದಾಯಿಕ ಸ್ತ್ರೀಧನವನ್ನು ಗಂಡನು ವೆಚ್ಚಮಾಡಿಕೊಳ್ಳಬಹುದು. ಹಾಗೆ ಖರ್ಚುಮಾಡಿಕೊಂಡರೆ, ಆಮೇಲೆ ಒಳ್ಳೆಯಕಾಲವು ಬಂದಾಗ ಸದರಿ ಸೊತ್ತನ್ನು ಮರಳಿ ಕೊಟ್ಟುಬಿಡುವುದು ಧರ್ಮವೆಂದು ಸ್ಮೃತಿಕರ್ತ್ರರು ಹೇಳಿರುವರು. ಹೆಂಡತಿಯು ಸ್ತ್ರೀಧನವನ್ನು ಉಪಯೋಗಿಸಿಕೊಳತಕ್ಕ ಸಂದರ್ಭದಲ್ಲಿ, ಅದನ್ನು ಉಪಯೋಗಿಸಿಕೊಳ್ಳುವುದಕ್ಕೆ ಗಂಡನು ಇಷ್ಟಪಡದಿದ್ದರೆ, ಅದನ್ನು ಜಪ್ತುಮಾಡುವುದಕ್ಕೆ ಸಾಲಗಾರರಿಗೆ ಎಷ್ಟುಮಾತ್ರವೂ ಹಕ್ಕಿಲ್ಲವು. (೮ ಬೊಂ ಹೈ ೧೨೯; ೬ ಅ ಹೈ ೨೭೯.)

ಸ್ವಸಂಪಾದನೆಯಮೇಲೆ-ಸ್ವಕಾಯಕಷ್ಟದಿಂದಾದರು ಪ್ರಯೋಜಕತ್ವದಿಂದಾರು ಹೆಂಡತಿ ಸಂಪಾದಿಸಿದ ಸೊತ್ತೂ, ಬಂಧುಗಳಲ್ಲದೆ ಇತರರಿಂದ ಆಕೆಗೆಕೊಡಲ್ಪಟ್ಟಸೊತ್ತೂ ಇವು ಗಂಡನ ಸಮ್ಮತಿಯಿಂದ ಹೊಂದತಕ್ಕ ಸೊತ್ತುಗಳಾದುದರಿಂದ, ಮೊದಲು ಅವು ಗಂಡನಿಗೇಸಲ್ಲುವುವು. ಸದರಿ ಸೊತ್ತುಗಳನ್ನು ಯಾವ ಕಾರಣವೂ ಇಲ್ಲದೆ ಗಂಡನು ವೆಚ್ಚಿಸಿಕೊಳ್ಳಬಹುದು. (೨ ಮಾರ್ಲಿ. ೬೫.) ಗಂಡನು ಬದುಕಿರುವಾಗ ಆತನ ಸಮ್ಮತಿಯಿಲ್ಲದೆ ಸದರಿಸೊತ್ತುಗಳನ್ನು ಹೆಂಡತಿ ವೆಚ್ಚಮಾಡಕೂಡದು. ಗಂಡನಿಗಿಂತಲೂ ಮೊದಲು ಹೆಂಡತಿ ಸತ್ತುಹೋದರೆ, ಸದರಿ ಸೊತ್ತು ಗಂಡನಿಗೆ ಸೇರಿ ಅತನನಂತರದಲ್ಲಿ ಆತನ ವಾರಸರಿಗೆ ಸೇರುವುದು. ಮೊದಲು ಗಂಡನೇ ಸತ್ತುಹೋದರೆ, ಸದರಿ ಸೊತ್ತಿನಲ್ಲಿ ಹೆಂಡತಿಗೆ ಸಂಪೂರ್ಣಸ್ವಾತಂತ್ರ್ಯವೇರ್ಪಟ್ಟು ಆಕೆಯನಂತರದಲ್ಲಿ ಅದು ಆಕೆಯ ವಾರಸರಿಗೇಸೇರುವುದು. (೩ ಲಾ ರಿ ೧ ಮ ೩೦೭.) ಈ ಹೇಳಲ್ಪಟ್ಟ ಸೊತ್ತುಗಳುಳ್ಳಸ್ತ್ರೀಸತ್ತುಹೋದಾಗ ಆಕೆ ಪುರುಷನಾಗಿ ಭಾವಿಸಲ್ಪಟ್ಟು ಸದರಿ ಸೊತ್ತಿಗೆ ಆಕೆಯ ಕುಮಾರರು, ಮೊಮ್ಮಕ್ಕಳು ಮೊದಲಾದವರು ವಾರಸರಾಗುವರೆಂದು ಮಯೂಖ ಗ್ರಂಥವನ್ನು ಹಿಡಿದು ತೀರ್ಮಾನಿಸಲ್ಪಟ್ಟಿದೆ. (೩ ಲಾ ರಿ ೧೦ ಬೊಂ ೫೦೧.)

ಸ್ತ್ರೀಧನಕ್ಕೆ ವಾರಸರನ್ನು ನಿರ್ಣಯಿಸುವಿಕೆ.—ಒಂದು ಸ್ತ್ರೀಸತ್ತುಹೋಗಿ, ಆಕೆಯ ಸ್ತ್ರೀಧನಕ್ಕೆ ವಾರಸರನ್ನು ನಿರ್ಣಯಿಸತಕ್ಕ ಸಂದರ್ಭಬಂದಾಗ. ಸದರಿಸ್ತ್ರೀ, ಮಿತಾಕ್ಷರ ಮುಂತಾದ ಸಂಪ್ರದಾಯಗಳಲ್ಲಿ ಯಾವದಕ್ಕೆ ಸೇರಿದೆಯೋ, ಆಕೆಯ ಸ್ತ್ರೀಧನವು ಯಾವ ಯಾವ ತರಗತಿಗಳಿಗೆ ಸೇರಿವೆ

ಯೋ, ಮತ್ತು ಆಕೆಯ ವಿವಾಹವು ಕನ್ಯಾದಾನ (ಬ್ರಾಹ್ಮ) ರೂಪವಾಗಿ ನಡೆಯಿತೋ, ಕನ್ಯಾವಿಕ್ರಯ (ಅಸುರ) ರೂಪಕವಾಗಿ ನಡೆಯಿತೋ-ಈವಿಷಯಗಳನ್ನು ಮೊದಲು ನಿರ್ಣಯಿಸುವುದಾವಶ್ಯಕವು. ಏಕೆಂದರೆ-ಈಮೂರುವಿಷಯಗಳನ್ನೂ ಹಿಡಿದು ವಾರಸು ಕ್ರಮವು ಭೇದಿಸುವುದು.

ಶುಲ್ಕಕ್ಕೆ ವಾರಸರು— ನಿಶ್ಚಿತಾರ್ಥವು ನಡೆದು ವಿವಾಹವಾಗುವದಕ್ಕೆ ಮೊದಲು ಕನ್ಯೆ ಸತ್ತುಹೋದಪಕ್ಷದಲ್ಲಿ, ವಿವಾಹನಿಮಿತ್ತವಾಗಿ ಆಕೆಗೆ ವರನಮನೆಯವರಿಂದ ಕೊಡಲ್ಪಟ್ಟಿರುವ ಶುಲ್ಕದಲ್ಲಿ ಖರ್ಚುಗಳನ್ನು ವಿನಹಾಯಿಸಿಕೊಂಡು ಮಿಕ್ಕಸೊತ್ತನ್ನು ಮರಳಿ ಅವರಿಗೇ ಕೊಟ್ಟುಬಿಡಬೇಕೆಂದು ಮಿತಾಕ್ಷರದಲ್ಲಿಯೂ ಮಯೂಖದಲ್ಲಿಯೂ ದಾಯಭಾಗದಲ್ಲಿಯೂ ಕೂಡ ಹೇಳಲ್ಪಟ್ಟಿದೆ.

ದಾಯಭಾಗಪ್ರಕಾರಗಿ—ಯೌತಕ ಅಯೌತಕ ಸ್ತ್ರೀಧನಗಳಿಗೆ ಬೇರೆ ಬೇರೆ ವಾರಸುಕ್ರಮಗಳೇರ್ಪಟ್ಟಿವೆ. ಮತ್ತು ಯೌತಕವಾದರೂ ಅಯೌತಕವಾದರೂ ಸರಿಯೆ, ಪಿತೃದತ್ತ ಸ್ತ್ರೀಧನಕ್ಕೆ ಎಂದರೆ—ಸ್ತ್ರೀಯ ತಂದೆಯಿಂದ ಕೊಡಲ್ಪಟ್ಟ ಸೊತ್ತಿಗೆ ಪ್ರತ್ಯೇಕವಾದ ವಾರಸುಕ್ರಮವು ಏರ್ಪಟ್ಟಿದೆ. ಈ ವಾರಸು ಕ್ರಮಗಳೆಲ್ಲವೂ ಈ ಕೆಳಗೆ ವಿವರಿಸಲ್ಪಟ್ಟಿವೆ.

ಯೌತಕವು— ಯೌತಕ ಸ್ತ್ರೀಧನಕ್ಕೆ ದಾಯಭಾಗ ದಾಯಕ್ರಮಸಂಗ್ರಹಗಳ ಪ್ರಕಾರವಾಗಿ ಏರ್ಪಟ್ಟಿರುವ ವಾರಸುಕ್ರಮವೇನೆಂದರೆ,—(೧) ನಿಶ್ಚಿತಾರ್ಥವಾದರೂ ನಡೆಯಿಸಲ್ಪಡದ ಕುವರಿಯರು. (೨) ನಿಶ್ಚಿತಾರ್ಥವು ನಡೆಯಿಸಲ್ಪಟ್ಟು ಮದುವೆಯಾಗದ ಕುವರಿಯರು. (೩) ಮದುವೆಯಾದಕುವರಿಯರಲ್ಲಿ ಪುತ್ರಸಂತತಿಯುಳ್ಳವರು, ಅಲ್ಲದೆ ಉಂಟಾಗತಕ್ಕವರು. (೪) ಬಂಜೆಯರಾಗಿರುವ ಕುವರಿಯರು, ವಿಧವೆಯಕುಮಾರಿಯರು. (೫) ಕುಮಾರರು. (೬) ಕುವರಿಯ ಕುಮಾರರು (೭) ಮೊಮ್ಮಕ್ಕಳೆಂದರೆ ಮಗನಮಕ್ಕಳು. (೮) ಮರಿಮಕ್ಕಳು. (೯) ಸವತಿಯ ಕುಮಾರರು. (೧೦) ಸವತಿಯ ಮೊಮ್ಮಕ್ಕಳು. (೧೧) ಸವತಿಯ ಮರಿಮಕ್ಕಳು. ಆಮೇಲೆ ಸತ್ತುಹೋದ ಸ್ತ್ರೀಯ ವಿವಾಹವನ್ನು ಹಿಡಿದು ವಾರಸುಗಳೇರ್ಪಡುತ್ತೆ.

ಕನ್ಯಾದಾನ ವಿವಾಹವಾದರೆ	ಕನ್ಯಾವಿಕ್ರಯ ವಿವಾಹವಾದರೆ
೧೨ ಗಂಡನು.	೧೨ ತಾಯಿ.
೧೩ ಅಣ್ಣತಮ್ಮಂದಿರು.	೧೩ ತಂದೆ.
೧೪ ತಾಯಿ.	೧೪ ಅಣ್ಣತಮ್ಮಂದಿರು.
೧೫ ತಂದೆ.	೧೫ ಗಂಡನು.
ಆಮೇಲೆ ದೂರವಾರಸರು.	ಆಮೇಲೆ ದೂರವಾರಸರು.

ದೂರವಾರಸರೆಂದರೆ—(೧೬) ಗಂಡನ ತಮ್ಮಂದಿರು. (೧೭) ಗಂಡನ ಅಣ್ಣತಮ್ಮಂದಿರ ಕುಮಾರರು. (೧೮) ಸ್ತ್ರೀಯ ಅಕ್ಕತಂಗಿಯರ ಕುಮಾರರು. (೧೯) ಗಂಡನ ಅಕ್ಕತಂಗಿಯರ ಕುಮಾರರು. (೨೦) ಸ್ತ್ರೀಯ ಅಣ್ಣತಮ್ಮಂದಿರ ಕುಮಾರರು. (೨೧) ಅಳಿಯನು. (೨೨) ಗಂಡನ ತಂದೆ. (೨೩) ಗಂಡನ ಅಣ್ಣನು. (೨೪) ಸಕುಲ್ಯರು. (೨೫) ಸಮಾನೋದಕರು.

ಅಯೌತಕವು—ಅಯೌತಕ ಸ್ತ್ರೀಧನಕ್ಕೆ ದಾಯಭಾಗಪ್ರಕಾರವಾಗಿ ಏರ್ಪಟ್ಟಿರುವ ವಾರಸುಕ್ರಮವೇನೆಂದರೆ—(೧) ಕುಮಾರರೂ ನಿಶ್ಚಿತಾರ್ಥವಾದರೂ ನಡೆಯಿಸಲ್ಪಡದ ಕುವರಿಯರೂ ಸೇರಿ ವಾರಸರಾಗುವರು. (೨ ಕ. ಹೈ. ೧೪೮.) ಕುಮಾರರಿಲ್ಲದಿದ್ದರೆ, ಈ ಹೇಳಲ್ಪಟ್ಟ ಕುವರಿಯರಿಗೇ ಯಾವತ್ತು ಸ್ತ್ರೀಧನವೂ ಸೇರುವದು. ಈ ಹೇಳಲ್ಪಟ್ಟ ಕುವರಿಯರಿಲ್ಲದಿದ್ದರೆ, ಕುಮಾರರಿಗೆ ಸೇರುವದು. ಆಮೇಲೆ—(೨) ನಿಶ್ಚಿತಾರ್ಥವು ನಡೆಯಿಸಲ್ಪಟ್ಟು ಮದಿವೆಯಾಗದ ಕುವರಿಯರು. (೩) ಮದಿವೆಯಾದ ಕುವರಿಯರಲ್ಲಿ ಪುತ್ರಸಂತತಿಯುಳ್ಳವರು, ಅಥವ ಉಂಟಾಗತಕ್ಕವರು. (೪) ಮುಮ್ಮಕ್ಕಳು ಎಂದರೆ— ಕುಮಾರರ ಕುಮಾರರು. (೫) ಕುವರಿಯ ಕುಮಾರರು. (೬) ಮರಿಮಕ್ಕಳು. (೭) ಸವತಿಯಕುಮಾರರು. (೮) ಸವತಿಯಮುಮ್ಮಕ್ಕಳು. (೯) ಸವತಿಯ ಮರಿಮಕ್ಕಳು. (೧೦) ಬಂಜೆಯರಾಗಿರುವ ಕುವರಿಯರು, ವಿಧವೆಯ ಕುವರಿಯರು.

ಆಮೇಲಣ ವಾರಸರು ಕನ್ಯಾದಾನ ಕನ್ಯಾವಿಕ್ರಯ ವಿವಾಹಭೇದವನ್ನು ಹಿಡಿದು ಏರ್ಪಡುವರೆಂದು ದಾಯಕ್ರಮ ಸಂಗ್ರಹವು ಹೇಳುವದು. ಆದರೆ ದಾಯಭಾಗವು ಅಯೌತಕ ವಿಷಯದಲ್ಲಿ ವಿವಾಹಭೇದವನ್ನು ಪರಿಕಿಸದೆ ಈ ಕೆಳಗೆ ಹೇಳಲ್ಪಟ್ಟಮೇರೆ ವಾರಸುಗಳನ್ನು ಏರ್ಪಡಿಸಿದೆ. ದಾಯಭಾಗಪ್ರಕಾರವಾಗಿಯೇ ತೀರ್ಮಾನಗಳು ಕೊಡಲ್ಪಟ್ಟವೆ. (೧೧ ಕ. ಹೈ. ೨೮೬; ಇ.ಲಾ. ರಿ. ೧ ಕ. ೨೭೫) ದಾಯಭಾಗಪ್ರಕಾರವಾಗಿ ಮೇಲಣವಾರಸರು—(೧೧) ಸ್ತ್ರೀಯ ಅಣ್ಣತಮ್ಮಂದಿರು, (೧೨) ತಾಯಿ, (೧೩) ತಂದೆ, (೧೪) ಗಂಡನು, (೧೫) ಮೇಲೆ ಹೇಳಿದ ವರಸೆಯಮೇರೆ ಗಂಡನ ತಮ್ಮಂದಿರು ಮುಂತಾದ ದೂರವಾರಸರು,

ಪಿತೃದತ್ತವು— ಪಿತೃದತ್ತಕ್ಕೆ ಎಂದರೆ— ಯಾವಾಗಾದರೂ ಸರಿಯೆ. ಸ್ತ್ರೀಯ ತಂದೆಯಿಂದ ಕೊಡಲ್ಪಟ್ಟಿರುವಸೊತ್ತಿಗೆ ದಾಯಭಾಗಪ್ರಕಾರವಾಗಿ ವಾರಸುಕ್ರಮವೇನೆಂದರೆ— (೧೧ ಕ. ಹೈ. ೨೮೬, ೩೦೦—

(೧) ನಿಶ್ಚಿತಾರ್ಥವಾದರೂ ನಡೆಯಿಸಲ್ಪಡದ ಕುವರಿಯರು

* * * *

(೧೧) ಸವತಿಯ ಮರಿಮಕ್ಕಳು. ...

} ೧ ಮೊದಲು ೧೧ ವರೆಗೆಹಿಂದೆಹೇಳಲ್ಪಟ್ಟ ಯೌತಕ

ಸ್ತ್ರೀಧನದಂತೆಯೇ ವಾರಸುಕ್ರಮವು. ಆಮೇಲೆ
ಅಯುತಕ ಸ್ತ್ರೀಧನಕ್ಕೆ ಹೇಗೋ ಹಾಗೆ—

(೧೨) ಸ್ತ್ರೀಯ ಅಣ್ಣತಮ್ಮಂದಿರು, (೧೩) ತಾಯಿ, (೧೪) ತಂದೆ, (೧೫) ಗಂಡನು, (೧೬) ಹಿಂದೆ ಹೇಳಿದ ವರಸೆಯಾಗಿ ಗಂಡನತಮ್ಮಂದಿರು ಮುಂತಾದ ದೂರವಾರಸರು.

ಒಂದುಬಾರಿ ವಾರಸುಹಕ್ಕಿನಿಂದ ಬಂದ ಸ್ತ್ರೀಧನಕ್ಕೆ ಮರಳಿ ವಾರಸು ಕ್ರಮವು.— ಒಂದು ಸ್ತ್ರೀಗೆ ಸಂಪೂರ್ಣಸ್ವಾತಂತ್ರ್ಯವುಂಟಾಗಿರುವ ಸ್ತ್ರೀಧನವನ್ನು ಆಕೆ ಮತ್ತೊಬ್ಬಹೆಂಗಸಿಗೆ ದಾನರೂಪಕವಾಗಲ್ಲದೆ ಉಯಿಲುಮೂಲಕವಾಗಿ ಕೊಟ್ಟಪಕ್ಷದಲ್ಲಿ ಅದು ಈ ಎರಡನೆಯ ಸ್ತ್ರೀವಶದಲ್ಲಿಕೂಡ ಸ್ತ್ರೀಧನವಾಗಿಯೇಭಾವಿಸಲ್ಪಟ್ಟು, ಈಕೆಯು ಸ್ತ್ರೀಧನದ ಹಾಗೆಯೇ ವಾರಸುದಾರರಿಗೆ ಸಲ್ಲುವದು. [೨ ಮಾರ್ಲೀ. ೬೫; ೧೧ ಕ. ಹೈ. ೨೯೫] ಆದರೆ ದಾನರೂಪಕವಾಗಿ ಅಥವಾ ಉಯಿಲು ಮೂಲಕವಾಗಿ ಕೊಡಲ್ಪಡದೆ ಒಬ್ಬ ಸ್ತ್ರೀಯಳ ಸ್ತ್ರೀಧನ ಸೊತ್ತು ಆಕೆಯ ಮರಣಾನಂತರದಲ್ಲಿ ವಾರಸುಹಕ್ಕಿನಿಂದ ಮತ್ತೊಂದು ಸ್ತ್ರೀಗೆ ಬಂದರೆ ಅದು ಈ ಎರಡನೆಯ ಸ್ತ್ರೀಯ ಸ್ವಾಧೀನದಲ್ಲಿ ಸ್ತ್ರೀಧನವಾಗಿ ಭಾವಿಸಲ್ಪಡಲಾರದು. [೨ ಕ. ಹೈ. ೧೪೪ ; ೩ ಮ ಹೈ ೩೧೪ ; ೬ ಬೊಂ. ಹೈ. ೧೮ ; ೧೪ ಕ ಹೈ ೨೩೭ ; ಇ. ಲಾ, ರಿ. ೫ ಕ. ೨೨೫.] ಪುರುಷರ ಬಳಿಯಿಂದ ವಾರಸುಹಕ್ಕಿನಿಂದ ಸ್ತ್ರೀಯರಿಗೆ ಬರುವಂತಹ ಆಸ್ತಿ ವಿಷಯವಾಗಿ ಎಂತಹ ನಿರ್ಬಂಧಗಳು ಸಲ್ಲುವವೋ, ವಾರಸುಹಕ್ಕಿನಿಂದ ಸ್ತ್ರೀಯರಿಗೆ ಬಂದ ಸ್ತ್ರೀಧನದ ವಿಷಯವಾಗಿ ಕೂಡ ಅಂತಹ ನಿರ್ಬಂಧಗಳೇ ಸಲ್ಲುವವು. ಆದುದರಿಂದ ಇದರ ವಿಷಯವಾಗಿ ಅವರಿಗೆ ಸಂಪೂರ್ಣ ಸ್ವಾತಂತ್ರ್ಯವುಂಟಾಗಿರಲಾರದು. ಮತ್ತು ಈ ಎರಡನೆಯ ಸ್ತ್ರೀಯ ಮರಣಾನಂತರದಲ್ಲಿ ಸದರಿ ಸೊತ್ತು ಆಕೆಯ ವಾರಸರಿಗೆ ಸಲ್ಲದೆ ಹಿಂದಣ ಸ್ತ್ರೀಯ ವಾರಸರಿಗೇ ಸಲ್ಲುವದು. [ಇ. ಲಾ. ರಿ. ೫ ಕ. ೨೨೨ ; ಇ. ಲಾ, ರಿ. ೧೭ ಕ. ೯೧೧, ೯೧೭.] ಸ್ತ್ರೀಧನವು ಒಂದುಬಾರಿ ಪುರುಷವಾರಸರಿಗೆ ಸಂದಮೇಲೆ ಅದು ಮರಳಿ ಹಿಂದಣ ಸ್ತ್ರೀಯ ವಾರಸರಿಗೆ ಸಲ್ಲಲಾರದು. [೩ ಮ. ಹೈ. ೩೧೨ ; ಇ. ಲಾ. ರಿ. ೫ ಕ. ೨೨೫.] ಉದಾಹರಣಗಳು—

೧. "ಏ" ಎಂಬ ಒಂದುಸ್ತ್ರೀ ಸತ್ತುಹೋದಾಗ, "ಬೀ" ಎಂಬ ಮದಿವೆಯಾಗದ ಕುವರಿಯೂ, "ಸೀ" ಎಂಬ ಮದಿವೆಯಾದ ಕುವರಿಯೂ ಇದ್ದು "ಏ" ಯ ಸ್ತ್ರೀಧನವು "ಬೀ" ಗೆ ಸಂದಿತು. ಆಮೇಲೆ "ಬೀ" ಎಂಬ ಕುವರಿ ಕನ್ಯಾದಾನರೂಪವಾಗಿ ಮದಿವೆಯಾಗಿ ಸಂತತಿಯಿಲ್ಲದೆ "ಡಿ" ಎಂಬ ಗಂಡನನ್ನು ಬಿಟ್ಟು ಸತ್ತಳು. ಸದರೀ ಸ್ತ್ರೀಧನದ ಸೊತ್ತು "ಬೀ", ಎಂಬವಳ ವಶದಲ್ಲಿಕೂಡ ಸ್ತ್ರೀಧನವಾಗಿದ್ದರೆ, ಅದು ಗಂಡನಿಗೆ ಸಲ್ಲುವದು.

ಆದರೆ ವಾರಸುಹಕ್ಕಿನಿಂದ ಬಂದ ಸೊತ್ತಾದುದರಿಂದ "ಸೀ" ಗೆ ಸಲ್ಲುವದು. ಎಂದರೆ ಮರಳಿ "ಏ" ಎಂಬವಳ ಸ್ತ್ರೀಯವಾರಸಿಗೆ ಸಲ್ಲುವದು.

೨. ಬಂಗಾಳಾದೇಶದಲ್ಲಿ "ಏ" ಎಂಬ ತಾಯಿಬಳಿಯಿಂದ ಕೊಂಚ ಸ್ತ್ರೀಧನದ ಸೊತ್ತನ್ನು ವಾರಸುಹಕ್ಕಿನಿಂದ ಹೊಂದಿ "ಬೀ" ಎಂಬ ಒಂದು ಸ್ತ್ರೀ ಸತ್ತಳು. ಆಕೆ ಸತ್ತುಹೋದಕಾಲದಲ್ಲಿ ಆಕೆಗೆ "ಸೀ" ಎಂಬ ಒಂದು ಮಗಳೂ, "ಡೀ" ಎಂಬ ಸೋದರಮಾವನೂ ಇದ್ದರು. ಸದರಿ ಸೊತ್ತು ಸೋದರಮಾವನಿಗೆ ಸೇರುವದೆಂದು ತೀರ್ಮಾನಿಸಲ್ಪಟ್ಟಿತು. ಏಕೆಂದರೆ-ಮೇಲೆ ಹೇಳಲ್ಪಟ್ಟ "ಏ" ಎಂಬ ತಾಯಿಗೆ ದಾಯಭಾಗಪ್ರಕಾರವಾಗಿ "ಡೀ" ಎಂಬ ಸೋದರನು ಸಮೀಪ ವಾರಸೇಹೊರತು "ಸೀ" ಎಂಬ ಮುಮ್ಮಗಳು ಸಮೀಪವಾರಸಲ್ಲವು. [೧ ಬಂ. ಸ. ತೀ. ೩; ಇ. ಲಾ. ರಿ. ೧೭ ಕ. ೯೧೧.]

ವ್ಯಭಿಚಾರವು ಪುನರ್ವಿವಾಹವು ಜಾತಿಭ್ರಷ್ಟತೆ—ಸ್ತ್ರೀಧನಕ್ಕೆವಾರಸಾಗಿ ಏರ್ಪಡುವ ಸ್ತ್ರೀ ವ್ಯಭಿಚಾರಿಣಿಯಾಗಿದ್ದರೂ, ಆಕೆಯ ಹಕ್ಕಿಗೆ ಬಾಧಕವುಂಟಾಗಲಾರದು. [ಇ. ಲಾ ರಿ. ೧ ಅ. ೪೬] ೧೮೬೬ ಸಂ॥ ೧೫ ನಂ॥ ಶಾಸನದಮೇರೆ, ಒಂದುಸ್ತ್ರೀ, ಪುನರ್ವಿವಾಹ ಮಾಡಿಕೊಂಡರೂ, ಆಕೆಗೆ ಮತ್ತೊಂದು ಸ್ತ್ರೀಯ ಸ್ತ್ರೀಧನದವಿಷಯಕವಾದ ವಾರಸುಹಕ್ಕು ನಾಶವಾಗಲಾರದು. ಮತ್ತು ೧೮೫೦ ಸಂ॥ ೨೧ ನಂ॥ ನಿಬಂಧನೆಮೇರೆ, ಸ್ತ್ರೀಧನ ವಿಷಯಕವಾದ ವಾರಸುಹಕ್ಕು ಜಾತಿಭ್ರಷ್ಟತೆಯಿಂದ ನಾಶವಾಗಲಾರದು. [೩೦೭ ನೆಯ ಪ್ಯಾರಾನೋಡು.]

ಪ್ರಥಮಭಾರ್ಯೆಯ ನಗಗಳನ್ನು ದ್ವಿತೀಯಭಾರ್ಯೆಗೆ ಕೊಡುವಿಕೆ-ದಾವಾಗಳು-ವಾಯಿದೆ.—ಅನೇಕರು ತಮ್ಮ ಮೊದಲನೆಯ ಹೆಂಡತಿಯರು ಸತ್ತಾಗ ಅವರ ಆಭರಣಾದಿಗಳನ್ನು ಕುವರಿಯರು ಮುಂತಾದ ವಾರಸರಿಗೆ ಕೊಡದೆ ತಮ್ಮ ಎರಡನೆಯ ಹೆಂಡತಿಗೆ ಕೊಡುವರು. ಇದು ಲಾ ಪ್ರಕಾರವಾಗಿ ಅಕ್ರಮವೆನಿಸಿದೆ. ಅಂತಹ ಸಂದರ್ಭಗಳಲ್ಲಿ ಸದರಿ ಸ್ತ್ರೀಧನಕ್ಕೆ ವಾರಸುಗಳಾಗಿರುವ ಕುವರಿಯರು ಮುಂತಾದವರು ದಾವಾತಂದು ಸದರಿ ನಗಗಳನ್ನಾದರೂ ಅದರ ಕಿಮ್ಮತ್ತನ್ನಾದರೂ ಹೊಂದಬಹುದು, ಆ ನಗಗಳು ಬದಲಾಯಿಸಲ್ಪಡದೆ, ಎರಡನೆಯ ಹೆಂಡತಿಯ ವಶದಲ್ಲಿರುವಾಗ ಆಕೆಯನ್ನುಕೂಡ ಪ್ರತಿವಾದಿಯನ್ನಾಗಿ ಸೇರಿಸಿ ದಾವಾತರಬೇಕು. ಈದಾವೆಗೆ ವಾಯಿದೆ ಪ್ರಥಮಭಾರ್ಯೆ ಸತ್ತುಹೋದಮೇಲೆ ೩ ಸಂ॥ ಗಳು. ಸದರಿ ಸ್ತ್ರೀಧನಕ್ಕೆ ವಾರಸುದಾರರಾದ ಕುವರಿ ಮುಂತಾದವರು ಮೈನರುಗಳಾಗಿದ್ದಪಕ್ಷದಲ್ಲಿ ವಾಯಿದೆ, ಮೈನಾರಿಟೀ ಕಳೆದದ್ದು ಮೊದಲು ೩ ಸಂ॥ ಗಳು.

ವಿವಾಹಬಂಧ.

ಭಾರ್ಯೆಯ ಸಂರಕ್ಷಣದ ಹಕ್ಕು-ರಜಸ್ವಲಾತ್ಪೂರ್ವವು— ವಿವಾಹಬಂಧದಿಂದ ದಂಪತಿಗಳು ಇಹಪರ ಕರ್ಮಗಳಲ್ಲಿ ಐಕ್ಯವಾಗುತ್ತಿರುವರು. ವಿವಾಹಬಂಧವೇರ್ಪಟ್ಟಬಳಿಕ ಮೊದಲು ಹೆಂಡತಿ ಎಷ್ಟು ಚಿಕ್ಕವಳಾದರೂ ಆಹುಡುಗಿಯ ಸಂರಕ್ಷಣದ ಹಕ್ಕು ಭರ್ತಾರನಿಗೆ ಸಲ್ಲುವುದೆಂದೂ, ಭರ್ತಾರನು ಮೈನರಾಗಿರುವಾಗ ಆತನ ಗಾರ್ಡಿಯನಿಗೆ (ಎಂದರೆ ಪೋಷಕನಿಗೆ) ಸಲ್ಲುವುದೆಂದೂ, ಧರ್ಮಶಾಸ್ತ್ರಗಳಲ್ಲಿ ಹೇಳಲ್ಪಟ್ಟದೆ. ಆದರೆ ಅನೇಕಪ್ರದೇಶಗಳಲ್ಲಿ ರಜಸ್ವಲೆಯಾಗುವವರೆಗೂ ಹುಡುಗಿ ತೌರುಮನೆಯಲ್ಲಿಯೇ ಇರುವ ಬಳಿಕೆ ಏರ್ಪಟ್ಟಿದೆ, ಅದಕ್ಕೆ ಮುಂಚೆಯೇ ಹೆಂಡತಿಯನ್ನು ತನ್ನ ಮನೆಗೆ ಕಳುಹಿಸೆಂದು ನಿರ್ಬಂಧಿಸುವದಕ್ಕೆ ಭರ್ತಾರನಿಗೆ ಬಾಧ್ಯತೆಯಿಲ್ಲ. (೨೩ ಸ ೧೭೮.)

ರಜಸ್ವಲಾನಂತರವು— ರಜಸ್ವಲಾನಂತರದಲ್ಲಿ ಹೆಂಡತಿಯನ್ನು ತನ್ನ ಮನೆಗೆ ಕಳುಹಿಸೆಂದು ಬಯಸುವದಕ್ಕೆ ಗಂಡನಿಗೆ ಸಂಪೂರ್ಣವಾದ ಹಕ್ಕು ಉಂಟು. ಹಾಗೆ ಕಳುಹಿಸದೆ ನಿರಾಕರಿಸಿದ ತಂದೆತಾಯಿಗಳಾದರೂ ಇತರ ಬಂಧುಗಳಾದರೂ ಆ ಹುಡುಗಿಯನ್ನು ತಮ್ಮ ಬಳಿಯಲ್ಲಿಟ್ಟುಕೊಂಡರೆ ಅವರ ಮೇಲೆ ಗಂಡನು ವ್ಯಾಜ್ಯ ತಂದು ಹೆಂಡತಿಯನ್ನು ತನ್ನ ಸ್ವಾಧೀನದಲ್ಲಿ ಇಟ್ಟುಕೊಳ್ಳಬಹುದು.

೧೨ ಸಂವತ್ಸರಗಳೊಳಗೆ ನಿಷೇಕವು.— ಹುಡುಗಿ ರಜಸ್ವಲೆಯಾದರೂ ೧೨ ವರ್ಷಗಳ ವಯಸ್ಸು ಆಗದಮುಂಚೆ ನಿಷೇಕವು ನಡೆಯಿಸಲ್ಪಡಕೂಡದು. ನಡೆಯಿಸಲ್ಪಟ್ಟರೆ, ಪಿನಲ್‌ಕೋಡು ೩೭೫ ಸೆ॥ ಪ್ರಕಾರವು "ಬಲಾತ್ಕಾರಸಂಭೋಗವು" ಎಂಬ ತಪ್ಪು ಸ್ಥಾಪಿಸಲ್ಪಟ್ಟು ೩೭೬ ಸೆ॥ ನಿಂದ ಯಾವಜ್ಜೀವವೂ ದ್ವೀಪಾಂತರವಾಸಕ್ಕಾದರೂ ೧೦ ಸಂವತ್ಸರಗಳವರೆಗೂ ಕಠಿನಶಿಕ್ಷೆಗಾದರೂ ಗಂಡನು ಪಾತ್ರನಾಗುವನು. ಆತನಿಗೆ ಹಿಂಬಲವಾಗಿದ್ದವರೂಕೂಡ ಹಾಗೆಯೇ ತಪ್ಪಿಗೆ ಒಳಗಾಗುವರು.

ಭಾರ್ಯಾಭರ್ತರ ಪ್ರಧಾನವಿಧಿ—ಹೆಂಡತಿ ತನ್ನ ಬಳಿಗೆ ಬಂದಮೇಲೆ ಅನ್ನವಸ್ತ್ರಗಳನ್ನು ಕೊಟ್ಟು ಆಕೆಯನ್ನು ಸಂರಕ್ಷಿಸುವದಕ್ಕೆ ಗಂಡನು ಬದ್ಧನಾಗಿರುವನು. ಆಕೆಯೂ ಗಂಡನ ಆಜ್ಞೆಗೊಳಪಟ್ಟು, ಆತನ ಇಷ್ಟಕ್ಕೆ ವಿರೋಧವಾಗಿ ಎಲ್ಲಿಗೂ ಹೋಗದೆ ಗೃಹಕೃತ್ಯಗಳನ್ನು ನೆಟ್ಟಗೆ ನೋಡಿಕೊಳ್ಳುತ್ತ ಆತನ ಬಳಿಯಲ್ಲಿದ್ದು ಸಂಸಾರ ಮಾಡುವದಕ್ಕೆ ಬದ್ಧಳಾಗಿರುವಳು, ಇಂತೆಂದು ಅಲಹಾಬಾದು ಹೈಕೋರ್ಟಿನಲ್ಲಿ ಜಡ್ಜಿಯಾಗಿದ್ದ ಮಹಮೂದುಯವರು ತೀರ್ಮಾನ ಮಾಡಿರುವರು. (ಇ. ಲಾ, ರಿ. ೧೩ ಅ. ೧೨೬.) ಗಂಡನು

ಎಲ್ಲಿಗೆ ತಾನು ಒಕ್ಕಲುಹೋದರೂ ಅಲ್ಲಿಗೆ ತಾನೂ ಹೋಗುವದಕ್ಕೆ ಹೆಂಡತಿ ಬದ್ಧಳಾಗಿರುವಳು.

ಹೆಂಡತಿಯನ್ನು ಸ್ವಾಧೀನ ಮಾಡಿಕೊಳ್ಳುವದಕ್ಕೆ ಗಂಡನಿಂದ ದಾವೆ—ಯುಕ್ತವಯಸ್ಸು ಬಂದಿರುವ ಹೆಂಡತಿ, ತನ್ನ ಗಂಡನಮನೆಗೆ ಬಾರದೆ ನಿರಾಕರಿಸಿದಪಕ್ಷದಲ್ಲಿ, ಅಲ್ಲದೆ ತನ್ನ ಗಂಡನ ಮನೆ ಬಿಟ್ಟು ಹೊರಟುಹೋದಪಕ್ಷದಲ್ಲಿ ಆಕೆಯಮೇಲೆಯಾದರೂ ತಾಯ್ತಂದೆಗಳು ಮುಂತಾದವರ ದುರ್ಬೋಧನೆಗಳಿಂದ ಅವರಬಳಿಯಲ್ಲಿ ಆಕೆ ಇದ್ದರೆ ಅವರಮೇಲಾದರೂ ವ್ಯಾಜ್ಯತಂದು ಹೆಂಡತಿ ತನ್ನಬಳಿ ಇರುವಂತೆ ಗಂಡನು ತೀರ್ಪು ಪಡೆಯಬಹುದು. (ಇ. ಲಾ. ರಿ. ೫ ಕ. ೫೦೦ ; ಇ. ಲಾ. ರಿ. ೧ ಬೊ. ೧೬೪.) ಕೋರ್ಟಿನವರು ತೀರ್ಮಾನ ಮಾಡಿದಮೇಲೆಯೂ ಗಂಡನ ಮನೆಗೆ ಹೋಗದೆ ಹೆಂಡತಿ ನಿರಾಕರಿಸಿದರೆ ಅವರು ಆಕೆಯನ್ನ ಬಲಾತ್ಕಾರವಾಗಿ ಗಂಡನಬಳಿಗೆ ಕಳುಹಿಸಲಾರರು. ಆದರೆ ಸಿವಿಲ್ ಪ್ರೊಸೀಜರ್‌ಕೋಡ್ ೨೬೦ ಸೆ॥ ಪ್ರಕಾರವೂ ಅಮಲು ನಡೆಯಿಸಹುದು. ಈ ಸೆಕ್ಷನಿನಿಂದ ಕೋರ್ಟಿನವರಿಗೆ ಉಚಿತವೆಂದು ತೋರಿದರೆ ಆರುಮಾಸಗಳವರೆಗೂ ಹೆಂಡತಿಯನ್ನು ಸಿವಿಲ್ ಖೈದಿನಲ್ಲಿ ಇರಿಸಬಹುದು; ಅಲ್ಲದೆ ಆಕೆಗೆ ಸ್ವಂತವಾದ ಆಸ್ತಿಯಾದರೂ ಸ್ತ್ರೀಧನವಾದರೂ ಇದ್ದರೆ ಅದನ್ನು ಜಪ್ತುಮಾಡಿದಮೇಲೆಯೂ ಒಂದು ಸಂವತ್ಸರದವರೆಗೂ ಗಂಡನ ಬಳಿಗೆ ಹೋಗದೆ ಆಕೆ ತಿರಸ್ಕರಿಸಿದರೆ, ಆ ಸೊತ್ತನ್ನು ಹರಾಜುಹಾಕಿ ಗಂಡನಿಗುಂಟಾದ ನಷ್ಟವನ್ನು ಕೊಡಿಸಬಹುದು. ಅಲ್ಲದೆ ಈ ಎರಡು ವಿಧಗಳಾಗಿಯೂ ಕೋರ್ಟಿನವರು ಅಧಿಕಾರವನ್ನು ಸಲ್ಲಿಸಬಹುದು. ಆದರೆ ಎಷ್ಟೋ ಪ್ರಬಲ ಕಾರಣವಿಲ್ಲದೆ ಸಾಧಾರಣವಾಗಿ ಖಯಿದು ವಿಧಿಸಲಾರರು. (ಇ. ಲಾ. ರಿ. ೫ ಕ. ೫೦೦; ಇ. ಲಾ. ರಿ. ೨ ಅ. ೫೦೬; ಇ. ಲಾ. ರಿ. ೧೩ ಅ. ೧೨೬; ಇ. ಲಾ ರಿ. ೧೦. ಬೊಂ. ೩೦೧- "ರುಕ್ಮಾಬಾಯಿ ಕೇಸು.")

ಈ ದಾವಾ ಯಾವಾಗ ಸಲ್ಲುವುದು ? ಯಾವಾಗ ಸಲ್ಲದು ?—ಹೆಂಡತಿಯನ್ನು ಸ್ವಾಧೀನಪಡಿಸಿಕೊಳ್ಳುವದಕ್ಕಾಗಿ ಗಂಡನು ವ್ಯಾಜ್ಯತಂದಾಗ. ಹೆಂಡತಿ ಆತನನ್ನುಬಿಟ್ಟಿರುವದಕ್ಕೆ ಎಷ್ಟೋ ದೊಡ್ಡಕಾರಣವಿದ್ದರೆಯೇ ಅಲ್ಲದೆ ಮಿಕ್ಕ ಸಮಯಗಳಲ್ಲಿ ಗಂಡನ ಬಳಿಯಲ್ಲಿರಬೇಕೆಂದೇ ಕೋರ್ಟಿನವರು ತೀರ್ಮಾನಮಾಡುವರು. ಅವಶ್ಯವೆಂದು ತೋರಿದರೆ, ಹೆಂಡತಿಯ ಕ್ಷೇಮಾರ್ಥವಾಗಿ ಅವರು ಏನಾದರೂ ಕೆಲವುಷರತ್ತುಗಳಿಗೆ ಗಂಡನನ್ನುಒಳಪಡಿಸಬಹುದು.

ಗಂಡನ ಸಂರಕ್ಷಣವು ನನಗವಶ್ಯವಿಲ್ಲವೆಂದಾದರೂ, ತನಗೇನೂ ಜೀವನಾಂಶ ಕೊಡಕೆಲಸವಿಲ್ಲವೆಂದಾದರೂ, ಆತನ ಬಳಿಯಲ್ಲಿರಲು ತನಗೆ ಎಷ್ಟುಮಾತ್ರವೂ ಇಷ್ಟವಿಲ್ಲವೆಂದಾದರೂ, ಹೇಳುವದಕ್ಕೆ ಹೆಂಡತಿ ಸ್ವತಂತ್ರೆಯಲ್ಲ. ವಿವಾಹಬಂಧದಿಂದ ಗಂಡನಿಗೆ ಒಳಪಟ್ಟು ಆತನಬಳಿ ಇರುವದಕ್ಕೆ ಹೆಂಡತಿ

ಬದ್ಧೆಯೆಂದು ಧರ್ಮಶಾಸ್ತ್ರಗಳು ಮೊರೆಯಿಡುವವು, ಹೆಂಡತಿ ವಿದ್ಯಾವತಿ ಸುಂದರಿ- ಗಂಡನು ಮೂಢನು, ಕುರುಡನು, ಹೆಳವನು, ಅಯೋಗ್ಯನು- ಹಿಗಿದ್ದರೂಕೂಡ ಗಂಡನನ್ನು ಬಿಟ್ಟುಬಿಡುವ ಸ್ವಾತಂತ್ರ್ಯವು ಹೆಂಡತಿಗಿಲ್ಲ ಇಂತಹ ಅಸಂದರ್ಭಗಳಲ್ಲಿ ಕೂಡ ಗಂಡನಬಳಿ ಇರಬೇಕೆಂದೇ ಕೋರ್ಟಿನ ವರು ತೀರ್ಮಾನಮಾಡುವರು. ಆದರೆ ಆತನ ಬಳಿಗೆಹೋಗದೆ ಹೆಂಡತಿ ತಿರಸ್ಕರಿಸಿದರೆ ಆಕೆಗೆ ಖೈದು ವಿಧಿಸಲಾರರು.

ತಾಯ್ತಂಡೆಗಳು ಅಣ್ಣತಮ್ಮಂದಿರು ಮುಂತಾದವರನ್ನು ಬಿಟ್ಟು ಬೇರೆ ಯಾಗಿದ್ದರೆಯೇ ಅಳಿಯನಬಳಿಗೆ ಹುಡುಗಿಯನ್ನು ಕಳುಹಿಸುವೆವೇಹೊರತು ಇಲ್ಲದಿದ್ದರೆ ಕಳುಹಿಸಲಾರೆವು ಎಂದು ಕೆಲವರು ಅತ್ತೆಮಾವಂದಿರು ಒಂದು ವೇಳೆ ಹೇಳುವರು. ಈ ವಾದವು ಶಾಸ್ತ್ರವಿರುದ್ಧವಾದುದರಿಂದ ಕೋರ್ಟಿ ನವರಿಂದ ಅಂಗೀಕರಿಸಲ್ಪಡಲಾರದು.

ಕುಷ್ಠರೋಗವು ಮುಂತಾದ ದುರ್ವ್ಯಾಧಿಗಳಿಂದ ಗಂಡನು ಪೀಡಿತನಾ ಗಿರುವಾಗ, ಗಂಡನಬಳಿ ಇರುವದರಿಂದ ಹೆಂಡತಿಗೆ ಅಪಾಯವಾದರೂ ಅನಾ ರೋಗ್ಯವಾದರೂ ಪ್ರಾಣಭಯವಾದರೂ ಉಂಟಾಗುವ ಸಂದರ್ಭದಲ್ಲಿಯೂ ಅತ್ತೆಯಮನೆಯಲ್ಲಿ ಅತ್ತೆಯಾದರೂ ಹೆಣ್ಣುಮಕ್ಕಳು ಮುಂತಾದವರಾದ ರೂ ಗಂಡನಾದರೂ ಹೆಂಡತಿಯನ್ನು ಅತಿ ಕಠಿನವಾದ ಕ್ರೌರ್ಯಕ್ಕೆ ಒಳಪಡಿಸಿ ಹಿಂಸಿಸುತ್ತಿರುವ ಸಂದರ್ಭದಲ್ಲಿಯೂ, ಆಕೆ ಗಂಡನಮನೆಯಲ್ಲಿರಬೇಕೆಂದು ಕೋರ್ಟಿನವರು ತೀರ್ಮಾನ ಮಾಡಲಾರರು (೧೧ ಮೂ, ಇ. ಅ, ೫೫೧; ಇ ಲಾ ರಿ ೧ ಬೊಂ. ೧೬೪ ; ಇ ಲಾ ರಿ ೫ ಕ ೫೦೦; ಇ ಲಾ ರಿ ೧೩ ಅ ೧೨೬.) ಮತ್ತು ಇಂತಹ ಕಾರಣಗಳಿಂದ ಬೇರೆಯಾಗಿರುವ ಭಾರ್ಯೆಗೆ ಕೋರ್ಟಿನ ವರು ಜೀವನಾಂಶವನ್ನು ಕೊಡಿಸಲಾರರು ಆ ಕ್ರೌರ್ಯವು ಮುಂತಾದವು ಸ್ಪಷ್ಟವಾಗಿ ರುಜುವಾತಾಗಬೇಕು. ಸಾಧಾರಣ ಗೃಹಕೃತ್ಯದ ಕಲಹಗಳು, ಮಿತವಾಗಿ ಶಿಕ್ಷಿಸಿ ಬುದ್ಧಿಹೇಳುವಿಕೆ, ಇವು ಸಾಲದು.

ಗಂಡನು ಬಯ್ದನೆಂದಾದರೂ, ಕೋಪಿಸಿಕೊಂಡನೆಂದಾದರೂ, ನಿಂದಿ ಸಿದನೆಂದಾದರೂ, ವ್ಯಭಿಚಾರ ಮಾಡಿದಂತೆ ತನ್ನಮೇಲೆ ಅನ್ಯಾಯವಾದ ಅಪವಾದವನ್ನು ಹಾಕಿದನೆಂದಾದರೂ, ತನ್ನೊಡವೆಗಳನ್ನು ತೆಗೆದುಕೊಂಡ ನೆಂದಾದರೂ, ನನ್ನಮನಸ್ಸಿಗೆ ಚಿಂತೆಯುಂಟಾಗಿಸಿದನೆಂದಾದರೂ ಹೇಳಿ ಆತನನ್ನು ಬಿಟ್ಟುಬಿಡುವದಕ್ಕೆ ಹೆಂಡತಿಗೆ ಹಕ್ಕಿಲ್ಲವು (ಇ ಲಾ ರಿ ೪ ಅ ೩೭೪.)

ಗಂಡನು ವ್ಯಭಿಚಾರದಲ್ಲಿ ಸಿಕ್ಕಿದರೂ, ಸೂಳೆಯನ್ನು ತಂದು ಮನೆಯ ಲ್ಲಿಯೇ ಇಟ್ಟುಕೊಂಡರೂ, ನಿಷ್ಕಾರಣವಾಗಿ ಎರಡನೆಯ ಮದಿವೆ ಮಾಡಿ ಕೊಂಡರೂ, ಕ್ರೌರ್ಯವು ಮುಂತಾದ ಕಾರಣಗಳಿಲ್ಲದಪಕ್ಷದಲ್ಲಿ ಆತನ ಬಳಿ ಯಲ್ಲಿಯೇ ಇರುವದಕ್ಕೆ ಹೆಂಡತಿ ಬದ್ಧೆಯಾಗಿರುವಳೆಂದು ತೀರ್ಮಾನಗಳು

ಮಾಡಲ್ಪಟ್ಟಿವೆ. (೧ ಮ ಹೈ ೩೦೫) ಆದರೆ ಜನಗಳು ಸೂಳೆಯರನ್ನಿಟ್ಟುಕೊಳ್ಳುವದು ಸರಿಯಲ್ಲ.

ಹಿಂದುವು—ಮಹಮ್ಮದೀಯಸ್ತ್ರೀಯ ಮನೆಯಲ್ಲಿ ತಂದಿಟ್ಟುಕೊಂಡರೆ ಗಂಡನು ಕುಲಭ್ರಷ್ಟನಾಗುವುದರಿಂದ ಅಂತಹ ಸಂದರ್ಭದಲ್ಲಿ ಆತನ ಬಳಿಯಲ್ಲಿರುವುದಕ್ಕೆ ಹೆಂಡತಿ ಬದ್ಧಳಾಗಲಾರಳೆಂದು ಕಲಕತ್ತಾ ಕೋರ್ಟಿನವರು ತೀರ್ಮಾನ ಮಾಡಿರುವರು. (೧೪ ಸ ೧೪೫.) ಈ ಕಾರಣದಿಂದಲೇ ಗಂಡನು ಕ್ರಿಸ್ತಮತದಲ್ಲಿ ಸೇರಿದರೆ ಆತನು ತನ್ನ ಹಿಂದೂಭಾರ್ಯೆಯನ್ನು ಸ್ವಾಧೀನಮಾಡಿಕೊಳ್ಳುವದಕ್ಕೆ ದಾವಾ ತರಕೂಡದು. (೫ ಸ. ೨೩೫) ೧೮೬೬ ಸಂ॥ ೨೧ ನಂ॥ ನಿಬಂಧನೆಪ್ರಕಾರ ಕ್ರಿಸ್ತಮತದಲ್ಲಿ ಸೇರಿದ ಗಂಡನ ಬಳಿ ಇರುವದಕ್ಕೆ ಆತನ ಹೆಂಡತಿ ಸಮ್ಮತಿಸದಿದ್ದರೆ, ಆತನಾದರೂ ಆಕೆಯಾದರೂ ಕೋರ್ಟಿನವರಿಗೆ ಅರ್ಜಿಕೊಟ್ಟು ವಿವಾಹವನ್ನು ರದ್ದು ಮಾಡಿಕೊಳ್ಳಬಹುದು.

ಮೇಲಣದಾವೆಗೆ ಲಿಮಿಟೇಷನ್ ಮತ್ತು ಸ್ಟಾಂಪು ಗಂಡಹೆಂಡರ ಸಂಬಂಧವು ಮರಣದೊಡನೆಯಲ್ಲದೆ ಬಿಟ್ಟುಹೋಗಲಾರದ್ದರಿಂದ ಹೆಂಡತಿಯನ್ನು ಸ್ವಾಧೀನ ಮಾಡಿಕೊಳ್ಳುವುದಕ್ಕಾಗಿ ತರಲ್ಪಡುವ ವ್ಯಾಜ್ಯಗಳಿಗೆ ಲಿಮಿಟೇಷನ್ ಎಂದರೆ—ಕಾಲದೋಷವು ಇಲ್ಲ. (ಇ. ಲಾ. ರಿ. ೧೩. ಅ ೧೨೬) ಈ ವ್ಯಾಜ್ಯಕ್ಕೆ ಸ್ಟಾಂಪು ೫ ರೂಪಾಯಿ.

ಹೆಂಡತಿಯನ್ನು ಸ್ವಾಧೀನ ಮಾಡಿಕೊಳ್ಳುವದಕ್ಕಾಗಿ ತರಲ್ಪಟ್ಟ ವ್ಯಾಜ್ಯವು ತಳ್ಳಿಹಾಕಲ್ಪಟ್ಟರೂ ಅದರಿಂದ ದಾಂಪತ್ಯಬಂಧವು ಬಿಡಿಸಲ್ಪಟ್ಟಂತೆ ಭಾವಿಸಕೂಡದು. ಗಂಡನನ್ನು ಬಿಟ್ಟು ಬೇರೆಯಿದ್ದರೂ ಹೆಂಡತಿ ಪುನರ್ವಿವಾಹಕ್ಕೆ ತಕ್ಕವಳಾಗಲಾರಳು.

ಹೆಂಡತಿಗಿರುವ ಜೀವನಾಂಶದ ಹಕ್ಕು— ತನ್ನೊಡನೆ ಸಂಸಾರ ಮಾಡುತ್ತಿರುವಾಗಲೂ, ತಕ್ಕಕಾರಣದಿಂದ ಬೇರೆಯಾಗಿರುವಾಗಲೂ, ಹೆಂಡತಿಯನ್ನು ಸಂರಕ್ಷಿಸುವದಕ್ಕೆ ಗಂಡನು ಬಾಧ್ಯನಾಗಿರುವನು. ಆದರೆ ನಿಷ್ಕಾರಣವಾಗಿ ಗಂಡನನ್ನುಬಿಟ್ಟುಬಿಟ್ಟು ಆಕೆ ಬೇರೆಯಾಗಿರುವಾಗ ಜೀವನಾಂಶಕೊಡುವದಕ್ಕೆ ಆತನು ಬಾಧ್ಯನಲ್ಲ. (ಇ. ಲಾ. ರಿ. ೨ ಬೊಂ. ೬೩೪)

ಹೆಂಡತಿ ಯಾರನ್ನಾದರೂ ಎತ್ತಿಹಾಕಿಕೊಂಡು ಹೊರಟುಹೋದಮೇಲೆ ಪಶ್ಚಾತ್ತಾಪವುಂಟಾಗಿ ಗಂಡನ ಬಳಿಗೆ ಬಂದರೆ ಆಕೆಯನ್ನು ತನ್ನ ಮನೆಯಲ್ಲಿರಿಸಿಕೊಳ್ಳುವದಕ್ಕೆ ಗಂಡನು ಬದ್ಧನಲ್ಲ. ವ್ಯಭಿಚಾರಿಯಾದ ಹೆಂಡತಿಯನ್ನು ತನ್ನಮನೆಯಿಂದ ಹೊರಡಿಸಿ ಜೀವನಾಂಶ ಕೊಡದೆ ಇರಬಹುದು. ಆದರೆ, ಆಮೇಲೆ ವ್ಯಭಿಚಾರವೃತ್ತಿಯನ್ನು ಬಿಟ್ಟಿರುವಳಾದರೆ, ದಯೆಮಾಡಿ ಅಂಬಲಿ

ನೀರಿಗೆ ಆಧಾರ ತೋರಿಸಬೇಕೆಂದು ಧರ್ಮಶಾಸ್ತ್ರಗಳಲ್ಲಿ ಹೇಳಲ್ಪಟ್ಟಿದೆ.

ಆರ್‌॥ ವೆಂ॥ ಹಂ॥ ಲ್ಹಾ॥

ಮೈನರುಗಳ ಸಂರಕ್ಷಣೆ.

ಯುಕ್ತವಯಸ್ಸು.—ಮೈನರುಗಳೆಂದರೆ ಯುಕ್ತವಯಸ್ಸು ಬಾರದವರು. ಹದಿನಾರು ಸಂವತ್ಸರಗಳ ಪ್ರಾಯದಲ್ಲಿ ಸ್ತ್ರೀಪುರುಷರಿಗೆ ಬಾಲ್ಯದ ಬಿಟ್ಟು ಯುಕ್ತವಯಸ್ಸು ಬಂದಂತೆ ಎಣಿಸಲ್ಪಡುವುದೆಂದು ಹಿಂದೂ ಧರ್ಮ ಶಾಸ್ತ್ರಗಳಲ್ಲಿ ಹೇಳಲ್ಪಟ್ಟಿದೆ. ಹಿಂದಣಕಾಲದಲ್ಲಿ ತೀರ್ಮಾನಗಳುಕೂಡ ಹಾಗೆಯೇ ಮಾಡಲ್ಪಡುತ್ತಿದ್ದುವು. (ಇ ಲಾ ರಿ ೧ ಕ ೧೦೮; ೧೨ ಬೊಂ ಹೈ ೨೮೧, ೨೯೦.) ಆದರೆ, ಈಗ ಈ ವಿಷಯವಾಗಿ ೧೮೭೫ ಸಂ॥ ೯ ನಂ॥ ಇಂಡಿಯನ್ ಮೆಜಾರಿಟೀ ಆಕ್ಟು ಜಾರಿಯಲ್ಲಿದೆ. ಈ ನಿಬಂಧನೆ ಪ್ರಕಾರವಾಗಿ ಬ್ರಿಟಿಷ್ ಇಂಡ್ಯಾದಲ್ಲಿ ನಿವಸಿಸಿರುವ ಜನರಿಗೂ ೧೮ ಸಂ॥ ಗಳ ವಯಸ್ಸು ಮುಗಿದೊಡನೆಯೇ ಯುಕ್ತವಯಸ್ಸು ಬಂದಂತೆ ಎಣಿಸಲ್ಪಡುವುದು; ಕೋರ್ಟಾಫ್ವಾರ್ಡ್ಸ್‌ನವರ ಸಂರಕ್ಷಣೆಯಲ್ಲಿರುವ ಮೈನರುಗಳು ಮಾತ್ರವು ೨೧ ಸಂ॥ ವಯಸ್ಸು ಮುಗಿದಮೇಲೆ ಯುಕ್ತವಯಸ್ಕರಾಗಿ ಭಾವಿಸಲ್ಪಡುವರು.

ಮಕ್ಕಳ ರಕ್ಷಣದ ಹಕ್ಕು.—ಯುಕ್ತವಯಸ್ಸುಬಾರದ ಮಕ್ಕಳ ರಕ್ಷಣದ ಹಕ್ಕು ಹಿಂದೂ ಧರ್ಮಶಾಸ್ತ್ರಗಳಪ್ರಕಾರವು ಮೊದಲು ತಂದೆಯದು; ಆಮೇಲೆ ತಾಯಿಯದು; ತಾಯಿ ಇಲ್ಲದಾಗಲೂ ಸಂರಕ್ಷಕಿಯಾಗಿರಲು ತಕ್ಕವಳಲ್ಲವಾಗಿರುವಾಗಲೂ ಅಣ್ಣನು, ಚಿಕ್ಕಪ್ಪನು, ದೊಡ್ಡಪ್ಪನು ಮುಂತಾದ ತಂದೆಯಕಡೆಯವರು. ಅವರಾದಮೇಲೆ ತಾಯಿಕಡೆಯವರು ಸಂರಕ್ಷಕರಾಗುವರು. ೧೪೫೭ ಸಂ॥ ಮದರಾಸು ತೀರ್ಮಾನಗಳು ೧೦೫; ೧೮೫೮ ಸಂ। ಬಂ ಸ ತೀ ೩೨೯

ಮಿಥಿಲದೇಶದಲ್ಲಿ ಸಲ್ಲುತ್ತಿರುವ ಆಚಾರಗಳಪ್ರಕಾರವು ಯುಕ್ತವಯಸ್ಸುಬಾರದ ಮಕ್ಕಳನ್ನು ಬೆಳೆಯಿಸಿ ಪೋಷಿಸುವ ವಿಷಯವಾಗಿ ತಂದೆಗಿಂತಲೂ ತಾಯಿಗೇ ಅಧಿಕ ಸ್ವಾತಂತ್ರ್ಯವುಂಟೆಂದು ತೀರ್ಮಾನಿಸಲ್ಪಟ್ಟಿದೆ. (ಇ ಲಾ. ರಿ. ೫ ಕ. ೪೩.)

ಅವಿಭಕ್ತ ಕುಟುಂಬದಲ್ಲಿ ಮೈನರಿಗೆ ಸೇರಬೇಕಾದ ಆಸ್ತಿ ಯಾರಸ್ವಾಧೀನದಲ್ಲಿದ್ದರೂ ಆತನ ಶರೀರ ಸಂರಕ್ಷಣದ ಹಕ್ಕು ಮಾತ್ರವು ತಾಯಿಗೆ ಸಲ್ಲುವದು. (೩ ಮ ಹೈ ೬೯; ಇ ಲಾ ರಿ ೫ ಕ ೨೧೯; ೧೮೪೨ ಸಂ ಬಂ ಸ ತೀ ೫೫೭.)

ಮಕ್ಕಳ ರಕ್ಷಣ ವಿಷಯಕವಾಗಿ, ಚಿಕ್ಕಪ್ಪ ದೊಡ್ಡಪ್ಪ ಮುಂತಾ

ವರಿಗಿಂತಲೂ ಸವತಿತಾಯಿಗೆ ಹೆಚ್ಚು ಹಕ್ಕು ಇದೆ (೧ ಮಾರ್ಲೀಡ್ರೈಜೆಸ್ಟ್, ೨೭೫. ಈ ವಿಷಯವಾಗಿ ೨ ಬಾರೋ. ೧೪೪, ೭ ಸ ೩೨೧ ಕೂಡ ನೋಡಬೇಕು.

ಸೂಳೆಯ ಮಕ್ಕಳ ರಕ್ಷಣವು—ಇರಿಸಿಕೊಂಡ ಸೂಳೆಗೆ ಹುಟ್ಟಿದ ಮಕ್ಕಳಿಗೆ ಶಾಸ್ತ್ರರೀತಿಯಿಂದ ಸೂಳೆಯೇ ಸಂರಕ್ಷಕಿ. ಆದರೆ ತಂದೆಯ ಸಂರಕ್ಷಣೆಯಲ್ಲಿಯಾದರೂ ತಂದೆ ಏರ್ಪಡಿಸಿದವರ ಸಂರಕ್ಷಣದಲ್ಲಾದರೂ ಬೆಳೆಯುತ್ತಿದ್ದ ಪಕ್ಷದಲ್ಲಿ, ತಾಯಿಯಹಕ್ಕು ತಪ್ಪಿಹೋಗುವುದು. ಆಮೇಲೆ ತನ್ನಮಕ್ಕಳನ್ನು ತನ್ನಬಳಿಗೆ ಕರೆದುಕೊಂಡು ಹೋಗುವದಕ್ಕೆ ಸೂಳೆಯಿಂದ ದಾವಾತರಲ್ಪಟ್ಟರೆ ಅದು ಅಂಗೀಕರಿಸಲ್ಪಡದು. ಇನ್ನೂ ಸೂಳೆತನದಿಂದಲೇ ಆ ಮನುಷ್ಯನು ಜೀವಿಸುತ್ತಿರುವಾಗಲೂ, ಅವಳ ಸಂರಕ್ಷಣೆ ಮಕ್ಕಳ ಕ್ಷೇಮಕ್ಕೆ ಭಂಗಕರವಾಗಿರುವಾಗಲೂ, ತಂದೆ ಏರ್ಪಡಿಸಿದ ಸಂರಕ್ಷಣೆಯನ್ನು ತಪ್ಪಿಸಲು ಕೋರ್ಟನವರು ಸುತರಾಂ ಇಷ್ಟಪಡರು. (ಇ ಲಾ ರಿ ೪ ಕ ೩೭೪; ಇ ಲಾ ರಿ ೧೨ ಮ ೬೭.)

ವೈನರು ವಿತಂತುವಿನ ರಕ್ಷಣೆ—ವೈನರು ವಿತಂತುಗಳಿಗೆ ಶಾಸ್ತ್ರಪ್ರಕಾರವಾಗಿ ಆಕೆಯ ಗಂಡನ ಸಪಿಂಡರೇಸಂರಕ್ಷಕರಾಗುತ್ತಿರುವರು. ಆಕೆಯ ತಂದೆಯಾದರೂ ಅಣ್ಣತಮ್ಮಂದಿರಾದರೂ ತಂದೆಯ ಕಡೆಯವರೂ ಶಾಸ್ತ್ರಪ್ರಕಾರವಾಗಿ ಸಂರಕ್ಷಕರಾಗುವರು. (ಇ ಲಾ ರಿ ೧೬ ಕ ೫೮೪.)

ರಕ್ಷಣದ ಹಕ್ಕುಯಾವಾಗ ತಪ್ಪಿಹೋಗುವದು? ಸಂರಕ್ಷಕರ ದುಷ್ಪ್ರವರ್ತನವು— ವೈನರುಗಳನ್ನು ಸಂರಕ್ಷಿಸುವ ಸ್ವಾತಂತ್ರ್ಯವು ಶಾಸ್ತ್ರಪ್ರಕಾರವಾಗಿ, ತಂದೆ, ತಾಯಿ, ಅಣ್ಣನು ಮುಂತಾದವರಿಗೆ ಸಂದಿದ್ದರೂ, ಇವರ ದುಷ್ಪ್ರವರ್ತನದ ಮೊದಲಾದ ಕಾರಣಗಳಿಂದ ಸದರಿ ವೈನರುಗಳ ಶ್ರೇಯಸ್ಸಿಗೂ ಕ್ಷೇಮಕ್ಕೂ ಹಾನಿಕರವಾಗಿರುವ ಸಂದರ್ಭಗಳಲ್ಲಿ ಯಾರಾದರೂ ಬಂಧುಗಳಾದರೂ ಸ್ನೇಹಿತರಾದರೂ ಕೋರ್ಟನಲ್ಲಿ ಅರ್ಜಿ ದಾಖಲು ಮಾಡಿ ಸದರಿ ಸಂರಕ್ಷಕರನ್ನು ತಪ್ಪಿಸಿ ಮತ್ತೊಬ್ಬರನ್ನು ಸಂರಕ್ಷಕರನ್ನಾಗಿ ಏರ್ಪಡಿಸಬಹುದು. (೩ ಮ ಹೈ ೬೯; ೧೪ ಮೂ ಇ ಅ ೩೦೯; ಇ ಲಾ ರಿ ೧ ಅ ೫೪೯, ೫೯೮.)

ದತ್ತು ಕೊಡುವಿಕೆ— ಕುಮಾರನನ್ನು ದತ್ತುಕೊಟ್ಟಮೇಲೆ ಹೆತ್ತ ತಾಯ್ತಂದೆಗಳ ರಕ್ಷಣದ ಹಕ್ಕು ತಪ್ಪಿಹೋಗುವದು. ಆದರೆ ದತ್ತುತಾಯ್ತಂದೆಗಳಾದರೂ ಅವರ ಇಲಾಖೆಯವರಾದರೂ ದತ್ತಪುತ್ರರವಿಷಯದಲ್ಲಿ ವಿರೋಧವನ್ನು ವಹಿಸಿ ಆತನನ್ನು ಹಿಂಸಿಸುತ್ತಿರುವಾಗಲೂ ಮತ್ತೆ ಯಾವಕಾರಣದಿಂದಾದರೂ ಅವರ ಸಂರಕ್ಷಣೆ ಆತನ ಕ್ಷೇಮಕ್ಕೆ ಹಾನಿಕರವಾಗಿರುವಾಗಲೂ ಜನಕತಂದೆ ಮುಂತಾದವರು ರಕ್ಷಕರಾಗಬಹುದು. (೩ ಬೊಂ ಹೈ ೧)

ತಾಯಿ ಪುನರ್ವಿವಾಹ ಮಾಡಿಕೊಳ್ಳುವಿಕೆ.—ಏಂತಂತು ಪುನರ್ವಿವಾ ವನ್ನು ಮಾಡಿಕೊಂಡರೆ ಪ್ರಥಮ ಭರ್ತಾರನಿಂದ ಆಕೆಗುಂಟಾದ ಮಕ್ಕಳನ್ ಆಕೆಯ ರಕ್ಷಣದೊಳಗಿನಿಂದ ತಪ್ಪಿಸಿ ತಮ್ಮ ಸಂರಕ್ಷಣದಲ್ಲಿರಿಸಬೇಕೆಂದ ಬಯಸಿ ಪ್ರಥಮ ಭರ್ತಾರನ ಬಂಧುಗಳು ಕೋರ್ಟಿನಲ್ಲಿ ಅರ್ಜಿ ದಾಖಲ ಮಾಡಬಹುದು. ಅದರಮೇಲೆ ಕೋರ್ಟಿನವರು ಅವರಬಳಿ ತಕ್ಕ ಜಾಮೀನ ತೆಗೆದುಕೊಂಡು, ಸದರಿ ಮಕ್ಕಳನ್ನು ಅವರಿಗೆ ಒಪ್ಪಿಸಲುಳ್ಳವರು. (೧೮೫ ಸಂ|| ೧೫ ನಂ|| ಆಕ್ಟು, ೩ ಸೆ.)

ತಾಯಿ ಬೇರೆ ಮತದಲ್ಲಿ ಸೇರುವಿಕೆ.—ಮಕ್ಕಳಮತವು ತಂದೆಯಮ ವನ್ನನುಸರಿಸಿಯೇ ಇರಬೇಕು. ಆದುದರಿಂದ, ತಾಯಿ ಕುಲಭ್ರಷ್ಟೆಯಾದ ಗಲೂ ಕ್ರಿಸ್ತುಮತವು ಮುಂತಾದ ಅನ್ಯಮತಗಳಲ್ಲಿ ಸೇರಿದಾಗಲೂ, ಮೈ ರುಮಕ್ಕಳ ವಿಷಯಕವಾದ ರಕ್ಷಣದ ಹಕ್ಕು ಆಕೆಗೆ ಬಿಟ್ಟುಹೋಗುವುದು ಆಕೆಯ ಬಳಿಯಲ್ಲಿಯೇ ಇದ್ದು ಆಕೆಯ ಮತವನ್ನೇ ಅವಲಂಬಿಸುವುದಕ ಯಿಷ್ಟಪಟ್ಟರೂ, ಅವರನ್ನು ಆಕೆಯ ಸಂರಕ್ಷಣದೊಳಗಿನಿಂದ ಕೋರ್ಟಿ ವರು ಬಿಡಿಸುವರು. ಆದರೆ, ಮಕ್ಕಳು ಸಾಮಾನ್ಯವಾಗಿ ಯುಕ್ತವಯಸ್ಸ ಬಂದವರೂ ಯುಕ್ತಾಯುಕ್ತ ವಿವೇಕವುಳ್ಳವರೂ ಆಗಿ ತಾಯಿಯ ಸಂರಕ್ ಣದಿಂದ ಅವರನ್ನು ತಪ್ಪಿಸುವುದು ಅವರ ಶ್ರೇಯಸ್ಸಿಗೆ ಭಂಗಕರವಾಗುವಂ ಕಂಡುಬಂದಾಗ, ಅವರ ಇಷ್ಟಕ್ಕೆ ವಿರೋಧವಾಗಿ ಕೋರ್ಟಿನವರು ತೀರ್ಮಾ ನಮಾಡಲಾರರು. (೧೪ ಮೂ ಇ ಅ ೩೧೯.)

ಗಂಡನನ್ನು ಬಿಟ್ಟುಹೆಂಡತಿ ಬೇರೆಇರುವವಳಾದರೆ ಮಕ್ಕಳ ರಕ್ಷಣೆ ವಿ ಯವಾಗಿ ಆಕೆಗೆ ಯಾವಹಕ್ಕೂ ನಿಲ್ಲಲಾರದು. ಗಂಡನ ಇಷ್ಟಕ್ಕೆ ವಿರೋ ವಾಗಿ ಮಕ್ಕಳನ್ನು ಸಂಗಡ ಕರೆದುಕೊಂಡುಹೋಗಿ ಹೆಂಡತಿ ಬೇರೆಯಾಗಿ ರುವಳಾದರೆ, ಗಂಡನು ವ್ಯಾಜ್ಯತಂದು ಮಕ್ಕಳನ್ನು ಸ್ವಾಧೀನ ಪಡಿಸಿಕೊ ಳ್ಳಬಹುದು. (ಇ ಲಾ ರಿ ಅ ಕ ೩೬೯.)

ತಂದೆ ಬೇರೆಮತದಲ್ಲಿ ಸೇರುವಿಕೆ— ತಂದೆ ಕ್ರೈಸ್ತಮತವು ಮುಂತಾದ ಮತಗಳನ್ನವಲಂಬಿಸಿ ಜಾತಿಭ್ರಷ್ಟನಾದರೂ, ಆತನಿಗೆ ತನ್ನ ಮೈನರು ಮಕ್ ಳುವಿಷಯಕವಾಗಿರುವ ರಕ್ಷಣದ ಹಕ್ಕು ತಪ್ಪಿಹೋಗದು. ಆದರೆ ಸದರಿ ಅನ್ಯಮತಾವಲಂಬನದೊಡನೆ ದುರ್ನೀತಿವ್ಯಾಪಾರವೂ ದುಷ್ಟಪ್ರವರ್ತನವೂ ಸೇರಿದ್ದು ಮಕ್ಕಳ ಶ್ರೇಯಸ್ಸಿಗೆ ಹಾನಿಕರವಾಗಿದ್ದಪಕ್ಷದಲ್ಲಿ ತಂದೆಯ ಬಳಿ ಯಲ್ಲಿರಬೇಕೆಂದು ಮಕ್ಕಳನ್ನು ಕೋರ್ಟಿನವರು ನಿರ್ಬಂಧಪಡಿಸಲಾರರು. (ಪೆರ್ರೀಯವರ ಓರಿಯಂಟಲ್ ಕೇಸಸ್ ೯೧.)

ಮೈನರುಗಳು ಅನ್ಯಮತವನ್ನವಲಂಬಿಸುವಿಕೆ—ತಮ್ಮ ಮನಸ್ಸು ಬಂ ದಂತೆ ಸ್ವೇಚ್ಛೆಯಾಗಿರುವದಕ್ಕೆ ಮೈನರುಗಳು ಸ್ವತಂತ್ರರಲ್ಲವು. ಯುಕ್

ವಯಸ್ಸು ಬರುವವರೆಗೂ ಸಂರಕ್ಷಕರ ಆಜ್ಞೆಗೆ ಒಳಪಟ್ಟು ಅವರ ಬಳಿಯಲ್ಲಿಯೇ ಇರುವದಕ್ಕೆ ಮೈನರುಗಳು ಬದ್ಧರಾಗಿರುವರು. ಆದುದರಿಂದ ಕ್ರೈಸ್ತಮತವು ಮುಂತಾದ ಅನ್ಯಮತಗಳಲ್ಲಿ ಸೇರತಕ್ಕ ಸ್ವಾತಂತ್ರ್ಯವವರಿಗಿಲ್ಲವು ಯುಕ್ತಾಯುಕ್ತ ವಿವೇಕವುಂಟಾಗಿದ್ದು ಅನ್ಯಮತವನ್ನವಲಂಬಿಸಿದ ಮೈನರುಗಳನ್ನು ಅವರ ಇಷ್ಟಪ್ರಕಾರವಾಗಿ ಬಿಟ್ಟುಬಿಡಬೇಕೆಂದು ಪೂರ್ವ ಕಾಲದಲ್ಲಿ ಕೆಲವು ತೀರ್ಮಾನಗಳು ಮಾಡಲ್ಪಟ್ಟವು. ಆದರೆ ಈಚೀಚೆಗೆ ೧೨, ೧೪, ೧೫ ಸಂ॥ ಗಳ ಪ್ರಾಯವುಳ್ಳ ಮೈನರುಗಳು ಕ್ರೈಸ್ತಮತವನ್ನವಲಂಬಿಸಿ ತಮ್ಮ ನವೀನ ಗುರುಸ್ವಾಮಿಗಳ ಬಳಿಯಲ್ಲಿಯೇ ಇರುವೆವೆಂದು ಅವರೆಷ್ಟು ಬಯಸಿಕೊಂಡರೂ. ಅವರ ಇಷ್ಟವನ್ನು ಅನುಸರಿಸದೆ ಅವರನ್ನು ಸಂರಕ್ಷಕರಿಗೆ ಒಪ್ಪಿಸುವಂತೆ ತೀರ್ಮಾನಗಳು ಮಾಡಲ್ಪಟ್ಟವು (ಪೆರ್ರೀಯವರ ಓರಿಯಂಟಲ್ ಕೇಸಸ್, ೧೦೩; ಹೈಡ್‌ಯವರ ರಿಪೋರ್ಟುಗಳು ೧೧೧.) ಈ ತೀರ್ಮಾನಗಳನ್ನು ಕೆಲವು ಸಂವತ್ಸರಗಳ ಕೆಳಗೆ ಮದರಾಸು ಹೈಕೋರ್ಟಿನವರು ಚೆನ್ನಾಗಿ ಪರಿಶೀಲಿಸಿ ೧೮೭೫ ಸಂ॥ ೯ ನಂ॥ ನಿಬಂಧನೆಯ ಪ್ರಕಾರವಾಗಿ ಮೈನಾರ್ಟಿ ಕಳೆವವರೆಗೂ. ಎಂದರೆ ೧೮ ಸಂವತ್ಸರಗಳ ಪ್ರಾಯವತಿಕ್ರಮಿಸುವವರೆಗೂ ಮೈನರುಗಳು ತಮ್ಮ ಸಂರಕ್ಷಕರಿಗೆ ಒಳಪಟ್ಟು ಅವರಬಳಿಯಲ್ಲಿಯೇ ಇರುವದಕ್ಕೆ ಬದ್ಧರಾಗಿರುವರೆಂದು ತೀರ್ಮಾನಿಸಿದರು. (ಇ ಲಾ ರಿ ೯ ಮ ೩೯೧.) ಆದುದರಿಂದ ಮೈನರುಗಳು ಅನ್ಯಮತದಲ್ಲಿ ಸೇರಿದಾಗ ತಾಯಿತಂದೆಗಳು ಮುಂತಾದ ಸಂರಕ್ಷಕರು ಅವರನ್ನು ಬಲವಂತವಾಗಿ ತಮ್ಮಬಳಿಗೆ ಕರದುಕೊಂಡು ಹೋಗಬಹುದು. ಮತ್ತು ಸದರಿ ಮೈನರುಗಳನ್ನು ಕಳುಹಿಸದೆ ತಮ್ಮಬಳಿಯಲ್ಲಿಟ್ಟುಕೊಳ್ಳುವ ಮತಗುರುಗಳಮೇಲೆ ದಾವಾತರಬಹುದು.

೧೪ ಸಂ॥ ಗಳ ಪ್ರಾಯಕ್ಕೆ ಒಳಪಟ್ಟ ಗಂಡುಮಕ್ಕಳನ್ನಾದರೂ ೧೬ ಸಂ॥ ಗಳ ಪ್ರಾಯಕ್ಕೆ ಒಳಪಟ್ಟ ಹೆಣ್ಣುಮಕ್ಕಳನ್ನಾದರೂ ಅವರ ಸಂರಕ್ಷಕರ ಸಮ್ಮತಿಯಿಲ್ಲದೆ ಕ್ರೈಸ್ತಮತವು ಮುಂತಾದ ಅನ್ಯಮತಗಳಿಗೆ ಸೇರಿಸಿಕೊಳ್ಳುವವರು ಪಿನಲ್‌ಕೋಡ್ ೩೬೧ ಸೆ॥ ಪ್ರಕಾರವಾಗಿ ಅಪರಾಧಿಗಳಾಗುವರು. ಅಂತಹವರಿಗೆ ೩೬೩ ಸೆ॥ ಪ್ರಕಾರವಾಗಿ ೭ ಸಂ॥ ಗಳವರೆಗೆ ಶಿಕ್ಷೆ ವಿಧಿಸಲ್ಪಡಬಹುದು.

ಮೈನರುಗಳ ಒಡಂಬಡಿಕೆಗಳು— ಮೈನರಿನಿಂದ ಏರ್ಪಡಿಸಿಕೊಳ್ಳಲ್ಪಡುವ ಕಂಟ್ರಾಕ್ಟುಗಳು (ಒಡಂಬಡಿಕೆಗಳು) ಆತನಿಗೆ ಲಾಭಕರವಾಗಿದ್ದರೆಯಲ್ಲದೆ ಅವುಗಳನ್ನು ನೆರವೇರಿಸಲು ಆತನು ಬದ್ಧನಲ್ಲವು. ಆದರೆ ಯುಕ್ತವಯಸ್ಸು ಬಂದಮೇಲೆ ಸದರಿ ಒಡಂಬಡಿಕೆಗಳನ್ನು ಊರ್ಜಿತಪಡಿಸಿದ

ಪಕ್ಷದಲ್ಲಿ ಆತನು ಬದ್ಧನಾಗುವನು. (೩ ಸ ೧೦; ೧೩ ಸಂ೬೬, ೧೭ ಇಂಡಿಯನ್ ಕಂಟ್ರಾಕ್ಟ ಆಕ್ಟು, ಸೆ ೧೧)

ಆದುದರಿಂದ ಮೈನರಿಗೆ ಸಾಲಕೊಟ್ಟಪಕ್ಷದಲ್ಲಿ ಆತನಮೇಲೆ ದಾವ ಸಲ್ಲದು. ಮೈನರುಬಳಿಯಲ್ಲಿ ಸಾಲ ತೆಗೆದುಕೊಂಡರೆ ಆತನು ದಾವಾತ ಬಹುದು. (ಇ ಲಾ ರಿ ೧೨ ಬೊಂ ೫೦; ಇ ಲಾ ರಿ ೧೮ ಕ ೨೫೯.) ಜೀವ ಕ್ಕೆ ಆವಶ್ಯಕವಾದ ಸಾಮಾನುಗಳ ನಿಮಿತ್ತವಾಗಿ ಸಾಲಗಳು ಮಾಡಲ್ಪಟ್ಟ ರೆ, ಅವುಗಳನ್ನು ತೀರಿಸುವದಕ್ಕೆ ಮೈನರು ಬದ್ಧನಾಗಿರುವನು. (ಇಂಡಿ ಯನ್ ಕಂಟ್ರಾಕ್ಟ ಆಕ್ಟು, ಸೆ ೬೮.)

ಗಾರ್ಡಿಯನ್‌ಗೆ ಇರುವ ಅಧಿಕಾರವು— ಮೈನರು ತರಫಿನಲ್ಲಿ ಆಸ್ತಿ ಮೇನೇಜುಮೆಂಟು ಮಾಡುವ ವಿಷಯದಲ್ಲಿ ಆತನ ಗಾರ್ಡಿಯನು ಎಂದರೆ— ಸಂರಕ್ಷಕನು ನಡೆಯಿಸುವ ಕಾರ್ಯಗಳಿಂದ ಸದರಿ ಮೈನರು ಬದ್ಧನಾಗ ವನು. ಆದರೆ ಈ ಕಾರ್ಯಗಳು ಆವಶ್ಯಕಗಳಾಗಿಯೂ, ಮೈನರಿಗೆ ಲಾಭ ಕರಗಳಾಗಿಯೂ, ಯುಕ್ತವಯಸ್ಸು ಬಂದಮೇಲೆ ಮೈನರು ತಾನೇನೆರವೆ ರಿಸಿಕೊಳ್ಳತಕ್ಕವುಗಳಾಗಿಯೂ ಇರಬೇಕು. ಮತ್ತು ದುರುದ್ದೇಶದಿಂದ ದರೂ ಗಾರ್ಡಿಯನ್ನಿನ ಸ್ವಲಾಭ ನಿಮಿತ್ತಕವಾಗಿಯಾದರೂ ನಡೆಯಲ್ಪಟ್ಟ ರಕೂಡದು. (೨ ಮ ಹೈ ೪೭; ಇ ಲಾ ರಿ ೧೨ ಬೊಂ. ೬೮೬; ಇ ಲಾ ರಿ ೧೪ ಬೊಂ ೫೬೨ ಇ ಲಾ ರಿ ೪ ಕ ೭೬; ಇ ಲಾ ರಿ ೫ ಕ ೩೬೩; ಇ ಲಾ ರಿ ಅ ೫೩೫; ಇ ಲಾ ರಿ ೯ ಬೊಂ ३೬೫; ೧೦ ಮೂ ಇ ಅ ೪೫೪; ೬ ಮೂ ಇ ಅ ೩೯೩.) ಗಾರ್ಡಿಯನು ನಡೆಯಿಸಿದ ಕಾರ್ಯಗಳನ್ನು ಯುಕ್ತವಯಸ್ಸು ಬಂದಮೇಲೆ ಮೈನರು ಸಮ್ಮತಿಪಟ್ಟು ಊರ್ಜಿತಪಡಿಸಿದರೆ, ಅವುಗಳಿಂದ ಆತನು ಬದ್ಧನಾಗುವನು. (೮ ಮೂ ಇ ಅ ೩೧೯.)

ವಿಕ್ರಯಗಳು—ಮೈನರಿನ ಲಾಭಕ್ಕಾಗಿ ಆತನ ಆಸ್ತಿಯನ್ನು ಗಾರ್ಡಿ ಯನು ವಿಕ್ರಯಿಸಿದರೆ, ಅಂತಹ ವಿಕ್ರಯದಿಂದ ಸದರಿ ಮೈನರು ಬದ್ಧನಾ ಗುವನು. ಆದರೆ ಅಕ್ರಮವಾಗಿ ಅಲ್ಲದೆ ಅನಾವಶ್ಯಕವಾಗಿ ಅಲ್ಲದೆ ಅತ್ಯಲ್ಪ ವಾದ ಬೆಲೆಗೆ ನಡೆಯಿಸಲ್ಪಡುವ ವಿಕ್ರಯಗಳಿಂದ ಮೈನರು ಬದ್ಧನಲ್ಲವು. ಇಂತಹ ಕ್ರಯಗಳನ್ನು ರದ್ದುಮಾಡುವದಕ್ಕೆ ಮೈನರು ಯುಕ್ತವಯಸ್ಸು ಬಂದಮೇಲೆ ದಾವಾ ತರಿಬಹುದು. (೮ ಬೊಂ ಹೈ ೮೧; ಇ ಲಾ ರಿ ೩ ಬೊಂ ೨೩೪, ೨೩೭; ೭ ಅ ಹೈ ೨೦೧)

ಮೈನರಿನ ಆಸ್ತಿಯನ್ನು ವಿಕ್ರಯಿಸುವ ವಿಷಯದಲ್ಲಿ ಆತನ ಗಾರ್ಡಿ ಯನಿಗೆ ಇರುವ ಅಧಿಕಾರವು ಬಹಳ ಮಿತವಾಗಿರುವದು. ಆದುದರಿಂದ ಸದರಿ ಗಾರ್ಡಿಯನ್ ಮೂಲಕವಾಗಿ ಮೈನರು ಆಸ್ತಿಯನ್ನು ಕೈಕೊಳ್ಳುವವರು

ಎಲ್ಲಾ ವಿಷಯಗಳಲ್ಲೂ ಜಾಗರೂಕತೆಯಿಂದ ಕಂಡುಕೊಳ್ಳಬೇಕು. ಸದರು ಆಸ್ತಿಯನ್ನು ವಿಕ್ರಯಿಸಬೇಕಾದರೆ ಆವಶ್ಯಕವೇನುಂಟೋ, ವಿಕ್ರಯಿಸುವದರಿಂದ ಮೈನರಿಗೆ ಏನುಪ್ರಯೋಜನವೋ, ವಿಕ್ರಯಿಸದಿದ್ದರೆ ಆತನಿಗೆ ಏನುನಷ್ಟವೋ, ಇಲ್ಲದೆ ಏನು ಅಪಾಯವುಂಟಾಗುವದೋ ಈ ವಿಷಯಗಳನ್ನು ಚೆನ್ನಾಗಿ ವಿಚಾರಿಸಬೇಕು. ಇಷ್ಟೇ ಅಲ್ಲದೆ ಆಸ್ತಿಗೆ ಕ್ರಮವಾದ ಬೆಲೆ ಕೊಡಬೇಕು. (೬ ಮೂ ಇ ಅ ೩೯೩)

ಗಾರ್ಡಿಯನ್ ಮೂಲಕವಾಗಿ ಮೈನರು ಆಸ್ತಿಯನ್ನು ಕೊಂಡುಕೊಂಡವರು ಸದರಿ ಆಸ್ತಿ ವಿಷಯಕವಾಗಿ ತಗಾದೆಯುಂಟಾದರೆ ಅದನ್ನು ವಿಕ್ರಯಿಸುವದಕ್ಕೆ ತಕ್ಕ ಆವಶ್ಯಕವಿತ್ತೆಂದು ನಿರೂಪಿಸಬೇಕು. (ಇ ಲಾ ರಿ ೫ ಮ ೩೩) ಇಂತಹ ಕಾರಣದಿಂದ ವಿಕ್ರಯಿಸಲ್ಪಟ್ಟಂತೆ ಕ್ರಯದಸ್ತಾವೇಜಿನವಲು ನಂಬಲಾರರು. (ಇ ಲಾ ರಿ ೬ ಅ ೪೧೭; ಇ ಲಾ ರಿ ೩ ಬೊಂ ೨೩೪, ೨೩೭.

ಒಂದು ಕೇಸಿನಲ್ಲಿ ಗಾರ್ಡಿಯನಾಗಿದ್ದ ತಾಯಿ, ಮೈನರಿನ ಸಂರಕ್ಷಣನಿಮಿತ್ತವಾಗಿ ಆತನ ಆಸ್ತಿಯನ್ನು ಬಹಳ ಕಡಿಮೆಬೆಲೆಗೆ ಮಾರಿಬಿಟ್ಟರು. ಮೈನರು ಯುಕ್ತವಯಸ್ಕನಾದಮೇಲೆ ದಾವಾ ತಂದನು. ಕೋರ್ಟಿನವರು ಸದರಿ ಕ್ರಯವನ್ನು ರದ್ದುಮಾಡಿ ಕ್ರಯದಾರನಿಗೆ ಸೊತ್ತನ್ನು ಕೊಡಿಸಿಬಿಟ್ಟು ಆಸ್ತಿಯನ್ನು ಮೈನರ ಸ್ವಾಧೀನ ಮಾಡಿದರು. (ಇ ಲಾ ರಿ ೬ ಅ ೪೧೭)

ಗಾರ್ಡಿಯನಿಂದ ಅಕ್ರಮವಾಗಿ ಸಮ್ಮತಿಸಲ್ಪಟ್ಟ ಡಿಕ್ರಿಗಳು, ರಾಜೀಗಳು ಮುಂತಾದವುಗಳನ್ನು ರದ್ದುಮಾಡುವದಕ್ಕೆ ಮೈನರು ಯುಕ್ತವಯಸ್ಸು ಬಂದಮೇಲೆ ದಾವಾ ತರಬಹುದು. (ಇ ಲಾ ರಿ ೩ ಮ ೧೦೩; ಇ ಲಾ ರಿ ೧೩ ಬೊಂ ೧೩೭.) ಆದರೆ ಗಾರ್ಡಿಯನ್‌ಮೇಲೆ ಕ್ರಮವಾಗಿ ಹೊಂದಲ್ಪಟ್ಟ ಡಿಕ್ರಿಗಳಿಂದಲೂ ಆತನು ಕ್ರಮವಾಗಿ ಸಮ್ಮತಿಸಿದ ರಾಜೀಗಳಿಂದಲೂ ಮೈನರು ಬದ್ಧನಾಗುವನು. (ಇ ಲಾ ರಿ ೧೧ ಮ ೩೮೯; ಇ ಲಾ ರಿ ೧೨ ಮ ೮೮೩; ೧೪ ಮೂ ಇ ಅ ೩೯೩; ಇ ಲಾ ರಿ ೫ ಕ ೪೫೦; ಇ. ಲಾ ರಿ ೧೦ ಕ ೩೫೭; ೧೮೫೯ ಸಂ॥ ಸ ತೀ ೯೧೩)

ದಗೆಯಿಂದ ಎಂದರೆ- ದ್ರೋಹವಾಗಿ ಹೊಂದಲ್ಪಟ್ಟ ತೀರ್ಮಾನಗಳು ಡಿಕ್ರಿಗಳು ರಾಜೀಗಳು ಮುಂತಾದವುಗಳನ್ನು ರದ್ದುಮಾಡುವದಕ್ಕೆ ನಿರಭ್ಯಂತರವಾಗಿ ದಾವಾ ತರಬಹುದು. (೧೮ ಮೂ ಇ ಅ ೩೯೩; ಇ ಲಾ ರಿ ೬ ಕ ೬೮೭; ಇ ಲಾ ರಿ ೧೦ ಕ ೩೫೩; ಇ ಲಾ ರಿ ೧೨ ಕ ೬೯.) ಆದರೆ ದಗೆಯಿಂದಾದರೂ ಗಾರ್ಡಿಯನಿನ ಅಜಾಗರೂಕತೆಯಿಂದಾದರೂ ಮೈನರಿಗೆ ವಿರೋ

ಥವಾಗಿ ವ್ಯಾಜ್ಯವು ತೀರ್ಮಾನ ಮಾಡಲ್ಪಟ್ಟದ್ದ ಪಕ್ಷದಲ್ಲಿ ಯುಕ್ತವಯಸ್ಸು ಬಂದಮೇಲೆ ಆತನು ದಾವಾ ತಂದು ಸದರಿ ತೀರ್ಮಾನವನ್ನು ರದ್ದುಮಾಡಿಸಿಕೊಳ್ಳಬಹುದೇ?—ಈ ಅಂಶವು ಸ್ಪಷ್ಟವಾಗಿ ತೀರ್ಮಾನಿಸಲ್ಪಟ್ಟಿರಲಿಲ್ಲವು. (೩ ಲಾ ರಿ ೧೭ ಕ ೩೬೧.)

ಗಾರ್ಡಿಯನಿನ ಅಕ್ರಮ ವ್ಯವಹಾರಗಳಿಂದ ಸಂಭವಿಸಿದ ನಷ್ಟನಿಮಿತ್ತಕವಾಗಿ ಆತನಮೇಲೆ ಮೈನರು ಯುಕ್ತವಯಸ್ಕನಾದಮೇಲೆ ದಾವಾತರಬಹುದು. (೧೮೬೦ ಸಂ॥ ಬಂ ಸ ತೀ ೩೪೯.)

ಸಮಷ್ಟಿ ಕುಟುಂಬವು.

ಸಮಷ್ಟಿ ಕುಟುಂಬವು.—ಹಿಂದೂಗಳಲ್ಲಿ ಸಾಧಾರಣವಾಗಿ ತಂದೆಮಕ್ಕಳು ಮಮ್ಮಕ್ಕಳು ಮುಂತಾದವರು ಸೇರಿ ಏಕ ಕುಟುಂಬವಾಗಿ ಜೀವಿಸುತ್ತಿರುವರು. ಇವರಲ್ಲಿ ಕೆಲವರಾದರೂ ಎಲ್ಲರಾದರೂ ಸಮಷ್ಟಿ ಯಾಸ್ತಿಯನ್ನು ವಿಭಾಗಿಸಿಕೊಂಡು ಪ್ರತ್ಯೇಕವಾಗಿ ಒಕ್ಕಲೇರ್ಪಡಿಸಿಕೊಂಡರೂ, ಅವರಿಗೆ ಸಂತಾನ ಉಂಟಾದೊಡನೆಯೇ ಮರಳಿಸಮಷ್ಟಿ ಕುಟುಂಬಗಳೇರ್ಪಡುವುವು. ಈ ಸಮಷ್ಟಿಕುಟುಂಬದ ಸಮಷ್ಟಿ ಸ್ವಭಾವವು ಈಪ್ರಕರಣದಲ್ಲಿ ವಿವರಿಸಲ್ಪಡುವುದು ಕುಟುಂಬದಲ್ಲಿ ಬುದ್ಧಿವಂತರಾಗಿರುವವರು ಮನೆಯ ಮೇನೇಜರಾಗಿರಬಹುದು.

ಸ್ತ್ರೀಯರಹಕು ಎಷ್ಟುಮಟ್ಟಿಗಿರುವದು.—ಸಮಷ್ಟಿ ಕುಟುಂಬದೊಳಗಣ ಸ್ತ್ರೀಯರು ಜೀವನಾಂಶಕ್ಕೆ ಮಾತ್ರವೇ ಹಕ್ಕುಂಟಾದವರಾಗಿರುವರು. ಪುರುಷರುಕೂಡ ಎಲ್ಲರೂ ಸಮಷ್ಟಿ ಯಾಸ್ತಿಗೆ ಭಾಗಸ್ಥರಾಗಲಾರರು.

ಕುಟುಂಬ ವ್ಯಯಗಳು.—ಕುಟುಂಬ ದೊಳಗಣ ಸ್ತ್ರೀಪುರುಷರಿಗೂ ಮಕ್ಕಳಿಗೂ ಬೇಕಾದ ಅನ್ನವಸ್ತ್ರಗಳ ನಿಮಿತ್ತವಾಗಿಯೂ, ಅವರ ವಿವಾಹವು ಉಪನಯನವು ವಿದ್ಯೆ ಮುಂತಾದ ಕಾರ್ಯಗಳ ನಿಮಿತ್ತವಾಗಿಯೂ, ಹಬ್ಬಗಳು ಶುಭಕಾರ್ಯಗಳು ಶ್ರಾದ್ಧಾದಿ ಕರ್ಮಗಳು ಮುಂತಾದವುಗಳ ನಿಮಿತ್ತವೂ, ಸಮಷ್ಟಿ ದ್ರವ್ಯವನ್ನು ವ್ಯಯಮಾಡುವುದಕ್ಕೆ ಎಜಮಾನನಿಗೆ ಸಂಪೂರ್ಣಾಧಿಕಾರ ವಿರುವುದು; ಇಷ್ಟೇಖರ್ಚು ಮಾಡಬೇಕೆಂದಾದರೂ ಇಷ್ಟುಖರ್ಚು ಮಾಡಬೇಕೆಂದಾದರೂ ನಿರ್ಬಂಧವಿಲ್ಲವು. ಮಿಕ್ಕಭಾಗಸ್ಥರು ಹೇಳಿದಂತೆ ಗೃಹಕೃತ್ಯಗಳನ್ನುನಡೆಯಿಸುವುದಕ್ಕಾದರೂ ಖರ್ಚುತಗ್ಗಿಸಿ ಆದಾಯ ಮಾಡುವುದಕ್ಕಾದರೂ ಆತನು ಬದ್ಧನಲ್ಲ. ಕುಟುಂಬಸಂರಕ್ಷಣದಲ್ಲಿ ಆತನು ಅಧಿಕ ಲೋಭತ್ವವನ್ನು ವಹಿಸಿದರೂ ಬಹಳ ದುಬಾರಿಯಾಗಿ ನಡೆದುಕೊಂ

ಡರೂ, ಮಿಕ್ಕ ಭಾಗಸ್ಥರು ವಿಭಾಗಮಾಡಿಕೊಳ್ಳಬೇಕೇಹೊರತು ಬೇರೆ ಸಾಧನವಿಲ್ಲವು. (೩ ಮ ಹೈ ೧೭೭ ಇ ಲಾ ರಿ ೧೦ ಬೊಂ ೫೨೮.) ಕುಟುಂಬ ದ್ರವ್ಯವನ್ನು ಎಜಮಾನನು ದುರ್ವಿನಿಯೋಗಮಾಡಿದರೆ ವಿಭಾಗಮಾಡಿಕೊಳ್ಳುವಾಗ ಆತನ ಭಾಗದಲ್ಲಿ ತಗ್ಗಿಸಬಹುದು. ಆದರೆ, ಕುಟುಂಬದ ಲಾಭನಿಮಿತ್ತವು ಆತನು ವರ್ತಕಮಾಡಿದ್ದು ಅದರಿಂದ ನಷ್ಟಸಂಭವಿಸಿದರೆ, ಆನಷ್ಟಕ್ಕೆ ಆತನು ಜವಾಬುದಾರನಾಗಲಾರನು.

ಒಬ್ಬ ಭಾಗಸ್ಥನಿಗಾಗಿ ಅಧಿಕವ್ಯಯವು.—ಬಹಳಮಂದಿ ಮಕ್ಕಳಿರುವುದರಿಂದ ಅವರ ಅನ್ನವಸ್ತ್ರಗಳ ನಿಮಿತ್ತವಾಗಿಯೂ ವಿವಾಹಾದಿ ಕಾರ್ಯಗಳ ನಿಮಿತ್ತವಾಗಿಯೂ, ಮತ್ತೆ ಯಾವ ಕಾರಣದಿಂದಾದರೂ, ಸಮುಷ್ಟಿ ಕುಟುಂಬದಲ್ಲಿ ಒಬ್ಬ ಭಾಗಸ್ಥನ ನಿಮಿತ್ತವಾಗಿ ಅಧಿಕ ದ್ರವ್ಯವು ವ್ಯಯವಾದರೆ, ವಿಭಾಗ ಕಾಲದಲ್ಲಿ ಆತನ ಭಾಗದೊಳಗೆ ಕಡಿಮೆಮಾಡಲವಕಾಶವಿಲ್ಲವು. (೫ ಕ ಹೈ ೩೪೭, ೩೪೯.) ಆದರೆ, ಕೆಲವು ಕುಟುಂಬಗಳಲ್ಲಿ ಆ ಆಭಾಗಸ್ತರ ನಿಮಿತ್ತವಾಗಿ ನಡೆಯಿಸಲ್ಪಡುವ ಅಧಿಕ ವ್ಯಯಗಳನ್ನು ಬರೆದಿಟ್ಟು; ವಿಭಾಗ ಕಾಲದಲ್ಲಿ ಲೆಕ್ಕನೋಡಿಕೊಳ್ಳುವ ಏರ್ಪಾಟು ಮಾಡಿಕೊಳ್ಳುವದೂ ಉಂಟು. (೬ ಮೂ ಇ ಅ ೫೮೦.)

ಸಾಲಗಳು.—ಸುಮುಷ್ಟಿ ಕುಟುಂಬಕ್ಕೆ ಮೇಜರಾಗಿರುವವನು ಕುಟುಂಬ ರಕ್ಷಣ ನಿಮಿತ್ತವಾಗಿ ಸಾಲಗಳು ಮಾಡಿದಪಕ್ಷದಲ್ಲಿ ಅವುಗಳನ್ನು ತೀರಿಸುವ ಭಾರವನ್ನು ಎಲ್ಲಾ ಭಾಗಸ್ಥರೂ ವಹಿಸುವರು. ಆದರೆ, ಕಾಲದೋಷವು (ಲಿಮಿಟೇಷನ್) ಉಂಟಾದ ಸಾಲಗಳ ನಿಮಿತ್ತವು ಸಮುಷ್ಟಿ ಕುಟುಂಬದ ಮೇನೇಜರು ಮಿಕ್ಕಭಾಗಸ್ಥರ ಅನುಮತಿಯಿಲ್ಲದೆ ಪತ್ರ ಬರೆದುಕೊಟ್ಟ ಪಕ್ಷದಲ್ಲಿ ಅದರಿಂದ ಆತನುಮಾತ್ರವೇ ಬದ್ಧನಾಗುವನು. (ಇ ಲಾ ರಿ ೫ ಮ ೧೪೯; ೧೮ ಬೊಂ ೫೧೨.)

ಸಮುಷ್ಟಿ ಕುಟುಂಬದ ಭಾಗಸ್ಥರು ಸೇರಿ ಯಾವುದಾದರೂ ವ್ಯಾಪಾರ ಮಾಡಿದಾಗ, ಅವರಲ್ಲಿ ಮೇನೇಜರಾದರೂ ಮತ್ತೊಬ್ಬರಾದರೂ ಸದರಿ ವ್ಯಾಪಾರನಿಮಿತ್ತವಾಗಿ ಸಾಲಗಳು ಮಾಡಿದಪಕ್ಷದಲ್ಲಿ, ಅವುಗಳನ್ನು ತೀರಿಸುವುದಕ್ಕೆ ಎಲ್ಲರೂ ಬದ್ಧರಾಗಿರುವರು. (ಇ ಲಾ ರಿ ೬ ಕ ೮೧೫; ಇ ಲಾ ರಿ ೫ ಬೊಂ ೩೮.) ಮತ್ತು, ಸದರಿ ಸಾಲಗಳನಿಮಿತ್ತವಾಗಿ ಒಬ್ಬ ಭಾಗಸ್ಥನಮೇಲೆಯೇ ಡಿಕ್ರೀ ಹೊಂದಲ್ಪಟ್ಟರೂ, ಕುಟುಂಬ ದ್ರವ್ಯವು ಯಾವತ್ತೂ ಜಪ್ತು ಮಾಡಲ್ಪಡಬಹುದು (ಇ ಲಾ ರಿ ೨೦ ಕ ४೫೩.)

ಲೆಕ್ಕ ಕೇಳುವಿಕೆ.—ಸಮುಷ್ಟಿ ಕುಟುಂಬದ ಮೇನೇಜರು ಮಾಡುವ ಖರ್ಚುಗಳಿಗೆ ಲೆಕ್ಕಹೇಳೆಂದು ಕೇಳುವುದಕ್ಕೆ ಮಿಕ್ಕ ಭಾಗಸ್ಥರಿಗೆ ಹಕ್ಕುಂಟೇ

ಇಲ್ಲವೇ ? ಎಂಬ ಅಂಶವು ಚಿರಕಾಲದಿಂದ ಸಂದೇಹಾಸ್ಪದವಾಗಿತ್ತು. ವಿಭಾಗ ನಿಮಿತ್ತವಾಗಿ ದಾವಾ ತಂದಪಕ್ಷದಲ್ಲಿ ಲೆಕ್ಕ ಹೇಳೆಂದು ಕೇಳುವುದಕ್ಕೆ ಯಾವ ಅಭ್ಯಂತರವೂ ಇಲ್ಲದಾಗ, ವಿಭಾಗ ಮಾಡಿಕೊಳ್ಳುವುದು ಆವಶ್ಯಕವೋ ಅಲ್ಲವೋ ಎಂಬ ವಿಷಯವನ್ನು ನಿರ್ಣಯಿಸಿಕೊಳ್ಳುವುದಕ್ಕಾಗಿ ಲೆಕ್ಕಕೇಳುವುದು ನ್ಯಾಯವಾಗಿಯೇ ಇರುವುದು. ಹೀಗಿದ್ದರೂ, ವಿಭಾಗ ನಿಮಿತ್ತವಾಗಿ ದಾವಾ ತಂದಾಗ ಮಾತ್ರವೇ ಮೇನೇಜರನ್ನು ಲೆಕ್ಕಹೇಳೆಂದು ಕೇಳಬಹುದಲ್ಲದೆ ಇತರ ಸಂದರ್ಭಗಳಲ್ಲಿ ಕೇಳಕೂಡದೆಂದು ತೀರ್ಮಾನಗಳು ಮಾಡಲ್ಪಟ್ಟುವು. (೬ ಮೂ ಇ ಅ ೫೪೦; ೯ ಸ ೪೮೩; ೩ ಕ ಹೈ ೧.) ಆದರೆ, ಈಚೀಚೆಗೆ, ಈತೀರ್ಮಾನಗಳನ್ನು ತಿರುವಿಹಾಕಿ ಸಮಷ್ಟಿ ಕುಟುಂಬದಲ್ಲಿ ಯಾವ ಭಾಗಸ್ಥನಾದರೂ ಸಮಷ್ಟಿ ದ್ರವ್ಯದಖರ್ಚು ಲೆಕ್ಕಹೇಳೆಂದು ಕೇಳಿದಪಕ್ಷದಲ್ಲಿ ಹೇಳುವುದಕ್ಕೆ ಮೇನೇಜರು ಬದ್ಧನೆಂದೂ, ವಿಭಾಗ ನಿಮಿತ್ತವಾಗಿ ದಾವಾ ತೆಗೆದುಕೊಂಡು ಬಾರದೆಯೇ ಹೀಗೆ ಲೆಕ್ಕಕೇಳಬಹುದೆಂದೂ, ಕಲಕತ್ತಾ ಹೈಕೋರ್ಟು ಫುಲ್‌ಬೆಂಚಿಯವರು ತೀರ್ಮಾನಿಸಿದರು. (೫ ಕ ಹೈ ೩೫೪.)


ದಾವೆಯಲ್ಲಿ ಎಲ್ಲಾ ಭಾಗಸ್ಥರೂ ಸೇರಿರಬೇಕು—ಸಮಷ್ಟಿ ಕುಟುಂಬದ ಸ್ವತ್ತಿನ ವಿಷಯವಾಗಿಯಾದರೂ, ಸದರಿ ಕುಟುಂಬದ ಭಾಗಸ್ಥರೆಲ್ಲರೂ ವಾದಿಗಳಾಗಿಯಾದರೂ ಪ್ರತಿ ವಾದಿಗಳಾಗಿಯಾದರೂ ಸೇರಿ, ಇಲ್ಲದೆ ಸೇರಿಸಲ್ಪಟ್ಟಿರಬೇಕು. ಇಲ್ಲದಪಕ್ಷದಲ್ಲಿ ದಾವಾಸಲ್ಲಲಾರದು. (ಇ ಲಾ ರಿ ೩ ಮ ೨೩೪; ಇ ಲಾ ರಿ ೧೧ ಕ ೩೩೮, ೬೧೫; ಇ ಲಾ ರಿ ೧೭ ಕ ೧೬೦; ಇ ಲಾ ರಿ ೭ ಬೊಂ ೭೧೭; ಇ ಲಾ ರಿ ೧ ಕ ೨೨೬; ೧೧ ಬೊಂ ಹೈ ೬೯; ಇ ಲಾ ರಿ ೬ ಮ ೯೦; ೧೨ ಬೊಂ ಹೈ ೮೫; ಇ ಲಾ ರಿ ೩ ಬೊಂ ೨೩; ಇ ಲಾ ರಿ ೭ ಕ ೪೨೦, ೭೫೧. ೭ ಅ ಹೈ ೫೮; ಇ ಲಾ ರಿ ೮ ಕ ೩೫೩; ೧೦ ಕ ಹೈ ೯೯೧; ಇ ಲಾ ರಿ ೪ ಕ ೯೬; ಇ ಲಾ ರಿ ೫ ಕ ೯೪೧.)

ಸಮಷ್ಟಿಕುಟುಂಬದ ಭಾಗಸ್ಥರು ಮಿತಾಕ್ಷರಪ್ರಕಾರವಾಗಿ ಮೂರು ತಲೆಗಳವರೆಗೂ ಹಕ್ಕು—ಸಮಷ್ಟಿ ಕುಟುಂಬದೊಳಗಣ ಪುರುಷರಲ್ಲಿ ಎಲ್ಲರೂ ಸಮಷ್ಟಿಯಾಸ್ತಿಗೆ ಭಾಗಸ್ಥರಾಗಲಾರರೆಂದು ಮೇಲೆ ಹೇಳಿದೆವು. ತಂದೆಯು ಅಲ್ಲದೆ ಬೇರೆಯೊಬ್ಬರ ಸ್ವಾರ್ಜಿತ ಸೊತ್ತಿಗೆ ಆತನು ಮಾತ್ರವೇ ಹಕ್ಕುಂಟಾದವನಾಗಿರುವನು. ಮಿತಾಕ್ಷರಪ್ರಕಾರವಾಗಿ ಪಿತ್ರಾರ್ಜಿತದಲ್ಲಿ ತಂದೆಗೂ ಮಕ್ಕಳಿಗೂ ಅಣ್ಣತಮ್ಮಂದಿರಿಗೂ ಸಮಾನವಾದ ಹಕ್ಕುಂಟು. ಮಗನು ಹುಟ್ಟಿದೊಡನೆಯೇ ಆತನಿಗೆ ತಂದೆಯ ಪಿತ್ರಾರ್ಜಿತದಲ್ಲಿ ಹಕ್ಕು ಏರ್ಪಡುವುದೆಂದು ಮಿತಾಕ್ಷರ ಧರ್ಮಶಾಸ್ತ್ರವು ಹೇಳುವುದು. ಪಿತ್ರಾರ್ಜಿತದ ಸೊತ್ತಿಗೆ ಭಾಗಸ್ಥರಾಗಿ ಏರ್ಪಟ್ಟ ಮೂಲಪುರುಷನಿಂದ ಮೂರು

ತರಗಳವರಗೂ ಈ ಹಕ್ಕು ವ್ಯಾಪಿಸುವುದು. ಮೂರು ತರಗಳನ್ನು ಮೀರಿದವರಿಗೆ ಈ ಹಕ್ಕು ವ್ಯಾಪಿಸದು. ಎಂದರೆ, ಅಪರಕ್ರಿಯೆಗಳನ್ನು ನಡೆಯಿಸಿ ಪಿಂಡಪ್ರದಾನ ಮಾಡಲುಳ್ಳವರಾದ ಮಗನು, ಮಮ್ಮಗನು, ಮರಿಮಗನು (ಪ್ರಪೌತ್ರನು)- ಈ ಮೂರುತರಗಳವರಿಗೇ ಪಿತ್ರಾರ್ಜಿತದಲ್ಲಿ ಹಕ್ಕುಂಟಾಗುವುದಲ್ಲದೆ, ಮರಿಮಗನ ಮಗನಿಗೆ ಉಂಟಾಗಲಾರದು. ಹೀಗೆ ಹಕ್ಕುಳ್ಳವರು ಆ ಸಮುಷ್ಟಿ ಕುಟುಂಬದ ಭಾಗಸ್ಥರೆಂದು ಹೇಳಲ್ಪಡುವರು.

ಬೇರೆ ಹಕ್ಕಿಲ್ಲವು.—ಸಮುಷ್ಟಿ ಕುಟುಂಬದೊಳಗಣ ಭಾಗಸ್ಥರು ಯಾವದಾಸ್ತಿಗೂ ಒಟ್ಟಿಗೆ ಬಾಧ್ಯತೆಯುಳ್ಳವರಾಗಿ ಅನುಭವಿಸುವ ಹಕ್ಕು ಉಂಟಾಗಿರುವರು ಇಷ್ಟೇಅಲ್ಲದೆ ಪತ್ಯೇಕ ಭಾಗಗಳಿಗೆ ಹಕ್ಕುಂಟಾಗಿರದು. ವಿಭಾಗಕ್ಕೆ ಪೂರ್ವದಲ್ಲಿ ಅವರವರದು ಈಭಾಗವೆಂದಾದರೂ ಇಷ್ಟು ಭಾಗವೆಂದಾದರೂ ನಿಶ್ಚಯವಾಗಿ ಹೇಳುವುದಕ್ಕೆ ಅವಕಾಶವಿಲ್ಲವು. ವಿಭಾಗಕ್ಕೆ ಪೂರ್ವದಲ್ಲಿ ಭಾಗಸ್ಥರೊಳಗೆ ಯಾರಾದರೂ ಪುತ್ರಹೀನನಾಗಿ ಸತ್ತುಹೋದರೆ, ಆತನಹಕ್ಕು ಆತನ ಹೆಂಡತಿಗೆ ಸಲ್ಲದೆ ಮಿಕ್ಕ ಭಾಗಸ್ಥರಿಗೆ ಸೇರುವುದರಿಂದ, ಇವರ ಭಾಗಗಳು ಹೆಚ್ಚುವುವು. ಹೊಸ ಭಾಗಸ್ಥರು ಹುಟ್ಟುವುದರಿಂದ, ಸದರಿ ಭಾಗಗಳು ಕಡಿಮೆಯಾಗುವುವು.

ಈ ಅಂಶಗಳು ಕೆಳಗಣ ಉದಾಹರಣದಿಂದ ಸ್ಪಷ್ಟವಾಗಿ ತಿಳಿಯಬಹುದು.



ಈಕುಟುಂಬದಲ್ಲಿ ರಾಮಣ್ಣ ಸುಬ್ಬಣ್ಣ ವೆಂಕಣ್ಣ ಎಂಬ ಮೂರುಮಂದಿ ಮಾತ್ರವೇ ಇದ್ದಪಕ್ಷದಲ್ಲಿ, ಪಿತ್ರಾರ್ಜಿತದಲ್ಲಿ ಇವರಿಗೆ ಸಮಾನವಾದ ಹಕ್ಕುಗಳುಂಟಾಗಿರುವುದರಿಂದ ವಿಭಾಗ ಮಾಡಿಕೊಂಡರೆ ಒಬ್ಬಬ್ಬರಿಗೆ ಮೂರರಲ್ಲೊಂದುಪಾಲು ಬರುವುದು. ವಿಭಾಗಕ್ಕೆ ಪೂರ್ವದಲ್ಲಿ ನರಸಣ್ಣನೆಂಬವನು ಹುಟ್ಟಿದಪಕ್ಷದಲ್ಲಿ, ಆತನಿಗೆಕೂಡ ಪಿತ್ರಾರ್ಜಿತದಲ್ಲಿ ಹಕ್ಕುಂಟಾಗುವುದು. ಆದುದರಿಂದ ಒಬ್ಬೊಬ್ಬರಿಗೆ ನಾಲ್ಕರಲ್ಲಿ ಒಂದುಪಾಲುಮಾತ್ರವೇ ಬರುವುದು

ರಾಮಣ್ಣನು ಸತ್ತುಹೋದಮೇಲೆ, ಆತನ ಮಕ್ಕಳು ವಿಭಾಗ ಮಾಡಿಕೊಂ ಪಕ್ಷದಲ್ಲಿ ಒಬ್ಬಬ್ಬನಿಗೆ ಮೂರರಲ್ಲೊಂದುಪಾಲು ಬರುವುದು. ಸುಬ್ಬಣ್ಣನ ಕೂಡ ಸತ್ತುಹೋದಮೇಲೆ ವಿಭಾಗ ಮಾಡಿಕೊಂಡಪಕ್ಷದಲ್ಲಿ ವೆಂಕಣ್ಣ ನರಸ ಣ್ಣರಿಗೆ ಸರಿಪಾಲು ಆಸ್ತಿಬರುವುದು. ವಿಭಾಗ ಮಾಡಿಕೊಳ್ಳದೆ ಕುಟುಂಬವು ಸಮಷ್ಟಿಯಾಗಿಯೇ ನಡೆಯುತ್ತಿದ್ದಪಕ್ಷದಲ್ಲಿ ಮಲ್ಲಣ್ಣ ರಂಗಣ್ಣ ಶೇಷಣ್ಣ ಎಂಬುವರು ಹುಟ್ಟಿ ಪಿತ್ರಾರ್ಜಿತದಲ್ಲಿ ಹಕ್ಕುಳ್ಳವರಾಗುವರು. ರಾಮಣ್ಣ ಸು ಬ್ಬಣ್ಣ ವೆಂಕಣ್ಣ ಈಮೂವರೂ ಸತ್ತುಹೋದಪಕ್ಷದಲ್ಲಿ ಮಲ್ಲಣ್ಣ ರಂಗಣ್ಣರು ವಿಭಾಗವನ್ನು ಬಯಸಬಹುದು. ಆಗ ಅವರವರಿಗೆ ಅವರ ತಂದೆಯಪಾಲಿನಲ್ಲಿ ಅರೆವಾಸಿಯೆಂದರೆ ಒಟ್ಟಾಸ್ತಿಯಲ್ಲಿ ನಾಲ್ಕರಲ್ಲೊಂದುಪಾಲು ಬರುವುದು.

ಮೇಲೆ ಉದಾಹರಿಸಿದ ಕುಟುಂಬದಲ್ಲಿ ಎಲ್ಲರೂ ಬದುಕಿದ್ದಪಕ್ಷದಲ್ಲಿ, ರಾಮಣ್ಣನೆಂಬ ಮೂಲಪುರುಷನ ಪಿತ್ರಾರ್ಜಿತದ ಆಸ್ತಿಯಲ್ಲಿ ಹಕ್ಕು, ಆತನ ಮಕ್ಕಳಾದ ಸುಬ್ಬಣ್ಣ ವೆಂಕಣ್ಣ ನರಸಣ್ಣರಿಗೂ, ಮುಮ್ಮಕ್ಕಳಾದ ಮಲ್ಲಣ್ಣ ರಂಗಣ್ಣ ಶೇಷಣ್ಣಂದಿರಿಗೂ, ಮರಿಮಕ್ಕಳಾದ ಸೂರಣ್ಣ ಚಂದ್ರಣ್ಣರಿಗೂ ವ್ಯಾಪಿಸುವುದು. ಆದರೆ, ಮೂಲಪುರುಷನಕೆಳಗೆ ಮೂರುತಲೆಗಳು ದಾಟಿದ ನಾಗಣ್ಣನಿಗೆ ಹಕ್ಕುವ್ಯಾಪಿಸದು. ಎಲ್ಲರಿಗಿಂತಲೂ ಮೊದಲುರಾಮಣ್ಣನು ಸತ್ತುಹೋದ ಪಕ್ಷದಲ್ಲಿ ಸುಬ್ಬಣ್ಣ ವೆಂಕಣ್ಣ ನರಸಣ್ಣಂದಿರು ಪಿತ್ರಾರ್ಜಿತದ ಸ್ವತ್ತಿಗೆ ಮೂಲಪುರುಷರಾಗುವರು. ಆಗ ನರಸಣ್ಣನ ಭಾಗದೊಳಗಣ ಹಕ್ಕು ನಾಗಣ್ಣನವರೆಗೂ ವ್ಯಾಪಿಸುವುದು.


ರಾಮಣ್ಣನೆಂಬವನು ಬದುಕಿರುವಾಗ ಪಿತ್ರಾರ್ಜಿತದಲ್ಲಿ ಭಾಗವನ್ನು ಬಯಸುವುದಕ್ಕೆ ಸುಬ್ಬಣ್ಣ ವೆಂಕಣ್ಣ ನರಸಣ್ಣರಿಗೆ ಮೂರುಮಂದಿಗೆ ಮಾತ್ರವೇ ಹಕ್ಕುಂಟು. ವೆಂಕಣ್ಣನ ಭಾಗದಲ್ಲಿ ಮಲ್ಲಣ್ಣ ರಂಗಣ್ಣ ರೆಂಬವರಿಬ್ಬರೂ ಸರಿ ಸಮಭಾಗಕ್ಕೆ ಹಕ್ಕುದಾರರಾಗುವರು. ರಾಮಣ್ಣನು ಬದುಕಿರುವಾಗ ವೆಂಕಣ್ಣ ನರಸಣ್ಣಂದಿರು ಸತ್ತುಹೋದಪಕ್ಷದಲ್ಲಿ ಸುಬ್ಬಣ್ಣನಾದರೂ ಮಲ್ಲ ಣ್ಣ ರಂಗಣ್ಣ ಶೇಷಣ್ಣಂದಿರಲ್ಲಿ ಯಾರೊಬ್ಬರಾದರೂ ಪಿತ್ರಾರ್ಜಿತದಲ್ಲಿ ಭಾಗ ವನ್ನಪೇಕ್ಷಿಸಬಹುದು. ಆಗ ಆಸ್ತಿ ನಾಲ್ಕುಭಾಗಗಳಾಗಿ ಮಾಡಲ್ಪಟ್ಟು, ರಾಮಣ್ಣ ಸುಬ್ಬಣ್ಣಂದಿರಿಗೆ ಒಂದೊಂದುಭಾಗವೂ, ಮಲ್ಲಣ್ಣ ರಂಗಣ್ಣಂದಿ ರಿಗೆ ಅವರ ತಂದೆಯಭಾಗವೂ, ಶೇಷಣ್ಣನಿಗೆ ಒಂದು ಭಾಗವೂ, ಸಲ್ಲುವುದು.

ರಾಮಣ್ಣ, ಸುಬ್ಬಣ್ಣ ಸೂರಣ್ಣ, ನಾಗಣ್ಣ ಇವರುಮಾತ್ರವೇ ಬದುಕಿದ್ದು ಮಿಕ್ಕವರೆಲ್ಲರೂ ಸತ್ತುಹೋದಪಕ್ಷದಲ್ಲಿ ರಾಮಣ್ಣ ಸುಬ್ಬಣ್ಣ ಸೂರ ಣ್ಣಂದಿರು ಮೂರುಮಂದಿಮಾತ್ರವೇ ಪಿತ್ರಾರ್ಜಿತದಲ್ಲಿ ಭಾಗಸ್ಥರಾಗುವರು. ರಾಮಣ್ಣನೆಂಬ ಮೂಲಪುರುಷನಕೆಳಗೆ ಮೂರುತಲೆಗಳು ದಾಟಿದವನಾದುದ ರಿಂದ, ನಾಗಣ್ಣನು ಭಾಗಸ್ಥನಾಗಲಾರನು. ಆಮೇಲೆ ರಾಮಣ್ಣನು ಸತ್ತು

ಹೋದರೂಕೂಡ, ಪಿತ್ರಾರ್ಜಿತದ ಸ್ವತ್ತೆಲ್ಲವೂ ಸುಬ್ಬಣ್ಣ ಸೂರಣ್ಣರಿಗೆ ಸೇರುವುದಲ್ಲದೇ ನಾಗಣ್ಣನಿಗೆ ಸೇರಲಾರದು.

ಆದಿಪುರುಷನ ಬಳಿಯಿಂದ ಮೂರು ತರಗಳಲ್ಲವು.—ಪಿತ್ರಾರ್ಜಿತದ ಸೊತ್ತಿನಲ್ಲಿ ಭಾಗಸ್ಥನಾಗಿ ಏರ್ಪಟ್ಟ ಮೂಲಪುರುಷನಕೆಳಗೆ ಮೂರು ತಲೆಗಳ ವರೆಗೂ ಹಕ್ಕು ವ್ಯಾಪಿಸುವುದೆಂದು ಮೇಲೆ ಹೇಳಿದ್ದೆವು. ಹೀಗೆ ಮೂರು ತಲೆಗಳನ್ನು ಲೆಕ್ಕ ನೋಡುವುದರಲ್ಲಿ ಆದಿಪುರುಷನ ಕಡೆಯಿಂದ ಲೆಕ್ಕಿಸಕೂಡದು. ಆದಿಪುರುಷನಿಗೆ ಎಷ್ಟು ತಲೆಗಳು ಕೆಳಗಾಗಿದ್ದರೂ ನಡುವೆ ಪಿತ್ರಾರ್ಜಿತಸೊತ್ತಿನಲ್ಲಿ ಪ್ರಧಾನ ಭಾಗಸ್ಥನಾಗಿ ಏರ್ಪಟ್ಟವನಿಗೆ ಮೂರುತಲೆಗಳು ಅತಿಕ್ರಮಿಸದಿದ್ದರೆ ಹಕ್ಕುವ್ಯಾಪಿಸುವುದು. (೧೦ ಬೊಂ ಹೈ ೪೪೯, ೪೬೩; ೬ ಮ ಹೈ ೯೪, ೧೦೬.) ಇದು ಹೇಗೆಂದರೆ—

ಇಲ್ಲಿ ಬರೆಯಲ್ಪಟ್ಟಿರುವ ಕುಟುಂಬದಲ್ಲಿ ಎಲ್ಲರೂ ಬದುಕಿದ್ದಪಕ್ಷದಲ್ಲಿ, ಕಿಟ್ಟಣ್ಣ ಶಿವಣ್ಣ ಪಾಪಣ್ಣ ಬೊಮ್ಮಣ್ಣ ವೀರಣ್ಣರುಮಾತ್ರವೇ ಪಿತ್ರಾರ್ಜಿತದಲ್ಲಿ ಹಕ್ಕುದಾರರಾಗಿರುವರಲ್ಲದೆ, ಕಿಟ್ಟಣ್ಣನಜೀವಿತಕಾಲದಲ್ಲಿ ಕನಕಣ್ಣ ಅಪ್ಪಣ್ಣ ಮಲ್ಲಣ್ಣರು ಎಂದೂ ಹಕ್ಕುದಾರರಾಗಲಾರರು. ಕಿಟ್ಟಣ್ಣನು ಸತ್ತು ಹೋದಮೇಲೆ ಶಿವಣ್ಣನು ಮೂಲಪುರುಷನಾಗುವ ನಾದುದರಿಂದ ಆತನ ಕೆಳಗೆ ಮೂರುತರಗಳಲ್ಲಿ ಸೇರಿದ ಕನಕಣ್ಣ ಅಪ್ಪಣ್ಣ ಎಂಬುವರುಕೂಡ ಹಕ್ಕುದಾರರಾಗುವರು. ಆಗಲೂಮಲ್ಲಣ್ಣನು ಹಕ್ಕುದಾರನಾಗಲಾರನು. ಕಿಟ್ಟಣ್ಣನು ಬದುಕಿರುವಲ್ಲಿ ಶಿವಣ್ಣ ಪಾಪಣ್ಣರು ಸತ್ತುಹೋದರೆ ಕಿಟ್ಟಣ್ಣ ಬೊಮ್ಮಣ್ಣ ವೀರಣ್ಣರು ಮಾತ್ರವೇ ಪ್ರಧಾನ ಭಾಗಸ್ಥರಾಗುವರು ಆಮೇಲೆ ಕಿಟ್ಟಣ್ಣನು ಸತ್ತುಹೋದಪಕ್ಷದಲ್ಲಿ, ಬೊಮ್ಮಣ್ಣನ ಭಾಗದಲ್ಲಿ ಕನಕಣ್ಣ ಅಪ್ಪಣ್ಣ ಮಲ್ಲಣ್ಣರೆಂಬವರು ಹಕ್ಕುಳ್ಳವರಾಗುವರು. ಕಿಟ್ಟಣ್ಣಬದುಕಿರುವಲ್ಲಿ, ಶಿವಣ್ಣ ಪಾಪಣ್ಣ ಬೊಮ್ಮಣ್ಣರು ಸತ್ತುಹೋದರೆ, ಕನಕಣ್ಣ ಅಪ್ಪಣ್ಣ ಮಲ್ಲಣ್ಣ ಎಂಬವರಿಗೆ ಹಕ್ಕು ತಪ್ಪಿಹೋಗಿ ಎಲ್ಲಾ ಸತ್ವಕ್ಕೂ ಕಿಟ್ಟಣ್ಣ ವೀರಣ್ಣರುಮಾತ್ರವೇ ಹಕ್ಕುದಾರರಾಗುವರು. ಆಮೇಲೆ, ಕಿಟ್ಟಣ್ಣ ಸತ್ತು ಹೋದಪಕ್ಷದಲ್ಲಿ ಯಾವದಾಸ್ತಿಯೂ ವೀರಣ್ಣನಿಗೆ ಸೇರುವುದು. ಆದುದರಿಂದ, ಮೂಲಪುರುಷನಕೆಳಗೆ ಯಾವ ಕಾಲದಲ್ಲಾದರೂ ಮೂರುತರಗಳು



ಪೂರ್ಣವಾಗಿ ಹಾಳಾದಪಕ್ಷದಲ್ಲಿ, ಪಿತ್ರಾರ್ಜಿತದೊಳಗಳ ಹಕ್ಕು ಆಕೆಳಗಣ ವರಿಗೆ ತಪ್ಪಿಹೋಗುವುದೆಂದು ತಿಳಿದುಕೊಳ್ಳಬೇಕು.

ದಾಯಭಾಗ ಸಂಪ್ರದಾಯವು.—ಪಿತ್ರಾರ್ಜಿತದೊಳಗಣ ಹಕ್ಕಿನವಿಷ ಯವಾಗಿ ಮೇಲೆ ಹೇಳಲ್ಪಟ್ಟುದೆಲ್ಲವೂ ಮಿತಾಕ್ಷರ ಸಂಪ್ರದಾಯದವರೆಗೇ ಸಲ್ಲುವುದಲ್ಲದೆ ದಾಯಭಾಗ ಸಂಪ್ರದಾಯದವರಿಗೆ ಸಲ್ಲದು. ದಾಯಭಾಗ ಪ್ರಕಾರವಾಗಿ ತಂದೆಯು ಪಿತ್ರಾರ್ಜಿತ ಸ್ವತ್ತಿನಲ್ಲಿ, ಕುಮಾರರಿಗೆ ಜೀವನಾಂ ಶದ ಹಕ್ಕುಮಾತ್ರವೇ ಉಂಟಲ್ಲದೆ ಭಾಗವನ್ನು ಬಯಸುವ ಹಕ್ಕಾದರೂ ಆ ಸ್ವತ್ತನ್ನು ಅಕ್ರಮವಾಗಿ ವ್ಯಯಗೊಳಿಸದಂತೆ ತಡೆವ ಹಕ್ಕಾದರೂ ಇಲ್ಲ ವು. ಒಂದುಬಾರಿ ತಂದೆಯ ಸೊತ್ತು ಕುಮಾರರಿಗೆ ಸೇರಿದಪಕ್ಷದಲ್ಲಿ, ಇವರು ಸಮಷ್ಟಿಯಾಗಿ ಜೀವಿಸುತ್ತಿದ್ದರೂ ಪ್ರತ್ಯೇಕವಾಗಿ ಹಕ್ಕುಂಟಾಗಿರುವಂತೆ ಯೇ ಭಾವಿಸಲ್ಪಡುವರು. ಆದುದರಿಂದ, ಇವರಲ್ಲಿ ಒಬ್ಬನು ಪುತ್ರಹೀನ ನಾಗಿ ಸತ್ತುಹೋದರೆ, ಮಿತಾಕ್ಷರದಲ್ಲಿ ಹೇಗೆಯೋ ಹಾಗೆಯೇ ಆವನಭಾಗವು ಮಿಕ್ಕ ಭಾಗಸ್ಥರಿಗೆ ಸಲ್ಲದೆ, ಆತನ ಹೆಂಡತಿಗಾದರೂ ಮಿಕ್ಕವಾರಸರಿಗಾದರೂ ಸೇರುವುದು. (೬ ಮೂ ಇ ಅ ೫೫೩.)

ಈ ಪ್ರಕರಣದಲ್ಲಿದುವರೆಗೂ ಪಿತ್ರಾರ್ಜಿತವು ಸ್ವಾರ್ಜಿತವು ಎಂಬ ಪದ ಗಳು ಹಲವುಬಾರಿ ಉಪಯೋಗಿಸಲ್ಪಟ್ಟುವು. ಈ ಪದಗಳ ಅರ್ಥ ವಿವರಣ ವನ್ನು ಚೆನ್ನಾಗಿ ತಿಳಿದುಕೊಳ್ಳುವುದು ಅತ್ಯಾವಶ್ಯಕವು.

ಪಿತ್ರಾರ್ಜಿತವು, ಸ್ವಯಾರ್ಜಿತವು.—ತಂದೆ, ತಾತ (ತಂದೆಯತಂದೆ) ಮುತ್ತಾತ ಇವರಬಳಿಯಿಂದ ವಾರಸುಹಕ್ಕಿನಿಂದಾದರೂ ಉಯಿಲಿನಿಂದಾ ದರೂ, ದಾನರೂಪಕವಾಗಿಯಾದರೂ ಬಂದ ಸೊತ್ತು ಪಿತ್ರಾರ್ಜಿತವು. ಅಂ ತಹಸೊತ್ತಿನಲ್ಲಿ ಮಿತಾಕ್ಷರ ಪ್ರಕಾರವಾಗಿ ಮೂರು ತರಗಳವರೆಗೂ ಉಳ್ಳ ಪುತ್ರ ಸಂತತಿಯುವರಿಗೆ ಹಕ್ಕುವ್ಯಾಪಿಸುವುದು. ಪಿತೃದ್ರವ್ಯವನ್ನಾದರೂ ಕುಟುಂಬದ್ರವ್ಯವನ್ನಾದರೂ ಉಪಯೋಗಿಸದೆ ಸ್ವಶಕ್ತಿಯಿಂದ ಸಂಪಾದಿಸಿದ ಆಸ್ತಿಯೂ-ತಾಯಿ, ತಾಯತಾಯಿ, ತಾಯತಂದೆ, ಅಣ್ಣತಮ್ಮಂದಿರು, ಚಿಕ್ಕ ಪ್ಪ ದೊಡ್ಡಪ್ಪಂದಿರು, ಚಿಕ್ಕಪ್ಪ ದೊಡ್ಡಪ್ಪಂದಿರ ಮಕ್ಕಳು, ಈ ಮೊದಲಾ ದವರ ಬಳಿಯಿಂದ ಬಂದ ಆಸ್ತಿಯೂ-ಸ್ವಯಾರ್ಜಿತವು ಇದರಲ್ಲಿ ಪುತ್ರಸಂತ ತಿಯುವರಿಗೆ ಎಂತಹ ಹಕ್ಕೂ ಇಲ್ಲವು. (ಇ ಲಾ ರಿ ಲ ಕ ೧೩೦; ಇ. ಲಾ. ರಿ. ೧೭ ಕ ೩ಲ; ಇ ಲಾ ರಿ ೧೦ ಬೊಂ ೩೭; ಇ ಲಾ ರಿ ೯ ಬೊಂ ೪೪೫.)

ತಂದೆಯ ಸ್ವಯಾರ್ಜಿತವು ಕುಮಾರರ ಪಿತ್ರಾರ್ಜಿತವು.—ತಂದೆಯ ಸ್ವಯಾರ್ಜಿತವು ಕುಮಾರರಿಗೆ ಬಂದೊಡನೆಯೇ ಅದು ಇವರ ಪಿತ್ರಾರ್ಜಿತ ವಾಗಿ ಅದರಲ್ಲಿ ಇವರ ಪುತ್ರಸಂತತಿಯುವರಿಗೆ ಹಕ್ಕುಂಟಾಗುವುದು. ಆದರೆ,

ಆ ಸೊತ್ತು ಕುಮಾರರಿಗೆ ಸೇರುವುದಕ್ಕೆ ಪೂರ್ವದಲ್ಲಿ, ಅವರಲ್ಲಿ ಯಾರಾದರೂ ಸತ್ತುಹೋದಪಕ್ಷದಲ್ಲಿ, ಹಾಗೆ ಸತ್ತುಹೋದವನ ಹೆಂಡತಿಗಾದರೂ ಕುಮಾರರಿಗಾದರೂ ಯಾವಹಕ್ಕೂ ಉಂಟಾಗದು. ಅಲಹಾಬಾದಿನಲ್ಲಿ ಒಬ್ಬನಿಗೆ ಅಧಿಕವಾದ ಸ್ವಾರ್ಜಿತ ಸ್ವತ್ತವಿದ್ದು ಇಬ್ಬರು ಮಕ್ಕಳಿದ್ದರು. ತಂದೆಯ ಜೀವಿತಕಾಲದಲ್ಲಿಯೇ ಒಬ್ಬ ಮಗನು ಸತ್ತುಹೋದಕಾರಣದಿಂದ ಸದರಿ ಸ್ವಾರ್ಜಿತ ಸ್ವತ್ತವೆಲ್ಲವೂ ಎರಡನೆಯಮಗನಿಗೆ ಸಲ್ಲಿತು. ಆಮೇಲೆ, ಸತ್ತವನ ವಿಧವೆ ಮೈದುನನಮೇಲೆ ಜೀವನಾಂಶದ ದಾವಾ ತಂದಳು. ಸ್ವಾರ್ಜಿತಾಸ್ತಿ ಪಿತ್ರಾರ್ಜಿತಾಸ್ತಿಯಾಗುವುದಕ್ಕೆ ಮೊದಲೇ ಆಕೆಯ ಗಂಡನು ಸತ್ತುಹೋದುದರಿಂದ, ಅದರಲ್ಲಿ ವಿತಂತುವಿಗೆ ಎಂತಹ ಹಕ್ಕೂ ಇಲ್ಲವೆಂದು ಹೈಕೋರ್ಟಿನವರು ತೀರ್ಮಾನಿಸಿದರು. (ಇ. ಲಾ. ರಿ. ೧೧ ಅ ೧೯೪.)

ತಂದೆಯ ಸ್ವತ್ತುವು ಕುಮಾರರಿಗೆ ವಾರಸು ಹಕ್ಕಿನಿಂದ ಬಾರದೆ ದಾನರೂಪಕವಾಗಿ ಬಂದಮಾತ್ರದಿಂದ ಅದು ಪಿತ್ರಾರ್ಜಿತವಾಗದೆ ಹೋಗಲಾರದು. ಒಂದು ಕುಟುಂಬದಲ್ಲಿ ತಂದೆತನ್ನ ಸ್ವಯಾರ್ಜಿತಾಸ್ತಿಯನ್ನು ಮನಸ್ಸು ಬಂದಂತೆ ಕುಮಾರರಿಗೆ ದಾನರೂಪಕವಾಗಿ ಹಂಚಿಟ್ಟನು. ಹಾಗೆ ಹಂಚಲ್ಪಟ್ಟರೂ, ಕುಮಾರರಿಗೆ ಬಂದ ಭಾಗಗಳು ಅವರ ಪಿತ್ರಾರ್ಜಿತವಾಗಿ ಭಾವಿಸಲ್ಪಡುವುವೆಂದೂ ಆ ಭಾಗಗಳಲ್ಲಿ ಅವರ ಮಕ್ಕಳಿಗೆ ಹಕ್ಕುಂಟೆಂದೂ ತೀರ್ಮಾನಿಸಲ್ಪಟ್ಟಿತು. (೬ ಸ ೨೧, ೨೩,)

ಉಯಿಲು ರೂಪಕವಾಗಿ ಬಂದ ಆಸ್ತಿ.—ಹಾಗೆಯೇ ತಂದೆ ಮುಂತಾದವರ ಬಳಿಯಿಂದ ಉಯಿಲು ಮೂಲಕವಾಗಿ ಬಂದ ಆಸ್ತಿ ಪಿತ್ರಾರ್ಜಿತವಾಗಿಯೇ ಭಾವಿಸಲ್ಪಡುವುದು (೨ ಮ ಹೈ. ೫೦, ೫೫; ಇ. ಲಾ. ರಿ. ೧೨ ಬೊಂ ೧೩೩.) ಆದರೆ, ಕುಮಾರರಿಗೆ ಸಂಪೂರ್ಣವಾದ ಸ್ವಾತಂತ್ರ್ಯವನ್ನು ಉಂಟುಮಾಡಿ ಅವರಿಗೆ ಸ್ವಾರ್ಜಿತವಾಗಿ ಸೇರಬೇಕೆಂಬ ಉದ್ದೇಶದಿಂದ ತಂದೆ ತನ್ನ ಸ್ವಾರ್ಜಿತ ಸ್ವತ್ತನ್ನು ಉಯಿಲು ಮೂಲಕವಾಗಿ ಕೊಟ್ಟುಹೋದರೆ, ಅದು ಆ ಕುಮಾರರ ಸ್ವಾರ್ಜಿತವಾಗಿಯೇ ಎಣಿಸಲ್ಪಡುವುದು. (ಇ. ಲಾ. ರಿ. ೧೦ ಬೊಂ ೫೨೮.)

ಅಡವು ಬಿಡಿಸಲ್ಪಟ್ಟ ಪಿತ್ರಾರ್ಜಿತವು.—ಒಬ್ಬನಿಗೆ ಭಾಗದಿಂದ ಕೊಂಚ ಪಿತ್ರಾರ್ಜಿತದ ಸೊತ್ತು ಬಂದಿತ್ತು. ಆದರೆ, ಅದು ಕೊಂಚ ಹೆಚ್ಚು ಕಡಿಮೆ ಅದರ ಕಿಮ್ಮತ್ತಿನವರೆಗೂ ಅಡವಿಗೆ ಒಳಪಟ್ಟಿತ್ತು. ಆಮೇಲೆ ಆತನು ತನ್ನ ಸ್ವಾರ್ಜಿತ ಧನದಿಂದ ಸದರಿ ಅಡವನ್ನು ಬಿಡಿಸಿದನು. ಹಾಗೆ ಅಡವು ಬಿಡಿಸಲ್ಪಟ್ಟ ಪಿತ್ರಾರ್ಜಿತದಲ್ಲಿ ಆತನ ಮಕ್ಕಳಿಗೆ ಹಕ್ಕುಂಟೆಂದು ಮದರಾಸು ಹೈಕೋರ್ಟಿನವರು ತೀರ್ಮಾನಿಸಿದರು. (೫ ಮ ಹೈ ೧೫೦.)

ಪಿತ್ರಾರ್ಜಿತದ ವೃದ್ಧಿ.—ಪಿತ್ರಾರ್ಜಿತದಿಂದ ಉಂಟಾದ ವೃದ್ಧಿ, ಎಂದರೆ, ಬಡ್ಡಿ ಮೊದಲಾದ ಆದಾಯವು, ಸದರಿ ಆದಾಯವನ್ನು ಕೂಡಿಟ್ಟು ಸಂಪಾದಿಸಿದ ಸೊತ್ತು, ಪಿತ್ರಾರ್ಜಿತದಿಂದ ವ್ಯಾಪಾರಮಾಡಿ ಸಂಪಾದಿಸಿದ ಲಾಭವು-ಇವು ಪಿತ್ರಾರ್ಜಿತವಾಗಿಯೇ ಭಾವಿಸಲ್ಪಡುವುದು. (೮ ಮ ಹೈ ೨೫ ಇ ಲಾ ರಿ ೮ ಕ ೧೩೦; ಇ ಲಾ ರಿ ೧೧ ಮ ೨೮೬; ಇ ಲಾ ರಿ ೭ ಅ ೪೦೨ ಇ ಲಾ ರಿ ೩ ಕ ೫೦೮.)

ಅವಿಭಕ್ತವಾದ ಜಮೀಂದಾರಿಯ ಆದಾಯವು.—ಒಂದು ಅವಿಭಾಜ್ಯವಾದ ಜಮೀಂದಾರಿ ಮಿತಾಕ್ಷರ ಧರ್ಮಶಾಸ್ತ್ರ ಪ್ರಕಾರವಾಗಿ ಸಮಷ್ಟಿ ಸ್ವತ್ತುವಾಗಿರಬಹುದು. ಎಂದರೆ, ಕುಟುಂಬದಲ್ಲಿ ಹಿರಿಯಮಗನುಮಾತ್ರವೇ ರಾಜ್ಯಾಧಿಕಾರಕ್ಕೆ ಹಕ್ಕುಂಟಾದವನಾಗಿ ಮಿಕ್ಕವರು ಜೀವನಾಂಶಕ್ಕೆಮಾತ್ರವೇ ಬಾಧ್ಯತೆಯುಂಟಾದವರಾದರೂ, ಹಿರಿಯವನು ಪುತ್ರಸಂತತಿಯಿಲ್ಲದೆ ಸತ್ತುಹೋದಪಕ್ಷದಲ್ಲಿ ಸದರಿ ಜಮೀಂದಾರಿಯಾಸ್ತಿ ಆತನ ಹೆಂಡತಿಗೆ ಸಲ್ಲದೆ ತಮ್ಮಂದಿರಲ್ಲಿ ಜ್ಯೇಷ್ಠನಿಗೆ ಸಲ್ಲುವುದು. (೯ ಮೂ ಇ ಅ ೫೩೯, ೫೪ ೬೧೦; ೧೨ ಮೂ ಇ ಅ ೩೩೨, ೩೩೬) ಆದರೆ, ರಾಜ್ಯವನ್ನಾಳುವ ಜಮೀಂದಾರು ಆತನ ಕಾಲದಲ್ಲಿ ಜಮೀಂದಾರಿ ಸೊತ್ತಿನಿಂದ ಮಾಡುವ ಆದಾಯವು ಆತನ ಸ್ವಾರ್ಜಿತವಾಗುವುದೆಂದೂ, ಅದನ್ನು ಆತನ ಮನಸ್ಸುಬಂದಂತೆ ಖರ್ಚು ಮಾಡಬಹುದೆಂದೂ, ಆತನು ಪುತ್ರಹೀನನಾಗಿ ಸತ್ತುಹೋದಪಕ್ಷ ಸದರಿ ಆದಾಯವೂ ಅದರೊಡನೆ ಸಂಪಾದಿಸಿದ ಆಸ್ತಿಯೂ ಆತನ ಹೆಂಡತಿ ಮೊದಲಾದ ವಾರಸರಿಗೆಸೇರುವುದಲ್ಲದೆ ಸೋದರರಿಗೆ ಸೇರದೆಂದೂ ತೀರ್ಮಾನಿಸಲ್ಪಟ್ಟಿದೆ. (೫ ಮ ಹೈ ೩೧, ೪೧; ೧೨ ಮೂ ಇ ಅ ೫೪೦.) ಒಂದು ಕೇಸಿನಲ್ಲಿ ಒಬ್ಬ ಪಾಳ್ಯಗಾರನು ಆತನ ಪಾಳಯಕ್ಕೆ ಸಂಬಂಧಿಸದ ಕೆಲವು ಸಾಲಗಳನ್ನು ಪಾಳಯದ ಆದಾಯದಿಂದ ಸಂಪಾದಿಸಿದ ಕೊಂಚ ಆಸ್ತಿಯನ್ನೂ ಇಟ್ಟು ಸತ್ತನು. ಈ ಆಸ್ತಿ ಆತನ ಸ್ವಾರ್ಜಿತ ವಾದುದರಿಂದ ಸದರಿ ಸಾಲಗಳನ್ನು ತೀರಿಸತಕ್ಕ ಭಾರವನ್ನು ವಹಿಸುವಂತೆ ತೀರ್ಮಾನಿಸಲ್ಪಟ್ಟಿತು (ಇ ಲಾ ರಿ ೩ ಮ ೧೪೫) ಒಬ್ಬ ಜಮೀಂದಾರನು ಆತನ ಕಾಲದಲ್ಲಿ ಮಾಡ ವಾದಾಯವು ಆತನಿಂದ ಖರ್ಚಿಡಲ್ಪಡದೆ ಆ ಬಳಿಕ ಜಮೀಂದಾರನಿಗೆ ಸೇರಿದರೆ ಅದು ಸಮಷ್ಟಿ ದ್ರವ್ಯವಾಗಿಯೇ ಎಣಿಸಲ್ಪಡುವುದು.

ಕುಟುಂಬದ್ರವ್ಯದಲ್ಲಿ ಸೇರಿಸಿದ ಸ್ವಾರ್ಜಿತವು.—ಸಮಷ್ಟಿ ಕುಟುಂಬದೊಳಗಣ ಭಾಗಸ್ಥನು ತಾನು ಸ್ವತಂತ್ರವಾಗಿ ಸಂಪಾದಿಸಿದ ಸ್ವಾರ್ಜಿತದಲ್ಲಿ ತನ್ನ ಹಕ್ಕನ್ನು ಸ್ಪಷ್ಟವಾಗಿ ಬಿಟ್ಟುಬಿಟ್ಟು ಅದನ್ನು ಕುಟುಂಬ ದ್ರವ್ಯದೊಡನೆ ಸೇರಿಸಿದ ಪಕ್ಷದಲ್ಲಿ, ಅದು ಪಿತ್ರಾರ್ಜಿತವಾಗಿಯೇ ಎಣಿಸಲ್ಪಡುವುದು. (ಇ ಲಾ ರಿ ೧೬ ಕ ೩೯೭; ೧೦ ಮೂ ಇ ಅ ೫೦೬; ಇ ಲಾ ರಿ ೭ ಮ ೪೫೮; ಇ

ಲಾ ರಿ ೧೦ ಕ ೩೯೨, ೩೯೮, ೪೦೧; ಇ ಲಾ ರಿ ೧೫ ಬೊಂ ೫೦೯; ಇ ಲಾ ರಿ ೧೮ ಕ ೩೪೧.)

ಸ್ವಾರ್ಜಿತ ವಿಷಯವಾಗಿ ಯಾಜ್ಞವಲ್ಕ್ಯಸ್ಮೃತಿ- ಪಿತೃದ್ರವ್ಯವನ್ನಾದರೂ ಉಪಯೋಗಿಸದೆ ಸ್ವಶಕ್ತಿಯಿಂದ ಸಂಪಾದಿಸಿದ ಆಸ್ತಿಯೂ, ತಾಯಿ, ತಾಯ ತಾಯಿ, ತಾಯತಂದೆ, ಅಣ್ಣತಮ್ಮಂದಿರು, ಚಿಕ್ಕಪ್ಪ ದೊಡ್ಡಪ್ಪಂದಿರು, ಇವರ ಮಕ್ಕಳು, ಈ ಮುಂತಾದವರ ಕಡೆಯಿಂದ ಬಂದ ಆಸ್ತಿಯೂ, ಸ್ವಾರ್ಜಿತವಾಗಿ ಎಣಿಸಲ್ಪಡುವುದೆಂದು ಮೇಲೆ ಹೇಳಿದೆವು. ಈ ವಿಷಯವಾಗಿ ಯಾಜ್ಞವಲ್ಕ್ಯಸ್ಮೃತಿಯೊಳಗೆ ಹೇಳಲ್ಪಟ್ಟಿರುವುದೇನಂದರೆ;—"ಪಿತೃದ್ರವ್ಯಕ್ಕೆ ನಷ್ಟವಿಲ್ಲದೆ ಒಬ್ಬ ಭಾಗಸ್ಥನು ಸ್ವಂತವಾಗಿ ಸಂಪಾದಿಸಿದ ಸೊತ್ತುಗಳು-ಎಂದರೆ, ಸ್ನೇಹಿತರಿಂದ ಕೊಡಲ್ಪಟ್ಟ ಬಹುಮಾನಗಳು, ವಿವಾಹಕಾಲದಲ್ಲಿ ಅತ್ತೆಮಾವಂದಿರು ಮುಂತಾದವರಿಂದ ಕೊಡಲ್ಪಡುವ ಸೊತ್ತುಗಳು-ಇವುಗಳಲ್ಲಿ ಮಿಕ್ಕ ಭಾಗಸ್ಥರಿಗೆ ಹಕ್ಕಿಲ್ಲವು.—ಹೋದ ಪಿತ್ರಾರ್ಜಿತವನ್ನು ಒಬ್ಬ ಭಾಗಸ್ಥನು ಮರಳಿ ಸಂಪಾದಿಸಿದರೆ ಅದನ್ನು ಇತರ ಭಾಗಸ್ಥರಿಗೆ ಕೊಡಬೇಕಾದುದಿಲ್ಲವು. ವಿದ್ಯೆಯಿಂದ ಸಂಪಾದಿಸಿದ ಹಣವನ್ನು ಕೂಡ ಕೊಡಬೇಕಾದುದಿಲ್ಲವು." ಈ ಹೇಳಲ್ಪಟ್ಟ ಸ್ವಾರ್ಜಿತದ ಹಕ್ಕುಗಳು ಬಹಳ ಕಡಿಮೆಯಾಗುವಹಾಗೆ ಮೇಲಣವಾಕ್ಯಕ್ಕೆ ವಿಜ್ಞಾನೇಶ್ವರನು ಮಿತಾಕ್ಷರ ಧರ್ಮಶಾಸ್ತ್ರದಲ್ಲಿ ಅರ್ಥಮಾಡಿರುವನು. ಎಂತಹ ಸ್ವಾರ್ಜಿತಕ್ಕಾದರೂ ಪಿತೃದ್ರವ್ಯ ಸಂಬಂಧವೆಷ್ಟುಮಾತ್ರವೂ ಇರಕೂಡದೆಂದೂ-ಪಿತೃದ್ರವ್ಯದ ವೆಚ್ಚದದೆಸೆಯಿಂದ ಉಂಟಾದ ಬಹುಮಾನಗಳು, ಹುಡುಗಿಯ ನಿಮಿತ್ತವಾಗಿ ಸೊತ್ತನ್ನೀವ ಅಸುರ ವಿವಾಹಗಳಲ್ಲಿ ಅಳಿಯನಿಗೆ ಕೊಡಲ್ಪಡುವ ಬಹುಮಾನಗಳು, ಪಿತೃದ್ರವ್ಯ ಸಹಾಯದಿಂದ ಮರಳಿ ಸಂಪಾದಿಸಲ್ಪಟ್ಟ ನಷ್ಟಪೈತೃಕವು, ಪಿತೃದ್ರವ್ಯವನ್ನು ವೆಚ್ಚಿಸಿ ಕಲಿತುಕೊಂಡ ವಿದ್ಯೆಯಿಂದ ಸಂಪಾದಿಸಲ್ಪಟ್ಟ ಹಣವು, ಇವುಗಳನ್ನು ಸಮುಷ್ಟಿ ಸೊತ್ತುಗಳನ್ನಾಗಿಯೇ ಎಣಿಸಬೇಕೆಂದು ಮಿತಾಕ್ಷರ ಹೇಳುವುದು. ಈ ಅರ್ಥವನ್ನು ಅನುಸರಿಸಿ ಒಂದು ಕೇಸಿನಲ್ಲಿ ಮದರಾಸು ಹೈಕೋರ್ಟಿನವರು ಮಾತಾಮಹನ (ತಾಯತಂದೆ) ಬಳಿಯಿಂದಬಂದ ಆಸ್ತಿ ಸ್ವಯಾರ್ಜಿತವಲ್ಲವೆಂದು ತೀರ್ಮಾನಿಸಿದರು. ಪ್ರಿವೀ ಕೌನ್ಸಿಲಿನವರುಕೂಡ ಆತೀರ್ಮಾನವನ್ನು ಒಪ್ಪಿಕೊಂಡರು. (ಇ ಲಾ ರಿ ೩ ಮ ೩೭೦.) ಸಾಧ್ಯವಾದಮಟ್ಟಿಗೂ ಸ್ವಯಾರ್ಜಿತದ ಹಕ್ಕನ್ನು ತಗ್ಗಿಸುವಹಾಗೆಯೇ ಪೂರ್ವಕಾಲದಲ್ಲಿ ಮದರಾಸು ಹೈಕೋರ್ಟಿನವರು ತೀರ್ಮಾನಿಸುತ್ತಿದ್ದರು. ಆದರೆ, ಈಚೀಚೆಗೆ ಅವರ ದಾರಿ ಕೊಂಚಬದಲಿಸಿ ಸ್ವಾರ್ಜಿತಕ್ಕೆ ಸಹಕಾರಿಯಾಗಿ ಏರ್ಪಟ್ಟಿತು. ವಿದ್ಯೆಯಿಂದ ಸಂಪಾದಿಸಲ್ಪಡುವ ದ್ರವ್ಯವು ಸ್ವಾರ್ಜಿತವೋ, ಎಂಬ ವಿಷಯದಲ್ಲಿ ಈ ಸಂಗತಿ ಸ್ಪಷ್ಟಪಡಬಹುದು.

ವಿದ್ಯಾಧನವು.—ಪಿತೃದ್ರವ್ಯ ಸಹಾಯವನ್ನು ಎಷ್ಟುಮಾತ್ರವೂ ಹೊಂದದೆ, ಕುಟುಂಬವನ್ನು ಬಿಟ್ಟು ಇತರರ ಮನೆಗಳಲ್ಲಿದ್ದು ಇತರರ ಸಹಾಯದಿಂದಲೇ ವಿದ್ಯೆ ಕಲಿತಪಕ್ಷದಲ್ಲಿ, ಅಂತಹ ವಿದ್ಯೆಯಿಂದ ಸಂಪಾದಿಸಲ್ಪಡುವ ದ್ರವ್ಯವು ಸ್ವಾರ್ಜಿತ ವಾಗುವುದೆಂದೂ-ಎಷ್ಟುಮಾತ್ರವಾದರೂ ಪಿತೃದ್ರವ್ಯ ಸಹಾಯವನ್ನು ಹೊಂದಿಯಾದರೂ, ಕುಟುಂಬದಲ್ಲಿ ಅವರ ಉಪಾಧ್ಯಾಯತ್ವದಿಂದಾದರೂ ಕಲಿತ ವಿದ್ಯೆಯಿಂದ ಸಂಪಾದಿಸಲ್ಪಡುವ ದ್ರವ್ಯವು ಸ್ವಾರ್ಜಿತವಲ್ಲವೆಂದೂ-ಇದರಲ್ಲಿ ಎಲ್ಲಾ ಭಾಗಸ್ಥರಿಗೂ ಹಕ್ಕು ಉಂಟೆಂದೂ-ನಾರದ ಕಾತ್ಯಾಯನ ಬೃಹಸ್ಪತಿ ವ್ಯಾಸಾದಿ ಮಹರ್ಷಿಗಳು ರಚಿಸಿದ ಸ್ಮೃತಿಗಳು ಹೇಳುವುವು. ಇವರಲ್ಲಿ ಕೆಲವರು ಸ್ಮೃತಿಕಾರರು ಮಾತ್ರವೇ ಹಾಗೆ ಪಿತ್ರಾರ್ಜಿತ ಸಹಾಯದಿಂದ ವಿದ್ಯೆ ಕಲಿತು ಧನಸಂಪಾದನೆ ಮಾಡಿದವನಿಗೆ ಎರಡರಷ್ಟು ಭಾಗ ಉಂಟೆಂದು ಹೇಳುವರು. ಯಾಜ್ಞವಲ್ಕ್ಯಸ್ಮೃತಿ ವಾಕ್ಯವನ್ನು ಹಿಡಿದು ಸುಮಷ್ಟಿ ಕುಟುಂಬದಲ್ಲಿ ಭೋಜನಾದಿಗಳು ನಡೆದರೂ ವಿದ್ಯಾಧನವು ಸ್ವಾರ್ಜಿತವೇ ಎಂದು ಹೇಳಬಹುದು. ಆದರೆ, ಆ ವಾಕ್ಯಕ್ಕೆ ಮಿತಾಕ್ಷರದಲ್ಲಿ ಮಾಡಲ್ಪಟ್ಟ ಅರ್ಥವನ್ನು ಪರಿಕಿಸಲು-ಸಮಷ್ಟಿಕುಟುಂಬದಲ್ಲಿ ಯಾರ ಉಪಾಧ್ಯಾಯತ್ವದಿಂದಾದರೂ ವಿದ್ಯೆ ಕಲಿತುಕೊಳ್ಳಲ್ಪಟ್ಟ ಪಕ್ಷದಲ್ಲಿ, ಅಂತಹ ವಿದ್ಯೆಯಿಂದ ಸಂಪಾದಿಸಲ್ಪಡುವ ದ್ರವ್ಯವು ಸ್ವಾರ್ಜಿತವಾಗಲಾರದೆಂದು ಏರ್ಪಡುವುದು. ಈ ವಿಷಯದಲ್ಲಿ ವೀರ ಮಿತ್ರೋದಯವು, ಸ್ಮೃತಿಚಂದ್ರಿಕೆ, ವಿವಾದ ಚಿಂತಾಮಣಿ, ವ್ಯವಹಾರಮಯೂಖವು, ಈ ಧರ್ಮಶಾಸ್ತ್ರಗಳುಕೂಡ ಮಿತಾಕ್ಷರವನ್ನು ಅನುಸರಿಸಿವೆ.

ಧಾಯಭಾಗವು.—ಜೀಮೂತವಾಹನನು ರಚಿಸಿದ ದಾಯಭಾಗಗ್ರಂಥವು ಮಾತ್ರವು ಭಿನ್ನಾಭಿಪ್ರಾಯವುಳ್ಳದ್ದಾಗಿದೆ. ವಿದ್ಯೆ ಕಲಿತುಕೊಳ್ಳುವ ಕಾಲದಲ್ಲಿ ಅನ್ನವಸ್ತ್ರಾದಿಗಳ ನಿಮಿತ್ತವಾಗಿ ಸಮಷ್ಟಿ ದ್ರವ್ಯವನುಭವಿಸಲ್ಪಟ್ಟ ಮಾತ್ರದಿಂದ ಆ ವಿದ್ಯೆಯಿಂದ ಸಂಪಾದಿಸಲ್ಪಡುವ ದ್ರವ್ಯವು ಸಮಷ್ಟಿದ್ರವ್ಯವಾಗಲಾಗಲಾರದೆಂದೂ, ಅನ್ನವಸ್ತ್ರಾದಿಗಳ ನಿಮಿತ್ತವಾದ ಅನುಭವವು ಪ್ರಾಣರಕ್ಷಾರ್ಥವಾದುದರಿಂದ ಮಾತೃಸ್ತನ್ಯಪಾನದೊಡನೆ ಸಮಾನವಾಗಿ ಭಾವಿಸಲ್ಪಡಬೇಕೆಂದೂ, ಜೀಮೂತವಾಹನನು ಹೇಳುವನು. ಈತನ ಅಭಿಪ್ರಾಯಪ್ರಕಾರವು, ಪಿತೃದ್ರವ್ಯವನ್ನು ವೆಚ್ಚಿಸಿ ವಿದ್ಯೆ ಕಲಿಸಿದರೂ ಅದು ಸಾಮಾನ್ಯ ವಿದ್ಯೆಯಾದಪಕ್ಷದಲ್ಲಿ ಅದರಿಂದ ಸಂಪಾದಿಸಲ್ಪಡುವ ದ್ರವ್ಯವು ಸ್ವಾರ್ಜಿತವಾಗುವುದು. ಅದು ವಿಶೇಷವಿದ್ಯೆಯಾಗಿದ್ದರೆ, ಅದರಿಂದ ಕುಟುಂಬಕ್ಕೆ ಲಾಭವನ್ನುಂಟುಮಾಡಬೇಕೆಂಬ ಉದ್ದೇಶದಿಂದ ಪಿತೃದ್ರವ್ಯವು ವೆಚ್ಚಿಸಲ್ಪಟ್ಟಿತೆಂದು ಊಹಿಸಲ್ಪಡಬಹುದಾದುದರಿಂದ ಅಂತಹ ವಿಶೇಷ ವಿದ್ಯೆಯಿಂದ ಸಂಪಾದಿಸಲ್ಪಡುವ ದ್ರವ್ಯವು ಸಮಷ್ಟಿದ್ರವ್ಯವಾಗುವುದು. ಆಲೋಚಿಸಿ ನೋಡು

ವಲ್ಲಿ, ಇದು ಬಹಳ ನ್ಯಾಯವಾಗಿದೆ. ಪಿತ್ರಾರ್ಜಿತದಿಂದ ನಾಲ್ಕುಮಂದಿ ಯಂತೆ ಸಾಮಾನ್ಯ ವಿದ್ಯಾಭ್ಯಾಸಮಾತ್ರವನ್ನೇಹೊಂದಿ, ಬಳಿಕ ಯಾವುದಾದರೂ ವಿಶೇಷ ವಿದ್ಯೆಯನ್ನು ಸ್ವತಂತ್ರವಾಗಿ ಕಲಿತುಕೊಂಡಾಗಲಿ ಉದ್ಯೋಗ ಪ್ರಾವೀಣ್ಯಗಳಿಂದಾಗಲಿ ಸಂಪಾದಿಸಿದ ಸೊತ್ತು ಸ್ವಾರ್ಜಿತವಾಗುವುದು ಕ್ರಮವೇ. ಕುಟುಂಬದ್ರವ್ಯವನ್ನು ಸಾವಿರಾರುಮಟ್ಟಿಗೆ ವೆಚ್ಚಿಸಿ ಒಬ್ಬನನ್ನು ಇಂಗ್ಲಾಂಡುದೇಶಕ್ಕೆ ಕಳುಹಿಸಿ ಕಲೆಕ್ಟರುಪರೀಕ್ಷೆಗೋ ಬಾರಿಸ್ಟರುಪರೀಕ್ಷೆಗೋ ತಯಾರುಮಾಡಿಸಿದಾಗ, ಆತನು ಸಂಪಾದಿಸುವದ್ರವ್ಯವು ಕುಟುಂಬಕ್ಕೆ ಸಮುಷ್ಟಿಯಾಗಿ ಸೇರಬೇಕೆಂಬುದೂ ಕ್ರಮವಾಗಿಯೇ ಇದೆ.

ವಿದ್ಯಾಧನವು ತೀರ್ಮಾನಗಳು.—ನಾಟ್ಯಾಭಿನಯಾದಿ ವಿದ್ಯೆಗಳಿಂದ ಒಬ್ಬ ವೇಶ್ಯೆ ಸಂಪಾದಿಸಿದ ಸೊತ್ತು, ಆವೇಶ್ಯೆಗೂ ಒಡವೆ ವೆಚ್ಚಿಸಿ ಸದರಿ ವಿದ್ಯೆಗಳನ್ನು ಕಲಿಸಿದ ತಾಯಿಗೂ ಸಮುಷ್ಟಿಯಾಗಿ ಭಾವಿಸಲ್ಪಡುವೆಂದು ಒಂದು ಕೇಸಿನೊಳಗೆ ೧೮೬೪ ಸಂ॥ದಲ್ಲಿ ಮದರಾಸು ಹೈಕೋರ್ಟಿನವರು ತೀರ್ಮಾನಿಸಿದರು. (೨ ಮ ಹೈ ೫೬.) ಆಮೇಲೆ ಮತ್ತೊಂದು ಕೇಸಿನಲ್ಲಿ ಒಬ್ಬ ವಕೀಲು ಸಂಪಾದಿಸಿದಸೊತ್ತು ಸಮುಷ್ಟಿ ಸೊತ್ತೆಂದು ೧೮೭೪ ಸಂ॥ದಲ್ಲಿ ಮದರಾಸು ಹೈಕೋರ್ಟಿನವರು ತೀರ್ಮಾನಿಸಿದರು. ಕುಟುಂಬದ್ರವ್ಯವನ್ನು ವೆಚ್ಚಿಸಿ ಆ ವಕೀಲನಿಗೆ ವಿಶೇಷ ವಿದ್ಯೆಏನನ್ನೂ ಕಲಿಸದೆಯಿದ್ದಂತೆ ಕಾಣಬಂದರೂ, ಸಾಮಾನ್ಯ ವಿದ್ಯಾಭ್ಯಾಸ ನಿಮಿತ್ತವಾಗಿ ಕುಟುಂಬದ್ರವ್ಯವು ವೆಚ್ಚಿಸಲ್ಪಟ್ಟಿತೆಂಬ ಹೇತುವಿನಿಂದ ಹಾಗೆ ತೀರ್ಮಾನಿಸಲ್ಪಟ್ಟಿತು. (೭ ಮ ಹೈ ೪೭) ೧೮೬೮ ಸಂ॥ ದಲ್ಲಿ ಕಲಕತ್ತಾ ಹೈಕೋರ್ಟಿನವರಮುಂದೆ ಒಂದು ಕೇಸಿನಲ್ಲಿ ಕುಟುಂಬದ್ರವ್ಯದಿಂದ ಸಾಮಾನ್ಯ ವಿದ್ಯಾಭ್ಯಾಸವನ್ನು ಮಾತ್ರವೇ ಹೊಂದಿದಮೇಲೆ ದೊಡ್ಡಧಿಕಾರವನ್ನು ಮಾಡಿ ಒಬ್ಬನು ಸಂಪಾದಿಸಿದ ದ್ರವ್ಯವು ಸಮುಷ್ಟಿ ಸೊತ್ತಾಗುವುದೆಂದು ವಾದಿಸಲ್ಪಟ್ಟಿತು. ಆದರೆ, ಕೋರ್ಟಿನವರು ಆವಾದವನ್ನು ಅಂಗೀಕರಿಸದೆ ಸದರಿ ಸೊತ್ತನ್ನು ಸ್ವಾರ್ಜಿತವನ್ನಾಗಿ ತೀರ್ಮಾನಿಸಿದರು. (೧೧ ಕ ಹೈ ೨೦೧.) ೧೮೭೭ ಸಂ॥ ದಲ್ಲಿ ಒಂದು ಸೀಮೆಯುಪ್ಪೀಲಿನಲ್ಲಿ, ಸಮುಷ್ಟಿ ಕುಟುಂಬದೊಳಗಣ ಭಾಗಸ್ಥನು ಸ್ವಪ್ರಯೋಜಕತ್ವದಿಂದ ಸಂಪಾದಿಸುವ ದ್ರವ್ಯವು ಸಮುಷ್ಟಿ ದ್ರವ್ಯವಾಗುವುದಕ್ಕೆ ಕುಟುಂಬದ್ರವ್ಯದ ಸಹಾಯದಿಂದ ಆತನು ಯಾವುದೋ ಒಂದು ಸಾಮಾನ್ಯ ವಿದ್ಯಾಭ್ಯಾಸವನ್ನು ಹೊಂದಿರುವುದು ಸಾಲದೆಂದೂ, ಕುಟುಂಬದ್ರವ್ಯವನ್ನು ವೆಚ್ಚಿಸಿ ಯಾವುದಾದರೂ ವಿಶೇಷ ವಿದ್ಯೆಯನ್ನಭ್ಯಾಸಮಾಡಿ ಅದರಿಂದ ಆತನು ಸ್ವತ್ತನ್ನು ಸಂಪಾದಿಸಿದಂತೆ ಏರ್ಪಡಬೇಕೆಂದೂ, ೧೮೬೪ ಸಂ॥ ದಲ್ಲಿ ಮದರಾಸು ಹೈಕೋರ್ಟಿನವರು ವೇಶ್ಯೆಯ ದಾವೆಯಲ್ಲಿಕೊಟ್ಟ ತೀರ್ಮಾನವು ಸದರಿ ವೇಶ್ಯೆಗೆ ವಿಶೇಷ ವಿದ್ಯೆ ಕಲಿಸಲ್ಪಟ್ಟಿತೆಂಬ ಕಾರಣವನ್ನನುಸರಿಸಿತೆಂದೂ, ವಿದ್ಯಾಧನ ವಿಷಯ

ವಾಗಿ ಮದರಾಸು ಹೈಕೋರ್ಟಿನವರ ತೀರ್ಮಾನಗಳಿಗಿಂತಲೂ ಕಲಕತ್ತಾ ಹೈಕೋರ್ಟಿನವರ ಅಭಿಪ್ರಾಯಗಳೇ ತಮಗೆ ಸಮ್ಮತವಾಗಿದ್ದುವೆಂದೂ, ಪ್ರಿವೀ ಕೌನ್ಸಿಲಿನವರು ತೀರ್ಮಾನಿಸಿದರು. (ಇ ಲಾ ರಿ ೧ ಮ ೧೫೨) ಈಚೇಚಿಗೆ ೧೮೮೧ ಸಂ|| ದಲ್ಲಿ ಮದರಾಸು ಹೈಕೋರ್ಟಿನವರಮುಂದೆ ವಾದಿಸಲ್ಪಟ್ಟ ಒಂದು ಅಪ್ಪೀಲಿನಲ್ಲಿ, ತನ್ನ ತಾಯಿಂದ ಸಾಮಾನ್ಯಗಾನವಿದ್ಯೆಯನ್ನು ಮಾತ್ರವೇ ಕಲಿತುಕೊಂಡು ಒಬ್ಬ ವೇಶ್ಯಾಸ್ತ್ರೀ ಸೂಳೆಯತನದಿಂದ ಸಂಪಾದಿಸಿದ ಸೊತ್ತು ಸಮಷ್ಟಿ ಸ್ವತ್ತಲ್ಲವೆಂದು ತೀರ್ಮಾನಿಸಲ್ಪಟ್ಟಿತು. (ಇ ಲಾ ರಿ ೪ ಮ ೩೩೦.) ೧೮೮೨ ಸಂ|| ದಲ್ಲಿ ಬೊಂಬಯಿ ಹೈಕೋರ್ಟಿನವರು, ವಿದ್ಯಾಧನ ವಿಷಯಕವಾಗಿ ಸ್ಮೃತಿಗಳನ್ನೂ ತೀರ್ಮಾನಗಳನ್ನೂ ಸಾಕಲ್ಯವಾಗಿ ಪರಿಶೀಲಿಸಿ, ಒಬ್ಬನು ಕುಟುಂಬದ್ರವ್ಯ ಸಹಾಯದಿಂದ ಸಾಮಾನ್ಯ ವಿದ್ಯಾಭ್ಯಾಸವನ್ನು ಮಾತ್ರವೇ ಹೊಂದಿ, ಬಳಿಕ ಸ್ವಪ್ರಯೋಜಕತ್ವದಿಂದ ಲಾ ಪರೀಕ್ಷೆಗಳನ್ನು ಕೊಟ್ಟು ಸಬ್ಜಡ್ಜಿ ಅಧಿಕಾರವನ್ನು ಮಾಡಿ ಸಂಪಾದಿಸಿದ ಸೊತ್ತು ಷ್ಟಿ ಸ್ವತ್ತಾಗಲಾರದೆಂದೂ, ಸಮಷ್ಟಿದ್ರವ್ಯ ವ್ಯಯದಿಂದ ಯಾವುದೋ ಒಂದು ವಿಶೇಷವಿದ್ಯೆ ಕಲಿಸಲ್ಪಟ್ಟು, ಅಂತಹ ವಿಶೇಷವಿದ್ಯೆಯೇ ಪ್ರಧಾನ ಮೂಲವಾಗಿ ಸಂಪಾದಿಸಲ್ಪಟ್ಟ ಸ್ವತ್ತು ಮಾತ್ರವೇ ಸಮಷ್ಟಿ ಸ್ವತ್ತಾಗುವುದೆಂದೂ ತೀರ್ಮಾನಿಸಿದರು. (ಇ ಲಾ ರಿ ೬ ಬೊಂ ೨೨೮) ೧೮೯೧ ಸಂ|| ದಲ್ಲಿ ಮತ್ತೊಂದು ಕೇಸಿನಲ್ಲಿ ಈ ತೀರ್ಮಾನವನನುಸರಿಸಲ್ಪಟ್ಟಿತು. (ಇ ಲಾ ರಿ ೧೫ ಬೊಂ ೩೨.)

ಈ ತೀರ್ಮಾನಗಳನ್ನು ಹಿಡಿದು, ವಿದ್ಯಾಧನವು ಸಾಮಾನ್ಯವಾಗಿ ಸ್ವಾರ್ಜಿತವೇ ಎಂದೂ, ಕುಟುಂಬದ್ರವ್ಯವನ್ನು ವೆಚ್ಚಿಸಿ ಸಮಷ್ಟಿ ಲಾಭನಿಮಿತ್ತಕವಾಗಿ ಯಾವುದೋ ದೊಡ್ಡ ವಿಶೇಷವಿದ್ಯೆ ಕಲಿಸಲ್ಪಟ್ಟು ಅಂತಹವಿದ್ಯೆ ಪ್ರಧಾನ ಮೂಲವಾಗಿ ಸಂಪಾದಿಸಲ್ಪಟ್ಟ ಧನವು ಮಾತ್ರವೇ ಸಮಷ್ಟಿಧನವಾಗುವುದೆಂದೂ, ಏರ್ಪಡುವುದು.

ಸಮಷ್ಟಿದ್ರವ್ಯ ಸಹಾಯದಿಂದ ಸಂಪಾದಿಸಿದ ಸ್ವತ್ತು.—ಸಮಷ್ಟಿದ್ರವ್ಯವನ್ನು ಅಲ್ಪವಾಗಿ ಉಪಯೋಗಿಸಿ ಸಮಷ್ಟಿ ಭಾಗಸ್ಥರಲ್ಲೊಬ್ಬನು ಸ್ವಪ್ರಯೋಜಕತ್ವದಿಂದ ಪ್ರತ್ಯೇಕವಾದಾಸ್ತಿಯನ್ನು ಸಂಪಾದಿಸಿದ ಪಕ್ಷದಲ್ಲಿ, ಅದರಲ್ಲಿ ಆತನಿಗೆ ದ್ವಿಗುಣವಾಗಿ ಭಾಗವುಂಟೆಂದು ಕೆಲವರು ಸ್ಮೃತಿಕಾರರು ಹೇಳುವರು. ಮಿತಾಕ್ಷರವನ್ನು ಹಿಡಿದು ಇಂತಹ ದ್ವಿಗುಣಭಾಗವಿಲ್ಲವು. ಆದರೆ ಬಂಗಾಳಾ ದೇಶದಲ್ಲಿ ಉಂಟೆಂದು ಕೆಲವು ಕೇಸುಗಳಲ್ಲಿ ತೀರ್ಮಾನಿಸಲ್ಪಟ್ಟಿತು. (೧ ಬಂ. ಸ ತೀ. ೬ ೩೩೬; ೩ ಬಂ. ಸ. ತೀ. ೯೮; ೫ ಬಂ. ಸ. ತೀ ೩೩೫.)

ಹೋದ ಪಿತ್ರಾರ್ಜಿತವು.—ಹಿರಿಯರ ದೆಸೆಯಿಂದ ಹೋಗೊಳಿಸಲ್ಪಟ್ಟ ಸಮುಷ್ಟಿ ಕುಟುಂಬದವರು ತಂದುಕೊಳ್ಳಲಾರದೆ ಸುತರಾಂ ಹಕ್ಕು ಬಿಟ್ಟು ಕೊಂಡ ಪಿತ್ರಾರ್ಜಿತದ ಸ್ವತ್ತನ್ನು ಯಾವುದನ್ನಾದರೂ, ಸಮುಷ್ಟಿ ಕುಟುಂಬದಲ್ಲಿ ಒಬ್ಬಭಾಗಸ್ಥನು ಪಿತೃದ್ರವ್ಯ ಸಹಾಯುವನ್ನಾದರೂ ಇತರ ಭಾಗಸ್ಥರ ಸಹಾಯುವನ್ನಾದರೂ ಎಷ್ಟುಮಾತ್ರವೂ ಹೊಂದದೆ ಸ್ವಪ್ರಯಾಸದಿಂದ ಇತರರ ಸ್ವಾಧೀನದೊಳಗಿನಿಂದ ತಪ್ಪಿಸಿ ತನ್ನ ಸ್ವಾಧೀನಮಾಡಿಕೊಂಡ ಪಕ್ಷದಲ್ಲಿ ಅಂತಹ ಸೊತ್ತು ಸದರಿ ಭಾಗಸ್ಥನ ಸ್ವಾರ್ಜಿತವಾಗಿ ಎಣಿಸಲ್ಪಡುವುದೆಂದು ಹೇಳಲ್ಪಟ್ಟಿದೆ. (೫ ಮು ಹೈ ೧೫೦.) ಆದರೆ, ಹಾಗೆ ಸಂಪಾದಿಸಲ್ಪಟ್ಟ ಸೊತ್ತು ಸ್ಥಿರಾಸ್ತಿಯಾಗಿದ್ದ ಪಕ್ಷದಲ್ಲಿ, ಸಂಪಾದಿಸಿದವನಿಗೆ ಪ್ರತ್ಯೇಕವಾಗಿ ಅದರೊಳಗೆ ನಾಲ್ಕನೆಯ ಭಾಗವನ್ನು ಕೊಟ್ಟು, ಮಿಕ್ಕದ್ದನ್ನು ಎಲ್ಲಾ ಭಾಗಸ್ಥರೂ ಸಮಾನವಾಗಿ ಹಂಚಿಕೊಳ್ಳಬೇಕೆಂದು ಮಿತಾಕ್ಷರದಲ್ಲಿಯೇ ಮತ್ತೊಂದು ಕಡೆ ಹೇಳಲ್ಪಟ್ಟಿದೆ. ಸಂಪಾದಿಸಿದವನು ತಂದೆಯಾಗಿದ್ದಾಗಮಾತ್ರವೇ ಮೇಲೆ ಹೇಳಲ್ಪಟ್ಟ ಮೊದಲನೆಯ ಪದ್ಧತಿ ಸಲ್ಲುವುದೆಂದೂ, ಅಣ್ಣತಮ್ಮಂದಿರು ಮೊದಲಾದವರಲ್ಲಿ ಯಾರಾದರೂ ಸಂಪಾದಿಸಿದಾಗ ಎರಡನೆಯ ಪದ್ಧತಿ ಸಲ್ಲುವುದೆಂದೂ ಮೆಯುರ್ ಧೊರೆಗಳು ಅನ್ವಯಿಸಿದರು. ಬಂಗಾಳಾ ಸಂಪ್ರದಾಯದವರು ತಂದೆಯೆಂದೂ ಇತರ ಭಾಗಸ್ಥರೆಂದೂ ಭೇದವನ್ನು ಪರಿಕಿಸದೆ ಭೂಸ್ಥಿತಿ ವಿಷಯದಲ್ಲಿ ಎರಡನೆಯ ಪದ್ಧತಿಯನ್ನೇ ಅನುಸರಿಸುತ್ತಿರುವರು.

ಸರ್ಕಾರದವರ ಇನಾಮುಗಳು.—ಸರ್ಕಾರದವರಿಂದ ಇನಾಮಾಗಿ ಕೊಡಲ್ಪಟ್ಟ ಎಸ್ಟೇಟುಗಳೂ, ಕುಟುಂಬದಲ್ಲಿ ಒಬ್ಬನ ಅಪರಾಧದ ಕೆಳಗೆ ಸರ್ಕಾರದವರಿಂದ ದಂಡವಾಗಿ ತೆಗೆದುಕೊಳ್ಳಲ್ಪಟ್ಟು ಬಳಿಕ ಮತ್ತೊಬ್ಬನಿಗೆ ಕೊಡಲ್ಪಟ್ಟ ಎಸ್ಟೇಟುಗಳೂ, ಸ್ವಾರ್ಜಿತಗಳಾಗಿ ಎಣಿಸಲ್ಪಡುವುವು. (೯ ಮೂ ಇ ಅ ೬೦೬; ಇ ಲಾ ರಿ ಲ ಕ ೭೬೯; ಇ ಲಾ ರಿ ೩ ಬೊಂ ೧೮೬.) ಆದರೆ ಅಪರಾಧದ ಕೆಳಗೆ ದಂಡವಾಗಿ ಸರ್ಕಾರದವರ ದೆಸೆಯಿಂದ ತೆಗೆದುಕೊಳ್ಳಲ್ಪಟ್ಟ ಆಸ್ತಿ ವಿಷಯವಾಗಿ ಹಾಗೆ ದಂಡವಾಗಿ ತೆಗೆದುಕೊಳ್ಳುವುದು ಅಕ್ರಮವೆಂದು ಬಳಿಕ ತೀರ್ಮಾನಿಸಲ್ಪಟ್ಟು ಸದರಿ ಆಸ್ತಿ ಯಾರಿಗೂ ಕೊಡಲ್ಪಡದೆ ಇರುವಾಗ ಅದು ಹಿಂದಣ ಹಕ್ಕನ್ನನುಸರಿಸಿ ಸಮುಷ್ಟಿ ಸೊತ್ತಾಗಿಯೇ ಭಾವಿಸಲ್ಪಡುವುದು. (ಇ ಲಾ ರಿ ೧೨ ಕ ೧.) ಹಾಗೆಯೇ ತೆರಿಗೆ ನಿಮಿತ್ತವಾಗಿ ಒಟ್ಟಾಗಿ ಸೊತ್ತು ತೆಗೆದುಕೊಂಡು, ಒಬ್ಬನ ಎಸ್ಟೇಟು ವಿಷಯವಾಗಿ ಸರ್ಕಾರದವರು ಹೊಸದಾಗಿ ಪಟ್ಟಾ ಕೊಟ್ಟಪಕ್ಷದಲ್ಲಿ, ಅಂತಹ ಪಟ್ಟಾವಿನಿಂದ ಸದರಿ ಎಸ್ಟೇಟು ಸ್ವಾರ್ಜಿತವಾಗಲಾರದು. (ಇ. ಲಾ. ರಿ. ೧೦ ಮ ೧.)

ರುಜುವಾತಿನ ಭಾರವು—ಸಾಧಾರಣವಾಗಿ ಹಿಂದೂ ಕುಟುಂಬಗಳು ಸಮುಷ್ಟಿ ಕುಟುಂಬಗಳಾಗಿ ಭಾವಿಸಲ್ಪಡುವುವು. ಮತ್ತು ಸಮುಷ್ಟಿ ಕುಟುಂಬ

ದಲ್ಲಿ ಒಬ್ಬ ಭಾಗಸ್ಥನ ಬಳಿಯೇ ಇದ್ದರೂ ಸೊತ್ತು ಸಮಷ್ಟಿಸೊತ್ತಾಗಿಯೇ ಭಾವಿಸಲ್ಪಡುವುದು. ಆದುದರಿಂದ ವಿಭಾಗವು ನಡೆಯಿತೆಂದು ವಾದಿಸುವವರೇ ಆ ವಿಷಯವನ್ನು ತಕ್ಕ ರುಜುವಾತಿನಿಂದ ಸ್ಥಾಪಿಸಬೇಕಾಗಿರುವುದು. ಹಾಗೆಯೇ ಯಾವುದಾದರೂ ಸೊತ್ತು ತನ್ನ ಸ್ವಾರ್ಜಿತವೆಂದು ಸಮಷ್ಟಿ ಕುಟುಂಬದಲ್ಲಿ ಒಬ್ಬ ಭಾಗಸ್ಥನು ವಾದಿಸಿದಪಕ್ಷದಲ್ಲಿ ಆ ವಿಷಯವನ್ನು ಆತನೇ ರುಜುವಾತು ಮಾಡಬೇಕು. (ಇ ಲಾ ರಿ ೬ ಬೊಂ ೨೨೫; ಇ ಲಾ ರಿ ಲ ಬೊಂ ೧೫೪; ಇ ಲಾ ರಿ ಲ ಕ ೫೦೭; ಇ ಲಾ ರಿ ೨ ಮ ೧೯.) ಸರ್ಕಾರಿ ಲೆಕ್ಕಗಳು ಮುಂತಾದವುಗಳಲ್ಲಿ ಸೊತ್ತು ಒಬ್ಬ ಭಾಗಸ್ಥನ ಹೆಸರಿನಲ್ಲಿಯೇ ಇದ್ದಷ್ಟುಮಾತ್ರದಿಂದ ಅದು ಆತನ ಸ್ವಾರ್ಜಿತವೆಂದು ಎಣಿಸಕೂಡದು. (೧೧ ಮೂ ಇ ಅ ೬೩೯.) ಆದರೆ, ಆಯಾಸಂಗತಿ ಸಂದರ್ಭಗಳನ್ನು ಹಿಡಿದು ರುಜುವಾತಿನ ಭಾರವು ತಪ್ಪಬಹುದು. ಇದು ಹೇಗೆಂದರೆ;—

(೧) ಸಮಷ್ಟಿಯಾಸ್ತಿ ಎಷ್ಟುಮಾತ್ರವೂ ಇಲ್ಲ ಅಲ್ಲದೆ, ಪ್ರತಿವಾದಿಯು ಸ್ವಾಧೀನದಲ್ಲಿ ಸಮಷ್ಟಿ ಯಾಸ್ತಿ ಯಾವಾಗಲೂ ಇರಲಿಲ್ಲ. ಪ್ರತಿವಾದಿಯು ಆಸ್ತಿ ಸಮಷ್ಟಿಸ್ವತ್ತಿನ ಸಹಾಯದಿಂದ ಸಂಪಾದಿಸಲ್ಪಟ್ಟಿತೆಂದು ವಾದಿ ಹೇಳಿದ ಪಕ್ಷದಲ್ಲಿ, ಆತನೇ ಆವಿಷಯವನ್ನು ರುಜುವಾತುಮಾಡಬೇಕು.

(೨) ಸಮಷ್ಟಿ ಕುಟುಂಬದಲ್ಲಿ ಒಬ್ಬ ಭಾಗಸ್ಥನ ಹೆಂಡತಿಯ ಹೆಸರಿನ ಮೇಲೆ ಕೊಂಚ ಆಸ್ತಿ, ಅಲ್ಲದೆ ಒಂದು ಪತ್ರವು ಇದೆ. ಅದು ಸಮಷ್ಟಿಸೊತ್ತೆಂದು ವಾದಿಸುವರೆ. ರುಜುವಾತಿಗೆ ಭಾರವನ್ನು ವಹಿಸುವರು.

ಒಂದು ದತ್ತುವಿಷಯವಾಗಿ ಪ್ರಿವೀಕೌನ್ಸೆಲರವರಿಂದ ತೀರ್ಮಾನಿಸಲ್ಪಟ್ಟ ಮೊಖದ್ದಮ್ಮೆಯ ಸಾರಾಂಶ.—

“ ಗುಂಟೂರುಕೇಸು ..-ವಿತಂತುವಿನ ಮನೋಭಾವವು.

ಇ ಲಾ ರಿ ೧ ಮ ೧೭೪-ಈಕೇಸಿನಲ್ಲಿ, ಒಬ್ಬ ಜಮೀಂದಾರನು ಗತಿಸಿದಾಗ ಆತನಿಗೆ ವಿತಂತವೂ ಹೆಣ್ಣುಮಕ್ಕಳೂ ಒಬ್ಬ ಪ್ರಾಯದ ಮಗನೂ ಇದ್ದರು. ಜಮೀಂದಾರಿ ಆಸ್ತಿ ಕುಮಾರನದಾದರೂ, ಆತನು ಮದಿವೆಮಾಡಿಕೊಳ್ಳುವುದಕ್ಕೆ ಮೊದಲೇ ಸತ್ತುಹೋದುದರಿಂದ ಸದರಿಆಸ್ತಿ ಆತನ ತಾಯಿಗೆ ಸೇರಿತು. ಆಮೇಲೆ, ಆಕೆ ತನ್ನಗಂಡನ ಸಪಿಂಡರಾದವರ ಎಲ್ಲರ ಅನುಮತಿಯೊಡನೆ ಒಬ್ಬ ಹುಡುಗನನ್ನು ದತ್ತುಮಾಡಿಕೊಂಡು, ಆತನಕಡೆಯ ಗಾರ್ಡಿಯನಾಗಿ ಸದರಿ ಆಸ್ತಿಯನ್ನು ಕಾಪಾಡುತ್ತಿದ್ದಳು. ಆಕೆ ಸತ್ತುಹೋದ

ಮೇಲೆ ತಂಟೆಗಳುಂಟಾದುವು. ಗವರ್ನ್ಮೆಂಟಿನವರು ಆಕೆ ದತ್ತುಮಾಡಿಕೊಂಡ ಹುಡುಗನ ಹಕ್ಕನ್ನು ಅಂಗೀಕರಿಸದೆ, ಆಸ್ತಿಯನ್ನು ಹೆಣ್ಣುಮಕ್ಕಳವಶಮಾಡಿದರು. ಅದರಮೇಲೆ ದತ್ತುಪುತ್ರನು ದಾವಾತರಲು, ದತ್ತು ಸಲ್ಲಲಾರದೆಂದು ಮದರಾಸು ಹೈಕೋರ್ಟಿನವರು ತೀರ್ಮಾನಿಸಿದರು. ಗಂಡನ ಆತ್ಮೋಜ್ಜೀವನಕ್ಕೆ ಬೇಕಾದ ಉತ್ತರಕ್ರಿಯೆಗಳನ್ನು ನೆರವೇರಿಸಿ ಆತನಿಗೆ ಒಳ್ಳೆಯದುಮಾಡಬೇಕೆಂಬ ಉದ್ದೇಶದಿಂದ ವಿತಂತುವಿನಿಂದ ಸದರಿ ದತ್ತು ಮಾಡಿಕೊಳ್ಳಲ್ಪಟ್ಟಂತೆ ಕಾಣಬರಲಿಲ್ಲವೆಂದೂ, ಅದರಿಂದ ಸಪಿಂಡರ ಅನುಮತಿಯಿದ್ದರೂ ದತ್ತು ಸಲ್ಲದೆಂದೂ, ಅವರು ತಿಳಿಸಿದರು. ಪ್ರಿವೀ ಕೌನ್ಸಿಲಿನವರು ಈ ತೀರ್ಮಾನವನ್ನು ತಿರಿವಿಹಾಕಿ ದತ್ತನ್ನು ಖಾಯಂಮಾಡುತ್ತ, ದತ್ತುಮಾಡಿಕೊಂಡ ವಿತಂತುವಿನ ಉದ್ದೇಶವನ್ನು ಊಹಿಸತೊಡಗುವುದು ಬಹಳ ಮೋಸವೆಂದೂ, ಗಂಡನ ಕ್ಷೇಮ ನಿಮಿತ್ತವಾಗಿ ಸ್ವೀಕಾರವಾವಶ್ಯಕವೆಂದೆಣಿಸಿ ಕೊಡಲ್ಪಟ್ಟ ಜ್ಞಾತ್ಯಂಗೀಕಾರದೊಡನೆ ಒಬ್ಬ ವಿತಂತು ದುರುದ್ದೇಶವಿಲ್ಲದೆ ದತ್ತುಮಾಡಿಕೊಂಡರೆ, ಆಕೆಯ ಮನೋಭಾವ ವೆಂತಿಹುದೋ, ಸ್ವೀಕಾರದಿಂದ ಗಂಡನ ಆತ್ಮಕ್ಕೆ ಮೋಲುಂಟಾಗುವುದೆಂದು ಆಕೆ ನಂಬುವಳೋ ನಂಬಳೋ, ಈ ವಿಷಯವನ್ನು ವಿಚಾರಿಸಕೂಡದೆಂದೂ, ಅವರು ಸ್ಪಷ್ಟವಾಗಿ ತಿಳಿಸಿದರು. ಈ ಅಭಿಪ್ರಾಯವನ್ನನುಸರಿಸಿ ವಿತಂತುವಿನ ಮನೋಭಾವವನ್ನು ವಿಚಾರಿಸುವುದು ಅನಾವಶ್ಯಕವೆಂದು ಬೊಂಬಯಿ ಹೈಕೋರ್ಟಿನವರು ತೀರ್ಮಾನಿಸಿರುವರು. (ಇ. ಲಾ. ರಿ. ೧೫ ಬೊ. ೧೩೫, ೫೭೫.)

ಪುತ್ರಸಂತತಿ ಇಲ್ಲದಾಗ ಮಾತ್ರವೇ ಅಲ್ಲದೆ, ಇದ್ದು ಸತ್ತಾಗಲೂ ಜ್ಞಾತ್ಯಂಗೀಕಾರವನ್ನು ಪಡೆದು ವಿತಂತು ದತ್ತುಮಾಡಿಕೊಳ್ಳಬಹುದು.-ಈ ವಿಷಯವುಕೂಡ, "ಗುಂಟೂರುಕೇಸು" ಇದರಿಂದ ಸ್ಥಾಪಿಸಲ್ಪಟ್ಟಿದೆ.

ದುರುದ್ದೇಶವು.—ಸ್ವೀಕಾರನಿಮಿತ್ತವಾಗಿ ವಿತಂತುವಿಗೆ ಕೊಡಲ್ಪಡುವ ಜ್ಞಾತ್ಯಂಗೀಕಾರವು ದಗಾಯಿಂದಾದರೂ ದುಷ್ಟೋಪಾಯಗಳಿಂದಾದರೂ ಹೊಂದಲ್ಪಟ್ಟಾಗಲೂ, ಸದರೀ ಅಂಗೀಕಾರವನ್ನು ಕೊಟ್ಟ ಸಪಿಂಡರು ಸ್ವಲಾಭವನ್ನು ಬಯಸಿ ಕೊಟ್ಟಾಗಲೂ, ಅದು ಸಲ್ಲಲಾರದು. (ಇ. ಲಾ. ರಿ. ೨ ಮ ೨೭೦.)

ಗಂಡನ ವಿಭಕ್ತಸಪಿಂಡರು ಅನೇಕರಿದ್ದು, ಅವರಲ್ಲಿ ಕೆಲವರು ಕೆಲವರು ದುರುದ್ದೇಶದಿಂದ ಸ್ವೀಕಾರಕ್ಕೆ ಅಂಗೀಕರಿಸದೆ ಇದ್ದ ಪಕ್ಷದಲ್ಲಿ, ಮಿಕ್ಕವರ ಅನುಮತಿಯೇ ಸಾಕು-ಒಬ್ಬನೇ ಅನುಮತಿಸಿದರೂ ಸಾಕು-ಎಂದು ಮದರಾಸು ಹೈಕೋರ್ಟಿನವರು ತೀರ್ಮಾನಿಸಿದರು. (ಇ. ಲಾ. ರಿ ೨ ಮ. ೨೦೨.)

ದಾನ—ದಾನದವಿಷಯದಲ್ಲಿ ವ್ಯವಹಾರ ನಿರ್ಣಯಕಾರರ ಅಭಿಪ್ರಾಯ [ದಾನ] ದಾನವು ಸಿದ್ಧವಾಗಬೇಕಾದರೆ ಈ ವಿದ್ಯಮಾನಗಳು ಇರಬೇಕು.

೧. ದಾನಮಾಡುವ ಸ್ವತ್ತು ಇದ್ದೇ ಇರಬೇಕು. ಮುಂದಕ್ಕೆ ಉಂಟಾಗುವ ಸ್ವತ್ತನ್ನು [ಮಸಲ—ಒಂದು ಹೊಲದಲ್ಲಿ ಮುಂದಕ್ಕೆ ಬೆಳೆಯನ್ನು ಯಾ, ಒಂದು ಹಸುವಿನಲ್ಲಿ, ಮುಂದಕ್ಕೆ ಹುಟ್ಟುವ ಕರುವನ್ನು ಇಂಥ ಸ್ವತ್ತುಗಳನ್ನು] ದಾನಮಾಡಲಾಗುವುದಿಲ್ಲ. ಹಾಜರಿರುವ ಸ್ವತ್ತಿನೊಡನೆ ಮುಂದಕ್ಕೆ ಉಂಟಾಗುವ ಸ್ವತ್ತನ್ನೂ ದಾನಮಾಡಿದರೆ ೨ನೇ ಸ್ವತ್ತಿಗೆ ಸಂಬಂಧವಾದ ದಾನವು ರದ್ದಾಗುತ್ತದೆ. ಆ ಸ್ವತ್ತು ಮುಂದಕ್ಕೆ ಉಂಟಾದರೂ ದಾನಕ್ಕೆ ಸೇರುವುದಿಲ್ಲ.

೨. ದಾತನು ದಾನದ ಸ್ವತ್ತನ್ನು ಎಷ್ಟುಮಟ್ಟಿಗೆ ಆ ಆ ಸಂದರ್ಭಕ್ಕನುಸಾರವಾಗಿ ತನ್ನ ಸ್ವಾಧೀನಾನುಭವವನ್ನು ತಪ್ಪಿಸಿ ಪ್ರತಿ ಗೃಹೀತನ ಸ್ವಾಧೀನಾನುಭವಕ್ಕೆ ಕೊಡಬಹುದೋ ಅಷ್ಟುಮಟ್ಟಿಗೆ ತನ್ನ ಸ್ವಾಧೀನಾನುಭವವನ್ನು ನಿವೃತ್ತಿಮಾಡಿಕೊಂಡು, ತೆಗೆದುಕೊಳ್ಳುವವನ ಅಥವಾ ಅವನಿಗೋಸ್ಕರ ಮತ್ತೊಬ್ಬನ ಸ್ವಾಧೀನಾನುಭವಕ್ಕೆ ದಾನದ ಸೊತ್ತನ್ನು ಕೊಡಬೇಕು. ಮಸಲ—ದಾನದ ಸೊತ್ತು ತನ್ನಲ್ಲಿರುವ ಚರಸ್ವತ್ತಾದರೆ, ಅದನ್ನು ತಾನು ಕೈಯಲ್ಲಿ ತೆಗೆದುಕೊಂಡು ಪ್ರತಿಗೃಹೀತನ ಕೈಗೆ ಯಾ, ಅವನಿಗೋಸ್ಕರ ಮತ್ತೊಬ್ಬನ ಕೈಗೆ ಕೊಡಬೇಕು. ಅದು ಬಾಡಿಗೆದಾರನ ಸ್ವಾಧೀನದಲ್ಲಿರುವ ಮನೆಯಾದರೆ, ಆ ಮನೆಯ ಮೂಲ ದಸ್ತಾವೇಜನ್ನು ಪ್ರತಿಗೃಹೀತನಿಗೆ ಕೊಟ್ಟು ಆ ಮನೆಯ ಬಾಡಿಗೆಯನ್ನೂ ಬಾಡಿಗೆಯ ವಾಯಿದೆಯಾದನಂತರ ಮನೆಯ ಸ್ವಾಧೀನವನ್ನೂ ಪ್ರತಿಗೃಹೀತನಿಗೆ ಕೊಡಬೇಕೆಂದು ಬಾಡಿಗೇದಾರನಿಂದ ಒಪ್ಪಣೀ ಮಾಡಬೇಕು.

೩. ಪ್ರತಿಗೃಹೀತನು ದಾನವನ್ನು ದಾತನ ಜೀವಮಾನಕಾಲದಲ್ಲೆ ಸ್ವೀಕರಿಸಬೇಕು. ಆದುದರಿಂದ ಪ್ರತಿಗೃಹೀತನು ದಾನಮಾಡುವಾಗ್ಯೆ ಹುಟ್ಟಿ ಜೀವಿಸುತ್ತಿರಬೇಕು. ಇಬ್ಬರಿಗೆ ಒಟ್ಟಿಗೆ ಮಾಡಿದ ದಾನದ ಸೊತ್ತನ್ನು ಅವರಪೈಕಿ ಜೀವಿಸುತ್ತಿದ್ದ ಒಬ್ಬನು ಸ್ವೀಕರಿಸಿ ಇನ್ನೂ ಹುಟ್ಟದೆ ಇರುವ ಮತ್ತೊಬ್ಬನು ಸ್ವೀಕರಿಸದಿರುವುದರಿಂದ, ಈ ಎರಡನೆಯವನಿಗೆ ಕೊಟ್ಟದಾನವು ರದ್ದಾಗುವದು. ಅವನು ಮುಂದಕ್ಕೆ ಹುಟ್ಟಿದರೂ ಸಹ ಆ ದಾನವು ಅವನಿಗೆ ಸಲ್ಲುವುದಿಲ್ಲ ಟ್ರಾ. ಪ್ರಾ. ೧೨೨. ೧೨೪. ೧೨೫.

೪. ದಾತನ ಇಚ್ಛಾನುಸಾರವಾಗಿ ಸಂಭವಿಸದಿರುವ ಯಾವದಾದರೂ ಒಂದು ನಿರ್ದಿಷ್ಟವಾದ ವಿದ್ಯಮಾನವು ಉಂಟಾದರೆ, ದಾನವು ರದ್ದಾಗತಕ್ಕದೆಂಬ ಷರತ್ತಿನೊಡನೆ ದಾತಾ ಮತ್ತು ಪ್ರತಿಗೃಹೀತಾ ಇವರಿಬ್ಬರ ಒಪ್ಪಿಗೆ

ಯಮೇಲೆ ಮಾಡಲ್ಪಡುವ ದಾನವು ಸ್ಥಿರವಾದುದು. ಈ ಷರತ್ತು ಹೊರತು, ಮಿಕ್ಕ, ಮುಸಲ—"ದಾತನು ಯಾವಾಗ ಬೇಕಾದರೂ ದಾನವನ್ನು ರದ್ದು ಮಾಡಬಹುದು" ಎಂಬಮೊದಲಾದ ಯಾವ ಹರತ್ತುಗಳಿಂದಲೂ ದಾನವನ್ನು ರದ್ದುಮಾಡಲಾಗುವುದಿಲ್ಲ, ಆದರೆ ಮೋಸ, ಬಲಾತ್ಕಾರ, ಅತಿದಾಕ್ಷಿಣ್ಯ ಮೊದಲಾದ ಗುಣಗಳು ಇತರ ವ್ಯವಹಾರಗಳನ್ನು ರದ್ದುಪಡಿಸುವಂತೆ ದಾನವನ್ನು ರದ್ದುಪಡಿಸುವುವು. ಟ್ರಾ ಪ್ರಾ ೧೨೬.

ಉದಾಹರಣೆ—ಶಾಮನು ರಾಮನಿಗೆ ಭೂದಾನ ಮಾಡಿಸುತ್ತಾನೆ. ಶಾಮನಿಗೆ ಸಂತತಿಯಾದಮೇಲೆ ಆ ದಾನವು ರದ್ದಾಗಬೇಕೆಂಬ ಷರತ್ತು ಶಾಮನ ಮತ್ತು ರಾಮನ ಒಪ್ಪಿಗೆಯಮೇಲೆ ದಾನದ ಪತ್ರದಲ್ಲಿ ಬರೆಯಲ್ಪಡುತ್ತದೆ ಅಥವಾ ದಾನಮಾಡುವಾಗ್ಗೆ ಶಾಮನಿಗೆ ಸಂಭವಿಸಿರುವ ವ್ಯಾಧಿಯು ಗುಣವಾದರೆ, ದಾನವು ರದ್ದಾಗತಕ್ಕುದು ಎಂಬ ಷರತ್ತು ಅವರಿಬ್ಬರ ಒಪ್ಪಿಗೆಯ ಮೇಲೆ ಪತ್ರದಲ್ಲಿ ಬರೆಯಲ್ಪಡುತ್ತದೆ. ಇಂಥ ಷರತ್ತುಗಳು ದಾನದ ಪತ್ರದಲ್ಲಿ ಸಲ್ಲುವವು.

ದಾತನು ಪ್ರತಿಗೃಹೀತನ ಮೇಲೆ ಯಾವುದಾದರೂ ಒಂದು ಹೊರೆಯನ್ನು ಹೊರಿಸಿ ದಾನಮಾಡಬಹುದು. ಟ್ರಾ ಪ್ರಾ ೧೨೭.

೧. ಉದಾಹರಣೆ—ಶಾಮನು ಕಾಮನಿಗೆ ಭೂದಾನವನ್ನು ಮಾಡುತ್ತಾನೆ. "ಶಾಮನು ಜೀವಿಸುತ್ತಿರುವವರೆಗೂ ಇದನ್ನು ಕಾಮನು ಸಂರಕ್ಷಿಸುತ್ತಿರಬೇಕು. ಇವನು ಮೃತಪಟ್ಟಮೇಲೆ ಇವನ ಉತ್ತರ ಕ್ರಿಯೆಗಳನ್ನು ಕಾಮನು ಮಾಡಬೇಕು" ಈ ಷರತ್ತು ದಾನ ಪತ್ರದಲ್ಲಿ ಬರೆಯಲ್ಪಡುತ್ತದೆ. ಇಂಥ ಷರತ್ತು ಸಲ್ಲುವುದು.

ಇಂಥ ಷರತ್ತಿನೊಡನೆ ಕೂಡಿರುವ ದಾನವನ್ನು ತೆಗೆದುಕೊಂಡರೆ ಅದರೊಡನೆ ಸೇರಿರುವ ಭಾಗವನ್ನೂ ಸಹ ವಹಿಸಬೇಕಾಗುವುದು.

೩. ದಾತನ ಯಾವದ್ವಿಶಿಷ್ಟ ಆಸ್ತಿಯನ್ನೂ ದಾನವಾಗಿ ತೆಗೆದುಕೊಳ್ಳುವವನು ದಾತನ ಸಾಲಕ್ಕೆಲ್ಲಾ ಬದ್ಧನಾಗುವನು. ಟ್ರಾ ಪ್ರಾ ೧೨೮.

೪. ಸಾಲಕೊಟ್ಟವರಿಗೆ ಮೋಸಮಾಡಬೇಕೆಂಬದಾಗಿ ದಾತನು ತನ್ನ ನೆಂಟರಿಷ್ಟರ ಹೆಸರಿಗೆ ಮಾಡುವ ಕೃತಕದಾನಗಳು ಲಾವಿಧಿಗಳಿಗೆಎಷ್ಟು ಅನುಸಾರವಾಗಿ ಮಾಡಲ್ಪಟ್ಟಿದ್ದರೂ, ಅವುಗಳು ನಿಲ್ಲುವುದಿಲ್ಲವೆಂದು ತಿಳಿದೇ ಇದೆ

ದಾತನು ಸಾಯುವಾಗ್ಗೆ ಮಾಡುವ ಚರಸ್ವತ್ತಿನ ದಾನಗಳು ಮೇಲೆ ಕಂಡ ವಿಧಿಗಳಿಗೆ ಅನುಸಾರವಾಗಿಲ್ಲದಿದ್ದರೂ ಅವುಗಳು ಸಲ್ಲುವವು. ಮತ್ತು ಮುಹಮ್ಮದೀಯರಲ್ಲಿ ನಡೆಯುವ ದಾನಗಳಿಗೆ ಕೆಳಗೆ ವಿವರಿಸಿರುವ ಮುಹಮದೀಯ ಲಾವಿಧಿಗಳು ಹೆಚ್ಚು ಪ್ರಮಾಣ.

ಟ್ರಾನ್ಸ್‌ಫರ್ ಆಫ್ ಪ್ರಾಪರ್ಟಿ ಆಕ್ಟು ಜಾರಿಯಲ್ಲಿರುವ ಬ್ರಿಟಿಷ ದೇಶದಲ್ಲಿ ಎಷ್ಟು ಸ್ವಲ್ಪ ಬೆಲೆಯ ಸ್ಥಿರಸೊತ್ತನ್ನು ದಾನಮಾಡಬೇಕಾದರೂ ಇಬ್ಬರಾದರೂ ಸಾಕ್ಷಿ ರುಜು ಮಾಡಿರುವ ದಾನಪತ್ರವನ್ನು ಬರೆದು ರಿಜಿಸ್ಟರು ಮಾಡಿಸಬೇಕು. ಮತ್ತು ಚರಸ್ವತ್ತನ್ನು ಮತ್ತು ಸದರಿ ಖಾನೂನು ಜಾರಿಯಿಲ್ಲದಿರುವ ಮೈಸೂರಿನಂತಹ ದೇಶಗಳಲ್ಲಿ ಎಲ್ಲಾ ತರದ ಸ್ವತ್ತನ್ನು ಪ್ರತಿಗ್ರಹೀತನ ಸ್ವಾಧೀನಕ್ಕೆ ಕೊಡುವುದರ ಮೂಲಕವಾದರೂ ಅಥವ ಮೇಲೆ ಕಂಡಂತೆ ದಸ್ತಾವೇಜು ಮೂಲಕವಾಗಾದರೂ ದಾನಮಾಡಬಹುದು. ಸ್ಥಿರಸೊತ್ತಿನ ದಾನದ ವಿಷಯದಲ್ಲಿ ದಾನಪತ್ರವು ಹುಟ್ಟಿದರೆ ರಿಜಿಸ್ಟರ್ ಮಾಡಿಸಬೇಕು.

ಹಿಂದೂಗಳಲ್ಲಿ ಮಾಡಲ್ಪಡುವ ದಾನಗಳು ಕೆಳಗೆ ವಿವರಿಸುವ ಹಿಂದೂ ಲಾದ ವಿಧಿಗಳಿಗೆ ಅನುಸಾರವಾಗಿದ್ದರೆ, ಮೇಲಿನ ೨ ಪ್ಯಾರವಲ್ಲದೆ ಇತರ ವಿಧಿಗಳಿಗೆ ವಿರುದ್ಧವಾಗಿದ್ದರೂ ಅವುಗಳು ಸಲ್ಲುವವು.

೫ ದಾತನು ಕೊಡಬೇಕು ಎಂದರೆ, ದಾನದ ಸ್ವತ್ತಿನಲ್ಲಿ ದಾತನಿಗಿರುವ ಹಕ್ಕನ್ನು ನಿವೃತ್ತಿಮಾಡಿಕೊಳ್ಳಬೇಕು; ದಾನದ ಸೊತ್ತು ದಾನಕೊಡುವಾಗ್ಗೆ ಇರಬೇಕು; ಪ್ರತಿಗ್ರಹೀತನು ಸ್ವೀಕರಿಸಬೇಕು; ಎಂಬ ಈ ಅವಶ್ಯಕತೆಗಳು ಹಿಂದೂ ಶಾಸ್ತ್ರರೀತ್ಯಾ ಆಚರಿಸಲ್ಪಡುವ ದಾನವಿಧಾನದಿಂದ ವ್ಯಕ್ತವಾಗುವವು.

ದಾನದ ಸ್ವತ್ತನ್ನು ಅಥವಾ ಅದರ ಸಂಕೇತವನ್ನು ದಾತನು ಪ್ರತಿಗ್ರಹೀತನ ಹಸ್ತದಲ್ಲಿಟ್ಟು, "ಇದಂ (   ) ದಾನಂ ತುಭ್ಯಮಹಂ ಸಂಪ್ರದದೆ ನಮಮ ನಮಮ" (ನನ್ನದಲ್ಲ: ನನ್ನದಲ್ಲ) ಎಂಬ ಕಾರ್ಯಸಿದ್ಧಿಗೆ ಅವಶ್ಯಕವಾದ ಶಬ್ದಗಳನ್ನು ಉಚ್ಚರಿಸುತ್ತಾ ಮೇಲಿನಿಂದ ತುಲಸೀ ಯಾ ಬಿಲ್ವಪತ್ರೆಯ ದಳದೊಡನೆ ದಾತನು ಸ್ವತ್ತಿನಮೇಲೆ ನೀರನ್ನು ಧಾರೆಯಾಗಿ ಸುರಿಯುವನು.

೬. ಪ್ರತಿಗ್ರಹೀತನು ಗರ್ಭಗತನಾಗಾದರೂ ಇರಬಹುದು, ಅಥವಾ ಮುಂದಕ್ಕೆ ಸ್ವೀಕರಿಸಲ್ಪಡುವ ದತ್ತನಾದರೂ ಆಗಬಹುದು.

೭. ಅವಿಭಕ್ತನು ಸಮಸೃಷ್ಟದ ಆಸ್ತಿಯ ಪೈಕಿ ತನ್ನ ಭಾಗಕ್ಕೆ ಸಲ್ಲಬಹುದಾದ ಆಸ್ತಿಯನ್ನು ದಾನವಾಗಿ ಕೊಡಲಾಗದು.

೮. ದಾನದ ವಿಷಯದಲ್ಲಿ ಕೆಳಗೆ ವಿವರಿಸಿರುವ ಹೈಕೋರ್ಟುಗಳ ತೀರ್ಮಾನಗಳು ಹುಟ್ಟಿವೆ. —

(೧) ತಂದೆಯು ದಾನಮಾಡಿದ ೭ ತಿಂಗಳ ಮೇಲೆ ಹುಟ್ಟಿದ ಮಗನು ತಂದೆಮಾಡಿದ ಭೂದಾನವನ್ನು ರದ್ದುಪಡಿಸಲು ತಂದ ದಾವಾದಲ್ಲಿ ಆದಾನವು ರದ್ದುಮಾಡಲ್ಪಟ್ಟಿತು. ೧೧ ಮ ೨೪೬

(೨) ತನ್ನ ಮಗನು ಮೈನರಾಗಿರುವಾಗ್ಯೆ ತಂದೆಯು ತನ್ನ ಹೆಂಡತಿಗೂ, ಇಬ್ಬರು ಹೆಣ್ಣು ಮಕ್ಕಳಿಗೂ ಸ್ಥಿರಸೊತ್ತನ್ನು ದಾನಮಾಡಿದನು. ತಂದೆಯು ಸತ್ತಮೇಲೆ ಸದರಿ ದಾನವನ್ನು ರದ್ದುಪಡಿಸಲು ಗಾರ್ಡಿಯನ್ನಿನ ಮೂಲಕ ಮೈನರ್ ಮಗನು ತಂದ ದಾವಾದ ಪ್ರಕಾರ ಆ ದಾನವು ರದ್ದು ಮಾಡಲ್ಪಟ್ಟಿತು.

(೩) ಪಿತಾಮಹನು ದಾನಮಾಡುವಾಗ್ಗೆ ಹುಟ್ಟಿದ ಒಬ್ಬ ಮೊಮ್ಮಗನಿಗೂ, ಅನಂತರ ಹುಟ್ಟುವ ಇತರ ಮೊಮ್ಮಕ್ಕಳಿಗೂ ಪಿತಾಮಹನು ದಾನಮಾಡಿದನು. ಇತರರು ಹುಟ್ಟಿರಲಿಲ್ಲವಾಗಿ ದಾನವನ್ನು ಸ್ವೀಕರಿಸುವುದಕ್ಕೆ ಅವರಿಗೆ ಅವಕಾಶವಿಲ್ಲದುದರಿಂದ ಅವರ ಭಾಗದ ದಾನವು ಸಿದ್ಧಿಸುವುದಿಲ್ಲವೆಂತಲೂ, ಹುಟ್ಟಿದ್ದವನ ಭಾಗದ ದಾನವು ಸಿದ್ಧಿಸುವುದೆಂತಲೂ ಫೈಸಲಾಯಿತು. ೧೨ ಮ ೩೯೩, ೧೫ ಬೊ ೬೫೨.

೯. ಧರ್ಮ, ಮತ, ಭಗವದ್ಭಕ್ತಿ ಇವುಗಳ ನಿಮಿತ್ತವಾಗಿ ಮಗನೊಡನೆ ಅವಿಭಕ್ತನಾಗಿರುವ ತಂದೆಯು ಪಿತ್ರಾರ್ಜಿತ ಆಸ್ತಿಯಲ್ಲೇ ಸ್ವಲ್ಪಮಟ್ಟಿಗೆ ದಾನಮಾಡಿದರೆ ಅದು ಸಿದ್ಧಿಸುವುದು.

೧೦. ಸಾಲಗಾರನಿಗೂ ಜೀವನಾಂಶಕ್ಕೂ ಮೋಸಮಾಡಬೇಕೆಂದೇ ಮಾಡುವ ದಾನವು ಸಿದ್ಧಿಸುವುದಿಲ್ಲ.

೧೧. ದಾತನ ಗೃಹದೇವತೆಗೆ ದಾನಮಾಡಿ ದಾನಪತ್ರ ಬರೆದು, ದಾನವನ್ನು ನಡೆಯಿಸಲು ಬೇರೆ ಜನಗಳನ್ನು ಗೊತ್ತುಮಾಡದೆ, ದಾನದಸೊತ್ತನ್ನು ವಿಂಗಡಿಸಿ ಅಂಥವರ ಸುಪರ್ದಿಗೆ ಕೊಡದೆ ದಾತನೇ ಅನುಭವಿಸುತ್ತಾ ಬಂದರೆ, ಆ ದಾನವು ಊರ್ಜಿತವಾಗುವುದಿಲ್ಲ; ಎಂದರೆ ದಾತನಾಗಲಿ, ಅಥವಾ ಅವನ ಸಂತತಿಯವರಾಗಲಿ ಆ ದಾನವನ್ನು ರದ್ದುಮಾಡಿಬಿಡಬಹುದು. ೧೭ ಕ ೫೫೭, ೧೮ ಕ ೧೦.

೧೨. ಮರಣಶಾಸನದ ಮೂಲಕವೂ ದಾನ ಮಾಡಬಹುದಾದರಿಂದ ಮುಂದೆ ಆ ವಿಷಯದಲ್ಲಿ ಕೊಟ್ಟಿರುವ ವಿಧಿಗಳೂ ಸಂಬಂಧಿಸುತ್ತವೆ.

ಮಹಮದೀಯ ಲಾ ಪ್ರಕಾರ.

೧೪. ಸಾಲಗಾರರಿಗೆ ಮೋಸಮಾಡಬೇಕೆಂಬ ಉದ್ದೇಶದಿಂದ ಮಾಡಿದ ದಾನವು ಈ ಲಾ ಪ್ರಕಾರವೂ ಸಿದ್ಧಿಸುವುದಿಲ್ಲ.

೧೪. ಹಿಂದುಗಳಲ್ಲಿರುವಂತೆ ಅವಿಭಕ್ತ ಕುಟುಂಬದ ಪದ್ಧತಿಯು ಮಹಮದೀಯರಲ್ಲಿಲ್ಲದುದರಿಂದಲೂ ಆಸ್ತಿಯ ಅನುಭವವು ಒಟ್ಟಿಗಿದ್ದರೂ ಒಟ್ಟಿಗನುಭವಿಸುವವನ ಹಕ್ಕು ಆ ಆಸ್ತಿಯಲ್ಲಿ ನಿರ್ದಿಷ್ಟವಾಗಿರುವುರಿಂದ,

ಲೂ. ತಂದೆಯು ಮಾಡುವ ದಾನಕ್ಕೆ ಹಿಂದೂಗಳಲ್ಲಿ ಮಕ್ಕಳು ಮೊದಲಾ
ಬಂಧುಗಳ ತಕರಾರು ಇರುವಂತೆ ಮಹಮ್ಮದೀಯರಲ್ಲಿಲ್ಲ. ಆಸ್ತಿಯ ಪೈ
೩ ರಲ್ಲಿ ೧ ಭಾಗಕ್ಕಿಂತ ಹೆಚ್ಚಾಗಿ ಇತರರಿಗೆ ಮುಫತ್ತಾಗಿ ಕೊಡಲು ಹಕ್ಕಿಲ್ಲ
ದ್ದರೂ, ತಾನು ಬದುಕಿರುವಾಗ್ಗೆ ತನ್ನ ಎಲ್ಲಾ ಆಸ್ತಿಯನ್ನೂ ದಾನವಾ
ಕೊಟ್ಟುಬಿಡಲು ಯಾವ ಅಡ್ಡಿಯೂ ಇಲ್ಲ. ೩ ಇ ಅ ೨೯೧.

೧೫. ತನಗೆ ಬರಬೇಕಾದ ಸಾಲಗಳು ವಗೈರೆ ದಾವಾಮೂಲಕ ಪಡೆದ
ಕೊಳ್ಳಬಹುದಾದ ಹಕ್ಕುಗಳು ದಾನಮಾಡಲ್ಪಡಬಹುದು. ಆದರೆ, ಭೋಗ
ದಿಂದ ಸ್ವತ್ತನ್ನು ಬಿಡಿಸಿಕೊಳ್ಳುವ ಹಕ್ಕು, ದಾನದ ಸ್ವತ್ತು ದಾತನ ಸುಫದಿ
ನಲ್ಲಿಲ್ಲದುದರಿಂದ, ದಾನಮಾಡಲ್ಪಡಲಾಗದೆಂದು ಬೊಂಬಾಯಿ ಹೈಕೋರ್ಟಿ
ನವರು ತೀರ್ಮಾನ ಮಾಡಿರುವರು. (೨೩ ಬೊ ೬೮೨.)

೧೬. ಮತ್ತೊಬ್ಬನು ಅಕ್ರಮದಿಂದ ಅನುಭವಿಸುತ್ತಿರುವ ಸ್ವತ್ತನ್ನು
ಮಾಲೀಕನು ದಾನಮಾಡಿದನಂತರ ಆ ಸ್ವತ್ತನ್ನು ಅಂಥ ಮತ್ತೊಬ್ಬನಿಂದ
ಬಿಡಿಸಿಕೊಂಡು ಪ್ರತಿಗೃಹೀತನ ಸ್ವಾಧೀನಮಾಡಬಹುದು.

೧೭. ದಾನಮಾಡುವುದೂ, ದಾನದ ಸ್ವತ್ತನ್ನು ಸಂದರ್ಭಾನುಸಾ
ಎಷ್ಟುಮಟ್ಟಿಗೆ ತೆಗೆದುಕೊಳ್ಳುವವನ ಸುಫರ್ದು ಮಾಡಬಹುದೋ ಅಷ್ಟು
ಮಟ್ಟಿಗೆ ಮಾಡುವುದೂ, ದಾನವನ್ನು ಸ್ವೀಕರಿಸುವುದೂ ಇವುಗಳು ಹಿಂದೂ
ಲಾದಂತೆಯೇ ಅವಶ್ಯಕವಾದ ಕಾರ್ಯಗಳು. ದಾನದ ಪತ್ರವನ್ನು ರಿಜಿಸ್ಟರ್
ಮಾಡಿಸಿದರೆ ಸಾಲದು. ಆದರೆ ತಂದೆ ತನ್ನ ಮೈನರ್ ಮಗನಿಗೆ ದಾನಮಾ
ಡಿದರೆ, ಸ್ವತ್ತನ್ನು ಸುಫರ್ದು ಮಾಡಬೇಕಾದ ಅವಶ್ಯವಿಲ್ಲ.

೧೮. ಮೃತನ ಆಸ್ತಿಯಲ್ಲಿ ತಮ್ಮ ತಮ್ಮಗಳ ಅಂಶಗಳನ್ನು ಒಟ್ಟಿಗೆ
ಅನುಭವಿಸುವ ಅವನ ವಾರಸುದಾರರು ಆ ಅಂಶಗಳನ್ನು ವಿಭಾಗಮಾಡಿಕೊ
ಳ್ಳುವುದಕ್ಕೆ ಮೊದಲೇ ತಮ್ಮತಮ್ಮ ಅಂಶವನ್ನು ದಾನಮಾಡಬಹುದಾದರೂ
ದಾನಮಾಡಿದಮೇಲೆ ವಿಭಾಗ ಮಾಡಿಕೊಂಡು, ದಾನಮಾಡಿದ ಸೊತ್ತನ್ನು
ಪ್ರತಿಗೃಹೀತನ ಸ್ವಾಧೀನಮಾಡದಿದ್ದರೆ, ಆ ದಾನವು ಊರ್ಜಿತವಾ
ಗುವುದಿಲ್ಲ.

೧೯. ದಾನ ಮಾಡುವಾಗ್ಗೆ ಹುಟ್ಟದೆ ಇರುವವನಿಗೆ ಮಾಡುವದಾನವು
ಸಿದ್ಧಿಸುವುದಿಲ್ಲ; ಆದರೆ ಗರ್ಭಗತನಿಗೆ ಮಾಡಬಹುದು.

೨೦. ದಾನವನ್ನು ಮುಂದಕ್ಕೆ ಮಾಡಬೇಕೆಂಬ ಒಪ್ಪಂದವು ನ
ಲ್ಲುವುದಿಲ್ಲ.

೨೧. ದಾತನು ತನಗೆ ದಾನದ ಸ್ವತ್ತಿನಮೇಲೆ ಇರುವ ಯಾವದ್ವಿಶಿಷ್ಟ
ಅಧಿಕಾರವನ್ನೂ ಪ್ರತಿಗೃಹೀತನಿಗೆ ಕೊಟ್ಟುಬಿಡದಿದ್ದರೆ ಆ ದಾನವು ಸಿದ್ಧಿ

ಸುವುದಿಲ್ಲ. ಆದರೆ ದಾನದ ಸ್ವತ್ತಿನಲ್ಲಿ ಬರುವ ಉತ್ಪತ್ತಿಯನ್ನು ಪ್ರತಿಗೃಹೀತನು ದಾತನಿಗೆ ಅವನು ಜೀವಂತನಾಗಿರುವವರೆಗೂ ಕೊಡುತ್ತಾ ಬರಬೇಕೆಂಬ ಷರತ್ತು ದಾನದಲ್ಲಿ ಇರಬಹುದೆಂದು ಪ್ರಿವಿಕೌನ್ಸಿಲಿನವರು ಫೈಸಲ್ಮಾಡಿದ್ದಾರೆ. ೧೧ ಮೂ ೩ ಅ ೫೧೭.

೨೨. ದಾತನು ತಾನು ಮಾಡಿದ ದಾನವನ್ನು ಕೆಳಗಿನ ಸಂದರ್ಭಗಳಲ್ಲಿ ರದ್ದುಮಾಡಲಾಗದು:—

(೧) ಗಂಡನು ಹೆಂಡತಿಗೆ, ಯಾ, ಹೆಂಡತಿಯು ಗಂಡನಿಗೆ ಮಾಡಿದ ದಾನ.

(೨) ದಾತನು ತನ್ನ ತಾಯಿ, ತಾಯಿಯ ತಾಯಿ, ಸಹೋದರಿ ಮೊದಲಾದ ಅವನು ಮದುವೆ ಮಾಡಿಕೊಳ್ಳಲಾಗದ ರಕ್ತ ಸಂಬಂಧಿಗಳಿಗೆ ಕೊಟ್ಟ ದಾನ.

(೩) ಪ್ರತಿಗೃಹೀತನು ಸತ್ತಮೇಲೆ

(೪) ದಾನಮಾಡಿದ ಸೊತ್ತು ನಾಶವಾದ ಬಳಿಕ.

(೫) ದಾನಮಾಡಿದ ಸೊತ್ತು ವೃದ್ಧಿಯಾದನಂತರ.

(೬) ದಾನಮಾಡಿದ ಸ್ವತ್ತು ರೂಪ ಬದಲಾಯಿಸಿದ ಮೇಲೆ (ಮಸಲ— ಅಕ್ಕಿಯು ಹಿಟ್ಟು ಮಾಡಲ್ಪಟ್ಟ ಬಳಿಕ.)

(೭) ದಾನಕ್ಕೆ ಬದಲಾಗಿ ಪ್ರತಿಗೃಹೀತನಿಂದ ಯಾವುದಾದರೂ ಪ್ರತಿಫಲವನ್ನು ದಾತನು ಹೊಂದಿದ್ದರೆ.

(೮) ದಾನವು ದೇವರ ಪ್ರೀತ್ಯರ್ಥವಾಗಿ ಮಾಡಲ್ಪಟ್ಟಿದ್ದರೆ.

ಮೇಲೆ ಹೇಳಿರುವ ಸಂದರ್ಭಗಳಿಲ್ಲದಿದ್ದರೆ ಮುಹಮದೀಯನಾದ ದಾತನು ಕೋರ್ಟಿನಲ್ಲಿ ದಾವಾಮಾಡಿ ದಾನವನ್ನು ರದ್ದುಮಾಡಿಸಿ, ಕೊಟ್ಟಿರುವ ದಾನಸ್ವತ್ತನ್ನು ವಾಪಸ್ಸು ಪಡೆಯಬಹುದು. ದಾತನು ಸತ್ತಮೇಲೆ ಅವನ ವಾರಸುದಾರರಿಗೆ ಈ ಹಕ್ಕು ತಪ್ಪಿಹೋಗುವುದು.

೨೩. ಗಂಡನು ಹೆಂಡತಿಗೆ ಮುಹರಿಗೆ ಬದಲಾಗಿ ಕೊಡುವ ದಾನದಲ್ಲಿ ದಾನದ ಸ್ವತ್ತನ್ನು ಹೆಂಡತಿಯು ಸುಪರ್ದು ಮಾಡಬೇಕಾದ ಅವಶ್ಯವಿಲ್ಲ.

ಮುಹಮದೀಯರ ಮತಭಕ್ತಿ, ಯಾ, ಧರ್ಮಕ್ಕಾಗಿ ಮಾಡುವ ದಾನ.

೨೪. ಇಂಥ ದಾನಕ್ಕೆ ವಕ್ಫ್ ಎಂದು ಹೆಸರು. ಸ್ಥಿರಸೊತ್ತನ್ನು ಇಂಥ ದಾನಮಾಡಬೇಕೇ ಹೊರತು, ಚರಸ್ವತ್ತನ್ನು ಮಾಡಲಾಗದು ವಕ್

ಫ್ ದಾನವನ್ನು ವಿಲ್ಲುಮೂಲಕವಾದರೂ ಮಾಡಬಹುದು. ಆಗ್ಗೆ ಮೂರನೇ (೩ರಲ್ಲಿ ೧) ಭಾಗಕ್ಕಿಂತಲೂ ಹೆಚ್ಚಾಗಿ ಕೊಡಕೂಡದು. ಅಬುಯೂಸಫ್ ಇವರ ತಾತ್ಪರ್ಯಕ್ಕೆ ಅನುಸಾರವಾಗಿ ದಾನಮಾಡುತ್ತೇನೆಂಬ ಪ್ರತಿಜ್ಞೆ ಮಾಡಿದರೆ, ದಾನಮಾಡಿದಂತಾಗುವುದು. ಅಬುಮಹಮದ್ ಇವರ ಮತಾನುಸಾರವಾಗಿ ಮುತವಲಿಯನ್ನು ನೇಮಿಸಿ ದಾನದ ಸೊತ್ತನ್ನು ಮುತವಲ್ಲಿಯ ಸ್ವಾಧೀನಕ್ಕೆ ಕೊಡಬೇಕಾದುದು ಅವಶ್ಯಕ. ಇಂಥ ದಾನವನ್ನು ಕೊಟ್ಟಾದಬಳಿಕ ಅದನ್ನು ರದ್ದುಮಾಡಲಾಗದು. ಆದರೆ ಮರಣಶಾಸನದ ಮೂಲಕ ಕೊಟ್ಟರೆ ರದ್ದುಮಾಡಬಹುದು.

ಸ್ತ್ರೀಧನಕ್ಕೆ ಗಂಡನ ಸಾಲದ ಜವಾಬ್ದಾರಿ.

ಸ್ತ್ರೀಧನಕ್ಕೆ ಗಂಡನ ಸಾಲದ ಜವಾಬ್ದಾರಿ—ಹೆಂಗಸಿಗೆ ಮದುವೆಯಲ್ಲಿ ತೌರುಮನೆಯವರು ಅತ್ತೆಮನೆಯವರು ಇಟ್ಟ ಆಭರಣಗಳು ನಂಟರಿಷ್ಟರು ಶುಭಶೋಭನಾದಿಗಳಲ್ಲಿ ಕೊಟ್ಟ ಉಡುಗರೆಗಳು ಮುಂತಾದವು ಸ್ತ್ರೀಧನಕ್ಕೆ ಸೇರಿದವುಗಳು ಈ ಒಡವೆಗಳನ್ನು ಗಂಡನ ಸಾಲಕ್ಕೆ ಕೋರ್ಟಿನವರು ಹರಾಜು ಹಾಕಲು ಅಧಿಕಾರವಿಲ್ಲ. ಬೊ·೯೯-೧೨೯೯.

ಪಂಚಾಯಿತಿ.

ಪಂಚಾಯಿತಿ—ಈಗಿನ ಶಿವಲ್ ಕೋರ್ಟುಗಳು ಏರ್ಪಾಡಾಗುವದಕ್ಕೆ ಮೊದಲು ಪಂಚಾಯಿತಿ ಮುಖಾಂತರವೇ ಅನೇಕ ಮೊಕದ್ದಮೆಗಳು ಫೈಸಲಾಗುತಲಿತ್ತು. ಆಗಿನ ಕಾಲದಲ್ಲಿ ಸತ್ಯವಂತರೇ ಬಹಳವಾಗಿದ್ದುಕೊಂಡು ಇದ್ದುದರಿಂದ ನಿಜವನ್ನೇ ಹೇಳುತ್ತಿದ್ದರು. ಈಗಿನ ಕಾಲದಲ್ಲಾದರೋ ಕೋರ್ಟುಗಳು ಏರ್ಪಡಿಸಲ್ಪಟ್ಟು ಲಾಯರುಗಳು ಹೆಚ್ಚಿ ದಿನೇ ದಿನೇ ಸತ್ಯವೆನ್ನುವದು ನಿರ್ನಾಮವಾಗುತ್ತಾ ಬಂತು. ಈಗಿನ ಕೋರ್ಟುಗಳಲ್ಲಿ ಶೇಕಡಾ ೫೦ರಷ್ಟು ನಡೆದ ನಿಜವಾದ ಅಂಶಕ್ಕೆ ವ್ಯತಿರಿಕ್ತವಾಗಿ ಆಗುವದು. ಆದರೆ, ಈಗಲೂ ತಿಳುವಳಿಕೆಯುಳ್ಳವರಾಗಿಯೂ, ಫುರಾಣೇದಾರರಾಗಿಯೂ ಇರುವ ಗೌರವಸ್ತರು ತಮಗೆ ಬೇಕಾದವರನ್ನು ಪಂಚಾಯತರನ್ನಾಗಿ ಚುನಾಯಿಸಿಕೊಂಡು ತಮ್ಮ ವ್ಯಾಜ್ಯಗಳನ್ನು ಫೈಸಲ್ಮಾಡಿಕೊಳ್ಳುವರು. ಸಮಸ್ತರೂ ಹೀಗೆಯೇ ಮಾಡುತ್ತಾಬಂದರೆ ಕೋರ್ಟುಗಳನ್ನೇ ಮುಚ್ಚಬೇಕಾಗುವುದು ವಾದಿ ಪ್ರತಿವಾದಿಗಳು ಪಂಚಾಯಿತಿಯಲ್ಲಿಯೇ ತಮ್ಮ ತಮ್ಮ ಮೊಖದ್ದಮೆಗಳನ್ನು ಫೈಸಲ್ಮಾಡಿಕೊಳ್ಳುತ್ತಾಬಂದರೆ ಲಾಯರುಖರ್ಚು ಕೋರ್ಟುಖರ್ಚು ದಂಡವಾಗಿ ತೆರುವದು ತಪ್ಪುವದು. ಆದರೆ ವ್ಯಾಜ್ಯಗಳು ಕೋರ್ಟಿಗೆ ಬರುವದರಿಂದ ಅನೇಕ ಜನರಿಗೆ ಜಡ್ಜಿಗಳ ಸ್ಥಾನದ ಮತ್ತು ಲಾಯರು ಕೋರ್ಟು

ಸಾಕರರು ಮುಂತಾಗಿ ಅನೇಕರಿಗೆ ಜೀವನವಾಗುತ್ತಿರುವದು. ಇದನ್ನೇ ಇಬ್ಬರ ಜಗಳ ಮೂರನೆಯವರಿಗೆ ಲಾಭವೆನ್ನುವದು. ಆದ್ದರಿಂದ ಸಾಧ್ಯವಾದಷ್ಟುಮಟ್ಟಿಗೂ ಪಂಚಾಯಿತಿಯಲ್ಲಿಯೇ ತಮ್ಮತಮ್ಮ ವಿವಾದಗಳನ್ನು ಪರಿಹರಿಸಿಕೊಳ್ಳುವದು ಉತ್ತಮವಾದದ್ದು. ಹೀಗೆ ಫೈಸಲ್ಮಾಡಿಕೊಳ್ಳಬೇಕೆಂಬ ಕಕ್ಷಿಗಾರರು ತಮಗೆ ಬೇಕಾದ ಪಂಚಾಯಿತರನ್ನು ಚುನಾಯಿಸಿಕೊಳ್ಳಬೇಕು. ಹಾಗೆ ನೇಮಿಸಲ್ಪಟ್ಟ ಪಂಚಾಯಿತರು ವಾದಿ ಪ್ರತಿವಾದಿಗಳಾದ ಉಭಯ ಕಕ್ಷಿಗಾರರಿಂದಲೂ ಮೊದಲು ಮುಚ್ಚಳಿಕೆ, ಯಾ, ಕಟ್ಟಡಕವನ್ನು ಬರಿಸಿಕೊಂಡು ಬಳಿಕ ವ್ಯಾಜ್ಯಗಳ ವಿಚಾರಣೆಯನ್ನು ಪ್ರಾರಂಭಿಸಬೇಕು.

ಒಟ್ಟಿಗೆಕೂಡಿ ಯಾವುದಾದರೂ ಒಂದುಕಾರ್ಯವನ್ನು ಮಾಡಲುದ್ಯೋಗಿಸಿದವರು, ಸದರಿ ಕಾರ್ಯದಲ್ಲಿ ಮುಂದಕ್ಕೆ ಹುಟ್ಟಬಹುದಾದ, ಅಥವಾ ಮೊದಲೇ ಹುಟ್ಟುವ “ವ್ಯಾಜ್ಯವನ್ನು ಪಂಚಾಯಿತರಲ್ಲೇ ತೀರ್ಮಾನಿಸಿಕೊಳ್ಳಬೇಕೇ ಹೊರತು, ಕೋರ್ಟಿಗೆ ಹೋಗಕೂಡದು ಪಂಚಾಯಿತರು ಮಾಡಿದ ತೀರ್ಮಾನವನ್ನು ಮಾತ್ರ ಕೋರ್ಟಿನವರಮೂಲಕ ಜಾರೀ ಮಾಡಿಸಿಕೊಳ್ಳಬೇಕು” ಎಂದು ಕಟ್ಟಡಕವನ್ನು ಮಾಡಿಕೊಳ್ಳಬಹುದು. ಕ ೨೦.

ಮೇಲೆ ಹೇಳಿದ ಕಟ್ಟಡಕದಲ್ಲಿ ಪಂಚಾಯಿತರ ಹೆಸರನ್ನು ನಮೂದಿಸಲೂ ಬಹುದು; ಅಥವಾ, ನಮೂದಿಸದೆಯೂ ಇರಬಹುದು. ಕಟ್ಟಡಕದಲ್ಲಿ ನಮೂದಿಸಿರುವ ಪಂಚಾಯಿತರ ತೀರ್ಮಾನಕ್ಕೆ ತಮ್ಮ ವ್ಯಾಜ್ಯವನ್ನು ಹಾಕಲು ವ್ಯಾಜ್ಯಗಾರರಪೈಕಿ ಕೆಲವರು ಒಪ್ಪದಿದ್ದರೂ, ಅಥವಾ ಕಟ್ಟಡಕದಲ್ಲಿ ಪಂಚಾಯಿತರು ಗೊತ್ತುಮಾಡಲ್ಪಡದಿದ್ದರೆ ಪಂಚಾಯಿತರನ್ನು ನೇಮಿಸಿಕೊಂಡು ಅವರಿಂದ ಫೈಸಲ್ಮಾಡಿಸಿಕೊಳ್ಳಲು ಕೆಲವರು ಒಪ್ಪದಿದ್ದರೂ ಸಹ, ಮತ್ತೆ ಕೆಲವರು ಆ ಕಟ್ಟಡಕವನ್ನು, ಸಿ ಪ್ರೊ. ಕೊ ಮೇರೆ ಕೋರ್ಟಿಗೆ ಹಾಜರ್ಮಾಡಿ ಅರ್ಜಿಯಮೂಲಕ ಪ್ರಾರ್ಥಿಸಿಕೊಂಡಲ್ಲಿ, ಕೋರ್ಟಿನವರು, ಕಟ್ಟಡಕದಲ್ಲಿ ನಮೂದಿದ್ದರೆ, ಅಂಥ ಪಂಚಾಯಿತರಿಂದ ನಮೂದಿಲ್ಲದಿದ್ದರೆ, ಕೋರ್ಟಿನಿಂದಲೆ ಗೊತ್ತುಮಾಡಲ್ಪಡುವ ಬೇರೆ ಪಂಚಾಯಿತರಿಂದ, ಆ ವ್ಯಾಜ್ಯವನ್ನು ತೀರ್ಮಾನ ಮಾಡಿಸಿ, ಅವರು ಮಾಡಿದ ತೀರ್ಮಾನವನ್ನು ಜಾರೀಮಾಡುವರು.

ವ್ಯಾಜ್ಯಗಾರರು ತಮ್ಮ ವ್ಯಾಜ್ಯವನ್ನು ಪಂಚಾಯಿತರ ತೀರ್ಮಾನಕ್ಕೆ ಹಾಕಿದ ಬಳಿಕ, ಪಂಚಾಯಿತರು ಮಾಡುವ ತೀರ್ಮಾನದಂತೆ ನಡೆದುಕೊಳ್ಳಲು ಆ ವ್ಯಾಜ್ಯಗಾರರ ಪೈಕಿ ಕೆಲವರು ತಪ್ಪಿದರೆ, ಯಾರ ಪರವಾಗಿ ತೀರ್ಮಾನವಾಗಿದೆಯೊ, ಅವರು ಸದರಿ ತೀರ್ಮಾನವನ್ನು ಸಿವಿಲ್ ಪ್ರೊಸಿಜರ್‌ರೀತ್ಯ ಕೋರ್ಟಿಗೆ ಹಾಜರ್ಮಾಡಿ ಅರ್ಜಿಯಮೂಲಕ ಪ್ರಾರ್ಥಿಸಿಕೊಂಡರೆ, ಕೋರ್ಟಿನವರು, ಆ ಫೈಸಲು ನ್ಯಾಯವಾಗಿದ್ದಲ್ಲಿ, ಅದರ ಪ್ರಕಾರ ಡಿಕ್ರೀಕೊಟ್ಟು ಆ ಡಿಕ್ರಿಯನ್ನು ಜಾರೀಮಾಡುತ್ತಾರೆ.

ವ್ಯಾಜ್ಯವನ್ನು ಪಂಚಾಯಿತರಿಂದ ತೀರ್ಮಾನಿಸಿಕೊಳ್ಳಲು ಮಾಡಿಕೊಳ್ಳುವ (ಕಟ್ಟಡಕ)

ಸ\\\\......ರಲ್ಲು......ಕಪ್ಪಣ್ಣನ ಮಕ್ಕಳು.... ೧ನೇ ನಂಜಪ್ಪ, ೨ನೇ ರುದ್ರಯ್ಯ, ೩ ನೇ ಭದ್ರಯ್ಯ. ನಾವು ಮೂವರೂ ಬರೆದುಕೊಂಡ ಕಟ್ಟಡ ಕವೇನೆಂದರೆ — ಈವರೆಗೂ ಅವಿಭಕ್ತರಾಗಿದ್ದ ನಾವು ಈಗ ಕುಟುಂಬದ ಸ್ವತ್ತನ್ನು ಹಿಸ್ಸೇಮಾಡಿಕೊಳ್ಳುವ ವಿಷಯದಲ್ಲಿ ನಮನಮಗೆ ತಕರಾರುಂಟಾ ಗಿರುವುದು ಸರಿಯಷ್ಟೆ. ಆದುದರಿಂದ ನಂಜುಂಡಪ್ಪನವರು, ಬಸಪ್ಪನವರು ಗೋವಿಂದಪ್ಪನವರು ಪಂಚಾಯಿತರಾಗಿ ನಮನಮಗೆ ಹಿಸ್ಸೆಯವಿಷಯದಲ್ಲಿ ರುವ ವ್ಯಾಜ್ಯಗಳನ್ನು ಫೈಸಲ್ಮಾಡಿ ನಮ್ಮ ವಿಶಿಷ್ಟ ಆಸ್ತಿಯನ್ನೂ ನಮಗೆ ವಿಭಾಗ ಮಾಡಿಕೊಡಬೇಕೆಂದು ನಾವು ಅವರನ್ನು ಕೇಳಿಕೊಂಡಮೇರೆ ಅವ ರು ಒಪ್ಪಿರುತ್ತಾರೆ. ನಮ್ಮಲ್ಲಿರುವ ಯಾವ ಚರಸ್ವತ್ತನ್ನಾಗಲಿ ಹಾಜರ್ಮಾ ಡಬೇಕೆಂದು ಸದರಿ ಪಂಚಾಯಿತರು ಅಪೇಕ್ಷಿಸಿದಲ್ಲಿ ನಾವು ಅವುಗಳನ್ನು ಅವ ರಲ್ಲಿ ಹಾಜರ್ಮಾಡಲು ನಾವೆಲ್ಲರೂ ಬದ್ಧರಾಗಿರುತ್ತೇವೆ. ಈ ಪಂಚಾಯಿತರು ಈ ಊರಿನಲ್ಲಿ ಪಂಚಾಯಿತಿ ಮಾಡುವ ಸ್ಥಳಕ್ಕೆ ಅವರು ಗೊತ್ತುಮಾಡುವ ಕಾಲಗಳಲ್ಲೆಲ್ಲಾ ನಾವುಗಳು ನಮ್ಮನಮ್ಮ ಜುಬಾನಿಯು ಮತ್ತು ರಿಕಾರ್ಡಿಗ ಸಂಬಂಧವಾದ ರುಜುವಾತುಗಳನ್ನು ಒದಗಿಸಿಕೊಂಡು ಅವರಲ್ಲಿ ಹಾಜರಾಗಲು ನಾವು ಬದ್ಧರಾಗಿರುತ್ತೇವೆ. ಪಂಚಾಯಿತರು ನಮ್ಮನ್ನು ಕೇಳುವ ಪ್ರಶ್ನೆಗ ಳಿಗೆಲ್ಲಾ ನಾವು ಪ್ರಮಾಣಪೂರ್ವಕವಾಗಿ ಸತ್ಯವಾದ ಉತ್ತರಗಳನ್ನು ಕೊಡ ಲು ನಾವು ಬದ್ಧರಾಗಿರುತ್ತೇವೆ. ಪಂಚಾಯಿತರೆಲ್ಲರೂ ಅಥವ ಅವರಪೈಕಿ ಮೆಜಾರಿಟಿಯವರು (ಎಂದರೆ- ಅರ್ಧಕ್ಕಿಂತಲೂ ಹೆಚ್ಚು ಜನಗಳು) ಯಾವ ತೀರ್ಮಾನವನ್ನು ಮಾಡುತ್ತಾರೋ ಆ ತೀರ್ಮಾನಕ್ಕೆ ನಾವು ಬದ್ಧರಾಗತಕ್ಕ ದ್ದು. ಪಂಚಾಯಿತರು ಈ ಲಾಗಾಯಿತು ೩ ತಿಂಗಳಲ್ಲಿ ತಮ್ಮ ತೀರ್ಮಾನವ ನ್ನು ಬರವಣಿಗೆಯಲ್ಲಿ ಪ್ರಸಿದ್ಧಿಪಡಿಸಬೇಕು. ಈ ವಾಯಿದೆಯನ್ನು ಇವರು ಅತಿಕ್ರಮಿಸಿದರೆ ಇವರಿಗೆ ಈ ಮೂಲಕ ಕೊಟ್ಟಿರುವ ಅಧಿಕಾರವು ತಪ್ಪಿಹೋ ಗುವುದು ನಾವೆಲ್ಲರೂ ರುಜುಮಾಡಿದ ಈ ಕಟ್ಟಡವನ್ನು ಈ ದಿವಸ ಮೇಲ ಕಂಡ ಪಂಚಾಯಿತರ ವಶಕ್ಕೆ ಕೊಡುವುದರ ಮೂಲಕ ಈ ನಮ್ಮ ವಿವಾದವ ನ್ನು ಫೈಸಲ್ಮಾಡಲು ಅವರಿಗೆ ಅಧಿಕಾರವನ್ನು ಕೊಟ್ಟಿರುತ್ತೇವೆಯೆಂದು ಮನಃಪೂರ್ವಕವಾಗಿ ನಾವು ಬರೆದುಕೊಟ್ಟ ಕಟ್ಟಡಕ.

(ಬರೆದುಕೊಟ್ಟವನ, ಸಾಕ್ಷಿಗಳ, ಲೇಖಕನ ರುಜುಗಳು ೧ ನೇ ನಮೂ ನೆಯಂತೆ.)

ಈಪ್ರಕಾರ ಕಟ್ಟಡಕವನ್ನು ಮಾಡಿಕೊಂಡು, ಪಂಚಾಯಿತರಿಗೆ ಅಧಿಕಾರವನ್ನು ವಹಿಸಿದಮೇಲೆ ಕಟ್ಟಡಕಕ್ಕೆ ಸೇರಿದವರೆಲ್ಲರೂ ಕೂಡಿ ಕಟ್ಟಡಕವನ್ನು ರದ್ದುಮಾಡಬಹುದೇ ಹೊರತು, ಅವರಪೈಕಿ ಕೆಲವರು ಮಾತ್ರರದ್ದುಮಾಡಲಾಗುವುದಿಲ್ಲ.

ಮೇಲೆ ಕಂಡ ನಮೂನೆಯು ವಿವಾದ ಹುಟ್ಟಿದನಂತರ ಮಾಡಿಕೊಳ್ಳುವ ಕಟ್ಟಡಕವಾಗಿದೆ. ಜನರು ತಾವು ಒಟ್ಟಿಗೆ ಕಾರ್ಯವನ್ನು ನಡಿಸಲು ಪ್ರಾರಂಭಿಸುವಾಗಲೇ ತಮ್ಮತಮ್ಮಲ್ಲಿ ಮುಂದಕ್ಕೆ ವಿವಾದವು ಹುಟ್ಟಬಹುದೆಂಬ ನಿರೀಕ್ಷಣೆಯಮೇಲೆ ಇಂಥ ಕಟ್ಟಡಕವನ್ನು ಮಾಡಿಕೊಳ್ಳಬಹುದು.

ಸ್ಟಾಂಪು— ೮ ಆಣೆ.

ರಿಜಿಸ್ಟ್ರೇಷನ್ ಲಿಮಿಟೇಷನ್— ೪ ತಿಂಗಳು.

ಹೀಗೆ ಕಟ್ಟಡಕ ಬರೆಸಿಕೊಂಡ ಪಂಚಾಯಿತರು ವಾದಿ ಪ್ರತಿವಾದಿಗಳನ್ನು ಗೊತ್ತಾದ ತಾರೀಖಿನಲ್ಲಿ ಗೊತ್ತಾದ ಕೋರ್ಟಿನಲ್ಲಿ ಮುನಶೀಫರು ಜಡ್ಜಿಗಳು ಯಾವರೀತಿ ವಿಚಾರಣೆ ಮಾಡುತ್ತಾರೋ ಆರೀತಿ ಸಾಕ್ಷಿಗಳನ್ನು ಸಾಂಗೋಪಾಂಗವಾಗಿ ವಿಚಾರಿಸಿ ಅನಂತರ ವಿಚಾರಣೆಯನ್ನು ನಿಲ್ಲಿಸಿ ೨—೩ ತಿಂಗಳಿಗೆ ಮೀರಿದ ಕಾಲದೊಳಗಾಗಿ ಪಂಚಾಯಿತರು ಕೊಟ್ಟ ಫೈಸಲಿನಂತ ಕೋರ್ಟಿನ ಮೂಲಕ ಜಾರಿ ಮಾಡಿಸಿಕೊಳ್ಳಬಹುದು.

ಇನ್‌ಸಾಲ್‌ವೆನ್ಸಿ ಅಥವ ದಿವಾಳಿ.

ಇನ್‌ಸಾಲ್ವೆನ್ಸಿ ಅಥವ ದಿವಾಳಿ— ಇನ್‌ಸಾಲ್ವೆನ್ಸಿ ಅಂದರೆ- ತನಗೆ ತೀರಿಸಲು ಅಸಾಧ್ಯವಾದ ಶಕ್ತಿಮೀರಿದ ಸಾಲಗಳನ್ನು ಮಾಡಿಕೊಂಡು ಸಾಲಗಾರರಿಗೆ ಅವರು ಕೊಟ್ಟಿರುವ ಋಣವನ್ನು ತೀರಿಸಿ ಮುಕ್ತನಾಗಲು ಯತ್ನವಿಲ್ಲದೆ ನಿರ್ಧನಸ್ಥಿತಿಯಲ್ಲಿರುವದಕ್ಕೆ ಇನ್‌ಸಾಲ್ಮೆಂಟ್‌ ಅಥವ ದಿವಾಳಿ ಎಂದರ್ಥವು. ಈ ಸ್ಥಿತಿಯಲ್ಲಿರುವವರಮೇಲೆ ಡಿಕ್ರಿ ಪಡೆದು ಅವರನ್ನು ಎಷ್ಟುದಿವಸ ಖೈದಿನಲ್ಲಿಟ್ಟಿದ್ದರೂ ಪ್ರಯೋಜನವಿಲ್ಲ. ಅನೇಕರು ತೆಗದುಕೊಂಡ ಸಾಲಗಳನ್ನು ಸಾಲಗಾರರಿಗೆ ಕೊಡದೆ ಮೋಸಮಾಡಬೇಕೆಂಬ ಉದ್ದೇಶ್ಯದಿಂದ ಸಾಲಗಳನ್ನು ತೆಗೆದುಕೊಳ್ಳುವದಿಲ್ಲ. ಆದರೆ ಸಾಲ ತೆಗೆದುಕೊಳ್ಳುವಾಗ್ಯೆ ಬರಬಹುದೆಂಬ ಆದಾಯವು ಅಕಸ್ಮಾತ್ ನಿಂತುಹೋಗಿಯಾಗಲಿ, ರೋಗಾದ್ಯುಪದ್ರವಗಳಿಂದಲೂ, ಕ್ಷಾಮ ಮುಂತಾದ ಈತಿಬಾಧೆಗಳಿಂದಲೂ ಬರತಕ್ಕ ವರಮಾನವು ಬಾರದೆ ನಿಂತುಹೋಗುವದು. ಇಂತಹ ಸಂದರ್ಭಗಳಲ್ಲಿ ಸಾಲದ ಬಡ್ಡಿಯು ಕೂಡ ಕೊಡದೆ ನಿಂತುಹೋಗಿ ಧನದ್ವಿಗುಣ ತ್ರಿಗುಣವಾ

ಗೆ ಸಾಲ ತೆಗೆದುಕೊಂಡವನ ಉದ್ದೇಶಕ್ಕೆ ಭಂಗಬರುವದು ಆಗ ಸಾಲಗಾ
ರನು ತನ್ನ ಮಾನವನ್ನು ಕಳೆದುಕೊಳ್ಳಬೇಕಾಗುವದಲ್ಲದೆ ಪ್ರಾಣವನ್ನೂ
ಸಹ ಕಳೆದುಕೊಳ್ಳಲು ಪ್ರಯತ್ನಿಸುವನು. ಇಂತಹ ಅನಾಹುತಗಳು ನ
ಯುದಂತೆ ದಿವಾಳಿ ಸರ್ಟಿಫಿಕೇಟನ್ನು ಪಡೆಯುವಂತೆ ಈಗಿನ ಸರಕಾರದವರ
ಏರ್ಪಡಿಸಿರುವರು. ಋಣಿಯು ತಾನು ಯಾರ್‍ಯಾರಲ್ಲಿ ಸಾಲವನ್ನು ತೆಗೆದು
ಕೊಂಡಿರುತ್ತಾನೋ ಅವುಗಳನ್ನು ತನಗೆ ಇರುವ ವಿಶಿಷ್ಟಾಸ್ತಿಯ ತಪಶೀ
ನ್ನು ಒಂದು ಪಟ್ಟಿಯಲ್ಲಿ ಬರೆದು ಡಿಸ್ಟ್ರಿಕ್ಟು ಕೋರ್ಟಿಗೆ ಅರ್ಜಿ ಬರೆದುಕೊಳ್ಳ
ಬೇಕು. ಡಿಸ್ಟ್ರಿಕ್ಟು ಜಡ್ಜಿಯವರು ಈ ವಿಷಯದಲ್ಲಿ ಗೆಜಿಟ್ಟನಲ್ಲಿ ಪ್ರಕಟಿಸಿ
ಕಕ್ಷಿಗಾರರನ್ನು ಕರೆಸಿಕೊಂಡು ವಿಚಾರಣೆ ನಡಿಸಿ ಋಣಿಯು ಯಾವವಿಷಯ
ದಲ್ಲಿಯೂ ತನ್ನ ಸಾಲಗಳ ಸಂಬಂಧವಾಗಿ ದ್ರೋಹ ಅಥವ ಮೋಸಕೃತ್ಯ
ಳನ್ನು ನಡೆಯಿಸಲಿಲ್ಲವೆಂದು ತಿಳಿಯಬಂದರೆ ಅವನನ್ನು ಖೈದಿನಿಂದ ಬಿಟ್ಟು
ಬಿಡುವರು. ಸೆ॥ ೩೫೧ ಅವನಿಗೆ ಏನಾದರೂ ಚರಸ್ಥಿರ ಆಸ್ತಿ ಇದ್ದರೆ ಅವು
ಗಳನ್ನೆಲ್ಲಾ ಒಟ್ಟುಸೇರಿಸಿ ಸಾಲಗಾರರೆಲ್ಲರೂ ದಾಮಾಷಾ ಸರಾಸರಿಯಾ
ಹಂಚಿಕೊಡುವಬಗ್ಗೆ ಒಬ್ಬ ರಿಸೀವರನ್ನು ನೇಮಿಸುವರು. ಈಪ್ರಕಾರ ಬಿಡು
ಗಡೆಯಾದ ಋಣಿಯನ್ನು ಪಟ್ಟಿಯಲ್ಲಿ ಸೇರಿಸಲ್ಪಟ್ಟ ಸಾಲಗಳಿಗೋಸ್ಕರ
ನಃ ದಸ್ತಗಿರಿ ಮಾಡಕೂಡದು. ಸೆ॥ ೩೫೭ ಸಾಲಗಳೆಲ್ಲಾ ಸೇರಿ ೨೦೦ ರೂಪಾ
ಯಿಗಳಿಗೆ ಮೀರದಿದ್ದರೆ ಕೋರ್ಟಿನವರು ಅವುಗಳನ್ನು ತೀರಿಸತಕ್ಕ ಭಾರವು
ಪೂರ್ತಿಯಾಗಿ ತಪ್ಪಿಹೋದಂತೆ ಆರ್ಡರ್ ಮಾಡಬಹುದು. ಹಾಗಿಲ್ಲದಿದ್ದರೆ
ಆ ಸಾಲಗಳೆಲ್ಲಾ ೩ ರಲ್ಲಿ ೧ ಪಾಲು ತೀರುವವರೆಗೂ ಜಪ್ತಿ ಮಾಡಬಹುದು
ದ ಇತರ ಆಸ್ತಿಯಾವದು ಸಿಕ್ಕಿದರೂ ಅವುಗಳನ್ನು ಸಾಲಗಳಿಗೋಸ್ಕ
ಕೋರ್ಟಿನವರು ಮಾರಿಸಬಹುದು. ಬಿಡುಗಡೆಯಾದ ೧೨ ವರ್ಷಗಳವಂತ
ಈ ಭಾರವೆಲ್ಲಾ ತಪ್ಪಿಹೋಗುವದು. ಸಾಲ ತೆಗೆದುಕೊಂಡವನು ಸಾಲಕೊ
ಟ್ಟವರಿಗೆ ಮೋಸಮಾಡಬೇಕೆಂದು ತನ್ನ ಆಸ್ತಿಯನ್ನು ಮರೆಪಡಿಸಿದ್ದು ರುಜು
ವಾತಾದರೆ ಅವನಿಗೆ ಶಿಕ್ಷೆಯಾಗುವದು. ಹಾಗಿಲ್ಲದೆ ಸತ್ಯವಂತರಾದವರು
ತಮ್ಮ ಆಸ್ತಿಯ ಸಾಲವನ್ನು ಸಹಾ ಸರಕಾರಕ್ಕೂ ಸಾಲಗಾರರಿಗೂ ಒಪ್ಪಿ
ಬಿಟ್ಟು ಸುಖವಾಗಿರುವದು ಉತ್ತಮ. ಹೀಗೆ ಯಾವದಾದರೂ ವ್ಯವಸೆ
ಮಾಡದೆ ಋಣಿಯು ದೇಶಾಂತರ ಓಡಿಹೋದರೆ ಸಾಲವು ತಪ್ಪುವುದಿಲ್ಲ.

ಪಾಲುಗಾರಿಕೆ.

ಪಾಲುಗಾರಿಕೆ—ಒಬ್ಬರೊಬ್ಬರೇ ಬಂಡವಾಳ ಹಾಕಿ ವ್ಯಾಪಾರ. ಕೃ
ಕೈಕಸಬಿನ ಕಾರ್ಖಾನೆಗಳು, ಟ್ರಾಂಸಿಟ್ ಕಂಪೆನಿಗಳು ಮುಂತಾದವುಗಳನ್ನು
ಮಾಡುವದಕ್ಕಿಂತಲೂ ಬಂಡವಾಳ ಉಳ್ಳವರು ಮೇಧಾಶಕ್ತಿ, ಶರೀರಧಾರ

ಇರತಕ್ಕ ಜನಗಳೂ ಪರಸ್ಪರ ಅನ್ಯೋನ್ಯವಾಗಿ ಶೇರಿ ಕಾರ್ಯನಡೆಸುವದು ಆದಾಯಕರವಾದುದು. ಈಗಿನ ಕಾಲದಲ್ಲಿ "ಸಂಘೆಶಕ್ತಿಕಲಿಯುಗೆ" ಎಂದು ಅನೇಕರು ಸಂಘವಾಗಿ ಶೇರಿ ಒಂದು ಕಾರ್ಯವನ್ನು ಮಾಡುವದು ಉತ್ತಮವಾದದ್ದು. ಹೀಗೆ ಸೇರುವವರು ತಮ್ಮ ತಮ್ಮ ಬಂಡವಾಳಕ್ಕು ಕಷ್ಟಗಳಿಗೂ ತಕ್ಕ ಫಲಪ್ರಾಪ್ತಿಯನ್ನು ಪಡೆಯಬೇಕಾದರೆ ಕಾರ್ಯ ಪ್ರಾರಂಭಿಸುವುದಕ್ಕೆ ಮುಂಚೆಯೇ ತಮ್ಮ ತಮ್ಮ ಭಾಗವನ್ನು ಇತ್ಯರ್ಥ ಮಾಡಿಕೊಂಡು ಅದಕ್ಕಾಗಿ ಕಾಗದ ಪತ್ರಗಳನ್ನು ಮಾಡಿಕೊಳ್ಳಬೇಕು. ಈ ವಿಷಯದಲ್ಲಿ ನಡೆಸಬೇಕಾದ ಕೆಲವು ನಡವಳಿಕೆಗಳನ್ನು ಇದರಡಿ ಸೂಚಿಸುವೆವು.

ಇಂಥಾ ಸಂಘಗಳನ್ನು ಮಾಡಿಕೊಂಡು ವ್ಯಾಪಾರ, ಕೃಷಿ, ಕೈಕಸಬು ಮುಂತಾದವುಗಳನ್ನು ನಡೆಸಬೇಕಾದವರು ಈಗಿನಕಾಲದಲ್ಲಿ ಜಾರೀಗೆ ಬಂದಿರುವ ಕೋಆಪರೇಟಿವ್ ಸೊಸೈಟಿಗಳನ್ನು ಏರ್ಪಾಡು ಮಾಡಿಕೊಂಡು ಕಾರ್ಯ ನಡೆಸಬಹುದು. ಅಥವಾ ಆ ನಿಬಂಧನೆಗಳಿಗೆ ಅನುಕೂಲವಾಗದೆ ಇರುವಪಕ್ಷದಲ್ಲಿ ಜಾಯಿಂಟ್ ಸ್ಟಾಕ್ ಕಂಪೆನಿಗಳನ್ನು ಮಾಡಿಕೊಂಡು ಉದ್ಯೋಗಗಳನ್ನು ನಡೆಸಬಹುದು. ಕೋಆಪರೇಟಿವ್ ಸೊಸೈಟಿಗಳೇ ಈಗ ಬಹಳವಾಗಿ ರೂಢಿಗೆ ಬಂದಿವೆ. ಪ್ರಕೃತದಲ್ಲಿ (ಹಾಲಿ) ಈ ಭರತಖಂಡದಲ್ಲಿ ೬—೭ ಸಾವಿರ ಸೊಸೈಟಿಗಳಾಗಿವೆ. ಇನ್ನು ಪ್ರತಿದಿವಸದಲ್ಲಿಯೂ ಒಂದೊಂದು ಸೊಸೈಟಿಯು ಏರ್ಪಾಡಾಗುತಲಿದೆ. ಈ ಮೈಸೂರು ದೇಶ ಒಂದರಲ್ಲಿಯೇ ೮೫೦ ಸೊಸೈಟಿಗಳ ಮೇಲೆ ಇದೆ. ಈ ಸೊಸೈಟಿಗಳನ್ನು ರಿಜಿಸ್ಟರ್ ಮಾಡಿಸಬೇಕಾದರೆ ಸರಕಾರಕ್ಕೆ ಫೀಜು ಕೊಡಬೇಕಾಗಿಲ್ಲ. ಮೆಂಬರುಗಳು ಸಾಲ ಪಡೆಯುವ ಪತ್ರಗಳಿಗೆ ಸ್ಟಾಂಪಿಲ್ಲ. ಮತ್ತು ಮೆಂಬರುಗಳ ಷೇರುಗಳು ಇತರ ಸಾಲಗಳಿಗಾಗಿ ಜಫ್ತಿಯಾಗತಕ್ಕದ್ದಲ್ಲವು. ಈ ಷೇರುಗಳಮೇಲೂ ಇದರ ಆದಾಯದಮೇಲೂ ಯಾವದೊಂದು ತೆರಿಗೆಯನ್ನು ಹಾಕುವದಿಲ್ಲವು. ಮತ್ತು ಸಂಘದ ಆದಾಯವೆಚ್ಚವು ಗೌರ್ನಮೆಂಟ್ ಅಧಿಕಾರಿಗಳಿಂದ ಆಗಾಗ್ಯೆ ತನಿಖೆ ಮಾಡಲ್ಪಡುವದು. ಇದೇ ವಿಷಯವಾಗಿ ಗೌರ್ನಮೆಂಟಿನವರು ಕೋ ಆಪರೇಟಿವ್ ಸೊಸೈಟಿಗಳ ಕೈಪಿಡಿ ಎಂದು ಈ ಸಂಘಗಳ ನಿರ್ಮಾಣ. ಆಡಳಿತ ಮುಂತಾದ ನಿಬಂಧನೆಗಳನ್ನು ಕುರಿತು ಒಂದು ಪುಸ್ತಕವನ್ನು ಛಾಯಿಸ್ಮಾಡಿರುವರು. ಈಪುಸ್ತಕವು ಕೋ ಆಪರೇಟಿವ್ ಸೊಸೈಟಿಗಳ ರಿಜಿಸ್ಟ್ರಾರವರ ಆಫೀಸಿನಲ್ಲಿ ದೊರೆಯುವದು. ಇದೂ ಅನುಕೂಲಿಸದೆ ಹೋದಪಕ್ಷದಲ್ಲಿ ಪಾಲಿಗೆ ಅಥವ ಷೇರಿಗೆ ಸೇರುವ ಮೆಂಬರುಗಳು ಜಾಯಿಂಟ್ ಸ್ಟಾಕ್ ಕಂಪೆನಿಗಳನ್ನು ಸ್ಥಾಪಿಸಿಕ್ಕೊಳ್ಳಬಹುದು. ಈ ಕಂಪೆನಿಗಳಲ್ಲಿ ೭ ಜನಕ್ಕೆ ಕಡಮೆ ಪಾಲುದಾರರಾದಲ್ಲಿ ಕಂಪನಿಯನ್ನು ರಿಜಿಸ್ಟರ್ ಮಾಡುವದಿಲ್ಲ. ೭ ಜನಗಳಿಗೆ ಕಡಮೆ ಇಲ್ಲದಂತೆ

ಷೇರುದಾರರುಗಳನ್ನು ಸೇರಿಸಿಕೊಂಡು ಸರ್ಕಾರಕ್ಕೆ ತಿಳಿಯಪಡಿಸಿದ
ಜಾಯಿಂಟ್ ಸ್ಟಾಕ್ ಕಂಪೆನಿಗಳ ರಿಜಸ್ಟ್ರಾರವರು ೨೦ ರೂಪಾಯಿಗಳ ಫೀ
ಜನ್ನು ತೆಗದುಕೊಂಡು ರಿಜಸ್ಟರು ಮಾಡುವರು. ರಿಜಸ್ಟರು ಮಾಡದ
ಇರುವ ಕಂಪೆನಿಗಿಂತ ಈ ರಿಜಸ್ಟರು ಮಾಡಿಸುವ ಕಂಪೆನಿಗಳ ನಂಬಿ
ಹೆಚ್ಚಾಗಿರುವವು. ರಿಜಸ್ಟರ್ ಆಗಿರುವ ಕಂಪೆನಿಗಳು ದಾವಾ ತಂದ
ಸರ್ಕಾರದ ಕೋರ್ಟುಗಳಲ್ಲಿ ಹಿಡಿದು ವಿಚಾರಿಸುವರು. ಇಬ್ಬರು ಮೂರ
ನಾಲ್ಕು ಜನಗಳು ಸೇರಿ ಪಾಲಿಗೆ ಯಾವದಾದರೂ ಉದ್ಯೋಗ ನಡಿಸಬ
ಕಾದರೆ ಅವರವರ ಒಡಂಬಡಿಕೆಗಳನ್ನು ಕರಾರುಗಳನ್ನು ಛಾಪಾದಸ್ತೈ
ಜಿನಲ್ಲಿ ಬರೆದು ಪ್ರಕೃತವಿದ್ದರೆ ರಿಜಸ್ಟರ್ಮಾಡಿಸಬೇಕು. ಸಂಘುಗಳನ್ನು
ರಿಜಸ್ಟರ್ಮಾಡಿಸದೆಹೋದರೆ ಯಾರಾದರೂ ದಾವಾಮಾಡಿದ ಕಾಲದಲ್ಲಿ ಷೇರು
ದಾರರೆಲ್ಲರು ಪಾರ್ಟಿಯಾಗಿ ನಿಲ್ಲಬೇಕಾಗುವದು. ಸಂಘುವು ರಜಸ್ಟ್ರಾಗಿದ್ದ
ಆ ಸಂಘುದ ಏಜಂಟು ಅಥವ ಸೆಕ್ರೆಟರಿಯೊಬ್ಬನೇ ನಿಂತು ದಾವಾ ನಡೆ
ಬಹುದು.

ಮೈನರುಗಳನ್ನು ಪಾಲುಗಾರಿಕೆಗೆ ಸೇರಿಸಿಕೊಳ್ಳೋಣ—ಕೋ ಆ
ರೇಟಿವ್ ಸಂಘುಗಳಲ್ಲದ ಇತರ ವ್ಯಾಪಾರ ಸಂಘುಗಳಿಗೆ ಮೈನರುಗಳನ್ನು
ಪಾಲುಗಾರಿಕೆಗೆ ಸೇರಿಸಿಕೊಳ್ಳಬಹುದು. ಪಾಲುಗಾರಿಕೆಯ ಸಾಲಕ್ಕೆ ೧
ವರುಷ ವಯಸ್ಸಿಗೆ ಕಡಮೆಯಾದ ಮೈನರು ಹಾಕಿರುವ ಪಾಲಿನ ಬಂ
ವಾಳವು ಮಾತ್ರ ಗುರಿಯಾಗುತ್ತದೆಯೇ ಹೊರತು ಅವನ ಇತರ ಚರಸ್ಥಿ
ರ ಆಸ್ತಿಯಾಗಲಿ ಗುರಿಯಾಗುವದಿಲ್ಲ. ಬೊ. ಲಾ. ರಿ. ೭ ವಾ. ೧೬೪. ೧೮೯

ಆದರ ಅವನು ಮೇಜರ್ ಆದಕೂಡಲೇ ತಾನು ಪಾಲುಗಾರಿಕೆಯನ್ನು
ಬಿಟ್ಟಿದ್ದೇನೆಂದು ಪ್ರಸಿದ್ಧಿಪಡಿಸದಿದ್ದರೆ ಇತರ ಪಾಲುಗಾರರಂತೆ ಅವನೂ
ಜವಾಬ್ದಾರನಾಗುವನು. ಕ. ೨೪೭, ೨೪೮.

ಸಂಬಂಧ—ಯಜಮಾನ ಏಜಂಟರಿಗೆ ಯಾವಸಂಬಂಧವಿದೆಯೋ ಅದೆ
ಸಂಬಂಧವು ಪಾಲುಗಾರರಲ್ಲಿ ಒಬ್ಬರಿಗೊಬ್ಬರಿಗಿರುತ್ತದೆ. ಎಂದರೆ— ಒಬ್ಬ
ಪಾಲುಗಾರನಿಗೆ ಮತ್ತೊಬ್ಬ ಪಾಲುಗಾರನು ಅನ್ಯೋನ್ಯತಃ ಏಜಂಟೆಂದು
ಭಾವಿಸಲ್ಪಡುವನು. ಆದುದರಿಂದ ಪಾಲುಗಾರರ ಪೈಕಿ ಯಾವನಾದರೂ
ಒಬ್ಬನು ಮಾಡುವ ಲೇಣೆ, ದೇಣೆ ಮೊದಲಾದ ಕಾರ್ಯಗಳಿಗೆ ಇತರ ಪಾಲು
ದಾರರು ಬಾಧ್ಯರೂ ಜವಾಬ್ದಾರರೂ ಆಗುತ್ತಾರೆ. ಆದರೆ ಪಾಲುಗಾರರ
ಪೈಕಿ ಇಂಥಿಂಥವರು ಇಂಥಿಂಥ ಕಾರ್ಯವನ್ನು ಮಾಡಕೂಡದು ಎಂದು ಅವ
ರು ನಿಬಂಧನೆ ಮಾಡಿಕೊಂಡರೆ ಆ ನಿಬಂಧನೆಯನ್ನು ತಿಳಿದಿರುವ ಮೂರನೆ
ಮನುಷ್ಯನು ಆ ನಿಬಂಧನೆಗೆ ವ್ಯತಿರಿಕ್ತವಾಗಿ ಪಾಲುಗಾರನೊಡನೆ ನಡಸು
ಲೇವಾದೇವಿಗಳಿಗೆ ಇತರ ಪಾಲುಗಾರರನ್ನು ಗುರಿ ಮಾಡುವದಕ್ಕಾಗುವದಿಲ್ಲ

ಪಾಲುಗಾರಿಕೆಗೆ ಸಾಲವನ್ನು ಕೊಟ್ಟು, ಆ ಪಾಲುಗಾರಿಕೆಯು ಕೆಲವು ಲಾಭಾಂಶವನ್ನು ಬಡ್ಡಿಗಾಗಿ ಹೊಂದುವವರು ಅಂಥ ಲಾಭಾಂಶವನ್ನುಹೊಂದಿದ ಮಾತ್ರಕ್ಕೇ ಪಾಲುಗಾರರಾಗುವದಿಲ್ಲ. ತಮ್ಮ ಸಂಬಳಕ್ಕಾಗಿ ಪಾಲುಗಾರಿಕೆಯು ಉತ್ಪತ್ತಿಯ ಕೆಲವು ಭಾಗವನ್ನು ಹೊಂದುವ ಪಾಲುಗಾರಿಕೆಯು ನೌಕರರಾದ ಏಜಂಟು ಮೊದಲಾದವರು ಅಂಥ ಲಾಭಾಂಶವನ್ನುಹೊಂದುವಮಾತ್ರಕ್ಕೇ ಪಾಲುಗಾರರಾಗುವದಿಲ್ಲ. ಮೃತಪಟ್ಟವರ ಹೆಂಡತಿ ಮಕ್ಕಳುಗಳು ಪಾಲುಗಾರಿಕೆಯ ನಷ್ಟಕ್ಕೆ ಜವಾಬ್ದಾರರಾಗುವದಿಲ್ಲ.

ನಿಬಂಧನೆ— ಒಂದು ಪಾಲುಗಾರಿಕೆಯು ಇಷ್ಟೇ ದಿವಸ ನಡೆಯಬೇಕೆಂಬ ನಿಬಂಧನೆಯು ನಡೆದಿದ್ದಾಗ ಆ ವಾಯಿದೆಯು ಮುಗಿಯುವದರೊಳಗೆ ಆವನೊಬ್ಬ ಪಾಲುಗಾರನೂ ಇತರ ಪಾಲುಗಾರರ ಸಮ್ಮತಿಯಿಲ್ಲದೆ ಪಾಲುಗಾರಿಕೆಯನ್ನು ಬಿಡಲೂಕೂಡದು. ಇವನನ್ನು ಬಿಡಿಸಲು ಇತರರಿಗೆ ಹಕ್ಕಿಲ್ಲ. ಯಾವ ಪಾಲುಗಾರನೂ ಇತರ ಪಾಲುಗಾರರ ಅನುಮತಿಯಿಲ್ಲದೆ ಹೊಸಬರನ್ನು ಪಾಲುಗಾರಿಕೆಗೆ ಸೇರಿಸಿಕೊಳ್ಳಲೂ ಆಗುವದಿಲ್ಲ. ಒಬ್ಬ ಪಾಲುಗಾರನು ಪಾಲುಗಾರಿಕೆಯನ್ನುಬಿಟ್ಟರೂ ಸತ್ತರೂ ಪಾಲುಗಾರಿಕೆಯು ಮುಗಿಯಿತೆಂದು ಭಾವಿಸಬೇಕು. ಉಳಿದವರು ಮುಂದಕ್ಕೆ ಆ ಪಾಲುಗಾರಿಕೆಯನ್ನು ನಡಿಸಲು ಪ್ರಾರಂಭಿಸಿದರೆ ಹೊಸ ಪಾಲುಗಾರಿಕೆಯನ್ನು ಮಾಡಿಕೊಂಡಂತೆ ಭಾವಿಸಬೇಕು. ಕ. ೨೫೩ ಪಾಲುಗಾರರು ತಮ್ಮತಮ್ಮೊಳಗೆ ಪಾಲುಗಾರಿಕೆಯನ್ನು ಮುಗಿಸಿಕೊಳ್ಳದಿದ್ದರೆ, ಪಾಲುಗಾರರ ಪೈಕಿ ಯಾರಾದರೂ ಕೆಳಗೆ ನಮೂದುಮಾಡುವ ಕಾರಣಗಳಮೇಲೆ ಪಾಲುಗಾರಿಕೆಯನ್ನು ಕೋರ್ಟಿಗೆ ದಾವಾಮಾಡಬಹುದು.

ದಾವಾ--ದಾವಾಮಾಡುವವನು ಹೊರತು ಮಿಕ್ಕವರಲ್ಲಿ ಯಾರಾದರೂ (೧) ಹುಚ್ಚನಾದರೂ, (೨) ದಿವಾಳಿಯಾದರೂ, (೩) ತನ್ನಪಾಲುಗಾರಿಕೆಯ ಹಕ್ಕನ್ನುಇತರರಿಗೆ ಹೋಗುವಂತೆ ಮಾಡಿದರೂ, (೪) ಪಾಲುಗಾರಿಕೆಯ ತನ್ನ ಭಾಗದ ಕೆಲಸವನ್ನು ಮಾಡಲು ಅಶಕ್ತನಾದರೂ, (೫) ಪಾಲುಗಾರಿಕೆಯ ಕೆಲಸದಲ್ಲಿ ದುರ್ನಡತೆಯುಳ್ಳವನಾದರೂ, (೬) ಅಥವ ಪಾಲುಗಾರಿಕೆಯಿಂದ ನಷ್ಟವೇಹೊರತು ಲಾಭವಿಲ್ಲದಿದ್ದರೂಸಹ ಪಾಲುಗಾರಿಕೆಯನ್ನು ಅಗಲಿಸಲು ದಾವಾತರಬಹುದು.

ಪಾಲುಗಾರಿಕೆಯ ಸ್ವಂತ ಸಾಲಗಳು—ಮತ್ತು ಪಾಲುಗಾರಿಕೆಗೆ ಸಂಬಂಧಪಟ್ಟ ಸಾಲಗಳು, ಈ ಎರಡುತೆರದ ಸಾಲಗಳೂ ಇದ್ದರೆ ಪಾಲುಗಾರಿಕೆಯ ಸೊತ್ತು ಮೊದಲು ಪಾಲುಗಾರಿಕೆಯ ಸಾಲಕ್ಕೆ ಈಡಾಗುವದು. ಈ ಸೊತ್ತಿನಿಂದ ಪಾಲುಗಾರಿಕೆಯ ಸಾಲವು ತೀರಿ ಅನಂತರ ಏನಾದರೂ ಉಳಿದರೆ ಅದು ಸ್ವಂತಸಾಲಕ್ಕೆ ಗುರಿಯಾಗುವದು. ಇದೇಮೇರೆ ಸ್ವಂತ ಸೊತ್ತು ಮೊದಲು

ಸ್ವಂತಸಾಲಕ್ಕೆ ಗುರಿಯಾಗುವದು. ಆ ಸಾಲವನ್ನು ತೀರಿಸಿ ನಂತರ ಏನಾ ರೂ ಉಳಿದರೆ ಉಳಿದುದು ಪಾಲುಗಾರಿಕೆಯ ಸಾಲಕ್ಕೆ ಹೋಗುವುದು ಕ. ೬೬೨.

ಪಾಲುಗಾರಿಕೆಯು ನಿಲ್ಲಿಸಲ್ಪಟ್ಟರೆ—ಆ ವಿಷಯವನ್ನು ವರ್ತಮಾನಪತ್ರಿ ಕೆಯಲ್ಲಿ ಪ್ರಸಿದ್ಧಪಡಿಸಬೇಕು. ಮತ್ತು ಪಾಲುಗಾರಿಕೆಯಲ್ಲಿ ನಡವಳಿಕೆ ನಡೆ ಸುತ್ತಿದ್ದ ಪ್ರತಿಯೊಬ್ಬರಿಗೂ ಬರಹಮೂಲಕ ನೋಟೀಸನ್ನು ಕೊಡಬೇಕು ಏಕೆಂದರೆ— ಪಾಲುಗಾರಿಕೆಯು ಕೊನೆಮುಟ್ಟದ ವಿಷಯವನ್ನು ತಿಳಿಯದ ಮೂರನೆಯವನು ಪಾಲುಗಾರರಪೈಕಿ ಯಾರಿಗಾದರೂ ಪಾಲುಗಾರಿಕೆಯ ಸಾಲವನ್ನಾಗಲಿ, ಉದರಿಯನ್ನಾಗಲಿ ಕೊಟ್ಟರೆ ಇತರ ಪಾಲುಗಾರರು ಅವು ಳಿಗೆ ಬದ್ಧರಾಗುವರು

ಪಾಲುಗಾರಿಕೆಯ ಪತ್ರ.

ಸರ್......ರಲ್ಲು......೧ ನೇ ರುದ್ರಯ್ಯ, ೨ ನೇ ಗುಬ್ಬೆಂಣ, ೩ ನೇ ಬುಳ್ಳಪ್ಪ, ಈ ಮೂವರೂ ಬರೆದಿಟ್ಟ ಪಾಲುಗಾರಿಕೆಯ ಪತ್ರವೇನೆಂದರೆ— ಈ ಮೂವರೂ ಸೇರಿ ಜಿನಸಿ ವ್ಯಾಪಾರವನ್ನು ಮಾಡಲು ಮಾಡಿಕೊಂಡಿ ರುವ ಒಡಂಬಡಿಕೆಗಳು ಯಾವುವೆಂದರೆ— ಮೇಲೆ ಕಂಡ ಮೂವರೂ ಫೀ ಇಸಂ ೨೦೦ ರೂಪಾಯಿಮೇರೆ ೬೦೦ ರೂಪಾಯಿಯನ್ನು ಮೊದಲು ಬಂಡವಾ ಳಕ್ಕೆ ಕೊಡಬೇಕು. ಮದ್ರಾಸಿನಿಂದ ಜಿನಸಿ ಬಂದಕೂಡಲೆ ವ್ಯಾಪಾರಕ್ಕೆ ಪ್ರಾರಂಭಿಸಬೇಕು. ೩ ನೇ ಬುಳ್ಳಪ್ಪನ ಸ್ವಂತ ಅಂಗಡಿಯಲ್ಲಿ ವ್ಯಾಪಾರ ಮಾಡಬೇಕು. ೨ ನೇ ಗುಬ್ಬೆಂಣ ೩ ನೇ ಬುಳ್ಳಪ್ಪ ಇವರು ಮಾತ್ರ ವ್ಯಾಪಾರದ ಕೆಲಸವನ್ನು ಮಾಡಿಕೊಂಡು ಹೋಗಬೇಕು. ಈ ವ್ಯಾಪಾ ರಕ್ಕೆ ಇನ್ನೂ ಬಂಡವಾಳ ಬೇಕಾದರೆ ಬೇಕಾದಾಗೆಲ್ಲ ೧ ನೇ ರುದ್ರಯ್ಯನು ಈಗ ಕೊಟ್ಟಿರುವದಲ್ಲದೆ ಇನ್ನೂ ೧೦೦೦ ರೂಪಾಯಿವರೆಗೂ ಬಂಡವಾಳ ವನ್ನು ಕೊಡುತ್ತಾಬರಬೇಕು. ವ್ಯಾಪಾರವನ್ನು ಮಾಡುವ ಗುಬ್ಬಯ್ಯ ಮತ್ತು ರುದ್ರಯ್ಯ ಸರಿಯಾದ ಲೆಕ್ಕಗಳನ್ನು ಇಟ್ಟು ೧ ನೇ ರುದ್ರ ಯ್ಯನು ಅಪೇಕ್ಷೆಮಾಡಿದಾಗಲೆಲ್ಲಾ ಅವನಿಗೆ ಲೆಕ್ಕಗಳನ್ನು ಕೊಟ್ಟು ಸಮ ಜಾಯಿಷಿ ಕೊಡಬೇಕು. ಸರಕುಗಳನ್ನು ನಗದಾಗಿ ಮಾರಬೇಕಲ್ಲದೆ ಕಡವಾ ಗಿ ಮಾರಕೂಡದು. ಈ ಪಾಲುಗಾರಿಕೆಗಾಗಿ ಅವಶ್ಯಕವಿದ್ದರೆ ಈ ಮೂವರೂ ಸೇರಿ ಹೊರಗಿನಿಂದ ಸಾಲಾತರಬೇಕೇಹೊರತು ಒಬ್ಬೊಬ್ಬರೇ ಸಾಲವನ್ನು ಮಾಡಕೂಡದು; ಹಾಗೆ ಮಾಡಿದರೆ ಇತರರು ಆ ಸಾಲಕ್ಕೆ ಗುರಿಯಾಗುವ ದಿಲ್ಲ. ಮುಂದಿನ ಶಿವರಾತ್ರಿಯಲ್ಲೂ ಮತ್ತು ಅದರ ಮುಂದಕ್ಕೆಪ್ರತಿವರ್ಷದ ಶಿವರಾತ್ರಿಯಲ್ಲೂ ಲೆಕ್ಕಗಳನ್ನು ಅಜಮಾಯಿಷಿ ಮಾಡಿ, ಬಂದ ಲಾಭದಲ್ಲಿ

ಸಾದಿಲ್ವಾರು ಖರ್ಚು ಮತ್ತು ಮಾಹೇಯಾನಾ ೫ ರೂ. ನಂತೆ ಆಗುವ ಅಂಗಡಿ ಬಾಡಿಗೆಯನ್ನು ಸಹ ಕಳೆದು ಉಳಿಯುವ ಮೊಬಲಗನ್ನು ನಾವುಗಳು, ನಾವು ಹಾಕಿರತಕ್ಕ ಬಂಡವಾಳಕ್ಕೆ ಅನುಗುಣವಾಗಿ ಹಂಚಿಕೊಳ್ಳಬೇಕು. ಈಪ್ರಕಾರ ಈಪಾಲುಗಾರಿಕೆಯು ಈಲಾಗಾಯಿತು ೯ ವರ್ಷ ನಡೆಯಬೇಕು. ಈ ಮೂವರೂ ರುಜುಮಾಡಿದ ಇಂಥಪತ್ರವು ಪ್ರತಿಯೊಬ್ಬರಲ್ಲಿಯೂ ಒಂದೊಂದು ಇರಬೇಕು ಎಂದು ನಾವು ಮೂವರೂ ಖುದ್ದುರಾಜಿಯಿಂದ ಒಬ್ಬರು ಮತ್ತೊಬ್ಬರಿಗೆ ಬರೆದುಕೊಟ್ಟ ಪಾಲುಗಾರಿಕೆಯ ಪತ್ರ.

(ಬರೆದವರ, ಸಾಕ್ಷಿಗಳ, ಲೇಖನ ರುಜು)

ಸ್ಟಾಂಪು—ಪಾಲುಗಾರಿಕೆಯ ಬಂಡವಾಳವು ೫೦೦ ರೂಪಾಯಿಗೆ ಹೆಚ್ಚಿಲ್ಲದಿದ್ದರೆ ೨ ರೂ. ೮ ಆಣೆ ಸ್ಟಾಂಪು ಹಾಕಬೇಕು. ಇದಕ್ಕಿಂತ ಎಷ್ಟು ಹೆಚ್ಚಾಗಿದ್ದರೂ ೧೦ ರೂ. ಸ್ಟಾಂಪುಮಾತ್ರ ಅವಶ್ಯಕ. ಪಾಲುಗಾರಿಕೆಯ ಅಗಲಿಕೇ ಪತ್ರಕ್ಕೆ ೫ ರೂ. ಸ್ಟಾಂಪು ಬೇಕು. ಪ್ರತಿ ಪಾಲುಗಾರನೂ ಪಾಲುಗಾರಿಕೆಯ ಪತ್ರದ ಪ್ರತಿಯನ್ನು ಇಟ್ಟುಕೊಳ್ಳಬೇಕಾದರೆ, ಸಾಂಪ್ ಆಕ್ಟನ್ನು ನೋಡಿ.

ರಿಜಿಸ್ಟ್ರೇಷನ್—ಸ್ಥಿರಸ್ವತ್ತಿನ ಸಂಬಂಧವಿಲ್ಲದಿದ್ದರೆ, ರಿಜಿಸ್ಟರ್ ಮಾಡಿಸಬೇಕಾದ ಅವಶ್ಯಕವಿಲ್ಲ.

ಲಿಮಿಟೇಷನ್—ಮುಗಿಸಲ್ಪಟ್ಟ ಪಾಲುಗಾರಿಕೆಯ ಲೆಕ್ಕಗಳ ಅಜಮಾಯಿಷಿಯಿಂದ ಪಾಲುಗಾರಿಕೆಯ ಲಾಭವನ್ನು ಹೊಂದಲು, ಪಾಲುಗಾರಿಕೆಯು ನಿಲ್ಲಿಸಲ್ಪಟ್ಟ ೩ ವರ್ಷದಲ್ಲಿ ದಾವಾತರಬೇಕು.

ದತ್ತುಸ್ವೀಕಾರದಲ್ಲಿ ದಾಯಾದಿಗಳ ಒಪ್ಪಿಗೆ ಅವಶ್ಯಕ ಎಷ್ಟುಮಟ್ಟಿಗಿರುವದು.

ಬರಂಪುರದಕೇಸು—ಈ ಕೇಸಿನಲ್ಲಿ ಚಿನಖಿಮಿಡಿ ಜಮೀಂದಾರರು ಸತ್ತ ವೇಳೆಯಲ್ಲಿ ಆತನ ವಿತಂತುವೂ, ಅವಿಭಕ್ತಸೋದರನೊಬ್ಬನೂ ವಿಭಕ್ತನಾದ ಒಬ್ಬ ದೂರಸಪಿಂಡನೂ—ಈ ಮೂವರು ಮಾತ್ರವಿದ್ದರು. ಬೇರೆ ಸಪಿಂಡರು ಯಾರೂ ಇಲ್ಲದೆಹೋದರು. ಈ ಹೇಳಲ್ಪಟ್ಟ ದೂರಸಪಿಂಡನು ಪೆದ್ದಖಿಮುಡಿಗೆ ಜಮೀಂದಾರನಾಗಿದ್ದನು. ವಿತಂತು ದತ್ತು ಮಾಡಿಕೊಳ್ಳದಪಕ್ಷದಲ್ಲಿ ಆಕೆಯ ಮೈದುನನೇ ಚಿನಖಿಮುಡಿ ಜಮೀಂದಾರಿಗೆ ವಾರಸಾಗಿದ್ದನು. ಇಂತಹ ಸಂದರ್ಭದಲ್ಲಿ ಅವಿಭಕ್ತನಾದ ತನ್ನ ಮೈದುನನ ಅನುಮತಿ ಪಡೆಯದೆ, ವಿಭಕ್ತಸಪಿಂಡನಾದ ಪೆದ್ದಖಿಮುಡಿ ಜಮೀಂದಾರನ ಮಗನನ್ನು ದತ್ತು ಮಾಡಿಕೊಂಡಳು. ಈ ದತ್ತುವನ್ನು ರದ್ದುಮಾಡುವದಕ್ಕೆ ತಂದ ವ್ಯಾಜ್ಯದಲ್ಲಿ

(೧) ಗಂಡನಿಂದ ಲಿಖಿತಮೂಲಕವಾದ ಸ್ವೀಕಾರಾಧಿಕಾರವು ಕೊಡಲ್ಪಟ್ಟಿರು
ಇಂತೆಯೂ, ಅಷ್ಟೇಅಲ್ಲದೆ (೨) ಗಂಡನ ಸಪಿಂಡನಾದ ಪೆದ್ದಖಿಮಿಡಿ ಜಮೀಂ
ದಾರರು ಸಮ್ಮತಿಸಿ ತನ್ನ ಮಗನನ್ನು ದತ್ತು ಕೊಟ್ಟನಾದುದರಿಂದ ಭರ್ತ್ರನನು
ಜ್ಞೆಯಿಲ್ಲದಿದ್ದರೂ ಸ್ವೀಕಾರವು ಸಲ್ಲತಕ್ಕ ಜ್ಞಾತ್ಯಂಗೀಕಾರವಿತ್ತೆಂದೂ ವಾದಿ
ಸಲ್ಪಟ್ಟಿತು. ಡಿಸ್ಟ್ರಿಕ್ಟ್ ಕೋರ್ಟಿನವರು ಈ ಎರಡಂಶಗಳನ್ನೂ ವಿತಂತು
ವಿಗೆ ವಿರೋಧವಾಗಿ ತೀರ್ಮಾನಿಸಿದರು. ಅಪ್ಪೀಲಿನಲ್ಲಿ ಮದರಾಸು ಹೈಕೋ
ರ್ಟಿನವರು ಗಂಡನಿಂದ ಕೊಡಲ್ಪಟ್ಟಂತೆ ಹೇಳಲ್ಪಟ್ಟ ಸ್ವೀಕಾರಾ
ಧಿಕಾರಪತ್ರಿಕೆ ನಿಜವಾದ್ದಾಗಿ ನಂಬಿ ದತ್ತುವನ್ನು ಸ್ಥಿರಪಡಿಸಿದರು. ಇಷ್ಟೇ
ಅಲ್ಲದೆ ಅಂತಹ ಸ್ವೀಕಾರಪತ್ರಿಕೆ ಇಲ್ಲದಿದ್ದರೂ ದತ್ತುಕೊಟ್ಟ ಪೆದ್ದಖಿಮಿಡಿ
ಜಮೀಂದಾರನು ಗಂಡನ ಸಪಿಂಡನಾಗಿದ್ದುದರಿಂದ ಸ್ವೀಕಾರಕ್ಕೆ ತಕ್ಕ ಜ್ಞಾತ್ಯಂ
ಗೀಕಾರವಿತ್ತೆಂದೂ ಅಂತಹ ಅಂಗೀಕಾರವು ಒಬ್ಬ ಸಪಿಂಡನು ಮಾತ್ರವೇ
ಕೊಟ್ಟರೂ ಸಾಕಾಗಿರುವುದೆಂದೂ ಆತನು ಸಮೀಪ ಸಪಿಂಡನಾಗಿರಬೇಕಾದು
ದಾವಶ್ಯಕವಿಲ್ಲವೆಂದೂ ಹೇಳಿದರು. ಅದರಮೇಲಪ್ಪೀಲಿನಲ್ಲಿ ಪ್ರಿವೀಕೌನ್ಸಿ
ಲಿನವರ ಕೂಡ ಗಂಡನಿಂದ ಕೊಡಲ್ಪಟ್ಟ ಸ್ವೀಕಾರಾಧಿಕಾರವನ್ನು ನಂಬಿ ದತ್ತು
ಖಾಯಂಮಾಡಿದರು. ಆದರೆ ಹೈಕೋರ್ಟಿನವರ ತೀರ್ಮಾನದಲ್ಲಿ ಜ್ಞಾತ್ಯಂ
ಗೀಕಾರವಿಷಯವಾದ ಭಾಗವನ್ನು ಖಂಡಿಸಿ ಎರಡು ಮುಖ್ಯಾಂಶಗಳನ್ನು ಸ್ಥಿರ
ಪಡಿಸಿದರು. ಅವು ಏನಂದರೆ—(೧) ಅವಿಭಕ್ತ ಕುಟುಂಬದೊಳಗಣ ವಿತಂ
ತುವಿನಿಂದ ನಡೆಯಿಸಲ್ಪಡುವ ಸ್ವೀಕಾರಕ್ಕೆ ಬೇಕಾದ ಜ್ಞಾತ್ಯಂಗೀಕಾರವು
ಟ್ರಾವನ್ಕೂರು ಕೇಸಿನಲ್ಲಿ ತೀರ್ಮಾನಿಸಲ್ಪಟ್ಟ ಪ್ರಕಾರವು ಆ ಕುಟುಂಬದಿಂದ
ಲೇ ಹೊಂದಬೇಕೇಹೊರತು ಯಾರೋ ಒಬ್ಬ ದೂರಜ್ಞಾತಿಯಿಂದ ಕೊಡಲ
ಟ್ಟಲ್ಲಿ ಸಾಲದು. (೨) ವಿತಂತುವಿಗೆ ಸ್ವೀಕಾರವಿಷಯವಾಗಿ ಗಂಡನ ಸಪಿಂ
ಡರು ಕೊಡುವ ಅಂಗೀಕಾರವೆಂಬುದು- ಗಂಡನಿಂದ ಆಕೆಗೆ ಸ್ವೀಕಾರಾಧಿಕಾ
ರವು ಕೊಡಲ್ಪಟ್ಟಿರಲಿಲ್ಲವೆಂದೂ, ಆಕೆ ಸ್ವಿಕಾರ ಮಾಡಿಕೊಳ್ಳುವುದು ಆವಶ್ಯ
ಕವೆಂದೂ ಉಚಿತವೆಂದೂ ಇಂತಹ ನಂಬಿಕೆಯೊಡನೆ ಅವರಿಂದ ಕೊಡಲ್ಪಟ್ಟಿರ
ಬೇಕು ಅಂತಹ ನಂಬಿಕೆಯೊಡನೆ ಕೊಡಲ್ಪಡದ ಅಂಗೀಕಾರವು ಸಲ್ಲಲಾರದು.
ಈ ಬರಂಪುರದ ಕೇಸಿನಲ್ಲಿ ಪೆದ್ದಖಿಮಿಡಿ ಜಮೀಂದಾರ್ ತನ್ನ ಕುಮಾರನನ್ನು
ದತ್ತುಕೊಟ್ಟಾಗ ದತ್ತುಮಾಡಿಕೊಂಡ ವಿತಂತುವಿಗೆ ಆಕೆಯಗಂಡನು ಸ್ವೀ
ಕಾರಾಧಿಕಾರವನ್ನು ಕೊಟ್ಟಂತೆ ನಂಬಿದನೇಹೊರತು ಗಂಡನನುಜ್ಞೆಯಿಲ್ಲದ
ವಿತಂತುವಿಗೆ ತಾನು ಅನುಜ್ಞೆಕೊಡುವಂತೆ ಎಣಿಸಿರಲಿಲ್ಲವು. ಆದುದರಿಂದ
ಆತನು ಸಮೀಪಜ್ಞಾತಿಯಾಗಿದ್ದರೂಕೂಡ ಈ ಕೇಸಿನಲ್ಲಿ ಮಾಡಿಕೊಳ್ಳಲ್ಪಟ್ಟ
ಸ್ವೀಕಾರಕ್ಕೆ ಜ್ಞಾತ್ಯಂಗೀಕಾರವಿಲ್ಲದಂತೆಯೇ ಏರ್ಪಡುವದು. ("ಬರಂಪು
ರಂಕೇಸು"—ಇ. ಲಾ. ರಿ, ೧ ಮ. ೬೪)

ಜಂಟೀವಾದವು.— ಈ ಹೇಳಲ್ಪಟ್ಟ ಕೇಸಿನಲ್ಲಿ ಪ್ರೀವೀ ಕೌನ್ಸಿಲಿನವರ ತೀರ್ಮಾನವನ್ನು ಹಿಡಿದು ನೋಡುವಲ್ಲಿ ಗಂಡನಿಂದ ಸ್ವೀಕಾರಾಧಿಕಾರವು ಕೊಡಲ್ಪಟ್ಟತೆಂದೂ ಅದು ನಂಬಿಕೆಯಾಗಿ ಕಾಣಬಾರದಪಕ್ಷದಲ್ಲಿ ಜ್ಞಾತ್ಯಂಗೀಕಾರವಿತ್ತೆಂದೂ ಈ ಎರಡು ವಿಷಯುಗಳೂ ಒಂದೇಕೇಸುವಿಷಯುವಾಗಿ ವಾದಿಸಲು ಸಾಧ್ಯವಲ್ಲವು. ಆದುದರಿಂದಲೇ ಈಚಿನಒಂದುಕೇಸಿನಲ್ಲಿ ಗಂಡನಿಂದಸ್ವೀಕಾರಾಧಿಕಾರವು ಕೊಡಲ್ಪಟ್ಟಂತೆ ಹೇಳಿ ಆತನ ಅವಿಭಕ್ತಸೋದರನ ಅಂಗೀಕಾರವನ್ನು ಕೂಡ ಪಡೆದು ಒಂದು ವಿತಂತು ದತ್ತುಮಾಡಿಕೊಂಡಮೇಲೆ ಗಂಡಅಧಿಕಾರಕೊಟ್ಟನೆಂಬ ವಿಷಯುವು ಸುಳ್ಳಾದಂತೆ ಏರ್ಪಡಲು, ಆ ದತ್ತುಸಲ್ಲದೆಂದು ಮದರಾಸು ಹೈಕೋರ್ಟಿನವರು ತೀರ್ಮಾನಿಸಿದರು.

ಆರ್ ವೆಂ. ಹಿಂದೂಲಾ

ಬಿನಾಮಿ ಜಮಾಖರ್ಚುಗಳು.

ಬಿನಾಮಿ ಎಂದರೆ—ಒಬ್ಬರಿಗೋಸ್ಕರ ಮತ್ತೊಬ್ಬರ ಹೆಸರಿನಲ್ಲಿ ಜಮಾಖರ್ಚು ನಡಿಸಿ ಪತ್ರ ಬರೆಸಿ ರಿಜಿಸ್ಟರ್ ವಗೈರೆ ಮಾಡಿಸುವದಕ್ಕೆ ಬಿನಾಮಿ ಜಮಾಖರ್ಚು ಎಂದು ಹೆಸರು. ಉದಾಹರಣೆ— ಮಸಲ ರಾಮನೆಂಬುವನು ಒಟ್ಟು ಸಮಷ್ಟಿಕುಟುಂಬದಲ್ಲಿಸೇರಿ ಸಂಸಾರ ಮಾಡಿಕೊಂಡಿರುವಾಗ ಒಂದು ಸೊತ್ತನ್ನು ಖರೀದಿಗೆ ತೆಗದುಕೊಂಡರೆ ತನ್ನ ಹೆಸರಿಗಾಗಲಿ ತನ್ನ ಮಗನ ಹೆಸರಿಗಾಗಲಿ ಬರೆಸಿಕೊಂಡರೆ ಆ ಸ್ವತ್ತಿಗೆ ಕುಟುಂಬದಲ್ಲಿರುವ ಗಂಡು ಸಂತತಿಯುವರೆಲ್ಲರೂ ಹಿಂದೂ ಲಾ ಪ್ರಕಾರ ಭಾಗಸ್ತರಾಗುತ್ತಾರೆ. ಇದನ್ನು ತಪ್ಪಿಸುವದಕ್ಕಾಗಿ ರಾಮನು ತನ್ನ ಹೆಣ್ಣುಮಗಳ ಹೆಸರಿಗೆ ತೆಗದುಕೊಂಡರೆ ಯಾರಿಗೂ ಭಾಗ ಕೊಡಬೇಕಾದುದಿಲ್ಲವೆಂದು ಮಗಳ ಹೆಸರಿಗೆ ಬರೆಸುವನು. (೨) ಭೀಮನು ಶಾಮನಿಗೆ ೩೦೦ ರೂಪಾಯಿ, ಕಾಮನಿಗೆ ೬೦೦ ರೂಪಾಯಿಗಳು ಲಿಂಗ್ಯೆಯ್ಯನಿಗೆ ೧೦೦೦ ರೂಪಾಯಿ ಸರಕಾರದ ತಕಾವಿ ಸಾಲಕ್ಕೆ ೫೦೦ ರೂಪಾಯಿಗಳು ಮತ್ತು ಈ ಹಣಕ್ಕೆಲ್ಲಾ ಬಡ್ಡಿಸೇರಿ ೩೦೦೦ ಸಾವಿರದವರಿಗೆ ದೇಣೆದಾರನಾಗಿರುವನು. ಭೀಮನಿಗೆ ೪-೫ ಸಾವಿರ ರೂಪಾಯಿ ಬೆಲೆಬಾಳುವ ಆಸ್ತಿಮಾತ್ರವಿರುತ್ತದೆ. ಈಸ್ವತ್ತುಗಳನ್ನು ಸಾಲಗಾರರ ಸಾಲ ತೀರಿಸಿಬಿಟ್ಟರು ತನ್ನ ಹೆಂಡತಿಮಕ್ಕಳಿಗೆ ಏನು ಉಳಿಯುವುದಿಲ್ಲವೆಂದು ತನ್ನ ಆಸ್ತಿಯನ್ನು ತನಿಗೆ ನಂಬಿಕೆಯಾದ ಸ್ನೇಹಿತನ ಹೆಸರಿನಲ್ಲಾಗಲಿ ಒಬ್ಬನೆಂಟನ ಹೆಸರಿನಲ್ಲಾಗಲಿ ಪತ್ರಬರೆದುಕೊಟ್ಟು ರಿಜಿಸ್ಟರುಮಾಡಿಸಿಬಿಡುವನು. ಇಂತಹ ಕಾಗದ ಪತ್ರಗಳು ಸಾಲಕೊಡುವುದಕ್ಕೆ ಪೂರ್ವದ ತಾರೀಖಿನಲ್ಲಿ ಹುಟ್ಟಿದ್ದು ಸದರಿ ಸೊತ್ತುಗಳು ಆಧಾರ ಭೋಗ್ಯವಾಗದೆ ಇದ್ದರೆ ಊರ್ಜಿತವಾಗುವದು ಇಲ್ಲದಿದ್ದರೆ ಕೋರ್ಟಿನಲ್ಲಿ ಇದು ಸಾಲಗಾರರಿಗೆ ಮೋಸವಾಗು

ಪದಕ್ಕಾಗಿ ಹುಟ್ಟಿದ್ದೆಂದು ರುಜುವಾತಾದರೆ ಕೋರ್ಟಿನವರು ಆಸ್ವತ್ತುಗ
ಮೇಲೆ ಡಿಕ್ರಿಕೊಡುವರು. ಹೀಗೆ ಬರಸಿಕೊಂಡವರು ಕೆಲವರು ನಿಜವಾ
ಸ್ವತ್ತುಕರ್ತರಿಗೆ ಪುನಃ ಸ್ವತ್ತುಗಳನ್ನು ಬಿಟ್ಟುಕೊಡದೆ ಮೋಸಮಾಡಿ
ತ್ತಾರೆ. ಇಂತಹ ಪದ್ಧತಿಯು ಈ ಇಂಡಿಯಾ ದೇಶದಲ್ಲಿಮಾತ್ರದೊಂದೆಯ
ಗಿದೆ ಎಂದು ಜಾರ್ಜ್ ಡಿ. ಮೆಯಿನ್ ಎಂಬ ಇಂಗ್ಲೀಷುನ್ಯಾಯಶಾಸ್ತ್ರಕಾರ
ಇಂಗ್ಲೀಷು ಹಿಂದೂ ಲಾದಲ್ಲಿ ಬರೆದಿರುವರು.

ಬಿ. ನರಸಿಂಗರಾವ್,
ಎಡಿಟರ್ ಲಾಗೆಜೆಟ್
ಬೆಂಗಳೂರು ಸಿಟಿ.

ಜರೂರಿಯಾತು ಸಂದರ್ಭದಲ್ಲಿ ಬರೆಯುವ ಆಂಡಿಮ್ಯಾಂಡ್ ಪ್ರೊನೋಟ್ ಬರೆಯುವ ವಿಧಾನ.

ರೂಪಾಯಿಗಳು ತಾ.................೨೨

೧೦೦

ಈ ತಾರೀಖುಲಾಗಾಯಿತು ೩ ತಿಂಗಳ ಒಳಗಾಗಿ ಈದಿವಸ ನಾ
ನಿಮ್ಮಿಂದ ತೆಗೆದುಕೊಂಡಿರುವ ಒಂದು ನೂರು ರೂಪಾಯಿಗಳನ್ನು ಮೇಲ್ಕ
ಡ ವಾಯಿದೆ ಒಳಗಾಗಿ ತಮಗಾಗಲಿ ತಮ್ಮ ಆರ್ಡರಿಗಾಗಲಿ ತಾವು ಕೇಳಿ
ಕೂಡಲೆ ಕೊಡಲುಳ್ಳವನು ಎಂದು ಬರದುಕೊಟ್ಟ ಆನ್‌ಡಿಮ್ಯಾಡ್ ಪ್ರೋನೋ
ಟು ಸಹಿ-—

ರುಜು

ಸಂಪೂರ್ಣವು.